ಕರ್ನಾಟಕ ಸರಕಾರ

ಕಲೇವಲ

(ಫಿನ್ಲೆಂಡಿನ ಜನಪದ ಮಹಾಕಾವ್ಯ)



ಕನ್ನಡಕ್ಕೆ
ಡಾ. ಕೆ.ಆರ್. ಸಂಧ್ಯಾರೆಡ್ಡಿ

ಕನ್ನಡ ಪುಸ್ತಕ ಪ್ರಾಧಿಕಾರ

ಕಲೆವಲ

(ಫಿನ್ಲೆಂಡಿನ ಜನಪದ ಮಹಾಕಾವ್ಯ)

ಕನ್ನಡಕ್ಕೆ
ಡಾ. ಕೆ.ಆರ್. ಸಂಧ್ಯಾರೆಡ್ಡಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ ಸಿ ರಸ್ತೆ,
ಬೆಂಗಳೂರು-೫೬೦ ೦೦೨

Kalevala (The Land of Heroes) : Translated to Kannada by Dr. K.R. Sandhya Reddy, Published by Ashok N. Chalawadi, Administrative Officer, Kannada Pustaka Pradhikara, Kannada Bhavana, J.C. Road, Bangalore-560 002

ಮೊದಲ ಮುದ್ರಣ : ೨೦೦೧
ದ್ವಿತೀಯ ಮುದ್ರಣ : ೨೦೦೯
ಪುಟಗಳು : XLVIII + ೩೨೦
ಬೆಲೆ : ರೂ ೭೦.೦೦
ಪ್ರತಿಗಳು : ೧,೦೦೦

First Edition : 2001
Second Edition : 2009
Page : XLVIII + 320
Price : Rs. 70.00
Copies : 1,000

ಪ್ರಕಾಶಕರು
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಕರಡು ತಿದ್ದಿದವರು : ಲೇಖಕರು

ಮುದ್ರಕರು :
ರಾಜಾ ಪ್ರಿಂಟರ್ಸ್
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಬೆಂಗಳೂರು-೫೬೦ ೦೨೭, ದೂ. ೨೨೨೩೪೦೬೬

ಅರ್ಪಣೆ

ಪ್ರೊ. ಕು.ಶಿ. ಹರಿದಾಸ ಭಟ್
ಅವರ ನೆನಪಿಗೆ

ಅಧ್ಯಕ್ಷರ ಮಾತು

ಡಾ. ಸಂಧ್ಯಾರೆಡ್ಡಿಯವರು ಕನ್ನಡದ ಪ್ರಸಿದ್ಧ ಲೇಖಕಿ. ಕವಯಿತ್ರಿ ಮತ್ತು ಜಾನಪದ ತಜ್ಞರೂ ಆದ ಇವರು ೮ ವರ್ಷಗಳ ಹಿಂದೆ ಅನುವಾದಿಸಿದ ಕಲೆವಲ ಕೃತಿಯನ್ನು ೨೦೦೧ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಹೊರತಂದಿತ್ತು. ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪನನ್ನು ಕುರಿತ ಮಹಾಕಾವ್ಯಗಳಿಂದ ಶ್ರೀಮಂತ ಜಾನಪದವನ್ನು ಹೊಂದಿರುವ ಕನ್ನಡಕ್ಕೆ ಜಗತ್ತಿನ ಜಾನಪದ ಮಹಾಕಾವ್ಯ ಅನುವಾದದ ಮೂಲಕ ಬರುತ್ತಿರುವುದು ಸಂತೋಷದ ಸಂಗತಿ. ಕನ್ನಡ ಜಾನಪದ ಮತ್ತು ಜಗತ್ತಿನ ಜಾನಪದವನ್ನು ಆಳವಾಗಿ ಅಭ್ಯಾಸ ಮಾಡಿರುವ ಡಾ. ಸಂಧ್ಯಾರೆಡ್ಡಿಯವರು ಕಲೆವಲ ಕೃತಿಯನ್ನು ಅಚ್ಚುಕಟ್ಟಾಗಿ ಅನುವಾದಿಸಿದ್ದಾರೆ. ಅನುವಾದಿತ ಜಾನಪದ ಕಾವ್ಯದ ಪ್ರತಿಗಳು ಇಷ್ಟೊಂದು ಕಡಿಮೆ ಅವಧಿಯಲ್ಲಿ ಮಾರಾಟವಾದದ್ದು ನಿಜಕ್ಕೂ ಹೆಮ್ಮೆಪಡಬಹುದಾದ ಸಂಗತಿ. ಈ ಕೃತಿಯ ಮರು ಮುದ್ರಣಕ್ಕೆ ಓದುಗರಿಂದ ಮೇಲಿಂದ ಮೇಲೆ ಬೇಡಿಕೆ ಬಂದ ನಿಮಿತ್ತ 'ಕಲೆವಲ' ಪುಸ್ತಕದ ಮರು ಮುದ್ರಣವನ್ನು ಪ್ರಾಧಿಕಾರ ಕೈಗೆತ್ತಿಕೊಂಡಿದೆ. ಈ ಕೃತಿಯನ್ನು ಮರು ಮುದ್ರಿಸಲು ಒಪ್ಪಿಗೆ ನೀಡಿದ ಡಾ. ಸಂಧ್ಯಾರೆಡ್ಡಿ ಅವರಿಗೆ ಕೃತಜ್ಞತೆಗಳು.

ಈ ಪುಸ್ತಕವನ್ನು ಹೊರತರುವಲ್ಲಿ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

ಕಿರ್ಬಿಯ ಅನುವಾದಿತ ಪುಸ್ತಕವನ್ನು ಸಂಪಾದಿಸಿದವರು ಎಂ. ಎ. ಬ್ರಾಂಚ್. ಮೂಲ ಕಿರ್ಬಿಯ ಆವೃತ್ತಿಯಲ್ಲಿದ್ದ ಪೀಠಿಕೆಗೆ ಬದಲಾಗಿ ಪ್ರಸ್ತುತ ಸಂಪಾದಿತ ಆವೃತ್ತಿಗೆ (1985) ಬ್ರಾಂಚ್ ಅವರೇ ಪ್ರಸ್ತಾವನೆ ಬರೆದಿದ್ದಾರೆ. ಇದು ಫಿನ್ನಿಶ್ ಮೌಖಿಕ ಕಾವ್ಯ ಹಾಗೂ ಸ್ವರೂಪದ ಬಗ್ಗೆ ಬೆಳಕು ಚೆಲ್ಲುತ್ತದೆ ಮತ್ತು ಸಾವನ್ನಪ್ಪುತ್ತಿದ್ದ ಒಂದು ಕಾವ್ಯ ಪರಂಪರೆ ಹೇಗೆ ಫಿನ್ನಿಶ್ ರಾಷ್ಟ್ರೀಯ ಸಂಸ್ಕೃತಿ ಹಾಗೂ ಅನನ್ಯತೆಗೆ ಅಡಿಪಾಯ ಹಾಕಿ ಕೊಡುವ ಒಂದು ಸಾಹಿತ್ಯ ಕೃತಿಯಾಗಿ ಮಾರ್ಪಾಟಾಯಿತು ಎಂಬುದನ್ನು ಸಹ ತಿಳಿಸುವ ಪ್ರಯತ್ನ ಈ ಪ್ರಸ್ತಾವನೆಯಲ್ಲಿದೆ. ಹೀಗಾಗಿ ಕಲೆವಲ ಅಧ್ಯಯನಕ್ಕೆ ಪೂರಕವಾಗಿರುವ ಬ್ರಾಂಚ್ ಅವರ ಈ ಸುದೀರ್ಘ ಪ್ರಸ್ತಾವನೆಯನ್ನು ಕನ್ನಡಕ್ಕೆ ಯಥಾವತ್ತಾಗಿ ಅನುವಾದಿಸಿ ಕೊಡುವ ಪ್ರಯತ್ನ ಮಾಡಿದ್ದೇನೆ.

ಕನ್ನಡ ಅನುವಾದಕ್ಕೆ ಆಧಾರವಾಗಿರುವ ಕಿರ್ಬಿಯವರ ಇಂಗ್ಲಿಷ್ ಆವೃತ್ತಿಯಲ್ಲಿ 50 ಅಧ್ಯಾಯಗಳಿವೆ. ಒಟ್ಟು 648 ಪುಟಗಳಿವೆ. ಕಲೆವಲ ಕಾವ್ಯದ ಅಧ್ಯಾಯಗಳನ್ನು ರುನೋ (Runo) ಎಂದು ಕರೆಯಲಾಗುತ್ತದೆ. ಇಂಗ್ಲಿಷ್ ಅನುವಾದದಲ್ಲಿ ನಿರ್ದಿಷ್ಟ ಛಂದಸ್ಸಿನ ಅಂಶವೇನಿಲ್ಲ. ಮುಕ್ತ ಛಂದಸ್ಸಿನಲ್ಲಿ ಅನುವಾದ ಮಾಡಲಾಗಿದೆ. ಕನ್ನಡ ಅನುವಾದದಲ್ಲಿ ಒಟ್ಟು ಮೂವತ್ತೂರು ಅಧ್ಯಾಯಗಳಿವೆ. ಅಧ್ಯಾಯಗಳನ್ನು ಆಯ್ಕೆ ಮಾಡುವಾಗ ಕಥಾ ಸರಣಿ ಕೆಡದಂತಿರಬೇಕು ಎಂಬುದು ಮುಖ್ಯ ಗುರಿಯಾಗಿದ್ದು ಕಾವ್ಯ ಸೌಂದರ್ಯ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಮುಖ್ಯವಾದಂತಹ ಭಾಗಗಳನ್ನು ಬಿಡದಂತೆ ಆಯ್ದುಕೊಂಡಿದ್ದೇನೆ. ಕಾವ್ಯಾತ್ಮಕತೆ ಇಲ್ಲದೆ ಕೇವಲ ಕಥಾಸರಣಿಯ ದೃಷ್ಟಿಯಿಂದ ಅಗತ್ಯವಾದಂಥ ಭಾಗಗಳನ್ನು ಸಂಕ್ಷಿಪ್ತ ಗದ್ಯ ರೂಪದಲ್ಲಿ ನಿರೂಪಿಸಲಾಗಿದೆ. ಇದೇ ರೀತಿ ಕೇವಲ ಒಂದೆರಡು ವಿವರಗಳ ಬದಲಾವಣೆಯನ್ನು ಒಳಗೊಂಡಂತಹ ಮತ್ತು ಕಾವ್ಯಾತ್ಮಕತೆಗೆ ಪೂರಕವಲ್ಲದಂತಹ ಕೆಲವೊಂದು ಪುನರಾವರ್ತನೆಗಳನ್ನು ಸಹ ಬಿಡಲಾಗಿದೆ. ಒಟ್ಟಿನಲ್ಲಿ ಕನ್ನಡದ ಕಲೆವಲ ಓದಿದಾಗ ಕಾವ್ಯವನ್ನು ಓದಿದ ಅನುಭವವಾಗಬೇಕೇ ಹೊರತು ಅನುವಾದ ಓದಿದಂತಾಗಬಾರದು ಮತ್ತು ಜನಪದ ಕಾವ್ಯದ ಸೊಗಡು ಹಾಗೇ ಉಳಿದಿರಬೇಕು ಎಂಬುದು ನನ್ನ ಮುಖ್ಯ ಉದ್ದೇಶ.

ಕಲೆವಲ ನಿಜಕ್ಕೂ ಬಹಳ ಸುಂದರ ಕಾವ್ಯ. ಇಲ್ಲಿನ ಕಾವ್ಯ ಸೌಂದರ್ಯ, ಸಾಂಸ್ಕೃತಿಕ ವಿಶೇಷ, ನಮ್ಮ ಸಂಸ್ಕೃತಿಯೊಂದಿಗೆ ಕಂಡು ಬರುವ ಅದ್ಭುತ ಸಾಮ್ಯ ಇವುಗಳನ್ನು ಕುರಿತು ಪ್ರತ್ಯೇಕ ವಿಶ್ಲೇಷಣೆ ನಡೆಯುವುದು ಅಗತ್ಯ. ಭಾರತೀಯರ ದಾರ್ಶನಿಕ ದೃಷ್ಟಿಕೋನಕ್ಕೂ ಫಿನ್ಲೆಂಡಿನ ದೃಷ್ಟಿಕೋನಕ್ಕೂ ಇರುವ ಸಾಮ್ಯ ಕಂಡಾಗ ಮೈ ಪುಳಕಗೊಳ್ಳುತ್ತದೆ. ಎಷ್ಟೋ ಸಂದರ್ಭಗಳಲ್ಲಿ ದೃಷ್ಟಿಕೋನ ಹಾಗೂ ಅದನ್ನು ವ್ಯಕ್ತಪಡಿಸುವ ಭಾಷೆಯಲ್ಲಿ ಪದಶಃ ಅಕ್ಷರಶಃ ಸಾಮ್ಯಗಳಿವೆ. ವೆಯ್ನಾಮೊಯ್ನನ್‌ನ ಗಾಯಕ್ಕೆ ಮದ್ದು ಸವರುತ್ತ ಹಳ್ಳಿಯ ಹಿರಿಯ ನಾಟಿ ವೈದ್ಯನ ಬಾಯಲ್ಲಿ ಬರುವ ಈ ಮಾತುಗಳನ್ನು ನೋಡಬಹುದು :

ನಾನಲ್ಲ ಚಲಿಸುವನು ನನ್ನ ಕೈ ಕಾಲು
ಆವನ ಕೃಪೆಯಿಂದವು ಆಡುತ್ತವೆ ನೋಡು

ನನ್ನ ಬಲವೇನಿಲ್ಲ ನನ್ನ ಶ್ರಮದಲ್ಲಿ
ಎಲ್ಲ ಬಲ ಅವನದು ಸರ್ವಶಕ್ತನದು
ನನ್ನ ಬಾಯಿಯ ಮಾತು ನನ್ನದಲ್ಲ
ಜುಮಾಲನೆ ನುಡಿದಿರುವ ನನ್ನ ಬಾಯಿಂದ
ಸವಿ ಎನಿಸಿದರೆ ನಿನಗೆ ನನ್ನ ಮಾತು
ಇದಕಿಂತ ಸವಿಯಹುದು ಭಗವಂತನ ಮಾತು
ನನ್ನ ಕರವಿರಬಹುದು ಬಹಳ ಸೊಗಸು
ಭಗವಂತನ ಕರಕಮಲ ಇದಕಿಂತ ಸೊಗಸು

ಒಂದು ಸಂದರ್ಭದಲ್ಲಿ ವೆಯ್ನಾಮೊಯ್ನನ್ ಹೇಳುತ್ತಾನೆ :

ಚೆನ್ನಾಗಿದ್ದೇವೆ ಈಗೆಂಬ ಹಮ್ಮಿನಲಿ
ಎಲ್ಲ ಗೊತ್ತಿದೆ ಎಂಬ ಜಂಭದಲ್ಲಿ
ಕೈಹಾಕದಿರಿ ನೀವು ದೋಣಿ ಕೆಲಸಕ್ಕೆ
ಎಲ್ಲವನೂ ಕಣ್ಣಿಟ್ಟು ನೋಡುತಿರುವನು ಅವನು
ಎಲ್ಲವೂ ನಡೆಯುವುದು ಅವನ ಅಪ್ಪಣೆಯಂತೆ
ವೀರ ಶೂರರು ಆಲೋಚಿಸಿದಂತಲ್ಲ
ಎಲ್ಲ ವೀರರ ಬಲವೂ ಅವನೊಬ್ಬಗೆ ಸಮವಲ್ಲ

ಇತರ ಸಾಮಾಜಿಕ,ಲೌಕಿಕ ವಿಚಾರಗಳಲ್ಲಿಯೂ ಇಂಥದೇ ಸಾಮ್ಯವಿದೆ. ಮುಖ್ಯವಾಗಿ ವಧುವಿಗೆ ಹಿತವಚನ, ಹೆಣ್ಣನ್ನು ಬೀಳ್ಕೊಡುವುದು, ಅಣ್ಣ ಅತ್ತಿಗೆ ನಾದಿನಿಯರ ಸಂಬಂಧ ಈ ಮೊದಲಾದವುಗಳಲ್ಲಿ ನಮಗೂ ಅವರಿಗೂ ಏನೇನೂ ವ್ಯತ್ಯಾಸವಿಲ್ಲ.

ಕಲೆವಲವನ್ನು ಕನ್ನಡಕ್ಕೆ ಅನುವಾದಿಸುವ ನೆಪದಲ್ಲಿ ಜಗತ್ತಿನ ಒಂದು ಅದ್ಭುತ ಕಾವ್ಯಕಲಾಕೃತಿಯೊಂದರ ಪರಿಚಯ ಪಡೆದ ಭಾಗ್ಯ ನನ್ನದು. ನನ್ನ ಮೇಲೆ ವಿಶ್ವಾಸವಿಟ್ಟು ಇಂಥ ಒಂದು ಜವಾಬ್ದಾರಿಯ ಕೆಲಸವನ್ನು ನನಗೆ ವಹಿಸಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ಹಾಗೂ ನನ್ನ ಪೂಜ್ಯ ಗುರುಗಳೂ ಮತ್ತು ಮಹಾಕಾವ್ಯ ಪ್ರಕಾರದ ಬಗ್ಗೆ ಅಧಿಕೃತವಾಗಿ ಮಾತಾಡಬಲ್ಲ ಕೆಲವೇ ಕೆಲವು ವಿದ್ವಾಂಸರಲ್ಲಿ ಒಬ್ಬರೂ ಆದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರಿಗೆ ನನ್ನ ಕೃತಜ್ಞತಾಪೂರ್ವಕ ನಮನಗಳು.

ಕಲೆವಲವನ್ನು ಅನುವಾದಿಸಬೇಕೆಂದಾಗ ಎದುರಾದ ಮೊದಲ ಪ್ರಶ್ನೆ ಇದರ ಮೂಲಕೃತಿ ಎಲ್ಲಿ ಸಿಗುತ್ತದೆ ಎಂಬುದು. ಅದುವರೆಗೆ ನಾನು ಕಲೆವಾಲಾದ ಯಾವೊಂದು ಪುಸ್ತಕವನ್ನು ನೋಡಿರಲಿಲ್ಲ. ಅದನ್ನು ಕುರಿತಾದ ಒಂದೆರಡು ಲೇಖನಗಳನ್ನು ಓದಿದ್ದೆ ಅಷ್ಟೆ. ಇಷ್ಟಾದರೂ ಈ ಕಾವ್ಯ ಸ್ವರೂಪದ ಬಗ್ಗೆ ಯಾವ ಪರಿಕಲ್ಪನೆಯೂ ಇರಲಿಲ್ಲ. ಆದರೆ ಉಡುಪಿಯ ಪ್ರಾದೇಶಿಕ ರಂಗ ಕಲೆಗಳ ಅಧ್ಯಯನ ಕೇಂದ್ರ(ಆರ್.ಆರ್.ಸಿ) ವು ಫಿನ್ಲೆಂಡಿನೊಂದಿಗೆ ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದ ಹಿನ್ನೆಲೆಯಲ್ಲಿ ಒಂದು

ಊಹೆಯ ಮೇಲೆ, ಈ ಕೃತಿ ಇದ್ದರೆ ತಿಳಿಸುವಂತೆ ನಿರ್ದೇಶಕ ಕು.ಶಿ. ಹರಿದಾಸ ಭಟ್ ಅವರಿಗೆ ಪತ್ರ ಬರೆದೆ. ನಾನು ಅವರ ಉತ್ತರದ ನಿರೀಕ್ಷೆಯಲ್ಲಿದ್ದಾಗ ಅವರಿಂದ ಉತ್ತರಕ್ಕೆ ಬದಲಾಗಿ ಕಲೆವಲ ಪುಸ್ತಕವೇ ಬಂದಿತ್ತು. ಆರ್.ಆರ್.ಸಿ ಗ್ರಂಥಾಲಯದ ಈ ಪುಸ್ತಕದ ಪ್ರಯೋಜನವನ್ನು ನೀವು ಪಡೆದುಕೊಂಡು ಹಿಂದಿರುಗಿಸಬಹುದು ಎಂಬ ಒಂದು ಸಾಲಿನ ಪತ್ರವನ್ನು ಕು.ಶಿ. ಯವರು ಅದರ ಜೊತೆಗಿರಿಸಿದ್ದರು. ಒಳ್ಳೆಯ ಕೆಲಸಗಳಿಗೆ ಕು.ಶಿ.ಯವರು ನೀಡುತ್ತಿದ್ದ ಉತ್ತೇಜನ, ಪ್ರೋತ್ಸಾಹ, ಔದಾರ್ಯಗಳ ಬಗ್ಗೆ ತಿಳಿದವರಿಗೆ ಹೆಚ್ಚು ವಿವರಿಸುವ ಅಗತ್ಯವಿಲ್ಲ. ಉತ್ತಮ ಕೆಲಸಗಳನ್ನು ಮನಬಿಚ್ಚಿ ಪ್ರಶಂಸಿಸುತ್ತಿದ್ದ, ಸಹೃದಯ ಓದುಗರಾಗಿದ್ದ ಕು.ಶಿ.ಯವರು ಪುಸ್ತಕವನ್ನು ನನಗೆ ಕಳುಹಿಸಿಕೊಟ್ಟ ಕೇವಲ ಒಂದು ವರ್ಷದ ಅವಧಿಯೊಳಗಾಗಿ ಅಕಾಲಿಕವಾಗಿ ತೀರಿಕೊಂಡರು. ಇದು ನನ್ನ ಬಹು ದೊಡ್ಡ ವೈಯಕ್ತಿಕ ನಷ್ಟ. ನನ್ನ ಮೇಲೆ ಅವರಿಟ್ಟಿದ್ದ ವಿಶ್ವಾಸಕ್ಕೆ ಹೇಗೆ ಕೃತಜ್ಞತೆ ತಿಳಿಸಲಿ ಗೊತ್ತಾಗುತ್ತಿಲ್ಲ. ಈ ಕೃತಿಯನ್ನು ಅವರ ಹೆಸರಿಗೆ ಅರ್ಪಿಸುವುದಕ್ಕಿಂತ ಹೆಚ್ಚೇನೂ ಮಾಡಲಾರೆ.

ಜಾನಪದ ವಿದ್ವಾಂಸರೂ ಆತ್ಮೀಯ ಮಿತ್ರರೂ ಆದ ಡಾ. ಚಿನ್ನಪ್ಪಗೌಡರು ಫಿನ್ಲೆಂಡಿನ ಕೆಲವು ಜಾನಪದ ವಿದ್ವಾಂಸರ ವಿಳಾಸ ಒದಗಿಸಿ ಕೊಟ್ಟು ಸಂದೇಹಗಳಿಗೆ ಅವರಿಂದ ವಿವರಣೆ ಪಡೆದುಕೊಳ್ಳಲು ನೆರವಾಗಿದ್ದಾರೆ. ಚಿನ್ನಪ್ಪಗೌಡರ ನೆರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಮನೆ ಮಂದಿಯ ನೆರವು ಸಹಕಾರಗಳಿಲ್ಲದೆ ಇಂಥ ದೊಡ್ಡ ಕೆಲಸವನ್ನು ಇಷ್ಟು ಶೀಘ್ರವಾಗಿ ಮುಗಿಸಲು ಸಾಧ್ಯವಾಗುತ್ತಿರಲಿಲ್ಲ. ಇದಕ್ಕಾಗಿ ನನ್ನ ಪರಿವಾರದ ಶಂಕರರೆಡ್ಡಿ, ಪೂರ್ವಿ, ಮೇಘ, ಸರಸ, ಶಕುಂತಲಾ, ಗೀತಾ, ಶೋಭಾ, ಸುಧೀಂದ್ರ ಎಲ್ಲರನ್ನೂ ಪ್ರೀತಿಯಿಂದ ನೆನಪು ಮಾಡಿಕೊಳ್ಳುತ್ತೇನೆ.

ಅತ್ಯಂತ ಕಡಿಮೆ ಅವಧಿಯಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಲಾವಣ್ಯ ಪ್ರಿಂಟರ್ಸ್ ಅವರಿಗೂ ಮತ್ತು ಅಪೂರ್ವ ಸಹಕಾರ ನೀಡಿದ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲ ಸಿಬ್ಬಂದಿ ವರ್ಗಕ್ಕೂ ನನ್ನ ಅನಂತ ಕೃತಜ್ಞತೆಗಳು.

ಎರಡನೇ ಮುದ್ರಣ ಕುರಿತು

ಕಲೆವಲ ಅನುವಾದದ ಬಗ್ಗೆ ನಾಡಿನ ಅನೇಕ ವಿದ್ವಾಂಸರು, ಸಹೃದಯರು ಇದು ಅನುವಾದವೇ ಅನ್ನಿಸದಷ್ಟು ಸುಂದರವಾಗಿದೆ ಎಂದು ಮೆಚ್ಚಿ ನುಡಿದಿದ್ದಾರೆ. ಅವರ ಅಭಿಮಾನಕ್ಕೆ ಕೃತಜ್ಞತೆಗಳು.

ಎರಡನೇ ಮುದ್ರಣದಲ್ಲಿ ಕೆಲವು ಪದಗಳ ಮೂಲಫಿನ್ನಿಶ್ ಉಚ್ಚಾರಗಳು ಎಂಬ ಪುಟವನ್ನು ಸೇರಿಸಿದ್ದೇನೆ. ಅಂತರ್ಜಾಲದಲ್ಲಿ ದೊರೆತ ಮಾಹಿತಿ ಆಧರಿಸಿ ಇದನ್ನು ಸಿದ್ಧಪಡಿಸಲಾಗಿದೆ. 'ಕಲೆವಾಲಾ' ಪದದ ಮೂಲರೂಪ 'ಕಲೆವಲ' ಎಂದು ತಿಳಿದು ಬಂದ ನಂತರ ಕೃತಿಯ ಶೀರ್ಷಿಕೆಯಲ್ಲಿ ಕಲೆವಲ ಎಂಬ ಸರಿಯಾದ ರೂಪವನ್ನು ಅಳವಡಿಸಿಕೊಳ್ಳಲಾಗಿದೆ.

ಮೊದಲ ಮುದ್ರಣದ ಪ್ರತಿಗಳು ಮುಗಿದು ಹಲವು ವರ್ಷಗಳೇ ಆಗಿದ್ದವು. ಇದರ ಮರುಮುದ್ರಣವನ್ನು ಕೈಗೊಂಡಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಈಗಿನ ಅಧ್ಯಕ್ಷರಾದ ಡಾ. ಸಿದ್ದಲಿಂಗಯ್ಯ ಅವರಿಗೆ, ಆಡಳಿತಾಧಿಕಾರಿ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ, ಪ್ರಾಧಿಕಾರದ ಸದಸ್ಯ ಮಿತ್ರರು ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಹೃತ್ಪೂರ್ವಕ ನಮನಗಳು.

ಡಾ. ಕೆ.ಆರ್. ಸಂಧ್ಯಾರೆಡ್ಡಿ

ಬೆಂಗಳೂರು
೧-೫-೨೦೦೯

ಪ್ರಸ್ತಾವನೆ

(ಡಬ್ಲ್ಯೂ. ಎಫ್. ಕಿರ್ಬಿಯವರ ಅನುವಾದ 1985ರ ಮುದ್ರಣಕ್ಕೆ ಎಂ. ಎ. ಬ್ರಾಂಚ್ ಅವರ ಪ್ರಸ್ತಾವನೆ)

ಹೆಲಿಸಿಂಕಿಯ ಫಿನ್ನಿಶ್ ಸಾಹಿತ್ಯ ಸಂಘವು 1849ರಲ್ಲಿ ಒಂದು ಕೃತಿಯನ್ನು ಪ್ರಕಟಿಸಿತು. ಹೀಗೆ ಪ್ರಕಟವಾದ ಕೃತಿ ಅನಂತರ ಫಿನ್ನಿಶ್ ಜಾನಪದಕ್ಕೆ ಸಮಾನಾರ್ಥಕವಾಗಿ ಜಗತ್ತಿನಾದ್ಯಂತ ಪ್ರಸಿದ್ಧವಾಯಿತು. ಕಲೆವಲವನ್ನು ಕ್ರೋಢೀಕರಿಸುವ ಕೆಲಸವನ್ನು ಎಲಿಯಾಸ್ ಲೊನ್ರಾಟ್ (1802-84) ಮಾಡಿದ. ಮೊದಲು ವೈದ್ಯನಾಗಿದ್ದು ನಂತರ ಹೆಲಿಸಿಂಕಿ ವಿಶ್ವವಿದ್ಯಾಲಯದ ಫಿನ್ನಿಶ್ ಪ್ರಾಚಾರ್ಯನಾಗಿ ಕಾರ್ಯ ನಿರ್ವಹಿಸಿದ ಲೊನ್ರಾಟ್, ಫಿನ್ನಿಶ್ ಪರಂಪರಾಗತ ಸಂಸ್ಕೃತಿಯ ಸಾರವನ್ನೇ ಈ ಕಾವ್ಯದ ಮೂಲಕ ಜಗತ್ತಿಗೆ ಅರ್ಪಿಸಿದ. ಈ ಕಾವ್ಯದ ವಸ್ತು ಮತ್ತು ರೂಪ ಜಗತ್ತಿನ ಇತರ ಮಹಾಕಾವ್ಯಗಳಿಗೆ ಹೆಗಲೆಣೆಯಾಗಿರುವಂಥದ್ದು. ಇತರ 30ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಿತವಾದ ಈ ಕಾವ್ಯದ 1849ರ ಆವೃತ್ತಿಯು 135 ವರ್ಷಗಳಾದ ನಂತರವೂ ಫಿನ್ನಿಶ್ ಸಾಹಿತ್ಯದ ಅತ್ಯುತ್ತಮ ಕೃತಿಯಾಗೇ ಉಳಿದಿದೆ. ಇಂಗ್ಲಿಷೊಂದರಲ್ಲಿಯೇ ಪೂರ್ಣ ಪ್ರಮಾಣದ ಮೂರು ಭಾಷಾಂತರಗಳಿವೆ ಹಾಗೂ ಅನೇಕ ಗದ್ಯ ಆವೃತ್ತಿಗಳು ಬಂದಿವೆ.

ಯೂರೋಪಿಯನ್ ಪರಂಪರೆ :

ಕಲೆವಲದ ವಸ್ತು ಹಾಗೂ ಅದು ರೂಪುಗೊಂಡ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇದು ಕೇವಲ ಫಿನ್ನಿಶ್ ಭಾಷೆಗೇ ವಿಶಿಷ್ಟವಾದ ವಿದ್ಯಮಾನವಾಗಿ ಗೋಚರಿಸುವುದಿಲ್ಲ. ಇದನ್ನು ಕ್ರೋಢೀಕರಿಸಿದ ವ್ಯಕ್ತಿ 18ನೇ ಶತಮಾನದ ಯೂರೋಪಿನ ವಿವಿಧ ಭಾಗಗಳಿಗಂದ ಬಂದ ರಾಷ್ಟ್ರೀಯ ವಾದದ ತತ್ವಗಳಿಂದ ಭಾರೀ ಪ್ರಭಾವಿತನಾದವನು. ಈ ತತ್ವವನ್ನು ಮುಖ್ಯವಾಗಿ ಜರ್ಮನ್ ತತ್ವಜ್ಞಾನಿ ಜೆ. ಜಿ. ಹರ್ಡರ್ (1744-1803) ಹೆಸರಿನೊಂದಿಗೆ ಸಮೀಕರಿಸಲಾಗುತ್ತದೆ. "ಪ್ರತಿಯೊಂದು ರಾಷ್ಟ್ರವೂ ತನ್ನ ವಿಶಿಷ್ಟ ಸಾಂಸ್ಕೃತಿಕ ಅನನ್ಯತೆಯನ್ನು ಪಡೆದಿರಬೇಕು. ಇಂಥ ಅನನ್ಯತೆಯು ಸಾಮಾನ್ಯ ಅನಕ್ಷರಸ್ಥ ಜನರ ಭಾಷೆ ಹಾಗೂ ಮೌಖಿಕ ಸಾಹಿತ್ಯದಲ್ಲಿ ಕಂಡು ಬರುತ್ತದೆ" ಎಂದು ಆತ ಹೇಳಿದ್ದು 18ನೇ ಶತಮಾನದ ಫಿನ್ಲೆಂಡಿನಲ್ಲಿ ಭಾರೀ ಪ್ರಭಾವ ಬೀರಿತು. ಫಿನ್ಲೆಂಡಿನ ಪ್ರಸಿದ್ಧ ಇತಿಹಾಸ ತಜ್ಞ ಹೆಚ್. ಪಿ. ಪೋರ್ತನ್ (1739-1804)ರವರು ಆಗ ಬೋಧಿಸುತ್ತಿದ್ದ ವಿಚಾರಗಳಿಗೆ ಹರ್ಡರ್ ವಿಚಾರಗಳು ಸಂವಾದಿಯಾಗಿದ್ದವು. ಫಿನ್ಲೆಂಡಿನ ಸ್ವೀಡಿಶ್ ಪ್ರಾಂತವನ್ನು 1808-9ರಲ್ಲಿ ರಷ್ಯಾ ಆಕ್ರಮಿಸಿದ ನಂತರ ಹಾಗೂ ಶ್ರೀಮಂತ ಡಚ್ ಆಳ್ವಿಕೆಯ ಸಾಮ್ರಾಜ್ಯವಾಗಿ ಫಿನ್ಲೆಂಡ್ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯ ಆರಂಭವಾದ ನಂತರ ಹರ್ಡರ್ ಹಾಗೂ ಪೊರ್ತನ್‌ರ ವಿಚಾರಗಳ ಬಗ್ಗೆ ಆಸಕ್ತಿ ಇನ್ನಷ್ಟು ಬಲವಾಯಿತು ಮತ್ತು ರಾಷ್ಟ್ರೀಯ ಅನನ್ಯತೆಯನ್ನು ಉಳಿಸಿಕೊಳ್ಳಬೇಕೆಂಬುದು ಸುಶಿಕ್ಷಿತ ಫಿನ್ ಜನರ ಒಂದು ಬದ್ಧ ಕರ್ತವ್ಯವಾಯಿತು.

18ನೇ ಶತಮಾನದ ಆರಂಭದಲ್ಲಿ ಫಿನ್ಲೆಂಡಿನ ಯುವರಾಷ್ಟ್ರೀಯ ವಾದಿಗಳಿಗೆ "ಸಾಮಾನ್ಯಜನ"ರೆಂದರೆ ಶ್ರೀಮಂತ ಡಚ್ ಆಳ್ವಿಕೆಯ ವ್ಯಾಪ್ತಿಯಲ್ಲಿದ್ದ ಫಿನ್ ಜನರು ಮಾತ್ರ. ಆದರೆ ಬಹುಬೇಗನೆ ಅವರ ಆಸಕ್ತಿಯು ಭಾಷಿಕವಾಗಿ ಸಂಬಂಧಿಸಿದ ಕರೀಲಿಯನ್ನರು ಮತ್ತು ರಷ್ಯಾ ಗಡಿಪ್ರಾಂತ್ಯದ ಇಂಗ್ರಿಯನ್ನರ ಕಡೆಗೂ ಹರಿಯಿತು. ನಂತರ ಅದು ಇನ್ನುಳಿದ ಬಾಲ್ಟಿಕ್ ಫಿನ್ನಿಶ್ ಜನರು, ವೆಪ್ಸಿಯನ್ನರು, ವೋಟರು, ಎಸ್ಟೋನಿಯನ್ನರು ಹಾಗೂ ಲಿವೋನಿಯನ್ನರ ಕಡೆಗೂ ಹಬ್ಬಿತು.

ಈ ತರುಣ ವಿದ್ವಾಂಸರು ಸಾಮಾನ್ಯ ಜನರ ಸಂಸ್ಕೃತಿಯನ್ನು ದಾಖಲಿಸುತ್ತ ಹೋದಂತೆ ಮನುಷ್ಯ ಜಗತ್ತನ್ನು ಅಭೌತ ಚೇತನ ಶಕ್ತಿಗಳು ನಿಯಂತ್ರಿಸುತ್ತಿರುವಂಥ ಪುರಾತನ ಜಗತ್ತನ್ನು ಕುರಿತು ಸಮೃದ್ಧ ಮೌಖಿಕ ಸಾಹಿತ್ಯವಿರುವುದನ್ನು ಕಂಡುಕೊಂಡರು. ಅವರು ಜಗತ್ತಿನ ಉಗಮ ಹಾಗೂ ಮನುಷ್ಯನ ಅಸ್ತಿತ್ವಕ್ಕೆ ಅಗತ್ಯವಾದ ಬೆಳಕು, ಫಲವಂತಿಕೆ, ಬೆಂಕಿ, ಲೋಹ ಮೊದಲಾದ ಶಕ್ತಿಗಳನ್ನು ಕುರಿತ ಪುರಾಣಗಳನ್ನು ಸಂಗ್ರಹಿಸಿದರು. ಸೃಷ್ಟಿಯ ಆರಂಭದಲ್ಲಿ ವೀರ ನಾಯಕರು ಹೇಗೆ ವಾರ್ಷಿಕ ಜೀವನಾವರ್ತದ ಬೆಳವಣಿಗೆಯನ್ನು ನಿಯಂತ್ರಿಸಿದರು ಮತ್ತು ನಿಯಾಮಕಗೊಳಿಸಿದರು ಮತ್ತು ಆದಿ ಜಗತ್ತಿನಲ್ಲಿ ಹೇಗೆ ಒಂದು ಸುವ್ಯವಸ್ಥೆಯನ್ನು ತಂದರು ಎಂಬ ಬಗ್ಗೆ ಕಥೆಗಳಿರುವುದನ್ನೂ ಗಮನಿಸಿದರು. ಸಾಧಾರಣ ಮಾನವರ ಕೈಯಿಂದಾಗದಂತಹ ವಿಷಯಗಳಿಗೆ ಬೇರೆ ಜಗತ್ತಿನ ಸಹಾಯವನ್ನು ಪಡೆದುಕೊಳ್ಳಲು ಮಾಟವು ನೆರವಾಗುತ್ತಿದ್ದ ಅಂಶವನ್ನು ಕಂಡುಕೊಂಡರು.

ಜಗತ್ತಿನ ಎಲ್ಲೆಡೆಯಲ್ಲಿಯೂ ಇಂತಹ ಶೋಧನೆಗಳು ಜಾನಪದ ಪರಂಪರೆಯ ಸಾರವೇ ಆಗಿರುವುದನ್ನು ಗಮನಿಸಬಹುದು. ಮಾನವನು ವಾಸ್ತವಿಕ ಭೌತಿಕ ಜಗತ್ತನ್ನು ಅರ್ಥ ಮಾಡಿಕೊಳ್ಳುತ್ತಾ ಮುನ್ನಡೆದಂತೆ ಹಳೆಯ ಸಂಪ್ರದಾಯ ನಂಬಿಕೆಗಳು ಮಸುಕಾಗುತ್ತವೆ. ಅದರೊಂದಿಗಿನ ಮೌಖಿಕ ಪರಂಪರೆಗಳು ಸಂಪೂರ್ಣ ಕಣ್ಮರೆಯಾಗುವ ಮುನ್ನ ಹೊಸ ಪ್ರಯೋಜನಗಳನ್ನು ಕಂಡುಕೊಳ್ಳಬಹುದು. ಅದು ಹೊಸ ಸಾಂಸ್ಕೃತಿಕ ಪರಂಪರೆಗಳಲ್ಲಿ ಲೀನವಾಗಬಹುದು ಅಥವಾ ಪರಿವರ್ತಿತವಾಗಬಹುದು. ಅದರ ಕೆಲವಂಶಗಳು ಶಿಶು ಸಾಹಿತ್ಯದ ಭಾಗವಾಗಿ ಜೀವದಾನ ಪಡೆಯಬಹುದು. ಬಾಲ್ಟಿಕ್-ಫಿನ್ನಿಶ್ ಭಾಷೆಗಳ ಈ ಸಾಮಗ್ರಿಯ ವಿಶೇಷ ಪ್ರಾಮುಖ್ಯತೆ ಏನೆಂದರೆ ಯೂರೋಪಿನ ಇತರ ಭಾಗಗಳಲ್ಲಿ ಆದುದಕ್ಕಿಂತ ತೀರ ಅನಂತರದ ಕಾಲದಲ್ಲಿ ಇವುಗಳ ಅವನತಿ ಆರಂಭವಾಯಿತು ಎಂಬುದು.

ಹೀಗಾಗುವುದಕ್ಕೆ ಭೌಗೋಳಿಕ ಮತ್ತು ಆರ್ಥಿಕ ಅಂಶಗಳು ಒಂದು ಕಾರಣವಾಗಿದ್ದರೆ ಭಾಷೆ ಮತ್ತು ಧರ್ಮ ಇನ್ನೊಂದು ಕಾರಣ. ಬಾಲ್ಟಿಕ್-ಫಿನ್ ಜನರು ಸುಮಾರು 3000ಕ್ಕೂ ಹೆಚ್ಚು ವರ್ಷಗಳ ಹಿಂದೆ ಫಿನ್ಲೆಂಡಿನ ಕೊಲ್ಲಿಗಳ ತೀರದಲ್ಲಿ ನೆಲೆಸಲಾರಂಭಿಸಿದ ಕಾಲದಿಂದ ತೀರ ಇತ್ತೀಚಿನವರೆಗೂ ಯೂರೋಪಿನ ರಾಜಕೀಯ, ವಾಣಿಜ್ಯ ಹಾಗೂ ಸಾಂಸ್ಕೃತಿಕ ಪ್ರಭಾವದ ಪರಿಧಿಯಲ್ಲಿ ಬದುಕುತ್ತಾ ಬಂದಿದ್ದಾರೆ. ಹನ್ನೊಂದು ಮತ್ತು ಹನ್ನೆರಡನೇ ಶತಮಾನದಲ್ಲಿ ಸ್ವೀಡನ್ ಮತ್ತು ರಷ್ಯನ್ ವಿಸ್ತರಣೆ ಆರಂಭವಾದ ನಂತರವೇ ಬಾಲ್ಟಿಕ್

ಫಿನ್‌ರು ನೆಲೆಸಿದ್ದ ಪ್ರದೇಶಗಳ ವಿಭಜನೆ, ಆಳ್ವಿಕೆ ಮತ್ತು ವಾಣಿಜ್ಯಗಳು ದೃಢವಾಗಿ ರೂಪುಗೊಂಡಿದ್ದು. ಇದೇ ರೀತಿ ಈ ಪ್ರದೇಶದ ವ್ಯಾಪಾರ ವಹಿವಾಟೂ ಸಹ 13ನೇ ಶತಮಾನದಲ್ಲಿ ಜರ್ಮನ್-ಡಚ್ ಒಕ್ಕೂಟವು ಪೂರ್ವ ದೇಶಗಳ ಮೇಲೆ ಒತ್ತು ನೀಡಿದ ನಂತರವೇ ರೂಪುಗೊಂಡಿದ್ದು. ಮುಖ್ಯವಾಗಿ ಕ್ರೈಸ್ತ ಧರ್ಮದ ಪ್ರಸಾರದಿಂದಾಗಿ ಪಶ್ಚಿಮ ಮತ್ತು ಮಧ್ಯ ಯೂರೋಪಿನೊಂದಿಗೆ ಸತತವಾದ ಸಂಪರ್ಕ ಬೆಳವಣಿಗೆಯಾದ ನಂತರವೂ ಸಹ ಎಲ್ಲಿ ಬಾಲ್ಟಿಕ್-ಫಿನ್ನಿಶ್ ಪ್ರಾದೇಶಿಕ ಭಾಷೆಗೆ ಬದಲಾಗಿ ರಷ್ಯನ್, ಸ್ವೀಡಿಶ್ ಅಥವಾ ಜರ್ಮನ್ ಭಾಷೆಯು ಸಂಪರ್ಕ ಭಾಷೆಯಾಗಿದ್ದಿತೋ ಅಂತಹ ಸ್ವಲ್ಪವೇ ಸ್ವಲ್ಪ ನಗರ ಕೇಂದ್ರಗಳಿಗೆ ಮಾತ್ರ ಶಿಕ್ಷಣದ ಮೂಲಕವಾಗಿ ಯೂರೋಪಿನ ಶಿಷ್ಟ ಸಂಸ್ಕೃತಿಯು ಪ್ರಸರಿಸುವುದು ಸಾಧ್ಯವಾಯಿತು. 19ನೇ ಶತಮಾನದ ಈಚಿನವರೆಗೂ ಬಾಲ್ಟಿಕ್-ಫಿನ್ನಿಶ್ ಜನರು ನೆಲೆಸಿದ್ದ ಬಹುತೇಕ ಪ್ರದೇಶಗಳಲ್ಲಿನ ಶಿಕ್ಷಣ ಮತ್ತು ಆಡಳಿತವು ಸಾಮಾನ್ಯ ಜನರಿಗೆ ಅರ್ಥವಾಗದಂಥ ಭಾಷೆಯಲ್ಲಿಯೇ ನಡೆಯುತ್ತಿದ್ದಿತು.

ಹಳೆಯ ನಂಬಿಕೆ ಮತ್ತು ರೂಢಿಗಳು ಅಳಿದು ಹೋಗುವುದರ ಗತಿಯನ್ನು ನಿಯಂತ್ರಿಸಿದ ಅತ್ಯಂತ ನಿರ್ಣಾಯಕವಾದ ಏಕೈಕ ಅಂಶವೆಂದರೆ ಕ್ರಿಶ್ಚಿಯನ್ ಧರ್ಮದ ಪ್ರಸಾರ. ರೋಮನ್ ಕ್ಯಾಥೋಲಿಕ್ ಚರ್ಚಿಗೆ ಉತ್ತರಾಧಿಕಾರಿಯಾಗಿ ಫಿನ್ಲೆಂಡಿನ ಎಲ್ಲೆಲ್ಲಿ ಲೂಥರ್ನ್ ಚರ್ಚ್ ಬಂದಿತೋ ಅಂತಹ ಪ್ರದೇಶಗಳಲ್ಲಿ ಪ್ರಾಚೀನ ನಂಬಿಕೆ ಮತ್ತು ರೂಢಿಗಳು ದುರ್ಬಲಗೊಳ್ಳುತ್ತಾ ಹೋದವು. 1542ರಲ್ಲಿ ಪ್ರಕಟವಾದ ಕ್ರೈಸ್ತೇತರ ರೂಢಿ ಆಚರಣೆಗಳ ತುಚ್ಛತೆಯನ್ನು ಖಂಡಿಸುವ ದೋಷಾರೋಪಣೆಯ ಒಂದು ಪ್ರಾಚೀನ ಮುದ್ರಣ ರೂಪದಲ್ಲಿ ಫಿನ್ನಿಶ್ ಜಾನಪದ ಕಾವ್ಯದ ತುಣುಕೊಂದು ಕಂಡು ಬಂದಿರುವುದು ಒಂದು ವಿಪರ್ಯಾಸ. ಲೂತರ್ನ್ ಚರ್ಚ್ ಕೈಗೊಂಡ ನಿರ್ನಾಮ ಪ್ರಯತ್ನಗಳನ್ನು ದಾಟಿ ಸ್ವಲ್ಪ ಮಟ್ಟಿನ ಜಾನಪದ ಸಾಮಗ್ರಿ ಉಳಿದು ಬಂದಿತಾದರೂ ಅದು ತೀರಾ ಅಪೂರ್ಣವಾಗಿದೆ ಹಾಗೂ ಒಂದು ಪ್ರಾಚೀನ ಪರಂಪರೆಯನ್ನು ರೂಪಿಸುವಷ್ಟು ಪ್ರಮಾಣದಲ್ಲಿಲ್ಲ. ರಷ್ಯನ್ ಸಾಂಪ್ರದಾಯಿಕ ಚರ್ಚಿನ ಸಾಮಂತತನಕ್ಕೆ ಒಳಪಟ್ಟಿದ್ದಂಥ ಪ್ರದೇಶಗಳಲ್ಲಿ ಇದರ ಅಂಶಗಳು ರಕ್ಷಿತವಾಗಿದ್ದವು. ಈ ಹಳೆಯ ನಂಬಿಕೆಗಳು ತಮ್ಮ ಭಕ್ತರ ಆತ್ಮಗಳ ಮೇಲೆ ಹೆಚ್ಚಿನ ಪರಿಣಾಮ ಬೀರಲಾರವು ಎಂದು ಭಾವಿಸಿ ಈ ಬಗ್ಗೆ ಕ್ರೈಸ್ತ ಪ್ರಚಾರಕರು ಅಷ್ಟಾಗಿ ತಲೆಕೆಡಿಸಿಕೊಳ್ಳದಿದ್ದುದು ಇದಕ್ಕೆ ಒಂದು ಕಾರಣವಿರಬಹುದು ಮತ್ತು ಭೌಗೋಳಿಕ ಅಥವಾ ಭಾಷಿಕ ಅಥವಾ ಈ ಎರಡೂ ಕಾರಣಗಳಿಂದ ಹಳೆಯ ಸಂಪ್ರದಾಯದ ಪ್ರದೇಶಗಳು ಪ್ರತ್ಯೇಕವಾಗಿದ್ದುದೂ ಒಂದು ಕಾರಣವಿರಬಹುದು. ಹೀಗಾಗಿ ಇಂಥ ಕಡೆ 19ನೇ ಶತಮಾನದಲ್ಲಿಯೂ ಹಳೆಯ ಮೌಖಿಕ ಕಾವ್ಯಗಳು ಜನಪ್ರಿಯ ಪರಂಪರೆಯಾಗಿ ಸಮೃದ್ಧವಾಗಿ ಉಳಿದುಕೊಂಡು ಬಂದವು. ಯೂರೋಪಿನ ದೂರದಂಚಿನಲ್ಲಿ, ಭಾಷಾ ತಡೆಯಿಂದ ಪ್ರತ್ಯೇಕಿತವಾಗಿ ಈ ಅಮೂಲ್ಯ ಪ್ರಾಚೀನ ಕಾವ್ಯ ಪರಂಪರೆ ಉಳಿದುಕೊಂಡು ಬಂದಿತು. ಈ ಪರಂಪರೆಯ ಆಶಯಗಳು ಮತ್ತು ವಸ್ತುವಿನಿಂದ ಲೊನಾರ್ಟ್ ಅವರು ಕಲೆವಲ ಸೃಷ್ಟಿಯನ್ನು ಕೈಗೊಂಡರು.

ಮೌಖಿಕ ಕಾವ್ಯ ಮತ್ತು ಕಲೆವಲ ಪರಂಪರೆ

ಬಾಲ್ಟಿಕ್ ಫಿನ್ನಿಶ್ ಪ್ರದೇಶದಲ್ಲಿ ದಾಖಲಿಸಿದ ಕಾವ್ಯದಲ್ಲಿರುವ ಜಗತ್ತಿನ ಉಗಮದ ವಿವರಣೆ, ಮಾನವ ಜಗತ್ತನ್ನು ನಿಯಾಮಕಗೊಳಿಸುವಂಥ ದೇವತೆಗಳು ಹಾಗೂ ಇನ್ನಿತರ ಅತಿ ಮಾನುಷ ಜೀವಿಗಳ ವ್ಯವಸ್ಥಾಕ್ರಮ ಇತ್ಯಾದಿ ಸಂಗತಿಗಳು ಜಗತ್ತಿನ ಎಲ್ಲೆಡೆಯೂ ಕಂಡುಬರುವಂಥವೇ ಆಗಿವೆ. ಇವುಗಳನ್ನು ಹಾಡಿಕೆ ಕ್ರಮದಲ್ಲಿ ಪ್ರಸ್ತುತ ಪಡಿಸುವ ರೀತಿಯೂ ಸಹ ಜಗತ್ತಿನ ಇತರ ಭಾಗಗಳಲ್ಲಿ ಕಂಡು ಬರುವಂತೆಯೇ ಇದೆ. ಆದರೆ ಬಾಲ್ಟಿಕ್ ಫಿನ್ನಿಶ್ ಮೌಖಿಕ ಕಾವ್ಯದ ನಿರ್ದಿಷ್ಟ ಛಂದಸ್ಸು ಮತ್ತು ರಾಚನಿಕ ರೂಪವು ಮಾತ್ರ ಅತ್ಯಂತ ಪ್ರಾಚೀನತೆಯನ್ನುಳ್ಳ ಸ್ಥಳೀಯ, ವಿಶಿಷ್ಟ ಅಂಶವಾಗಿದೆ. ಇಡೀ ಬಾಲ್ಟಿಕ್ ಫಿನ್ನಿಶ್ ಪ್ರದೇಶದಾದ್ಯಂತವೂ ಒಂದಾನೊಂದು ಕಾಲದಲ್ಲಿ ಒಂದೇ ರೀತಿಯ ರೂಪ ಮತ್ತು ರಚನೆ ಇರುವ ಹಾಗೂ ಸಮಾನ ಆಶಯಗಳು ಹಾಗೂ ವಸ್ತುವನ್ನೊಳಗೊಂಡಂತಹ ಒಂದು ಹಾಡಿನ ಕಾವ್ಯ ಪ್ರಕಾರ ಅಸ್ತಿತ್ವದಲ್ಲಿತ್ತು ಎಂಬುದನ್ನು ಲೊನ್ನಾರ್ಟ್ ಮತ್ತು ಆ ತರುವಾಯದವರು ಸಂಗ್ರಹಿಸಿದ ಸಾಮಗ್ರಿಯು ಶ್ರುತ ಪಡಿಸುತ್ತದೆ. ಈ ಗಣನೀಯ ಸಾತತ್ಯತೆಯೇ, ಈ ಕಾವ್ಯವೂ ಸಹ ಇದನ್ನು ಪ್ರಸ್ತುತ ಪಡಿಸುವ ಭಾಷೆಯಂತೆಯೇ ಒಂದು ಸಮಾನ ಮೂಲದಿಂದ ಹಾಗೂ ಅತ್ಯಂತ ಪ್ರಾಚೀನ ಕಾಲದಿಂದ ಬಂದಿದ್ದು ಎಂಬ ತೀರ್ಮಾನವನ್ನು ಕೈಗೊಳ್ಳುವಂತೆ ಮಾಡಿದೆ.

ಮೌಖಿಕ ಕಾವ್ಯದ ಅನುಪ್ರಾಸ, ಅನುರೂಪತೆ ಹಾಗೂ ಇನ್ನಿತರ ಪುನರಾವರ್ತನ ಲಕ್ಷಣಗಳು ಸಾಹಿತ್ಯಿಕ ಪಠ್ಯದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುವುದು ಸಾಧ್ಯವಿಲ್ಲವಾದರೂ, ಜೀವಂತ ಪರಂಪರೆಯಲ್ಲಿ ಕುಶಲ ಹಾಡುಗಾರರು ಪ್ರೇಕ್ಷಕರನ್ನು ಛೇಡಿಸುವುದಕ್ಕಾಗಿ ಮತ್ತು ಅಭಿವ್ಯಕ್ತಿಯನ್ನು ವಿಳಂಬಿಸುವ ಮೂಲಕ ಭಾವೋದ್ರೇಕವನ್ನು ಹೆಚ್ಚಿಸುವುದಕ್ಕಾಗಿ ಅದನ್ನು ಬಳಸಿಕೊಳ್ಳುತ್ತಿದ್ದರು. ಇಂತಹ ರಾಚನಿಕ ವಿಧಾನಗಳು ಕಲೆವಲ ಕಾವ್ಯದ, ಮುಖ್ಯವಾಗಿ ಮಹಾಕಾವ್ಯಗಳ ನಿರೂಪಣಾ ವಿಧಾನದ ಬಗ್ಗೆ ಬೆಳಕು ಚೆಲ್ಲುತ್ತವೆ. ಪ್ರಾಚೀನ ದಾಖಲೆಗಳಿಂದ ಹಾಗೂ ಉಳಿದು ಬಂದಿರುವ 19ನೇ ಶತಮಾನದ ಕಥೆಗಳಿಂದ ತಿಳಿದುಬರುವಂತೆ ಈ ಕಾವ್ಯವನ್ನು ಇಬ್ಬರು ಹಾಡುಗಾರರು ಅಥವಾ ಎರಡು ಹಾಡುಗಾರ ಗುಂಪುಗಳು ಪ್ರಸ್ತುತ ಪಡಿಸುತ್ತಿದ್ದವು. ಮೊದಲ ಸಾಲನ್ನು ಹಾಡಲು ಶುರುಮಾಡಿ ಮೂರು ಅಥವಾ ನಾಲ್ಕನೇ ಪಾದಕ್ಕೆ ಬಂದಾಗ ಇತರ ಹಾಡುಗಾರರು ದನಿಗೂಡಿಸುತ್ತಿದ್ದರು. ಮತ್ತು ಮುಂದಿನ ಸಾಲನ್ನು ಮುಂದುವರೆಸುತ್ತಿರುವಂತೆಯೇ ಮೊದಲ ಹಾಡುಗಾರ ಅದರ ಮುಂದಿನ ಸಾಲಿಗೆ ತೊಡಗುತ್ತಿದ್ದ. ಕೆಲವು ನಿರ್ದಿಷ್ಟ ಶೈಲಿಗಳು ಆಯಾ ಪ್ರದೇಶಕ್ಕೆ ವಿಶಿಷ್ಟವಾಗಿದ್ದವು. ಉದಾಹರಣೆಗೆ ಅರ್ಖಾಂಜಲ್ ಕರೀಲಿಯಾದಲ್ಲಿ ಇಬ್ಬರು ಹಾಡುಗಾರರು ಅಕ್ಕಪಕ್ಕ ಕುಳಿತು ಬಲಗೈಗಳನ್ನು ಪರಸ್ಪರ ಹಿಡಿದುಕೊಂಡು ಲಯಕ್ಕೆ ತಕ್ಕಂತೆ ಹಿಂದಕ್ಕೂ ಮುಂದಕ್ಕೂ ತೂಗುತ್ತಾ ಹಾಡನ್ನು ಪ್ರಸ್ತುತಪಡಿಸುತ್ತಿದ್ದರು. ಇನ್‌ಗ್ರಿಯಾ ಪ್ರದೇಶದಲ್ಲಿ ಈ ಕಾವ್ಯವನ್ನು ಹೆಂಗಸರು ಗುಂಪಾಗಿ ಹಾಡುತ್ತಿದ್ದರು. ಎಷ್ಟೋ ವೇಳೆ ಈ ಹಾಡಿಕೆಯು ವೃತ್ತ ಅಥವಾ ದೀರ್ಘ ನೃತ್ಯಗಳಿಗೆ ಜೊತೆಗೂಡುತ್ತಿತ್ತು. ಹಾಡಿಕೆಗೆ ಜೊತೆಯಾಗಿ ಕಾಂಟಲ ಎಂಬ ಐದು ತಂತಿಗಳ ವಾದ್ಯವಿರುತ್ತಿತ್ತು.

ನೂರಾರು ವರ್ಷಗಳ ಕಾಲಾನುಕ್ರಮದಲ್ಲಿ ಸ್ಥಳೀಯ ಬೆಳವಣಿಗೆಗಳ ಕಾರಣದಿಂದ ಹಾಡುಗಾರರ ಪಠ್ಯಗಳು ಪ್ರಭಾವಿತವಾಗಿದ್ದರೂ ವಿವಿಧ ಪ್ರದೇಶಗಳಲ್ಲಿ ಹೊಸ ಹಾಡಿಕೆ ಕ್ರಮಗಳನ್ನು ಅಳವಡಿಸಿಕೊಂಡಿದ್ದರೂ ಈ ಕಾವ್ಯದ ಕೆಲವೊಂದು ಪದ್ಯಭಾಗಗಳು ಏನೂ ಬದಲಾಗದೆ ಹಾಗೇ ಉಳಿದುಕೊಂಡು ಬಂದಿವೆ. ನಾಯಕರು ಮಾಡುವ ಸಾಹಸ ಕೃತ್ಯಗಳಲ್ಲಿ ಇಡೀ ಬಾಲ್ಟಿಕ್-ಫಿನ್ನಿಶ್ ಪ್ರದೇಶದಾದ್ಯಂತ ಯಾವ ಬದಲಾವಣೆಯೂ ಇಲ್ಲ. ಕೆಲವೊಂದು ನುಡಿಗಟ್ಟುಗಳು, ಆಶಯಗಳು ಎಲ್ಲ ಕಡೆಯೂ ಅದೇ ಆಗಿವೆ. ವೆಯ್ನಾಮೊಯ್ನನ್ ಎಲ್ಲ ಕಡೆಯೂ "ದೃಢಚಿತ್ತ ಹಿರಿಯ". ಇಲ್ಮಾರಿನೆನ್ ಎಲ್ಲ ಕಡೆಯೂ ಕಮ್ಮಾರನೇ ಆಗಿದ್ದಾನೆ. ಕಾರ್ಯದಲ್ಲಿ ವಿಫಲವಾದ ನಾಯಕ ದುಃಖಿಸುತ್ತ ಮನೆಗೆ ಹಿಂದಿರುಗುತ್ತಾನೆ. ಅವನ ಟೋಪಿ ವಾರೆಯಾಗಿ ಜಾರಿರುತ್ತದೆ....

ಕಲೆವಲ ಕಾವ್ಯವು 19ನೇ ಶತಮಾನಕ್ಕೂ ಉಳಿದುಕೊಂಡು ಬಂದಂತಹ ರಷ್ಯಾದ ಸಾಂಪ್ರದಾಯಿಕ ಪ್ರದೇಶಗಳಲ್ಲಿ ಈ ಕಾವ್ಯ ನಿರೂಪಣೆಯು ತನ್ನ ತಾಜಾತನವನ್ನು ಹಾಗೂ ಉದ್ದೇಶವನ್ನು ಸ್ಪಷ್ಟವಾಗಿ ಉಳಿಸಿಕೊಂಡಿತ್ತೆಂಬುದನ್ನು ಅನೇಕ ಸಂಗ್ರಾಹಕರು ತಮ್ಮ ದಿನಚರಿ ಪುಸ್ತಕಗಳಲ್ಲಿ ಹಾಗೂ ನೆನಪಿನ ಗ್ರಂಥಗಳಲ್ಲಿ ದಾಖಲಿಸಿದ್ದಾರೆ. ಕಲೆವಲ ಕಾವ್ಯದ ಪ್ರಾಚೀನ ವಿಧಿ ಸಂಬಂಧವಾದ ಕಾರ್ಯಗಳನ್ನು ಮಂತ್ರ ನುಡಿಗಳನ್ನು ಮರೆತು ಬಹು ದೀರ್ಘ ಕಾಲವಾಗಿದೆ. ಬಹುತೇಕ ಪಠ್ಯಗಳು ಈಗ ಮನರಂಜನೆಯಾಗಿ ಮತ್ತು ಕಲೆಯಾಗಿ ಉಳಿದುಕೊಂಡಿವೆ. ಗಂಡಸರು-ಹೆಂಗಸರು ತಮ್ಮಷ್ಟಕ್ಕೆ ಅಥವಾ ಗುಂಪಿನಲ್ಲಿ ಈ ಹಾಡುಗಳನ್ನು ಹೊಲದಲ್ಲಿ ಕೆಲಸ ಮಾಡುವಾಗ ಬೇಟೆ/ಮೀನು ಬೇಟೆಗೆ ಹೋದಾಗ ಹಾಡುವುದುಂಟು. ಸಂಜೆಯ ಹೊತ್ತು ಮನೆಯಲ್ಲಿ ಹೆಂಗಸರು ನೂಲು ತೆಗೆಯುತ್ತ, ನೇಯುತ್ತಾ ಉಲ್ಲಾಸವಾಗಿ ಹಾಡಿಕೊಳ್ಳುತ್ತಾರೆ. ಅದೇ ರೀತಿ ಗಂಡಸರು ಬಲೆ ಹೆಣೆಯುವಾಗ ಈ ಹಾಡುಗಳನ್ನು ಹೇಳಿಕೊಳ್ಳುತ್ತಾರೆ. ಒಂದು ಕಾಲದಲ್ಲಿ ವಿವಾಹ ವಿಧಿಯ ಅಂಗವಾಗಿದ್ದ ಅಣಕದ ಹಾಡುಗಳನ್ನು ಹೇಳಿ ಪರಸ್ಪರ ಹುಡುಗ ಹುಡುಗಿಯರು ರೇಗಿಸಿಕೊಳ್ಳುತ್ತಾರೆ. ಕೆಲವೊಂದು ಕಾವ್ಯಭಾಗಗಳು ನಿರ್ದಿಷ್ಟ ಹಬ್ಬದೊಂದಿಗೆ ಯಾವುದೋ ಸಂಬಂಧವನ್ನು ಹಾಗೇ ಉಳಿಸಿಕೊಂಡಿವೆ. ಹಬ್ಬ ಆಚರಿಸುವಾಗ, ನೆರೆಹೊರೆಯವರು ಕಲೆತಾಗ ಇವುಗಳನ್ನು ಹಾಡುತ್ತಾರೆ.

ಈ ಕಾವ್ಯದ ಬಹುತೇಕ ಭಾಗವನ್ನು ಸಂಗ್ರಹಿಸಿದ ಕಾಲದಲ್ಲಿ ಹಾಡುತ್ತಿದಂಥವರೆಲ್ಲ ನೆನಪಿನಲ್ಲಿರುವುದನ್ನು ಮಾತ್ರ ಹೇಳುವಂಥವರಾಗಿದ್ದರು. ಹನ್ನೊಂದನೆ ಶತಮಾನದಲ್ಲಿ ಕೆಲವೊಂದು ಗಾಯಕರು ತಮ್ಮ ಹಾಡುಗಾರಿಕೆಯ ಸಾಮರ್ಥ್ಯದಿಂದಾಗಿ ಕರೀಲಿಯಾ ಮತ್ತು ಇನ್‌ಗ್ರಿಯನ್ ಜನರಿಂದ ಪ್ರಸಿದ್ಧ ಹಾಡುಗಾರರೆಂಬ ಮಾನ್ಯತೆ ಗಳಿಸಿದ್ದರೂ ಕೂಡ ಕಾವ್ಯವನ್ನು ಪ್ರಜ್ಞಾಪೂರ್ವಕವಾಗಿ ಉತ್ತಮಗೊಳಿಸಿ, ಕಲೆವಲ ಶೈಲಿಯಲ್ಲಿಯೇ ಅದನ್ನು ಸೃಷ್ಟಿಸಿ ಅಥವಾ ಮರುಸೃಷ್ಟಿಸಿ, ಪದ್ಯ ಭಾಗಗಳ ವಿಸ್ತಾರವನ್ನು ಹೆಚ್ಚಿಸುತ್ತಿದ್ದಂಥ ಕವಿ ಹಾಡುಗಾರರ ಕಾಲ ಫಿನ್ಲೆಂಡಿನಲ್ಲಿ 15ನೇ ಶತಮಾನಕ್ಕೇ ಮತ್ತು ಬಾಲ್ಟಿಕ್-ಫಿನ್ನಿಶ್ ಪ್ರದೇಶದ ಬಹುತೇಕ ಭಾಗಗಳಲ್ಲಿ 17ನೇ ಶತಮಾನಕ್ಕೇ ಮುಗಿದು ಹೋಗಿತ್ತೆಂದು ಭಾವಿಸಲಾಗಿದೆ.

ಕಲೆವಾಲ ಹಾಡುಗಾರಿಕೆಗೆ ವಿಶೇಷ ಪ್ರತಿಭೆ ಅಗತ್ಯ. ಅಭ್ಯಾಸದಿಂದ ಮಾತ್ರ ಅದರಲ್ಲಿ ಉತ್ಕೃಷ್ಟತೆಯನ್ನು ಗಳಿಸಬಹುದಿತ್ತು. ಆದ್ದರಿಂದ ಆನಂತರದ ತಲೆಮಾರುಗಳ ಸೃಜನಶೀಲ ಕವಿ ಹಾಡುಗಾರರನ್ನು 'ಅನಾಮಧೇಯ ಜಾನಪದರು' ಎಂದು ಗುರುತಿಸುವುದು ತಪ್ಪಾಗುತ್ತದೆ. ನಮ್ಮ ಮುಂದಿರುವ ಕೆಲವು ಪುರುಷರು ಮತ್ತು ಸ್ತ್ರೀಯರ ಹಾಡುಗಾರಿಕೆಯ ಭಾಗಗಳು ಎಷ್ಟು ಉತ್ಕೃಷ್ಟವಾಗಿವೆಯೆಂದರೆ ಅವರು ಯೂರೋಪಿನ ಇತರ ಭಾಗಗಳಲ್ಲಿ ಸಲೀಸಾಗಿ ಶಿಷ್ಟ ಪರಂಪರೆಯ ಕವಿ ಲೇಖಕರು ಎಂಬ ಮಾನ್ಯತೆಯನ್ನು ಗಳಿಸಿಬಿಡುತ್ತಿದ್ದರು. ಈಗಿರುವ ಸಾಮಗ್ರಿಗೆ ಕಾರಣರಾದಂಥ ಆ ಮಹಾನ್ ಕವಿ ಹಾಡುಗಾರರ ಬಗ್ಗೆ ನಮಗೆ ತಿಳಿದಿರುವುದು ತೀರ ಕಡಿಮೆ. ಅಷ್ಟೇಕೆ 19ನೇ ಶತಮಾನದಲ್ಲಿದ್ದಂಥ ಅಸಾಧಾರಣ ಗಾಯಕರ ಬಗೆಗೂ ಹೆಚ್ಚಿನ ಮಾಹಿತಿಯೇನಿಲ್ಲ. ಎಲ್ಲೋ ಕೆಲವರು ಮಾತ್ರ ತಮ್ಮ ಅಸಾಧಾರಣ ನೈಪುಣ್ಯ ಹಾಗೂ ಅದ್ಭುತ ನೆನಪಿನ ಶಕ್ತಿಯಿಂದಾಗಿ ಗಮನ ಸೆಳೆಯುವಲ್ಲಿ ಸಫಲರಾಗಿದ್ದಾರೆ. ಆದರೆ ಅವರೂ ಕೂಡ ಸ್ವಲ್ಪ ಕಾಲ ಆದರ ಸನ್ಮಾನಗಳನ್ನು ಪಡೆದ ನಂತರ ಪುನಃ ತಮ್ಮ ಹಿಂದಿನ ಸಮುದಾಯಗಳೊಂದಿಗೆ ಲೀನವಾಗಿ ಹೋದರು. ಎಷ್ಟೋ ಮಂದಿಯ ಹೆಸರೂ ಕೂಡ ಉಳಿದಿಲ್ಲ. ಫಿನ್ಲೆಂಡ್, ರಷಿಯಾ ಮತ್ತು ಎಸ್ಟೋನಿಯಾದ ಪತ್ರಾಗಾರಗಳಲ್ಲಿ ಸಂಗ್ರಹವಾಗಿರುವ ವ್ಯಾಪಕ ಸಾಮಗ್ರಿಯ ವಕ್ತೃಗಳ ಬಗ್ಗೆ ತಿಳಿದಿರುವುದು ಅತ್ಯಂತ ಕಡಿಮೆ. "Singer Unknown" (ಹಾಡುಗಾರನ ಹೆಸರು ಗೊತ್ತಿಲ್ಲ) ಎಂಬುದೇ ಈ ಸೂಚಿಗಳಲ್ಲಿ ಪದೇಪದೇ ಕಾಣಸಿಕೊಳ್ಳುವ ಉಲ್ಲೇಖ.

ಈ ಹಿನ್ನೆಲೆಯಲ್ಲಿ ಕಲೆವಾಲಾ ಕಾವ್ಯ ಪರಂಪರೆಯು 19ನೇ ಶತಮಾನದ ಅಂತಿಮ ಮಜಲಿನಲ್ಲಿ ಹೇಗಿತ್ತು ಎಂಬ ಬಗ್ಗೆ ಕೆಲವೇ ಸಾಧಾರಣೀಕರಣಗಳನ್ನು ಮಾತ್ರ ಮಾಡಬಹುದು. ಗಂಡಸರು ಸಾಮಾನ್ಯವಾಗಿ ವೀರ ಕಾವ್ಯಗಳನ್ನು ಹೇಳಲು ಇಚ್ಛಿಸಿದರೆ, ಹೆಂಗಸರು ಭಾವಗೀತೆ, ಕಥನಗೀತೆ, ಲಾವಣಿಗೀತೆಗಳನ್ನು ಹೇಳಲು ಇಚ್ಛಿಸುತ್ತಿದ್ದರು. ಅರ್ಕಾಂಗಲ್ ಕರೀಲಿಯಾದ ಉತ್ತರ ಭಾಗಗಳಲ್ಲಿ ವೀರ ಕಾವ್ಯ ಹೆಚ್ಚು ಸಮರ್ಥವಾಗಿ ಉಳಿದುಕೊಂಡು ಬಂದಿತು. ಇಲ್ಲಿ ಹೆಸರಾಂತ ಹಾಡುಗಾರರೆಲ್ಲ ಸಾಮಾನ್ಯವಾಗಿ ಸಾಂಸ್ಕೃತಿಕ ವೀರರ ಕಥೆಗಳನ್ನು ಸೇರಿಸಿ ಉದ್ದುದ್ದ ಕಥನ ಕಾವ್ಯಗಳಾಗಿ ಬೆಳೆಸುವ ಹವ್ಯಾಸದವರಾಗಿದ್ದರು. (ಕಲೆವಾಲಾ ಕಾವ್ಯವನ್ನು ಕ್ರೋಢೀಕರಿಸುವಲ್ಲಿ ಲೊನಾರ್ಟ್ ಅನುಸರಿಸಿದ ತಂತ್ರವೂ ಇದೇ). ಇಂತಹ ಪ್ರಸ್ತುತಿಯನ್ನು 1834ರಲ್ಲಿ ಲೊನಾರ್ಟ್ ಕಣ್ಣಿಗೆ ಕಾಣುವಂತೆ ವಿವರಿಸಿದ್ದಾನೆ. "ಸಾಮಾನ್ಯವಾಗಿ ಯಾವುದಾದರೊಂದು ಉತ್ಸವದಲ್ಲಿ ಅನೇಕ ಹಾಡುಗಾರರು ಪಾಲ್ಗೊಂಡಿದ್ದಾಗ ಹಾಡಿನ ಸ್ಪರ್ಧೆಯೇ ನಡೆಯುತ್ತದೆ. ಯಾರು ಗೆಲ್ಲುತ್ತಾರೆ ಎಂಬ ಬಗ್ಗೆ ಸ್ನೇಹಿತರು ಮತ್ತು ಪರಿಚಿತರು ಬಾಜಿಕಟ್ಟುತ್ತಾರೆ. ಇಂತಹ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವಂತೆ ತನ್ನನ್ನು ಸ್ನೇಹಿತರು ಹುರಿದುಂಬಿಸುತ್ತಿದ್ದುದಾಗಿಯೂ, ತಾನು ಒಮ್ಮೆಯೂ ಸ್ಪರ್ಧೆಯಲ್ಲಿ ಸೋಲಲಿಲ್ಲವೆಂದು ಒಬ್ಬ ವ್ಯಕ್ತಿ ಹೇಳಿದ. ಈ ಸಂದರ್ಭಗಳಲ್ಲಿ ಮೊದಲು ಹಾಡುಗಾರ ಒಂದು ಪದ್ಯ ಹಾಡುತ್ತಾನೆ. ಇದಾದ ನಂತರ ಇತರ ಹಾಡುಗಾರರು ಅದೇ ವಸ್ತುವಿನ ಪದ್ಯವನ್ನೇ ಹಾಡಬೇಕು ಮತ್ತು ಅಷ್ಟೇ ಉದ್ದದ ಪದ್ಯವನ್ನೇ ಹಾಡಬೇಕು. ಇವರಲ್ಲಿ ಯಾರಾದರೊಬ್ಬಾತನ ಹಾಡಿನ ಸರಕು ಮುಗಿಯುವವರೆಗೆ ಈ ಹಾಡುಗಾರಿಕೆ ಮುಂದುವರೆಯುತ್ತದೆ. ಒಂದು ವೇಳೆ ಹಾಡುಗಾರರು

ಸರಿಯಾಗಿ ಹಾಡದಿದ್ದರೆ, ಮರೆತದ್ದನ್ನು ನೆನಪಿಸಿಕೊಳ್ಳಲು ತಿಣುಕಾಡುತ್ತಿದ್ದರೆ ಜನರು ಜೋರಾಗಿ ನಗುತ್ತಿದ್ದರು. ಇದು ಒಂದು ರೀತಿ ಎರಡು ಕೋಳಿಗಳ ನಡುವಿನ ಕಚ್ಚಾಟದಂತಿರುತ್ತಿತ್ತು. ಯಾವ ಕೋಳಿ ತುಂಬ ಹೊತ್ತಿನವರೆಗೆ ಶಬ್ದ ಮಾಡುತ್ತಿರುತ್ತದೋ ಅದೇ ಗೆಲ್ಲುವ ಹಾಗೆ. ಎಲ್ಲ ಹಾಡುಗಾರರೂ ನಿಪುಣರೇ ಆಗಿದ್ದಾಗ ಯಾರಾದರೊಬ್ಬ ಸುಸ್ತಾಗಿ ಮಲಗಿಬಿಡುವ ತನಕ ಈ ಸ್ಪರ್ಧೆ ನಡೆಯುವುದು.

ದಕ್ಷಿಣ ಭಾಗದಲ್ಲಿ ವಿಭಿನ್ನ ರೀತಿಯ ಸಾಮಾಜಿಕ ವ್ಯವಸ್ಥೆ ಇದ್ದುದು ಬೇರೆ ಬೇರೆ ಅಂಶಗಳು ಒತ್ತನ್ನು ಪಡೆಯುವುದಕ್ಕೆ ಕಾರಣವಾಯಿತು. ಲಡೊಗಾ ಕರಿಲಿಯಾ ಭಾಗದಲ್ಲಿ ಈ ಪರಂಪರೆಯನ್ನು ಮುಂದುವರೆಸಿಕೊಂಡು ಬರುವಲ್ಲಿ ಹೆಂಗಸರ ಪಾತ್ರವೇ ಪ್ರಮುಖ. ವಿಸ್ತೃತ ಕರೀಲಿಯಾ ಕುಟುಂಬಗಳ ಸಾಮಾಜಿಕ ಜೀವನದಲ್ಲಿ ಉಳಿದುಕೊಂಡು ಬಂದಿರುವ ಈ ಪರಂಪರೆ ಕೌಟುಂಬಿಕ ಗಾದೆಗಳಾಗಿ ಕೆಲಸದ ಹಾಡುಗಳಾಗಿ, ಶಕ್ತಿಯುತವಾದ ಭಾವಗೀತೆಯಾಗಿ... ಹೀಗೆ ವಿವಿಧ ರೂಪಗಳಲ್ಲಿ ಮೈದಾಳಿದೆ.

ಇದಕ್ಕಿಂತ ದಕ್ಷಿಣದ ಇನ್‌ಗ್ರಿಯಾದಲ್ಲಿ ಗುಲಾಮೀ ಜೀವನ ಹಾಗೂ ರಷ್ಯನ್ ಜೀವನದ ಅಂಶಗಳು ಪದ್ಯಗಳ ವಸ್ತು ಹಾಗೂ ಧೋರಣೆಗಳಲ್ಲಿ ಪ್ರತಿಬಿಂಬಿಸಿವೆ. ಇಲ್ಲಿಯೂ ಸಹ ಕಲೆವಲ ಪರಂಪರೆಯನ್ನು ಮುಂದುವರೆಸಿಕೊಂಡು ಬಂದವರು ಹೆಂಗಸರೇ. ಆದರೆ ಇಲ್ಲಿಯ ಶೈಲಿ ಸುಧಾರಿತಗೊಂಡಿರುವುದು ಇಲ್ಲಿನ ವೈಶಿಷ್ಟ. ಇಲ್ಲಿ ಕೆಲವೊಂದು ವಸ್ತುವನ್ನು ಅಭಿವ್ಯಕ್ತಿಸಲು ಸಾಂಪ್ರದಾಯಿಕ ಸಿದ್ಧ ನಿರೂಪಣೆಗಳನ್ನು ಸಾಂಕೇತಿಕವಾಗಿ ಬಳಸಿಕೊಳ್ಳಲಾಗುತ್ತದೆ. ಹೀಗಾಗಿ ನಿರೂಪಣೆಯ ಸಂಧರ್ಭದಲ್ಲಿ ಉಪಸ್ಥಿತರಿಲ್ಲದವರಿಗೆ ಇದು ಅರ್ಥರಹಿತವಾಗಿ ಕಾಣಬಹುದು.

ಕಲೆವಲ ಕಾವ್ಯ

1849ರಲ್ಲಿ ಸಂಗ್ರಹಿಸಲಾದ 22, 795 ಸಾಲುಗಳ ಕಲೆವಲ ಕಾವ್ಯವು, ಹಳೆಯ ಹಾಡುಗಾರಿಕೆಯ ಶೈಲಿ ಕಣ್ಮರೆಯಾಗುವ ಮುನ್ನ ಸಂಗ್ರಾಹಕರು ಸಂಗ್ರಹಿಸಿದ ಕಲೆವಲ ಛಂದಸ್ಸಿನಲ್ಲಿದ್ದ ಮೌಖಿಕ ಕಾವ್ಯದ ಸ್ವಲ್ಪ ಭಾಗವನ್ನಷ್ಟೆ ಪ್ರತಿನಿಧಿಸುತ್ತಿದೆ. ಈಗ ಉಳಿದಿರುವ ಸಾಮಗ್ರಿ ಎಷ್ಟೆಂಬುದರ ಒಂದು ಅಂದಾಜು ಊಹೆ ಮಾತ್ರ ಸಾಧ್ಯ. ಫಿನ್ನಿಶ್ ಸಾಹಿತ್ಯ ಸಂಘದ ಪತ್ರಾಗಾರದಲ್ಲಿ ಸಂಗ್ರಹಗೊಂಡಿದ್ದ ಕಲೆವಲ ಕಾವ್ಯದ 1,270,000 ಸಾಲುಗಳನ್ನು Suomer Kansan Vanhet runot (Ancient Poems of the Finnish People) ಎಂಬ ಹೆಸರಿನಲ್ಲಿ 33 ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. (1908-48). ಈ ಸಂಘದ ಪತ್ರಾಗಾರದಲ್ಲಿರುವ ಇನ್ನೂ ಅರ್ಧದಷ್ಟು ಸಾಮಗ್ರಿ ಅಪ್ರಕಟಿತವಾಗೇ ಉಳಿದಿದೆ. ಎಸ್ತೋನಿಯಾದ ಅಕಾಡಮಿ ಆಫ್ ಸೈನ್ಸಸ್ ಹಾಗೂ ಸೋವಿಯತ್ ಅಕಾಡಮಿ ಆಫ್ ಸೈನ್ಸಸ್‌ನ ಪೆಟ್ರೊಜೊವೊಡಸ್ಕ್ ಶಾಖೆಯಲ್ಲಿಯೂ ಸಹ ಸಾಕಷ್ಟು ಪತ್ರಾಗಾರ ಸಂಗ್ರಹ ಲಭ್ಯವಿದೆ.

ಬಾಲ್ಟಿಕ್ ಪ್ರದೇಶದ ಈ ಸಾಮಗ್ರಿಯ ಪ್ರಾಚೀನ ಇತಿಹಾಸದ ಬಗ್ಗೆ ಪುರಾತತ್ವ ಶಾಸ್ತ್ರಜ್ಞರಿಂದ ಹಿಡಿದು ಭಾಷಾತಜ್ಞರವರೆಗೆ ವಿವಿಧ ತಜ್ಞರು ವ್ಯಕ್ತಪಡಿಸುವ ಅಭಿಪ್ರಾಯಗಳ

ಬೆಳಕಿನಲ್ಲಿ ನೋಡಿದಾಗ ಸುಮಾರು ಎರಡೂವರೆ ಸಾವಿರ ವರ್ಷಗಳ ಪ್ರಾಚೀನತೆಯ ಈ ಕಾವ್ಯದ ಸ್ವರೂಪ ಹಾಗೂ ಉದ್ದೇಶವನ್ನು ಕುರಿತಂತೆ ಮತ್ತು ಆ ತರುವಾಯದ ವಿಕಾಸವನ್ನು ಕುರಿತಂತೆ ಕೆಲವು ತಾತ್ಕಾಲಿಕ ಊಹೆಗಳನ್ನು ಮಾಡಬಹುದು. ಎರಡೂವರೆ ಸಾವಿರ ವರ್ಷಗಳಷ್ಟು ಹಿಂದೆ ಹೋಗುವುದೆಂದರೆ ಒಂದು ಯಾದೃಚ್ಛಿಕವಾದ ಆದರೆ ಅನುಕೂಲಕರವಾದ ಆರಂಭ ಬಿಂದುವನ್ನು ಇಟ್ಟುಕೊಂಡಂತೆ. ಆ ಕಾಲದಲ್ಲಿಯೇ ಕಲೆವಲ ಕಾವ್ಯವು ಬಾಲ್ಟಿಕ್ ಫಿನ್ನಿಶ್ ಜನರ ಪೂರ್ವಿಕರಲ್ಲಿ ಒಂದು ನಿರ್ದಿಷ್ಟ ಕಲಾರೂಪವಾಗಿ ಪ್ರಚಲಿತವಿತ್ತು ಎಂದು ತೌಲನಿಕ ಆಧಾರಗಳು ಸೂಚಿಸುತ್ತವೆ. ಇದರ ಕೆಲವು ಛಂದಸ್ಸಿನ ಲಕ್ಷಣಗಳು ಬಾಲ್ಟಿಕ್ ಫಿನ್ನಿಶ್ ಪೂರ್ವಿಕರ ಭಾಷೆಯು ತನಗಿಂತ ಹಿಂದಿನ ಫಿನ್ನೊ ಉಗ್ರಿಕ್ ಭಾಷಾ ರೂಪದಿಂದ ಸಂಪೂರ್ಣವಾಗಿ ಬೇರ್ಪಡುವುದಕ್ಕಿಂದ ಮೊದಲಿನ ಕಾಲದ್ದಾಗಿರುವಂತೆ ತೋರುತ್ತದೆ. ಇದಲ್ಲದೆ ಎರಡೂವರೆ ಸಾವಿರ ವರ್ಷಗಳ ಹಿಂದೆ ಕಲೆವಲ ಕಾವ್ಯದ ಕೇಂದ್ರ ತಿರುಳನ್ನು ರೂಪಿಸಿದವು ಎಂದು ಭಾವಿಸಲಾದಂಥ ಆಶಯ ಮತ್ತು ವಸ್ತುಗಳು ಪರಸ್ಪರ ದೂರವಿರುವ ಜಗತ್ತಿನ ಇತರ ಬೇರೆ ಬೇರೆ ಭಾಗಗಳಲ್ಲಿ ಪ್ರಚಲಿತವಿದ್ದಂತಹ ಅಂಶಗಳನ್ನೇ ಒಳಗೊಂಡಿವೆ. ಪ್ರಸಾರಣ ಈ ಸಾರ್ವತ್ರಿಕತೆಗೆ ಕಾರಣವೇ, ಒಂದೇ ರೀತಿ ಇದ್ದಂತಹ ಪರಿಸರದಲ್ಲಿ ಸ್ವತಂತ್ರವಾಗಿಯೇ ಈ ಸಮಾನ ಅಂಶಗಳು ಉಗಮಿಸಿವೆಯೇ ಅಥವಾ ಈ ಎರಡರ ಮಿಶ್ರಣವೇ... ಈ ಯಾವುದನ್ನೂ ನಿರ್ದಿಷ್ಟವಾಗಿ ಹೇಳಲಾಗದು. ಆದರೆ ಅಷ್ಟು ಕಾಲದ ಹಿಂದೆಯೇ ಕಲೆವಲ ಕಾವ್ಯವು ವಿಭಿನ್ನ ಹಿನ್ನೆಲೆ ಹಾಗೂ ಮೂಲಗಳ ನೆರೆಹೊರೆಯ ಬುಡಕಟ್ಟುಗಳಿಂದ ಸಂಪ್ರದಾಯ ಮತ್ತು ಕಾವ್ಯವನ್ನು ಅಳವಡಿಸಿಕೊಂಡಿದ್ದಿತು ಎಂಬುದಂತೂ ಸ್ಪಷ್ಟ. ಬಾಲ್ಟಿಕ್ ಫಿನ್ನಿಶ್ ವಸ್ತುವಿಗೆ ಬಾಲ್ಟ್ ಜನರ ಮೌಖಿಕ ಕಾವ್ಯದೊಂದಿಗೆ ಸಾಮ್ಯತೆಗಳಿರುವುದನ್ನು ನೋಡಿದಾಗ, ಕಲೆವಲ ಕೇಂದ್ರ ತಿರುಳನ್ನು ರೂಪಿಸುವಲ್ಲಿ ಪುರಾತನ ಬಾಲ್ಟ್ ಜನರೊಂದಿಗೆ ಇದ್ದಂತಹ ಸಂಪರ್ಕಗಳ ಮಹತ್ವವನ್ನು ಅಲ್ಲಗಳೆಯುವಂತಿಲ್ಲ. (ಉದಾಹರಣೆಗೆ ಬಾಲ್ಟಿಕ್-ಫಿನ್ನಿಶ್ ಕಾಂಟಲನ ಹೆಸರು ಹಾಗೂ ಅನೇಕ ದೇವತೆಗಳ ಹೆಸರುಗಳು ಪ್ರಾಚೀನ ಬಾಲ್ಟ್ ಪದಗಳಿಂದ ನಿಷ್ಪತ್ತಿಯಾಗಿವೆ ಎಂಬ ಅಂಶವನ್ನು ಇಲ್ಲಿ ಗಮನಿಸಬಹುದು.)

ಈ ಕಾಲದಲ್ಲಿ ಅನೇಕ ವಾರ್ಷಿಕ ವಿಧಿ ಆಚರಣೆಗಳು ಮುಖ್ಯವಾಗಿ ಮನುಷ್ಯ, ಪ್ರಾಣಿ ಹಾಗೂ ಭೂಮಿಯ ಫಲವಂತಿಕೆಗೆ ಸಂಬಂಧಿಸಿದಂಥವು. ಇಂಥ ಆಚರಣಾ ವಿಧಿಗಳನ್ನು ಮಾಡುವಾಗ ಕಲೆವಲ ಕಾವ್ಯದ ನಿರೂಪಣೆ ಇರುತ್ತಿತ್ತು. ಮನುಷ್ಯ ನಿಯಂತ್ರಿಸುವುದಕ್ಕಾಗದಂತಹ ಅಪಾಯಕಾರಿ ಸಾಹಸಗಳಲ್ಲಿ ಉದಾಹರಣೆಗೆ ಬೇಟೆ, ಅವರಲ್ಲಿಯೂ ಕರಡಿಯ ಬೇಟೆ ಸಂದರ್ಭಗಳಲ್ಲಿ ಅಥವಾ ರೋಗಗಳನ್ನು ನಿವಾರಿಸಲು ಮತ್ತು ದೂರವಿಡಲು ಅತಿ ಮಾನುಷ ಶಕ್ತಿಗಳನ್ನು ಆವಾಹಿಸಬೇಕಾದ ಸಂದರ್ಭಗಳಲ್ಲಿ ಆಯಾ ಸಂದರ್ಭಕ್ಕೆ ಸೂಕ್ತವಾದ ಕಾವ್ಯ ಭಾಗವನ್ನು ಪಠಿಸಬೇಕಾಗುತ್ತಿತ್ತು. ಜೀವನಾವರ್ತ ಆಚರಣೆಗಳ ಸಂದರ್ಭದಲ್ಲಿ ಈ ಕಾವ್ಯದ ಸುದೀರ್ಘ ನಿರೂಪಣೆ ನಡೆಯುತ್ತಿತ್ತು. ಎಷ್ಟೋ ವೇಳೆ ಅದೊಂದು ನಾಟಕೀಯ ವಿಧಿಯಾಗಿರುತ್ತಿತ್ತು. ವಿವಾಹ ಮತ್ತು ಮರಣ ಸಂದರ್ಭಗಳಲ್ಲಿ ಇದು ಅನೇಕ ದಿನಗಳವರೆಗೆ ನಡೆಯುವ ಪ್ರದರ್ಶನವಾಗಿ ರೂಪುಗೊಂಡಿತು.

ಜನರು ಯಾವಾಗಿನಿಂದ ಈ ಕಾವ್ಯವನ್ನು ಶುದ್ಧವಾಗಿ ಅದರ ಕಲಾತ್ಮಕ ಹಾಗೂ ಮನರಂಜನಾತ್ಮಕ ಪ್ರಯೋಜನಕ್ಕಾಗಿಯೇ ನಿರೂಪಿಸತೊಡಗಿದರು? ಮೊದಲು ಆಚರಣಾ ವಿಧಿಯ ಜೊತೆಜೊತೆಯಾಗಿಯೇ ಈ ಉದ್ದೇಶಕ್ಕೂ ಕಾವ್ಯದ ನಿರೂಪಣೆ ಯಾಗುತ್ತಿದ್ದಿರಬಹುದು. ತನ್ನ ಪರಿಸರವನ್ನು ನಿಯಂತ್ರಿಸುವ ಸಂಗತಿಗಳನ್ನು ಮನುಷ್ಯ ಹೆಚ್ಚು ಹೆಚ್ಚು ಅರ್ಥಮಾಡಿಕೊಳ್ಳುತ್ತಾ ಹೋದಂತೆ ಈ ಎರಡು ಕಾರ್ಯಗಳ ನಡುವಿನ ಒತ್ತು ಬದಲಾಯಿತು. ಹೀಗಾಗಿ ಆಚರಣೆಗೆ ಸಂಬಂಧಿಸಿದಂತೆ ನಿರೂಪಿಸಲಾಗುತ್ತಿದ್ದ ಕಾವ್ಯದ ಸಂಗತಿಗಳು ಹಾಗೂ ಪಾತ್ರಗಳನ್ನು ಹೊಸ ಕಾವ್ಯಕ್ಕೆ ಅಳವಡಿಸಿಕೊಳ್ಳಲಾಯಿತು ಮತ್ತು ಅವುಗಳನ್ನು ವೀರಪುರುಷರ ಸಾಹಸ ಕೃತ್ಯಗಳಾಗಿ ಆನಂತರ ಸಾಮಾನ್ಯ ಪುರುಷ ಸ್ತ್ರೀಯರ ಸಾಹಸ ಕೃತ್ಯಗಳಾಗಿ ರೂಪಿಸಲಾಯಿತು. ಹೀಗಾಗಿ ತಲೆಮಾರಿನಿಂದ ತಲೆಮಾರಿಗೆ ಅದೇ ಮಹಾಕಾವ್ಯ, ಭಾವಗೀತೆ ಹಾಗೂ ಮಾಂತ್ರಿಕ ಗೀತೆಗಳು ಸೃಷ್ಟಿ, ಪುನರ್‌ಸೃಷ್ಟಿ ಹಾಗೂ ವಿವಿಧ ರೀತಿಯ ಸಂಯೋಜನೆಗಳ ಮೂಲಕ ಬೆಳೆಯುತ್ತ ಬಂದವು.

ಪುರಾಣ ಪದ್ಯಗಳು

ಲೊನಾರ್ಟ್ ಮತ್ತಿತರರು ಸಂಗ್ರಹಿಸಿದ ಬಾಲ್ಟಿಕ್ ಫಿನ್ನಿಶ್ ಮಹಾಕಾವ್ಯವನ್ನು ಮುಖ್ಯವಾಗಿ ನಾಲ್ಕು ವಿಧಗಳಾಗಿ ವಿಂಗಡಿಸಿಕೊಳ್ಳಬಹುದು. ಇದರಲ್ಲಿ ಪುರಾಣ ಕಾವ್ಯ ಭಾಗವು ಕಾಲದ ಆದಿಯಲ್ಲಿ ಸೃಷ್ಟಿ ಕ್ರಿಯೆಗಳನ್ನು, ವಿಶ್ವದ ಸೃಷ್ಟಿ ಹಾಗೂ ಮಾನವರ, ಪ್ರಾಣಿಗಳ ಮತ್ತು ಸಸ್ಯ ಜೀವನದ ಸೃಷ್ಟಿಯನ್ನು ವಿವರಿಸುತ್ತದೆ. (I, II, VIನೇ ಅಧ್ಯಾಯಗಳನ್ನು ನೋಡಬಹುದು). ಬಹುಶಃ ಇದು ಕಲೆವಲ ಕಾವ್ಯದ ಅತ್ಯಂತ ಪ್ರಾಚೀನ ಹಂತ. ಸಾರ್ವತ್ರಿಕ ಸಾಮ್ಯತೆಯ ಅಂಶಗಳು ಹೆಚ್ಚಾಗಿ ಕಂಡು ಬರುವುದೂ ಸಹ ಈ ಹಂತದಲ್ಲಿಯೆ. ಆಕಾಶಕಾಯಗಳ ಉಗಮ ಮತ್ತು ತತ್ತಿಯಿಂದ ಭೂಮಿಯ ಉಗಮವನ್ನು ಹೇಳುವ ಬಾಲ್ಟಿಕ್ ಫಿನ್ನಿಶ್ ಪದ್ಯಭಾಗಗಳು ಪೂರ್ವ ಮೆಡಿಟರೇನಿಯನ್‌ನಿಂದ ಪ್ಯಾಸಿಫಿಕ್‌ವರೆಗೆ ಪ್ರಚಲಿತವಿರುವ ಪರಂಪರೆಯಲ್ಲಿರುವಂತಹ ಅಂಶಗಳೇ ಆಗಿವೆ. ಸ್ವರ್ಗವನ್ನು ನಿರ್ಮಿಸುವ ಕೆಲಸವನ್ನು ಕಮ್ಮಾರ ಇಲ್ಮಾರಿನೆನ್‌ಗೆ ಒಪ್ಪಿಸುವ ನಂಬಿಕೆಗೆ ಸಂವಾದಿಯಾದ ಅಂಶಗಳನ್ನು ಸಹ ಜಗತ್ತಿನ ಇತರ ಭಾಗಗಳಲ್ಲಿ ಕಾಣಬಹುದು. ವೆಯ್ನಾಮೊಯ್ನನ್‌ನ ಹುಟ್ಟು ಮತ್ತು ಭೂ ಸೃಷ್ಟಿಯ ವಿಷಯಕ್ಕೂ ಭಾರತದ ಪುರಾಣಗಳಲ್ಲಿ ವರಾಹಾವತಾರದಲ್ಲಿ ನಡೆಯುವ ಭೂಸೃಷ್ಟಿಯ ವಿಷಯಕ್ಕೂ ಸಾಮ್ಯವಿದೆ. ಮಾನವನಿಗೆ ಪ್ರಾಣಿಗಳು ಬೆಂಕಿಯನ್ನು ತಂದುಕೊಡುವ ಬಾಲ್ಟಿಕ್ ಫಿನ್ನಿಶ್ ಪುರಾಣಗಳನ್ನು ಬಂಗಾಳ ಹಾಗೂ ವಾಯುವ್ಯ ಅಮೆರಿಕಾದಲ್ಲಿ ಪ್ರಚಲಿತವಿರುವ ಪುರಾಣಗಳೊಂದಿಗೆ ಹೋಲಿಸಬಹುದು. ಬಾಲ್ಟಿಕ್ ಫಿನ್ನರ 'ವಿಶ್ವವೃಕ್ಷ' ಪುರಾಣವು ಇದೇ ಪ್ರದೇಶದಲ್ಲಿ ತತ್ತಿಯಿಂದ ವಿಶ್ವದ ಸೃಷ್ಟಿ ಪುರಾಣವಾಗಿ ಪ್ರಚಲಿತವಿದೆ. ಸ್ವರ್ಗದಿಂದ ಧರೆಗಿಳಿದು ಬರುವ ಆದಿಜಾಂಬವ, ಭೂಮಿಯಲ್ಲಿ ಅದರ ಬದುಕು ಮತ್ತು ಸಾವು ಆನಂತರ ಸ್ವರ್ಗದಲ್ಲಿರುವ ತನ್ನ ತಂದೆಯೆಡೆಗೆ ಅದರ ಪಯಣ ಮೊದಲಾದುವು ದೂರ ಉತ್ತರದಲ್ಲಿ ಪ್ರಚಲಿತವಿವೆ. ಈ ಪ್ರಾಚೀನ ಬಾಲ್ಟಿಕ್ ಫಿನ್ನಿಶ್ ಕಾವ್ಯದ ಎರಡು ಪ್ರಮುಖ ಪಾತ್ರಗಳೆಂದರೆ ವೆಯ್ನಾಮೊಯ್ನನ್ ಹಾಗೂ ಕಮ್ಮಾರ ಇಲ್ಮಾರಿನೆನ್. ಆದರೆ ಅವರ ಮೂಲ ಅಸ್ಪಷ್ಟ. ಅವರು ಅನುಕ್ರಮವಾಗಿ ಜಲ ಹಾಗೂ

ಭೂಮಿಯ ದೇವತೆಗಳಾಗಿರಬಹುದು. ಈ ಹಂತದಿಂದಾನಂತರದ ಪರಂಪರೆಯಲ್ಲಿ ಅವರು ದೇವತೆಗಳಾಗಿಯೂ ಸಾಂಸ್ಕೃತಿಕ ವೀರರಾಗಿಯೂ ಕಂಡು ಬರುತ್ತಾರೆ. ಇವರು ಸುತ್ತಾಡುವ ಭೂಪ್ರದೇಶವೆಲ್ಲ ಕಾವಳ ಕವಿದ ಉತ್ತರದ ಭೂಮಿ. ಅಲ್ಲಿರುವವರೆಲ್ಲ ದೇವತೆಗಳ ಲಕ್ಷಣವುಳ್ಳ ಜೀವಿಗಳು. ಇವರಿಗೆ ಸ್ಪಷ್ಟ ವ್ಯಕ್ತಿತ್ವವಿಲ್ಲ. ಆದರೆ ಕ್ರಿಯೆಗಳ ಮೂಲಕ ಅವರ ಅಸ್ತಿತ್ವ ಪ್ರಕಟವಾಗುತ್ತದೆ.

ಯಕ್ಷಿಣಿ ಹಾಗೂ ಮಾಂತ್ರಿಕ ಪುರೋಹಿತರ ಕಾವ್ಯಭಾಗಗಳು :

ಬಾಲ್ಟಿಕ್ ಫಿನ್ನಿಶ್ ಕಾವ್ಯದ ಎರಡನೇ ಹಂತವು ಯಕ್ಷಿಣಿ ಹಾಗೂ ಮಾಂತ್ರಿಕ ಪುರೋಹಿತರಿಗೆ ಸಂಬಂಧಿಸಿದ ವಿಷಯಗಳನ್ನು ಹೆಚ್ಚು ಪ್ರಮಾಣದಲ್ಲಿ ಹೊಂದಿದೆ. ಬಹುಶಃ ಈ ಕಾಲಾವಧಿಯು ಕ್ರಿಸ್ತನ ಹುಟ್ಟಿಗಿಂತ ಸ್ವಲ್ಪ ಮೊದಲಿನ ಅಂದರೆ ಕ್ರಿಸ್ತ ಪೂರ್ವ 500-600ರ ಸಮೀಪದ್ದಿರಬಹುದು ಎಂದು ಕೆಲವು ವಿದ್ವಾಂಸರು ಊಹಿಸುತ್ತಾರೆ. ಬಾಲ್ಟಿಕ್ ಫಿನ್ನಿಶ್ ಭಾಷೆಯು ಎರವಲು ಪಡೆದುಕೊಂಡಿರುವ ಕೆಲವು ಭಾಷಾ ರೂಪಗಳು ಈ ಹಂತದಲ್ಲಿ ಅವರಿಗೆ ಪ್ರಾಚೀನ ಪೂರ್ವ ಜರ್ಮನ್ ಹಾಗೂ ಸ್ಕ್ಯಾಂಡಿನೇವಿಯನ್ ಬುಡಕಟ್ಟುಗಳ ಸಂಪರ್ಕವಾಗಿದ್ದಕ್ಕೆ ಸಾಕ್ಷ್ಯಾಧಾರ ಒದಗಿಸುತ್ತವೆ. ಅವರಿಂದ ಇವರು ಅನೇಕ ತಾಂತ್ರಿಕ ಪರಿಕಲ್ಪನೆಗಳನ್ನು ಪಡೆದುಕೊಂಡರು. (ನೇಗಿಲು, ಭಲ್ಲೆ, ಕತ್ತಿ, ಚಿನ್ನ, ಕಬ್ಬಿಣ, ವ್ಯಾಪಾರ). ಸಮಾಜ ವ್ಯವಸ್ಥೆಯ ಪರಿಕಲ್ಪನೆಗಳನ್ನು ಪಡೆದುಕೊಂಡರು. (ಅಧಿಕಾರ, ಅರಸ, ಆಳ್ವಿಕೆ, ನ್ಯಾಯ ತೀರ್ಮಾನ). ಪ್ರಯಾಣ ಮತ್ತು ಸಂಘರ್ಷಗಳನ್ನು ಕುರಿತ ಆಶಯ ಹಾಗೂ ವಸ್ತುವಿನಲ್ಲಿ ಸ್ಕ್ಯಾಂಡಿನೇವಿಯನ್ ಸಂಪರ್ಕವಿದ್ದುದಕ್ಕೆ ಆಧಾರಗಳು ಸಿಗುತ್ತವೆ. ಈ ಎರಡನೇ ಹಂತದಾನಂತರದಿಂದ ಅವರ ಸಂಚಾರ ಪ್ರದೇಶವೂ ಉತ್ತರ ಯೂರೋಪಿಯನ್ ಕಡೆಗೆ ಚಾಚಿಕೊಂಡಿತು. ಇದು ಅರಣ್ಯಮಯವಾದ, ನೀರಿಗೆ ಸಮೀಪದಲ್ಲಿರುವ ಸಣ್ಣ ಸಣ್ಣ ಕೋಮುಗಳು ನೆಲೆಸಿದಂತಹ ಮತ್ತು ಹೆಣ್ಣಿಗಾಗಿ ಹಾಗೂ ಇತರ ವಸ್ತುಗಳಿಗಾಗಿ ವೀರನಾಯಕರು ಹೋರಾಟ ಮಾಡುತ್ತಿದ್ದಂತಹ ಪ್ರದೇಶ. ಇಲ್ಲಿನ ವಿಶ್ವ ಹೆಚ್ಚು ವ್ಯವಸ್ಥಿತವಾಗಿದೆ. ಮೊದಲು ದೇವವೀರರುಗಳಾಗಿದ್ದ ವೆಯ್ನಾಮೊಯ್ನನ್ ಹಾಗೂ ಇಲ್ಮಾರಿನೆನ್ನರು ಇಲ್ಲಿ ಮಾಂತ್ರಿಕ ಪುರೋಹಿತರ ಹಾಗೂ ಬುಡಕಟ್ಟು ನಾಯಕರ ಸ್ಥಾನಕ್ಕೆ ಇಳಿದಿದ್ದಾರೆ. ಇತರ ಪಾತ್ರಗಳೂ ಜೊತೆಗೂಡುತ್ತವೆ. ಲೆಮ್ಮಿನ್ಕಾಯ್ನನ್ ಯುವ ಉತ್ಸಾಹೀ ಲಂಪಟ ವ್ಯಕ್ತಿ. ಯೊಕಾಹಿನನ್ ದುರ್ಬಲನಾದ ಮಹತ್ವಾಕಾಂಕ್ಷೀ ಮಾಂತ್ರಿಕ ಪುರೋಹಿತ. ಅವನ ದುರಹಂಕಾರ ಸೊಕ್ಕುಗಳೇ ಅವನ ಅವನತಿಗೆ ಕಾರಣವಾಗುತ್ತವೆ. ಹೆಂಗಸರು ತಾಯಿ, ಹೆಂಡತಿ, ಪ್ರೇಮಿ, ಸೇವಕಿ ಮೊದಲಾದ ಪಾತ್ರಗಳಲ್ಲಿ ಪ್ರಧಾನವಾಗಿ ಕಾಣಸಿಕೊಳ್ಳುತ್ತಾರೆ. ಅನೇಕ ವೇಳೆ ಅವರು ಅಂಕೆಗೆಟ್ಟ ಪುರುಷ ವರ್ಗವನ್ನು ಮೀರಿಸುತ್ತಾರೆ. ಲೌಹಿ ಅಂದರೆ ಪೊಹ್ಜೊಲಾ ಒಡತಿ. ಪೊಹ್ಜೊಲಾ ಎಂಬುದು ವೆಯ್ನಾಮೊಯ್ನನ್ ಇಲ್ಮಾರಿನೆನ್ ಹಾಗೂ ಲೆಮಿನ್‌ಕಾಯ್ನನ್ ಇರುವ ಸ್ಥಳಕ್ಕೆ ಉತ್ತರದಲ್ಲಿರುವ ಭೂಮಿ. (ಲೊನಾರ್ಟ್ ಈ ಭೂಮಿಗೆ ಕಲೆವಲ ಎಂಬ ಹೆಸರು ಕೊಡುತ್ತಾನೆ). ದಕ್ಷಿಣದ ವೀರರು ಲೌಹಿಯ ಮಗಳನ್ನು ಬಯಸಿದಾಗ ಅವಳು ಸ್ಯಾಂಪೊ (ಮಾಯಾ ಗಿರಣಿ ಅಥವಾ ಬೀಸುವ ಯಂತ್ರ)ವನ್ನು ಕನ್ಯಾ ಶುಲ್ಕವಾಗಿ ಕೇಳುತ್ತಾಳೆ. ಯಾರ ಬಳಿ ಸ್ಯಾಂಪೊ ಇರುತ್ತದೋ ಅವರಿಗೆ

ಅದು ಅಪರಿಮಿತ ಐಶ್ವರ್ಯ ತಂದುಕೊಡುತ್ತದೆ. ಇಲ್ಮಾರಿನೆನ್, ಸ್ಯಾಂಪೊ ಬೆಸೆದುಕೊಟ್ಟು ಲೌಹಿಯ ಮಗಳನ್ನು ಮದುವೆಯಾಗುತ್ತಾನಾದರೂ ಬಹುಬೇಗ ಅವಳನ್ನು ಕಳೆದುಕೊಳ್ಳುತ್ತಾನೆ. ವೆಯ್ನಾಮೊಯ್ನನ್ ಇಲ್ಮಾರಿನೆನ್ ಹಾಗೂ ಲೆಮಿನ್ಕಾಯ್ನನ್ ಮೂವರೂ ಸೇರಿ ಸ್ಯಾಂಪೊವನ್ನು ಹಿಂತೆಗೆದುಕೊಂಡು ಹೋಗಲು ಪ್ರಯತ್ನಿಸಿದಾಗ ಲೌಹಿ ಹಾಗೂ ಇವರ ಮಧ್ಯೆ ಭಾರೀ ಕಾಳಗ ನಡೆಯುತ್ತದೆ. ಲೌಹಿ, ಹಾರುವ ದೈತ್ಯನಾಗಿ ರೂಪಾಂತರಗೊಂಡು ಅಟ್ಟಿಸಿಕೊಂಡು ಬರುತ್ತಾಳೆ. ಇವರ ಹೋರಾಟದಲ್ಲಿ ಸ್ಯಾಂಪೊ ಚೂರು ಚೂರಾಗಿ ಕಡಲಿನಲ್ಲಿ ಮುಳುಗಿ ಹೋಗುತ್ತದೆ.

ಎರಡನೇ ಹಂತದ ಬೆಳವಣಿಗೆಯಲ್ಲಿ ರೂಪುಗೊಂಡ ಪದ್ಯಗಳು ಪ್ರಾಚೀನ ಫಿನ್ ಮತ್ತು ಅವರ ಬಾಲ್ಟಿಕ್ ಫಿನ್ನಿಶ್ ನೆರೆಹೊರೆಯವರು ತಮ್ಮ ಸುತ್ತಲಿನ ಜಗತ್ತನ್ನು ಹೇಗೆ ಅರ್ಥಮಾಡಿಕೊಂಡಿದ್ದರು ಎಂಬ ಬಗ್ಗೆ ಬೆಳಕು ಚೆಲ್ಲುತ್ತವೆ. ವಿಶ್ವವನ್ನು ಅವರು ಮೂರು ವಿಭಾಗಗಳಾಗಿ ವಿಂಗಡಿಸಿಕೊಂಡಿದ್ದರು. ಒಂದು, ಮೇಲಿನ ಜಗತ್ತು. ಅದರ ಒಂದು ಸ್ಪಷ್ಟ ಕಲ್ಪನೆ ಇಲ್ಲಿದೆ. ಅಲ್ಲಿ ಸರ್ವೋಚ್ಚರಾದ ಇಬ್ಬರು ದೇವರುಗಳಾಗಿದ್ದಾರೆ. ಉಕ್ಕೊ ಮತ್ತು ಜುಮಾಲಾ. ಅನೇಕ ಸಲ ಇವರ ಉಲ್ಲೇಖ ಬರುತ್ತದೆ. ಉಕ್ಕೊ ಸಿಡಿಲದೇವ. ಜುಮಾಲಾನ ಸ್ವರೂಪ ಅಷ್ಟು ಸ್ಪಷ್ಟವಾಗುವುದಿಲ್ಲ. ಆದರೆ ಮೊದಮೊದಲಿನ ಕ್ರಿಶ್ಚಿಯನ್ ಮಿಶನರಿಗಳು ಜುಮಾಲಾ ಎಂಬ ಹೆಸರನ್ನು ಕ್ರಿಶ್ಚಿಯನ್ ದೇವತೆಗೆ ಅಳವಡಿಸಿಕೊಂಡಿರುವುದು ಆತನ ಪ್ರಾಮುಖ್ಯತೆಗೆ ದ್ಯೋತಕವಾಗಿದೆ.

ಜೀವಿಗಳ ವಿಶ್ವದ ಪ್ರಾಕೃತಿಕ ವಿದ್ಯಮಾನಗಳನ್ನು ಸರ್ವಚೇತನ ಶಕ್ತಿಗಳು ನಿಯಂತ್ರಿಸುತ್ತಿದ್ದವು. ಮನುಷ್ಯ, ಜಗತ್ತಿನ ಕೆಲವು ಆಗುಹೋಗುಗಳು ಅನೇಕ ಅಗೋಚರ ಶಕ್ತಿಗಳ ಕಾರಣದಿಂದ ಆಗುತ್ತಿವೆ ಎಂದು ಭಾವಿಸಿದ. ಏಕೆಂದರೆ ಆ ಘಟನೆಗಳ ವ್ಯವಸ್ಥೆ ಅವನ ಬುದ್ಧಿಗೆ ನಿಲುಕುತ್ತಿರಲಿಲ್ಲ. ಪ್ರೇತಶಕ್ತಿಗಳಲ್ಲಿ ವಿವಿಧ ಶ್ರೇಣಿಗಳಿದ್ದವು. ಅವುಗಳನ್ನು ವಿವಿಧ ಆಚರಣಾ ವಿಧಿಗಳ ಮೂಲಕ ಸಂತೃಪ್ತಗೊಳಿಸಬೇಕಿತ್ತು. ಬಹುಮುಖ್ಯವಾದ ಪ್ರೇತ ಶಕ್ತಿಗಳನ್ನು ವ್ಯಕ್ತೀಕರಣಗೊಳಿಸಲಾಗಿತ್ತು. (ಉದಾ: ಅಹ್ತಿ ಜಲದ ಅಧಿಪತಿ; ಟಾಪಿಯೊ - ಕಾಡಿನ ಅಧಿಪತಿ) ಆದರೆ ಕಡಿಮೆ ದರ್ಜೆಯ ಶಕ್ತಿಗಳನ್ನು ಅವು ಯಾವುದನ್ನು ನಿಯಂತ್ರಿಸುತ್ತವೋ ಆ ವಸ್ತುವಿನ ಅಥವಾ ವಿದ್ಯಮಾನದ ಹೆಸರಿನಿಂದ ಕರೆಯಲಾಗುತ್ತಿತ್ತು.

ಮನುಷ್ಯ ಸಂಚಾರಕ್ಕೆ ಎಟುಕುತ್ತಿದ್ದ ಇನ್ನೊಂದು ಲೋಕವೇ ಟುವೊನೆಲಾ (ಪರಲೋಕ). ಇದನ್ನು ಆಳುವವನು ಟುವೊನಿ (ಸತ್ತವರ ಅಧಿಪತಿ). ಆದರೂ ಸ್ವಂತದ ಪೂರ್ವಿಕರ ಆತ್ಮಗಳನ್ನು ವಿಶೇಷ ಭಯಭಕ್ತಿಗಳಿಂದ ಕಾಣಬೇಕಿತ್ತು. ವಾರ್ಷಿಕವಾಗಿ ಆರಾಧಿಸಬೇಕಿತ್ತು. ಮಂತ್ರ ವಿದ್ಯೆಯ ಪರಿಣಾಮಕಾರಿ ಕೆಲಸಕ್ಕೆ ಅಗತ್ಯವಾಗಿದ್ದ ಜ್ಞಾನ ಅವರಲ್ಲಿರುತ್ತಿತ್ತು. ಈ ಆತ್ಮಗಳು ಮರ್ತ್ಯರ ಬದುಕಿನ ಮೇಲೆ ಪ್ರಭಾವ ಬೀರುತ್ತಿದ್ದವು. ಅಲ್ಲದೆ ಪ್ರೇತ ಶಕ್ತಿಗಳ ಕೃತ್ಯದಲ್ಲಿ ಅವರು ಮಧ್ಯ ಪ್ರವೇಶಿಸುತ್ತಿದ್ದರು. ಸತ್ತವರು ಮತ್ತು ಇದ್ದವರ ನಡುವೆ ಸಂಪರ್ಕ ಕಲ್ಪಿಸುವುದು ಪ್ರೇತ ವಿದ್ಯಾ ಪುರೋಹಿತರ ಕೆಲಸ. ಅವರು ಸಮಾಧಿ ಸ್ಥಿತಿಗೆ ಬಂದಾಗ ಇತರ ಲೋಕಗಳೊಡನೆ ಸಂಪರ್ಕ ಸಾಧ್ಯವಾಗುತ್ತಿತ್ತು. ನೃತ್ಯ,

ಲಯಬದ್ಧ ಮಂತ್ರೋಚ್ಚಾರಣೆಯ ಮೂಲಕ ಅವರನ್ನು ಆ ಸ್ಥಿತಿಗೆ ತರಲಾಗುತ್ತಿತ್ತು. ಈ ಸ್ಥಿತಿಯಲ್ಲಿ ಆತನ ಆತ್ಮ ದೇಹವನ್ನು ಬಿಟ್ಟು ಮತ್ತೊಂದು ಲೋಕಕ್ಕೆ ಹೋಗಬೇಕೆಂದಾಗ ದಾಟಬೇಕಿದ್ದ ನದಿಯನ್ನು ದಾಟಿ ಟುವೊನೆಲಾ ತಲುಪುತ್ತಿತ್ತು. ಈ ಕಾಲಮಾನದ ಕಾವ್ಯ ಭಾಗ ಪ್ರೇತವಿದ್ಯಾ ಪುರೋಹಿತನ ಆತ್ಮ ಹೇಗೆ ಇನ್ನೊಂದು ಲೋಕಕ್ಕೆ ಪಯಣಿಸಿತು ಎಂಬುದನ್ನು ಕಣ್ಣಿಗೆ ಕಟ್ಟುವ ವಿವರಗಳ ಮೂಲಕ ಚಿತ್ರಿಸುತ್ತದೆ. ಟುವೊನೆಲಾ ಅಧಿಪತಿಯ ಪುತ್ರಿಯರನ್ನು ಕಬ್ಬಿಣದ ಬೆರಳು ಕಬ್ಬಿಣದ ಉಗುರಿನವರು ಎಂದು ಚಿತ್ರಿಸಲಾಗಿದೆ.

ಸಾಹಸಗಳ ಕಾವ್ಯ ಭಾಗ :

ಕಲೆವಲ ಕಾವ್ಯ ವಿಕಾಸದ ಮೂರನೆಯ ಹಂತದಲ್ಲಿ ಅಂದರೆ ಸುಮಾರು ಕ್ರಿ. ಶ. 600-1000ದ ಅವಧಿಯಲ್ಲಿ ಬಾಲ್ಟ್‌ಫಿನ್ ಜನರಿಗೆ ಪೂರ್ವದ ಕಡಲುಗಳ್ಳರೊಂದಿಗೆ ಸಂಪರ್ಕವೇರ್ಪಟ್ಟಿತು. ಅನೇಕರು ಕಡಲುಗಳ್ಳರ ಸಾಹಸಾನ್ವೇಷಣೆಗಳಲ್ಲಿ ಭಾಗಿಯಾದರು. ಆರಂಭದ ಸ್ಕ್ಯಾಂಡಿನೇವಿಯನ್ ವೀರ ಗಾಥೆಗಳಲ್ಲಿ ಪದೇಪದೇ ಕಾಣಿಸಿಕೊಳ್ಳುತ್ತಿದ್ದ ವಸ್ತು ಮತ್ತು ಆಶಯುಗಳು ಬಾಲ್ಟಿಕ್-ಫಿನ್ನಿಶ್ ಸಾಮಗ್ರಿಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಾಣಿಸಿಕೊಳ್ಳಲಾರಂಭಿಸಿದವು. ಕಾವ್ಯದ ಪ್ರತಿಮಾತ್ಮಕತೆ ಹಾಗೂ ಭಾಷೆಯಲ್ಲಿ ಇನ್ನಷ್ಟು ಸ್ಥಳೀಕರಣವಾಗಿರುವುದು ಕಂಡು ಬರುತ್ತದೆ. ಪ್ರೇತ ವಿದ್ಯಾ ಪುರೋಹಿತರು ಕಡಲುಗಳ್ಳ ವೀರರ ಪಾತ್ರ ವಹಿಸುತ್ತಾರೆ. ಪರಲೋಕಗಳಿಗೆ ಪ್ರಯಾಣವು ಈಗ ನೆಲ ಮತ್ತು ಜಲದ ಮೇಲೆ ಕೈಗೊಳ್ಳುವ ಶೌರ್ಯ ಸಾಹಸಗಳ ರೂಪ ಪಡೆಯುತ್ತದೆ. ಈ ವೀರಯೋಧರು ಕೈಗೊಳ್ಳುವ ಕೃತ್ಯಗಳ ಹಿನ್ನೆಲೆಯಾಗಿ ಸಮೃದ್ಧವಾದ ಜನಾಂಗಿಕ ವಿವರಗಳು ದೊರೆಯುತ್ತವೆ. ದ್ವಂದ್ವ ಯುದ್ಧದ ಶಿಷ್ಟಾಚಾರಗಳ ವರ್ಣನೆ, ಭಲ್ಲೆ ಹಿಡಿಕೆಯ ಅಲಂಕಾರದಿಂದ ಹಿಡಿದು ದೋಣಿಯ ವಿನ್ಯಾಸ ಹಾಗೂ ದೋಣಿ ನಡೆಸುವ ತಂತ್ರಗಳವರೆಗೆ ಈ ವರ್ಣನೆಗಳಿವೆ.

ಕಡಲುಗಳ್ಳರ ಹಂತದ ಅಬ್ಬರದ ಕಾವ್ಯ ಭಾಗದಲ್ಲಿ ಗಂಡು ಹೆಣ್ಣಿನ ಸಂಬಂಧದ ವಿಷಯವೂ ಪ್ರಾಮುಖ್ಯತೆ ಪಡೆಯುತ್ತದೆ. ಈ ಅವಧಿಯ ಒಂದು ಅಸಾಧರಣ ಕಾವ್ಯ ಭಾಗವೆಂದರೆ ಆಹ್ತಿ ಮತ್ತು ಕೈಲಿಕ್ಕಿಯರ ಬಿರುಸಿನ ಪ್ರಣಯ ಹಾಗೂ ವಿವಾಹ. ಸ್ಥಿರವಾದ ಕುಟುಂಬ ಜೀವನವನ್ನು ಬಯಸುವ ಹೆಣ್ಣು, ಮದುವೆಯ ಆತ್ಮೀಯ ನಂಟನ್ನೂ ಲೆಕ್ಕಿಸದೆ ಕಡಲ ಸಾಹಸಗಳಿಗೆಳಸುವ ಬೇಜವಾಬ್ದಾರಿಯ ಗಂಡು ಇವರಿಬ್ಬರ ನಡುವಿನ ಸಾಮರಸ್ಯರಹಿತ ಬದುಕಿಗೆ ಅದು ಕನ್ನಡಿ ಹಿಡಿಯುತ್ತದೆ. ಕೈಲಿಕ್ಕಿಯ ಯಾವುದೋ ಒಂದು ಅನುಚಿತ ವರ್ತನೆಯ ಬಗ್ಗೆ ಕಿವಿಗೆ ಬಿದ್ದ ಮಾತಿನ ಆಧಾರದ ಮೇಲೇ, ಆಹ್ತಿಯು ತಾನು ಕಡಲಯಾನ ಮಾಡುವುದಿಲ್ಲ ಎಂದು ಅವಳಿಗೆ ಕೊಟ್ಟಿದ್ದ ಮಾತನ್ನು ಮುರಿದು ಕೂಡಲೇ ಅವಳನ್ನು ತ್ಯಜಿಸಿ ಹೊರಟುಬಿಡುತ್ತಾನೆ. ಅವನ ಜೊತೆಗಾರನಾದ ಟಿಯೆರಾ ಸಹ ಆಹ್ತಿಯ ಕರೆಗೆ ಅಷ್ಟೇ ಉತ್ಸಾಹದಿಂದ ಓಗೊಟ್ಟು ಹೊಸದಾಗಿ ಮದುವೆಯಾದ ಹೆಂಡತಿಯನ್ನು ಹಾಸಿಗೆಯ ಮೇಲೆ ಹಾಗೇ ಬಿಟ್ಟು ಹೋಗುತ್ತಾನೆ.

ಹೊಸ ಪದ್ಯಗಳ ಸೇರ್ಪಡೆ ಹಾಗೂ ಹಳೆಯ ಸಾಮಗ್ರಿಯ ಪುನಃ ಸೃಷ್ಟಿಯ ಮೂಲಕ ಕಾವ್ಯದ ಹರಹು ವರ್ಧಿಸುತ್ತಿದ್ದಂತೆ ವಿವಿಧ ಹಂತಗಳ ಸಾಮಗ್ರಿಯನ್ನು ಸೇರಿಸಿ ಹೊಸ

ಪದ್ಯಗಳನ್ನು ರಚಿಸುವುದೂ ಕೂಡ ಮುಖ್ಯವಾಗತೊಡಗಿತು... ಲೆಮಿನ್ಕಾಯ್ನನನಿಗೆ ಸಂಬಂಧಿಸಿದ ಅನಂತರದ ಮರುಸೃಷ್ಟಿಗಳಲ್ಲಿ ಈ ಪ್ರಕ್ರಿಯೆ ಸ್ಪಷ್ಟವಾಗಿ ಕಾಣುತ್ತದೆ. ಇಲ್ಲಿ ಇಬ್ಬರು ಪ್ರೇತ ವಿದ್ಯಾ ಮಾಂತ್ರಿಕರ ನಡುವಿನ ಯುಗಳ ಸೆಣಸಾಟವು ಹೊಸ ರೀತಿಯ ಅಂತ್ಯ ಪಡೆಯುತ್ತದೆ. ಲೆಮಿನ್ಕಾಯ್ನನ್ ತನ್ನ ಎದುರಾಳಿಯನ್ನು ಸೋಲಿಸಿ ದ್ವೀಪವೊಂದಕ್ಕೆ ಓಡಿ ಹೋಗುತ್ತಾನೆ. ಅಲ್ಲಿ ಅವನು ಅಸಾಧಾರಣವಾದ ಲೈಂಗಿಕ ಸಾಹಸಗಳಲ್ಲಿ ಪಾಲ್ಗೊಳ್ಳುತ್ತಾನೆ...

ಕ್ರಿಶ್ಚಿಯನ್ ಕಾಲಾವಧಿಯ ಕಾವ್ಯ ಭಾಗಗಳು :

ಕಡಲುಗಳ್ಳರ ಸಾಹಸಾನ್ವೇಷಣೆಯ ಅವಧಿ ಹಾಗೂ ಕ್ರಿ. ಶ. 900 ರಿಂದ 1450ರ ಅವಧಿಯ ಕಾವ್ಯ ಭಾಗಗಳು ಒಂದರೊಡನೊಂದು ಸೇರಿಹೋಗಿವೆ. ಈ ನಾಲ್ಕನೇ ಹಂತದಲ್ಲಿ ಕ್ರೈಸ್ತ ಧರ್ಮದ ಆಗಮನ ಹಾಗೂ ಸ್ಥಾಪನೆಯಾಗಿ ಅದು ಕಲೆವಲ ಕಾವ್ಯದ ವಸ್ತು ವಿಷಯ ಹಾಗೂ ಉದ್ದೇಶದ ಮೇಲೆ ಭಾರೀ ಪರಿಣಾಮ ಬೀರಿತು.... ಕ್ರೈಸ್ತ ಪ್ರಭಾವದ ಮೊದಮೊದಲ ಹಂತಗಳಲ್ಲಿ ಮತಪ್ರಚಾರಕರು ಮತ್ತು ಪಾದ್ರಿಗಳು ತಮ್ಮ ಸಿದ್ಧಾಂತವನ್ನು ಪ್ರಚಾರ ಮಾಡುವುದಕ್ಕಾಗಿ ಕಲೆವಲದ ವಸ್ತು ಮತ್ತು ರೂಪವನ್ನು ಅಳವಡಿಸಿಕೊಳ್ಳಲು ಹಿಂಜರಿಯಲಿಲ್ಲ. ವೆಯ್ನಾಮೊಯ್ನನ್ ತನ್ನ ಮಂತ್ರ ವಿದ್ಯೆಯ ಜ್ಞಾನಕ್ಕಾಗಿ ಇನ್ನೊಂದು ಲೋಕಕ್ಕೆ ಹೋಗಿ ಬರುತ್ತಲೇ ಇರುತ್ತಾನೆ. ಆದರೆ ದೊಡ್ಡ ದೊಡ್ಡ ಅಪಾಯಗಳನ್ನು ನಿವಾರಿಸಿಕೊಂಡು ಹಿಂದಿರುಗಿದ ನಂತರ ಇಂತಹ ಪದ್ಧತಿಗಳನ್ನು ತ್ಯಜಿಸಬೇಕೆಂದು ಸಲಹೆ ಮಾಡುತ್ತಾನೆ. ಯೇಸು ಕ್ರಿಸ್ತನ ಜೀವನ ಕುರಿತ ದೀರ್ಘ ವೃತ್ತಾಂತಗಳನ್ನು ನಿರೂಪಿಸುವಾಗ ಗ್ರೀಕ್ ಪ್ರಾಚೀನ ಹಾಗೂ ರೋಮನ್ ಕ್ಯಾಥೊಲಿಕ್ ಐತಿಹ್ಯಗಳು ಒಂದುಗೂಡುತ್ತವೆ. ಅಪರಿಚಿತವಾದ ಪವಿತ್ರ ಭೂಮಿಯನ್ನು ಪರಿಚಿತಗೊಳಿಸುವುದಕ್ಕಾಗಿ ಸ್ಥಳೀಯ ಔತ್ತರೇಯ ಲಕ್ಷಣಗಳನ್ನು ಬಳಸಿಕೊಳ್ಳಲಾಗುತ್ತದೆ... ಫಿನ್ಲೆಂಡಿನಲ್ಲಿ ಕ್ರೈಸ್ತ ಧರ್ಮದ ಸ್ಥಾಪನೆಯ ಈ ಆರಂಭ ಹಂತಗಳಲ್ಲಿ ಪೂರ್ವ ಹಾಗೂ ಪಶ್ಚಿಮದ ಎರಡು ಚರ್ಚುಗಳ ಅತ್ಯಂತ ಜನಪ್ರಿಯ ಐತಿಹ್ಯಗಳು ಕಲೆವಲ ಕಾವ್ಯಕ್ಕೆ ಅನುಗುಣವಾಗಿ ರೂಪಾಂತರಗೊಂಡವು...

ಆದರೆ ಹಳೆಯ ನಂಬಿಕೆಗಳನ್ನು ಅಳಿಸಿ ಹಾಕುವುದು ಅಷ್ಟು ಸುಲಭವಾಗಿರಲಿಲ್ಲ. ಹೊಸ ನಂಬಿಕೆಗಳನ್ನು ಪ್ರತಿಪಾದಿಸುವುದಕ್ಕಾಗಿ ಈ ಹಳೆಯ ಕಾವ್ಯವನ್ನು ಅದರ ಎಲ್ಲ ಕ್ರೈಸ್ತೇತರ ವಿವರಗಳೊಂದಿಗೇ ದುಡಿಸಿಕೊಳ್ಳಬೇಕಾದ ಸಂಗತಿ ಇನ್ನೊಂದು ಕಥೆಯೇ ಆಗುತ್ತದೆ. ಈ ಕ್ರೈಸ್ತೇತರ ಪಾತ್ರಗಳು ಅನೇಕ ವೇಳೆ ಕ್ರೈಸ್ತ ಧರ್ಮದ ಪಾದ್ರಿಗಳ ಪದ್ಯಗಳಲ್ಲಿ ದೃಷ್ಟಾಂತ ರೂಪವಾಗಿ ಅಥವಾ ದುಷ್ಟ ಇಲ್ಲವೇ ಕರುಣಾಜನಕ ಪಾತ್ರಗಳಾಗಿ ಕಾಣಿಸಿಕೊಳ್ಳುತ್ತವೆ... ಕ್ರೈಸ್ತ ಪಾದ್ರಿಗಳ ಆತ್ಮವಿಶ್ವಾಸ ಹೆಚ್ಚಾಗುತ್ತಾ ಬಂದಂತೆ ಅವರು ಪ್ರಾಚೀನ ಪದ್ಧತಿಗಳನ್ನು ಹಾಗೂ ವೀರರನ್ನು ಅಲ್ಲಗಳೆಯುವುದಕ್ಕಾಗೇ ಹಳೆಯ ಕಾವ್ಯವನ್ನು ಬಳಸಿಕೊಳ್ಳ ತೊಡಗಿದರು. ಈ ಜನರು ಆಚರಿಸುತ್ತಿದ್ದಂತಹ ಫಲವಂತಿಕೆಯ ಆಚರಣೆಗಳನ್ನು ಸರಿಯಲ್ಲ ಎಂದು ಹೇಳುವುದಕ್ಕಾಗಿ 'ಇವು ಕಾಡುಗಳನ್ನೇ ಬರಡು ಮಾಡುತ್ತವೆ. ಕ್ರೈಸ್ತ ವಿಧಿಗಳು ಮಾತ್ರವೇ

ಅವುಗಳಿಗೆ ಪ್ರಾಣದಾನ ಮಾಡಬಲ್ಲವು' ಎಂಬ ಅರ್ಥ ಕೊಡುವ ಪದ್ಯವನ್ನು ಅವರು ರಚಿಸುತ್ತಾರೆ.....

ವೆಯ್ನಾಮೊಯ್ನನ್ನನಂತೂ ಕ್ರೈಸ್ತ ಪಾದ್ರಿಗಳ ತೀಕ್ಷ್ಣ ಟೀಕೆಗೆ ಗುರಿಯಾದ. ವಾರ್ಧಕ್ಯದಲ್ಲಿರುವ ಅರಳು ಮರಳಿನ ವ್ಯಕ್ತಿ ಎಂದು ಜನ ಗೇಲಿಮಾಡುವಂತೆ ಅವರು ಮಾಡುತ್ತಾರೆ... ನಯವಂಚಕ, ತನ್ನ ಗತಜೀವನವನ್ನು ಮರೆಮಾಚಿದವ ಎಂಬ ಅಭಿಪ್ರಾಯ ಮೂಡಿಸುವ ಕಥೆಗಳನ್ನು ಮಂಡಿಸುತ್ತಾರೆ. ಮಾರ್ಜತ್ತಾಳ ಎರಡು ವಾರದ ಶಿಶುವನ್ನು ತಂದೆಯಿಲ್ಲದ ಶಿಶು ಎಂದು ವೆಯ್ನಾಮೊಯ್ನನ್ ಮೂದಲಿಸಿದಾಗ ಆ ಶಿಶುವು ವೆಯ್ನಾಮೊಯ್ನನ್ ತಾಯಿಯನ್ನೇ ಸಂಭೋಗಿಸಿದವನೆಂದು ಆಪಾದಿಸುತ್ತದೆ. ಕ್ರೈಸ್ತ ಪಾದ್ರಿಯು ಆ ಶಿಶುವಿಗೆ ಬನದ ಭೂಮಿಯ ಅರಸನೆಂದು ಜ್ಞಾನ ಸ್ನಾನ ಮಾಡಿಸುತ್ತಾನೆ. ಆಗ ವೆಯ್ನಾಮೊಯ್ನನ್ ತಾಮ್ರದ ತಳವಿರುವ ದೋಣಿಯಲ್ಲಿ ಕುಳಿತು ಪುನಃ ಎಂದೂ ಹಿಂದಿರುಗಿ ಬಾರದ ಹಾಗೆ ಯಾನ ಹೊರಡುತ್ತಾನೆ. ಸಮುದ್ರ ಸುಳಿಯ ಪಾಲಾಗುತ್ತಾನೆ.

ಅವನತಿ :

ಮೇಲೆ ಹೇಳಿದ ಕಾರಣಗಳಿಂದಾಗಿ ಮಧ್ಯಯುಗದ ಕೊನೆಯ ವೇಳೆಗೆ ಕಲೆವಾಲಾ ಕಾವ್ಯವು ಒಂದು ಸೃಜನಶೀಲ ರೂಪದ ತನ್ನ ಸತ್ವವನ್ನು ಕಳೆದುಕೊಳ್ಳತೊಡಗಿತು. ಹದಿನಾರು ಮತ್ತು ಹದಿನೇಳನೇ ಶತಮಾನಗಳ ಅವಧಿಯಲ್ಲಿ ಕಲೆವಲ ಛಂದಸ್ಸಿನಲ್ಲಿ ಕೆಲವು ಕೃತಿಗಳು ರಚನೆಯಾಗಿದ್ದಕ್ಕೆ ಆಧಾರಗಳಿವೆ. ಆದರೆ ಆರಂಭದ ಕಾಲದಲ್ಲಿದ್ದ ಪದ್ಯಭಾಗಗಳ ಕಾವ್ಯಗುಣವಾಗಲೀ, ಸೂಕ್ಷ್ಮತೆಯಾಗಲೀ ಇವುಗಳಲ್ಲಿಲ್ಲ...

ಭಾವಗೀತಾತ್ಮಕವಾದ ಮತ್ತು ಮಂತ್ರ ನುಡಿ ರೀತಿಯ ಕಾವ್ಯ ತೀರ ಇತ್ತೀಚಿನವರೆಗೂ ರಚನೆಯಾಗುತ್ತಿತ್ತು. ಇದು ಬಾಲ್ಟಿಕ್-ಫಿನ್ನಿಶ್ ಪ್ರದೇಶದ ದೈನಂದಿನ ಬದುಕಿನ ಬಗ್ಗೆ ಸಮೃದ್ಧ ಸಾಮಗ್ರಿ ನೀಡುತ್ತದೆ. ಕೆಲಸದ ಹಾಗೂ ಕೌಟುಂಬಿಕ ಬದುಕಿನ ಪದ್ಯಗಳು ಗುಲಾಮಗಿರಿ ಬದುಕಿನ ಹಾಗೂ ವಿಸ್ತೃತ ಕರೀಲಿಯನ್ ಕೌಟುಂಬಿಕ ಬದುಕಿನ ವಿಪರ್ಯಯಗಳನ್ನು ಪ್ರತಿಬಿಂಬಿಸುತ್ತವೆ. ಭಾವಗೀತಾತ್ಮಕ ಪದ್ಯಗಳು ದೈನಂದಿನ ಬದುಕು ಅದರ ಆತಂಕ ಹಾಗೂ ಆಕಾಂಕ್ಷೆಗಳ ಮಿಡಿತವನ್ನು ಪ್ರತಿಬಿಂಬಿಸುತ್ತವೆ. ಅದ್ಭುತ ಕಾಲ್ಪನಿಕ ವಸ್ತುವಿನ ಪದ್ಯಭಾಗಗಳು ಗೊತ್ತಿಲ್ಲದ ಜಗತ್ತಿನ ಭಯಾನಕತೆಯನ್ನು ಪರಿಚಯಿಸುತ್ತವೆ. ದುಷ್ಟ, ಕೇಡಿಗ ಹಾಗೂ ಆಗ್ರಹಪೂರ್ವಕವಾದ ಪ್ರೇತಾತ್ಮಗಳ ಶಕ್ತಿಯಿಂದ ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಪುರುಷರೂ ಮತ್ತು ಸ್ತ್ರೀಯರೂ ಉಚ್ಚರಿಸುವ ಮಂತ್ರನುಡಿಗಳು ಹಾಗೂ ಸಾವಿರಾರು ರಕ್ಷಾಸೂತ್ರ ವಾಕ್ಯಗಳು ಬದುಕಿನ ಪ್ರತಿಯೊಂದು ಘಟ್ಟದಲ್ಲಿ ಕಂಡು ಬರುವ ಅನಿಶ್ಚಯತೆ ಹಾಗೂ ಎಲ್ಲದರಲ್ಲೂ ಇಣುಕುವ ಸಾವಿನ ಭಯವನ್ನು ವ್ಯಕ್ತಪಡಿಸುತ್ತವೆ.

ಕಲೆವಲ ರಚನೆ :

ಕಲೆವಲ 1849ರಲ್ಲಿ ಪ್ರಕಟವಾದ ಸ್ವಲ್ಪ ಕಾಲದಲ್ಲಿಯೇ ಫಿನ್ಲೆಂಡಿನ ಹೊರ ಜಗತ್ತಿನ ಗಮನ ಸೆಳೆದು ಬಿಟ್ಟಿತು. ಮಹಾಕಾವ್ಯದ ಪ್ರಮುಖ ಭಾಗಗಳನ್ನು ಅತ್ಯಂತ

ವ್ಯವಸ್ಥಿತವಾಗಿ ಸಂಗ್ರಹಿಸಲಾಗಿದೆ ಎಂಬ ಮೆಚ್ಚುಗೆ ಗಳಿಸಿದ ಇದನ್ನು ಇಲಿಯಡ್‌ನಂತಹ ಕಾವ್ಯದ ಸಾಲಿಗೆ ಸೇರಿಸಿದರು. ಲೊನಾರ್ಟ್‌ನ ವಲಯದಲ್ಲಿದ್ದ ವಿಮರ್ಶಕರ ಪ್ರಕಾರ, ಲೊನಾರ್ಟ್ ಅವರ ಈ ಪ್ರಯತ್ನ 1820ರಲ್ಲಿ ಆರಂಭವಾದ ಈ ಸಾಹಸದ ಅಂತಿಮ ಹಂತವಾಗಿದೆ. ವಿವಿಧ ವಿದ್ವಾಂಸರು ಮತ್ತು ಉತ್ಸಾಹಿಗಳ ಬೆಂಬಲ ಹಾಗೂ ಪರಿಶ್ರಮಗಳಿಲ್ಲದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ.

ಫಿನ್ಲೆಂಡನ್ನು 1808-9ರಲ್ಲಿ ರಷ್ಯಾ ಆಕ್ರಮಿಸಿದ ಅತಿ ಸನಿಹದಲ್ಲಿಯೇ ಆರಂಭವಾದ ಈ ಮೌಖಿಕ ಕಾವ್ಯದ ಸಂಗ್ರಹಣೆಯ ನಂತರದ ದಶಕಗಳಲ್ಲಿ ಈ ಕಾವ್ಯದ ಸ್ವರೂಪ ಹಾಗೂ ಮಹತ್ತ್ವವನ್ನು ಕುರಿತು ಅನೇಕ ಸಣ್ಣ ಸಣ್ಣ ಕೃತಿಗಳು ಪ್ರಕಟವಾದವು. 1820ರ ಹೊತ್ತಿಗೆ ಫಿನ್ಲೆಂಡಿನ ದೂರದೂರದ ಮೂಲೆಗಳಿಂದ ಸಾಮಗ್ರಿಯ ಸಂಗ್ರಹ ನಡೆಯಿತು. ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಪೂರ್ವ ಫಿನ್ಲೆಂಡಿನ ಸ್ಯಾವೊದಿಂದ ವಲಸೆ ಬಂದು ಮಧ್ಯ ಸ್ವೀಡನ್ನಿನಲ್ಲಿ ಸ್ಥಾಪಿತವಾದ ಫಿನ್ನಿಶ್ ಮಾತಾಡುವ ಸಮುದಾಯಗಳವರಿಂದಲೂ ಇದರ ಸಂಗ್ರಹ ಮಾಡಲಾಯಿತು. 1820ರ ಅವಧಿಯಲ್ಲಿ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಅಧಿಕೃತ ಸಾಮಗ್ರಿ ಸಂಚಯವಾಗತೊಡಗಿದಂತೆ ಸಾಂಪ್ರದಾಯಿಕ ಕಾವ್ಯದ ಮೀಮಾಂಸೆ ಹಾಗೂ ಮಹತ್ವಗಳ ಬಗ್ಗೆ ಟುರ್ಕು ವಿಶ್ವವಿದ್ಯಾಲಯ, ಅಬೊ ಅಕಾಡಮಿ ಮೊದಲಾದ ಪಂಡಿತ ವಲಯಗಳಲ್ಲಿ ಹಾಗೂ ಹೊಸದಾಗಿ ಸ್ಥಾಪಿತವಾದ ಫಿನ್ನಿಶ್ ಪತ್ರಿಕಾ ವಲಯದ ಅಂಕಣಗಳಲ್ಲಿ ಈ ಬಗ್ಗೆ ಚರ್ಚೆಗಳು ನಡೆಯತೊಡಗಿದವು. ಈ ಚರ್ಚೆಗೆ ಬಹುಮುಖ್ಯ ಕೊಡುಗೆಯೆಂದರೆ Suomen Kansan Vanhoja runoja ynnamyos Nykyisempia Lauluja (ಫಿನ್ನಿಶ್ ಜನರ ಕೆಲವು ಪ್ರಾಚೀನ ಕಾವ್ಯಗಳು ಹಾಗೂ ಇತ್ತೀಚಿನ ಕೆಲವು ಹಾಡುಗಳು) ಎಂಬ ಗ್ರಂಥದ ಪ್ರಕಟಣೆ.

1822-31ರಲ್ಲಿ ಅವಧಿಯಲ್ಲಿ ಅನೇಕ ಭಾಗಗಳಲ್ಲಿ ಇದು ಪ್ರಕಟವಾಯಿತು. ಇದನ್ನು ಸಂಗ್ರಹಿಸಿ ಸಂಪಾದಿಸಿದವರು ಜಾಕ್ರಿಸ್ ಟೊಪೆಲಿಯಸ್ ದಿ ಎಲ್ಡರ್ (1781-1831). ಅವರು ಇದನ್ನು ಪ್ರಕಟಿತವಾದ ಸಾಮಗ್ರಿಯಿಂದ ಹಾಗೂ ರಷ್ಯನ್ ಭಾಗದ ಗಡಿ ಸೀಮೆಯ ಆರ್ಕಾಂಗಲ್ ಕರೀಲಿಯಾದ ಹಳ್ಳಿಗಳಿಂದ ಫಿನ್ಲೆಂಡಿಗೆ ಬರುತ್ತಿದ್ದ ಸಂಚಾರೀ ಗಾಯಕರು ತಮಗಾಗಿ ಹಾಡಿದ ಹಾಡುಗಳಿಂದ ಸಂಗ್ರಹಿಸಿದರು. ಇದುವರೆಗೆ ಲಭ್ಯವಿದ್ದ ಆಕರಗಳಿಗಿಂತ ಈ ಸಂಚಾರಿ ಗಾಯಕರ ಹಾಡುಗಳು ಗುಣ ಮತ್ತು ಸತ್ವದ ದೃಷ್ಟಿಯಿಂದ ಬಹಳ ಶ್ರೀಮಂತವಾಗಿರುವ ಅಂಶವನ್ನು ಟೊಪೆಲಿಯಸ್ ಅವರು ಬಹುಬೇಗ ಗುರುತಿಸಿದರು. ಜನಪದ ಕಾವ್ಯವನ್ನು ಮೆಚ್ಚುವವರು ಇನ್ನು ಮುಂದೆ ಆರ್ಕಾಂಗಲ್ ಕರೀಲಿಯಾದ ಗ್ರಾಮಗಳತ್ತ ಗಮನ ಕೇಂದ್ರೀಕರಿಸಬೇಕೆಂದು ಅವರು ಈ ಸಂಗ್ರಹದ ಅಂತಿಮ ಸಂಪುಟಗಳಲ್ಲಿ ಮನವಿ ಮಾಡಿಕೊಂಡರು.

ಹೀಗಾಗಿ ಲೊನಾರ್ಟ್ ಅವರು ತಮ್ಮ ಅಧ್ಯಯನವನ್ನು ಆರಂಭಿಸುವುದಕ್ಕಾಗಿ 1822ರಲ್ಲಿ ಅಕಾಡಮಿಗೆ ಬರುವ ಹೊತ್ತಿಗಾಗಲೇ ಸಾಕಷ್ಟು ಸಂಗ್ರಹಿತ ಸಾಮಗ್ರಿ ಲಭ್ಯವಿತ್ತು ಮತ್ತು ಇದರ ಮಹತ್ವವನ್ನು ಕುರಿತಂತೆ ಕೆಲವು ಚರ್ಚೆ, ವಿಚಾರಗಳೂ ಲಭ್ಯವಿದ್ದವು.

ಪಾರಂಪರಿಕ ಕಾವ್ಯದ ಬಗ್ಗೆ ಲೊನಾರ್ಟ್ ಅವರ ಆಸಕ್ತಿಗೆ ಮೊದಲಿನಿಂದಲೂ ಪ್ರೇರಣೆ ಮತ್ತು ಮಾರ್ಗದರ್ಶನ ಒದಗಿದ್ದು ರೆನ್ಹೋಲ್ಡ್ ವಾನ್ ಬೆಕರ್ (1788-1858) ಅವರಿಂದ... ಆತ ಒಬ್ಬ ಇತಿಹಾಸತಜ್ಞ, ಪತ್ರಕರ್ತ ಹಾಗೂ ಫಿನ್ನಿಶ್ ರಾಷ್ಟ್ರೀಯತೆಗಾಗಿ ಮುಡುಪಿಟ್ಟುಕೊಂಡ ರಾಷ್ಟ್ರವಿಚಾರಧಾರೆಯ ಲೇಖಕರಾಗಿದ್ದರು. ಸ್ವತಃ ವಾನ್ ಬೆಕರ್ ಅವರೇ ಕ್ಷೇತ್ರಕಾರ್ಯ ಮಾಡಿ ಹಾಡುಗಳನ್ನು ಸಂಗ್ರಹಿಸಿದ್ದರು ಮತ್ತು 1820ರಲ್ಲಿ ಅವುಗಳನ್ನು ಬಳಸಿ ವೆಯ್ನಾಮೊಯ್ನನ್‌ನ ಪಾತ್ರವನ್ನು ಪುನರ್‌ರಚಿಸಿದ್ದರು.

1849ರಲ್ಲಿ ಪ್ರಕಟವಾದ ಕಲೆವಲ ಮುನ್ನುಡಿಯಲ್ಲಿ ಲೊನಾರ್ಟ್ ತಿಳಿಸಿರುವಂತೆ ಅವರಿಗೆ ಮೌಖಿಕ ಕಾವ್ಯಗಳನ್ನು ದೀರ್ಘ ಕಾವ್ಯಗಳಾಗಿ ಜೋಡಿಸುವ ವಿಚಾರ ಗೊತ್ತಾಗಿದ್ದು ವಾನ್ ಬೆಕರ್ ಅವರು ವೆಯ್ನಾಮೊಯ್ನನ್ನನ ಪಾತ್ರವನ್ನು ಪುನರ್‌ರಚಿಸಿದ ನಂತರವೇ. ಕೆಲವು ವರ್ಷಗಳ ನಂತರ ಅಂದರೆ 1827ರಲ್ಲಿ ಲೊನಾರ್ಟ್ ಅವರು ತಮ್ಮ ಪದವಿಗಾಗಿ ವೆಯ್ನಾಮೊಯ್ನನ್ ಪಾತ್ರವನ್ನೇ ಸಂಶೋಧನ ಪ್ರಬಂಧದ ವಿಷಯವಾಗಿ ಆರಿಸಿಕೊಂಡರು. ಮತ್ತು ಇದನ್ನು ವಾನ್ ಬೆಕರ್ ಅವರ ಮಾರ್ಗದರ್ಶನದಲ್ಲೇ ಬರೆದರು. ಈ ಪ್ರಬಂಧದ ಬಗ್ಗೆ ಪ್ರೊಫೆಸರ್ ಮೊಗನ್ ಅವರು "ಗಾತ್ರ ಬಹು ಚಿಕ್ಕದು. ಆದರೂ ಇದರಲ್ಲಿ ಭ್ರೂಣರೂಪದ ಕಲೆವಾಲಾ ಕಾಣಬಹುದು" ಎಂದರು. ಅನಂತರದ ಕೆಲವೇ ವರ್ಷಗಳಲ್ಲಿ ಲೊನಾರ್ಟ್ ಅವರು ಮೌಖಿಕ ಕಾವ್ಯದ ಬಗ್ಗೆ ಮಾತಾಡಬಲ್ಲ ಅಗ್ರಗಣ್ಯ ವಿದ್ವಾಂಸರೆಂಬ ಖ್ಯಾತಿ ಪಡೆದರು. ಅಷ್ಟೇ ಅಲ್ಲ ಅವರು ತಮ್ಮ ವೈದ್ಯಕೀಯ ಪದವಿಗಾಗಿ ಅರ್ಪಿಸಿದ ಸಂಶೋಧನ ಪ್ರಬಂಧಕ್ಕೂ ಫಿನ್ನಿಶ್ ಜನಪದ ವೈದ್ಯವನ್ನೇ ವಿಷಯವಾಗಿ ಆರಿಸಿಕೊಂಡರು. 1828ರಲ್ಲಿ ಅವರು ಫಿನ್ಲೆಂಡಿನಲ್ಲಿ ತಮ್ಮ ಮೊತ್ತ ಮೊದಲ ವಿಸ್ತೃತ ಕ್ಷೇತ್ರಕಾರ್ಯ ಆರಂಭಿಸಿದರು. ಅದರ ಮರು ವರ್ಷವೇ ನಾಲ್ಕು ಸಂಪುಟಗಳ ಸರಣಿಯ ಮೊದಲ ಸಂಪುಟ ಕಾಂಟೆಲ ಪ್ರಕಟವಾಯಿತು. ಇದರಲ್ಲಿ ಅವರು ಈ ಮೊದಲು ಪ್ರಕಟವಾದ ಆಕರಗಳ ಪದ್ಯಗಳನ್ನು ಮತ್ತು ಸ್ವತಃ ತಾವು ಸಂಗ್ರಹಿಸಿದ ಪದ್ಯಗಳನ್ನು ಒಟ್ಟಿಗೆ ತಂದಿದ್ದಾರೆ.

ಫಿನ್ನಿಶ್ ಬೌದ್ಧಿಕ ಬದುಕಿನ ಭಾರೀ ಬದಲಾವಣೆ ಹಾಗೂ ಉತ್ಥಾನದ ಕಾಲದ ಹಿನ್ನೆಲೆಯಲ್ಲಿ ಲೊನಾರ್ಟ್ ಅವರ ಈ ಮುಂಚೂಣಿಯ ಕೆಲಸ ನಡೆಯಿತು. 1827ರಲ್ಲಿ ಆಬೊ ಅಕಾಡಮಿ ಮತ್ತು ಬಹುತೇಕ ತುರ್ಕು ಪ್ರದೇಶವು ಬೆಂಕಿಯಿಂದ ನಾಶವಾದ ಮೇಲೆ ಅದರ ಮಾರನೆಯ ವರ್ಷ ಅಕಾಡಮಿಯ ಭೋದಕರು ಮತ್ತು ವಿದ್ಯಾರ್ಥಿಗಳು ಹೆಲ್ಸಿಂಕಿಯ ಹೊಸ ಅಲೆಕ್ಸಾಂಡರ್ ವಿಶ್ವವಿದ್ಯಾಲಯದತ್ತ ಹೋದರು. ಹೊಸ ಸ್ಥಳಕ್ಕೆ ನಡೆದ ಈ ಸ್ಥಳಾಂತರವು ರಾಷ್ಟ್ರೀಯ ಸಂಸ್ಕೃತಿಯ ಬೆಳವಣಿಗೆಗೆ ಹೊಸಚೇತನ ಮತ್ತು ಹೊಸ ಆಯಾಮಗಳನ್ನು ನೀಡಿತು. ಹೆಲ್ಸಿಂಕಿ ವಿಶ್ವವಿದ್ಯಾಲಯವು ಈ ಹೊಸಬರನ್ನು ಸ್ವಾಗತಿಸಿತು. ಅನತಿ ಕಾಲದಲ್ಲಿಯೇ ಕೆಲವು ಬುದ್ಧಿಜೀವಿಗಳು ಒಂದು ಅನೌಪಚಾರಿಕವಾದ ಚರ್ಚಾ ಸಂಘವನ್ನು ಸ್ಥಾಪಿಸಿಕೊಂಡರು. ಅದಕ್ಕೆ "Saturday Society" ಎಂದು ಹೆಸರಾಯಿತು. ಇದರ ಸದಸ್ಯರಲ್ಲಿ ಲೊನಾರ್ಟ್ ಒಬ್ಬರಾಗಿದ್ದು, ಇನ್ನಿತರರು ವಿಶ್ವವಿದ್ಯಾಲಯ ಹಾಗೂ ಆಡಳಿತ ವಲಯಗಳಿಗೆ ಸೇರಿದವರಾಗಿದ್ದರು. ಹೊಸಬರೂ ಕೂಡ ಇದರ ಸದಸ್ಯರಾಗಿದ್ದರು. ಕ್ರಮ ತಪ್ಪದಂತೆ ನಡೆಯುತ್ತಿದ್ದ ಸಂಘದ ಸಭೆಗಳಲ್ಲಿ

ಮುಖ್ಯವಾಗಿ ಶಿಕ್ಷಣ ಹಾಗೂ ಸಂಸ್ಕೃತಿಗಳಲ್ಲಿ ಹೇಗೆ ರಾಷ್ಟ್ರೀಯ ಹಿತಾಸಕ್ತಿಗಳನ್ನು ಬೆಳೆಸಿಕೊಂಡು ಬರಬೇಕು ಎಂಬುದಕ್ಕೆ ಹೆಚ್ಚು ಗಮನ ನೀಡಲಾಗುತ್ತಿತ್ತು.

ರಾಷ್ಟ್ರೀಯ ಸಂಸ್ಕೃತಿಯನ್ನು ವರ್ಧಿಸುವ ಉದ್ದೇಶದ ಒಂದು ಚಿಂತಕರ ಸಂಘವನ್ನು ಸ್ಥಾಪಿಸುವುದು ಅಗತ್ಯ ಎಂಬ ವಿಚಾರ ಈ ಸಂಘದ ಚರ್ಚೆಗಳಿಂದ ವ್ಯಕ್ತವಾಯಿತು. 1831ರಲ್ಲಿ ಸ್ಥಾಪಿತವಾದ "Finnish Literary Society" ಯು ಲೊನ್ನಾರ್ಟ್ ಅವರಿಗೆ ಕಲೆವಲ ಕಾವ್ಯ ಸಂಗ್ರಹಣೆಗಾಗಿ ಪ್ರಯಾಣ ಹಾಗೂ ಬರವಣಿಗೆಗೆ ಸಂಬಂಧಿಸಿದಂತೆ ನೆರವು ನೀಡಬೇಕೆಂದು ತನ್ನ ಮೊದಲಿನ ಸಭೆಗಳಲ್ಲಿಯೇ ನಿಶ್ಚಯಿಸಿತು. ಈ ನೆರವಿನಿಂದ ಲೊನ್ನಾರ್ಟ್‌ರು 1832ರಲ್ಲಿ ಅರ್ಕಾಂಗಲ್ ಕರಿಲಿಯಾಗೆ ಪ್ರಯಾಣಿಸಿದರು.

1835ರ ಆರಂಭದ ಹೊತ್ತಿಗೆ ಅವರು ಪ್ರಾಥಮಿಕ ಕೆಲಸವನ್ನು ಪೂರ್ಣಗೊಳಿಸಿದರು. ಅಲ್ಕು - ಕಲೆವಲ (ಆದಿ-ಕಲೆವಲ) ಎಂಬ 5052 ಸಾಲುಗಳುಳ್ಳ 16 ಕಾವ್ಯಭಾಗಗಳ ಜೋಡಣೆ ಪ್ರಕಟವಾಯಿತು. 1849ರ ಕಲೆವಲದ ಪ್ರಮುಖ ಕಾವ್ಯ ವಸ್ತುಗಳು ಇದರಲ್ಲಿ ಕಾಣಿಸುತ್ತವೆ. ವಿಶ್ವದ ಸೃಷ್ಟಿ ; ಪೊಹ್ಜೊಲಾದಿಂದ ಬಿಡಿಸಿಕೊಂಡು ಬರಲು ನೀಡಬೇಕಾದ ದಂಡ, ಲೆಮಿನ್ಕಾಯ್ನನ್ ಸಾಹಸಗಳು ಮತ್ತು ಸಾವು, ಲೌಹಿಯ ಮಗಳ ಕೈ ಹಿಡಿಯುವುದಕ್ಕಾಗಿ ಇಲ್ಮಾರಿನೆನ್ ಮತ್ತು ವೆಯ್ನಾಮೊಯ್ನನ್ ನಡುವಿನ ವೈರ, ಪೊಹ್ಜೊಲಾದಲ್ಲಿ ಇಲ್ಮಾರಿನೆನ್ನನ ವಿವಾಹೋತ್ಸವದ ಔತಣ ಸಮಾರಂಭ, ಕುಲೆರ್ವೊನ ದುರಂತ ಕಥನ ; ಸ್ಯಾಂಪೊಕಳವು ಹಾಗೂ ಅದರ ನಂತರ ಕಲೆವಲ ಮತ್ತು ಪೊಹ್ಜೊಲಾ ನಡುವೆ ಆರಂಭವಾದ ಯುದ್ಧ ; ಕ್ಯಾಂಟೀಲ್‌ನ ಹುಟ್ಟು ; ಉದ್ಧಟ ಯೊಕಾಹಿನನ್ ಮತ್ತು ವೆಯ್ನಾಮೊಯ್ನನ್ ನಡುವೆ ಹಾಡುಗಳ ಸ್ಪರ್ಧೆ ಮತ್ತು ಅದು ಯೊಕಾಹಿನನ್ನನ ಸೋದರಿ ಇನೋಳ ಆತ್ಮಹತ್ಯೆಗೆ ಕಾರಣವಾಗಿದ್ದು, ಅಂತಿಮವಾಗಿ ಮಾರ್ಜತಾಗೆ ಪವಾಡ ಸದೃಶವಾಗಿ ಪುತ್ರ ಜನನ ಹಾಗೂ ವೆಯ್ನಾಮೊಯ್ನನ್ ದೇಶಭ್ರಷ್ಟನಾಗುವುದು.

ಅದೇ ವರ್ಷದ ಉತ್ತರ ಭಾಗದಲ್ಲಿ ಕಲೆವಲದ ಮೊದಲ ಆವೃತ್ತಿ ಪ್ರಕಟವಾದಾಗ (ಇದು Old Kalevala ಎಂಬುದಾಗಿ ಪ್ರಸಿದ್ಧ) ಇದರ ಮುಖ್ಯ ವ್ಯತ್ಯಾಸವು ಗಾತ್ರ ಹಾಗೂ ಯಾವುದಕ್ಕೆ ಹೆಚ್ಚು ಒತ್ತು ಎಂಬುದಕ್ಕೆ ಸಂಬಂಧಿಸಿತ್ತು. (ಇದರಲ್ಲಿ 12,078 ಸಾಲುಗಳನ್ನು 32 ಕಾವ್ಯ ಭಾಗಗಳಲ್ಲಿ ಅಳವಡಿಸಲಾಗಿತ್ತು). ರಚನೆಯ ದೃಷ್ಟಿಯಿಂದ ಹಳೆಯ ಕಲೆವಲ 1849ರ ಆವೃತ್ತಿಗಿಂತ ಹೆಚ್ಚು ಭಿನ್ನವಾಗೇನೂ ಇಲ್ಲ. ಅಂತಿಮ ಭಾಗದಲ್ಲಿದ್ದ ಯೊಕಾಹಿನನ್ನನ ಪ್ರಸಂಗ ಹಾಗೂ ಇನೋ ಪ್ರಸಂಗವನ್ನು ಆರಂಭ ಭಾಗಕ್ಕೆ ತರಲಾಗಿರುವುದು ಒಂದು ವ್ಯತ್ಯಾಸ. ಕಲೆವಲ ಕಾವ್ಯದಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುವ ಮಡದಿಯನ್ನು ಪಡೆಯುವ ವಸ್ತುವಿಗೆ ಒತ್ತು ನೀಡುವುದಕ್ಕಾಗಿ ಈ ಬದಲಾವಣೆ ಮಾಡಿಕೊಳ್ಳಲಾಗಿದೆ. ಗಾತ್ರದಲ್ಲಿ ವ್ಯತ್ಯಾಸವಿರುವುದರ ಜೊತೆಗೆ (22, 795 ಸಾಲುಗಳನ್ನು 50 ಕಾವ್ಯ ಭಾಗಗಳಲ್ಲಿ ಅಳವಡಿಸಿರುವುದು) 1849ರ ಆವೃತ್ತಿಯು ಮೇಲೆ ಹೇಳಿದ ವಸ್ತುಗಳನ್ನು ನಿರೂಪಿಸುವುದಕ್ಕಾಗಿ ಸಾಮಗ್ರಿಯ ಆಯ್ಕೆ ಹಾಗೂ ಜೋಡಣೆಯಲ್ಲಿ ಗಣನೀಯ ಬದಲಾವಣೆಗಳನ್ನು ಮಾಡಿಕೊಂಡಿದೆ. ಈ ವಸ್ತುವನ್ನು ನಿಭಾಯಿಸುವಲ್ಲಿ ಲೊನ್ನಾರ್ಟ್ ಎಷ್ಟು ನಿಷ್ಣಾತನಾಗಿದ್ದ

ಎಂಬುದಕ್ಕೆ ಇದು ದ್ಯೋತಕ. ಈ ಸಾಮಗ್ರಿಯನ್ನು ಒಂದು ನಿರ್ದಿಷ್ಟ ಉದ್ದೇಶಕ್ಕೆ ಅಂದರೆ ಫಿನ್ ಜನರ ವೀರ ಯುಗವನ್ನು ಪುನರ್ ಸೃಷ್ಟಿಸುವ ಉದ್ದೇಶಕ್ಕೆ ತಕ್ಕಂತೆ ಎರಕ ಹೊಯ್ಯುವ ವಿಶ್ವಾಸ ಆತನಿಗೆ ಮೂಡಿತ್ತು.

ಮೊದಲ ಆವೃತ್ತಿಯಿಂದ ಎರಡನೇ ಆವೃತ್ತಿಗೆ

1835ರ ಕಲೆವಲ ಹಾಗೂ 1849ರ ಕಲೆವಲದ ವ್ಯತ್ಯಾಸಗಳನ್ನು ಅನೇಕ ಅಂಶಗಳ ಮೂಲಕ ನಿರೂಪಿಸಬಹುದು. ಲೊನಾರ್ಟ್‌ಗೆ ಲಭ್ಯವಾದ ಸಾಮಗ್ರಿಯ ಗಾತ್ರ ಗಣನೀಯವಾಗಿ ಹೆಚ್ಚಿದ್ದು, ವಿದ್ವಾಂಸರು ಮತ್ತು ವಿಮರ್ಶಕರಿಂದ ಮುಖ್ಯವಾಗಿ ವಿದೇಶಗಳಲ್ಲಿ ಹಳೆಯ ಕಲೆವಲಗೆ ದೊರೆತ ಸ್ವಾಗತ, ಹೆಲಿಸಿಂಕಿ ಮತ್ತು ಸೇಂಟ್ ಪೀಟರ್ಸ್‌ಬರ್ಗ್‌ಗಳಲ್ಲಿ ಫಿನ್ನಿಶ್ ರಾಷ್ಟ್ರ ಎಂಬ ವಿಚಾರವು ಮೂಡಿದ ಪರಿಣಾಮವಾಗಿ ಫಿನ್ಲೆಂಡಿನಲ್ಲಾದ ಸಾಂಸ್ಕೃತಿಕ ಹಾಗೂ ರಾಜಕೀಯ ಬೆಳವಣಿಗೆಗಳು ಮತ್ತು ಅದರ ಮಹತ್ವ ಇವುಗಳು ಪ್ರಭಾವ ಬೀರಿದವು.

1835ರಲ್ಲಿ ಕಲೆವಲ ಪ್ರಕಟವಾದ ನಂತರ ಲೊನಾರ್ಟ್ ಕ್ಷೇತ್ರಕಾರ್ಯ ಮಾಡುತ್ತಾ ಮೌಖಿಕ ಕಾವ್ಯದ ಸಂಗ್ರಹಣೆಯ ಕೆಲಸವನ್ನು ಮುಂದುವರೆಸಿದ್ದ. ಆದರೆ ಆತನ ಪ್ರಯಾಣ ಹೊಸ ಹೊಸ ದಿಕ್ಕುಗಳಿಗೆ ಆತನನ್ನು ಕೊಂಡೊಯ್ದಿತು. ಇದರಲ್ಲಿ ಲ್ಯಾಪ್‌ಲ್ಯಾಂಡ್ ಮತ್ತು ಒಲೊನೆಟ್ಸ್ ಕರೀಲಿಯಾ ಕೂಡ ಸೇರಿವೆ. ಇತರ ಫಿನ್ನೋ ಉಗ್ರಿಯನ್ ಜನರ ಸಂಸ್ಕೃತಿಗಳ ಬಗ್ಗೆ (ರಷ್ಯಾದಲ್ಲಿರುವಂಥ ಹಂಗೇರಿಯನ್ನರನ್ನು ಬಿಟ್ಟು ಉಳಿದವರು) ಆತನ ಸಮಕಾಲೀನ ವಿದ್ವಾಂಸರು ಆಸಕ್ತಿ ತೋರಲಾರಂಭಿಸಿದರು. ಅನೇಕ ವಿದ್ವಾಂಸರು ಮೌಖಿಕ ಕಾವ್ಯವನ್ನು ಸಂಗ್ರಹಿಸುವುದಕ್ಕಾಗಿ ಮುಖ್ಯವಾಗಿ ಲಡೋಗಾ ಮತ್ತು ಕರಿಲಿಯಾ, ಇಂಗ್ರಿಯಾದಂಥ ಪೂರ್ವ ಭಾಗಗಳತ್ತ ಚಲಿಸಿದರು. ಈ ಸಾಮಗ್ರಿಯೆಲ್ಲ ಲೊನಾರ್ಟ್‌ಗೆ ದೊರೆಯುವಂತಾಯಿತು. ಹೀಗಾಗಿ ಆತ 1835ರಲ್ಲಿ ಕಲೆವಲವನ್ನು ಪರಿಷ್ಕರಿಸಲು ತೊಡಗಿದಾಗ ಆತನ ಮುಂದೆ ಬಹಳ ವ್ಯಾಪಕವಾದ ಸಾಮಗ್ರಿ ಇತ್ತು. ಇದರಲ್ಲಿ ಭಾವಗೀತೆ ಹಾಗೂ ಮಂತ್ರವಿದ್ಯೆಗೆ ಸಂಬಂಧಿಸಿದ ಅನೇಕ ಕಾವ್ಯ ಭಾಗಗಳಿದ್ದವು. ಆತನ ಮುಂದಿದ್ದ ಸಾಮಗ್ರಿ ಎಷ್ಟು ವ್ಯಾಪಕವಾಗಿತ್ತೆಂದರೆ ಲೊನಾರ್ಟ್ ಅದನ್ನು ಕಲೆವಲದ ಹೊಸ ಆವೃತ್ತಿಯಲ್ಲಿ ಅಳವಡಿಸಿಕೊಂಡಿದ್ದು ಮಾತ್ರವಲ್ಲ, ಅದರ ಜೊತೆಯ ಸಂಪುಟ ಸರಣಿಯಲ್ಲೂ ಅದನ್ನು ಅಳವಡಿಸಿದ. 1840-41ರಲ್ಲಿ 686 ಪದ್ಯಗಳನ್ನು ಒಳಗೊಂಡ ಈ ಸಂಪುಟದ ಹೆಸರು Kanteletar (Spirit of the Kantele). ಇದಾದ ನಂತರ 1842ರಲ್ಲಿ ಗಾದೆಗಳ ಸಂಗ್ರಹವನ್ನೂ 1844ರಲ್ಲಿ ಒಗಟುಗಳ ಸಂಗ್ರಹವನ್ನೂ ಪ್ರಕಟಿಸಿದ. ಆತ ಮಾಂತ್ರಿಕ ಪದಗಳನ್ನು ತೀರ ಅನಂತರ ಎಂದರೆ 1880ರಲ್ಲಿ ಪ್ರಕಟಿಸಿದ.

ಈ ಹೊಸ ಸಾಮಗ್ರಿಯನ್ನು 1849ರ ಆವೃತ್ತಿಯಲ್ಲಿ ಸಮೃದ್ಧವಾಗಿ ಬಳಸಿಕೊಳ್ಳಲಾಗಿದೆ. ಇದರ ಜೊತೆಗೆ ಪ್ರಕಟವಾದ ಸಂಪುಟಗಳ ಕಾವ್ಯ ಭಾಗಗಳು ಇಲ್ಲಿ ಪುನರಾವರ್ತನೆಯಾಗಿರುವುದು ಕಂಡು ಬರುತ್ತದೆ. ಹೊಸ ಸಾಮಗ್ರಿಯ ಸಂಗ್ರಹದ ಪದ್ಯಭಾಗಗಳನ್ನು 1835ರ ಆವೃತ್ತಿಯಲ್ಲಿದ್ದ ಕೆಲವೊಂದು ಪದ್ಯಭಾಗಗಳ ಬದಲಾಗಿ ಬಳಕೆಯಾಗುವುದಕ್ಕೂ ಲೊನಾರ್ಟ್ ಬಳಸಿಕೊಂಡ. ಆತನ ದೃಷ್ಟಿಯಲ್ಲಿ ಈ ಭಿನ್ನ ರೂಪಗಳು

ಮೊದಲಿನವುಗಳಿಗಿಂತ ಪೂರ್ಣವೂ ಹಾಗೂ ಚಾರಿತ್ರಿಕವಾಗಿ ಹೆಚ್ಚು ಮಾಹಿತಿಪೂರ್ಣವೂ ಆಗಿದ್ದವು. ಮಂತ್ರನುಡಿ ಶಾಪಗಳನ್ನು ಹಾಡುವ ಕಾವ್ಯಭಾಗಗಳಲ್ಲಿ ಈ ಹೊಸ ಸಾಮಗ್ರಿಯ ಶ್ರೀಮಂತಿಕೆ ಮತ್ತು ಸಮೃದ್ಧತೆಗಳು ಚೆನ್ನಾಗಿ ವ್ಯಕ್ತವಾಗಿವೆ. ಇಲ್ಲಿ ಲೊನಾರ್ಟ್ ಮಂತ್ರವಿದ್ಯೆಗೆ ಸಂಬಂಧಿಸಿದ ಎಲ್ಲ ಸಾಮಗ್ರಿಯನ್ನೂ ಬಹಳ ಅದ್ಭುತವಾಗಿ ಆಯ್ಕೆ ಮಾಡಿದ್ದಾನೆ. ಪೊಹ್ಜೋಲಾ ಒಡತಿಯ ಮಗಳ ಜೊತೆ ಇಲ್ಮಾರಿನೆನ್ನನ ವಿವಾಹವನ್ನು ನಿರೂಪಿಸುವ ಸಂದರ್ಭದಲ್ಲಿ ಈ ಹೊಸ ಸಂಗ್ರಹದ ಫಲಪ್ರದತೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಇಲ್ಲಿ ವಿವಾಹದ ಪ್ರತಿಯೊಂದು ಆಚರಣೆಗೆ ಸಂಬಂದಿಸಿಡಂತೆ ಈ ಮೌಖಿಕ ಕಾವ್ಯದಲ್ಲಿ ಕಂಡು ಬರುವ ಅದ್ಭುತವಾದ ಕಲ್ಪನೆ, ಕಾವ್ಯ ಸೌಂದರ್ಯಗಳಿಗೆ ಲೊನಾರ್ಟ್ ಭಾವಪರವಶನಾಗಿ ಬಿಟ್ಟಂತೆ ತೋರುತ್ತದೆ. ಇಲ್ಲಿ ಈ ಕಾವ್ಯಭಾಗದ ಮುಖ್ಯ ಕೇಂದ್ರವಾದ ವಧೂ ವರರು ಸಂಪೂರ್ಣ ಮರೆತು ಹೋಗಿ ಈ ವಿಸ್ತೃತ ಆಚರಣಾ ವಿಧಿಗಳೇ ಮೇಲುಗೈ ಪಡೆಯುತ್ತವೆ.

1835 ಮತ್ತು 1849ರ ಆವೃತ್ತಿಗಳನ್ನು ಹೋಲಿಸಿ ನೋಡಿದಾಗ ಮೊದಲಿನ ಆವೃತ್ತಿಯ ವಸ್ತು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಲೊನಾರ್ಟ್ ಕೇಳಿದ್ದ ಪದ್ಯಗಳಿಗೆ ತುಂಬ ಹತ್ತಿರವಾಗಿರುವುದು ಕಂಡು ಬರುತ್ತದೆ. 1849ರ ಆವೃತ್ತಿಯಲ್ಲಿ ಲೊನಾರ್ಟ್ ತಾನು ಸಂಗ್ರಹಿಸಿದ ರೀತಿಯಲ್ಲೆ ಬಹುತೇಕ ಕಾವ್ಯವನ್ನು ಕೊಟ್ಟಿರುವನಾದರೂ (ಸ್ವತಃ ಲೊನಾರ್ಟ್ ಸೃಷ್ಟಿಸಿದ ಸಾಲುಗಳ ಸಂಖ್ಯೆ 600ಕ್ಕಿಂತ ಹೆಚ್ಚಾಗಿಲ್ಲ) ವಸ್ತುವನ್ನು ಜೋಡಿಸುವ ಕ್ರಮದಲ್ಲಿ ಹಾಗೂ ಕಥನ ಸರಣಿಯ ಬಿಡಿಸಾಲುಗಳನ್ನು ವ್ಯವಸ್ಥಿತ ಕ್ರಮಕ್ಕೆ ತರುವಲ್ಲಿ ಸಾಕಷ್ಟು ಸಲ ಸ್ವಾತಂತ್ರ್ಯ ವಹಿಸಿದ್ದಾನೆ. ಆತನು ಹಾಡುಗಳನ್ನು ದಾಖಲಿಸಿಕೊಳ್ಳುವಾಗ ಹಾಡುಗಾರರು ಈ ರೀತಿಯಾಗಿ ಮಾಡುತ್ತಿದ್ದುದೇ ಆತನಿಗೂ ಪ್ರೇರಣೆಯಾಯಿತು. ಅತ್ಯಂತ ನಿಪುಣ ಹಾಡುಗಾರರು ತುಂಬ ಪರಿಚಿತವಾದಂಥ ವಸ್ತುವನ್ನು ಪ್ರತಿಯೊಂದು ಪ್ರದರ್ಶನ ಸಂದರ್ಭದಲ್ಲಿಯೂ ಹೊಸ ಹೊಸ ಸರಣಿಯಲ್ಲಿ ಜೋಡಿಸುತ್ತಿದ್ದುದನ್ನು ಗಮನಿಸಿದ ಲೊನಾರ್ಟ್ ತಾನೂ ಕೂಡ ಅಂತಹ ಸ್ವಾತಂತ್ರ್ಯ ವಹಿಸಿದ. ಪ್ರಾಚೀನ ಗ್ರೀಕ್ ಕಾವ್ಯಗಳ ಕ್ರೋಢೀಕರಣ ಕುರಿತಂತೆ ಪ್ರಚಲಿತವಿದ್ದ ಸಿದ್ಧಾಂತಗಳೂ ಸಹ ಈ ವಿಷಯದಲ್ಲಿ ಆತನ ಮೇಲೆ ಪ್ರಭಾವ ಬೀರಿವೆ. ಈ ಸಿದ್ಧಾಂತಗಳ ಪ್ರಕಾರ ಹೋಮರನು ಸ್ಥಳೀಯ ಪುರಾಣ ಮತ್ತು ಕಥೆಗಳನ್ನು ಸಂಗ್ರಹಿಸಿ ಇಲಿಯಡ್‌ನ್ನು ಕೊಟ್ಟಿರುವನೇ ಹೊರತು ಅವನೇ ಅದರ ಸೃಷ್ಟಿಕರ್ತನಲ್ಲ. ಕಲೆವಲದ ಬೇರೆ ಬೇರೆ ಭಾಗಗಳಿಗೆ ಹೆಚ್ಚಿನ ಆಳ ಮತ್ತು ಆಂತರಿಕ ಹೊಂದಾಣಿಕೆಯನ್ನು ತರುವುದಕ್ಕಾಗಿ ಲೊನಾರ್ಟ್ ಕೂಡ ಇದೇ ಕ್ರಮವನ್ನು ಅನುಸರಿಸಿದ. ಉದಾಹರಣೆಗೆ ಇನೊ ಮತ್ತು ಕುಲೆರ್ವೊೀ ಪ್ರಸಂಗಗಳಿಗೆ ಒಂದು ಪೂರ್ಣ ಪ್ರಮಾಣದ ಬೆಳವಣಿಗೆ ಬರುವಂತೆ ಮಾಡುವಲ್ಲಿ ಲೊನಾರ್ಟ್ ಪೂರ್ಣ ಸ್ವಾತಂತ್ರ್ಯ ವಹಿಸಿದ್ದಾನೆ. ಇನೋ ಮತ್ತು ಕುಲೆರ್ವೊಗೆ ಸಂಬಂಧಿಸಿದ ಸಾಲುಗಳನ್ನು ಅಧಿಕೃತ ಸಾಮಗ್ರಿಯೊಂದಿಗೆ ತಾಳೆ ಮಾಡಿ ನೋಡಿದಾಗ ಇವೆರಡರಲ್ಲಿ ಯಾವುದನ್ನೂ ಕೂಡ ಲೊನಾರ್ಟ್ ಪ್ರಸ್ತುತ ಪಡಿಸಿದ ರೀತಿಯಲ್ಲಿ ಹಾಡುಗಾರರು ಹಾಡುವುದಿಲ್ಲ....

ಬಹುತೇಕವಾಗಿ ಈ ಮೌಖಿಕ ಕಾವ್ಯದ ಸಾಮಗ್ರಿಯನ್ನು ಲೊನಾರ್ಟ್ ಬಹಳ ಎಚ್ಚರಿಕೆಯಿಂದ ಹಾಗೂ ಗೌರವದಿಂದ ನಿರ್ವಹಿಸಿದ್ದಾನೆ. ಸರಣಿ ತಪ್ಪದ ಕಥೆಯಾಗುವಂತೆ ಭಿನ್ನ ರೂಪಗಳನ್ನು ಜೋಡಿಸುವಲ್ಲಿ ಮತ್ತು ಒಂದು ಕಥಾ ಭಾಗ ಇನ್ನೊಂದು ಕಾವ್ಯಭಾಗಕ್ಕೆ ಪ್ರವೇಶಿಕೆ ಒದಗಿಸುವ ಹಾಗೆ ಮಾಡುವಲ್ಲಿ ಆತ ಆರ್ಕಾಂಗಲ್ ಕರೀಲಿಯನ್ ಹಾಡುಗಾರರ ಮಾದರಿಯನ್ನು ಅನುಸರಿಸಿದ್ದಾನೆ. ಈತನ ವೆಯ್ನಾಮೊಯ್ನನ್ ಹಾಗೂ ಇಲ್ಮಾರಿನೆನ್ ಪಾತ್ರಗಳು ಅಧಿಕೃತ ಮೂಲ ಕಾವ್ಯದಲ್ಲಿರುವಂತೆಯೇ ಇವೆ. ದೇವತೆ, ಪ್ರೇತವಿದ್ಯಾ - ಪುರೋಹಿತ, ಕಡಲುಗಳ್ಳ ಈ ಪಾತ್ರಗಳಾಗಿ ಇವರ ಬದಲಾವಣೆಗಳು ಶತಶತಮಾನಗಳಿಂದ ನಡೆಯುತ್ತ ಬಂದಂಥವು. ಲೊನಾರ್ಟ್‌ನ ಲೆಮಿನ್ಕಾಯ್ನನ್ ಅನೇಕ ವಿಭಿನ್ನ ಲಕ್ಷಣಗಳ ಒಂದು ಸಂಮಿಶ್ರ ಪಾತ್ರ. ಲೌಹಿ, ಕೈಲಿಕ್ಕಿ ಹಾಗೂ ಇನ್ನಿತರ ಅಷ್ಟೇನು ಪ್ರಧಾನವಲ್ಲದ ಸ್ತ್ರೀ ಪಾತ್ರಗಳು ಮೂಲ ಅಧಿಕೃತ ಸಾಮಗ್ರಿಯಲ್ಲಿರುವಂತೆಯೇ ಇದ್ದಾರೆ.

ಘಟನೆ ಹಾಗೂ ಸಾಮಾಜಿಕ ಸನ್ನಿವೇಶಗಳು ಮೂಲದಲ್ಲಿ ದಾಖಲಿಸಿರುವ ರೀತಿಯಲ್ಲಿ ಇವೆ. ಪಠ್ಯದ ಭಾಷೆ ಗ್ರಾಹ್ಯವಾಗಿರಬೇಕು ಎಂಬ ದೃಷ್ಟಿಯಿಂದ ಹಾಡುಗಳ ವಿವಿಧ ಉಪಭಾಷೆಗಳನ್ನು ಲೊನಾರ್ಟ್ ಒಂದು ಶಿಷ್ಟರೂಪಕ್ಕೆ ತಂದಿದ್ದಾನೆ. ಆರ್ಷೇಯ ಫಿನ್ನಿಶ್ ಶೈಲಿಯನ್ನು ಆತ ಅಳವಡಿಸಿಕೊಂಡಿದ್ದರೂ, ತನ್ನ ಓದುಗರಿಗೆ ಪರಿಚಿತವಲ್ಲದ ಶಬ್ದ ರೂಪಗಳನ್ನು ವಾಕ್ಯರೂಪಗಳನ್ನು ತ್ಯಜಿಸಿದ್ದಾನೆ. (ಅನೇಕರಿಗೆ ಸ್ವತಃ ಫಿನ್ನಿಶ್ ಭಾಷೆಯನ್ನು ಅರ್ಥಮಾಡಿಕೊಳ್ಳುವುದೇ ಒಂದು ಸವಾಲು). ಲೊನಾರ್ಟ್‌ನ ವಕ್ತೃಗಳು ಕಥನದ ಗತಿಯನ್ನು ಬದಲಿಸಲು ಅಥವಾ ವಿಶೇಷ ಪರಿಣಾಮವನ್ನು ಸಾಧಿಸಲು ಕೆಲವೊಮ್ಮೆ ಪುನರಾವರ್ತನೆಗಳನ್ನು ಕಡೆಗಣಿಸುತ್ತಿದ್ದರು. ಸಾದೃಶ್ಯ ಕಥೆಗಳನ್ನು ನಿರೂಪಿಸುತ್ತಿದ್ದರು. ಆದರೆ ಈ ವಿಷಯದಲ್ಲಿ ಲೊನಾರ್ಟ್ ಅವರನ್ನು ಅನುಕರಿಸಿಲ್ಲ. ಆದರೆ ಕಥನದ ಸೂತ್ರಗಳನ್ನು ಮಾತ್ರ ಒಬ್ಬ ಗುಲಾಮನ ಭಯ ಭಕ್ತಿ ಶ್ರದ್ಧೆಗಳಿಂದ ಪಾಲಿಸಿದ್ದಾನೆ. ಲೊನಾರ್ಟ್‌ನ ಸಂಯೋಜನ ತಂತ್ರವನ್ನು ಯಾಕೆ ಟೀಕಿಸಲಾಗುತ್ತದೆಂದರೆ ಅದನ್ನು ಎಲ್ಲ ಕಡೆಯೂ ಒಂದೇ ರೀತಿಯಾಗಿ ಪಾಲಿಸಿಕೊಂಡು ಬಂದಿಲ್ಲ ಎಂಬುದಕ್ಕಾಗಿ. ಎರಡು ಪದ್ಯ ರೂಪಗಳನ್ನು ಸಂಯೋಜಿಸುವಾಗ ಒಂದರ ಲಕ್ಷಣ ಇನ್ನೊಂದರ ಲಕ್ಷಣದೊಂದಿಗೆ ಹೊಂದಿಕೆಯಾಗುವಂತೆ ಪ್ರಯತ್ನಿಸಿಲ್ಲ. ಹೀಗಾಗಿ ಒಂದು ಸಾತತ್ಯತೆ ಇಲ್ಲಿ ಕಂಡು ಬರುವುದಿಲ್ಲ ಮತ್ತು ಎಷ್ಟೋ ವೇಳೆ ವಿರೋಧಾಭಾಸಗಳು ಇರುತ್ತವೆ.

ಮೂಲ ಸಾಮಗ್ರಿಯಲ್ಲಿ ಕಂಡು ಬರುವ ಇನ್ನೆರಡು ಅಂಶಗಳನ್ನು ಇಲ್ಲಿ ತಿಳಿಸುವುದು ಅಗತ್ಯ. 1849ರ ಕಲೆವಲದ ಅಂತಿಯ ಪದ್ಯ ಭಾಗವನ್ನು ಬಿಟ್ಟರೆ, ಮೂಲ ಅಧಿಕೃತ ಸಾಮಗ್ರಿಯಲ್ಲಿ ಅಲ್ಲಲ್ಲಿ ಕಾಣಿಸುತ್ತಿದ್ದಂತಹ ಕ್ರೈಸ್ತ ಧರ್ಮೀಯ ಸಾದೃಶ್ಯಗಳನ್ನು ಲೊನಾರ್ಟ್ ಬಿಟ್ಟಿರುವ ಅಂಶ ಎದ್ದು ಕಾಣುತ್ತದೆ. ಒಂದು ವೇಳೆ ಅಂಥವು ಇಣುಕಿದ್ದರೂ ಅದಕ್ಕೆ ಲೊನಾರ್ಟ್ ಅವುಗಳನ್ನು ಕ್ರಿಶ್ಚಿಯನ್ ಸ್ವರೂಪದವು ಎಂದು ಪರಿಗಣಿಸದಿದ್ದುದೇ ಕಾರಣ... ಮೂಲಕ್ಕೆ ಸಹಜವಲ್ಲದ ಹಾಗೂ ಮೇಲಿನ ಅಂಶಕ್ಕೆ ಸಂಬಂಧಿಸಿದಂತೇ ಇರುವ ಆ ಎರಡನೇ ಅಂಶವೆಂದರೆ 'ಕಲೆವಲ' ಪದದ ಬಳಕೆ. ಮೂಲ ಫಿನ್ನಿಶ್ ಮಹಾಕಾವ್ಯ ಪರಂಪರೆಯಲ್ಲಿ ಕಲೆವಲ ಎಂಬ ಹೆಸರು ಹೆಚ್ಚಿಗೇನೂ ಕಾಣಿಸುವುದಿಲ್ಲ. ಅಲ್ಲಿ ಅದು ಕಲೆವಾ ಎಂಬುವನ

ದೇಶ ಅಥವಾ ಊರು ಎಂಬ ಅರ್ಥವನ್ನು ಸೂಚಿಸುತ್ತದೆ. ಪಶ್ಚಿಮ ಫಿನ್ನಿಶ್ ಎಸ್ಟೋನಿಯನ್ ಪರಂಪರೆಯ ಪ್ರಕಾರ ಕಲೆವಾ ಎಂಬುವನು ಅತ್ಯಂತ ಶಕ್ತಿಶಾಲಿಯಾದ ವೀರ ಅಥವಾ ದೈತ್ಯ. ಇದು ಪ್ರಾಚೀನ ಫಿನ್ಲೆಂಡಿನ ವೀರಯುಗಕ್ಕೆ ಮತ್ತೊಂದು ಆಧಾರ ಎಂದು ಲೊನ್ರಾಟ್ ಭಾವಿಸಿದಂತೆ ತೋರುತ್ತದೆ. ವೀರಯುಗವೊಂದು ಇಲ್ಲದಿದ್ದರೆ ರಾಷ್ಟ್ರೀಯ ಮಹಾಕಾವ್ಯವಿರಲು ಸಾಧ್ಯವಿಲ್ಲ ಹಾಗೂ ಇಂಥ ಕಾವ್ಯವಿಲ್ಲದಿದ್ದರೆ ರಾಷ್ಟ್ರೀಯ ಮನೋಭಾವವೂ ಸಾಧ್ಯವಿಲ್ಲ ಎಂಬುದು ಲೊನ್ರಾಟ್ ಹಾಗೂ ಆತನ ಸಮಕಾಲೀನರ ಅಭಿಪ್ರಾಯವಾಗಿತ್ತು.

1849ರ ಕಲೆವಲವನ್ನು ಕ್ರೋಢೀಕರಿಸುವ ಲೊನ್ರಾಟ್‌ನ ಉದ್ದೇಶವನ್ನು ಆಗ ಉಗಮಿಸುತ್ತಿದ್ದ ರಾಷ್ಟ್ರ ಪರಿಕಲ್ಪನೆಯ ಹಿನ್ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಪೋರ್ತನ್ನನ ಕಾಲದಿಂದಾರಂಭಿಸಿ ಆನಂತರದ ತಲೆಮಾರುಗಳ ರಾಷ್ಟ್ರೀಯವಾದಿಗಳೆಲ್ಲರೂ ತಮ್ಮ ರಾಷ್ಟ್ರೀಯ ಸಂಸ್ಕೃತಿಗೆ ಆಧಾರವಾಗಿರುವಂತಹ ಒಂದು ಚಾರಿತ್ರಿಕ ಹಿನ್ನೆಲೆಗಾಗಿ ಹುಡುಕಾಡುತ್ತಿದ್ದರು. ಬಹು ಐಶ್ವರ್ಯವಂತರಿರುವ, ನಾರ್ಸ್ ಅಥವಾ ರಷ್ಯನ್ ಮಾತೃಭಾಷೆಯಾಗಿರುವ, ಜೊಮಾಲಿ ಎಂಬ ದೇವರನ್ನು ಚಿನ್ನದ ಅಲಂಕಾರದ ಭವ್ಯ ದೇಗುಲದಲ್ಲಿ ಪೂಜಿಸುವವರ ನಾಡೊಂದಿದೆ. ಅದು ಬ್ಯಾರ್ಮಿಯ ಎಂದು ಸ್ಕಾಂಡಿನೇವಿಯನ್ ವೀರ ಗಾಥೆಗಳಲ್ಲಿ, ಪೆರ್ಮ್ ಎಂದು ರಷ್ಯಾದ ಚಾರಿತ್ರಿಕ ವೃತ್ತಾಂತಗಳಲ್ಲಿ ಉಲ್ಲೇಖಿತವಾಗಿತ್ತು. ಈ ನಾಡು ತಮ್ಮದೇ ಆಗಿರಬೇಕು ಎಂಬುದು ಫಿನ್ನಿಶ್ ವಿದ್ವಾಂಸರ ಊಹೆಯಾಗಿತ್ತು.

ಫಿನ್ ಜನರ ಪ್ರಾಚೀನ ನಾಡು ಅದೇ ಆಗಿರಬೇಕು ಎಂಬುದನ್ನು ಪತ್ತೆ ಮಾಡುವ ಕೆಲಸದಲ್ಲಿ ಲೊನ್ರಾಟ್ ತಲೆಮಾರಿನ ಅನೇಕ ಯುವ ರಾಷ್ಟ್ರೀಯವಾದಿಗಳು ತೊಡಗಿಕೊಂಡರು. ಲೊನ್ರಾಟ್‌ನು ಕಾವ್ಯವನ್ನು ಸಂಗ್ರಹಿಸಿ ಅದಕ್ಕೆ ರೂಪು ಕೊಡುವುದರಲ್ಲಿ ನಿರತನಾಗಿದ್ದಾಗ ಇತರರು ತಮ್ಮ ಪ್ರಾಚೀನ ಮಾತೃಭೂಮಿಯನ್ನು ಹುಡುಕುವ ದಿಸೆಯಲ್ಲಿ ಚರಿತ್ರೆ, ಭಾಷೆ ಹಾಗೂ ಸ್ಥಳನಾಮಗಳಲ್ಲಿ ಸಿಗುವ ಆಧಾರಗಳ ಅಭ್ಯಾಸದಲ್ಲಿ ತೊಡಗಿದ್ದರು. 1830ರ ಆರಂಭ ಭಾಗದಲ್ಲಿ ಎ. ಜೆ. ಸ್ಟೋಗ್ರೆನ್ (1794-1855) ಎಂಬ ಫಿನ್ನಿಶ್ ಇತಿಹಾಸ ತಜ್ಞ ಉತ್ತರ ಫಿನ್ಲೆಂಡ್ ಮತ್ತು ರಷ್ಯಾದಾದ್ಯಂತ ಪ್ರವಾಸ ಮಾಡಿ ಐದು ವರ್ಷಗಳ ಕಾಲ ತಮ್ಮ ಶೋಧಗಳ ಫಲಿತಾಂಶಗಳನ್ನು ಪ್ರಕಟಿಸಿದರು. ಬಾಲ್ಟಿಕ್ ಫಿನ್ನರ ಪೂರ್ವಿಕರು ರಷ್ಯಾದ ತೀರ ಒಳನಾಡಿನಿಂದ ವಲಸೆ ಬಂದಂಥವರು ಮತ್ತು ಬ್ಯಾರ್ಮಿಯಾ ಹಾಗೂ ಪರ್ಮ್‌ಗೆ ಸಂವಾದಿಯಾದ ಪ್ರದೇಶಗಳನ್ನೂ ಒಳಗೊಂಡಂತೆ ಉತ್ತರ ರಷಿಯಾದ ವಿಶಾಲ ವಿಸ್ತಾರದಾದ್ಯಂತ ಈ ಪೂರ್ವಜರು ನೆಲೆಸಿದ್ದರು ಎಂಬ ವಲಸೆ ಸಿದ್ಧಾಂತವನ್ನು ಅವರು ಮುಂದಿಟ್ಟರು. ಅವರಿಗೂ ಅವರ ಸಮಕಾಲೀನರಿಗೂ ಈ ಸಿದ್ಧಾಂತ ಬಹಳ ಒಪ್ಪಿಗೆಯಾಗಿತ್ತು.

ಲೊನ್ರಾಟ್ ಅವರ ಕೃತಿಗಳಲ್ಲಿ ಈ ವಿಚಾರಗಳು ದಾಖಲಾಗಿವೆ. ಕಲೆವಲಗೆ ಬರೆದಿರುವ ಮುನ್ನುಡಿಯಲ್ಲಿ, ದ್ವಿನಾ ನದಿಯ ದಡ ಮತ್ತು ಫಿನ್ಲೆಂಡ್ ಕೊಲ್ಲಿಯ ನಡುವೆ ಇರುವ ಪ್ರಾಚೀನ ಪರ್ಮಿಯಾದಲ್ಲಿ ಈ ಕಾವ್ಯ ಹೇಗೆ ರೂಪುಗೊಂಡಿತು ಎಂಬುದನ್ನು ವಿವರಿಸಿದ್ದಾರೆ. ಇಲ್ಲಿ ನೆಲೆಸಿದ್ದ ಫಿನ್ನಿಶ್ ಜನರು ಎರಡು ಪ್ರಾದೇಶಿಕ ವಿಭಾಗಗಳಾಗಿ

ವಿಂಗಡಿಸಲ್ಪಟ್ಟಿದ್ದರು. ದಕ್ಷಿಣದಲ್ಲಿ ಕಲೆವಲ ಮತ್ತು ಉತ್ತರದಲ್ಲಿ ಪೊಹ್ಜೋಲಾ ನಾಡಿನಲ್ಲಿದ್ದ ಈ ಗುಂಪುಗಳ ನಡುವೆ ಕಾಳಗಗಳು ನಡೆಯುತ್ತಿದ್ದವು ಎಂಬುದು ಈ ಹಾಡುಗಳಲ್ಲಿ ದಾಖಲಿತವಾಗಿದೆ ಎಂದು ಅವರು ವಿವರಿಸಿದ್ದಾರೆ. ಕ್ರಿಸ್ತ ಜನನದ ಮೊದಲ ಸಹಸ್ರಮಾನದ ಕೊನೆಯ ಭಾಗದಲ್ಲಿ ವೆಯ್ನಾಮೊಯ್ನನ್, ಇಲ್ಮಾರಿನೆನ್ ಮತ್ತು ಲೆಮಿನ್ಕಾಯ್ನನ್‌ರ ನೇತೃತ್ವದಲ್ಲಿ ಕಲೆವಲದ ಜನರು ಹೋರಾಟ ಮಾಡಿ, ಪೊಹ್ಜೋಲಾ ಜನರಿಗೆ ಪೊಗದಿ ಕೊಡಬೇಕಾದ ಬಾಧ್ಯತೆಯಿಂದ ಶಾಶ್ವತವಾಗಿ ಬಿಡುಗಡೆ ಪಡೆದರು ಎಂಬುದನ್ನು ಸಹ ಈ ಕಾವ್ಯ ಭಾಗಗಳು ತಿಳಿಸುತ್ತವೆ ಎಂದು ಲೊನ್ನಾರ್ಟ್ ಹೇಳುತ್ತಾನೆ. ಈ ಕಾವ್ಯ ಭಾಗಗಳನ್ನು ಒಗ್ಗೂಡಿಸುವ ಅಂಶವೇನೆಂದರೆ ಹೇಗೆ ಕಲೆವಲ ಕ್ರಮೇಣ ಅಭಿವೃದ್ಧಿ ಹೊಂದುತ್ತಾ ಪೊಹ್ಜೋಲಾ ನಾಡಿನ ಮಟ್ಟ ತಲುಪಿತು ಮತ್ತು ಅದನ್ನೂ ಮೀರಿಸಿತು ಎಂಬುದು. ಹೀಗೆ ಲೊನ್ನಾರ್ಟ್ ಕಲೆವಲ ಮೂಲಕವಾಗಿ ಒಂದು ವೀರ ಯುಗದ ಇತಿಹಾಸವನ್ನು ಮುಂದಿಟ್ಟು ಫಿನ್ನಿಶ್ ರಾಷ್ಟ್ರೀಯ ಸಂಸ್ಕೃತಿ ಹಾಗೂ ರಾಷ್ಟ್ರ ಪರಿಕಲ್ಪನೆಯನ್ನು ನಿರ್ಮಿಸುವುದಕ್ಕೆ ತಕ್ಕಂತಹ ಒಂದು ಅಡಿಪಾಯವನ್ನು ತಮ್ಮ ಸಮಕಾಲೀನರಿಗೆ ಒದಗಿಸಿಕೊಟ್ಟನು.

ಫಿನ್ ಜನರಿಗೆ ತಮ್ಮ ರಾಷ್ಟ್ರೀಯ ಸಂಸ್ಕೃತಿಯನ್ನು ಕಲ್ಪಿಸಿ ಕೊಡುವ ಕಲೆವಲದ ಉದ್ದೇಶ ಬಹು ಹಿಂದೆಯೇ ನೆರವೇರಿದ್ದರೂ ಸಹ ಈಗಲೂ ಅದು ತನ್ನ ರಂಜಕತೆಯನ್ನು ಸ್ಫೂರ್ತಿದಾಯಕತೆಯನ್ನು ಹಾಗೇ ಉಳಿಸಿಕೊಂಡು ಬಂದಿದೆ.

ಅನಂತರದ ತಲೆಮಾರುಗಳವರು ಕಲೆವಲವನ್ನು ಅದರ ಕಾವ್ಯಕ್ಕಾಗಿ ಮತ್ತು ಅದು ಹೇಳುವ ಕಥೆಗಳ ಬಗೆಗೆ ಸಹಜ ಆಸಕ್ತಿಗಾಗಿ ಓದುತ್ತಿದ್ದಾರೆ. ಈಗಿನ ದಿನಗಳಲ್ಲಿ ಮೌಖಿಕ ಪರಂಪರೆಯ ಸ್ವರೂಪ ಮತ್ತು ಗುಣವನ್ನು ಅದು ಚಾರಿತ್ರಿಕ ಗತಕಾಲದ ಸಾಕ್ಷಿಯಾಗಿದೆ ಎಂಬ ದೃಷ್ಟಿಯಿಂದ ಅಳೆಯುವುದಿಲ್ಲ. ಬದಲಾಗಿ ಅನಕ್ಷರಸ್ಥ ಸಮಾಜದ ಕಲೆಯನ್ನು ಕುರಿತಂಥ ಆಸಕ್ತಿಯಿಂದ ಇದನ್ನು ಗಮನಿಸಲಾಗುತ್ತಿದೆ. ಹೀಗಾಗಿ ಕಲೆವಾಲಾ ಇಂದಿಗೂ ಒಂದು ಹೊಸ ಪಾತ್ರವನ್ನು ನಿರ್ವಹಿಸುತ್ತಿದ್ದು, ಸಾಮಾನ್ಯ ಅನಕ್ಷರಸ್ಥ ಜನರ ಕಲ್ಪನೆ ಹಾಗೂ ಪ್ರತಿಭೆಗಳು ತಮ್ಮ ಸಮಷ್ಟಿಯಾದ ಆದರೆ ಅನಾಮಧೇಯವಾದ ಸ್ಮರಣಿಕೆಯನ್ನು ಮಹಾಕಾವ್ಯದ ರೂಪದಲ್ಲಿ ಬಿಟ್ಟು ಹೋಗುವ ಮೂಲಕ ಹೇಗೆ ಅನಂತರದ ಯುಗದ ಉನ್ನತ ಸಂಸ್ಕೃತಿಯನ್ನು ರೂಪಿಸಿದರು ಎಂಬ ಪ್ರಕ್ರಿಯೆಯನ್ನು ತಿಳಿಸಿಕೊಡುತ್ತಿದೆ. ಕೆಲವು ಅಭಿಮಾನಿಗಳು ಲೊನ್ನಾರ್ಟ್‌ನನ್ನು ಹೊಸ ಯುಗದ ಹೋಮರ್ ಎಂದು ಕರೆಯುವುದುಂಟು. ಆದರೆ ಅತ್ಯಂತ ವಿನಮ್ರ ಸರಳ ಸ್ವಭಾವದವನಾಗಿದ್ದ ಲೊನ್ನಾರ್ಟ್ ಈ ಬಿರುದನ್ನು ಸ್ವೀಕರಿಸುತ್ತಿದ್ದನೇ ಎಂಬುದು ಸಂದೇಹ. ಇದೇನೇ ಇದ್ದರೂ ಈತ ಕಥೆಗಳ ಮಹಾಗಾಯಕನಾಗಿ *(Greatest Singer of Tales)* ಎಂದೆಂದಿಗೂ ಉಳಿಯುತ್ತಾನೆ.

ಎಂ. ಎ. ಬ್ರಾಂಚ್

ಕಥಾ ಸಾರಾಂಶ

ಕನ್ಯತನದ ಒಂಟಿತನದಲ್ಲಿ ಬೆಂದ ವಾಯುಕುವರಿ ಕಡಲಿಗಿಳಿಯುತ್ತಾಳೆ. ಕಡಲ ಅಲೆ ಮತ್ತು ಗಾಳಿಗಳಿಂದ ಬಸಿರಾಗುತ್ತಾಳೆ. ಜಲಮಾತೆ ಎಂದು ಹೆಸರಾಗುತ್ತಾಳೆ. ಟೀಲಿ ಹಕ್ಕಿ ಅವಳ ಮೊಣಕಾಲಿನ ಮೇಲೆ ಇಟ್ಟ ಮೊಟ್ಟೆಗಳು ನೀರಿಗೆ ಬಿದ್ದು ಚೂರಾಗಿ ಆ ಚೂರುಗಳೇ ಭೂಮಿ ಆಕಾಶ ಸೂರ್ಯ ಚಂದ್ರ ಮೋಡಗಳಾಗಿ ರೂಪುಗೊಳ್ಳುತ್ತವೆ. ಜಲಮಾತೆಯು ಭೂಶಿಖರ, ಕಡಲತೀರ, ಸಾಗರದ ಆಳಗಳನ್ನು ರೂಪಿಸುತ್ತಾಳೆ. ಜಲಮಾತೆಯ ಗರ್ಭದಿಂದ ಆದಿಚಾರಣಿಗ ವೆಯ್ನಾಮೊಯ್ನನ್ ಜನಿಸುತ್ತಾನೆ. ಅನೇಕ ವರ್ಷಗಳ ಕಾಲ ಅವನು ಕಡಲ ಅಲೆಗಳ ಮೇಲೇ ತೇಲುತ್ತಿದ್ದು ಕೊನೆಗೊಮ್ಮೆ ಕಡಲ ದಂಡೆಯ ಮೇಲೆ ಬರುತ್ತಾನೆ. ಅಲ್ಲೆಲ್ಲ ಬಟ್ಟ ಬಯಲು. ಒಂದು ಮರವೂ ಇರುವುದಿಲ್ಲ. ವೆಯ್ನಾಮೊಯ್ನನ್‌ನ ನಿರ್ದೇಶನದಂತೆ ಸ್ಯಾಂಪ್ಸಾ-ಪೆಲೆರ್‍ವೋನಿಯನ್ನನು ಮರಗಳನ್ನು ಬಿತ್ತುತ್ತಾನೆ. ಓಕ್ ಮರ ಮಾತ್ರ ಏನಾದರೂ ಬೆಳೆಯುವುದಿಲ್ಲ. ಅದನ್ನು ಬಿತ್ತುವ ಕ್ರಮ ತಿಳಿದು ಬಿತ್ತಿದ ನಂತರ ಕೊನೆಗೊಮ್ಮೆ ಬೆಳೆಯುತ್ತದೆ. ಬೃಹದಾಕಾರವಾಗಿ ಬೆಳೆದು ಓಕ್‌ಮರ ಸೂರ್ಯ ಚಂದ್ರರನ್ನೂ ಮರೆ ಮಾಡುತ್ತದೆ. ಆಗ ಕಡಲಿನಿಂದ ಮೇಲೆ ಬಂದ ಕುಬ್ಜವೀರನೊಬ್ಬ ಆ ಮರವನ್ನು ಬೀಳಿಸಿ ಧರೆಯ ಮೇಲೆ ಪುನಃ ಸೂರ್ಯ ಚಂದ್ರರ ಬೆಳಕು ಬೀಳುವಂತೆ ಮಾಡುತ್ತಾನೆ. ಕಡಲ ದಂಡೆಯಲ್ಲಿ ತಿರುಗಾಡುತ್ತಿದ್ದ ವೆಯ್ನಾಮೊಯ್ನನ್‌ಗೆ ಬಾರ್ಲಿ ಧಾನ್ಯದ ಹಲವು ಕಾಳುಗಳು ಸಿಗುತ್ತವೆ. ಬಾರ್ಲಿ ಬಿತ್ತುವುದಕ್ಕಾಗಿ ಅವನು ಕಾಡನ್ನೆಲ್ಲ ಸವರುತ್ತಾನೆ. ಹಕ್ಕಿಗಳು ಕೂರಲು ತಾಣವಿರಲೆಂದು ಬರ್ಚ್ ಮರವನ್ನು ಮಾತ್ರ ಉಳಿಸುತ್ತಾನೆ. ಇದಕ್ಕಾಗಿ ಹದ್ದು ಪಕ್ಷಿಯು ಬೆಂಕಿಯನ್ನು ತಂದುಕೊಟ್ಟು, ಕಡಿದು ಬಿದ್ದ ಮರಗಳನ್ನು ಸುಡಲು ನೆರವಾಗುತ್ತದೆ. ವೆಯ್ನಾಮೊಯ್ನನ್ ಬಾರ್ಲಿ ಬಿತ್ತುತ್ತಾನೆ. ಹುಲುಸಾಗಿ ಬೆಳೆ ಬರುವಂತೆ ಕರುಣಿಸೆಂದು ಉಕೊ ದೇವನಿಗೆ ಪ್ರಾರ್ಥನೆ ಸಲ್ಲಿಸುತ್ತಾನೆ.

ವೆಯ್ನಾಮೊಯ್ನನ್ ಜ್ಞಾನವಂತ. ಅನೇಕ ಹಾಡುಗಳನ್ನು ರಚಿಸಿ ಹಾಡುತ್ತಾನೆ. ಅವನ ಕೀರ್ತಿಯನ್ನು ಸಹಿಸದ ತರುಣ ಯೊಕಾಹಿನನ್ ಅವನೊಂದಿಗೆ ಸ್ಪರ್ಧಿಸುವ ಉಮೇದಿನಿಂದ ಬರುತ್ತಾನೆ. ಅವನನ್ನು ಸರಿಗಟ್ಟಲು ತನಗೆ ಸಾಧ್ಯವಾಗದು ಎಂದು ಅರಿವಾದಾಗ ಸೆಣಸಾಟಕ್ಕೆ ನಿಲ್ಲುತ್ತಾನೆ. ಅವನ ಸೊಕ್ಕಿಗೆ ಬುದ್ಧಿ ಕಲಿಸಬೇಕೆಂದು ನಿರ್ಧರಿಸಿದ ವೆಯ್ನಾಮೊಯ್ನನ್, ಯೊಕಾಹಿನನ್ನನ ಮೇಲೆ ಮಂತ್ರ ಪ್ರಯೋಗ ಮಾಡಿದಾಗ, ಅವನು ಕುತ್ತಿಗೆಯ ಮಟ್ಟದವರೆಗೆ ಜವುಗು ಕೆಸರಿನಲ್ಲಿ ಹೂತು ಹೋಗುತ್ತಾನೆ. ಇನ್ನು ಉಳಿಗಾಲವಿಲ್ಲವೆಂದು ಅರಿತ ಆ ತರುಣ ಈ ಶಿಕ್ಷೆಯಿಂದ ತನ್ನನ್ನು ಪಾರು ಮಾಡುವಂತೆ ವೆಯ್ನಾಮೊಯ್ನನ್‌ಗೆ ಕೇಳಿಕೊಳ್ಳುತ್ತಾ, ಬಿಡುಗಡೆ ಮಾಡಿದ್ದಕ್ಕೆ ಪ್ರತಿಯಾಗಿ ತನ್ನ ಬಳಿ ಇರುವ ಅಪರೂಪದ ಬಿಲ್ಲು, ದೋಣಿ, ಧನ-ಕನಕ ಕೊಡುವುದಾಗಿ ಒಂದೊಂದೇ ಆಮಿಷವನ್ನು ಒಡ್ಡುತ್ತಾನೆ ಇದಾವುದಕ್ಕೂ ವೆಯ್ನಾಮೊಯ್ನನ್ ಮಣಿಯದಿದ್ದಾಗ ತನ್ನ ತಂಗಿ ಇನೊಳನ್ನು ಉಡುಗೊರೆಯಾಗಿ ಕೊಡುವುದಾಗಿ ಹೇಳುತ್ತಾನೆ. ಈ ಮಾತಿಗೆ ಹರುಷ ತಾಳಿದ ವೃದ್ಧ ವೆಯ್ನಾಮೊಯ್ನನ್ ಕೂಡಲೇ ಅದಕ್ಕೊಪ್ಪಿ ಯೊಕಾಹಿನನ್‌ನನ್ನು ಬಿಡುಗಡೆ ಮಾಡುತ್ತಾನೆ.

ಅವಮಾನ ಭಾರದಲ್ಲಿ ಜೋಲುಮುಖದಲ್ಲಿ ಹಿಂದಿರುಗಿದ ಯೊಕಾಹಿನನ್ ನಡೆದ ಸಂಗತಿಯನ್ನು ತಾಯಿಗೆ ತಿಳಿಸುತ್ತಾನೆ. ಇದರಲ್ಲಿ ದುಃಖಪಡುವಂಥದೇನಿಲ್ಲ. ವೆಯ್ನಾಮೊಯ್ನನ್‌ನಂಥ ಶ್ರೇಷ್ಠ ಪುರುಷ ಅಳಿಯನಾಗಿ ಬರುವುದು ತನಗೆ ತುಂಬ ಸಂತೋಷದ ವಿಷಯ ಎಂದು ತಾಯಿ ಹೇಳುತ್ತಾಳೆ. ಆದರೆ ಮಗಳು ಇನೋಗೆ ಇದರಿಂದ ಸಂತಸವಾಗುವುದಿಲ್ಲ. ತನ್ನಂಥ ಕಿರಿಬಾಲೆಯನ್ನು ವೆಯ್ನಾಮೊಯ್ನನ್‌ನಂಥ ವೃದ್ಧನಿಗೆ ಕೊಡುವುದು ಯಾವ ನ್ಯಾಯ ಎಂದು ಅವಳು ಪ್ರಶ್ನಿಸುತ್ತಾಳೆ. ಸ್ನಾನದ ಸೊಪ್ಪನ್ನು ಕಾಡಿನಲ್ಲಿ ಆಯ್ದು ತರುತ್ತಿದ್ದ ಇನೋಳನ್ನು ಭೇಟಿಯಾದ ವೆಯ್ನಾಮೊಯ್ನನ್ ತನ್ನೊಂದಿಗೆ ಬರುವಂತೆ ಅವಳನ್ನು ಕರೆದಾಗ ಅವಳು

> **ಜನಿಸಿದವನು ಕಡಲಿನಲ್ಲಿ ಲೆಕ್ಕವಿಲ್ಲ ನನಗೆ**
> **ಗೋಧಿ ರೊಟ್ಟಿ ಉಂಡು ತಿನುವ ಬಯಕೆ ಇಲ್ಲ ನನಗೆ**
> **ನಾನೇ ನೇಯ್ದ ವಸ್ತ್ರ ಸಾಕು ತುಣುಕು ರೊಟ್ಟಿ ಚೂರು ಸಾಕು**
> **ನನ್ನಪ್ಪನ ಮನೆಯೊಳಗೆ, ನನ್ನವ್ವನ ಮಡಿಲೊಳಗೆ**

ಎಂದು ಹೇಳಿ ತನ್ನ ಒಡವೆಗಳನ್ನೆಲ್ಲ ಕಿತ್ತೆಸೆದು ಅಳುತ್ತ ಮನೆಗೆ ಬರುತ್ತಾಳೆ.

ಅವನಂಥ ಉತ್ತಮರು ಯಾರೂ ಇಲ್ಲ ಎಂದು ಸಮಾಧಾನ ಮಾಡಿದ ತಾಯಿ ಚೆನ್ನಾಗಿ ಅಲಂಕರಿಸಿಕೊಳ್ಳುವಂತೆ ಅವಳಿಗೆ ತಿಳಿಸುತ್ತಾಳೆ. ತಾಯಿಯ ಸಮಾಧಾನಕ್ಕೆ ಇನೊ ಎಲ್ಲ ಅಲಂಕಾರ ಮಾಡಿಕೊಂಡರೂ ಎಂದಿಗೂ ಆ ವೃದ್ಧನ ಕೈ ಹಿಡಿಯಲಾರೆ ಎಂದು ಮನದಲ್ಲೆ ನಿರ್ಧರಿಸಿ ಮನೆ ಬಿಟ್ಟು ಬಂದು ದುಃಖದಿಂದ ಕಾಡಿನಲ್ಲೆಲ್ಲ ಅಲೆಯುತ್ತಾಳೆ. ಅಲ್ಲಿ ಯಾವುದೋ ಒಂದು ಸರೋವರಕ್ಕೆ ಮೀಯುವುದಕ್ಕೆ ಹೋದವಳಂತೆ ಹೋಗಿ ನೀರಿನಲ್ಲಿ ಮುಳುಗುತ್ತಾಳೆ. ಎಲ್ಲ ಪ್ರಾಣಿಗಳೂ ಒಟ್ಟಾಗಿ, ಇನೋ ಸತ್ತ ಸುದ್ದಿಯನ್ನು ಅವಳ ಮನೆಮಂದಿಗೆ ತಿಳಿಸಿ ಬರುವ ಕೆಲಸವನ್ನು ಮೊಲಕ್ಕೆ ಒಪ್ಪಿಸುತ್ತವೆ. ಒಲ್ಲದ ಮದುವೆಗೆ ಬಲವಂತ ಮಾಡಿ ಮಗಳನ್ನು ಕಳೆದುಕೊಂಡೆನಲ್ಲ ಎಂದು ಇನೋಳ ತಾಯಿ ಅಪಾರ ಶೋಕ ಮಾಡುತ್ತಾಳೆ.

ನೀರಿನಲ್ಲಿ ಮುಳುಗಿದ ಇನೊಳನ್ನು ಪಡೆಯಲು ನೀರನ್ನು ಜಾಲಾಡಲೆಂದು ವೆಯ್ನಾಮೊಯ್ನನ್ ಸರೋವರಕ್ಕೆ ಬರುತ್ತಾನೆ. ಮತ್ಸ್ಯರೂಪದಲ್ಲಿದ್ದ ಇನೋ ಅವನ ಕೈಗೆ ಸಿಗುತ್ತಾಳೆ. ಇದು ಸಾಧಾರಣ ಮೀನು ಎಂದು ತಿಳಿದ ವೆಯ್ನಾಮೊಯ್ನನ್ ಅದನ್ನು ಕತ್ತರಿಸ ಬೇಕೆಂದಿದ್ದಾಗ ಮೀನು ಅವನ ಕೈಯಿಂದ ಚಿಮ್ಮಿ ನೀರಿಗೆ ಹಾರಿ, ಅಲ್ಲಿಂದಲೆ ತಾನಾರು ಎಂಬುದನ್ನು ಹೇಳುತ್ತದೆ. ತನ್ನೊಂದಿಗೆ ಬರುವಂತೆ ವೆಯ್ನಾಮೊಯ್ನನ್ ಅವಳನ್ನು ಪರಿಪರಿಯಾಗಿ ಕೇಳಿಕೊಳ್ಳುತ್ತಾನೆ. ಆದರೆ ಅವಳು ಅವನ ಕೈಗೆ ಸಿಗದಂತೆ ಮರೆಯಾಗಿ ಹೋಗುತ್ತಾಳೆ. ದುಃಖಭಾರದಿಂದ ಅವನು ಮನೆಗೆ ಹಿಂದಿಗುತ್ತಾನೆ. ಅವನ ಪರಿಸರದಲ್ಲಿ ಹಾಡುತ್ತಿದ್ದ ಹಕ್ಕಿಗಳ ದನಿಯೆಲ್ಲ ಉಡುಗಿಹೋದಂತೆ ಅವನಿಗೆ ಭಾಸವಾಗುತ್ತದೆ.

> **ಮೊದಲು ಹಾಡುತ್ತಿದ್ದವು ಹಕ್ಕಿ ಉಲ್ಲಾಸವಾಗಿ ..**
> **ಕೋಕಿಲದ ಹಕ್ಕಿ ಮಧುರವಾಗಿ**

ಮೌನ ತಾಳಿದವೇಕೆ ದನಿ ಇಂಗಿತೇಕೆ
ಯಾವುದೋ ಚಿಂತೆ ದನಿಯನಾವರಿಸಿ
ಯಾವುದೋ ದುಃಖ ಕೊರಳ ಸೆರೆ ಕಟ್ಟಿ
ಹಾಡಲಾರವು ಹಕ್ಕಿ ಇನ್ನೆಂದಿಗೂ ಮೊದಲಂತೆ
ನನ್ನ ಸಂತೋಷಕ್ಕೆ ಮನಸಿನಾನಂದಕ್ಕೆ

ಎಂದು ದುಃಖಿಸುತ್ತಿರುವಾಗ ಅದನ್ನು ಕಂಡು ಗೋರಿಯಲ್ಲಿ ಎಚ್ಚೆತ್ತ ತಾಯಿ ಅವನನ್ನು ಸಂತೈಸುತ್ತಾಳೆ. ಪೊಹ್ಜಾದ ಹೆಣ್ಣುಗಳು ಇಲ್ಲಿಗಿಂತ ಚೆಲುವೆಯರು, ಅವರನ್ನು ವರಿಸು ಎಂದು ಸೂಚಿಸುತ್ತಾಳೆ.

ವೆಯ್ನಾಮೊಯ್ನನ್ ಮೇಲೆ ಸೇಡು ತೀರಿಸಿಕೊಳ್ಳಲು ಹವಣಿಸುತ್ತಿದ್ದ ಯೊಕಾಹಿನನ್, ಪೊಹ್ಜೊಲಾಗೆ ಹೊರಟಿದ್ದ ವೆಯ್ನಾಮೊಯ್ನನ್‌ನನ್ನು ಕೊಲ್ಲಲು ಬಾಣ ಬಿಡುತ್ತಾನೆ. ಆದರೆ ವೆಯ್ನಾಮೊಯ್ನನ್ ಬಂಡಿಯಿಂದ ನೀರಿಗೆ ಬೀಳುತ್ತಾನೆ. ವೆಯ್ನಾಮೊಯ್ನನ್ ಮಡಿದು ಹೋದ ಎಂದು ಯೊಕಾಹಿನನ್ ಸಂಭ್ರಮಿಸುತ್ತಾನೆ.

ಎಷ್ಟೋ ಕಾಲ ಬಿರುಗಾಳಿ ಅಲೆಯಲ್ಲಿ ತೇಲುತ್ತಿದ್ದ ವೆಯ್ನಾಮೊಯ್ನನ್‌ನನ್ನು ಹದ್ದು ತನ್ನ ರೆಕ್ಕೆಯ ಮೇಲೆ ಕೂರಿಸಿಕೊಂಡು ಪೊಹ್ಜೊಲಾ ಸೀಮೆಗೆ ತಂದು ಇಳಿಸುತ್ತದೆ. ಪೊಹ್ಜಾದ ಒಡತಿ ಲೌಹಿ ಅವನನ್ನು ಆದರದಿಂದ ಬರಮಾಡಿಕೊಳ್ಳುತ್ತಾಳೆ. ತಮಗೆ ಸ್ಯಾಂಪೊ (ಮಾಯಾಗಿರಣಿ ಯಂತ್ರ) ನಿರ್ಮಿಸಿಕೊಟ್ಟರೆ ಮಗಳನ್ನು ಕೊಡುವುದಾಗಿ ಲೌಹಿ ತಿಳಿಸುತ್ತಾಳೆ. ತನಗೆ ಬೆಸುಗೆ ಕೆಲಸ ಬರುವುದಿಲ್ಲವೆಂದೂ ತನ್ನ ಸ್ನೇಹಿತ, ವಿಶ್ವ ಕಮ್ಮಾರ ಇಲ್ಮಾರಿನನ್‌ನನ್ನು ಅದಕ್ಕಾಗಿ ಕಳಿಸುವುದಾಗಿ ತಿಳಿಸಿದಾಗ ವೆಯ್ನಾಮೊಯ್ನನ್ ನನ್ನು ಊರಿಗೆ ತಲುಪಿಸುವ ವ್ಯವಸ್ಥೆಯನ್ನು ಪೊಹ್ಜಾದ ಒಡತಿ ಮಾಡುತ್ತಾಳೆ.

ಪ್ರಯಾಣದ ಹಾದಿಯಲ್ಲಿ ವೆಯ್ನಾಮೊಯ್ನನ್ ಪೊಹ್ಜಾದ ಪುತ್ರಿಯನ್ನು ನೋಡುತ್ತಾನೆ. ತನ್ನೊಂದಿಗೆ ಬರುವಂತೆ ಅವಳನ್ನು ಕರೆಯುತ್ತಾನೆ. ತನ್ನ ರಾಟೆಯ ಸಿಬುರಿಂದ ದೋಣಿಯನ್ನು ಮಾಡಿಕೊಡಬೇಕು ಮತ್ತು ಅದನ್ನು ಮುಟ್ಟದೆ ನೀರಿಗೆ ತಳ್ಳಬೇಕು ಹಾಗಿದ್ದಾಗ ಮಾತ್ರ ಜೊತೆ ಬರುವುದಾಗಿ ತಿಳಿಸುತ್ತಾಳೆ.

ವೆಯ್ನಾಮೊಯ್ನನ್ ರಾಟೆ ಸಿಬುರಿನಿಂದ ದೋಣಿ ಮಾಡುವಾಗ ಕಬ್ಬಿಣದ ಕೊಡಲಿ ಅವನ ಮೊಣಕಾಲಿಗೆ ತಾಕಿ ಆಳವಾದ ಗಾಯವಾಗುತ್ತದೆ. ರಕ್ತ ಉಕ್ಕಿ ಹರಿಯುತ್ತದೆ. ಅದಕ್ಕಾಗಿ ಮಾಂತ್ರಿಕ ಮದ್ದನ್ನು ಹುಡುಕಿಕೊಂಡು ಹೋಗುತ್ತಾನೆ. ಹಳ್ಳಿಯ ವೃದ್ಧ ತಾನು ಈ ಗಾಯ ಗುಣಪಡಿಸುವುದಾಗಿ ಹೇಳುತ್ತಾನೆ. ಕಬ್ಬಿಣದ ಉಗಮದ ಕಥೆ, ಹಾಗೂ ವಿಶ್ವಕಮ್ಮಾರ ಇಲ್ಮಾರಿನೆನ್ ಹುಟ್ಟಿನ ಕಥೆಯನ್ನು ಆ ವೃದ್ಧನಿಗೆ ವೆಯ್ನಾಮೊಯ್ನನ್ ಹೇಳುತ್ತಾನೆ. ಉಕ್ಕುತ್ತಿರುವ ರಕ್ತ ನಿಂತು ಹೋಗುವಂತೆ ವೃದ್ಧ ಮಂತ್ರ ಹಾಕುತ್ತಾನೆ. ಗಾಯಕ್ಕೆ ಸವರಲು ಮದ್ದನ್ನು ತಯಾರಿಸುವ ಕೆಲಸವನ್ನು ಆತ ಮಗನಿಗೆ ಒಪ್ಪಿಸುತ್ತಾನೆ. ಸೀಳಿದ ಬೆಟ್ಟಗಳನ್ನು ಸಹ ಕೂಡಿಸುವಂಥ ಮದ್ದನ್ನು ಮಗ ತಯಾರಿಸಿಕೊಂಡು ಬರುತ್ತಾನೆ. ಅದನ್ನು ಸವರಿದ ಕೂಡಲೇ ವೆಯ್ನಾಮೊಯ್ನನ್ ಗಾಯ ಸಂಪೂರ್ಣ ಗುಣವಾಗುತ್ತದೆ. ಜುಮಾಲಾ ದೇವನ ಕರುಣೆಗಾಗಿ

ವೆಯ್ನಾಮೊಯ್ನನ್ ವಂದನೆ ಸಲ್ಲಿಸುತ್ತಾನೆ. ಮನೆಗೆ ಹಿಂದಿರುಗಿದ ವೆಯ್ನಾಮೊಯ್ನನ್ ಇಲ್ಮಾರಿನೆನ್ ಬಳಿ ಹೋಗಿ ಪೊಹ್ಜಾ ಪುತ್ರಿಯ ಚೆಲುವನ್ನು ಬಣ್ಣಿಸುತ್ತಾನೆ ಮತ್ತು ಸ್ಯಾಂಪೊ ಬೆಸೆದುಕೊಟ್ಟು ಆವಳನ್ನು ವರಿಸುವಂತೆ ತಿಳಿಸುತ್ತಾನೆ. ಆದರೆ ಈ ಮಾತಿಗೊಪ್ಪದ ಇಲ್ಮಾರಿನೆನ್ 'ಎಂಥ ಭೀಕರ ನಾಡು ಪೊಹ್ಜಾದ ನಾಡು ಮನುಜರನು ನುಂಗುವುದು ವೀರರನು ಮುಗಿಸುವುದು' ಅಲ್ಲಿಗೆ ಎಂದಿಗೂ ಹೋಗೆನು ಎನ್ನುತ್ತಾನೆ. ವೆಯ್ನಾಮೊಯ್ನನ್ ಮಾಯದ ಬಿರುಗಾಳಿಯನ್ನು ಸೃಷ್ಟಿಸುತ್ತಾನೆ. ಇಲ್ಮಾರಿನೆನ್ ಈ ಗಾಳಿಯಲ್ಲಿ ತೂರಿ ಹೋಗಿ ಪೊಹ್ಜೊಲಾ ಸೇರುತ್ತಾನೆ. ಅವನಿಗೆ ಅಲ್ಲಿ ಆದರದ ಸ್ವಾಗತ ಸಿಗುತ್ತದೆ. ಅವನು ಸ್ಯಾಂಪೊ ಮಾಡಿಕೊಟ್ಟಾಗ ಪೊಹ್ಜಾದ ಒಡತಿ ಅದನ್ನು ಶಿಲೆಯ ಬೆಟ್ಟದಲ್ಲಿ ಬಚ್ಚಿಡುತ್ತಾಳೆ. ಮಗಳನ್ನು ಕೊಡುವಂತೆ ಕೇಳಿದಾಗ ಅವಳು ಈ ಮನೆಯನ್ನು ಬಿಡಲು ಸಿದ್ಧವಾಗಿಲ್ಲ, ಮುಂತಾದ ನೆಪಗಳನ್ನು ಹೇಳುತ್ತಾಳೆ. ದುಃಖಿತನಾದ ಇಲ್ಮಾರಿನೆನ್ ತನ್ನ ನಾಡಿಗೆ ತಲುಪುವ ಬಯಕೆಯನ್ನು ಹೇಳಿಕೊಳ್ಳುತ್ತಾನೆ. ಪೊಹ್ಜಾದ ಒಡತಿ ಅದಕ್ಕೆ ವ್ಯವಸ್ಥೆ ಮಾಡುತ್ತಾಳೆ. ತನ್ನ ನಾಡನ್ನು ತಲುಪಿದ ಇಲ್ಮಾರಿನೆನ್ ನಡೆದ ಸಂಗತಿಯನ್ನು ವೆಯ್ನಾಮೊಯ್ನನ್‌ಗೆ ತಿಳಿಸುತ್ತಾನೆ.

ಆಂಟರೊವಿಪುನನ್ ಎಂಬ ದೈತ್ಯನಿಂದ ಮಂತ್ರ ನುಡಿ ಕಲಿಯಲು ವೆಯ್ನಾಮೊಯ್ನನ್ ತೆರಳುತ್ತಾನೆ. ಗಾಢ ನಿದ್ದೆಯಲ್ಲಿದ್ದ ಅವನನ್ನು ಎಚ್ಚರಿಸುತ್ತಾನೆ. ವೆಯ್ನಾಮೊಯ್ನನ್‌ನನ್ನು ಆ ದೈತ್ಯ ನುಂಗಿದಾಗ ಅವನ ಹೊಟ್ಟೆಯೊಳಗೆ ಸೇರಿಕೊಂಡ ವೆಯ್ನಾಮೊಯ್ನನ್, ದೈತ್ಯನಿಗೆ ವಿಪರೀತ ಉಪಟಳ ಕೊಡುತ್ತಾನೆ. ತಾನು ಮಾಡುತ್ತಿರುವ ದೋಣಿಯ ಕೆಲಸ ಪೂರೈಸಲು ಅಗತ್ಯವಾದ ಮಂತ್ರ ನುಡಿಗಳನ್ನು ಕಲಿಸದ ಹೊರತು ತಾನು ಈಚೆ ಬರುವುದಿಲ್ಲವೆಂದು ನುಡಿಯುತ್ತಾನೆ. ಆಗ ವಿಪುನನ್‌ನು ತಾನು ಕಲಿತ ವಿದ್ಯೆಯನ್ನೆಲ್ಲ ವೆಯ್ನಾಮೊಯ್ನನ್‌ಗೆ ತಿಳಿಸಿಕೊಡುತ್ತಾನೆ. ಆನಂತರ ಅವನ ಬಾಯಿಂದ ಹೊರಬಂದ ವೆಯ್ನಾಮೊಯ್ನನ್ ತನ್ನ ನಾಡಿಗೆ ಹಿಂದಿರುಗಿ ದೋಣಿಯ ಕೆಲಸ ಮುಗಿಸುತ್ತಾನೆ.

ಪೊಹ್ಜಾದ ಹೆಣ್ಣನ್ನು ವರಿಸುವುದಕ್ಕಾಗಿ ವೆಯ್ನಾಮೊಯ್ನನ್ ತನ್ನ ಹೊಸದೋಣಿಯಲ್ಲಿ ಹೊರಡುತ್ತಾನೆ. ಬಟ್ಟೆ ಜಾಲಾಡಲು ಹೊಳೆಗೆ ಬಂದಿದ್ದ ಇಲ್ಮಾರಿನೆನ್ನನ ಸೋದರಿ, ಬೆಳದಿಂಗಳ ಬಾಲೆ ಆ್ಯನಿಕ್ಕಿ ವೆಯ್ನಾಮೊಯ್ನನ್‌ನನ್ನು ನೋಡಿ ಪ್ರಯಾಣದ ಉದ್ದೇಶವನ್ನು ಕೇಳುತ್ತಾಳೆ. ವೆಯ್ನಾಮೊಯ್ನನ್ ಏನೇನೋ ಸುಳ್ಳುಗಳನ್ನು ಹೇಳುತ್ತಾನೆ. ಅವಳು ಅವನ ಸುಳ್ಳನ್ನು ಪತ್ತೆ ಮಾಡಿ, ನಿಜವನ್ನು ಹೇಳುವಂತೆ ಒತ್ತಾಯಿಸಿದಾಗ ಅವನು ನಿಜ ಸಂಗತಿ ತಿಳಿಸುತ್ತಾನೆ. ಕೂಡಲೇ ಅಣ್ಣನ ಬಳಿಗೆ ಓಡಿಬಂದ ಅವಳು ನಿನಗೆ ಸೇರಬೇಕಾದ ಹೆಣ್ಣನ್ನು ಪಡೆಯಲು ಇನ್ನೊಬ್ಬ ಹೋಗುತ್ತಿದ್ದಾನೆ ಎಂದು ಎಚ್ಚರಿಸುತ್ತಾಳೆ. ಅಣ್ಣನಿಗೆ ಮೀಯುವುದಕ್ಕೆ ಸಿದ್ಧ ಮಾಡಿ, ನಂತರ ಮದುವಣಿಗನಂತೆ ಸಿಂಗರಿಸಿ ಕುದುರೆ ಬಂಡಿಯಲಿ ಕುಳ್ಳಿರಿಸಿ ಪೊಹ್ಜೊಲಾಗೆ ಕಳಿಸಿ ಕೊಡುತ್ತಾಳೆ. ಪ್ರಯಾಣದ ಹಾದಿಯಲ್ಲಿ ವೆಯ್ನಾಮೊಯ್ನನ್ ದೋಣಿ, ಇಲ್ಮಾರಿನೆನ್ನನ ಬಂಡಿ ಸಮಾನಾಂತರದಲ್ಲಿ ಚಲಿಸುತ್ತಿರುವಾಗ ಅವರಿಬ್ಬರೂ ಪರಸ್ಪರ ಮಾತಾಡಿಕೊಂಡು 'ಅವಳಾರ ಬಯಸುವಳೊ ಅವನಿಗೇ ಇರಲಿ ಇದಕ್ಕಾಗಿ ನಮ್ಮಲ್ಲಿ ಬೇಡ ಮನಸ್ತಾಪ, ಬೆಳೆಸುವುದು ಬೇಡ ಬಹುಕಾಲ ವೈರ' ಎಂದು ನಿರ್ಧರಿಸುತ್ತಾರೆ.

ಬರುತ್ತಿರುವ ಕನ್ಯಾರ್ಥಿಗಳನ್ನು ನೋಡಿದ ಪೊಹ್ಜೊಲಾ ಒಡತಿ ವೆಯ್ನಾಮೊಯ್ನನ್‌ನನ್ನೇ ವರಿಸುವಂತೆ ಮಗಳಿಗೆ ತಿಳಿಸುತ್ತಾಳೆ. ಅದಕ್ಕೆ ಅವಳು

ಐಶ್ವರ್ಯ ಸಂಪತ್ತು ಲೆಕ್ಕವಿಲ್ಲೆನಗೆ
ಬರಿ ಬುದ್ಧಿ ಹಿರಿಯತನ ಬೇಕಿಲ್ಲ ನನಗೆ
ವರಿಸುವೆನು ಅವನ ಅಗಲ ಹಣೆಯವನ
ಕೈ ಕಾಲುಗಳಲೆಲ್ಲ ಚೆಲುವು ತುಂಬಿದವನ

ಎಂದು ದಿಟ್ಟವಾಗಿ ನುಡಿದು ಇಲ್ಮಾರಿನೆನ್‌ನನ್ನೇ ಮದುವೆಯಾಗುವುದಾಗಿ ಹೇಳುತ್ತಾಳೆ ಮತ್ತು ವೆಯ್ನಾಮೊಯ್ನನ್‌ಗೆ ನಿನ್ನನ್ನು ಮದುವೆಯಾಗುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸುತ್ತಾಳೆ. ಯಾವಾಗಲೂ ಕೆಲಸದಲ್ಲಿ ಮುಳುಗಿದ ಬೆವರು ಮುಖ ಕೊಳೆ ತಲೆಯ ಇಲ್ಮಾರಿನೆನ್‌ಗೆ ಮಗಳನ್ನು ಕೊಡಲು ಇಷ್ಟವಿಲ್ಲದ ಪೊಹ್ಜೊದ ಒಡತಿ ಅವನಿಗೆ ಸರ್ಪಗಳ ಹೊಲವನ್ನು ಉಳುವುದು, ಟುವೊನಿ(ಪರಲೋಕದ ಅಧಿಪತಿ ದೇವತೆ)ಯ ಕರಡಿಯನ್ನು ಹಾಗೂ ಮನಾಲಾ(ಪರಲೋಕ) ದ ತೋಳವನ್ನು ಹಿಡಿದು ತರುವುದು, ಟುವೊನೆಲಾ (ಪರಲೋಕ)ದಲ್ಲಿರುವ ದೈತ್ಯ ಪೈಕ್ ಮೀನನ್ನು ಹಿಡಿದು ತರುವುದು ಇವೇ ಮೊದಲಾದ ಕಠಿಣ ಪರೀಕ್ಷೆಗಳನ್ನು ವಿಧಿಸುತ್ತಾಳೆ. ಅವನು ಆಕೆಯ ಮಗಳ ಸಹಾಯದಿಂದ ಈ ಎಲ್ಲ ಪರೀಕ್ಷೆಗಳನ್ನು ಜಯಿಸಿದಾಗ ಮಗಳನ್ನು ಕೊಡುವುದು ಅನಿವಾರ್ಯವಾಗುತ್ತದೆ.

ವಿವಾಹಕ್ಕಾಗಿ ಅದ್ಭುತ ತಯಾರಿ ನಡೆಯುತ್ತದೆ. ಮಾಂಸಕ್ಕಾಗಿ ಭಾರೀ ಎತ್ತನ್ನು ಕಡಿಯುತ್ತಾರೆ. ರುಚಿಯಾದ ಏಲ್ ಮದ್ಯವನ್ನು ಭಟ್ಟಿ ಇಳಿಸುತ್ತಾರೆ. ಮದುವೆಗೆ ಜನರನ್ನು ಕರೆಯಲು ಎಲ್ಲ ಕಡೆಗೂ ದೂತರನ್ನು ಕಳಿಸುತ್ತಾರೆ. ಧೂರ್ತ ಲೆಮಿನ್ಕಾಯ್ನನ್‌ಗೆ ಮಾತ್ರ ಆಹ್ವಾನ ನೀಡುವುದಿಲ್ಲ. ಭರ್ಜರಿ ಆತಿಥ್ಯದಿಂದ ಎಲ್ಲರೂ ಸಂತೃಪ್ತಿ ಹೊಂದುತ್ತಾರೆ. ಆತಿಥೇಯರನ್ನೂ, ಆಹ್ವಾನಿಸಿದವರನ್ನು, ವಧುವಿನ ಸಖಿಯನ್ನು, ಬಂದ ಅತಿಥಿ ಜನರನ್ನೂ ವೆಯ್ನಾಮೊಯ್ನನ್ ಹಾಡಿ ಹರಸುತ್ತಾನೆ.

ಈ ವಿವಾಹ ಮಹೋತ್ಸವಕ್ಕೆ ತನಗೆ ಕರೆ ನೀಡದಿದ್ದುದಕ್ಕಾಗಿ ಕುಪಿತನಾದ ಲೆಮಿನ್ಕಾಯ್ನನ್ ತಾನಾಗಿಯೇ ಪೊಹ್ಜೊಲಾದ ಬೀಡಿಗೆ ಬರುತ್ತಾನೆ. ಕರೆಯದೇ ಬಂದವನು ಎಂದು ಅವರು ಅವನಿಗೆ ಕಾಟಾಚಾರದ ಆತಿಥ್ಯ ನೀಡಿದಾಗ ಕುಪಿತಗೊಂಡ ಅವನು ಪೊಹ್ಜಾದ ಒಡೆಯನೊಂದಿಗೆ ಕಾದಾಟಕ್ಕಿಳಿಯುತ್ತಾನೆ. ಕಾದಾಟದಲ್ಲಿ ಪೊಹ್ಜಾದ ಒಡೆಯನ ತಲೆ ಉರುಳುತ್ತದೆ. ಸಿಟ್ಟಿಗೆದ್ದ ಒಡತಿ ಲೆಮಿನ್ಕಾಯ್ನನ್ ವಿರುದ್ಧ ಒಂದು ದಂಡನ್ನೇ ಸೃಷ್ಟಿಸುತ್ತಾಳೆ. ಲೆಮಿನ್ಕಾಯ್ನನ್ ಬಹು ವೇಗದಿಂದ ಅಲ್ಲಿಂದ ತಪ್ಪಿಸಿಕೊಂಡು ಬರುತ್ತಾನೆ. ಅಟ್ಟಿಸಿಕೊಂಡು ಬರುತ್ತಿರುವ ಪೊಹ್ಜಾದ ಜನರಿಂದ ಅಡಗಿಕೊಳ್ಳುವ ಬಗೆ ಹೇಗೆಂದು ತಾಯಿಯನ್ನು ಕೇಳುತ್ತಾನೆ. ತನ್ನ ಮಾತು ಕೇಳದೆ ಪೊಹ್ಜಾಗೆ ಹೋದುದಕ್ಕಾಗಿ ಅವನನ್ನು ದೂಷಿಸಿದ ಆಕೆ ದೂರದ ದ್ವೀಪವೊಂದರಲ್ಲಿ ಅಡಗಿಕೊಳ್ಳುವಂತೆ ಸೂಚಿಸುತ್ತಾಳೆ. ಆ ದ್ವೀಪವನ್ನು ತಲುಪಿದ ಲೆಮಿನ್ಕಾಯ್ನನ್ ಅಲ್ಲಿದ್ದ ಪ್ರಮದೆಯರು, ಗರತಿಯರು, ವಿಧವೆಯರೊಂದಿಗೆ ಆನಂದಾ ಮೋದಗಳಲ್ಲಿ ವಿಹರಿಸುತ್ತಾನೆ. ಯುದ್ಧದಿಂದ ಹಿಂದಿರುಗಿ ಬಂದ ಆ ನಡುಗಡ್ಡೆಯ ಪುರುಷರು ಅವನ ವಿರುದ್ಧ ಸಂಚು ಹೂಡುತ್ತಾರೆ. ಲೆಮಿನ್ಕಾಯ್ನನ್ ದ್ವೀಪ ಬಿಟ್ಟು ಓಡುತ್ತಾನೆ. ಅವನ

ವಿಯೋಗಕ್ಕಾಗಿ ಅಲ್ಲಿನ ಹುಡುಗಿಯರು ದುಃಖಿಸುತ್ತಾರೆ. ಲೆಮಿನ್ಕಾಯ್ನನ್ ಹಿಂದಿರುಗುವಷ್ಟರಲ್ಲಿ ಅವನ ಮನೆ ಊರು ಸರ್ವನಾಶವಾಗಿರುತ್ತದೆ. ತಾಯಿಯೂ ಕೂಡ ಈ ಧಾಳಿಯಲ್ಲಿ ಸತ್ತು ಹೋಗಿರುವಳೆಂದೇ ಭಾವಿಸಿ ಮರುಗುತ್ತಿರುವಾಗ ದಟ್ಟಡವಿಯಲ್ಲಿ ಅಡಗಿಕೊಂಡಿದ್ದ ತಾಯಿ ಅವನನ್ನು ಭೇಟಿಯಾಗಿ ನಡೆದ ಸಂಗತಿ ಎಲ್ಲವನ್ನೂ ತಿಳಿಸುತ್ತಾಳೆ. ಪೊಹ್ಜೊಲಾ ವಿರುದ್ಧ ಸೇಡು ತೀರಿಸಿಕೊಳ್ಳಲು ಅವನು ನಿರ್ಧರಿಸುತ್ತಾನೆ.

ಯುದ್ಧದಲ್ಲಿ ತನ್ನ ಜೊತೆಗಾರನಾಗಿದ್ದ ಟಿಯೆರಾನನ್ನು ಕರೆದುಕೊಂಡು ಲೆಮಿನ್ಕಾಯ್ನನ್ ಪೊಹ್ಜಾಲಾದ ಕಡೆ ಹೊರಡುತ್ತಾನೆ. ಪೊಹ್ಜೊಲಾ ಒಡತಿ ಅವರ ವಿರುದ್ಧ ದಟ್ಟ ಮಂಜನ್ನು ಕಳಿಸುತ್ತಾಳೆ. ಅವರ ದೋಣಿ ಸಮುದ್ರದಲ್ಲಿ ಹಿಮಗಟ್ಟಿ ಹೋಗುತ್ತದೆ. ಈ ಇಬ್ಬರು ವೀರರ ಮೇಲೂ ಹಿಮ ಕವಿಯಲು ಆರಂಭವಾದಾಗ ಲೆಮಿನ್ಕಾಯ್ನನ್ ಬಲವಾದ ಮಂತ್ರ ಹಾಕಿ ಹಿಮವನ್ನು ಹಿಮ್ಮೆಟ್ಟಿಸುತ್ತಾನೆ. ಅವರಿಬ್ಬರೂ ಕಡಲ ದಂಡೆಗೆ ನಡೆದುಕೊಂಡು ಬರುತ್ತಾರೆ. ಬರಡು ಭೂಮಿಯಲ್ಲಿ ಅಲೆದಾಡುತ್ತ ಬಹಳ ಬವಣೆ ಪಡುತ್ತಾರೆ. ಕೊನೆಗೊಮ್ಮೆ ಹೇಗೋ ಹಿಂದಿರುಗಿ ಮನೆ ಸೇರುತ್ತಾರೆ.

ಉಂಟಾಮೊ ಎಂಬುವನು ತನ್ನ ಸೋದರ ಕಲೆರ್ವೊನನ್ನು ಪದಚ್ಯುತಗೊಳಿಸಿ ಅವನ ಸೈನ್ಯವನ್ನೆಲ್ಲ ನಾಶ ಮಾಡುತ್ತಾನೆ. ಇಡೀ ಕುಲದಲ್ಲಿ ಒಬ್ಬ ಗರ್ಭಿಣಿ ಮಹಿಳೆಯನ್ನು ಮಾತ್ರ ಉಳಿಸುತ್ತಾನೆ. ಅವಳನ್ನು ಉಂಟಾಮೊ ನಾಡಿಗೇ ಒಯ್ಯುತ್ತಾನೆ. ಅವಳು ಕುಲೆರ್ವೊ ಎಂಬ ಪುತ್ರನಿಗೆ ಜನ್ಮ ಕೊಡುತ್ತಾಳೆ. ಉಂಟಾಮೊ ವಿರುದ್ಧ ಸೇಡು ತೀರಿಸಿಕೊಳ್ಳುವುದಕ್ಕಾಗಿ ತೊಟ್ಟಿಲಿನಲ್ಲೆ ಕುಲೆರ್ವೊ ಪ್ರತಿಜ್ಞೆ ಮಾಡುತ್ತಾನೆ. ಅವನಿನ್ನೂ ಕಂದನಿರುವಾಗಲೇ ತೀರಿಸಿ ಬಿಡಬೇಕೆಂದು ಉಂಟಾಮೊ ಅನೇಕ ಪ್ರಯತ್ನಗಳನ್ನು ಮಾಡಿದರೂ ಸಫಲನಾಗುವುದಿಲ್ಲ. ಬೆಳೆದು ದೊಡ್ಡವನಾದ ಕುಲೆರ್ವೊ ಎಲ್ಲ ಕೆಲಸಗಳನ್ನೂ ಹಾಳು ಮಾಡುತ್ತಿರುತ್ತಾನೆ. ಬೇಸತ್ತು ಹೋದ ಉಂಟಾಮೊ ಅವನನ್ನು ಇಲ್ಮಾರಿನೆನ್‌ಗೆ ಗುಲಾಮನಾಗಿ ಮಾರುತ್ತಾನೆ. ಇಲ್ಮಾರಿನೆನ್‌ನ ಪತ್ನಿಯು ಕುಲೆರ್ವೊಗೆ ದನ ಕಾಯುವ ಕೆಲಸ ಕೊಡುತ್ತಾಳೆ. ಅವನ ಊಟಕ್ಕೆ ಕಲ್ಲನ್ನು ಬೇಯಿಸಿ ಬ್ರೆಡ್ ಎಂದು ಬುತ್ತಿ ಕಟ್ಟಿ ಕೊಡುತ್ತಾಳೆ. ಹುಲ್ಲುಗಾವಲಿನಲ್ಲಿ ತನ್ನ ಮಂದೆಗೆ ಕರಡಿಗಳಿಂದ ಏನೂ ತೊಂದರೆಯಾಗದಿರಲಿ ಎಂದು ಪ್ರಾರ್ಥನೆ ಸಲ್ಲಿಸಿ ಹರಕೆ ಮಾತುಗಳನ್ನು ಹೇಳಿ ದನದ ಮಂದೆಯನ್ನು ಕಳಿಸಿಕೊಡುತ್ತಾಳೆ. ಬುತ್ತಿ ಬಿಚ್ಚಿದ ಕುಲೆರ್ವೊ ಬ್ರೆಡ್ಡನ್ನು ಚಾಕುವಿನಿಂದ ಕತ್ತರಿಸಲು ಹೋದಾಗ ಚಾಕು ಮುರಿದು ತುಂಡಾಗುತ್ತದೆ. ತನ್ನ ವಂಶದ ಕುರುಹಾಗಿ ಉಳಿದ ಏಕೈಕ ವಸ್ತುವಾಗಿದ್ದ ಚಾಕು ಮುರಿದದ್ದರಿಂದ ಅವನಿಗೆ ಬಹಳ ದುಃಖವಾಗುತ್ತದೆ. ಒಡತಿಯ ವಿರುದ್ಧ ಸೇಡು ತೀರಿಸಿಕೊಳ್ಳಲು ನಿರ್ಧರಿಸಿ ದನಗಳನ್ನು ಜವುಗು ಕಾಡಿಗೆ ಅಟ್ಟುತ್ತಾನೆ. ಬಂದು ಹಿಂಡು ತೋಳ ಮತ್ತು ಕರಡಿಗಳನ್ನು ಅಟ್ಟಿಕೊಂಡು ಬಂದು ಸಂಜೆಗತ್ತಲಲ್ಲಿ ಕೊಟ್ಟಿಗೆಗೆ ಕೂಡುತ್ತಾನೆ. ಹಾಲು ಕರೆಯಲೆಂದು ಹೋದ ಒಡತಿ (ಇಲ್ಮಾರಿನೆನ್‌ನ ಪತ್ನಿ) ಯನ್ನು ತೋಳ ಕರಡಿಗಳು ಹರಿದು ಚೂರು ಮಾಡುತ್ತವೆ.

ಕುಲೆರ್ವೊ, ಇಲ್ಮಾರಿನೆನ್ ಮನೆಯಿಂದ ತಪ್ಪಿಸಿಕೊಂಡು ಬರುತ್ತಾನೆ. ಕಾಡಿನಲ್ಲಿ ಅಲೆದಾಡುವಾಗ ಅವನಿಗೆ ಒಬ್ಬ ಮುದುಕಿ ಸಿಗುತ್ತಾಳೆ. ಅವನ ತಂದೆತಾಯಿ ಸೋದರ ಸೋದರಿಯರು ಇನ್ನೂ ಬದುಕಿರುವ ವಿಷಯ ತಿಳಿಸುತ್ತಾಳೆ. ಅವಳು ಸೂಚಿಸಿದ ದಿಕ್ಕನ್ನೇ ಅನುಸರಿಸಿ

ಬಂದ ಅವನು ಲ್ಯಾಪ್ ಲ್ಯಾಂಡ್ ತಲುಪಿ ತನ್ನ ಮನೆ ಮುಂದಿಯನ್ನು ಸಂಧಿಸುತ್ತಾನೆ. ಅವನ ಸೋದರಿ ಹಣ್ಣನ್ನು ಆಯಲು ಹೋಗಿ ಕಾಡಿನಲ್ಲಿ ಕಾಣೆಯಾಗಿರುವ ವಿಷಯವನ್ನು ತಾಯಿ ತಿಳಿಸುತ್ತಾಳೆ.

ಯಾವ ಕೆಲಸವನ್ನೂ ಸರಿಯಾಗಿ ಮಾಡದಿದ್ದ ಕುಲೆರ್ವೊನನ್ನು ಅವನ ತಂದೆ ಸುಂಕ ಕಟ್ಟಿ ಬರಲು ನಗರಕ್ಕೆ ಕಳಿಸುತ್ತಾನೆ. ಸುಂಕ ಕಟ್ಟಿ ಹಿಂದಿರುಗಿ ಬರುವಾಗ ಕಾಡಿನಲ್ಲಿ ಅವನು ಸೋದರಿಯನ್ನು ನೋಡುತ್ತಾನೆ. ಅವಳೇ ತನ್ನ ತಂಗಿ ಎಂದು ಗೊತ್ತಿಲ್ಲದೆ ಅವಳನ್ನು ಬಲಾತ್ಕರಿಸುತ್ತಾನೆ. ಅವನು ಯಾರೆಂಬುದು ಗೊತ್ತಾದ ನಂತರ ಆಕೆ ಮಡುವಿನಲ್ಲಿ ಬಿದ್ದು ಸಾಯುತ್ತಾಳೆ. ಊರಿಗೆ ಹಿಂದಿರುಗಿದ ಕುಲೆರ್ವೊ ನಡೆದ ಸಂಗತಿಯನ್ನು ತಾಯಿಗೆ ತಿಳಿಸಿ ತಾನೂ ತನ್ನ ಜೀವವನ್ನು ಕೊನೆಗಾಣಿಸಿಕೊಳ್ಳುವುದಾಗಿ ತಿಳಿಸುತ್ತಾನೆ. ಬೇಡವೆಂದು ಆಕೆ ತಡೆಯುತ್ತಾಳೆ. ತನ್ನ ಜೀವವನ್ನು ಕೊನೆಗಾಣಿಸುವ ಮೊದಲು ಉಂಟಾಮೋನ ವಿರುದ್ಧ ಸೇಡು ತೀರಿಸಿಕೊಳ್ಳಲು ಕುಲೆರ್ವೊ ನಿರ್ಧರಿಸುತ್ತಾನೆ. ಉಂಟಾಮೋನನ್ನು ಧ್ವಂಸ ಮಾಡಿ ಹಿಂದಿರುಗುವಷ್ಟರಲ್ಲಿ ಅವನ ಮನೆಯವರೆಲ್ಲ ಅಳಿದು ಹೋಗಿ ಇಡೀ ಮನೆ ಭಣಗುಟ್ಟುತ್ತಿರುತ್ತದೆ. ಕಪ್ಪು ಮುದಿ ನಾಯಿ ಅವನನ್ನು ಕಾಡಿನ ಕಡೆಗೆ ಕರೆದೊಯ್ಯುತ್ತದೆ. ಕಾಡಿನಲ್ಲಿ ಹಾಯುತ್ತಿರುವಾಗ ತಾನು ತಂಗಿಯನ್ನು ಕೆಡಿಸಿದ್ದ ಜಾಗ ಕಂಡು ಅವನ ದುಃಖ ಉಮ್ಮಳಿಸುತ್ತದೆ. ನೆಲದ ಮೇಲೆ ಕತ್ತಿಯನ್ನು ನೆಟ್ಟು ಅದರ ಮೇಲೆ ಬಿದ್ದು ತನ್ನ ಜೀವವನ್ನು ಕೊನೆಗಾಣಿಸಿಕೊಳ್ಳುತ್ತಾನೆ.

ಇತ್ತ, ಹೆಂಡತಿಯ ಸಾವಿಗಾಗಿ ಬಹಳ ದುಃಖ ಮಾಡಿದ ಇಲ್ಮಾರಿನೆನ್ ಚಿನ್ನ ಬೆಳ್ಳಿಯನ್ನು ಬೆಸೆದು ವಧುವನ್ನು ಸೃಷ್ಟಿಸುತ್ತಾನೆ. ಈ ಸ್ವರ್ಣ ವಧುವಿನ ಪಕ್ಕ ಮಲಗಿ ಬೆಳಗ್ಗೆ ಎದ್ದಾಗ ಅವಳ ಮಗ್ಗುಲಿಗಿದ್ದ ಅವನ ದೇಹದ ಭಾಗ ಸಂಪೂರ್ಣ ತಣ್ಣಗಾಗಿರುತ್ತದೆ. ಕೊರೆವ ಶೀತಕ್ಕೆ ಮಂಜಾಗಿ ಬೇಸತ್ತ ಅವನು

ಹಿತವಾಗುತಿಲ್ಲ ಇದೇತಕೊ ನನಗೆ
ದಾಟಿಸಿ ಬಿಡುವೆನು ವೆಯ್ನಾಮೊಯ್ನನ್ ಕೈಗೆ
ಅವನ ತೊಡೆ ಮೇಲಿರಲಿ ಮಡದಿಯಾಗಿ,
ತೋಳಿನಪ್ಪುಗೆಯಲ್ಲಿ ಹಕ್ಕಿಯಾಗಿ

ಎಂದು ನಿರ್ಧರಿಸಿದ. ಆದರೆ ಅದನ್ನು ಸ್ವೀಕರಿಸಲು ನಿರಾಕರಿಸಿದ ವೆಯ್ನಾಮೊಯ್ನನ್ ಇಂತಹ ಕೆಲಸಕ್ಕಿಂತ ಜನರಿಗೆ ಉಪಯುಕ್ತವಾದ ವಸ್ತುಗಳನ್ನು ನಿರ್ಮಿಸುವುದು ಒಳ್ಳೆಯದು. ಚಿನ್ನಕ್ಕಾಗಿ ಹಾತೊರೆಯುವಂಥ ಜನರಿಗೆ ಇದನ್ನು ಕೊಟ್ಟು ಬಿಡು ಎಂದು ತಿಳಿಸುತ್ತಾನೆ.

ತನ್ನ ಮೊದಲ ಹೆಂಡತಿಯ ತಂಗಿಯನ್ನು ವರಿಸುವುದಕ್ಕಾಗಿ ಇಲ್ಮಾರಿನೆನ್ ಪೊಹ್ಜೊಲಾಗೆ ಹೋಗುತ್ತಾನೆ. ಅಪಮಾನ ಮಾಡಿ ಮಾತಾಡಿದ ಅವಳನ್ನು ಎಳೆದು ಬಂಡಿಯಲ್ಲಿ ಹಾಕಿಕೊಂಡು ಬರುತ್ತಾನೆ. ದಾರಿಯುದ್ದಕ್ಕೂ ಅವಳಾಡುವ ಅಪಮಾನ ಕಣಕು ನುಡಿಗಳಿಂದ ರೋಸಿ ಹೋದ ಅವನು ಅವಳನ್ನು

ಕಡಿದಾದ ಬಂಡೆಗಳಡಿ ಅರಚಾಡಿಕೊಂಡಿರುವ
ಚಾಚಿದಂಚಲ್ಲಿ ಮುಲುಕಾಡಿಕೊಂಡಿರುವ

ಕಡಲ ಹಕ್ಕಿಯಾಗೆಂದು ಶಪಿಸುತ್ತಾನೆ.
ಬೇಕಾಗುವ ದಿನಸಿ ಒಂದು ದಿನ ಬೀಸುತ್ತ
ಮಾರುವುದಕ್ಕೆಂದು ಎರಡನೆ ದಿನ ಬೀಸುತ್ತ
ಮನೆಗಾಗುವಷ್ಟು ಮೂರನೆ ದಿನ ಬೀಸುತ್ತ ಇರುವ

ಸ್ಯಾಂಪೊದಂತಹ ಮಾಯಾ ಗಿರಣಿಯಿಂದಾಗಿ ಪೊಹ್ಜೊಲಾ ಜನರು ಸುಖ ಸಮೃದ್ಧಿಯಲ್ಲಿ ನಿರಾತಂಕವಾಗಿ ಓಲಾಡುತ್ತಿರುವ ವಿಷಯವನ್ನು ಇಲ್ಮಾರಿನೆನ್ನನು ವೆಯ್ನಾಮೊಯ್ನನ್‌ಗೆ ತಿಳಿಸುತ್ತಾನೆ ಮತ್ತು ಹೆಣ್ಣನ್ನು ತರಹೋಗಿ ತಾನು ಪಟ್ಟ ಬವಣೆಯನ್ನೂ ವಿವರಿಸುತ್ತಾನೆ.

ಸ್ಯಾಂಪೊವನ್ನು ನಮ್ಮ ನಾಡಿಗೆ ತಂದು ಬಿಡೋಣವೆಂದು ವೆಯ್ನಾಮೊಯ್ನನ್, ಇಲ್ಮಾರಿನೆನ್‌ನನ್ನು ಹುರಿದುಂಬಿಸುತ್ತಾನೆ. ಅವರಿಬ್ಬರೂ ದೋಣಿಯಲ್ಲಿ ಪೊಹ್ಜೊಲಾ ಕಡೆಗೆ ಪಯಣಿಸುತ್ತಾರೆ. ಅವರ ಪ್ರಯಾಣದ ಉದ್ದೇಶ ತಿಳಿದ ಲೆಮಿನ್ಕಾಯ್ನನ್ನನೂ ಅವರ ಜೊತೆಗೂಡುತ್ತಾನೆ.

ನೀರಿನಲ್ಲಿ ತೇಲಿ ಬರುತ್ತಿರುವ ಇವರ ದೋಣಿಗೆ ಒಂದು ಮಹಾ ಪೈಕ್ ಮೀನಿನ ಬೆನ್ನು ತಡೆ ಒಡ್ಡುತ್ತದೆ. ಪೈಕ್ ಮೀನನ್ನು ಕೊಲ್ಲುತ್ತಾರೆ. ಅದರ ಮುಂಭಾಗವನ್ನು ದೋಣಿಗೆ ತಂದು ಅಡುಗೆ ಮಾಡಿ ಉಣ್ಣುತ್ತಾರೆ. ಪೈಕ್ ಮೀನಿನ ದವಡೆ ಎಲುಬಿಂದ ವೆಯ್ನಾಮೊಯ್ನನ್ನನು ಕಾಂಟಲ ಎಂಬ ವಾದ್ಯ ಮಾಡುತ್ತಾನೆ. ಅದನ್ನು ನುಡಿಸಲು ಎಲ್ಲರೂ ಪ್ರಯತ್ನಿಸಿ ವಿಫಲರಾಗುತ್ತಾರೆ. ವೆಯ್ನಾಮೊಯ್ನನ್ ನುಡಿಸುತ್ತಾನೆ. ಭೂಮಿ, ವಾಯು, ಜಲಚರಾದಿಗಳಾಗಿ ಎಲ್ಲ ಜೀವಿಗಳೂ ಅವನ ಗಾಯನಕ್ಕೆ ಮನಸೋತು ಅವನ ಸುತ್ತ ಸೇರುತ್ತಾರೆ. ಸಂಗೀತ ನುಡಿಸುತ್ತ ವೆಯ್ನಾಮೊಯ್ನನ್ ಕಣ್ಣಿಂದ ಉದುರಿದ ಅಶ್ರುಬಿಂದುಗಳು ಕಡಲು ಸೇರಿ ಮುತ್ತಾಗುತ್ತವೆ.

ಮೂವರೂ ವೀರರು ಪೊಹ್ಜೊಲಾ ತಲುಪುತ್ತಾರೆ. ಸ್ಯಾಂಪೊ ತೆಗೆದುಕೊಂಡು ಹೋಗಲು ಬಂದಿರುವುದಾಗಿ ವೆಯ್ನಾಮೊಯ್ನನ್ ಘೋಷಿಸುತ್ತಾನೆ. ಇವರ ಕೋರಿಕೆಗೆ ಪೊಹ್ಜೊಲಾ ಒಡತಿ ಮಣಿಯುವುದಿಲ್ಲ. ತನ್ನವರನ್ನು ಕರೆದು ಇವರ ಮೇಲೆ ಧಾಳಿ ಮಾಡಲು ತಿಳಿಸುತ್ತಾಳೆ. ವೆಯ್ನಾಮೊಯ್ನನ್ ಕಾಂಟಲ ನುಡಿಸಿ, ಪೊಹ್ಜಾದ ಜನರೆಲ್ಲ ಸಂಮೋಹಕ ನಿದ್ರೆಗೆ ಜಾರುವಂತೆ ಮಾಡುತ್ತಾನೆ. ಆನಂತರ ತನ್ನ ಸಂಗಾತಿಗಳ ಜೊತೆಗೂಡಿ ಸ್ಯಾಂಪೊ ಇರುವ ಜಾಗ ಹುಡುಕಿ ಹೋಗುತ್ತಾನೆ. ಶಿಲೆಯ ಬೆಟ್ಟದಲ್ಲಿ ಅಡಗಿಸಿದ್ದ ಸ್ಯಾಂಪೊವನ್ನು ತೆಗೆದು ದೋಣಿಗೆ ಸಾಗಿಸುತ್ತಾರೆ.

ಮೂರನೆಯ ದಿನ ಪೊಹ್ಜೊಲಾ ಒಡತಿಗೆ ಸಂಮೋಹಕ ನಿದ್ದೆಯಿಂದ ಎಚ್ಚರವಾಗುತ್ತದೆ. ಸ್ಯಾಂಪೊ ಕಳುವಾಗಿರುವುದು ತಿಳಿಯುತ್ತದೆ. ಅದನ್ನು ಕದ್ದೊಯ್ದವರ ಮೇಲೆ ದಟ್ಟ ಮಂಜು, ಬಿರುಗಾಳಿ ಹಾಗೂ ಇನ್ನಿತರ ಮಾರಿಗಳನ್ನು ಕಳಿಸುತ್ತಾಳೆ. ಈ ಧಾಳಿಯಲ್ಲಿ ವೆಯ್ನಾಮೊಯ್ನನ್ನನ ಕಾಂಟಲ ವಾದ್ಯ ಬಿರುಗಾಳಿಯಲ್ಲಿ ತೂರಿ ಹೋಗಿ ಕಡಲ ಪಾಲಾಗುತ್ತದೆ.

ಪೊಹ್ಜೋಲಾ ಒಡತಿ ಯುದ್ಧ ನೌಕೆಯಲ್ಲಿ ಬಂದು ಸ್ಯಾಂಪೊ ಕದ್ದೊಯ್ದವರ ಮೇಲೆ ಧಾಳಿ ಮಾಡುತ್ತಾಳೆ. ಕಲೆವಾಲಾ ಮತ್ತು ಪೊಹ್ಜೋಲಾ ನಡುವೆ ಕಾದಾಟ ನಡೆಯುತ್ತದೆ. ಪೊಹ್ಜೋಲಾ ಒಡತಿ ಸ್ಯಾಂಪೊವನ್ನು ಹಿಡಿದೆಳೆದಾಗ ಅದು ನೀರಿಗೆ ಬಿದ್ದು ಚೂರಾಗುತ್ತದೆ. ದೊಡ್ಡ ತುಣುಕುಗಳು ಕಡಲೊಳಗೆ ಮುಳುಗಿ ಕಡಲ ಸಂಪತ್ತನ್ನು ವರ್ಧಿಸುತ್ತವೆ. ನೀರ ಮೇಲೆ ತೇಲುತ್ತಿದ್ದ ತುಣುಕುಗಳನ್ನು ವೆಯ್ನಾಮೊಯ್ನನ್ ಆಯ್ದುಕೊಳ್ಳುತ್ತಾನೆ. ಕಲೆವಾಲಾ ಮೇಲೆ ಎಲ್ಲ ದುಷ್ಟಶಕ್ತಿಗಳನ್ನು ಕಳಿಸುವುದಾಗಿ ಪೊಹ್ಜೋಲಾ ಒಡತಿ ಬೆದರಿಕೆ ಒಡ್ಡುತ್ತಾಳೆ. ಅವಳ ಮಾತಿಗೆ ವೆಯ್ನಾಮೊಯ್ನನ್ ಕಿವಿಗೊಡುವುದೇ ಇಲ್ಲ. ದುಃಖ ಭಾರದಿಂದ ಅವಳು ತನ್ನ ನಾಡಿಗೆ ಹಿಂದಿರುಗುತ್ತಾಳೆ.

ಕಳೆದು ಹೋದ ಕಾಂಟಲಗಾಗಿ ವೆಯ್ನಾಮೊಯ್ನನ್ ಕಡಲೆಲ್ಲವನ್ನೂ ಸೋಸುತ್ತಾನೆ. ಆದರೆ ಅದು ಸಿಗುವುದಿಲ್ಲ. ಆಗ ಬರ್ಚ್ ಮರದ ಒಡಲಿನಿಂದ ಹೊಸ ಕಾಂಟಲ ಸಿದ್ಧ ಮಾಡುತ್ತಾನೆ. ಅದನ್ನು ನುಡಿಸಿ ಎಲ್ಲ ಜೀವಿಗಳಿಗೂ ಆನಂದ ಉಂಟು ಮಾಡುತ್ತಾನೆ. ಅವನ ಸಂಗೀತ ಕೇಳುತ್ತಾ ಮೈ ಮರೆತಿದ್ದ ಸೂರ್ಯ ಚಂದ್ರರನ್ನು ಪೊಹ್ಜೋಲಾ ಒಡತಿ ಸೆರೆಹಿಡಿದು ಪರ್ವತವೊಂದರಲ್ಲಿ ಬಚ್ಚಿಡುತ್ತಾಳೆ. ಅಲ್ಲದೆ ಕಲೆವಾಲಾ ಮನೆಗಳ ಬೆಂಕಿಯನ್ನು ಅಪಹರಿಸುತ್ತಾಳೆ. ಆಕಾಶದಲ್ಲೆಲ್ಲ ಕತ್ತಲು ಏಕೆ ಕವಿಯಿತು ಎಂದು ಸ್ವರ್ಗಾಧಿಪತಿ ಉಕೊ ವಿಸ್ಮಯ ಪಡುತ್ತಾನೆ. ಹೊಸ ಸೂರ್ಯ ಚಂದ್ರರನ್ನು ಹೊತ್ತಿಸುವುದಕ್ಕಾಗಿ ಬೆಂಕಿಯನ್ನು ಉಂಟು ಮಾಡುತ್ತಾನೆ.

ಬೆಂಕಿ ಕಿಡಿಯನ್ನು ಬೆಳ್ಳಿಕರಂಡದಲ್ಲಿಟ್ಟು ವಾಯುಪುತ್ರಿಗೆ ಅದನ್ನು ತೊಟ್ಟಿಲಲ್ಲಿ ತೂಗು, ಹೊಸ ಚಂದಿರನಾಗಿ ಬೆಳೆಯಲೆಂದು ಹೊಸ ಸೂರ್ಯನಾಗಿ ಬೆಳೆಯಲೆಂದು ಹೇಳುತ್ತಾನೆ.

ಅವಳು ಅದನ್ನು ಕೈಯೊಳಗಿಟ್ಟು ಮುದ್ದು ಮಾಡುವಾಗ ಬೆಂಕಿಯು ಜಾರಿ ಆಕಾಶದಿಂದ ಕೆಳಗೆ ಬೀಳುತ್ತದೆ. ವೆಯ್ನಾಮೊಯ್ನನ್ ಮತ್ತು ಇಲ್ಮಾರಿನೆನ್ ಅದನ್ನು ಹುಡುಕಿಕೊಂಡು ಹೋಗುತ್ತಾರೆ. ಬೆಂಕಿಯು ಅಲೂ ಸರೋವರದಲ್ಲಿ ಬಿದ್ದಿರುವ ಹಾಗೂ ಅದನ್ನು ಮೀನೊಂದು ನುಂಗಿರುವ ಸಂಗತಿಯನ್ನು ವಾಯು ಕನ್ಯೆ ತಿಳಿಸುತ್ತಾಳೆ. ಆ ಮೀನನ್ನು ನಾರಿನ ಬಲೆಯಲ್ಲಿ ಹಿಡಿಯಲು ಯತ್ನಿಸಿ ವೆಯ್ನಾಮೊಯ್ನನ್ ಹಾಗೂ ಇಲ್ಮಾರಿನೆನ್ ವಿಫಲರಾಗುತ್ತಾರೆ. ಅನಂತರ ಅವರು ಲಿನನ್ ಬಲೆಯನ್ನು ಸಿದ್ಧಪಡಿಸಿ ಮೀನನ್ನು ಹಿಡಿಯುವಲ್ಲಿ ಯಶಸ್ವಿಯಾಗುತ್ತಾರೆ. ಮೀನಿನ ಹೊಟ್ಟೆಯನ್ನು ಬಗೆದಾಗ ಬೆಂಕಿಯು ತಟಕ್ಕನೆ ಮೇಲೆ ಚಿಮ್ಮುತ್ತದೆ. ಇಲ್ಮಾರಿನೆನ್ನನ ಕೆನ್ನೆ ಮತ್ತು ಕೈಗಳು ತೀವ್ರವಾಗಿ ಸುಟ್ಟು ಹೋಗುತ್ತವೆ. ಬೆಂಕಿಯು ತಪ್ಪಿಸಿಕೊಂಡು ಹೋಗುತ್ತಾ ಅನೇಕ ಊರುಗಳನ್ನು ಸುಡುತ್ತದೆ. ಕೊನೆಗೊಮ್ಮೆ ಅದನ್ನು ಸೆರೆ ಹಿಡಿದು ತಂದು ಕಲೆವಾಲಾದ ಮನೆಗಳಲ್ಲಿ ಹೊತ್ತಿಸುತ್ತಾರೆ. ಇಲ್ಮಾರಿನೆನ್ ದೇವರನ್ನು ಸ್ತುತಿಸಿ, ಸುಟ್ಟಗಾಯಗಳಿಂದ ಗುಣಮುಖನಾಗುತ್ತಾನೆ.

ಇಲ್ಮಾರಿನೆನ್ ಕೃತಕ ಸೂರ್ಯಚಂದ್ರರನ್ನು ಬೆಸೆಯುತ್ತಾನೆ. ಆದರೆ ಅವು ಹೊಳೆಯುವುದೇ ಇಲ್ಲ. ವೆಯ್ನಾಮೊಯ್ನನ್ ಕಾಲಜ್ಞಾನದ ನೆರವಿನಿಂದ, ಸೂರ್ಯ ಚಂದ್ರರನ್ನು ಬಚ್ಚಿಟ್ಟಿರುವ ಜಾಗವನ್ನು ಪತ್ತೆ ಮಾಡುತ್ತಾನೆ. ಪೊಹ್ಜೋಲಾ ಮೇಲೆ ದಂಡೆತ್ತಿ ಹೋಗಿ ಆ ನಾಡನ್ನು ಜಯಿಸುತ್ತಾನೆ. ಆದರೆ ಸೂರ್ಯ ಚಂದ್ರರಿರುವ ಪರ್ವತವನ್ನು

ಬೇಧಿಸುವುದಕ್ಕೆ ಆಗದೆ ಹಾಗೇ ಹಿಂದಿರುಗುತ್ತಾನೆ. ಪರ್ವತವನ್ನು ಬೇಧಿಸಲು ಬೇಕಾದಂತಹ ಸಾಧನಗಳನ್ನು ಇಲ್ಮಾರಿನೆನ್‌ಗೆ ಹೇಳಿ ಮಾಡಿಸಿ ಕೊಳ್ಳುತ್ತಾನೆ. ಅಲ್ಲಿಗೆ ಹಕ್ಕಿ ರೂಪದಲ್ಲಿ ಬಂದ ಪೊಹ್ಜೊಲಾ ಒಡತಿ ಇಲ್ಮಾರಿನೆನ್ನನ ಕೆಲಸದ ಉದ್ದೇಶ ಅರಿತು ಹೆದರಿ ತನ್ನ ನಾಡಿಗೆ ಓಡುತ್ತಾಳೆ ಮತ್ತು ಸೂರ್ಯ ಚಂದ್ರರನ್ನು ಪರ್ವತದ ಸೆರೆಯಿಂದ ಬಿಡುಗಡೆ ಮಾಡುತ್ತಾಳೆ. ಆಕಾಶದಲ್ಲಿ ಮತ್ತೆ ಹೊಳೆಯುತ್ತಿರುವ ಸೂರ್ಯ ಚಂದ್ರರಿಗೆ ವೆಯ್ನಾಮೊಯ್ನನ್ ವಂದಿಸಿ ಜಯಕಾರ ಮಾಡುತ್ತಾನೆ.

ಉದಯಿಸುತಿರು ಹೀಗೆ ಮುಂಜಾವದಲ್ಲಿ
ಶುಭವ ಹಾರೈಸು ನಮ್ಮ ಬಾಳಲ್ಲಿ
ಎಲ್ಲ ಸಿರಿ ಸಂಪದವು ಹೆಚ್ಚಾಗಲೆಂದು
ನಮ್ಮ ಪಾಲಿಗೆ ಸದಾ ಬೇಟೆ ಸಿಗಲೆಂದು
ಗಾಳಕ್ಕೆ ಮೀನು ಸಮೃದ್ಧ ಸಿಗಲೆಂದು
ಸಾಗುತಿರು ಹೀಗೆ ನಮ್ಮ ಹರಸುತ್ತ
ಸಾಗುತಿರು ಹೀಗೆ ಪಯಣಿಸುತ್ತ
ಬಲ್ಲಂತೆ ಬಾಗಿರುವ ಚೆಲುವಾಂಗ ನೀನು
ಸಂಜೆಯಾಗಸದ ಸಂತೋಷ ನೀನು

ಎಂದು ಚಂದಿರನನ್ನು ಸ್ತುತಿಸುತ್ತಾನೆ.

★ ★ ★

ಪರಿವಿಡಿ

ಕಾವ್ಯ ಖಂಡಗಳು

❖ ❖ ❖

೧. ವೆಯ್ನಾಮೊಯ್ನೆನ್ ಜನನ

ಬಯಕೆಯಾಗುತಿದೆ ನನಗೆ ಹಾಡಬೇಕೆಂದು
ಹೇಳುತಿದೆ ಮನ ಹಾಡುಹಾಡೆಂದು
ಜನರ ಕಥೆ ಹಾಡುವೆನು ಇತಿಹಾಸ ಗಾಥೆ
ಹೊಮ್ಮುತಿವೆ ಪದ ಪುಂಖಾನುಪುಂಖ
ಉರುಳುತಿವೆ ಪದ ತಡೆಯಿಲ್ಲದಂತೆ

ಪ್ರಿಯಾತಿಪ್ರಿಯ ಮಿತ್ರನೆ ಅತಿಪ್ರೀತಿಯ ಸೋದರನೆ
ಬೇರೆಲ್ಲರಿಗಿಂತ ಪ್ರಿಯನಾದ ಮಿತ್ರನೆ
ಬಾರಯ್ಯ ಜೊತೆಗೂಡಿ ಹಾಡೋಣ ನಾವು
ಭೇಟಿಯಾಗಿ ದಿನ ಬಹಳವಾದವು
ಬಂದಿಹೆವು ಬೇರ್ಪಟ್ಟು ಸರಿದ ಸ್ಥಳದಿಂದ
ಭೇಟಿಯಿಲ್ಲ ನಮಗೆ ಬಹಳ ದಿನದಿಂದ
ಮಬ್ಬು ಉತ್ತರದ ನಾಡಿನಲ್ಲೊಬ್ಬ
ಉಲ್ಲಾಸವಿರದ ಪೊಹ್ಜಾದಲ್ಲಿಹ ಮತ್ತೊಬ್ಬ

ಕೈಕೈ ಹಿಡಿಯೋಣ ಬೆರಳ್ಗೆ ಬೆರಳ್ ಬೆಸೆಯೋಣ
ದನಿ ತೆಗೆದು ಹಾಡೋಣ ಉಲ್ಲಾಸದಿಂದ
ಪ್ರಿಯ ಜನರ ಕಿವಿ ನಿಮಿರುವಂತೆ
ಪ್ರೀತಿ ಪಾತ್ರರಿಗೆ ಅರಿವಾಗುವಂತೆ
ಹೊಸ ಪೀಳಿಗೆ ಹುಡುಗರು ಸುತ್ತ ನಿಲುವಂತೆ
ಪದಗಳ ಮೋಡಿ ಕಲಿಯುವಂತೆ
ಹಳೆಯ ಕಥೆ ಹಾಡು ನೆನಪಾಗುವಂತೆ

ವೆಯ್ನಾಮೊಯ್ನೆನ್ ನಡುಪಟ್ಟಿ
ಇಲ್ಮಾರಿನೆನ್ ಕುಲುಮೆ
ಕುಕೊಮೆಲಿಯ ಕತ್ತಿ ಮೊನೆ
ಯೊಕಾಹಿನನ್ನನ ಅಡ್ಡಬಿಲ್ಲು
ಪೊಹ್ಜಾದ ನಾಡ ವಿಸ್ತಾರ
ಹಬ್ಬಿದ ಕುರುಚಲಿನ ಕಲೆವಾಲಾ
ಎಲ್ಲ ಕಥೆ ಹಾಡು ನೆನಪಾಗುವಂತೆ

ಹಾಡುತ್ತಿದ್ದ ನನ ತಂದೆ ಈ ಹಾಡು ಹಿಂದೆ
ಕೆತ್ತುತ್ತ ಕುಳಿತು ಕೈಗೊಡಲಿ ಹಿಡಿಕೆ

ಹಾಡುತ್ತಿದ್ದಳು ತಾಯಿ ರಾಟೆ ತಿರುಗಿಸುತ್ತ
ನೂಲು ಸುತ್ತುತ್ತ
ನಾನಿದ್ದೆ ಎಳೆಕಂದ ಮೊಣಕಾಲ ಬಳಿಯಲ್ಲಿ
ಕೈಲಾಗದ ಮಗು ಹಾಲುಗಲ್ಲ
ಉರುಳುತಿದ್ದೆನು ಬೋರಲಾಗಿ ನೆಲಕೆ
ಹರಿಯುತ್ತಿತ್ತು ಹಾಲು ಗಲ್ಲಗಳ ಮೇಲೆ

ಸೋಲದು ಸ್ಕ್ಯಾಂಪೊ ಕಥೆ ಲೌಹಿಯ ಮಾಯಾಜಾಲ
ಹಳೆಯದಾಯಿತು ಸ್ಕ್ಯಾಂಪೊ ಮರೆಯಾದಳು ಲೌಹಿ
ಹಾಡುತ್ತಲೆ ಉಸಿರೆಳೆದ ವಿಪುನನ್
ತಪ್ಪುಗಳಿಗೆ ಬಲಿಯಾದ ಲೆಮಿನ್ಕಾಯ್ನನ್

ಕಥೆಗಳಿವೆ ಇನ್ನೂ ಬಹಳ ಬಹಳ
ಹಾಡು ಕಲಿತೆ ಅದು ಮಾಯಾಜಾಲ
ಹಾದಿಬದಿಯಲ್ಲಿ ಕುರುಚಲಿನ ಮೆಳೆಯಲ್ಲಿ
ಪೊದೆಗಳಲ್ಲಿ ಕೆಲವು ಸಸಿಯಿಂದ ಕೆಲವು
ನೀರ ಚಿಲುಮೆಯಿಂದ ಆಯ್ದು ಹಲವು
ಕುರಿಗಾವಲವರ ಜೊತೆಯಲ್ಲಿ
ಹಸು ಮೇಯಿಸುತ್ತ ಬಯಲಲ್ಲಿ
ಜೇನುಕೀಳುತ್ತ ಗುಡ್ಡ ಬೆಟ್ಟದಲ್ಲಿ

ಬೀಳುವ ಮಂಜು ಹೇಳಿತು ತನ್ನ ಹಾಡನ್ನು
ಸುರಿವ ಮಳೆ ಕಲಿಸಿತು ತನ್ನ ಕಥೆಯನ್ನು
ತೇಲಿ ಬಂದವು ಕೆಲವು ಗಾಳಿಯಲ್ಲಿ
ಉರುಳಿ ಬಂದವು ಹಲವು ಕಡಲ ಅಲೆಯಲ್ಲಿ
ತಂದು ಸುರಿದವು ಹಕ್ಕಿ ತಮ್ಮ ಕೊರಳಿನ ಹಾಡು
ವೃಕ್ಷತುಂಗಗಳು ಅದಕೆ ಮೋಡಿಮಾಡಿ

ಎಲ್ಲ ಸೇರಿಸಿ ಕಟ್ಟಿದೆನು ಗಂಟು
ಸರಿಯಾಗಿ ಜೋಡಿಸಿದೆ ಎಲ್ಲ ಹೊರೆಯನ್ನು
ಜಾರು ಬಂಡಿಯಲಿಟ್ಟು ಸಾಗಿಸಿದೆ ಮನೆಗೆ
ಉಗ್ರಾಣದಲಿಟ್ಟು ತುಂಬಿಸಿದೆ ಪೆಟ್ಟಿಗೆಗೆ

ಸದ್ದಿಲ್ಲದೆ ಬಹುಕಾಲ ಅವು ಇದ್ದವು ತಣ್ಣಗೆ
ಮರೆಯಾಗಿ ಕೋಣೆಯಲಿ ಕತ್ತಲೊಳಗೆ

ತರಬೇಕು ಕತ್ತಲಿಂದ ಹಾಡುಗಳ ಹೊರಗೆ
ತರಬೇಕು ತಣ್ಣಗಿನ ಮಂಜಿಂದ ಹೊರಗೆ
ಇಡಬೇಕು ಪೆಟ್ಟಿಗೆ ಚೆಲುವು ಸೂರಿನ ಕೆಳಗೆ

ಕಥೆ ತುಂಬಿದ ಪೆಟ್ಟಿಗೆ ತೆರೆಯಲೇನು
ಸಂಪತ್ತು ಭಂಡಾರ ತೋರಲೇನು
ಕಟ್ಟಿಟ್ಟ ಗಂಟನ್ನು ಬಿಚ್ಚಲೇನು

ಹಾಡುವೆನು ಬಲು ಅದ್ಭುತದ ಗೀತೆ
ಎಲ್ಲೆಲ್ಲಿಯೂ ಅದು ಮರುದನಿಸುವಂತೆ
ರೈಬ್ರೆಡ್ ತಿನ್ನುತ್ತ ಬಾರ್ಲಿಯ ಸೆರೆ ಕುಡಿಯುತ್ತ
ಬೇಡೆನಗೆ ನೀವು ಕೊಡದಿದ್ದರೂ ಪಾನೀಯ
ಇರದಿದ್ದರೂ ಸರಿಯೇ ಕುಡಿಯುವುದಕೆ ಸುರೆಮದ್ಯ
ಹಾಡುವೆನು ಹಾಗೆ ಗಂಟಲೊಣಗಿದರೂ
ಹಾಡುವೆನು ಬರಿ ನೀರು ಕುಡಿದಾದರೂ
ಸಂಜೆಗಳ ಸಂತಸ ಉಕ್ಕೇರುವಂತೆ
ದಿನದ ಸೌಂದರ್ಯ ಆನಂದ ತರುವಂತೆ

ಹಲವು ಕಥೆ ಕೇಳಿರುವೆ
ಕೇಳಿರುವೆ ಹೀಗೇ ಹಲವು ಹಾಡು
ಆಗೆಲ್ಲ ರಾತ್ರಿಗಳು ಒಂಟಿಯಂತೆ
ಬೆಳಗುತ್ತಿದ್ದ ಹಗಲೂ ಸಹ ಒಂಟಿಯಂತೆ
ವೆಯ್ನಾಮೊಯ್ನನ್ ಮಾತ್ರ ಹುಟ್ಟಿದ್ದನಂತೆ
ಅವನ ತಾಯಿ ಇಲ್ಮಾ ಮಾತೆಯಂತೆ
ಅವಳು ಗಾಳಿಯ ಮಗಳು ಹದಿನಾರರ ಹುಡುಗಿ
ಈ ಸೃಷ್ಟಿಯೊಳಗಿದ್ದ ಅತಿ ಸುಂದರ ಕುವರಿ
ಉಳಿದಳು ಬಹುಕಾಲ ಕನ್ನೆಯಾಗಿ
ಯಾರೊಬ್ಬರು ಜೊತೆಗಿರದೆ ಒಂಟಿಯಾಗಿ
ಗಾಳಿದೇವನ ಬಲುದೊಡ್ಡ ಮಹಲೊಳಗೆ
ಅವಳ ತಾರುಣ್ಯದ ನಿಡಿದಾದ ಹಗಲು
ಚಲಿಸುತಿಲ್ಲ ಕಾಲ ಉಸಿರಾಯಿತು ಭಾರ
ಕನ್ನೆಯಾಗುಳಿದಳು ಬಲು ದೀರ್ಘಕಾಲ

ಗಾಳಿ ದೇವನ ಬಲು ದೊಡ್ಡ ಮಹಲು
ನಿಡಿದಾದ ವಿಸ್ತಾರ ಬಂಜರಿನ ಬಯಲು

ತಾಳಲಾರದ ಬೇಗೆ ಅವಳಿಳಿದಳು ಕಡಲಿಗೆ
ಬೊಬ್ಬಿರಿವ ಅಲೆ ತುಂಬಿದ ಸಾಗರದ ಮೇಲೆ
ಮೇಲೆದ್ದಿತು ಬಿರುಗಾಳಿ ಬಲು ಭೀಕರವಾಗಿ
ಮೂಡಣದಿಂದ ಬಂತೊಂದು ಬಲು ಉಗ್ರಗಾಳಿ
ನೊರೆಗಟ್ಟಿದ ತೆರೆಗಳು ಕಡಲ ಮೈಮೇಲೆ
ಅಬ್ಬರಿಸಿ ಏರಿದವು ಎಂದಿಗಿಂತಲೂ ಮೇಲೆ

ಬೀಸಿ ಎಸೆಯಿತು ಗಾಳಿ ಆ ಕನ್ನೆಯನ್ನು
ನೂಕಿ ತಳ್ಳಿದವು ತೆರೆ ತರುಣಿಯನ್ನು
ಭೋರ್ಗರೆದು ಬೊಬ್ಬಿರುವ ಕಡಲಲೆಯ ಮೇಲೆ
ತರುಣಿಯಿದ್ದಳು ಎತ್ತರದ ಅಲೆ ತುದಿಯ ಮೇಲೆ

ಅಪ್ಪಳಿಸಿತು ಗಾಳಿ ಎಚ್ಚರಿಸಿತು ಕಡಲು
ಅವಳ ಬಸಿರೊಳಗೆ ಹೊಸ ಜೀವವನ್ನು
ಬಸಿರಹೊತ್ತಳು ಬೇನೆಯನು ತಿಂದಳು
ಏಳುನೂರು ವರ್ಷ ಬಲುದೀರ್ಘಕಾಲ
ಏಳು ನೂರೆಂಬುದು ಆಯುಷ್ಯದೊಂಬತ್ತು ಪಟ್ಟು
ಆದರೂ ಮಗುವೊಂದು ರೂಪುಗೊಳ್ಳಲಿಲ್ಲ
ಸಂತಾನ ಪುಷ್ಪ ಅರಳಲಿಲ್ಲ

ತಾಳಲಾರದ ಬೇನೆ ನೋವು ತುಂಬಿದ ಒಡಲು
ಕಡಲೆಲ್ಲ ಈಸಿದಳು
ಪೂರ್ವಕ್ಕೆ ಪಶ್ಚಿಮಕೆ
ಉತ್ತರಕೆ ದಕ್ಷಿಣಕೆ
ದಿಕ್ಕು ದಿಕ್ಕಿಗೆ ಅವಳು ಈಸಿಬಿಟ್ಟಳು ಕಡಲು
ಆದರೂ ಮಗುವೊಂದು ರೂಪುಗೊಳ್ಳಲಿಲ್ಲ
ಸಂತಾನ ಪುಷ್ಪ ಅರಳಲಿಲ್ಲ

ಸದ್ದಿಲ್ಲದೆ ಬಿಕ್ಕಿದಳು ಮೊರೆಯಿಟ್ಟು ದೇವರಿಗೆ
ನಾನೆಂಥ ನತದೃಷ್ಟೆ ಅಯ್ಯೊ ದುರ್ವಿಧಿಯೆ
ಸುಖವಿಲ್ಲದಲೆಯುತಿಹ ಕಂದ ನಾನು
ಎಸೆದು ತೂರುವ ಗಾಳಿ ಎತ್ತಿ ಎಸೆಯುವ ಅಲೆ
ಅಲೆದಲೆದು ಬಸವಳಿದು ಸೋತಿರುವೆ ನಾನು
ಬರಬಾರದಿತ್ತು ಈ ಕಡಲೊಳಗೆ ನಾನು

ಬೇಯುವುದೆ ಚೆನ್ನಿತ್ತು ಕನ್ನೆಯಾಗಿ
ಎತ್ತಿ ಎಸೆವಲೆಯಲ್ಲಿ ಇರುವುದಕಿಂತಲೂ ಹೀಗೆ
ತೇಲುತ್ತ ನೀರಲ್ಲಿ ಇರುವುದಕಿಂತಲೂ ಹೀಗೆ
ಬದುಕಿನಲಿ ಕಿಂಚಿತ್ತು ಉಲ್ಲಾಸವಿಲ್ಲ
ಬರಿ ನೋವುಯಾತನೆಯೇ ಇಲ್ಲಿ ತುಂಬಿದೆಯಲ್ಲ

ದೇವಾಧಿದೇವನೆ ಸ್ವರ್ಗವನ್ನಾಳುವನೆ
ಬಾರಯ್ಯ ಬಾ ಬೇಗ ಕರುಣೆಯನು ತೋರು
ಬಸಿರಯಾತನೆಯಿಂದ ನನ್ನ ಪಾರು ಮಾಡು
ಮೊರೆಯಿಟ್ಟು ಕಾಲ ಬಹಳವಾಗಿರಲಿಲ್ಲ
ಒಂದು ಕ್ಷಣವೂ ಕೂಡ ಇನ್ನು ಕಳೆದಿರಲಿಲ್ಲ
ಹಾರುತ್ತ ಬಂದಿತು ಚೆಲುವಾದ ಟೀಲೆ
ಸುತ್ತು ಹಾಕಿತು ಕಡಲಲೆಯ ಮೇಲೆ
ಅರಸುತ್ತ ತಾಣ ತಂಗಲೆಂದು
ಹುಡುಕುತ್ತ ಗೂಡು ವಾಸಕೆಂದು

ಮೂಡಣಕೆ ಹಾರಿತು ಪಡುವಣಕೆ ಹಾರಿತು
ಉತ್ತರಕೆ ದಕ್ಷಿಣಕೆ ದಿಕ್ಕು ದಿಕ್ಕಿಗೆ ಹಾರಿ
ಬೇಕಾದ ತಾಣ ಎಲ್ಲು ಸಿಗದಲ್ಲ
ಹಕ್ಕಿ ಕೂರಲೂ ಒಳ್ಳೆ ತಾಣವಿಲ್ಲ
ಹಾರುತ್ತ ಹಾರುತ್ತ ಮನದಲ್ಲಿ ಯೋಚಿಸಿತು
ಕಟ್ಟಲೇನು ಗೂಡು ಈ ಗಾಳಿಯಲ್ಲಿ
ಕಟ್ಟಲೇನು ಅಬ್ಬರಿಸುವ ನೀರಿನಲ್ಲಿ
ಮಗುಚಿ ಹಾಕದೆ ಗಾಳಿ ಪುಟ್ಟ ಗೂಡನ್ನು
ಮುಳುಗಿಸವೆ ಅಲೆ ನನ್ನ ಗೂಡನ್ನು

ಆಗ ಆ ನೀರುಗಳ ತಾಯಿ ವಾಯುಪುತ್ರಿ ಜಲಮಾತೆ
ಚಾಚಿದಳು ಮೊಣಕಾಲು ನೀರಿಂದ ಮೇಲೆ
ಚಾಚಿದಳು ಹೆಗಲನ್ನು ನೀರಲೆಯ ಮೇಲೆ
ಪುಟ್ಟ ಹಕ್ಕಿಗೆ ಒಳ್ಳೆ ಜಾಗಕೊಡಲೆಂದು
ಅದಕ್ಕೊಂದು ನೆಮ್ಮದಿಯ ತಾಣವಿರಲೆಂದು

ಕುಪ್ಪಳಿಸಿ ಬಂತು ಆ ಚೆಲುವ ಹಕ್ಕಿ
ಚಾಚಿತ್ತು ಮೊಣಕಾಲು ನೀಲಿ ತೆರೆ ಮೇಲೆ

ನಡುಗಡ್ಡೆಯೆಂದು ತಿಳಿದು ಕೊಂಡಿತು ಹಕ್ಕಿ
ಇಲ್ಲಿ ನಾ ಕೂರುವೆನು ಎಂದಿತಾ ಹಕ್ಕಿ
ತಡಮಾಡದೆ ಕಟ್ಟಿತು ಬೆಚ್ಚನೆಯ ಗೂಡು
ಇಟ್ಟಿತು ಬಂಗಾರ ತತ್ತಿಗಳು ಆರು
ಕಬ್ಬಿಣದ ತತ್ತಿ ಅದರಲೊಂದು

ಹಕ್ಕಿ ಕೊಟ್ಟಿತು ಕಾವು
ಒಂದಲ್ಲ ಎರಡಲ್ಲ ಮೂರು ದಿನಗಳ ಕಾವು
ನೀರಮಾತೆಗೆ ಗಾಳಿ ಕುವರಿಗೆ ತಟ್ಟುವಂತಹ ಕಾವು
ಚರ್ಮ ಬಿಸಿ ಏರಿತೋ ಮೊಣಕಾಲು ಸುಟ್ಟಿತೊ
ನರನರವೂ ಉರಿಬಿಸಿಗೆ ಕರಗಿಯೆ ಹೋಯಿತೊ
ತಾಳಲಾರದ ಬೇಗೆ ಝಾಡಿಸಿದಳು ಕಾಲು
ಉರುಳಿದವು ತತ್ತಿಗಳು ನೀರಿನೊಳಗೆ
ಸಿಡಿದು ಚೂರಾಗಿ ನೀರಿನೊಳಗೆ

ಏನದ್ಭುತ ಯಾವೊಂದು ಚೂರೂ ಹಾಳಾಗಲಿಲ್ಲ
ಸೋಜಿಗದ ಬದಲಾವಣೆ ಕಂಡು ಬಂತಲ್ಲ
ಭೂಮಿಯಾಯಿತು ತತ್ತಿ ಕೆಳಗಿನ ಚೂರು
ಮೇಲಿನದು ಬಾನು
ಹೊಳೆವ ರವಿಯಾಯ್ತು ಹಳದಿ ಭಂಡಾರ
ಬೆಳ್ಳಿ ಚಂದಿರನಾಯ್ತು ಬಿಳಿಯ ಲೋಳೆ
ಉಳಿದ ಚೂರೆಲ್ಲ ನಕ್ಷತ್ರ ತಾರೆ
ಕಪ್ಪು ಬಣ್ಣದ ಚೂರು ಮುಗಿಲಾಗಿ ತೇಲಿ
ಉರುಳಿ ಹೋಯಿತು ಕಾಲ
ವರ್ಷ ಕಳೆದವು ಬೇಗ

ಹೊಸ ರವಿಯ ಹೊಸ ಬೆಳಕು
ಹೊಸ ಚಂದ್ರನ ತಂಬೆಳಕು
ಪ್ರಶಾಂತ ವಿಶಾಲ ಕಡಲ ನೀರಿನಲ್ಲಿ
ತೇಲಿದಳು ಜಲಮಾತೆ ನಗುವನ್ನು ಚೆಲ್ಲಿ
ಚಲಿಸಿದವು ಅಲೆ ಮುಂದೆ ಮುಂದೆ
ವಿಸ್ತಾರ ಬಾನಂಚು ಬೆನ್ನ ಹಿಂದೆ

ಕಳೆದು ಹೋದವು ಹೀಗೆ ಒಂಭತ್ತು ವರ್ಷ
ಮುಗಿಯುತ್ತ ಬಂತು ಹತ್ತು ವರುಷ

ಮೇಲೆತ್ತಿದಳು ತಲೆಯನ್ನು ಕಡಲೊಳಗಿನಿಂದ
ಸೃಷ್ಟಿ ಕ್ರಿಯೆ ಆರಂಭ ಅಂದಿನಿಂದ
ಕೈ ತೋರಿದತ್ತ ಚಾಚಿದವು ಭೂಶಿರ
ಹೆಜ್ಜೆ ಇಟ್ಟಲ್ಲಿ ಮತ್ಸ್ಯ ಗಹ್ವರ
ನೀರೊಳಗೆ ಧುಮುಕಿದರೆ ಸಾಗರದ ಆಳ
ನೆಲದತ್ತ ತಿರುಗಿದರೆ ಕಡಲ ದಂಡೆ
ಇನ್ನೊಂದು ಹೆಜ್ಜೆಗೆ ಬಲೆ ಬೀಸುವ ತಾಣ
ತಲೆ ಇಟ್ಟ ಕಡೆಯೆಲ್ಲ ನೀರ್ಗಾಲುವೆ
ಮತ್ತೆ ಬಂದಳು ಅವಳು ಕಡಲ ತೆರೆ ಮೇಲೆ
ಹುಟ್ಟಿದವು ಕಡಲಲ್ಲಿ ಶಿಲೆ ಬಂಡೆ ಪರ್ವತ
ಕಣ್ಗೆ ಮರೆಯಾದ ಕಲ್ಲು ದಿಬ್ಬಗಳೆಷ್ಟೊ
ತಾಗಿ ಪುಡಿಯಾದ ಹಡಗುಗಳು ಎಷ್ಟೊ
ಇಲ್ಲಿಗೇ ಕೊನೆಯಾದ ನಾವಿಕರ ಬದುಕೆಷ್ಟೊ

ನಡುಗಡ್ಡೆ ದ್ವೀಪಗಳು ಶಿಲೆಯ ಬೆಟ್ಟಗಳು
ಆಗಸಕೆ ಆಧಾರ ಕೊಟ್ಟಂತೆ ಗಿರಿಶಿಖರ
ಚಿತ್ರ ಕೆತ್ತಿದ ಹಾಗೆ ಬಂಡೆಗಲ್ಲು
ನೀರು ಕೊರೆದಂತೆ ಬಂಡೆ ಸೀಳು
ಹುಟ್ಟಿರಲಿಲ್ಲ ಅವನು ವೆಯ್ನಾಮೊಯ್ನನ್
ಅಮರ ಚಾರಣನು ಹುಟ್ಟಿಲ್ಲವಿನ್ನೂ

ಅವನಿದ್ದ ತಾಯಿ ಬಸಿರಿನೊಳಗೆ
ಅಲ್ಲೆ ಬೆಳೆದಿದ್ದ ದೃಢ ಚಿತ್ತನಾಗಿ
ವಸಂತ ಮೂವತ್ತು ಶಿಶಿರ ಮೂವತ್ತು
ಅಲ್ಲೆ ಪ್ರಶಾಂತ ಕಡಲಿನೊಳಗೆ
ನೊರೆಗರೆವ ತೆರೆಯ ತೆಕ್ಕೆಯೊಳಗೆ

ಯೋಚಿಸಿದ ಇನ್ನೆಷ್ಟು ದಿನ ಇರಲಿ ಹೀಗೆ
ಮಬ್ಬು ಕತ್ತಲಿನ ಈ ಜಾಗದೊಳಗೆ
ಮಿಸುಗಾಟವಿಲ್ಲ ಇಕ್ಕಟ್ಟಿನೊಳಗೆ
ರವಿಯ ಬೆಳಕಿರದೆ ಚಂದ್ರ ದರುಶನವಿರದೆ

ಚಂದಿರನೆ ನೀನೆನಗೆ ದಾರಿಯನು ತೋರು
ಸೂರ್ಯ ದೇವನೆ ನನ್ನ ಬಿಡುಗಡೆಯ ಮಾಡು
ನಕ್ಷತ್ರ ತಾರೆಗಳೇ ದಿಕ್ಕು ತಿಳಿಸಿ
ಗೊತ್ತಿರದ ಬಾಗಿಲು ತಿಳಿಯದಿದೆ ಜಾಡು
ನನ್ನ ಹಿಡಿದಿಟ್ಟ ಈ ಪುಟ್ಟ ಗೂಡಿಂದ
ನಾನಿರುವ ಇಕ್ಕಟ್ಟು ಮನೆಯೊಳಗಿನಿಂದ
ಬರುವ ದಾರಿಯ ತೋರಿ ಕೃಪೆ ಮಾಡಿ ನನ್ನ
ಕರೆದುಕೊಳ್ಳಿರಿ ಬಯಲಗಾಳಿ ಬೆಳಕಿಗೆ ನನ್ನ
ಆಗಸದ ಚಂದಿರ ತೇಜಸ್ವಿ ಸೂರ್ಯ
ಸಪ್ತರ್ಷಿ ಮಂಡಲ ಚುಕ್ಕಿ ಗಗನ
ನಿಮ್ಮ ಚೆಂದವ ತೋರಿ ಕೃಪೆ ಮಾಡಿ ನನ್ನ

ಚಂದ್ರ ಕಿವಿಗೊಡಲಿಲ್ಲ ಅವನ ಮೊರೆಗೆ
ಸೂರ್ಯ ಬರಲಿಲ್ಲ ಅವನ ಬಿಡುಗಡೆಗೆ
ಸಂಕಟದ ಹೊರೆಯಾಯ್ತು ಬದುಕೆಲ್ಲ ಭಾರ
ಸರಿಸಿದನು ಬಾಗಿಲನು ನಾಲ್ಕನೆಯ ಬೆರಳಿಂದ
ಫಕ್ಕನೆ ತೆರೆಯಿತು ಎಲುಬು ಗೂಡಿನದ್ವಾರ
ಹೊಸ್ತಿಲಾಚೆಗೆ ಬಂತು ಎಡಗಾಲ ಬೆರಳು ಅದರ ಮೇಲುಗುರು
ಬಾಗಿಲನು ದಾಟಿತ್ತು ಆವನ ಮೊಣಕಾಲು
ಬಿದ್ದ ದುಡುಮ್ಮನೆ ನೀರಿನೊಳಗೆ

ಕೈಯಿಂದ ಬಡಿದ ಅಲೆಯ ಹಿಂದಕ್ಕೆ
ಹೀಗೇ ಅವನು ನಮ್ಮ ನಾಯಕನು
ಸಾಗರದ ಅಲೆಗಳಲಿ ತೇಲುತ್ತ ಇದ್ದ
ಐದು ವರ್ಷವೂ ಹೀಗೆ ತೇಲುತ್ತ ಇದ್ದ
ಹಸುರಿಲ್ಲದ ಬಂಜರಿನ ತಡಿಯೊಳಗೆ ಬಿದ್ದ
ಐದಲ್ಲ ಆರಲ್ಲ ಏಳಲ್ಲ ವರ್ಷ
ಹೀಗೆಯೇ ಕಾದಿದ್ದ ಎಂಟು ವರ್ಷ

ಮೊಣಕಾಲನೂರಿ ನೆಲದ ಮೇಲೆ
ತೋಳಿಗಿಟ್ಟು ತಲೆ ನೋಡಿದನು ಮೇಲೆ
ಚಂದಿರನ ಕಾಣಲು ರವಿಬೆಳಕ ಸವಿಯಲು

ಸಪ್ತರ್ಷಿ ಮಂಡಲ ಹೊಳೆವ ತಾರೆಯ ಗಗನ
ಮನದಣಿಯೆ ನೋಡಲು

ಇವನೇ ಪುರಾತನ ವೆಯ್ನಾಮೊಯ್ನನ್
ಅಮರ ಚಾರಣನು ಕ್ರಿಯಾಟ್ರಿಕ್ಸ್ ಸಂಜಾತ
ಇಲ್ಮತಾರ್ ಸುತನು ವೆಯ್ನಾಮೊಯ್ನನ್.

೨. ಬೀಜ ಬಿತ್ತಿದನು ವೆಯ್ನಾಮೊಯ್ನನ್

ಮೇಲೆದ್ದ ಅವನು ಅಡಿಯಿಟ್ಟ ನೆಲಕೆ
ಸುತ್ತ ಆವರಿಸಿದ ನೀರು ಬನವಿಲ್ಲದ ದ್ವೀಪ
ಸದ್ದಿರದ ನಿಶ್ಶಬ್ದ ದ್ವೀಪ ನಾಡು
ಒಂದೂ ಮರವಿರದ ಬಯಲು ಬಂಜರು ನಾಡು
ಈ ಬಂಜರು ಭೂಮಿಯನು ಬಿತ್ತುವರು ಯಾರು
ಬಿತ್ತನೆ ಬೀಜ ಚೆಲ್ಲುವರು ಯಾರು
ಪೆಲೆರ್ವೋನಿಯಸ್, ಭೂಮಿ ಪುತ್ರ
ಚಿಕ್ಕ ಆಕೃತಿಯ ಸ್ಯಾಂಪ್ಸ
ನಾನು ಬಿತ್ತುವೆನು ಬಂಜರನು ಎಂದ

ಮಣ್ಣಲ್ಲಿ ಜವುಗಲ್ಲಿ ಸಾಪಾಟು ಭೂಮಿಯಲಿ
ಗಟ್ಟಿ ಶಿಲೆ ಬಂಡೆ ಮರಳಿನಲ್ಲಿ
ಬೆಟ್ಟಗಳ ಮೇಲೆ ಪೈನ್ ಮರವ ಬಿತ್ತಿದ
ಫರ್ ಮರವನ್ನು ತಿಟ್ಟಿನಲ್ಲಿ
ಪೊದರುಗಳ ಬಿತ್ತಿದ ಮರಳಿನಲ್ಲಿ
ಎಲೆ ಬಿಡುವ ಸಸಿಗಳು ಕಣಿವೆಯಲ್ಲಿ
ಬರ್ಚ್ ಬೀಜ ಬಿತ್ತಿದ ಇಳಿಜಾರಿನಲ್ಲಿ
ಸಡಿಲ ಮಣ್ಣಲ್ಲಿ ಅಲ್ಡರ್‌ಗಳ ವೃಕ್ಷ
ಚೆರಿ ಗಿಡಗಳು ತನುವು ನೆಲದಲ್ಲಿ ಸ್ಯಾಲೊಗಳು ಜವುಗಿನಲ್ಲಿ
ರೋವನ್ ಮರ ಪವಿತ್ರ ಸ್ಥಳದಲ್ಲಿ
ವಿಲ್ಲೊ ಮರ ಜವುಗು ತಗ್ಗಲ್ಲಿ
ಜೂನಿಪರ್ ಮರ ಕಲ್ಲು ಮೊರಡಲ್ಲಿ
ಓಕ್ ವೃಕ್ಷ ನದಿಯ ದಂಡೆಯಲ್ಲಿ

ಸಸ್ಯ ಚಿಗುರಿದವು ಹುಲುಸಾಗಿ ಬೆಳೆದವು
ಹೂವು ತುಂಬಿದವು ಫರ್ ಮರಗಳಲ್ಲಿ
ರೆಂಬೆ ಚಾಚಿದವು ಪೈನ್, ಚಿಗುರಿದವು ಬರ್ಚ್ ಮರ
ವೆಯ್ನಾಮೊಯ್ನನ್ ದೃಢ ಚಿತ್ತ ಹಿರಿಯ
ಕೆಲಸವೆಷ್ಟಾಗಿದೆ ನೋಡಬಂದ
ಬೆಳೆದಿದ್ದವು ಸಸಿ ಮೊಳಕೆ ಒಡೆದು

ಜುಮಾಲದೇವನ ವೃಕ್ಷ ಓಕ್‌ಮರವು ಮಾತ್ರ
ಬೇರು ಇಳಿಸಿರಲಿಲ್ಲ ಬೀಜ ಮೊಳೆತಿರಲಿಲ್ಲ

ಆದರ ಪಾಡಿಗದು ಇರಲಿ ಬಿಡು ಎಂದ
ಕಾದು ನೋಡಿದ ಮೂರಿರುಳ ರಾತ್ರಿ
ಕಾದು ನೋಡಿದ ಆದರಷ್ಟೆ ಹಗಲು
ಆದರೂ ಜುಮಾಲಾನ ವೃಕ್ಷ ಓಕ್ ಮಾತ್ರ
ಬೇರು ಇಳಿಸಿರಲಿಲ್ಲ ಬೀಜ ಮೊಳೆತಿರಲಿಲ್ಲ

ಚೆಲುವ ಯುವತಿಯರು ನಾಲ್ಕು ಮಂದಿ
ಕೊಯ್ಯುತಿದ್ದರು ಹುಲ್ಲು ಕೀಳುತ್ತಿದ್ದರು ಕಳೆ
ಕಡಲಿಂದ ಮೇಲೆದ್ದನೊಬ್ಬ ದೈತ್ಯ
ಹಚ್ಚಿದನು ಬೆಂಕಿ ಹುಲ್ಲ ಹೊರೆಗೆ
ಉರಿಚಾಚಿದವು ಮೇಲೆ ಉಗ್ರವಾಗಿ
ಕಿಡಿ ಎಲ್ಲ ಆರಿ ತಣ್ಣಗಾಗಿ
ಎಲ್ಲವೂ ಸುಟ್ಟು ಬೂದಿಯಾಗಿ

ಬಿತ್ತಿದನು ಓಕ್ ಬೀಜ ಒಣ ಬೂದಿರಾಶಿಯಲಿ
ರೆಂಬೆ ಕೊಂಬೆಯ ಚಾಚಿ ಕವಲೊಡೆದು ಬೆಳೆದು
ಬೆಳೆಯುತ್ತ ಮರವು ಆಕಾಶ ಮುಟ್ಟಿ
ಬಾನ ತುಂಬೆಲ್ಲ ಹಸಿರೆಲೆಯ ಹರಡಿ
ಆಕಾಶದೆತ್ತರಕೂ ಆ ಮರವು ಬೆಳೆದು
ಮೋಡಗಳ ಹಾದಿಗೆ ತಡೆಯನ್ನು ಒಡ್ಡಿ
ಮರೆಮಾಡಿ ಬಿಟ್ಟಿತು ರವಿಯ ಬೆಳಕನ್ನು
ಮುಚ್ಚಿ ಹಾಕಿತು ಚಂದ್ರ ಬೆಳಕನ್ನು

ಹಿರಿಯ ವೆಯ್ನಾಮೊಯ್ನನ್ ಯೋಚಿಸಿದ ಹೀಗೆ
ಯಾರಿಲ್ಲವೇ ಈ ವೃಕ್ಷ ಉರುಳಿಸುವಂಥವರು
ದಾರುಣವಾಗಿದೆ ನರಜನರ ಬದುಕು
ಕಂಗೆಟ್ಟಿವೆ ಮತ್ಸ್ಯ ತೋಚದಿರೆ ದಿಕ್ಕು
ಬಾನಲ್ಲಿ ರವಿಬೆಳಕು ಕಾಣದಾಗಿ
ಹೊಳೆವ ಚಂದ್ರನ ಬೆಳಕು ಮರೆಯಾಗಿ ಹೋಗಿ

ಯಾರು ಸಿಗಲಿಲ್ಲ ಅಂಥ ಬಲಶೂರ
ನೂರುಕೊಂಬೆಯ ವೃಕ್ಷ ಬೀಳಿಸುವ ಧೀರ
ಹಿರಿಯ ವೆಯ್ನಾಮೊಯ್ನನ್ ಚಿಂತಿಸಿದ ಹೀಗೆ
ನನ್ನ ಹೆತ್ತಂಥ ತಾಯೇ ಪೊರೆದಂಥ ಸೃಷ್ಟಿ ಕುವರಿ
ಸಾಗರದ ಶಕ್ತಿಗಳನು ಕಳುಹಮ್ಮ ಇಲ್ಲಿ
ತಲೆ ಬೇನೆಯಾಗಿಹ ಈ ಮರ ಉರುಳಿಸಲು
ರವಿ ತೇಜ ಬೀಳಲಿ ನಮ್ಮ ಮೇಲೆ

ಎದ್ದನೊಬ್ಬನು ಪುರುಷ ಸಾಗರದ ಅಲೆಯಿಂದ
ಭಾರಿ ಎಂದರೆ ಭಾರಿ ಆಳಲ್ಲ
ಕುಬ್ಜನೆಂದರೆ ಕುಬ್ಜನೂ ಅಲ್ಲ
ಮನುಷ್ಯರ ಹೆಬ್ಬೆರಳಷ್ಟು ಅವನ ಗಾತ್ರ
ತಲೆ ಟೊಪ್ಪಿಗೆ ತಾಮ್ರ ಪಾದಕ್ಕೆ ಬೂಟು ತಾಮ್ರ
ಕೈಕಡಗ ತಾಮ್ರ ಕೈಗವಸಿನ ಸರಪಣಿಯೂ ತಾಮ್ರ
ಅವನ ಸೊಂಟದ ನಡು ಪಟ್ಟಿ ತಾಮ್ರ
ನಡುವಿನಲ್ಲಿಟ್ಟಿದ್ದ ಖಡ್ಗವೂ ತಾಮ್ರ
ಹೆಬ್ಬೆರಳಿನಷ್ಟುದ್ದ, ಅದರ ಹಿಡಿಕೆ
ಉಗುರಿನಷ್ಟುದ್ದ ಅದರ ಅಲಗು

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಯೋಚಿಸಿದ ಮನದಲ್ಲಿ ಸೋಗಿನ ವೀರನೋ ಇವನು
ಇಲ್ಲ ಎತ್ತರ ಹೆಬ್ಬೆರಳಿನುದ್ದ
ಇಲ್ಲವಲ್ಲ ಎತ್ತಿನ ಗೊರಸಷ್ಟು ಉದ್ದ
ಹೀಗೆ ನುಡಿದನವನು
ಯಾರಯ್ಯ ನೀನು ಕುಬ್ಜ ಮನುಜ
ಶೂರರಿಗೆ ಅಪವಾದವೆಂಬಂತೆ ಇರುವೆ
ಹೆಣ ಕೂಡ ನಿನಗಿಂತ ಬಲಶಾಲಿ ಏನೊ

ಸಾಗರದ ಕುಬ್ಜ ಹೊನಲುಗಳ ವೀರ ನುಡಿದ :
ನಿನಗೆ ಕಾಣುವಂತೆ ಮನುಷ್ಯನೇ ನಾನು
ಗಾತ್ರ ಅಲ್ಪ ಆದರೂ ಬಲವೀರ ನಾನು
ಬಂದಿರುವೆ ಓಕ್ ವೃಕ್ಷ ಉರುಳಿಸುವುದಕ್ಕೆ
ತುಂಡುತುಂಡಾಗಿ ವೃಕ್ಷ ಸೀಳಿ ಹಾಕುವುದಕ್ಕೆ

ದೃಢ ಚಿತ್ತಹಿರಿಯ ವೆಯ್ನಾಮೊಯ್ನನ್ ನುಡಿದ
ಈ ಓಕ್ ಮರವಿದೆ ನೋಡು ದೈತ್ಯ ಗಾತ್ರ
ನಿನ್ನಿಂದಾಗದು ಕೆಲಸ ನೀನಲ್ಪ ಗಾತ್ರ
ಮಾತು ಮುಗಿಸಿರಲಿಲ್ಲ ನೋಡುತ್ತಲೇ ಇದ್ದಂತೆ
ದೈತ್ಯನಾದನು ಕುಬ್ಜ, ಬಲಶಾಲಿ ವೀರ
ಭೂಮಿಗಪ್ಪಳಿಸುವ ಪಾದ
ಮುಗಿಲು ಮುಟ್ಟಿದ ಶಿರ
ಗಡ್ಡಮೊಣಕಾಲಿಗೆ ಕುರುಳು ಹಿಮ್ಮಡಿಗೆ
ಒಂದು ಯೋಜನದೂರ ಕಣ್ಣಿಂದ ಕಣ್ಗೆ

ಮಸೆದ ಕತ್ತಿಯನು ತುಂಬ ಚೂಪಾಗಿ
ಮಸೆದ ಅಲಗನ್ನು ತುಂಬ ಮೊನಚಾಗಿ
ಆರು ಬಂಡೆಯ ಮೇಲೆ ಮಸೆದನದನು
ಏಳು ಕಲ್ಲಿನ ಮೇಲೆ ಮಸೆದನದನು
ಹಗುರಾಗಿ ಇಟ್ಟ ಅವನಡಿಯ ಮುಂದೆ
ಒಂದು ಹೆಜ್ಜೆಗೆ ಬಂದ ಸಾಗರದ ತಡಿಗೆ
ನಾಡಿನೊಳಗಿದ್ದ ಇನ್ನೊಂದು ಅಡಿಗೆ
ಮೂರನೆಯ ಹೆಜ್ಜೆಗೆ ಓಕ್ ಮರದ ಬಳಿಗೆ

ಬಡಿದ ವೃಕ್ಷಕ್ಕೆ ಕೊಡಲಿಯಿಂದ
ಒಂದೇಟು ಎರಡೇಟು ಬೀಸಿದನು ಮೂರೇಟು
ಮೂರೇಟಿಗೆ ಮರ ಇಡಿಯಾಗಿ ಸೀಳಿ
ಸಿಡಿದುಹೋದವು ಕೊಂಬೆ ನೆಲಕೆ ಬಿದ್ದು
ಪೂರ್ವ ದಿಕ್ಕಿಗೆ ಕಾಂಡ, ತುದಿಯು ವಾಯುವ್ಯಕ್ಕೆ
ತೆಂಕಣಕೆ ಎಲೆರಾಶಿ ಬಡಗಣಕೆ ಕೊಂಬೆ
ಕೊಂಬೆಸಿಕ್ಕವಗೆ ಅಮಿತ ಐಶ್ವರ್ಯ
ತುದಿಯು ಸಿಕ್ಕವಗೆ ಮಾಯಮಂತ್ರದ ವಿದ್ಯೆ
ಎಲೆಕೊಂಬೆ ಆಯ್ದವಗೆ ಕೊನೆಯಿಲ್ಲದ ಒಲವು

ಉಳಿದ ಚೂರುಗಳು ತೊಗಟೆ ಸಿಬುರುಗಳು
ಹರಡಿ ಸಾಗರದಲ್ಲಿ ತೇಲಿದವು ಅಲೆಯಲ್ಲಿ
ಹಡಗುಗಳಿರುವಂತೆ ಅಲೆ ಮಧ್ಯದಲ್ಲಿ

ತೂರಿ ಹೋದವು ಚೂರು ಉತ್ತರದ ಕಡೆಗೆ
ಅಲ್ಲೊಬ್ಬಳು ಚನ್ನೆ ಪೊಹ್ಜಾದ ಕನ್ನೆ
ಜಾಲಾಡುತ್ತಿದ್ದಳು ಬಟ್ಟೆ ಮಳಲ ತಡಿಯಲ್ಲಿ
ಸಿಬುರುಗಳ ಕಂಡಳು ಕಡಲಲೆಯ ಮೇಲೆ
ಆಯ್ದಿಟ್ಟುಕೊಂಡಳು ಸಂದೂಕದೊಳಗೆ
ಮುಚ್ಚಿಟ್ಟಳು ಭದ್ರ ಉಗ್ರಾಣದೊಳಗೆ
ಆಗಬಹುದೆಂದು ಮಾಂತ್ರಿಕನ ಬಾಣಕ್ಕೆ

ಓಕ್ ವೃಕ್ಷ ಉರುಳಿತು ಮರವು ನೆಲಸಮವಾಯ್ತು
ಎಂದಿನೊಲು ಮತ್ತೊಮ್ಮೆ ಬೆಳಗಿದನು ಸೂರ್ಯ
ಆನಂದದ ಬೆಳಕನ್ನು ಚೆಲ್ಲಿದನು ಚಂದ್ರ
ಚಲಿಸಿದವು ಮೋಡಗಳು ಸ್ವಚ್ಛಂದವಾಗಿ
ಹೊಮ್ಮಿ ಮಳೆಬಿಲ್ಲು ಆಗಸದಿ ಬಾಗಿ

ಪಾಳು ಭೂಮಿಯ ಮೇಲೆಲ್ಲ ಪಚ್ಚೆ ಪೈರು
ಗಿಡಮರವು ಬಯಲಲ್ಲಿ ಹುಲುಸಾಗಿ ಬೆಳೆದು
ಹಾಡಿದವು ಹಕ್ಕಿಗಳು ಮರಮರಗಳಲ್ಲಿ
ಕೋಗಿಲೆಯ ಸುಸ್ವರವು ಮರದ ತುದಿಯಲ್ಲಿ
ತೂಗಿದವು ಹಣ್ಣು ಅರಳಿದವು ಹೂವು
ಎಲ್ಲ ಜಾತಿಯ ಗಿಡ ಹುಲುಸಾಗಿ ಬೆಳೆದು

ಆದರೇಕೋ ಬಾರ್ಲಿ ಹುಲುಸಾಗಲಿಲ್ಲ
ವೆಯ್ನಾಮೊಯ್ನನ್ ಯೋಚಿಸಿದ ಕಡಲ ದಂಡೆಯಲಿ
ಅತ್ತಿತ್ತ ಓಡಾಡಿ ಚಿಂತೆಯಲ್ಲಿ
ಧಾನ್ಯದ ಕಾಳಾರು ಕಂಡವವಗೆ
ಬಿತ್ತಬೇಕೆಂದ ಆ ಧಾನ್ಯವನ್ನು
ಮರದ ಮೇಲಿನ ಹಕ್ಕಿ ಹೀಗೆಂದು ಉಲಿಯಿತು
ಬೆಳೆಯುವುದಿಲ್ಲ ನೋಡು ಓಸ್ಮಾದ ಬಾರ್ಲಿ
ಹುಲುಸಾಗುವುದಿಲ್ಲ ಕಲೇವಾದ ಓಟ್ಸ್
ಉತ್ತಿಲ್ಲ ಭೂಮಿ ಸವರಿಲ್ಲ ಕಾಡು
ಹಸನು ಮಾಡಿಲ್ಲ ಬೆಂಕಿಯಲಿ ಸುಟ್ಟು

ಹಿರಿಯ ದೃಢಚಿತ್ತ ವೆಯ್ನಾಮೊಯ್ನನ್
ಕೊಡಲಿಯನು ಮಸೆದ ಹರಿತವಾಗಿ

ಸವರಿದನು ಕಾಡನ್ನು ಶ್ರಮಪಟ್ಟು ದುಡಿದು
ಒಳ್ಳೊಳ್ಳೆ ಮರವೆಲ್ಲ ಕಡಿದು ಹಾಕಿದನು
ಒಂದು ಮರವನು ಮಾತ್ರ ಹಾಗೆ ಉಳಿಸಿದನು
ಹಕ್ಕಿಗಳು ತಂಗಲು ತಾಣವಿರಲೆಂದು
ಮರದಿಂದ ಕೋಗಿಲೆ ಹಾಡಲೆಂದು

ಹಕ್ಕಿ ಜಾತಿಯಲೆಲ್ಲ ಬಲುದೊಡ್ಡ ಹಕ್ಕಿ
ಹಾರುತ್ತಿತ್ತು ಗರುಡ ಬಾನಿನಲ್ಲಿ
ಸುತ್ತೆಲ್ಲ ನೋಡಿತು ಅವನನ್ನು ಕೇಳಿತು
ಯಾಕಿನ್ನು ಈ ಮರವ ಹಾಗೆ ಉಳಿಸಿರುವೆ

ವೆಯ್ನಾಮೊಯ್ನನ್ ನುಡಿದ :
ಮರವನುಳಿಸಿರುವೆ ಹಕ್ಕಿಕೂರಲೆಂದು
ಅಲೆದಾಡುವ ಹಕ್ಕಿಗೆ ತಾಣವಿರಲೆಂದು
ಕೊಂಡಾಡಿತು ಅವನನ್ನು ಗರುಡ ಪಕ್ಷಿ
ಮಾಡಿರುವೆ ನೀನು ಬಲುಒಳ್ಳೆಯ ಕೆಲಸ
ಚೆಲುವಾದ ಮರವನ್ನು ಹಾಗೆ ಉಳಿಸಿರುವೆ
ಹಕ್ಕಿ ಬಂದಿಲ್ಲಿ ಕೂರಲೆಂದು
ನನಗೂ ಇಲ್ಲಿರಲಿ ತಾಣವೆಂದು

ಬೆಂಕಿಕೊಟ್ಟಿತು ಹಕ್ಕಿ ಬಿದ್ದ ಮರ ಸುಡಲು
ಧಗಧಗಿಸಿ ಉರಿಜ್ವಾಲೆ ಮೇಲಕೆದ್ದು
ಉತ್ತರದ ಗಾಳಿ ಈಶಾನ್ಯ ಗಾಳಿ
ಬೀಸಿ ಬಂದವು ಗಾಳಿ ಬಿರುಸಿನಿಂದ
ಎಲ್ಲ ಮರಸುಟ್ಟು ಬೂದಿಯಾಗಿ
ಎಲ್ಲ ಕಿಡಿ ಆರಿ ತಣ್ಣಗಾಗಿ

ಎರಚುತ್ತ ಬೀಜ ವೆಯ್ನಾಮೊಯ್ನಾನ್ ನುಡಿದ
ಫಲವತ್ತಾಗಲಿ ದೇಶ ಹುಲುಸಾಗಲಿ ಧಾನ್ಯ
ಕೆಳಲೋಕದ ಪಿತೃಗಳೆ ಬಯಲು ನಾಡ ಹಿರಿಯರೆ
ಓ ಭೂಮಿ ತಾಯೇ
ಎಳೆಯ ಸಸಿ ಚೆನ್ನಾಗಿ ಮೇಲೆ ಬರಲಿ
ಬೆಳೆವ ಪೈರಿಗೆ ನಿಮ್ಮ ಹರಕೆ ಇರಲಿ

ಕೈ ಬಿಡದು ಭೂಮಿ ನಮ್ಮನೆಂದೂ
ಪ್ರಸನ್ನರಾಗಿಹರು ಕೊಡುವ ಕೈಯವರು
ನೀಡುವರು ನೆರವನು ಸೃಷ್ಟಿ ಕುವರಿಯರು

ಎತ್ತರೆತ್ತರ ಬರಲಿ ಹಸಿರು ಧಾನ್ಯದ ಪೈರು
ತೆನೆ ಮೂಡಿ ಬರಲಿ ಸಾವಿರಾರು
ಉತ್ತಿದೆನು ಬಿತ್ತಿದೆನು ಶ್ರಮಪಟ್ಟು ದುಡಿದೆನು
ನನ್ನ ದುಡಿಮೆಗೆ ತಕ್ಕ ಫಲವು ಸಿಗಲಿ
ದೇವಾಧಿದೇವನೆ ಉಕೊ ಮಾದೇವನೆ
ಆಕಾಶವಾಸಿ ಚದುರಿದ ಮುಗಿಲೊಡೆಯ
ಎಲ್ಲ ಮುಗಿಲೂ ನಿನ್ನ ಅಧೀನವಯ್ಯ
ಎಲ್ಲ ಮೋಡವ ನೀನು ಒಂದುಗೂಡಿಸಯ್ಯ
ಪೂರ್ವದಿಂದೊಂದು ಮೋಡವನು ಕಳುಹಯ್ಯ
ವಾಯುವ್ಯದಿಂದೊಂದು ಕಳಿಸಿಕೊಂಡು ತಂದೆ
ಪಡುವಲಿಂದಿನ್ನಿಷ್ಟು ಕಳಿಸಿಕೊಡುದೇವ
ತೆಂಕುದಿಕ್ಕಿಂದಲೂ ಮೋಡ ಬರಲಿ ತಂದೆ
ಹಗುರ ಮಳೆ ಸುರಿಯಲಿ ಆಕಾಶದಿಂದ
ಜೇನು ಮಧು ಬಸಿಯಲಿ ಮುಗಿಲಿನಿಂದ
ಪೈರು ಮೊಳಕೆಗಳು ಬಲವಾಗಿ ಬೆಳೆವಂತೆ
ತೆನೆ ಮೂಡಿ ಬಳುಕಿ ತೂಗಾಡುವಂತೆ

ದೇವಾಧಿದೇವ ಆಕಾಶದೇವ
ಮೇಲಿನಾಗಸದ ತಂದೆಯವನು
ಮುಗಿಲುಗಳ ಕರೆಸಿದ ಅಪ್ಪಣೆಯ ಕೊಟ್ಟ
ಮೋಡವನು ಕಳುಹಿದ ಪೂರ್ವದಿಂದೊಂದು
ಮತ್ತೊಂದು ಕಳಿಸಿದ ವಾಯುವ್ಯ ದಿಕ್ಕಿಂದ
ಪಡುವಣದ ತೆಂಕಣದ ಮೋಡಗಳ ಕರೆಸಿದನು
ಮೋಡಗಳ ತುದಿಯಂಚು ಒಟ್ಟಾಗಿ ಬೆಸೆದನು
ಕಂಡಿ ಬಿಡದಂತೆ ಒತ್ತಾಗಿ ಬೆಸೆದನು
ಕಳುಹಿಸಿದ ಮಳೆಯನ್ನು ಆಕಾಶದಿಂದ
ಮೋಡಗಳು ಬಸಿದವು ಮಧುರ ಜೇನು

ಪೈರು ತಲೆ ಎತ್ತಿ ಬೆಳೆಯಲೆಂದು
ತೆನೆ ಮೂಡಿ ಬಳುಕಿ ತೂಗಾಡಲೆಂದು

ಕಳೆದು ಹೋದವು ದಿನವೆರಡು ಹೀಗೆ
ಎರಡು ರಾತ್ರಿಯ ಮೇಲೆ ಮೂರು ರಾತ್ರಿ
ಪೂರ್ಣವಾಯಿತು ಹೀಗೆ ಒಂದು ವಾರ
ಹಿರಿಯ ದೃಢ ಚಿತ್ತ ವೆಯ್ನಾಮೊಯ್ನನ್
ಶ್ರಮಕ್ಕೆ ಫಲ ಬಂದಿತೇ ನೋಡಬಂದ
ಬಾರ್ಲಿ ಬೆಳೆದಿತ್ತು ತೆನೆ ತುಂಬಿ ತೂಗಿತ್ತು

ಸುತ್ತೆಲ್ಲ ಅಡ್ಡಾಡಿ ನೋಡಿದನು ಅವನು
ವಸಂತದ ಕೋಗಿಲೆ ಕೇಳಿತವನನ್ನು
ಉಳಿಸಿರುವೆ ಯಾಕೆ ಬರ್ಚ್ ವೃಕ್ಷ ಮಾತ್ರ

ಹೇಳಿದನು ಹಿರಿಯ ವೆಯ್ನಾಮೊಯ್ನನ್ ಹೀಗೆ
ಪುಟ್ಟ ಕೋಗಿಲೆಯೇ ಈ ವೃಕ್ಷ ಉಳಿಸಿದೆನು
ನೀ ಬಂದು ಕುಳಿತಿಲ್ಲಿ ಹಾಡಲೆಂದು
ಉಸುಕು ಬಣ್ಣದ ನಿನ್ನ ಕೊರಳಿಂದ ಹಾಡು
ಬೆಳ್ಳಿ ದನಿಯಿಂದ ಜೋರಾಗಿ ಹಾಡು
ಬೆಳಗಿನಲಿ ಹಾಡು ಸಂಜೆಯಲಿ ಹಾಡು
ಮಧ್ಯಾಹ್ನವೂ ನಿನ್ನ ದನಿ ಎತ್ತಿ ಹಾಡು
ಸುತ್ತ ಬಯಲಲ್ಲಿ ಮೊಳಗಲೀ ಹಾಡು
ಕಾಡುಗಳು ಬೆಳೆಯಲಿ ಸಂತಸದಿ ಬೀಗಿ
ಸಮೃದ್ಧವಾಗಲಿ ಕಡಲ ತಡಿ ನಾಡು
ಫಲ ತುಂಬಿತೂಗಲಿ ಈ ನನ್ನ ನಾಡು.

೩. ವೆಯ್ನಾಮೊಯ್ನನ್ ಮತ್ತು ಯೊಕಾಹಿನನ್

ದೃಢಚಿತ್ತ ವೆಯ್ನಾಮೊಯ್ನನ್ ದಿನಗಳನು ಕಳೆದ
ವೆಯ್ನೊಲಾ ಸುಂದರ ಹುಲ್ಲುಗಾವಲಿನಲ್ಲಿ
ವಿಸ್ತಾರ ಕಲೆವಾಲಾ ಬಯಲು ನಾಡಲ್ಲಿ
ಕಟ್ಟಿಹಾಡಿದನು ಮಧುರಗಾನವನು
ಹೆಸರಾದ ಬಲುದೊಡ್ಡ ಗಾಯಕನು ಅವನು

ಹಗಲೆಲ್ಲ ಹಾಡಿದನು ದಣಿವರಿಯದೆ
ಇರುಳೆಲ್ಲ ಹಾಡಿದನು ತಡೆಯಿಲ್ಲದೆ
ಗತಕಾಲಗಳ ಕುರಿತು ಹಾಡು ಹಾಡಿದನು
ಈಗಿನ ಮಕ್ಕಳು ಹಾಡಲಾಗದ ಹಾಡು
ಈಗಿನ ಜನರು ಗ್ರಹಿಸಲಾರದ ಹಾಡು
ಮನುಕುಲವೇ ಕೊನೆಯಂಚು ತಲುಪಿದ್ದ ದಿನದಲ್ಲಿ
ಇಂಥ ನತದೃಷ್ಟ ಕಾಲದಲ್ಲಿ
ಜ್ಞಾನದ ಮಾತುಗಳ ಅರ್ಥೈಸಿ ಹಾಡಿದನು

ಹೆಸರು ಹಬ್ಬಿತು ದೂರ, ಲೋಕದ ಮಾತಾದನವನು
ಅವನ ಹಾಡಿನ ಖ್ಯಾತಿ ದಕ್ಷಿಣಕೂ ಹಬ್ಬಿತು
ಪೊಹ್ಜೊಲಾ ನಾಡಿಗೂ ಆ ಹೆಸರು ತಲುಪಿತು
ಪೊಹ್ಜೊಲಾದ ತರುಣ ಯೊಕಾಹಿನನ್
ಲ್ಯಾಪ್‌ಲ್ಯಾಂಡಿನ ಒಬ್ಬ ಸಾಮಾನ್ಯ ಯುವಕ
ವೆಯ್ನಾಮೊಯ್ನನ್ ಕೀರ್ತಿ ಬಿತ್ತವನ ಕಿವಿಗೆ
ಇದ್ದಾನೆ ತನ್ನನೂ ಮೀರಿದವನೊಬ್ಬ
ತನಗೆ ತಂದೆ ಕಲಿಸಿದುದ ಮೀರಿದವನೊಬ್ಬ
ವೆಯ್ನೊಲಾ ಸುಂದರ ಹುಲ್ಲುಗಾವಲಿನಲ್ಲಿ
ಕಲೆವಾಲಾ ಕುರುಚಲಿನ ಬಯಲಿನಲ್ಲಿ

ವೆಯ್ನಾಮೊಯ್ನನ್ ಕೀರ್ತಿ ರುಚಿಸಲಿಲ್ಲ
ಎದೆಯಲ್ಲಿ ಅಸೂಯೆ ಉರಿದೆದ್ದಿತಲ್ಲ
ತಾಯ ಬಳಿ ಹೋಗಿ ಹೀಗೆ ಹೇಳಿದನು
ಸೋಲಿಸುವೆ ನಾನು ವೆಯ್ನೊಲಾದವನನ್ನು

ಬೇಡವೆಂದನು ತಂದೆ ಬೇಡವೆಂದಳು ತಾಯಿ
ಹೋಗಬೇಡಲ್ಲಿಗೆ ಸ್ಪರ್ಧೆ ಬೇಡ
ನಿನ್ನ ಸೋಲಿಸುವನವನು ಬಾಯ ಮುಚ್ಚಿಸುವನು
ಹಿಮದೊಳಗೆ ನಿನ್ನ ತಲೆ ಹುಗಿದು ಹಾಕುವನು
ಬಿರುಗಾಳಿಯಲಿ ನಿನ್ನ ಕಟ್ಟಿ ಹಾಕುವನು
ಹಿಮದಲ್ಲಿ ಮರಗಟ್ಟಿ ಕಲ್ಲಾಗುವೆ ನೀನು

ಒಳ್ಳೆ ಮಾತನೇ ಹೇಳಿರುವೆ ತಂದೆ
ಒಳ್ಳೆ ನುಡಿಯನೇ ನುಡಿದಿರುವೆ ತಾಯೆ
ಆದರೂ ಸ್ಪರ್ಧಿಸುವುದೇ ಸರಿಯಾಗಿದೆ ನನಗೆ
ಹೇಳುವೆನು ನಾನು ನನ್ನ ಹಾಡು
ಪಠಿಸುವೆನು ನಾನು ನನ್ನ ಮಂತ್ರ

ಒಳ್ಳೊಳ್ಳೆ ಚಾರಣರು ಕಳಪೆ ಅನ್ನಿಸಬೇಕು
ಕಲ್ಲು ಬೂಟವಗೆ ತೊಡಿಸಬೇಕು
ತೊಡಿಸುವೆನು ತಪ್ಪದೆಯೆ ನಾಠಿನುಡುಗೆ
ಕಲ್ಲು ಹೇರುವೆ ಎದೆಗೆ ಬಂಡೆಯನು ಹೆಗಲಿಗೆ
ಕೈಗವಸು ಹಿಮದಲ್ಲಿ ಕಲ್ಲಾಗಬೇಕು
ತಲೆಗಾಪು ಹಿಮದಲ್ಲಿ ಕಲ್ಲಾಗಬೇಕು

ಕಿವಿಗೊಡದೆ ಹಿತನುಡಿಗೆ ಹೊರಬಂದನವನು
ಬೆಂಕಿ ಉಗುಳುವ ಕುದುರೆ ಹಿಡಿ ತಂದನು
ಕಟ್ಟಿದನು ಬಂಡಿಗೆ ಬೆಂಕಿ ಕುದುರೆಯನು
ಕುಳಿತು ಬಂಡಿಯಲಿ ಚಾಟಿ ಬೀಸಿದನು
ಹೊಡೆದನಪ್ಪಳಿಸಿ ಮುಳ್ಳು ಚಾಟಿಯನು
ಚಿಮ್ಮಿ ಓಡಿತು ಕುದುರೆ ಬಹಳ ತ್ವರೆಯಿಂದ

ಬಂಡಿ ಓಡಿತು ಮುಗಿಲು ಗುಡುಗಾಡಿದಂತೆ
ದಿನವೊಂದು ದಿನವೆರಡು ದಿನ ಮೂರು ಕಳೆದು
ಬಂದಿಳಿದನಲ್ಲಿ ದಿನ ಮೂರರ ಕೊನೆಗೆ
ಚೆಲುವಾದ ವೆಯ್ನೊಲಾ ಹುಲ್ಲುಗಾವಲಿನಲ್ಲಿ
ಕಲೆವಾಲಾ ಕುರುಚಲಿನ ಬಯಲಿನಲ್ಲಿ

ದೃಢಚಿತ್ತ ಹಿರಿಯ ವೆಯ್ನಾಮೊಯ್ನನ್
ಮಂತ್ರವಾದಿಗಳಲೆಲ್ಲ ಹಿರಿಯನವನು

ಹೊರಟಿದ್ದ ವೆಯ್ನೊಲಾ ಹುಲ್ಲುಗಾವಲಿನಲ್ಲಿ
ಕಲೆವಾಲಾ ಕುರುಚಲಿನ ಬಯಲಿನಲ್ಲಿ

ಎದುರಾಗಿ ಬಂದನು ತರುಣ ಯೊಕಾಹಿನನ್
ಘರ್ಷಣೆ ತಾಗಿದವು ಒಂದಕೊಂದು
ಜೇನುಗಳು ತೊಡಕಿದವು ಒಂದರಲ್ಲೊಂದು
ಭುಜಕೆ ಭುಜ ತಾಕಿ ಬಂಡಿ ಹಲಗೆಯು ತಾಕಿ
ತಾವಿಲ್ಲ ಹೋಗಲು ನಿಂತರಡ್ಡ
ಬೆವರು ಸುರಿದಿತ್ತು ಈಟಿ ಹೊಗೆ ಸೂಸಿತ್ತು

ಹಿರಿಯ ವೆಯ್ನಾಮೊಯ್ನನ್ ಕೇಳಿದನು ಹೀಗೆ
ಯಾರಯ್ಯ ನೀನು ಯಾವ ಮನೆತನದವನು
ಎಚ್ಚರಗೇಡಿ ನೀ ಬಂಡಿ ಓಡಿಸುವನು
ಮುರಿದು ಹಾಕಿದೆಯಲ್ಲ ಕುದುರೆ ಹೆಗಲನ್ನು
ಮುರಿದಿರುವೆ ಹಲಗೆಯನು ನಾ ಬಂದ ರಥವನ್ನು

ಯೊಕಾಹಿನನ್ ಎಂಬುದು ನನ್ನ ಹೆಸರಯ್ಯ
ನಿನ್ನ ಹೆಸರನೂ ನೀನು ಹೇಳಬೇಕಯ್ಯ
ಯಾವ ಕುಲದವನು ಯಾವ ನಾಡವನು
ಯಾವ ನೀಚಕುಲದಿ ಜನಿಸಿದವ ನೀನು

ಮರೆಮಾಚಲಿಲ್ಲ ಹೆಸರು, ಹೇಳಿದ ವೆಯ್ನಾಮೊಯ್ನನ್
ಯುವಕನೇ ಯೊಕಾಹಿನನ್
ನಿಲ್ಲಯ್ಯ ಬದಿಗೆ ಸರಿದತ್ತ ಸ್ವಲ್ಪ
ನನಗಿಂತ ಚಿಕ್ಕವನು ಇಡು ಆದರ ನೆನಪ

ತರುಣ ಉತ್ತರಿಸಿದ
ವಯಸ್ಸಿನ ಮಾತೆಲ್ಲ ತರಬೇಡವಿಲ್ಲಿ
ಚಿಕ್ಕವರು ದೊಡ್ಡವರು ಮುಖ್ಯವಲ್ಲ
ಯಾರ ಜ್ಞಾನವು ಹೆಚ್ಚೊ ಯಾರ ಬುದ್ಧಿಯು ಹೆಚ್ಚೊ
ಮೊದಲವನು ಹೋಗಲಿ ನಡೆದು ಮುಂದೆ
ನಿಲ್ಲಲಿನ್ನೊಬ್ಬ ಸರಿದು ಹಿಂದೆ

ವೆಯ್ನಾಮೊಯ್ನನ್ ಎಂಬುವನೇ ಆಗಿದ್ದರೆ ನೀನು
ಚಾರಣರಲೆಲ್ಲ ಅತಿ ಹಿರಿಯನೆಂಬುವನು

ಹೇಳೋಣ ಹಾಡು ಪಠಿಸೋಣ ಮಂತ್ರ
ನೋಡೋಣ ಯಾರಿಗೆ ಯಾರು ಕಲಿಸುವರೊ
ನೋಡೋಣ ಯಾರನ್ನು ಯಾರು ಮೀರುವರೊ

ದೃಢಚಿತ್ತ ಹಿರಿಯ ವೆಯ್ನಾಮೊಯ್ನನ್ ನುಡಿದ
ಇನ್ನೇನು ಉಳಿದಿದೆ ಸಾಧಿಸಲು ನಾನು
ಜ್ಞಾನಿಯಾಗಿ ಅಥವಾ ಹಾಡಿನವನಾಗಿ
ಸದ್ದಿಲ್ಲದೆ ಕಳೆದಿರುವೆ ನನ್ನ ಬದುಕನ್ನು
ಕುರುಚಲಿನ ಬಯಲಲ್ಲಿ ನಾ ಹುಟ್ಟಿದ ನೆಲದಲ್ಲಿ
ಕೇಳಿರುವೆ ಕೋಗಿಲೆಯ ಗಾನವನ್ನು
ಸದ್ಯಕಿಷ್ಟೆ ನೋಡು ಇಲ್ಲ ಇನ್ನೇನೂ
ಹೇಳಯ್ಯ ನೀನೀಗ ನಿನ್ನ ಹೆಚ್ಚಳವೇನು
ಯಾವ ವಿಷಯದಿ ನೀನು ಹೆಚ್ಚು ಪಾರಂಗತನು

ತರುಣ ಯೊಕಾಹಿನನ್ ಹೇಳಿದನು ಹೀಗೆ
ತಿಳಿದಿರುವೆ ನಾನೆಲ್ಲ ಪೂರ್ಣವಾಗಿ
ಎಲ್ಲವೂ ಗೊತ್ತೆನಗೆ ಸ್ಪಷ್ಟವಾಗಿ
ಹೊಗೆ ಚಿಮಣಿ ಇರುತ್ತದೆ ಮನೆ ಸೂರಿನಲ್ಲಿ
ಉರಿಬೆಂಕಿ ಇರುತ್ತದೆ ಒಲೆಗೂಡಿನಲ್ಲಿ

ಕಡಲ ನಾಯಿಯ ಬದುಕು ಸಂತೃಪ್ತಬದುಕು
ಅದು ಹಿಡಿದು ತಿನ್ನುವುದು ಸಾಲ್ಮನ್ ಮೀನನು
ಸುತ್ತುವರೆದಿರುವ ಪೊನನ್ ಮೀನನ್ನೂ
ರಭಸವಿಲ್ಲದ ನೀರು ಪೊವನ್‌ಗಳಿಗೆ ಇಷ್ಟ
ಸಾಲ್ಮನ್‌ಗೂ ಕೂಡ ಅದೆ ತಾಣ ಇಷ್ಟ
ಮೊಟ್ಟೆ ಇಡುತ್ತದೆ ಪೈಕ್ ಹಿಮರಾಶಿಯಲ್ಲಿ
ಲೋಳೆ ಮೀನಿಡುತ್ತದೆ ಚಳಿಗಾಲದಲ್ಲಿ
ತುಂಬ ಜಡ ಪರ್ಚ್ ಮೀನು ಬೆನ್ನದರದು ಗೂನು
ಈಜುವುದು ಶರತ್ಕಾಲದಲ್ಲಿ ಆಳ ನೀರಲ್ಲಿ
ದಡಕೆ ಬಂದಿಡುವುದು ಮೊಟ್ಟೆ ಬೇಸಿಗೆಯಲ್ಲಿ

ಸಾಕಾಗದಿದ್ದರೆ ಇಂತಿಷ್ಟು ವಿಷಯ
ಹೇಳುವೆನು ಕೇಳಿಕೊ ಇನ್ನಷ್ಟು ವಿಷಯ
ಎಲ್ಲ ವಿಷಯದಲ್ಲೂ ಬಲು ಜಾಣ ನಾನು
ಬಲು ದೊಡ್ಡ ವಿಚಾರಗಳ ತಿಳಿದಿರುವೆ ನಾನು

ಉಳುಮೆ ಉತ್ತರದಲ್ಲಿ ಸಾರಂಗದಿಂದ
ಉಪಯುಕ್ತ ದಕ್ಷಿಣದಿ ಹೇಸರಗತ್ತೆ
ಕಡವೆಯೇ ಸರಿ ನೋಡು ಲ್ಯಾಪ್‌ಲ್ಯಾಂಡಿನಲ್ಲಿ

ಪೀಸಾ ಪರ್ವತದ ವೃಕ್ಷಗಳು ಗೊತ್ತು
ಹೊರ್ನಾ ಶಿಲೆ ಬಂಡೆ ಮರಗಳೂ ಗೊತ್ತು
ಮೂರು ಜಲಪಾತಗಳ ಹೆಸರನಗೆ ಗೊತ್ತು
ಎಷ್ಟೆಷ್ಟು ಸರೋವರವೋ ಅಷ್ಟೂ ಗೊತ್ತು
ಹೇಮ್‌ನಲ್ಲಿ ಇಹುದು ಹಾಲ್ಯಾಪ್ಯೂರಾ
ಕರ್ಜಾಲಾದಲ್ಲಿ ಕಾಟ್ರಾಕೊಸ್ಕಿ
ಇದ್ಯಾವುದೂ ಅಲ್ಲ ಸರಿಸಾಟಿ ಅದಕೆ
ಇಮಾತ್ರಾನದಿಯ ವುವೋಸ್ಕಿ ಜಲಪಾತಕ್ಕೆ

ಹಿರಿಯ ವೆಯ್ನಾಮೊಯ್ನನ್ ನುಡಿದ
ತರವಲ್ಲ ಶಿಶುಕಥೆ ತರವಲ್ಲ ಸ್ತ್ರೀ ಬುದ್ಧಿ
ಗಡ್ಡವಿಹ ಪುರುಷರಿಗೆ ವಿವಾಹಿತ ಗಂಡಸರಿಗೆ
ಹೇಳು ಏನಾದರೂ ಘನವಾದ ಮಾತು
ಚಿರಂತನ ವಿಷಯ ವಿಚಾರಗಳ ಮಾತು

ತರುಣ ಯೊಕಾಹಿನನ್ ಹೇಳಿದನು ಆಗ
ಟಿಟ್‌ಮೌಸ್ ಎಂಬುದು ಹಕ್ಕಿ, ವೈಪರ್ ಎಂದರೆ ಹಾವು
ರಫೆ ಎಂಬುವುದು ನೀರೊಳಗಿನ ಮೀನು
ಕಬ್ಬಿಣವೆಂಬುದು ಬಲು ಕಠಿಣ ಲೋಹ
ಕಪ್ಪಗಿನ ಮಣ್ಣಲ್ಲಿ ಹೆಚ್ಚು ಕ್ಷಾರ

ಕೈ ಇಟ್ಟರೆ ಸುಡುವುದು ಕುದಿವಂಥ ನೀರು
ಅದಕಿಂತಲೂ ಹೆಚ್ಚು ಉರಿ ಬೆಂಕಿ ಕಾವು
ನೀರೆಂಬುದು ನೋಡು ಪುರಾತನದೌಷಧ
ಜಲಪಾತದನೊರೆ ಒಳ್ಳೆ ಮಂತ್ರ ಮದ್ದು
ಸೃಷ್ಟಿಕರ್ತನೆ ಸ್ವತಃ ಗಾರುಡಿಗ ವೈದ್ಯ
ಜುಮಾಲನೆ ದೊಡ್ಡ ಮಾಟಗಾರ

ಚಿಮ್ಮುವುದು ನೀರು ಬಂಡೆಯಿಂದ
ಇಳಿಯುವುದು ಬೆಂಕಿ ಆಕಾಶದಿಂದ

ಸಿಕ್ಕುವುದು ಆದಿರಲ್ಲಿ ಕಬ್ಬಿಣದ ಲೋಹ
ಇಹುದು ಬೆಟ್ಟದಲಿ ತಾಮ್ರ ಲೋಹ
ಜವುಗು ನಾಡೇ ಪ್ರಾಚೀನ ಮೊದಲ ಮರ ವಿಲ್ಲೊ
ಪೈನ್‌ಮರದ ಪೊಟರೆಗಳೇ ಪುರಾತನ ವಸತಿಗಳು
ಕಲ್ಲಿಂದ ಮಾಡಿದವು ಮೊದಲಿದ್ದ ಮಡಕೆಗಳು

ಹಿರಿಯ ದೃಢಚಿತ್ತ ವೆಯ್ನಾಮೊಯ್ನನ್ ನುಡಿದ
ನೀನು ಗಳಹುವುದಿನ್ನು ಏನಾದರಿದೆಯೊ
ತಿಳಿಗೇಡಿ ನುಡಿಗಳಿಗೆ ಇಲ್ಲಿಗೇ ಕೊನೆಯೊ

ಯೊಕಾಹಿನನ್ ನುಡಿದ :
ಅಲ್ಪ ವಿಷಯಗಳು ಕೆಲವು ನೆನಪಾಗುತ್ತವೆ ನನಗೆ
ಸಾಗರವ ಉತ್ತಿದೆ ಕಡಲಾಳ ಬಗೆದೆ
ಮೀನುಗಳ ವಾಸಕ್ಕೆ ಸ್ಥಳ ಮಾಡಿಕೊಟ್ಟೆ
ಆಳ ಪಾತಾಳ ಮುಟ್ಟಿ ಸರೋವರ ನಿರ್ಮಿಸಿದೆ
ಗುಡ್ಡ ಬೆಟ್ಟ ಕೂಡಿಸಿ ಪರ್ವತಗಳ ರೂಪಿಸಿದೆ

ಆರು ಮಹಾವೀರರಲಿ ಏಳನೆಯವ ನಾನು
ಧರೆ ಸೃಷ್ಟಿ ಆದಿಯಲಿ ಬಾನು ವಿಸ್ತರಿಸುವ ಮೊದಲು
ಬಾನಾಸರೆಗೆ ಕಂಬ ನಿಲ್ಲಿಸಿದೆ ನಾನು
ಆಗಸದ ಮಳೆಬಿಲ್ಲು ರೂಪಿಸಿದೆ ನಾನು
ಚಂದಿರನ ಪಥವನ್ನು ನಿಯಮಿಸಿದೆ ನಾನು
ರವಿಯ ಚಲನೆಗೂ ದಾರಿ ತೋರಿದೆನು ನಾನು
ಸಪ್ತರ್ಷಿ ಮಂಡಲಕೆ ಸ್ಥಳ ಗೊತ್ತು ಮಾಡಿದೆನು
ಆಗಸದ ತುಂಬೆಲ್ಲ ತಾರೆಗಳ ಹರಡಿದೆನು

ದೃಢ ಚಿತ್ತ ಹಿರಿಯ ವೆಯ್ನಾಮೊಯ್ನನ್ ನುಡಿದ
ಎಂಥ ಲಜ್ಜೆಗೇಡಿಯೊ ನೀನು ಸುಳ್ಳುಗಾರ
ಸಾಗರ ಬಗೆದಾಗ ಆಳ ನಿರ್ಮಿಸಿದಾಗ
ಪಾತಾಳ ಮುಟ್ಟಿ ಮೀನಿಗೆ ತಾಣ ಮಾಡಿಕೊಟ್ಟಾಗ
ಸರೋವರಗಳಾದಾಗ ಬೆಟ್ಟಗಳು ಕೂಡಿ ಪರ್ವತಗಳಾದಾಗ

....

ನೀನಿದ್ದಿರಲೂ ಇಲ್ಲ ನಿನ್ನ ಕಂಡವರೂ ಇಲ್ಲ

ಯೊಕಾಹಿನನ್ ನುಡಿದ
ಗೊತ್ತಿಲ್ಲ ನನಗೇನು ಎನ್ನುವಿಯೊ ನೀನು
ಗೊತ್ತು ಮಾಡುವೆ ಕತ್ತಿ ಮೊನೆಯಿಂದ ನಾನು
ಅಯ್ಯಾ ಮುದುಕ ಬಡಾಯಿಯ ಗಾಯಕ
ಕತ್ತಿಗಳೇ ಅಳೆಯಲಿ ನಮ್ಮ ಸತ್ವ
ನಿರ್ಧರಿಸಲಿ ಅಲಗು ನಮ್ಮ ಶೌರ್ಯ

ವೆಯ್ನಾಮೊಯ್ನನ್ ಹಿರಿಯ ಹೇಳಿದನು ಹೀಗೆ
ಹೆದರುವುದಕೇನಿಲ್ಲ ನಿನ್ನ ಕತ್ತಿಗೆ ನಾನು
ನಿನ್ನ ಜ್ಞಾನಕೆ ನಾನು
ಆದರೂ ಹಿಡಿಯೆನು ನಿನ್ನೆದುರು ಕತ್ತಿ
ನೀನೊಬ್ಬ ಅಲ್ಪ, ಕರುಣೆಗೆ ತಕ್ಕ ನಿಃಶಕ್ತ

ತಿರುಚುತ್ತ ಬಾಯಿ ವಕ್ರವಾಗಿ ಸರಿಸುತ್ತ ಹಿಂದೆ ಕಪ್ಪು ಕುರುಳು
ಯೊಕಾಹಿನನ್ ನುಡಿದ
ನನ್ನಿಂದ ಸೋತವನ ಹಂದಿ ಮಾಡುವೆ ನಾನು
ಎಷ್ಟೊ ವೀರರನು ಸೋಲಿಸಿಹೆ ನಾನು
ಸೋತವರ ಎಸೆಯುವೆನು ಸಗಣಿ ತಿಪ್ಪೆಗಳಿಗೆ
ಮುಲುಗಿಕೊಂಡಿರುವಂತೆ ಕೊಟ್ಟಿಗೆಯ ಮೂಲೆಗೆ

ಕೋಪ ಉಕ್ಕಿತು ಹಿರಿಯ ವೆಯ್ನಾಮೊಯ್ನನ್‌ಗೆ
ಕೂಡಲೆ ತೊಡಗಿದ ಮಂತ್ರ ನುಡಿ ಪಠಣಕ್ಕೆ
ಜ್ಞಾನ ವಚನದ ನುಡಿ ಮಾತುಗಳಿಗೆ
ಮಕ್ಕಳ ತೊದಲಲ್ಲ ಅವನು ಹಾಡಿದ್ದು
ಹೆಂಗಸರ ವಿನೋದ ಪದವಲ್ಲ ಅವನದು
ಹಾಡಿದನು ಗಡ್ಡವಿಹ ವೀರರಿಗೆ ತಕ್ಕಂತೆ
ಚಿಕ್ಕವರಿಗೆ ಅದು ಸಾಧ್ಯವಲ್ಲದ ಹಾಡು
ಆದರಲರ್ಧದಷ್ಟೂ ಅವರು ಕಲಿಯಲಾರದ ಹಾಡು
ಪ್ರೇಮಿಗಳ ರಚನೆಗೂ ನಿಲುಕಲಾರದ ಹಾಡು
ಈ ದುರ್ದಿನದ ಯುಗದಲ್ಲಿ
ಬದುಕು ಕೊನೆಯಂಚು ತಲುಪುತಿರುವಲ್ಲಿ

ಹಿರಿಯ ವೆಯ್ನಾಮೊಯ್ನನ್ ಹಾಡಿದನು ಹಾಡು
ನದಿಗಳುಕ್ಕಿದವು ಕಂಪಿಸಿತು ಭೂಮಿ

ನಡುಗಿದವು ಪರ್ವತ ಮರುದನಿಸಿ ಶಿಲೆಗಲ್ಲು
ಸೀಳಿದವು ಪರ್ವತ ಎರಡು ಹೋಳಾಗಿ
ಕಡಲ ದಂಡೆಯ ಕಲ್ಲು ಜೋರಾಗಿ ನಡುಗಿ

ಮಂತ್ರ ಹಾಕಿದನವನು ಯೊಕಾಹಿನನ್‌ಗೆ
ಸಸಿಯ ಗಿಡವಾಯ್ತು ಬಂಡಿ ಹಲಗೆ
ವಿಲ್ಲೊ ಮರವಾಯ್ತು ನೊಗದ ಪಟ್ಟಿ
ಆಲ್ಡರ್ ಮರವಾಯ್ತು ಅಶ್ವ ಕಡಿವಾಣ
ನದಿಯಾಗಿ ಹರಿಯಿತು ಸ್ವರ್ಣ ಬಂಡಿ
ಜೊಂಡುಗಿಡವಾಯ್ತು ಮುಳ್ಳು ಚಬುಕು
ಬಿಳಿಚುಕ್ಕೆಯ ಕುದುರೆ ನೀರ ಬದಿಕಲ್ಲು

ಮಂತ್ರ ಪಠಿಸಿದನು ವೆಯ್ನಾಮೊಯ್ನನ್
ಸ್ವರ್ಣ ಹಿಡಿಕೆಯ ಕತ್ತಿ ಆಗಸದ ಮಿಂಚಾಗಿ
ಅಡ್ಡ ಬಿಲ್ಲವನದು ಮಳೆಯ ಬಿಲ್ಲಾಗಿ
ಪುಚ್ಛ ಶರಗಳು ಹಾರು ಹಕ್ಕಿಯಾಗಿ
ಮುಸುಡಿ ಮೇಲೆತ್ತಿದ ನಾಯಿ ಹಾಗೇ ಕಲ್ಲಾಗಿ

ತಲೆಯ ಮೇಲಿನ ಟೊಪ್ಪಿ ಮೋಡವಾಗಿ
ಕೈಗವಸು ನೈದಿಲೆಯ ಪುಷ್ಪವಾಗಿ
ನೀಲಿ ತುಪ್ಪಳ ಕೋಟು ಹಿಂಜಿ ಮುಗಿಲಾಗಿ
ಕಿತ್ತೆಸೆದ ನಡುಪಟ್ಟಿ ಹರಡಿ ನಕ್ಷತ್ರವಾಗಿ

ಹೇಳುತಲೆ ಇದ್ದಂತೆ ವೆಯ್ನಾಮೊಯ್ನನ್ ಮಂತ್ರ
ಕೆಳಗಿದ್ದ ಕೆಸರಲ್ಲಿ ಮುಳುಗಿದನು ಯೊಕಾಹಿನನ್
ಮುಳುಗಿದನು ಅವನು ಸೊಂಟಮಟ್ಟದವರೆಗೆ
ಕುಸಿದ ಉಸುಕಲ್ಲಿ ಕಂಕುಳದವರೆಗೆ
ಮುಗಿಯಿತು ಕಥೆಯೆಂದು ಕೊನೆಗೂ ಅರಿವಾಯ್ತು
ಪಯಣ ಕೊನೆಯಾಯ್ತೆಂದು ಕಡೆಗೂ ಗೊತ್ತಾಯಿತು
ಸೋತಿದ್ದನವನು ಹಾಡಿನಲ್ಲಿ
ಸೋತಿದ್ದನು ಹಿರಿಯ ವೆಯ್ನಾಮೊಯ್ನನ್‌ಗೆ

ಎತ್ತಿಡಲು ಅಡಿಯನ್ನು ಕೊಸರಾಡಿದ
ಎತ್ತಿದನು ಪಾದ ಮೇಲೆ ಬರಲಿಲ್ಲ

ನೋವು ಸಂಕಟ ತುಂಬಿ ಯೊಕಾಹಿನನ್ ನುಡಿದ
ಮಹಾಜ್ಞಾನಿ ವೆಯ್ನಾಮೊಯ್ನನ್
ಮಂತ್ರವಾದಿಗಳಿಗೆಲ್ಲ ಹಿರಿಯ ನೀನೆ
ಹಿಂತೆಗೆದುಕೊ ಮಂತ್ರ ಪಾರುಮಾಡಯ್ಯ
ಕೇಳಿದ ದಂಡವನು ಕೊಡುವೆ ನಾನಿನಗೆ
ತಕ್ಕಂಥ ಬಹುಮಾನ ಕೊಡುವೆ ನಾ ನಿನಗೆ

ವೆಯ್ನಾಮೊಯ್ನನ್ ಕೇಳಿದ
ತೆಗೆದುಕೊಂಡರೆ ಹಿಂದೆ ಮಂತ್ರ ನುಡಿಯನ್ನು
ಏನು ಕೊಡಬಲ್ಲೆ ನನಗೆ ನೀನು

ಇವೆ ಎರಡು ಅಡ್ಡಬಿಲ್ಲು ನನ್ನ ಬಳಿಯಲ್ಲಿ
ಹೊಡೆಯುವುದು ಒಂದು ಕಣ್ತೆಗೆಯುವುದರಲ್ಲಿ
ಇಟ್ಟಗುರಿ ತಪ್ಪದು ಇನ್ನೊಂದು ಬಿಲ್ಲು
ಬೇಕಾದ್ದು ಆರಿಸಿಕೊ ಈ ಎರಡರಲ್ಲಿ

ನನಗೇನೂ ಬೇಕಿಲ್ಲ ಅಡ್ಡಬಿಲ್ಲ
ಅವುಗಳದೆ ಅಲಂಕಾರ ನನ್ನ ಮನೆ ಗೋಡೆಗೆ
ತೂಗುತಿವೆ ಬಿಲ್ಲು ಎಲ್ಲ ಗೂಟಕ್ಕೆ
ಅಲ್ಲ ಅದು ವೀರನಿಗೆ, ಸರಿ ಬೇಟೆಗಾರನಿಗೆ

ತರುಣ ಯೊಕಾಹಿನನ್ ಆಗ
ಕುಸಿದ ಇನ್ನಷ್ಟು ಜವುಗಿನಲ್ಲಿ
ಇವೆ ಎರಡು ದೋಣಿ ನನ್ನ ಬಳಿಯಲ್ಲಿ
ಸ್ಪರ್ಧೆಗೆ ಉತ್ಕೃಷ್ಟ ದೋಣಿಯೊಂದು
ಹೊರೆ ಹಾಕಿದಷ್ಟೂ ಹೊರುವುದಿನ್ನೊಂದು
ಬೇಕಾದ್ದು ಆರಿಸಿಕೊ ಈ ಎರಡರಲ್ಲಿ

ನನಗೇನೂ ಬೇಕಿಲ್ಲ ನಿನ್ನ ದೋಣಿ
ತುಂಬಿಕೊಂಡಿವೆ ಇಡಲು ಜಾಗವಿಲ್ಲ
ಕಿಕ್ಕಿರಿದು ಬಿದ್ದಿವೆ ಎಲ್ಲ ಖಾರಿಗಳಲ್ಲಿ
ಬಿರುಗಾಳಿಗೆ ಜಗ್ಗವು ಗಾಳಿಗೆದುರು ತೇಲುವುವು

ಯುವಕ ಯೊಕಾಹಿನನ್ ಆಗ
ಕುಸಿದ ಇನ್ನಷ್ಟು ಜವುಗಿನಲ್ಲಿ

ಇವೆ ಎರಡು ಅಶ್ವ ನನ್ನ ಬಳಿಯಲ್ಲಿ
ಸಾಟಿಯಿಲ್ಲದ ವೇಗ ಒಂದು ಅಶ್ವಕ್ಕೆ
ಪಳಗುವುದು ಇನ್ನೊಂದು ಬೇಕಾದ ಹಾಗೆ
ಬೇಕಾದ್ದು ಆರಿಸಿಕೊ ಈ ಎರಡರಲ್ಲಿ

ನನಗೇನೂ ಬೇಕಿಲ್ಲ ನಿನ್ನ ಅಶ್ವ
ಲಾಯದಲಿ ತಾವಿಲ್ಲ ಎಲ್ಲವೂ ಭರ್ತಿ
ಚೆಲುವಾದ ಅಶ್ವಗಳು ನನ್ನ ಬಳಿಯಲ್ಲಿ
ಹೊಳೆಯುತ್ತದೆ ಬೆನ್ನು ನೀರಿನಂತೆ
ಸಮೃದ್ಧ ಕೊಬ್ಬು ಡುಬ್ಬದಲ್ಲಿ

ಯುವಕ ಯೊಕಾಹಿನನ್ ಆಗ
ಕುಸಿದ ಇನ್ನಷ್ಟು ಉಸುಕಿನಲ್ಲಿ
ಹಿರಿಯನೇ ವೆಯ್ನಾಮೊಯ್ನನ್
ಹಿಂತೆಗೆದುಕೋ ಮಂತ್ರ
ಕೊಡುವೆ ಚಿನ್ನದ ತಲೆಗಾಪು ನಿನಗೆ
ಕೊಡುವೆ ಬೆಳ್ಳಿಯ ಟೊಪ್ಪಿ ನಿನಗೆ
ನನ್ನ ತಂದೆ ಧರಿಸಿದ್ದ ಯುದ್ಧದಲಿ ಗೆದ್ದಿದ್ದ

ನನಗೇನೂ ಬೇಕಿಲ್ಲ ಚಿನ್ನ ಬೆಳ್ಳಿ
ಚಿನ್ನವೆಂದರೇ ಬಲು ಹೇಸಿಗೆ ನನಗೆ
ರಾಶಿ ಬಿದ್ದಿದೆ ಪ್ರತಿ ಕೋಣೆಯಲ್ಲೂ
ತುಂಬಿ ತುಳುಕಾಡಿ ಪ್ರತಿ ಸಂದೂಕದಲ್ಲೂ
ಚಂದ್ರನಷ್ಟೇ ಪುರಾತನ ಚಿನ್ನವದು ನೋಡು
ಸೂರ್ಯನ ಜೊತೆಗಾಯ್ತು ರಜತ ಬೆಳ್ಳಿಯ ಜನನ

ಯುವಕ ಯೊಕಾಹಿನನ್ ಆಗ
ಕುಸಿದ ಇನ್ನಷ್ಟು ಜವುಗಿನಲ್ಲಿ
ಅಯ್ಯಾ ಹಿರಿಯನೆ ಬಿಡಿಸಯ್ಯ ನನ್ನ ಈ ಕಷ್ಟದಿಂದ
ಪಾರು ಮಾಡಯ್ಯ ಈ ಹಿಂಸೆಯಿಂದ
ನನ್ನ ಬಣವೆಗಳನೆಲ್ಲ ನಿನ್ನ ವಶಕೊಡುವೆ
ನನ್ನ ಭೂಮಿ ನಿನಗೆ, ವಚನ ಕೊಡುವೆ
ನನ್ನ ಸಕಲವ ಕೊಡುವೆ ಉಳಿಸು ಪ್ರಾಣ
ಒಪ್ಪಿಕೊಳ್ಳಯ್ಯ ನಾ ತೆರುವ ದಂಡ

ನಿನ್ನ ಕಣಜಗಳೆಲ್ಲ ಬೇಕಿಲ್ಲ ನನಗೆ
ನಿನ್ನ ಹೊಲಗದ್ದೆ ಲೆಕ್ಕವಿಲ್ಲೆನಗೆ
ಸಕಲ ದಿಕ್ಕಿಗೂ ಹಬ್ಬಿ ನನ್ನ ಹೊಲಗದ್ದೆ
ಪ್ರತಿ ಜಮೀನಲ್ಲೂ ಜಾನುವಾರು
ನನ್ನ ಹೊಲಗದ್ದೆಯೆ ಬಲು ಇಷ್ಟ ನನಗೆ
ನನ್ನ ಧಾನ್ಯದ ಬಣವೆ ಬಲು ಶ್ರೇಷ್ಠವೆನಗೆ

ಯುವಕ ಯೊಕಾಹಿನನ್ ಆಗ
ಕುಸಿದ ಇನ್ನಷ್ಟು ಜವುಗಿನಲ್ಲಿ
ಹೂತಿತ್ತು ಗಲ್ಲ ಮಣ್ಣಿನಲ್ಲಿ, ಸಿಲುಕಿತ್ತು ಗಡ್ಡ ಕೆಸರಿನಲ್ಲಿ
ಮುಳುಗಿತ್ತು ಬಾಯಿ ಪಾಚಿಯಲ್ಲಿ, ತೂರಿದ್ದವು ಬೇರು ಹಲ್ಲಿನಲ್ಲಿ

ಅಯ್ಯಾ ಜ್ಞಾನಿ ವೆಯ್ನಾಮೊಯ್ನನ್ ಹಿರಿಮಂತ್ರ ವಾದಿಯೇ
ಪಠಿಸಯ್ಯ ಮಂತ್ರ ಇನ್ನೊಮ್ಮೆ ನೀನು
ಉಳಿಸಯ್ಯ ಪ್ರಾಣ ಹತಭಾಗ್ಯ ನಾನು
ಹೂತು ಹೋಗಿವೆ ಕಾಲು ಜವುಗಿನಲ್ಲಿ
ಚುಚ್ಚುತಿದೆ ಉಸುಕು ಕಣ್ಣಿನಲ್ಲಿ

ಹಿಂತೆಗೆದುಕೊ ಮಂತ್ರ ಬಿಡಿಸು ಈ ಪಾಶ
ನನ್ನ ತಂಗಿ ಇನೊ ತೆಗೆದುಕೊ ನಿನಗೆ
ನನ್ನ ತಾಯಿಯ ಮಗಳ ಕೊಡುವೆ ನಾ ನಿನಗೆ
ಒರೆಸುವಳು ಧೂಳು ಕಸವ ಗುಡಿಸುವಳು
ಹಾಲು ಕರೆಯುವಳು ಪಾತ್ರೆ ತೊಳೆಯುವಳು
ಬಟ್ಟೆ ಒಗೆಯುವಳು ವಸ್ತ್ರ ನೇಯುವಳು
ಜೇನಂಥ ಸಿಹಿ ರೊಟ್ಟಿ ಬಡಿಸುವಳು ಬೇಯಿಸಿ

ಕೇಳಿದನೀ ಮಾತು ಹಿರಿಯ ವೆಯ್ನಾಮೊಯ್ನನ್
ಹರುಷ ತಾಳಿದ ವೃದ್ಧ ಮನದ ತುಂಬ
ಆರೈಕೆಗೆ ಸಿಗುವಳು ಚೆಲುವೆ ಎಂದು

ಕುಳಿತ ಆನಂದ ಶಿಲೆಯಲ್ಲಿ ಅವನು
ಮಂಡಿಸಿದ ಸಂಗೀತ ಶಿಲೆಯಲ್ಲಿ ಅವನು
ಹಾಡಿದನೊಂದು ಗಂಟೆ ಮತ್ತೆರಡು ಗಂಟೆ
ಮತ್ತೆ ಹಾಡಿದನು ಮೂರು ಗಂಟೆಯ ಕಾಲ

ಹಿಂತೆಗೆದ ಮಾಟ ಬಿಡಿಸಿದನು ಪಾಶ
ಯುವಕ ಯೊಕಾಹಿನನ್ ಮೇಲೆತ್ತಿದ ಗಲ್ಲ
ಬಿಡಿಸಿಕೊಂಡನು ಗಡ್ಡ ಕೆಸರಿನಿಂದ
ಕಲ್ಲಾದ ಕುದುರೆ ಎದ್ದು ಬಳಿ ಬಂತು
ಈಚಿಗೆಳೆದನು ಬಂಡಿ ಪೊದೆಯಿಂದ
ಬಿಡಿಸಿಕೊಂಡನು ಚಾಟಿ ಜೊಂಡಿನಿಂದೆ

ಆಸನದಿ ಕುಳಿತ ಬಂಡಿಏರಿ
ಚಿಂತೆ ತುಂಬಿದ ಹೃದಯ ತಲ್ಲಣದ ಮನಸು
ಹೊಡೆದ ಬಂಡಿಯನು ಊರ ದಿಕ್ಕಲ್ಲಿ
ತೆರಳಿದನು ಅಕ್ಕರೆಯ ತಾಯ ಕಡೆಗೆ
ಮುಂದೆ ಹೊಡೆದನು ಬಂಡಿ ತಲ್ಲಣವು ಎದೆಯಲ್ಲಿ
ಮನೆಗೆ ಹೊಡೆದನು ಬಂಡಿ ದಿಗಿಲು ಮನದಲ್ಲಿ
ಮುರಿದು ಹಾಕಿದ ಬಂಡಿ ಚೂರುಚೂರಾಗಿ
ಈಟಿ ಗೋಲನು ಮುರಿದ ಚೂರುಚೂರಾಗಿ

ಎಚ್ಚೆತ್ತಳು ತಾಯಿ ಈ ಗದ್ದಲಕ್ಕೆ
ಎದ್ದು ಬಂದನು ತಂದೆ ಕೇಳಿದನು ಮಗನ
ಮುರಿದೆ ಏಕೆ ಬಂಡಿ ಚೂರುಚೂರಾಗಿ
ಬೇಕೆಂದೆ ಮುರಿದೆಯೋ ಈಟಿ ಗೋಲು
ಎಲ್ಲಿಂದ ಬರುತಿರುವೆ ಇಷ್ಟು ಬಿರುಸಾಗಿ
ಹೀಗೇಕೆ ಮಾಡಿದೆಯೊ ಹುಚ್ಚನಾಗಿ

ತಡೆಯದುರುಳಿದವು ಕಣ್ಣಿಂದ ಕಂಬನಿ
ತಲೆಯು ತಗ್ಗಿತ್ತು ಟೊಪ್ಪಿ ಓರೆಯಾಗಿ
ತುಟಿ ಒಣಗಿ ಬಂದಿತ್ತು ಮುಖ ಜೋಲು ಬಿದ್ದಿತ್ತು
ತಾಯಿ ಬಂದಳು ಮಗನ ಕೇಳಿದಳು
ಏನಾಯಿತು ಮಗನೆ ಅಳುತಿರುವೆ ಹೀಗೆ
ಹೇಳಯ್ಯ ಕಂದ ಯಾವ ತೊಂದರೆ ನಿನಗೆ
ತುಟಿ ಒಣಗಿ ಬಿರಿದಿದೆ ಮುಖ ಜೋಲು ಬಿದ್ದಿದೆ

ಹೆತ್ತ ತಾಯೆ ಹೇಳಲಿ ಏನೆಂದು ನಿನಗೆ
ದುಃಖಿಸುತ್ತಿಲ್ಲ ನಾನು ಕಾರಣವೇನಿರದೆ
ನನ್ನ ಸೋಲಿಸಿದ ಆ ಮಂತ್ರವಾದಿ

ದುಃಖ ತಂದಿತ್ತ ಅವನು ಮಾಯಾವಿ
ಇನ್ನು ಬರಿ ದುಃಖ ನನ್ನ ಬಾಳೆಲ್ಲ

ನಿನ್ನ ಪ್ರೀತಿಯ ಪುತ್ರಿ ನನ್ನ ಒಡಹುಟ್ಟಿದವಳು
ವಚನ ಕೊಟ್ಟಿರುವೆ ವೆಯ್ನಾಮೊಯ್ನನ್‌ಗೆ
ಚಾರಣನ ಸತಿಯಾಗಿ ಹೋಗಬೇಕವಳು
ಸದಾ ಅಪ್ಪಣೆಗೆ ಕಾದಿರುವ ಹೆಣ್ಣಾಳು
ಹೆಜ್ಜೆ ನಡುಗುವ ಮುದುಕಗೆ ಊರುಗೋಲು

ಸಂತಸದಿ ಚಪ್ಪಾಳೆ ತಟ್ಟಿದಳು ತಾಯಿ
ಮಗನ ಕೈ ಹಿಡಿದು ಹೇಳಿದಳು ಹೀಗೆ
ಅಳಬೇಡ ಮಗನೆ ಅಳಲು ಕಾರಣವಿಲ್ಲ
ಬಹುಕಾಲ ಬಯಸಿದ್ದೆ ಬದುಕೆಲ್ಲ ಕನಸಿದ್ದೆ
ಉಚ್ಚಕುಲವೀರ ಚಾರಣ ವೆಯ್ನಾಮೊಯ್ನನ್
ಬರಲೆಂದು ಮಗಳ ಪುರುಷನಾಗಿ

ಸಂತಸವಾಗಲಿಲ್ಲ ಯೊಕಾಹಿನನ್ ಸೋದರಿಗೆ
ದುಃಖಶೋಕದಲಿ ಮುಳುಗಿದಳು ಅವಳು
ಒಂದು ದಿನ ಅತ್ತು ಎರಡು ದಿನ ಅತ್ತು
ದುಃಖ ತಡೆಯದೆ ಅಳುತಲೇ ಇದ್ದಳು
ಉತ್ಸಾಹ ಬತ್ತಿ ಸುರಿಸಿ ಕಣ್ಣೀರು

ಹೇಳಿದಳು ತಾಯಿ ಸಮಾಧಾನದ ಮಾತು
ಅಳುವೆ ಏತಕೆ ಇನೊ ಮುದ್ದು ಮಗಳೆ
ಸಿಕ್ಕಿರುವ ನಿನಗೆ ವೀರಾಧಿವೀರ
ಮನೆಸೇರುವೆ ನೀನು ಅವನು ಸಿರಿವಂತ
ಕೂತಿದ್ದು ಸುಖದಲ್ಲಿ ಬದುಕು ಮಾಡು

ಮಗಳು ಹೇಳಿದಳು
ಅಳುತಿರುವೆ ನಾನು ಈ ಸುರುಳಿ ಕೂದಲಿಗೆ
ಗಾಜಂತೆ ನುಣುಪಾದ ಹೊಳೆವ ಕೂದಲಿಗೆ
ಮುಸುಕಲ್ಲಿ ಕಟ್ಟಿಟ್ಟು ಮರೆ ಮಾಡಲೇನು
ಈಗಷ್ಟೆ ಅರಳುತಿಹ ಕಿರಿಬಾಲೆ ನಾನು

ಅಳುತಲೆ ಇರಬೇಕು ಬದುಕೆಲ್ಲ ನಾನು
ರವಿಸೊಬಗ ನೋಡದೆ ಚಂದಿರನ ಕಾಣದೆ

ಅಂಬರದ ಚೆಲುವನ್ನ ಕಣ್ಣಿಂದ ನೋಡದೆ
ನಾನಿನ್ನು ಎಳೆ ಬಾಲೆ
ತೊರೆದು ಅಣ್ಣನನು ತೊರೆದು ತಂದೆಯನು
ಹೇಗೆ ಹೋಗಲಿ ಅಷ್ಟು ದೂರಕೆ ನಾನು

ತಾಯಿ ಹೇಳಿದಳು
ಹುಚ್ಚಿಯಂತಳಬೇಡ ಶೋಕಿಸದಿರು ವ್ಯರ್ಥ
ಇಲ್ಲಿ ಹೊಳೆಯುವ ಸೂರ್ಯ ಅಲ್ಲಿಯೂ ಹೊಳೆಯುವನು
ಎಲ್ಲ ಮನೆ ಬಾಗಿಲಿಗೂ ಬೆಳಕು ಚೆಲ್ಲುವನು

ಬೆಳೆಯುತ್ತವೆ ಹಣ್ಣು ಎಲ್ಲ ಬೆಟ್ಟಗಳಲ್ಲಿ
ಸ್ಟ್ರಾಬೆರಿಯ ಹಣ್ಣುಗಳು ಎಲ್ಲ ಬಯಲಲ್ಲಿ
ಬೇಕೆಂದ ಕಡೆಯೆಲ್ಲ ತಿರುಗಾಡಬಹುದು
ಬೇಕೆಂದ ಹಣ್ಣೆಲ್ಲ ಕೀಳಬಹುದು.

೪. ಇನೋಗೆ ಒದಗಿದ ಗತಿ

ಯೊಹಾಹಿನನ್ ತಂಗಿ ಇನೊ ಎಂಬ ತರುಣಿ
ಹೋದಳವಳು ಕಾಡಿಗೆ ತರಲು ಸೊಪ್ಪು ಸ್ನಾನಕೆ
ತಂದೆಗಿಷ್ಟು ಆಯ್ದಳು ತಾಯಿಗಿಷ್ಟು ಆಯ್ದಳು
ಇನ್ನೊಂದಿಷ್ಟು ಆಯ್ದಳು ಚೆಲುವ ಯುವಕ ಅಣ್ಣಗೆ

ಇಟ್ಟಳಡಿ ಮನೆಯ ಕಡೆ ಪೊದೆಯನುಸುಳಿ ಮನೆಯ ಕಡೆ
ಎದುರಾದನು ಹಿರಿಯನು ವೆಯ್ನಾಮೊಯ್ನನ್ ಅವಳಿಗೆ
ಸಿಂಗಾರದ ತರುಣಿಯನು ಕಂಡು ಹೀಗೆ ನುಡಿದನು
ಹೆಣ್ಣೆ ನಿನ್ನ ಅಲಂಕಾರ ಇರಲಿ ಎಲ್ಲ ನನಗೆ ಮಾತ್ರ
ಮಣಿಯಹಾರ ಕಂಠಕೆ ಪದಕವಿರಲಿ ವಕ್ಷಕೆ
ಹೆಣೆದು ಜಡೆಯಕೂದಲು ಕಟ್ಟಿ ಚೆಲುವ ಕೂದಲು
ಇರಲಿ ಎಲ್ಲ ನನಗೆ ಮಾತ್ರ ಅಲ್ಲ ಅದು ಪರರಿಗೆ

ಕಿರಿಯಳವಳು ನುಡಿದಳು
ಎದೆಯ ಪದಕ ಜಡೆಯ ಕಟ್ಟು
ಅಲ್ಲ ನಿನಗೂ ಪರರಿಗೂ
ಜನಿಸಿದವನು ಕಡಲಿನಲ್ಲಿ ಲೆಕ್ಕವಿಲ್ಲ ನನಗೂ
ಗೋಧಿ ರೊಟ್ಟಿ ಉಂಡುತಿನುವ ಬಯಕೆ ಇಲ್ಲ ನನಗೆ
ನಾನೆ ನೇಯ್ದ ವಸ್ತ್ರ ಸಾಕು ತುಣುಕು ರೊಟ್ಟಿ ಚೂರು ಸಾಕು
ನನ್ನಪ್ಪನ ಮನೆಯೊಳಗೆ ನನ್ನವ್ವನ ಮಡಿಲೊಳಗೆ

ಎದೆಯ ಪದಕ ತೆಗೆದಳು ಬೆರಳುಂಗುರ ಕಿತ್ತಳು
ಮಣಿಯ ಹಾರ ಕಂಠದಿಂದ ಕೆಂಪುಕಟ್ಟು ಹೆರಳಿನಿಂದ
ಕಿತ್ತು ನೆಲಕೆ ಎಸೆದಳು ಪೊದೆಯ ಮೇಲಕೆಸೆದಳು
ಕಣ್ಣ ನೀರು ಸುರಿಸಿಕೊಂಡು ಗೋಳಾಡುತ ಅತ್ತು ಕೊಂಡು
ಬಿರಬಿರಬಿರ ನಡೆದಳು

ಕಿಟಕಿ ಪಕ್ಕ ತಂದೆ ಇದ್ದ ಕೊಡಲಿ ಹಿಡಿಕೆ ಕೆತ್ತುತಿದ್ದ
ಅಳುವೆಯಾಕೆ ಮಗಳೆ ದುಃಖ ಯಾಕೆ ಮಗಳೆ
ಕಾರಣವಿದೆ ಅಳುವಿಗೆ ಕಾರಣವಿದೆ ಗೋಳಿಗೆ
ದುಃಖ ತುಂಬಿ ಬರುತಿದೆ

ಕಳೆದುಕೊಂಡೆ ಎದೆಯ ಪದಕ ಸೊಂಟಕೊಂಡಿಪಟ್ಟಿ
ಕಳೆದುಕೊಂಡೆ ಬೆಳ್ಳಿ ಪದಕ ಉಡಿಯ ತಾಮ್ರ ಪಟ್ಟಿ

ಬಾಗಿಲಲ್ಲಿ ಅಣ್ಣನಿದ್ದ ಬಂಡಿ ಹಲಗೆ ಕೆತ್ತುತ್ತಿದ್ದ
ಅಳುವೆ ಯಾಕೆ ತಂಗಿಯೆ ತರುಣಿ ಯಾಕೆ ದುಃಖವೆ

ಕಾರಣವಿದೆ ಅಳುವಿಗೆ ಕಾರಣವಿದೆ ಗೋಳಿಗೆ
ದುಃಖ ತುಂಬಿ ಬರುತಿದೆ
ಕಳೆದುಕೊಂಡೆ ಉಂಗುರ ಕಂಠದ ಮಣಿ ಹಾರವ
ಬಂಗಾರದ ಉಂಗುರ ಬೆಳ್ಳಿಮಣಿಯ ಹಾರವ

ಕಿಟಕಿ ಪಕ್ಕ ಇದ್ದಳಕ್ಕ
ಅಳುವೆ ಯಾಕೆ ತಂಗಿಯೆ ದುಃಖವೇಕೆ ಕಿರಿಯಳೆ
ಕಾರಣವಿದೆ ಅಳುವಿಗೆ ಕಾರಣವಿದೆ ಗೋಳಿಗೆ
ದುಃಖ ತುಂಬಿ ಬರುತಿದೆ
ಕಳೆದುಕೊಂಡೆ ತಲೆಯ ಪದಕ ಜಡೆಯ ಬೆಳ್ಳಿ ಬಿಲ್ಲೆ
ಕೆನ್ನೆ ಪಟ್ಟಿ ಹರಿದವು ಜಡೆಯ ಪಟ್ಟಿ ಹರಿದವು

ಉಗ್ರಾಣದ ಹೊಸ್ತಿಲಲ್ಲಿ ಕೆನೆ ತೆಗೆಯುತ್ತ ತಾಯಿ
ಅಳುವೆಯಾಕೆ ಮಗಳೆ ಕಡು ದುಃಖವೇಕೆ ಮಗಳೆ

ನನ್ನ ಹೆತ್ತ ತಾಯಿಯೆ ನನ್ನ ಪೊರೆದ ತಾಯಿಯೆ
ಕಾರಣವಿದೆ ಅಳುವಿಗೆ ಕಾರಣವಿದೆ ಗೋಳಿಗೆ
ಮೀಯುವ ಸೊಪ್ಪು ತರಲು ಹೋದೆ
ಸೊಪ್ಪು ಹೊರೆಯ ಹೊತ್ತು ನಡೆದೆ
ಬಯಲಿನಿಂದ ಬಂದ ಅವನು
ಹೆಣ್ಣೆ ನಿನ್ನ ಕೊರಳ ಹಾರ ಎದೆಯ ಪದಕ ಸಿಂಗಾರ
ಇರಲಿ ಎಲ್ಲ ನನಗೆ ಎಂದ ಅನ್ಯರಿಗದು ಬೇಡವೆಂದ
ನಿನ್ನ ಜಡೆಯ ಅಂದ ಚೆಂದ ರೇಷ್ಮೆ ಪಟ್ಟಿ ಜಡೆಯ ಅಂದ
ಇರಲಿ ಎಲ್ಲ ನನಗೆ ಎಂದ ಅನ್ಯರಿಗದು ಬೇಡವೆಂದ

ತೆಗೆದೆ ನಾನು ಎದೆಯ ಪದಕ ತೆಗೆದೆ ಕೊರಳ ಹಾರವ
ಹರಿದೆ ಕೆನ್ನೆ ನೀಲಿಪಟ್ಟಿ ತಲೆಯ ಕೆಂಪುಪಟ್ಟಿ
ಎಲ್ಲ ಕಿತ್ತು ಹಾಕಿದೆ ನೆಲದ ಮೇಲೆ ಚೆಲ್ಲಿದೆ
ಜನಿಸಿದವನು ಕಡಲಿನಲ್ಲಿ ಲೆಕ್ಕವಿಲ್ಲ ನನಗೆ

ಗೋಧಿರೊಟ್ಟಿ ಉಂಡು ತಿನುವ ಬಯಕೆ ಇಲ್ಲ ನನಗೆ
ನಾವೆ ನೇಯ್ದ ವಸ್ತ್ರ ಸಾಕು ತುಣುಕು ರೊಟ್ಟಿ ಚೂರು ಸಾಕು
ಅಪ್ಪನಿರುವ ಅಮ್ಮನಿರುವ ಮನೆಯೆ ಚೆಂದವೆಂದೆನು

ಬೇಡ ಮಗಳೆ ಅಳದಿರು ಹೊಸ ಬೆಣ್ಣೆಯ ತಿಂದಿರು
ತುಂಬಿಕೊಂಡು ಚೆಲುವೆಯಾಗು ರುಚಿ ಸೊಗಸಿನ ಹಂದಿ ಬಾಡು

ಉಗ್ರಾಣವಿದೆ ಬೆಟ್ಟದಲ್ಲಿ
ಅದರಲೊಂದು ಕೋಣೆ
ಸಂದೂಕವಿದೆ ಕೋಣೆಯಲ್ಲಿ
ಒಂದರ ಮೇಲೊಂದು
ತೆರೆದುನೋಡು ಪೆಟ್ಟಿಗೆ
ಅದರ ಬಣ್ಣ ಮುಚ್ಚಳ
ಸೊಂಟಪಟ್ಟಿ ಆರಿವೆ ನೀಲಿವಸ್ತ್ರ ಎಳಿವೆ
ನೇಯ್ದಳದನು ಚಂದ್ರ ಪುತ್ರಿ
ಮಾಟವಾಗಿ ಸೂರ್ಯ ಪುತ್ರಿ

ಆಗ ನಾನು ಸಣ್ಣವಳು ಹೋದೆ ಹಣ್ಣನಾಯಲು
ದಟ್ಟ ಮರದ ಕಾಡಿನಲ್ಲಿ ಸದ್ದನೊಂದು ಕೇಳಿದೆ
ನೇಯುತಿದ್ದಳು ಚಂದ್ರಕುವರಿ
ನೂಲುತಿದ್ದಳು ಸೂರ್ಯಕುವರಿ
ಹೋದೆನವರ ಬಳಿಗೆ ನಾನು
ಕೇಳಿದೆನು ಹೀಗೆ ನಾನು
ಹರಿದ ಉಡುಗೆ ಬಡವೆ ಹುಡುಗಿ
ಕೊಡಿರಿ ಚಿನ್ನ ನನಗೆ ಕೊಡಿರಿ ಬೆಳ್ಳಿ ನನಗೆ
ಕೊಟ್ಟರವರು ಚಿನ್ನ ಬೆಳ್ಳಿ
ತೊಟ್ಟುಕೊಂಡೆ ತಲೆಗೆ ಕಿವಿಗೆ
ಹೂವಿನಂತೆ ಹರ್ಷದಿಂದ ನಡೆದು ಬಂದೆ ಮನೆಗೆ
ಮೂರನೆ ದಿನ ತೆಗೆದೆ ಒಡವೆ
ಉಗ್ರಾಣದಲಿ ಇಟ್ಟೆ ಒಡವೆ

ರೇಷ್ಮೆ ಪಟ್ಟಿ ತಲೆಗೆ ಕಟ್ಟು
ಚಿನ್ನದೊಡವೆ ಕಿವಿಗೆ ಇಟ್ಟು
ಮಣಿಯ ಹಾರ ಹಾಕಿಕೊಂಡು

ಬಂಗಾರ ಪದಕ ಧರಿಸಿಕೊಂಡು
ನವಿರು.ಬಟ್ಟೆ ಉಡುಗೆ ತೊಡುಗೆ
ಸೊಂಟಪಟ್ಟಿ ಕಾಲು ಚೀಲ
ಬೆರಳಿಗಿರಲಿ ಉಂಗುರ ಕೈಗೆ ಚಿನ್ನ ಕಡಗ
ಎಲ್ಲ ಧರಿಸಿ ಮನೆಗೆ ಬಾರೆ
ಹರ್ಷದ ಹೊನಲಾಗಿ ಬಾರೆ
ಹೆಣ್ಣುಗಳಲೆ ಚೆಲುವೆ ನೀನು
ಬೇಲಿ ಬದಿಯ ಹೂವು ನೀನು
ಬೆಟ್ಟದ ಕೆಂಪು ಹಣ್ಣು ನೀನು

ತಾಯ ಮಾತು ಹಿಡಿಸಲಿಲ್ಲ ಹೋದಳವಳು ಅಳುತ
ಯೋಚಿಸಿದಳು ಮನಸ್ಸಿನಲ್ಲಿ ಹೇಗಿರುವುದೊ ಸಂತಸ?
ಹೀಗಿರುವುದು ಸಂತಸ ಹೀಗಿರುವುದು ಉಲ್ಲಾಸ
ನೀರ ತೆರೆಯ ಲಾಸ್ಯದಂತೆ ನೀರಿನಲೆಯ ಕುಣಿತದಂತೆ

ಯೋಚಿಸಿದಳವಳು ಹೇಗಿರುವುದೊ ದುಃಖ
ನೀರು ಕೋಳಿ ಶೋಕ?
ಕೊರೆವ ಮಂಜುಗಡ್ಡೆ ಕೆಳಗೆ ಬಂಧಿಯಾದ ನೀರಿನಂತೆ

ಕವಿದ ಮೋಡ ಬಾಳಿಗೆ ಎಂಥ ದುಃಖ ಬಾಲೆಗೆ
ಮನಸು ಕುಗ್ಗಿ ಬಾಡಿದೆ ಸಸಿಯ ಹಾಗೆ ಒಣಗಿದೆ
ಅಂಧಕಾರ ಮನಸಿಗೆ ಕರಿಗಪ್ಪು ಹೊಗೆ ಹೃದಯಕೆ
ಹುಟ್ಟಬಾರದಿತ್ತು ನಾನು ಚೆಂದವಿತ್ತು ಆಗಲೆ
ಬೆಳೆಯಬಾರದಿತ್ತು ನಾನು ದುಃಖದಲ್ಲಿ ಮುಳುಗಲೆ
ಹುಟ್ಟಿದಾರು ದಿನಕೆ ನಾನು ಚೆಂದವಿತ್ತು ಸತ್ತರೆ
ಬೇಕಿರಲಿಲ್ಲ ಹೆಚ್ಚಿಗೇನು ಎಂಟು ದಿನಕೆ ಸತ್ತರೆ
ಅರ್ಧಗಜ ಹೆಣದ ಬಟ್ಟೆ ಹೂಳಲೊಂದು ಮೂಲೆ

ಅಮ್ಮನಳುವೂ ಸ್ವಲ್ಪವಾಗಿ
ಅಪ್ಪನೆರಡು ಕಂಬನಿ
ಇರುತಿರಲಿಲ್ಲ ಅಣ್ಣನಿಂದ
ಒಂದೂ ಕೂಡ ಕಂಬನಿ

ಅತ್ತಳವಳು ಒಂದು ದಿನ ಅತ್ತಳವಳು ಎರಡು ದಿನ
ಮತ್ತೆ ತಾಯಿ ಕೇಳಿದಳು ಶೋಕಕೇನು ಕಾರಣ

ಅಳುವೆ ನಾನು ಪಾಪಿಗೇಡಿ
ಕೊಟ್ಟರಿ ಮಾತು ಮುದುಕಗೆ
ಕೊಡುವಿರಲ್ಲ ಅವನ ಸುಖಕೆ
ಅದಿರು ಹೆಜ್ಜೆ ಮುದುಕಗೆ
ಆಗಬೇಕು ಊರುಗೋಲು
ಅವನಪ್ಪಣೆಗೆ ಹೆಣ್ಣಾಳು
ಇದಕಿಂತಲೂ ಚೆಂದವಿತ್ತು ಹಾಕಿದ್ದರೆ ಕಡಲಿಗೆ
ಸುಖವಿತ್ತು ಅಲೆಗಳಲ್ಲಿ ಕಡಲ ಮೀನ ಜೊತೆಗೆ

ಉಗ್ರಾಣಕವಳು ಹೋದಳು
ಒಳಕೋಣೆಯ ಹೊಕ್ಕಳು
ಪೆಟ್ಟಿಗೆಯನು ತೆರೆದಳು
ಬಂಗಾರದವು ಡಾಬು ಆರು
ರೇಷ್ಮೆಯವು ಉಡುಪು ಏಳು
ಚೆಲುವಾದುದ ಆಯ್ದಳು
ಅಲಂಕಾರವಾದಳು

ನಡೆದಳವಳು ಬಯಲಿನಲ್ಲಿ
ಜವುಗಿನಲ್ಲಿ ಕುರುಚಲಲ್ಲಿ
ತೊಳಲಿ ಬಳಲಿ ನಡೆದಳು
ದುಃಖ ಶೋಕ ತುಂಬಿ ಎದೆಗೆ
ಕಲ್ಲು ಹೇರಿದಂತೆ ತಲೆಗೆ
ಇಲ್ಲ ಭಯ ಇಲ್ಲ ಭೀತಿ
ಪ್ರಾಣ ತೊರೆದು ಹೋದರೂ
ದುಃಖ ತುಂಬಿದಂಥ ಬದುಕು
ಇಲ್ಲಿಗೆ ಕೊನೆಯಾದರೂ

ಬಂದಿಹುದು ಕಾಲವೀಗ ಈ ಶೋಕದ ಜಗ ಬಿಡಲು
ಬಂದಿಹುದು ಕಾಲವೀಗ ಪರಲೋಕವ ಸೇರಲು
ದುಃಖವಿಲ್ಲ ಅಪ್ಪನಿಗೆ ದುಃಖವಿಲ್ಲ ಅಮ್ಮನಿಗೆ
ಕಣ್ಣೀರಿನ ಒದ್ದೆ ಇರದು ನನ್ನಕ್ಕನ ಕೆನ್ನೆಗೆ
ಕಣ್ಣೀರಿನ ಹನಿ ತುಂಬದು ನನ್ನಣ್ಣನ ಕಣ್ಣಿಗೆ
ನಾ ಮುಳುಗಿದರೆ ನೀರಿಗೆ ಅಂಧಕಾರದೊಡಲಿಗೆ

ನಡೆದಳವಳು ಮುಂದಕೆ
ಒಂದು ದಿನ ಎರಡು ದಿನ
ಬಂದಳವಳು ಮೂರು ದಿನಕೆ
ನದಿಯ ತೀರದಂಚಿಗೆ
ಜವುಗುಗಿಡ ತುಂಬಿದಲ್ಲಿ ಬಂದಳವಳು ರಾತ್ರಿಯಲ್ಲಿ
ಬಂಡೆ ಮೇಲೆ ತೀರದಲ್ಲಿ ಅತ್ತಳವಳು ಇರುಳಿನಲ್ಲಿ
ಹರಿಯುತಿತ್ತು ಹಗಲ ಬೆಳಕು ಕಣ್ಣು ದೂರ ಹಾಯಿತು
ಮೀಯುತಿದ್ದ ಹೆಣ್ಣು ಮೂರು ನಾಲ್ಕನೆಯವಳು ಇನೊ
ಐದನೆಯದೂ ಒಂದಿತ್ತು ಅದು ತೇಲು ಸಸ್ಯವಾಗಿತ್ತು

ತೆಗೆದೆಸೆದಳು ಮೇಲಂಗಿ ವಿಲೊ ಮರದ ಮೇಲಕೆ
ಬಿಚ್ಚಿಸೆದಳು ಉಡುಗೆ ತೊಡುಗೆ ಆಸ್ಪನ್‌ಗಳ ಮೇಲಕೆ
ಕಿತ್ತೆಸೆದಳು ಕಾಲು ಚೀಲ ಬೂಟುಗಳನು ಬಂಡೆಗೆ
ಹರಿದು ಚಿಲ್ಲಿ ಮಣಿಯ ಹಾರ ಉಂಗುರಗಳ ಉಸುಕಿಗೆ

ಅಲೆಯ ಮಧ್ಯೆ ಕಾಣುತ್ತಿತ್ತು ಚಿನ್ನದಂತೆ ಹೊಳೆವ ಬಂಡೆ
ಈಜಿದಳು ಬಂಡೆ ಕಡೆಗೆ ನೆಲೆಗಟ್ಟಂತೆ ಆಸರೆಗೆ
ಬಂಡೆ ಹತ್ತಿ ಕುಳಿತಳು ನುಣುಪುಕಲ್ಲು ಶಿಲೆಯ ಬಂಡೆ
ಕುಳಿತ ಬಂಡೆ ಮುಳುಗಿತು ಮುಳುಗಿ ತಳವ ಸೇರಿತು
ಬಂಡೆ ಜೊತೆಗೆ ಇನೊ ಜೀವ ಮುಳುಗಿ ತಳವ ಕಂಡಿತು

ಯೋಚಿಸಿದಳು ಮುಳುಗುವಾಗ
ಮೀಯಲೆಂದು ಬಂದೆನು ಈಜಲೆಂದು ಇದ್ದೆನು
ಪಾರಿವಾಳ ಹಕ್ಕಿಯಂತೆ ನೀರಲಿ ಮರೆಯಾದೆನು
ಸಾವು ಬಂದು ನುಂಗಿದಂತೆ ಪುಟ್ಟ ಹಕ್ಕಿಯೊಂದನು
ಅಪ್ಪ ಬರನು ಎಂದಿಗೂ ಬಲೆ ಹಾಕನು ಎಂದಿಗೂ
ಈ ವಿಸ್ತಾರದ ಕಡಲಿಗೆ
ಅಮ್ಮ ಬರಳು ಎಂದಿಗೂ ಅಡುಗೆಗೆಂದು ನೀರಿಗೂ
ಇಂಥ ದೊಡ್ಡ ತೊರೆಗೆ
ಅಣ್ಣ ಬರನು ಎಂದಿಗೂ ಕುದುರೆಗೆಂದು ನೀರಿಗೂ
ಇಂಥ ದೊಡ್ಡ ಕೆರೆಗೆ
ಅಕ್ಕ ಬರಳು ಎಂದಿಗೂ ಮುಖ ತೊಳೆಯಲು ಇಲ್ಲಿಗೂ
ಇಂಥ ದೊಡ್ಡ ನದಿಗೆ

ಈ ನೀರೂ ಕೂಡ ಕೆಂಪಗಿದೆ ನನ್ನ ಧಮನಿ ರಕ್ತದಂತೆ
ಈ ಮೀನುಗಳು ದಷ್ಟಪುಷ್ಟ ನನ್ನ ಮಾಂಸ ಖಂಡದಂತೆ
ದಡದ ಮೇಲೆ ಪೊದೆಗಳಿವೆ ನನ್ನ ಪಕ್ಕೆಲುಬಿನಂತೆ
ಅಂಚಿನಲ್ಲಿ ಹುಲ್ಲಿದೆ ಕೆಸರಂಟಿದ ನನ್ನ ಹೆರಳಿನಂತೆ

ಅಳಿದು ಹೋದಳವಳು ಪಾರಿವಾಳದಂಥ ಚೆಲುವೆ
ಸುದ್ದಿ ಯಾರು ಒಯ್ಯುವರು ಶೋಕದ ಕಥೆ ಹೇಳುವರು
ಕನ್ನೆಯಿದ್ದ ಮನೆಗೆ ಚೆಲುವೆಯ ಮನೆಮಂದಿಗೆ

ಒಯ್ಯಬೇಕು ಕರಡಿ ವಾರ್ತೆ
ಹೇಳಬೇಕು ವ್ಯಥೆಯ ಕಥೆ
ಒಯ್ಯಲಿಲ್ಲ ಕರಡಿ ವಾರ್ತೆ
ಅಲೆಯುತಿತ್ತು ದನದ ಜೊತೆ

ಸುದ್ದಿ ಯಾರು ಒಯ್ಯುವರು ಶೋಕದ ಕಥೆ ಹೇಳುವರು
ಕನ್ನೆಯಿದ್ದ ಮನೆಗೆ ಚೆಲುವೆಯ ಮನೆ ಮಂದಿಗೆ

ಒಯ್ಯಬೇಕು ತೋಳ ವಾರ್ತೆ
ಹೇಳಬೇಕು ವ್ಯಥೆಯ ಕಥೆ
ಒಯ್ಯಲಿಲ್ಲ ತೋಳ ವಾರ್ತೆ
ಅಲೆಯುತಿತ್ತು ಕುರಿಯ ಜೊತೆ

ಸುದ್ದಿ ಯಾರು ಒಯ್ಯುವರು ಶೋಕದ ಕಥೆ ಹೇಳುವರು
ಕನ್ನೆಯಿದ್ದ ಮನೆಗೆ ಚೆಲುವೆಯ ಮನೆಮಂದಿಗೆ
ಒಯ್ದಿತು ಮೊಲ ವಾರ್ತೆಯನು ತಿಳಿಸಿತು ವ್ಯಥೆ ಕಥೆಯನು

ಓಡಿತು ಮೊಲ ಠಣ್ಣನೆ ಕತೆಯ ತುಂಬಿ ಉದ್ದ ಕಿವಿಗೆ
ಓಡಿತು ಮೊಲ ಸೊಟ್ಟಗಾಲು ಓಡಿತು ಮೊಲ ತುಟಿ ಸೀಳು

ಸ್ನಾನದ ಮನೆಗೆ ಹೋಯಿತು ಹೊಸ್ತಿಲಲ್ಲಿ ಮುದುರಿ ಕೂತು
ಬಚ್ಚಲ ತುಂಬಾ ಹೆಂಗಸರು ಸ್ನಾನಕೆ ಕೈಯಲಿ ಟೊಂಗೆಗಳು
ಮುದ್ದಿನ ಮೊಲವೇ ಬಾಯಿಲ್ಲಿ
ಕುದಿಸಲು ಬಿಸಿ ನೀರಲ್ಲಿ
ದೊಡ್ಡ ಕಣ್ಣವನೆ ಬಾಯಿಲ್ಲಿ
ಹುರಿಯಲು ಒಡೆಯನ ಊಟಕ್ಕೆ
ಒಡತಿಯ ಬೆಳಗಿನ ನಾಷ್ಟಕ್ಕೆ

ಪುತ್ರನ ಮಧ್ಯಾಹ್ನದೂಟಕ್ಕೆ
ಪುತ್ರಿಯ ರಾತ್ರಿಯ ಊಟಕ್ಕೆ

ದುಂಡು ಕಣ್ಣನ ಮೊಲ ಹೇಳಿತು ಹೀಗೆ
ಬೇಕಿದ್ದರೆ ಬರಲಿ ಅನಿಷ್ಟವು ಅಲ್ಲಿಗೆ
ನಿಮ್ಮ ಅಡುಗೆ ಪಾತ್ರೆ ಒಳಗೆ
ಬಂದೆನು ನಾನು ಸುದ್ದಿಯ ಕೊಡಲು
ನಡೆದ ವಾರ್ತೆಯ ವಿವರ ಹೇಳಲು
ಅಳಿದು ಹೋದಳು ನಿಮ್ಮೆಲ್ಲರ ಚೆಲುವೆ
ಬೆಳ್ಳಿ ಡಾಬಿನ ಹೆಣ್ಣು ಮುಳುಗಿದಳು
ಅಳಿದು ಹೋದಳು ನಿಮ್ಮೆಲ್ಲರ ಚೆಲುವೆ
ತಾಮ್ರ ನಡುಪಟ್ಟಿಯ ಹೆಣ್ಣು ಮುಳುಗಿದಳು
ಅಲೆಗಳ ಕೆಳಗಿನ ಕೆಸರಿನ ತಳಕೆ
ಸೋದರಿಯಾಗಿ ಮೀನಿನ ಜೊತೆಗೆ

ಕುಸಿದಳು ತಾಯಿ ದುಃಖದಿ ಕೆಳಗೆ
ಹರಿಯಿತು ಕಣ್ಣನ ಕಂಬನಿಧಾರೆ
ಎದೆ ಬಡಿದತ್ತಳು ಹೇಳುತ ಹೀಗೆ
ಕೊಡದಿರಿ ಎಂದೂ ತಾಯಂದಿರ ನೀವು
ಮಾಡದಿರೆಂದೂ ಬಲವಂತ
ಮಾಡದಿರೆಂದೂ ಒತ್ತಾಯವ ನೀವು
ಒಲ್ಲದ ಮದುವೆಗೆ ಮಗಳನ್ನು
ಮಾಡದಿರೆಂದೂ ನಾ ಮಾಡಿದ ಹಾಗೆ
ಮುದ್ದುಮಗಳಿಗೆ ನಾ ಮಾಡಿದ ಹಾಗೆ

ಅತ್ತಳು ತಾಯಿ ಎದೆ ಬಡಿದು ಹರಿದವು ಕೋಡಿ ಕಣ್ಣೀರು
ನೀಲಿ ನೇತ್ರಗಳ ಕಂಬನಿ ಹರಿದವು
ಬೆಳ್ಳಗೆ ಬಿಳುಚಿದ ಕೆನ್ನೆಯ ಮೇಲೆ
ಹನಿ ಹನಿ ಉದುರಿ ಕೆನ್ನೆಯ ಮೇಲೆ
ಒಂದರ ಹಿಂದೆ ಮತ್ತೊಂದು

ಕಂಬನಿ ಇಳಿದವು ಕೆನ್ನೆಯ ಕೆಳಗೆ
ದುಃಖದಿ ಏರಿಳಿವೆದೆ ಮೇಲೆ
ಉದುರುವ ಕಂಬನಿ ಅವಳೆದೆ ಮೇಲೆ
ಒಂದರ ಹಿಂದೆ ಮತ್ತೊಂದು

ಎದೆಯಿಂದಿಳಿದವು ಉಡುಪಿನ ಮೇಲೆ
ಒಂದರ ಹಿಂದೆ ಮತ್ತೊಂದು
ಉಡುಪಿಂದಿಳಿದವು ಕಾಲ್ಚೀಲಕೆ ಕಂಬನಿ
ಒಂದರ ಹಿಂದೆ ಮತ್ತೊಂದು

ಕುಸುರಿ ಬೂಟಿಗೂ ಇಳಿದವು ಕಂಬನಿ
ಒಂದರ ಹಿಂದೆ ಮತ್ತೊಂದು
ಬೂಟಿನ ಕೆಳಗೆ ಹರಿದವು ನೆಲಕೆ
ಒಂದರ ಹಿಂದೆ ಮತ್ತೊಂದು

ಹರಿದವು ಕಂಬನಿ ಹೊಳೆಯಾಗಿ
ಹೊಳೆಗಳು ಮೂರು ನದಿಯಾಗಿ
ನದಿಯಿಂದಿಳಿದವು ಜಲಪಾತ
ಅವುಗಳ ನಡುವೆ ಶಿಲೆ ಬಂಡೆ

ಚಿನ್ನದ ಬೆಟ್ಟ ಶಿಲೆ ಶಿಖರದ ಮೇಲೆ
ಬರ್ಚ್ ಮರ ಮೂರು ಬೆಟ್ಟದ ಮೇಲೆ
ಮರಮರಗಳ ತುದಿಯಲಿ ಕೋಗಿಲೆ ಮೂರು
ದನಿಗೈದವು ಒಂದೇ ಸ್ವರವಾಗಿ

ಒಂದನೆ ಕೋಗಿಲೆ ಕರೆಯಿತು ಹೀಗೆ
ಓ ನನ್ನ ನಲ್ಲೆ ಓ ನನ್ನ ನಲ್ಲೆ
ಎರಡನೆ ಕೋಗಿಲೆ ಕರೆಯಿತು ಹೀಗೆ
ಓ ನನ್ನ ನಲ್ಲ ಓ ನನ್ನ ನಲ್ಲ
ಮೂರನೆ ಕೋಗಿಲೆ ಹರಸಿತು ಹೀಗೆ
ಆನಂದವಿರಲಿ ಆನಂದವಿರಲಿ

ಹಾಡಿಯೆ ಹಾಡಿತು ಒಂದನೆ ಕೋಗಿಲೆ
ಮೂರು ತಿಂಗಳೂ ಎಡ ಬಿಡದಂತೆ
ಹಾಡಿತು ಕೋಗಿಲೆ ಚೆಲುವೆಯ ನೆನೆದು
ನೀರಡಿ ಮಲಗಿದ ಕಿರಿಯಳ ನೆನೆದು

ಹಾಡಿಯೆ ಹಾಡಿತು ಎರಡನೆ ಕೋಗಿಲೆ
ದುಃಖಿದಿ ತುಂಬಿದ ನಲ್ಲನ ನೆನೆದು
ಬದುಕೆಲ್ಲ ಶೋಕಿಸುವ ನಲ್ಲನ ನೆನೆದು

ಹಾಡಿಯೆ ಹಾಡಿತು ಮೂರನೆ ಕೋಗಿಲೆ
ಆಯುಷ್ಯದುದ್ದಕೂ ಎಡಬಿಡದಂತೆ
ಹಾಡಿತು ಕೋಗಿಲೆ ತಾಯಿಯ ನೆನೆದು
ಎಂದೆಂದಿಗೂ ಬರಿ ದುಃಖವಾದವಳನು ನೆನೆದು

ಕೋಗಿಲೆ ಹಾಡಿನ ದನಿ ಕೇಳಿ
ಹೇಳಿದಳೀ ನುಡಿ ಆ ತಾಯಿ;
ಕೇಳದಿರಲೆಂದೂ ಕೋಗಿಲೆಯ ಹಾಡು
ನಿರ್ಭಾಗ್ಯ ತಾಯಂದಿರ ಕರ್ಣಗಳಿಗೆ
ಕೋಗಿಲೆಯ ದನಿ ಕಿವಿಗೆ ಬಿದ್ದಾಗಲೆಲ್ಲ
ಹೆಚ್ಚುವುದು ಎದೆ ಬಡಿತ ಸುರಿಯುವುದು ಕಂಬನಿ
ಹುರುಳಿ ಬೀಜಕೂ ದಪ್ಪ ಸೀಬೆ ಹಣ್ಣಿಗೂ ದಪ್ಪ

ಕೇಳುತಿದ್ದರೆ ಹೀಗೇ ಕೋಗಿಲೆಯ ದನಿ ಕಿವಿಗೆ
ಕುಸಿಯುವುದು ಆಯಸ್ಸು ಕವಿಯುವುದು ಮುಪ್ಪು
ನೋವು ತಿನ್ನುತ ಜೀವ ಬಸವಳಿದು ಸೋಲುವುದು

೫. ಹಿಡಿದನು ಮೀನು ವೆಯ್ನಾಮೊಯ್ನನ್

ಹಬ್ಬಿತೆಲ್ಲೆಡೆ ಸುದ್ದಿ ಚೆಲುವೆ ಅಳಿದಂಥ ಸುದ್ದಿ
ದೃಢಚಿತ್ತ ಹಿರಿಯ ವೆಯ್ನಾಮೊಯ್ನನ್
ಮರುಗಿದನು ಬಹಳ
ಅಳುತ ಸಂಜೆಯ ಕಳೆದ ಅಳುತ ಹಗಲನು ಕಳೆದ
ಅಳುತಲೇ ಕಳೆದ ರಾತ್ರಿಯೆಲ್ಲ

ಶೋಕದ ನಿಟ್ಟುಸಿರು ದುಃಖ ತುಂಬಿದ ಹೃದಯ
ಹಾಗೆಯೇ ನಡೆದ ಸರೋವರ ತಡಿಗೆ
ಉಂಟಾಮೊ, ನಿದ್ರಾ ಸ್ವಪ್ನಗಳ ದೇವ
ಹೇಳು ಎಲ್ಲಿಹುದು ಅಹ್ತೊನ ತಾಣ
ಎಲ್ಲಿಹುದು ಹೇಳು ಕಡಲದೇವನ ತಾಣ
ಎಲ್ಲಿರುವರು ಹೇಳು ಕಡಲ ಚೆಲುವೆಯರು

ಕನಸಿನ ನುಡಿ ನುಡಿದ ಉಂಟಾಮೊ ದೇವ
ಅಲ್ಲಿಹುದು ನೋಡು ಅಹ್ತೋನ ದೇಶ
ಅಲ್ಲಿರುವರು ನೋಡು ಕಡಲ ಕನ್ನೆಯರು
ಮೋಡ ಕವಿದಿರುವ ಭೂಮಿ ಚಾಚಲ್ಲಿ
ಕವಿದ ಕಾವಳದ ನಡುಗಡ್ಡೆಯಲ್ಲಿ
ಅಲೆಗಳಡಿಯಲ್ಲಿ ನೀರಾಳದಲ್ಲಿ
ಕಡಲಾಳದಲ್ಲಿ ಕಡುಕತ್ತಲಲ್ಲಿ

ಅಲ್ಲಿಹುದು ನೋಡು ಅಹ್ತೋನ ನಾಡು
ಅಲ್ಲಿರುವರು ವೆಲಾಮೊ ಕನ್ನೆಯರು
ಇಕ್ಕಟ್ಟಿನ ಕೋಣೆ ಅತಿ ಕಿರಿಯ ಕೋಣೆ
ಬಣ್ಣ ಬಣ್ಣದವು ಶಿಲೆಯ ಗೋಡೆ

ಬೇಗಬೇಗನೆ ಬಂದ ಈಚೆಗೆಳೆದನು ನಾವೆ
ಸರಿಮಾಡಿಕೊಂಡ ಕೊಕ್ಕೆ ಗಾಳ
ಚೀಲದೊಳಗಿಟ್ಟ ಮುಳ್ಳುಕೊಕ್ಕೆ

ದೋಣಿ ತೇಲಿತು ಮುಂದೆ ನೀರಲೆಯ ಮೇಲೆ
ಕವಿದ ಕಾವಳದ ನಡುಗಡ್ಡೆಯೆಡೆಗೆ
ಮಂಕು ಮಂಕಾದ ಭೂಭಾಗದೆಡೆಗೆ

ಸಜ್ಜಾದ ಮೀನಿಗೆ ಸರಿಮಾಡಿ ಕೈಬಲೆ
ನೀರಿಗಿಳಿಸಿದ ಕೊಕ್ಕೆ ಕಾದಿದ್ದ ಮತ್ಸ್ಯಕ್ಕೆ
ಕಂಪಿಸಿತು ಸರಳು ಸುಯ್ಕೆಂದಿತು ದಾರ

ಅಂತೂ ಒಂದು ದಿನ ಮುಂಜಾವಿನ ಸಮಯ
ಸಿಕ್ಕಿ ಬಿದ್ದಿತು ಮೀನು ಅವನ ಗಾಳಕ್ಕೆ
ಸರ್ರನೆಳೆದದನು ಹಲಗೆ ಮೇಲೆಸೆದ
ಮೀನೆಂದರೆ ಮೀನು ಸಾಟಿಯಿಲ್ಲದ ಮೀನು
ನೋಡಲಿಲ್ಲಿದುವರೆಗೆ ಇದರಂಥ ಮೀನು

ನುಣುಪು ಫೊವನ್‌ಗಿಂತ ಹಳದಿ, ಸಾಲ್ಮನ್‌ಗಿಂತ
ಬಿಳುಪು, ಪೈಕ್‌ಗಿಂತ ಸೋಜಿಗದ ಮೀನು
ಹೆಣ್ಣೆನ್ನಲೆ ಇದಕೆ ರೆಕ್ಕೆ ಇಲ್ಲ
ಗಂಡೆನ್ನಲೆ ಇದಕೆ ಹುರುಪೆ ಇಲ್ಲ
ಇಲ್ಲ ಜಡೆ ಹೆಣ್ಣಿಂತೆ ಜಲಗನ್ನೆ ನಡುಪಟ್ಟಿ
ಇರಬಹುದು ಯಾವುದೋ ನೀರಾಳದ ಮೀನು

ಸೊಂಟದೊಳಗಿತ್ತು ವೆಯ್ನಾಮೊಯ್ನನ್ ಕತ್ತಿ
ಬೆಳ್ಳಿ ಅಲಗಿರುವ ಸಣ್ಣಕತ್ತಿ
ಎಳೆದು ಒರೆಯಿಂದ ಸೀಳಿ ಕತ್ತರಿಸಿ
ಬೆಳಗಿನುಪಹಾರಕ್ಕೆ ಮಧ್ಯಾಹ್ನದೂಟಕ್ಕೆ
ಅಥವಾ ರಾತ್ರಿ ಊಟಕ್ಕೆ ಇರಲೆಂದುಕೊಂಡ

ಇನ್ನೂ ಸೀಳಿರಲಿಲ್ಲ ಮೀನು ಹಾರಿತು ಹೊರಗೆ
ಕೆಂಪು ಬಣ್ಣದ ನಾವೆಯಿಂದಾಚೆ
ವೆಯ್ನಾಮೊಯ್ನನ್ ದೋಣಿಯಿಂದಾಚೆ

ಐದಾಳು ಎತ್ತರದ ಅಲೆಯಿಂದ ತಲೆಯೆತ್ತಿ
ಆರಾಳು ಎತ್ತರದ ಅಲೆಯಿಂದ ತಲೆಯೆತ್ತಿ
ಎರಡು ಕರಗಳನು ಗಾಳಿಯಲಿ ಮೇಲೆತ್ತಿ
ನುಡಿಯಿತಾ ಮೀನು
ಓ ಮುದಿಯ ವೆಯ್ನಾಮೊಯ್ನನ್
ಮೀನಾಗಿ ಬರಲಿಲ್ಲ ನಿನ್ನ ಬಳಿ ನಾನು
ಕತ್ತರಿಸಿ ತಿನಲು ತುಂಡು ತುಂಡಾಗಿ

ಬರಲಿಲ್ಲ ನಾ ನಿನ್ನ ಉಪಹಾರಕ್ಕಾಗಿ
ಇರುಳು ಸಮೃದ್ಧ ಭೋಜನಕ್ಕಾಗಿ

ಕೇಳಿದನು ವೆಯ್ನಾಮೊಯ್ನನ್
ಹಾಗಿದ್ದರೆ ನೀನು ಬಂದುದೇಕೆ?

ನಾ ಬಂದೆ ತೋಳಲ್ಲಿ ಪಾರಿವಾಳದಂತಿರಲು
ಮಡದಿ ಹಾಗಿರಲು ತೊಡೆಯ ಮೇಲೆ
ಹಾಸುಗೆಯ ಹಾಸಲು ನಿನ್ನ ವಿಶ್ರಾಂತಿಗೆ
ಚೊಕ್ಕವಾಗಿಡಲು ನಿನ್ನ ಕೋಣೆ
ಒಲೆಹಚ್ಚಿ ಸಿಹಿರೊಟ್ಟಿ ಮಾಡಿಕೊಡಲೆಂದು
ಬಟ್ಟಲಿಗೆ ಸುರೆ ತುಂಬಿ ನಿನಗೆ ಕೊಡಲೆಂದು
ಇರುಳು ಭೋಜನ ನಿನಗೆ ಬಡಿಸಲೆಂದು

ನಾನಲ್ಲ ಮೀನು ಆಳನೀರಿನ ಮೀನು
ಯೊಕಾಹಿನನ್ ತಂಗಿ ಚೆಲುವೆ ನಾನು
ಬದುಕಿಲ್ಲ ನೀನು ಬಯಸಿದಂಥವಳು
ಪಡೆಯಲೆಂದು ನೀ ಹಂಬಲಿಸಿದವಳು

ಕರುಣೆ ಬರುತಿದೆ ಮುದಿಯ ನಿನ್ನ ನೋಡಿ
ವೆಯ್ನಾಮೊಯ್ನನ್ ನೀನೆಂಥ ಬುದ್ಧಿಗೇಡಿ
ನನ್ನ ಹಿಡಿಯುವ ಬುದ್ಧಿ ನಿನಗಿಲ್ಲವಲ್ಲ
ಹಿಡಿದಿಡುವ ಚಾತುರ್ಯ ನಿನಗಿಲ್ಲವಲ್ಲ
ವೆಲಾಮೊಳ ಕಿರಿಮಗಳು ನಾನು
ಜಲದೇವ ಅಹ್ತೋನ ಮುದ್ದು ಮಗಳು

ತಲೆತಗ್ಗಿಸಿ ಬಲುಶೋಕದಿ ನುಡಿದನವನು
ಯೊಕಾಹಿನನ್ ಸೋದರಿಯೆ ಮರಳಿ ಬಾ ಮತ್ತೆ
ಬೇಡುತಿಹೆ ನಾನು ಮರಳಿ ಬಾ ಮತ್ತೆ

ಅವಳೆಂದೂ ಅವನ ಬಳಿ ಬರಲಿಲ್ಲ ಮತ್ತೆ
ಅವನ ಜೀವನ ಪರ್ಯಂತ ಬರಲಿಲ್ಲ ಮತ್ತೆ
ಮುಖ ತಿರುಗಿಸಿ ಧುಮುಕಿದಳು ಮರೆಯಾಗಿ ನೀರಿಂದ
ಶಿಲೆ ಬಂಡೆಯ ಕೆಳಗೆ ಕೆಂಪು ಶಿಲೆ ಬಿರುಕೊಳಗೆ

ದೃಢ ಚಿತ್ತ ಹಿರಿಯ ವೆಯ್ನಾಮೊಯ್ನನ್
ಚಿಂತಿಸಿದ ಹೀಗೆ ಬಲು ದೀರ್ಘವಾಗಿ
ಈಗ ಮಾಡುವುದೇನು ಮಾಡಬೇಕಿತ್ತೇನು?

ತ್ವರೆಯಿಂದ ಹೆಣೆದ ಮೀನು ಬಲೆಯನ್ನು
ಉದ್ದುದ್ದ ಅಡ್ಡಡ್ಡ ಸರಿಯಾಗಿ ಬೀಸಿದನು
ಅಲೆಯಿಲ್ಲದ ನೀರ ಮೇಲಕ್ಕೆ ಬೀಸಿದನು
ಸಾಲ್ಮನ್ ಬಯಸುವಾಳಕ್ಕೆ ಬೀಸಿದನು
ಬೀಸಿದನು ವೆಯ್ನೊಲಾ ಕಡಲಿನಾಳಕ್ಕೆ
ಬೀಸಿದನು ಚಾಚಿದ್ದ ಕಲೆವಾಲ ಭೂಮಿಗೆ
ಬೀಸಿದನು ಕಡಲ ನೀರಾಳದ ಗವಿಗೆ

ಸಿಕ್ಕವು ಸಮೃದ್ಧ ಬೇರೆ ಮೀನು
ಸಿಕ್ಕವು ನೀರೊಳಗಿನೆಲ್ಲ ಮೀನು
ಸಿಗಲಿಲ್ಲ ಮಾತ್ರ ಹುಡುಕಿದ್ದ ಮೀನು
ಬೇಕೆಂದು ಅವನು ಬಯಸಿದ್ದ ಮೀನು
ಸಿಗಲಿಲ್ಲ ಅವಳು ವೆಲಾಮೊಪುತ್ರಿ
ಸಿಗಲಿಲ್ಲ ಅವನಿಗೆ ಅಹ್ತೋನಪುತ್ರಿ

ದೃಢಚಿತ್ತ ಹಿರಿಯ ವೆಯ್ನಾಮೊಯ್ನನ್
ತಲೆ ತಗ್ಗಿಸಿ ರೋದಿಸಿದ ಬಹಳವಾಗಿ
ತಲೆಯ ಮೇಲಿನ ಟೊಪ್ಪಿ ಓರೆಯಾಗಿ
ಬಲುದೊಡ್ಡ ತಪ್ಪು ಮಾಡಿದೆನು ನಾನು
ಪುರುಷ ಬುದ್ಧಿಗೆ ಬಲು ಕಡಿಮೆಯಾದೆನು
ಒಂದು ಕಾಲದಲಿತ್ತು ಬಹಳ ತಿಳುವಳಿಕೆ
ಹೃದಯವಂತಿಕೆ ಇತ್ತು ವಿವೇಚನೆ ಇತ್ತು
ಈಗೇಕೊ ಕಾಲ ಸರಿಯಿಲ್ಲ ನನಗೆ
ಉಡುಗುತಿದೆ ಶಕ್ತಿ ಮಂಕಾಗುತಿದೆ ಬುದ್ಧಿ
ಎಲ್ಲಿಯೋ ಹೋಯಿತು ನನ್ನ ಪರಿಜ್ಞಾನ
ತಿರುವು ಮುರುವಾದವು ನನ್ನ ತೀರ್ಮಾನ

ಎಷ್ಟೊಂದು ವರ್ಷ ಬಯಸಿದವಳನ್ನು
ಅರ್ಧ ಜೀವನ ಕಾಲ ಹಂಬಲಿಸಿದವಳನ್ನು
ವೆಲಾಮೊ ಪುತ್ರಿ ಅಲೆಯ ಮಗಳನ್ನು

ಎಂದೆಂದಿಗೂ ನನ್ನ ಗೆಳತಿಯಾಗುವಳನ್ನು
ಬದುಕೆಲ್ಲ ನನ್ನ ಮಡದಿಯಾಗುವಳನ್ನು
ನನ್ನ ಗಾಳಕ್ಕೆ ಸಿಕ್ಕಿದವಳನ್ನು
ಹಿಡಿಯುವುದು ಹೇಗೆಂದು ತಿಳಿಯಲಿಲ್ಲ
ನನ್ನ ಮನೆಗವಳ ಕರೆದೊಯ್ಯಲಿಲ್ಲ
ನೀರಲ್ಲಿ ಧುಮುಕಿದಳು ಕಡಲಲ್ಲಿ ಮುಳುಗಿದಳು

ಹಾಗೆ ಅಲೆದಾಡಿದ ಸ್ವಲ್ಪಕಾಲ
ನಿಟ್ಟುಸಿರು ಶೋಕದಲಿ ಮನೆಗೆ ಬಂದ
ಅಂದುಕೊಂಡನು ಅವನು ಮನದಲ್ಲಿ ಹೀಗೆ
ಮೊದಲು ಹಾಡುತ್ತಿದ್ದವು ಹಕ್ಕಿ ಉಲ್ಲಾಸವಾಗಿ
ಕೋಕಿಲದ ಹಕ್ಕಿ ಮಧುರವಾಗಿ
ಹಗಲು ಸಂಜೆಗಳಲ್ಲಿ ನಡು ಮಧ್ಯಾಹ್ನ ಕೂಡ

ಮೌನ ತಾಳಿದವೇಕೆ ದನಿ ಇಂಗಿತೇಕೆ
ನಿಲ್ಲಿಸಿದವರಾರು ಮಧುರ ದನಿಗಳನು
ತಡೆದವರು ಯಾರು ಇಂಪು ದನಿಯನ್ನು
ಯಾವುದೋ ಚಿಂತೆ ದನಿಯನಾವರಿಸಿ
ಯಾವುದೋ ದುಃಖ ಕೊರಳ ಸೆರೆಕಟ್ಟಿ
ಹಾಡಲಾರವು ಹಕ್ಕಿ ಇನ್ನೆಂದಿಗೂ ಮೊದಲಂತೆ
ನನ್ನ ಸಂತೋಷಕ್ಕೆ ಮನಸ್ಸಿನಾನಂದಕ್ಕೆ

ಎಲ್ಲಿ ಹೋಗುವುದೊ ತಿಳಿಯುತ್ತಿಲ್ಲ
ಏನು ಮಾಡುವುದೊ ತೋಚುತಿಲ್ಲ
ಬದುಕಿದ್ದರೆ ಈಗ ನನ್ನ ಹೆತ್ತವಳು
ನೆರವಾಗುತ್ತಿದ್ದಳು ನನ್ನ ಕಷ್ಟಕ್ಕೆ
ದುಃಖ ನುಂಗದ ಹಾಗೆ ಶೋಕ ಮುಗಿಸದ ಹಾಗೆ
ನುಡಿಯುತ್ತಿದ್ದಳು ಧೈರ್ಯದ ಮಾತು ನನಗೆ

ಎಚ್ಚೆತ್ತಳು ತಾಯಿ ಗೋರಿಯಲ್ಲಿ
ಉತ್ತರಿಸಿದಳು ಹೀಗೆ ಅಲೆಗಳಡಿಯಿಂದ
ಬದುಕಿರುವಳು ನಿನ್ನವ್ವ ಕೇಳಿಹಳು ನಿನ್ನ ನುಡಿ
ಹೋಗು ಪೊಹ್ಜಾಗೆ ಅರಿಸಿಕೊ ಹೆಣ್ಣು

ಮೀರಿಸಿದ ಚೆಲುವೆಯರು ಬಹಳ ಚದುರೆಯರು
ಯೊಕಾದ ಸೋಮಾರಿ ಹುಡುಗಿಯರ ಹಾಗಲ್ಲ
ಲ್ಯಾಪ್‌ಲ್ಯಾಂಡಿನ ಧಡೂತಿ ಜಡ ಹೆಣ್ಣುಗಳಲ್ಲ
ಹುಡುಕಿಕೊ ನಿನಗೆ ಕೆಂಪಗಿನ ರಂಭೆ
ಕಣ್ಣು ಮೂಗಲಿ ಚೆಲುವೆ ಚುರುಕು ಪಾದದ ಚದುರೆ.

೬. ಗಾಯಗೊಂಡನು ವೆಯ್ನಾಮೊಯ್ನನ್

ಯೊಕಾಹಿನ್ನನ ಮನದಲ್ಲಿ ದ್ವೇಷ ಕುದಿಯುತ್ತಿತ್ತು. ವೆಯ್ನಾಮೊಯ್ನನ್ ಪೊಹ್ಜೊಲಗೆ ಹೋಗುವ ದಾರಿಯಲ್ಲಿ ಯೊಕಾಹಿನನ್ ಕಾದು ಕುಳಿತನು. ಅವನು ಕುದುರೆಯ ಮೇಲೇರಿ ಹೋಗುವಾಗ ಬಾಣದಿಂದ ಹೊಡೆದನು. ಆದರೆ ಕುದುರೆ ಮಾತ್ರ ಸತ್ತು ಬಿದ್ದಿತು. ವೆಯ್ನಾಮೊಯ್ನನ್ ನೀರಿಗೆ ಬಿದ್ದನು. ಬಿರುಗಾಳಿ ಅಲೆ ಅವನನ್ನು ಕಡಲಿಗೆ ಕೊಚ್ಚಿಕೊಂಡು ಹೋಯಿತು. ಇದು ಗೊತ್ತಿರದ ಯೊಕಾಹಿನನ್ ತಾನು ವೆಯ್ನಾಮೊಯ್ನನ್ನನನ್ನು ಕೊಂದೆನೆಂದೇ ತಿಳಿದು ಸಂಭ್ರಮಿಸಿದ.

ವೆಯ್ನಾಮೊಯ್ನನ್ ಅನೇಕ ದಿನಗಳವರೆಗೆ ಕಡಲಿನಲ್ಲಿ ತೇಲುತ್ತಲೇ ಇದ್ದ. ತಾನು ತಂಗುವುದಕ್ಕಾಗಿ ಬರ್ಚ್ ಮರವನ್ನುಳಿಸಿದ್ದ ವೆಯ್ನಾಮೊಯ್ನನನ ಉಪಕಾರವನ್ನು ಸ್ಮರಿಸಿಕೊಂಡ ಹದ್ದು ಅವನನ್ನು ತನ್ನ ರೆಕ್ಕೆಯ ಮೇಲೆ ಕೂರಿಸಿಕೊಂಡು ಪೊಹ್ಜೊಲಾ ಗಡಿಯಲ್ಲಿ ಇಳಿಸಿತು. ಪೊಹ್ಜೊಲಾ ಒಡತಿ ಅವನನ್ನು ತನ್ನ ಮನೆಗೆ ಕರೆದೊಯ್ದು ಸತ್ಕರಿಸಿದಳು. ವೆಯ್ನಾಮೊಯ್ನನ್ ತನ್ನ ನಾಡಿಗೆ ಹಿಂದಿರುಗಲು ಬಯಸಿದಾಗ ಅವನು ಪೊಹ್ಜೊಲಾದವರಿಗೆ ಸ್ಯಾಂಪೊ ಗಿರಣಿ ನಿರ್ಮಿಸಿಕೊಟ್ಟರೆ ಮಾತ್ರ ತನ್ನ ಮಗಳನ್ನು ಕೊಡುವುದಾಗಿ ಅವಳು ತಿಳಿಸಿದಳು. ತನಗೆ ಎರಕ ಹೊಯ್ಯುವ ಕೆಲಸ ಗೊತ್ತಿಲ್ಲವಾದ್ದರಿಂದ ತನ್ನ ನಾಡಿಗೆ ತೆರಳಿ ಕುಶಲ ಕಮ್ಮಾರ ಇಲ್ಮಾರಿನೆನ್‌ನನ್ನು ಕಳಿಸಿಕೊಡುವುದಾಗಿ ವೆಯ್ನಾಮೊಯ್ನನ್ ವಚನ ಕೊಟ್ಟ. ಇದಕ್ಕೊಪ್ಪಿದ ಪೊಹ್ಜೊಲಾ ಒಡತಿ ಅವನು ಊರು ತಲುಪುವುದಕ್ಕಾಗಿ ವೆಯ್ನಾಮೊಯ್ನನ್‌ಗೆ ಕುದುರೆಯನ್ನು ಮತ್ತು ಹಿಮಬಂಡಿಯನ್ನು ಕೊಟ್ಟಳು.

ಪೊಹ್ಜಾದ ಹೆಣ್ಣವಳು ಬಲು ಚೆಲುವೆಯವಳು
ಭೂಜಲ ಲೋಕದಲಿ ಹೆಸರಾದ ಹೆಣ್ಣವಳು
ಕುಳಿತಿದ್ದಳಾಕೆ ಮಳೆ ಬಿಲ್ಲ ಮೇಲೆ
ಥಳಥಳಿಸುವ ಉಡುಗೆ ಹೊಳೆವ ಬಿಳಿ ಉಡುಗೆ
ನೇಯುತ್ತಿದ್ದಳೊಂದು ಬಂಗಾರ ವಸ್ತ್ರ
ಬೆಳ್ಳಿ ಕುಸುರಿಯ ಬಂಗಾರ ವಸ್ತ್ರ

ದೃಢಚಿತ್ತ ಹಿರಿಯ ವೆಯ್ನಾಮೊಯ್ನನ್
ಹಿಂದಿರುಗಿ ಹೊರಬಿದ್ದ ಪೊಹ್ಜಾದ ನಾಡಿಂದ
ಬಹಳ ದೂರ ಬಂದಿರಲಿಲ್ಲ ಬಂದಿದ್ದ ಸ್ವಲ್ಪ ದೂರ
ಕೇಳಿಸಿತು ಕಿವಿಗೆ ಲಾಳಿ ಆಡುವ ಸದ್ದು
ತಲೆ ಎತ್ತಿ ನೋಡಿದನು ಮಳೆ ಬಿಲ್ಲ ಕಂಡನು
ಅವಳು ಇದ್ದಳು ಮಳೆ ಬಿಲ್ಲ ಮೇಲೆ

ಹಿರಿಯ ದೃಢಚಿತ್ತ ವೆಯ್ನಾಮೊಯ್ನನ್
ಬಂಡಿ ನಿಲ್ಲಿಸಿದ ದನಿ ಎತ್ತಿ ಕರೆದ
ಬಾ ಹೆಣ್ಣೆ ಇಲ್ಲಿ ಕೂರು ಪಕ್ಕದಲ್ಲಿ
ಕೇಳಿದಳು ಚೆಲುವೆ ಅವನನ್ನು ಹೀಗೆ
ಬರಬೇಕು ಎಲ್ಲಿಗೆ ಬಂಡಿಯಲ್ಲಿ ಜೊತೆಗೆ

ಚೆಲುವೆ ನೀ ಬರಬೇಕು ಬಳಿ ಕೂರಬೇಕು
ಸಿಹಿರೊಟ್ಟಿ ಬೇಯಿಸಲು ಸುರೆಭಟ್ಟಿ ಇಳಿಸಲು
ಇಂಪಾಗಿ ಹಾಡಲು ಕುಳಿತು ಸರಸವಾಡಲು
ವೆಯ್ನೊಲಾದಲ್ಲಿ ನಾನಿರಲು
ಕಲೆವಾಲಾದಲ್ಲಿ ನಾನಿರಲು

ತರುಣಿ ಹೇಳಿದಳು :
ಅಡ್ಡಾಡುತಿದ್ದೆ ಸಂಜೆ ಹುಲ್ಲು ಬಯಲಲ್ಲಿ
ಅಸ್ತಮಿಸುತ್ತಿದ್ದ ರವಿ ಹಾಡುತಿದ್ದಿತು ಹಕ್ಕಿ
ಹಾಡುತಿತ್ತು ಅದು ತರುಣಿಯರ ಬಗ್ಗೆ
ನವವಧುಗಳ ರೀತಿ ನೀತಿಗಳ ಬಗ್ಗೆ
ಕೇಳಿದೆನು ನಾನು ಹೆಣ್ಣಾಗುವುದು ಚಂದ
ಚಂದವೊ ಮನೆ ಅಪ್ಪನದು ಚಂದವೊ ಮನೆ ಗಂಡನದು

ಹಕ್ಕಿ ನುಡಿಯಿತು ಹೀಗೆ ಚಿಲಿಪಿಲಿಯ ದನಿಯಲ್ಲಿ
ಬೇಸಿಗೆಯ ಎಳೆ ಬಿಸಿಲ ಹಗಲು ಚಂದ
ಅದಕಿಂತಲೂ ಚಂದ ಕನ್ನೆ ಬದುಕು
ಮಂಜಿನಲ್ಲಿ ಬಲುತಣ್ಣಗೆ ಕೊರೆಯುತ್ತದೆ ಕಬ್ಬಿಣ
ಅದಕಿಂತಲೂ ತಣ್ಣಗೆ ನವವಧುವಿನ ಜೀವನ
ಇಹುದು ಕನ್ನೆಯ ಬದುಕು ತಂದೆ ಮನೆಯಲ್ಲಿ
ಕಳಕಳಿಸುವ ರಸದ ಹಣ್ಣಿನಂತೆ
ವಿವಾಹಿತೆಯ ಬದುಕು ಪತಿಯ ಗೃಹದಲ್ಲಿ
ಕಟ್ಟಿ ಹಾಕಿದ ಪಾಪಿ ನಾಯಿಯಂತೆ
ಸಂತಸವಿದೆ ಗುಲಾಮನಿಗೆ ಅಪರೂಪಕಾದರೂ
ವಿವಾಹಿತೆಗೆ ಇದೆಯೆ ಒಂದು ದಿನಕಾದರೂ

ದೃಢಚಿತ್ತ ಹಿರಿಯ ವೆಯ್ನಾಮೊಯ್ನನ್ ನುಡಿದ
ಹಕ್ಕಿ ಹಾಡಿಗರ್ಥವಿಲ್ಲ ಬಡಬಡಿಕೆಯ ಗದ್ದಲ

ಮಗಳೆಂದು ಸಲಹುವರು ಚಿಕ್ಕ ಹುಡುಗಿಯನು
ಸಲಹುವರು ಯಾರು ಮದುವೆಯಾಗದಿರೆ ತರುಣಿಯನು
ಬಾರೆ ಚೆಲುವೆ ಪಕ್ಕಕೆ ಬಾರೆ ನನ್ನ ಜೊತೆಗೆ
ಕೆಲಸಕ್ಕೆ ಬಾರದ ಪುರುಷನೇನಲ್ಲ
ಬೇರೆ ವೀರರಿಗೇನೂ ಕಡಿಮೆಯಿಲ್ಲ

ಜಾಣೆ ನುಡಿದಳು ಹೀಗೆ ಒಗಟು ಮಾತೊಂದ
ಸೀಳಬೇಕು ನೀನು ತುರಗ ಕೇಶ
ಮೊಂಡಾದ ಕತ್ತಿ ಅಲುಗಿನಿಂದ
ತಿರುಚಬೇಕು ತತ್ತಿ ಕಾಣದಂತೆ ಗಂಟು
ಆಗ ನಾ ಒಪ್ಪುವೆನು ವೀರನೆಂದು ಗಣಿಸುವೆನು

ಸೀಳಿದನು ಕೂದಲು, ಹಿಡಿದು ಮೊಂಡು ಕತ್ತಿ
ಕಾಣದಂತೆ ಗಂಟು ತಿರುಚಿದನು ತತ್ತಿ

ಸುಲಿಯಬೇಕು ಕಲ್ಲನು ಸಿಡಿಯದಂತೆ ಚೂರು
ಕೊಚ್ಚಬೇಕು ಹಿಮದುಂಡೆ ಸಿಡಿಯದಂತೆ ಕಣವೂ

ಅದು ಕಷ್ಟವೇನಲ್ಲ ಹಿರಿಯ ವೆಯ್ನಾಮೊಯ್ನನ್‌ಗೆ
ತೆಗೆದುಕೊಟ್ಟನು ತಿರುಳು ಕಲ್ಲೊಳಗಿನಿಂದ
ಹೋಳು ಮಾಡಿದ ಮಂಜು ಸಿಡಿಯಲಿಲ್ಲ ಚೂರೂ

ಜಾಣೆ ನುಡಿದಳು ಮತ್ತೆ ಒಗಟು ಮಾತೊಂದ
ನಾವೆಯನು ಮಾಡಿದರೆ ರಾಟೆ ಸಿಬುರಿಂದ
ನೂಕಿದರೆ ನೀರೊಳಗೆ ಮುಟ್ಟದೆ ಕೈಯಿಂದ
ಒತ್ತದೆ ಮೊಣಕಾಲಿಂದ ತಳ್ಳದೆ ತೋಳಿಂದ
ಮಾಡುವೆನು ನಿರ್ಧಾರ ನಾ ಬರುವ ಬಗ್ಗೆ

ದೃಢಚಿತ್ತ ಹಿರಿಯ ವೆಯ್ನಾಮೊಯ್ನನ್ ನುಡಿದ
ಯಾವ ದೇಶದಲೂ ಇಲ್ಲ ಯಾವ ನಾಡಲೂ ಇಲ್ಲ
ಆಗಸದ ಕೆಳಗಿರುವ ಯಾವ ಲೋಕದೊಳಿಲ್ಲ
ನನ್ನಂಥ ಕುಶಲ, ದೋಣಿ ಕಟ್ಟುವುದರಲ್ಲಿ

ಆಯ್ದು ರಾಟೆಯ ಚೂರು ಲಾಳಿ ಸಿಬುರಿನ ಚೂರು
ಕಟ್ಟಿದನು ದೋಣಿ ಜೋಡಿಸಿ ಹಲಗೆ ನೂರು

ದುಡಿದ ಎಡಬಿಡದೆ ಒಂದು ದಿನ ಎರಡು ದಿನ
ದುಡಿದ ಹೀಗೆಯೇ ಮೂರು ದಿನವಾದರೂ
ಕಾಡಿತವಗೆ ದುರ್ವಿಧಿ ಮೂರು ದಿನದ ಕೊನೆಗೆ
ಕತ್ತಿ ತಾಗಿ ಕಲ್ಲಿಗೆ ಬಡಿಯಿತದು ಹಿಂದಕೆ
ತೂರಿ ಮೊಣಕಾಲ ಮಾಂಸ ಹರಿದು ನೆತ್ತರ ಕೋಡಿ

ತಾಳದಾಯಿತು ನೋವು ಸಹಿಸದಾಯಿತು ಬೇನೆ
ಪರಿತಪಿಸಿದ ವೀರ ಬಲು ನೋವಿನಿಂದ
ದೃಢಚಿತ್ತ ವೆಯ್ನಾಮೊಯ್ನನ್
ಮಂತ್ರವಾದಿಗಳಲ್ಲಿ ಹಿರಿಯ ನುಡಿದ ಹೀಗೆ
ದುಷ್ಟಕ್ರೂರ ಕೊಡಲಿಯೆ ಹರಿತ ಅಲಗು ಕೊಡಲಿಯೆ
ಮರದ ಕೊರಡು ಸೀಳಿದಂತೆ
ಪೈನ್‌ಗೆ ಹಾಕಿದೇಟಿನಂತೆ
ನನ್ನ ಮಾಂಸಖಂಡ ಸೀಳಿದೆ ನನ್ನ ಧಮನಿ ಹರಿದೆ

ಹಾಕಿದನು ಮಂತ್ರ ಪಠಿಸಿದನು ಮಂತ್ರ
ಕಬ್ಬಿಣದ ಮೂಲಮಂತ್ರ ಗಾಯ ಮುಚ್ಚುವ ಮಂತ್ರ
ಆದರವಗೆ ತಿಳಿಯದು ಕಬ್ಬಿಣದ ಹುಟ್ಟು
ದುಷ್ಟ ಶಕ್ತಿಗೆ ಹಾಕುವುದಕೆ ಕಟ್ಟು

ರಕ್ತ ಹರಿದಿತ್ತು ಉಕ್ಕಿದ ನೆರೆಯಂತೆ
ಭೋರ್ಗರೆದು ಹರಿವ ನದಿಯ ಹಾಗೆ
ಉಕ್ಕಿ ಹರಿಯಿತು ರಕ್ತ ಪೊದೆ ಗಿಡಗಳಲ್ಲಿ
ನೆರೆಯಾಗಿ ಹರಿಯಿತು ಗಿಡಗಂಟಿಮೆಳೆಯಲ್ಲಿ
ಯಾವ ಗುಡ್ಡವೂ ಇರಲಿಲ್ಲ ಮುಳುಗದೆ ನೆರೆಯಲ್ಲಿ
ಮೊಣಕಾಲಿನಿಂದುಕ್ಕಿದ ನೆತ್ತರಿನ ನೆರೆಯಲ್ಲಿ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಕಿತ್ತು ತಂದ ಕಲ್ಲು ಹೂವು ಶಿಲೆಯ ಬಂಡೆಯಿಂದ
ಆಯ್ದು ತಂದ ಪಾಚಿಸಸ್ಯ ನೀರ ಜವುಗಿನಿಂದ
ಹೊತ್ತು ತಂದ ಮಣ್ಣ ರಾಶಿ ಗುಡ್ಡ ಬೆಟ್ಟದಿಂದ
ಆದರೇನು ನಿಲ್ಲಲಿಲ್ಲ ಒಂದೆ ಸಮನೆ ಹರಿಯಿತು
ಫಲಕೊಡಲಿಲ್ಲ ಯತ್ನ ಎಲ್ಲ ವಿಫಲವಾಯಿತು

ಪರಿತಪಿಸಿದ ವೀರ ಬಲು ನೋವಿನಿಂದ
ಹಿಡಿದು ತಂದ ಕಂದು ಕುದುರೆ ಹಿಮ ಬಂಡಿಗೆ ಕಟ್ಟಿ
ಓಡಿತಶ್ವ ವೇಗದಿಂದ ಬಾರಿಸಿದಾಗ ಚಾಟಿ

ತಲುಪಿದರೊಂದು ಹಳ್ಳಿ ದಾರಿ ಕವಲು ಮೂರು
ನಡೆದನವನು ಒಂದು ಮನೆಗೆ ತಗ್ಗು ಹಾದಿ ಹಿಡಿದು
ಯಾರಾದರೂ ಇರುವರೇನು
ಕಬ್ಬಿಣದ ಗಾಯ ಗುಣ ಮಾಡುವರು
ಈ ನೋವನಿಳಿಸಿ ತಣಿಸುವರು?

ಆಡುತಿತ್ತು ನೆಲದ ಮೇಲೆ ಒಂದು ಪುಟ್ಟ ಕಂದ
ಹುಡುಗನೊಬ್ಬ ಹೀಗೆ ನುಡಿದ ಒಲೆಯ ಪಕ್ಕದಿಂದ
ಇಲ್ಲ ಇಲ್ಲಿ ಯಾರೂ
ಕಬ್ಬಿಣದ ಗಾಯ ಗುಣ ಮಾಡುವವರು
ದುಷ್ಟ ಶಕ್ತಿಗೆ ಕಲ್ಲು ಹುಯ್ಯುವವರು
ನೋವಿತ್ತ ಗಾಯ ಗುಣ ಮಾಡುವವರು
ಇರಬಹುದು ಅಂಥವರು ಬೇರೆ ಮನೆಯಲ್ಲಿ
ಅಲ್ಲಿಗೇ ಹೊರಡಿ ಅಲ್ಲೆ ವಿಚಾರಿಸಿ

ವೆಯ್ನಾಮೊಯ್ನನ್ ದೃಢ ಚಿತ್ತ ಹಿರಿಯ
ಹಿಡಿದು ಮಧ್ಯದ ಹಾದಿ ಬಂದ ನಡುವಿದ್ದ ಮನೆಗೆ
ಯಾರಾದರೂ ಇರುವರೇನು
ಕಬ್ಬಿಣದ ಗಾಯ ಗುಣ ಮಾಡುವವರು

ಇದ್ದಳೊಬ್ಬಳು ಮುದುಕಿ ಹಾಸಿಗೆ ಮೇಲೆ
ಒಲೆಯ ಬಳಿಯಲ್ಲಿ ಬಹಳ ಹರಟೆಯ ಮಲ್ಲಿ
ಇಲ್ಲ ಇಲ್ಲಿ ಯಾರೂ
ಕಬ್ಬಿಣದ ಗಾಯ ಗುಣ ಮಾಡುವವರು
ದುಷ್ಟಶಕ್ತಿಗೆ ಕಲ್ಲು ಹುಯ್ಯುವವರು
ನೋವಿತ್ತ ಗಾಯ ಗುಣ ಮಾಡುವವರು
ಇರಬಹುದು ಅಂಥವರು ಬೇರೆ ಮನೆಯಲ್ಲಿ
ಅಲ್ಲಿಗೇ ಹೊರಡಿ ಅಲ್ಲೆ ವಿಚಾರಿಸಿ

ವೆಯ್ನಾಮೊಯ್ನನ್ ನಡೆದ ಹಿಡಿದು ಏರಿಯ ಹಾದಿ
ಮನೆಯಿತ್ತು ದಿನ್ನೆಯಲಿ ಕೇಳಿದನು ಬಾಗಿಲಲಿ
ಯಾರಾದರೂ ಇರುವರೇನು
ಕಬ್ಬಿಣದ ಗಾಯ ಗುಣ ಮಾಡುವವರು
ಹರಿವ ನೆತ್ತರನು ತಡೆಯುವವರು
ಉಕ್ಕುತಿರುವ ರಕ್ತ ನಿಲ್ಲಿಸುವವರು

ಮುದುಕನಿದ್ದ ಒಲೆಯ ಬಳಿ
ಬಿಳಿಗಡ್ಡದವ ಹಾಸಿಗೆಯಲ್ಲಿ
ನುಡಿದ ಹೀಗೆ ಬಿಳಿ ಗಡ್ಡದವನು
ನಿಂತು ಹೋಗಿವೆ ಹಿಂದೆ ಇದನು ಮೀರಿದ ಹೊನಲು
ಸೃಷ್ಟಿಕರ್ತನ ಪದ ಮೂರರಿಂದ
ಆದಿ ಮೂಲಶಕ್ತಿ ಮಂತ್ರದಿಂದ
ಹರಿವ ತೊರೆ ನಿಂತವು ಹರಿವ ನದಿ ನಿಂತವು
ಎಂತೆಂಥ ಜಲಪಾತ ಅಲ್ಲ ಲ್ಲೇ ನಿಂತವು
ಕಲ್ಲುಶಿಲೆ ಭೂಮಿಯಲಿ ನದಿ ನೀರು ಹರಿದವು
ಕವಲೊಡೆದ ಭೂಭಾಗ ಕೂಡಿ ಒಂದಾದವು.

೭. ಕಬ್ಬಿಣದ ಉಗಮ

ದೃಢಚಿತ್ತ ಹಿರಿಯ ವೆಯ್ನಾಮೊಯ್ನನ್
ಚಿಮ್ಮಿದನು ಕೆಳಗೆ ಗಾಡಿಯಿಂದ
ನೆರವಿಲ್ಲದೆಯೆ ಒಳಗೆ ನಡೆದು ಬಂದ
ಸಾಕಾಗಲಿಲ್ಲ ಬಟ್ಟಲು ಪುಟಿದ ರಕ್ತಕ್ಕೆ

ಮುದುಕ ಕೇಳಿದ ಹೀಗೆ :
ಯಾವ ಮನುಜನೊ ನೀನು ಎಂಥ ಶೂರನೊ ನೀನು
ಏಳು ದೋಣಿಯ ತುಂಬಿ ಹರಿಯುತಿದೆ ರಕ್ತ
ಎರಡು ಕಡಾಯಿ ತುಂಬಿ ಹರಿದು ಹೋಗಿದೆ ರಕ್ತ
ಉಕ್ಕುತಿದೆ ಹೊನಲಂತೆ ಗೊತ್ತೆನಗೆ ಮಂತ್ರ
ಮರೆತು ಹೋಗಿದೆ ಒಂದು ಪ್ರಾಚೀನ ಮಂತ್ರ
ಕಬ್ಬಿಣವು ಹುಟ್ಟಿದ್ದು ಅದುರಿಂದ ತೆಗೆದಿದ್ದು

ಹಿರಿಯ ವೆಯ್ನಾಮೊಯ್ನನ್ ನುಡಿದ
ನನಗೆ ಗೊತ್ತಿದೆ ಕಬ್ಬಿಣವು ಹುಟ್ಟಿದ್ದು ಹೇಗೆ
ಅದುರಿಂದ ಉಕ್ಕು ತೆಗೆದಿದ್ದು ಹೇಗೆ
ಆದಿಮಾತೆಯು ಗಾಳಿ ಅಗ್ರಜನು ನೀರು
ಅನುಜ ಕಬ್ಬಿಣವು ಅಗ್ನಿ ಮಧ್ಯಮನು

ಸೃಷ್ಟಿಕರ್ತರಲಿ ಬಲಶಾಲಿ ಉಕೊದೇವ
ಸ್ವರ್ಗಾಧಿಪತಿ ಅವನು ಮೇಲಿರುವನು
ಬೇರೆ ಮಾಡಿದ ನೀರು, ಗಾಳಿಯಿಂದ
ಬೇರೆ ಮಾಡಿದ ಭೂಮಿ, ನೀರಿನಿಂದ
ಈ ದುಷ್ಟ ಕಬ್ಬಿಣದ ಜನನವಾಗಿರಲಿಲ್ಲ
ಸೃಷ್ಟಿಯಾಗಿರಲಿಲ್ಲ ಬೆಳೆದಿರಲೂ ಇಲ್ಲ

ಸ್ವರ್ಗಾಧಿಪತಿ ಉಕ್ಕೊ
ಕರಗಳನು ಜೋಡಿಸಿ ಬಲವಾಗಿ ಉಜ್ಜಿದ
ಎಡದ ಮೊಣಕಾಲಿಗೆ ಅದನೊತ್ತಿ ಹಿಡಿದ
ಸೃಷ್ಟಿಯಾದರು ಆಗ ಮೂರು ಹೆಣ್ಣುಗಳು
ಸೃಷ್ಟಿಕರ್ತಾರನ ಚೆಲುವ ಕುವರಿಯರು

ಕಬ್ಬಿಣದದುರಿನ ಮಾತೆಯರು ಅವರು
ನೀಲಿ ಮೊಗದವನನ್ನು ಬೆಳೆಸಿದವರು

ವಯ್ಯಾರದಿಂದವರು ಹೆಜ್ಜೆ ಹಾಕಿದರು
ಮೋಡದಂಚಲ್ಲಿ ನಡೆದಾಡಿ ಬಂದರು
ಉಕ್ಕಿ ಬರುತಿತ್ತು ತುಂಬಿದೆದೆ ಹಾಲು
ತುಂಬಿದೆದೆ ಬಹಳ ನೋಯುತಿತ್ತು
ಹರಿದು ಬಂದಿತು ಹಾಲು ಎದೆಯಿಂದ ಉಕ್ಕಿ
ಹರಿದು ಬಂತು ಭುವಿಗೆ ತುಂಬಿದೆದೆ ಉಕ್ಕಿ
ಹಾಲು ಭೂಮಿಯಲಿ ಹಾಲು ಜವುಗಲ್ಲಿ
ಹಾಲಿತ್ತು ಪ್ರಶಾಂತ ನೀರು ಜಲದಲ್ಲಿ
ಮೊದಲವಳ ಎದೆಯಿಂದ ಕರಿಯ ಹಾಲು
ಎರಡನೆಯವಳೆದೆಯಿಂದ ಬಿಳಿಯ ಹಾಲು
ಮೂರನೆಯವಳಿಂದ ಕೆಂಪು ಹಾಲು

ಕರಿಹಾಲು ಹರಿದಲ್ಲಿ ಮೆದುಕಬ್ಬಿಣವಾಯ್ತು
ಬಿಳಿಹಾಲು ಹರಿದಲ್ಲಿ ಗಟ್ಟಿ ಉಕ್ಕಾಯ್ತು
ಕೆಂಪು ಹಾಲಿಂದ ಅದಿರು ಕಬ್ಬಿಣವಾಯ್ತು
ಇಷ್ಟಾಗಿ ಸ್ವಲ್ಪವೇ ಸ್ವಲ್ಪ ಹೊತ್ತಾಗಿತ್ತು
ಕಬ್ಬಿಣಕೆ ಆಗಲೇ ಬಯಕೆಯಾಯ್ತು
ಹಿರಿಯ ಅಣ್ಣನನು ನೋಡುವಂತಹ ಬಯಕೆ
ಅಗ್ನಿ ಅವನೊಡನೆ ಮಾತಾಡುವ ಬಯಕೆ

ಉರಿದೆದ್ದಿತು ಬೆಂಕಿ ಬಲುಸಿಟ್ಟಿನಿಂದ
ಧಗಧಗಿಸಿ ಮೇಲೆದ್ದು ಬಲುಕೋಪದಿಂದ
ನುಂಗಬಂದಿತು ಅವನ ತನ್ನ ಬಲಿಯನ್ನು
ಸೋದರನೆ ಆದರೂ ದುಷ್ಟ ಕಬ್ಬಿಣವನ್ನು

ಕಬ್ಬಿಣವು ಅರಸಿತು ರಕ್ಷಣೆಗೆ ತಾಣ
ಪಾರಾಗಲು ಹುಡುಕಿತು ಸುಭದ್ರತಾಣ
ಉರಿಬೆಂಕಿಯ ಬಾಯಿಂದ ಸುಡುಕೋಪದ ಕೈಯಿಂದ

ಹುಡುಕಿಕೊಂಡಿತು ತಾಣ ಗಿಜುಗುಡುವ ಕೆಸರಲ್ಲಿ
ಚಿಲುಮೆಗಳುಕ್ಕುಕ್ಕಿ ಪುಟಿಯುವಲ್ಲಿ

ಶಿಲೆ ಬೆಟ್ಟ ಬಿರುಕಲ್ಲಿ
ಹಂಸ ಪಕ್ಷಿಯು ಮೊಟ್ಟೆ ಇಡುವಂಥ ಬಿರುಕಲ್ಲಿ
ಬಾತುಕೋಳಿಯು ಮರಿಗೆ ಕಾವು ಕೊಡುವಲ್ಲಿ

ತಲೆಮರೆಸಿಕೊಂಡಿತ್ತು ಜವುಗಿನಲ್ಲಿ
ಹರಡಿಕೊಂಡಿತ್ತು ಕೆಸರಿನಡಿಯಲ್ಲಿ
ಒಂದಾಯಿತು ವರುಷ ಎರಡಾಯಿತು ವರುಷ
ಹೀಗೆಯೇ ತಲೆಮರೆಸಿ ಮೂರು ವರುಷ
ಅಡಗಿಕೊಂಡಿತ್ತು ವೃಕ್ಷಕಾಂಡದ ನಡುವೆ
ತಲೆಮರೆಸಿಕೊಂಡಿತ್ತು ಬರ್ಚ್‌ನಡಿಯ ಬೇರಲ್ಲಿ
ಆದರೂ ಇರಲಿಲ್ಲ ಒಳ್ಳೆ ರಕ್ಷಣೆ ಅದಕೆ
ಇರಲಿಲ್ಲ ರಕ್ಷಣೆ ಉರಿಬೆಂಕಿಯಿಂದ

ತೋಳಗಳ ಸಂಚಾರ ಜವುಗಿನಲ್ಲಿ
ಕರಡಿ ಹಿಂಡುಗಳು ಕುರುಚಲಲ್ಲಿ
ತೋಳಗಳ ಪಾದದಡಿ ಪಚಗುಟ್ಟಿತು ಜವುಗು
ಕರಡಿ ಕಾಲ್ತುಳಿತಕ್ಕೆ ಅಪ್ಪಚ್ಚಿ ಪೊದೆಯು
ಬಯಲಾಯಿತು ಹೀಗೆ ಕಬ್ಬಿಣವು ಮೇಲೆ
ಗೋಚರಿಸಿತು ಉಕ್ಕು ನೆಲದ ಮೇಲೆ

ಆಗ ಹುಟ್ಟಿದನು ಕಮ್ಮಾರ ಇಲ್ಮಾರಿನೆನ್
ಅವನು ಹುಟ್ಟಿದ್ದು ಇದ್ದಲಿನ ಕರಿಗುಡ್ಡ
ಅವನು ಬೆಳೆದಿದ್ದು ಕಲ್ಲಿದ್ದಲ ಬಯಲು
ತಾಮ್ರ ಸುತ್ತಿಗೆ ಹಿಡಿದು ಒಂದು ಕೈಯಲ್ಲಿ
ಚಿಮ್ಮುಟವ ಹಿಡಿದು ಇನ್ನೊಂದು ಕೈಯಲ್ಲಿ

ಹುಟ್ಟಿದ್ದು ರಾತ್ರಿಯಲಿ ತಿದಿಸಾಲೆ ಹಗಲಲ್ಲಿ
ಜಾಗ ಹುಡುಕಿದನವನು ತಿದಿಸಾಲೆಗಾಗಿ
ದಿಬ್ಬವೊಂದಿತ್ತು ಜವುಗಿನಲ್ಲಿ
ಸ್ಥಳನೋಡಿ ತಿದಿಹೂಡಿ ಇಟ್ಟ ಬಡಿಗಲ್ಲು

ಹಿಡಿದು ತೋಳದ ಜಾಡು
ಹಿಡಿದು ಕರಡಿಯ ಜಾಡು
ಕಂಡ ಅದುರಿನ ಜಾಗ ಕಂಡ ಉಕ್ಕಿನ ರಾಶಿ

ಹೇಳಿದನು ಆ ಸ್ಥಳವ ನೋಡುತ್ತ ಹೀಗೆ
ಎಂಥ ದುರದೃಷ್ಟವಂತನೋ ನೀನು.
ಎಂಥ ಕೆಟ್ಟ ಜಾಗದಲಿರುವೆ
ಎಂಥ ದುಃಸ್ಥಿತಿಯಲಿರುವೆ
ತೋಳ ತುಳಿದಾಡುವ ಜವುಗು ಬಯಲಲ್ಲಿ
ಕರಡಿ ನಡೆದಾಡುವ ಕೆಸರು ನೆಲದಲ್ಲಿ

ಮನದಲ್ಲೆ ಯೋಚಿಸಿದ
ಏನಾಗಬಹುದಿದನು ಹಾಕಿದರೆ ಬೆಂಕಿಗೆ
ಸರಿಯಾಗಿ ಬಡಿದರೆ ಬಡಿಗಲ್ಲ ಮೇಲೆ
ಕೇಳುತ್ತಿದ್ದಂತೆ ಉರಿಬೆಂಕಿಯ ಹೆಸರು
ತಳಮಳಿಸಿತು ಕಬ್ಬಿಣ ಅದರ ಕ್ರೌರ್ಯವ ನೆನೆದು
ಭಯದಿಂದ ಕಂಪಿಸಿತು ವಿಲವಿಲವಿಲ ಒದ್ದಾಡಿತು

ಧೈರ್ಯ ಹೇಳಿದನಾಗ ಇಲ್ಮಾರಿನೆನ್
ಹಾಗೇನೂ ಮಾಡದು ಉರಿಬೆಂಕಿ ನಿನಗೆ
ನೋವು ಮಾಡುವುದಿಲ್ಲ ಮಿತ್ರರಿಗೆ ಗೆಳೆಯರಿಗೆ
ಹಾನಿ ಮಾಡುವುದಿಲ್ಲ ಪ್ರಿಯ ಬಂಧು ಜನಕೆ

ನೀನು ಹೋದಾಗ ಕೆಂಪು ಉರಿ ಕೋಣೆಗೆ
ಅದರ ಉರಿಜ್ವಾಲೆ ಬೆಳಕಿನೊಳಗೆ
ಅತಿಶಯವಾಗುವುದು ನಿನ್ನಂದ ಚಂದ
ಕತ್ತಿ ಅಲಗಾಗುವೆ ಪುರುಷವರ್ಯರಿಗೆ
ಕಡಗ ಬಳೆಯಾಗುವೆ ಚೆಲುವೆಯರ ಕೈಗೆ

ಕೊನೆಯಾಗುವಷ್ಟರಲಿ ಆ ಹಗಲು ಮುಗಿದು
ಕಬ್ಬಿಣವು ಬಂದಿತ್ತು ಜವುಗಿಂದ ಹೊರಗೆ
ಕೆಸರಿಂದ ನಡೆದಿತ್ತು ಇಲ್ಮಾರಿನೆನ್ ಮನೆಗೆ

ಹಾಕಿದನು ಕುಲುಮೆಗೆ ಇಟ್ಟ ಬಡಿಗಲ್ಲಿಗೆ
ಬಡಿದ ಚೆನ್ನಾಗಿ ಒಂದು ಸಲ ಎರಡು ಸಲ
ಬಡಿದ ಚೆನ್ನಾಗಿ ಮೂರು ಸಲ ಹೀಗೆ
ಕಬ್ಬಿಣವು ಪೂರ್ತಿ ಮೆತ್ತಗಾಗುವ ತನಕ
ಕಲೆಸಿಟ್ಟ ಹಿಟ್ಟಂತೆ ಮೆದುವಾಗುವ ತನಕ

ಸಾಕಾಗಿ ಬೇಸರದಿ ಕಬ್ಬಿಣವು ಹೇಳಿತು
ಅಯ್ಯಾ ಕಮ್ಮಾರ ತೆಗೆಯಯ್ಯ ಬೇಗ
ತೆಗೆಯಯ್ಯ ಬೇಗ ಉರಿ ಕುಲುಮೆಯಿಂದ
ಸುಟ್ಟು ಕೊಲ್ಲುವ ಕೆಂಪು ಉರಿಯಿಂದ

ಕಮ್ಮಾರ ಇಲ್ಮಾರಿನೆನ್ ಹೀಗೆ ಹೇಳಿದ :
ತೆಗೆದು ಬಿಟ್ಟರೆ ನಿನ್ನ ಕುಲುಮೆ ಉರಿಯಿಂದ
ಅನರ್ಥಗಳ ಮಾಡುವೆ ಕೋಪದಿಂದ
ನಿನ್ನ ಸೋದರನ ಮೇಲೇ ನೀನೆರಗಬಹುದು
ನಿನ್ನ ತಾಯಿಯ ಮಗನ ಕೊಲ್ಲಬಹುದು
ದುರುಳ ಕಬ್ಬಿಣವಾಗ ಆಣೆ ಇಟ್ಟಿತು ಹೀಗೆ :
ಕುಲುಮೆ ಮೇಲಾಣೆ ಬಡಿಗಲ್ಲ ಮೇಲಾಣೆ
ಸುತ್ತಿಗೆಯ ಮೇಲಾಣೆ ಕೊಡಲಿ ಮೇಲಾಣೆ
ಕೊಡು ನನ್ನ ಬಾಯಿಗೆ ವೃಕ್ಷಗಳನು
ಕೊಡು ನನ್ನ ಬಾಯಿಗೆ ಶಿಲೆ ಬಂಡೆಗಳನು
ಕಡಿದು ಹಾಕುವೆನು ತುಂಡು ಮಾಡುವೆನು

ಹೊಡೆಯೆ ಸೋದರಗೆ ತಾಯ ಪುತ್ರನಿಗೆ
ಕೇಡು ಬಯಸುವುದಕಿಂತ ಒಡಹುಟ್ಟಿದ ಜನಕೆ
ಇರಬಹುದು ಚೆನ್ನಾಗಿ ನನ್ನ ಬದುಕು
ನಾನಿದ್ದರೆ ನನ್ನ ಸಂಗಡಿಗರ ಜೊತೆಯಲ್ಲಿ
ಉಪಕರಣವಾಗಿ ಕಸುಬಿನವರ ಕೈಯಲ್ಲಿ

ಆಗ ಇಲ್ಮಾರಿನೆನ್ ಪುರಾತನ ಕಮ್ಮಾರ
ತೆಗೆದ ಕಬ್ಬಿಣವನ್ನು ಬೆಂಕಿಯಿಂದ
ಬಡಿಗಲ್ಲ ಮೇಲಿಟ್ಟು ಚೆನ್ನಾಗಿ ಬೆಸೆದ
ಚೂಪು ಶಸ್ತ್ರಗಳು ಭರ್ಚಿಗಳು ಕೊಡಲಿ
ಉಪಕರಣಗಳೇನೇನೊ ಎಲ್ಲವನೂ ಮಾಡಿದ

ಆದರೂ ಏನೋ ಒಂದಿಷ್ಟು ಕಡಿಮೆ
ಕಬ್ಬಿಣದಲ್ಲೇನೊ ಸಣ್ಣ ದೋಷ
ಸುಂಯೆನುತಿಲ್ಲ ಉಕ್ಕು ಕಳೆಯು ಬಂದಿಲ್ಲ
ಗಟ್ಟಿ ದೃಢವಾಗಿಲ್ಲ ನೀರು ಹದಗೊಂಡಿಲ್ಲ
ಚಿಂತಿಸಿದನು ಮನದಿ ಹೀಗಾಯಿತಲ್ಲ

ಕುದಿವ ಮಿಶ್ರಣಕೆ ಕಬ್ಬಿಣದ ಹದಕೆ
ಬೆರಸಿದನು ಬೂದಿ ಒಂದಿಷ್ಟು ಅದಕೆ
ಉಪ್ಪು ನೀರಿಷ್ಟು ಕಬ್ಬಿಣದ ಹದಕೆ

ನಾಲಗೆಗೆ ದ್ರವವನ್ನು ಹಾಕಿಕೊಂಡ
ಸರಿ ಇದೆಯೆ ರುಚಿ ನೋಡೋಣವೆಂದ
ಸರಿ ಇಲ್ಲ ಇನ್ನೂ ಇದೆ ಏನೊ ಕೊರತೆ
ಕುದಿವ ಮಿಶ್ರಣಕೆ ಕಬ್ಬಿಣದ ಹದಕೆ

ಹಾರಿ ಬಂದಿತು ದುಂಬಿ ನೀಲಿರೆಕ್ಕೆಯ ದುಂಬಿ
ಅತ್ತಿತ್ತ ಹಾರುತ್ತ ಹಾರಿ ಕುಲುಮೆಯ ಸುತ್ತ
ಇಲ್ಮಾರಿನೆನ್ ನುಡಿದ :
ದುಂಬಿಯೆ ಬಾರಯ್ಯ ಚುರುಕು ಕಾಲಿನ ಗೆಳೆಯ
ತಾರಯ್ಯ ಒಂದಿಷ್ಟು ಜೇನ ಮಧುವನ್ನು
ಬನದ ಮರದಿಂದ ಹೂವಿಂದ ಜೇನು
ಎತ್ತರದ ಹುಲ್ಲು ದೇಟಿಂದ ಜೇನು
ಕುದಿವ ಮಿಶ್ರಣಕೆ ಕಬ್ಬಿಣದ ಹದಕೆ

ಆದರೆ ದುಷ್ಟಶಕ್ತಿಯ ಹಕ್ಕಿ ಹಾರ್ನೆಟ್
ಆಲಿಸಿತು ಮಾತು ಮರದ ಮೇಲಿಂದ
ಭರ್‍ರೆಂದು ಹಾರಿತು ಭಯವ ಹರಡುತ್ತ
ಹಾವಿಂದ ತಂದಿತು ಬುಸುಗುಡುವ ಶಬ್ದ
ಮಸುಕುವಿಷ ತಂದಿತು ಸರ್ಪದಿಂದ
ಉರಿವಾಮ್ಲ ತಂದಿತು ಇರುವೆಯಿಂದ
ಒಳವಿಷವ ತಂದಿತು ನೆಲಗಪ್ಪೆಯಿಂದ
ಕಬ್ಬಿಣದ ಉಕ್ಕು ವಿಷವಾಗಲೆಂದು
ಕಬ್ಬಿಣದ ಹದ ಕೆಟ್ಟು ಹೋಗಲೆಂದು

ಆಗ ಇಲ್ಮಾರಿನೆನ್, ನಿಪುಣ ಕಮ್ಮಾರ
ಮೋಸಕೊಳಗಾದ ತಪ್ಪಾಗಿ ಭ್ರಮಿಸಿ
ದುಂಬಿ ಮರಳಿತು ಎಂದು ಮಧುವ ತಂದಿತು ಎಂದು
ಹೇಳಿಕೊಂಡನು ಹೀಗೆ ಸಂತೋಷದಿಂದ
ಕೊನೆಗೂ ಸಿಕ್ಕಿತು ಬೇಕಾದ್ದು ನನಗೆ
ಕುದಿವ ಮಿಶ್ರಣಕೆ ಕಬ್ಬಿಣದ ಪದಕೆ

ಮೇಲೆತ್ತಿದ ಉಕ್ಕನ್ನು ಕುಲುಮೆಯಿಂದ
ಅದ್ದಿ ಕಬ್ಬಿಣವ ದ್ರವ ಮಿಶ್ರಣದಲ್ಲಿ
ತುಂಬಿತಾವೇಶ ಕಬ್ಬಿಣದ ಮೈಯಲ್ಲಿ
ರೋಷದುದ್ರೇಕ ಉಕ್ಕಿನಲ್ಲಿ

ಕೊಟ್ಟ ಮಾತನ್ನೆಲ್ಲ ಮರೆತು ಹೋಯಿತು ದುಷ್ಟ
ಮಣ್ಣು ಮಾಡಿತು ಘನತೆ ಶುನಕದಂತೆ
ದಯೆಯಿಲ್ಲದೆ ಕೊಚ್ಚಿತು ಅಣ್ಣ ತಮ್ಮರನು
ಕೊಂದು ಹಾಕಿತು ಪ್ರಿಯ ಬಂಧು ಜನರನ್ನು
ಹರಿದು ಹೋಯಿತು ರಕ್ತ ಹೊನಲಿನಂತೆ
ಉಕ್ಕಿ ಹರಿಯಿತು ರಕ್ತ ಕೋಡಿಯಂತೆ

ಒಲೆ ಬಳಿಯ ಮುದುಕ ಗೊಣಗಿಕೊಂಡ
ತಲೆ ಅಲ್ಲಾಡಿಸಿ ನುಡಿದ ಗೊತ್ತಾಯಿತೀಗ
ಈಗ ಗೊತ್ತಾಯಿತು ಕಬ್ಬಿಣದ ಮೂಲ
ಉಕ್ಕು ಕಬ್ಬಿಣದ ದುಷ್ಟ ಗುಣಮೂಲ
ನೀಚ ಕಬ್ಬಿಣವೆ ಪಾಪಿ ಖನಿಜವೆ
ನೀನು ಹುಟ್ಟಿರುವುದೇ ದುಷ್ಟಕೃತ್ಯಕ್ಕೆ
ಎಲ್ಲ ಕೆಡುಕಿಗೂ ಮೂಲ ಬಲದ ಸೊಕ್ಕು

ನಿನಗಿರಲಿಲ್ಲ ಹಿಂದೆ ಇಂಥ ಮಹಿಮೆ
ಮಹಿಮನೊ ಅಲ್ಪನೊ ಲೆಕ್ಕಕಿರಲಿಲ್ಲ
ಚೆಲುವಿಕೆಗೂ ಇರಲಿಲ್ಲ ನಿನ್ನ ಹೆಸರು
ದುರುಳತೆಗೂ ಇರಲಿಲ್ಲ ನಿನ್ನ ಹೆಸರು
ಕನ್ನೆಯರ ಎದೆಯಲ್ಲಿ ಹಾಲಾಗಿ ಉಕ್ಕಿ
ಬಾನಿಂದ ಕೆಳಗೆ ನೀನಿಳಿದು ಬಂದಾಗ

ನಿನಗಿರಲಿಲ್ಲ ಹಿಂದೆ ಇಂಥ ಮಹಿಮೆ
ಮಹಿಮನೊ ಅಲ್ಪನೊ ಲೆಕ್ಕಕಿರಲಿಲ್ಲ
ಹೊಳೆವ ನೀರಿನ ಕೆಳಗೆ ಮಣ್ಣಲ್ಲಿ ಇಂಗಿ
ಜವುಗು ಕೆಸರಲ್ಲಿ ಹರಡಿಕೊಂಡಾಗ
ಖನಿಜ ರೂಪಕ್ಕೆ ನೀ ತಿರುಗಿದಾಗ

ಆಗಲೂ ಇರಲಿಲ್ಲ ನಿನಗಿಂಥ ಮಹಿಮೆ
ಮಹಿಮನೊ ಅಲ್ಪನೊ ಲೆಕ್ಕಕಿರಲಿಲ್ಲ

ಜಿಂಕೆ ಸಾರಂಗ ತುಳಿದಾಡುವಾಗ
ತೋಳಗಳ ಹಿಂದು ನಡೆದಾಡುವಾಗ
ಕರಡಿ ಪಂಜಗಳಡಿ ನೀನು ಇದ್ದಾಗ

ಆಗಲೂ ಇರಲಿಲ್ಲ ನಿನಗಿಂಥ ಮಹಿಮೆ
ಮಹಿಮನೊ ಅಲ್ಪನೊ ಲೆಕ್ಕಕಿರಲಿಲ್ಲ
ಖನಿಜವಾಗಿ ನೀನು ಸುಂಯ್ ಎನ್ನುತಿರುವಾಗ
ಕುದಿವ ನೀರಲ್ಲಿ ಹಾಕಿದಾಗ
ಕುಲುಮೆಯಲಿ ನಿನ್ನ ಕುದಿಸಿದಾಗ
ಕೊಡತಿ ಬಡಿಗಲ್ಲು ಕೊಡಲಿ ಕುಲುಮೆಯ ಮೇಲೆ
ಆಣೆ ಪ್ರಮಾಣಗಳ ನೀ ಮಾಡಿದಾಗ
ಕಮ್ಮಾರನೇ ಇದ್ದ ಎದುರಿನಲ್ಲಾಗ

ಎಂದಿಲ್ಲದ ಮಹಿಮೆ ಬಂದಿರುವುದೀಗ
ಹುಚ್ಚು ಆವೇಶ ಮೈಯ ತುಂಬ
ನೀನಿತ್ತ ವಚನ ನೀನೆ ಮರೆತಿರುವೆ
ನಾಯಂತೆ ಘನತೆ ಮಣ್ಣು ಮಾಡಿರುವೆ
ಬಂಧು ಜನರಿಗೆ ನೀ ಹಾನಿ ಮಾಡಿರುವೆ
ನಿನ್ನವರ ಮೇಲೆಯೆ ಬಾಯಿ ಹಾಕಿರುವೆ

ಹೀಗಾಗಲು ನೀನು ಕಾರಣರು ಯಾರು
ನಿನ್ನಲ್ಲಿ ದುರುಳತನ ಯಾರಿಂದ ಬಂತು
ತಾಯಿಯೊ ತಂದೆಯೊ ಅಣ್ಣನೊ ತಂಗಿಯೊ
ಇತರ ಬಂಧುಜನ ಯಾರಾದರುಂಟೊ

ಅಲ್ಲ ಬಿಡುಕಾರಣ ತಂದೆ ತಾಯಿ
ಅಲ್ಲ ಬಿಡುಕಾರಣ ಅಣ್ಣ ತಂಗಿ
ಅಲ್ಲ ಕಾರಣ ಬಂಧು ಜನರು
ನಿನ್ನಷ್ಟಕೆ ನೀನೆ ದುರುಳನಾದೆ

ಮಾಡಿರುವೆ ಎಲ್ಲ ಕೇಡು ಕೃತ್ಯ
ಬಾ ಇಲ್ಲಿ ನೋಡು ನೀನು ಮಾಡಿದ ಕೆಲಸ
ತೋರು ಪರಿಹಾರ ನೀನೆ ಇದಕೆ
ಹೇಳುವುದಕೆ ಮೊದಲು ನಿನ್ನ ತಾಯಿಗೆ ನಾನು

ದೂರಿಡುವುದಕೆ ಮುನ್ನ ನಿನ್ನ ತಂದೆಗೆ ನಾನು
ಎಷ್ಟು ನೋಯುವಳೊ ನಿನ್ನ ಹೆತ್ತವಳು
ಎಷ್ಟು ನೋಯುವರೋ ತಾಯಿ ತಂದೆಯರು
ತಮ್ಮ ಮಗ ಇಂಥ ಕೆಡುಕು ಮಾಡಿದನೆಂದು
ಈ ತಪ್ಪು ಮಾಡಿದವ ತಮ್ಮ ಮಗನೆಂದು

ಕೇಳು ರಕ್ತವೇ ಕೇಳು ಹರಿಯದಿರು ನಿಲ್ಲು
ಹರಿವ ರಕ್ತವೆ ಕೇಳು ಉಕ್ಕದಿರು ನಿಲ್ಲು
ಬೀಳದಿರು ನಿಲ್ಲು ತಲೆಯ ಮೇಲೆ
ಹನಿಯದಿರು ನಿಲ್ಲು ನನ್ನೆದೆಯ ಮೇಲೆ

ಓ ರಕ್ತ ನಿಂತು ಬಿಡು ಗೋಡೆಯಂತೆ
ಹರಿವ ರಕ್ತವೆ ನಿಲ್ಲು ಬೇಲಿಯಂತೆ
ನಿಂತುಬಿಡು ಕಡಲಲ್ಲಿ ಕತ್ತಿಯಂತೆ
ಜವುಗಿನಲಿ ನಿಂತ ಜೊಂಡಿನಂತೆ
ಹೊಲದ ಸುತ್ತಲಿನ ಬದುವಿನಂತೆ
ಪ್ರವಾಹದಲಿ ನಿಂತ ಬಂಡೆಯಂತೆ

ಅರ್ಥ ಮಾಡಿಕೊ ನೀನು ನಿನಗೆ ನೀನೇ
ಹರಿಯುವುದು ಹೇಗೆ ನಿಧಾನವಾಗಿ
ನೀನಿರುವುದು ಚಂದ ಖಂಡಮಾಂಸಗಳಲ್ಲಿ
ಮುಂದೆ ಹರಿಯುತ್ತ ಮಂದಗತಿಯಲ್ಲಿ
ನೀನಿದ್ದರೆ ಚಂದ ಈ ದೇಹದಲ್ಲಿ
ಎಷ್ಟು ಚಂದವೊ ನೋಡು ಧಮನಿಯೊಳಗಿನ ಚಲನೆ
ಉಕ್ಕದಿರು ಹೊರಗೆ ಮಣ್ಣಾಗಲು ಕೆಳಗೆ

ಹರಿಯದಿರು ನೆಲದಲ್ಲಿ ಹರಿಯದಿರು ಕೆಸರಲ್ಲಿ
ಹರಿಯದಿರು ಹುಲ್ಲಲ್ಲಿ ಮನುಜ ಭೂಷಣವೆ
ಹರಿಯದಿರು ಹುಲ್ಲಲ್ಲಿ ವೀರಾಗ್ರಣಿ ರತ್ನವೆ
ಇರಬೇಕು ನೀನು ಎದೆಗುಂಡಿಗೆಯಲ್ಲಿ
ಪಪ್ಪುಸದ ಚಿಕ್ಕ ಕೋಣೆಗಳಲಿ

ಹೋಗಲ್ಲಿಗೆ ಬೇಗ ಈ ಕೂಡಲೆ ಹೋಗು
ಹರಿಯದಿರು ನದಿಯಂತೆ ಹರಡದಿರು ಕೊಳದಂತೆ

ಜಿನುಗದಿರು ಜವುಗಂತೆ ಸೋರದಿರು ತೂತು ದೋಣಿಯಂತೆ
ಪ್ರಿಯಮಿತ್ರನೆ ನಿಲ್ಲು ಹರಿಯಬೇಡ
ಕೆನ್ನೀಲಿಯ ರಕ್ತ ಹನಿಯ ಬೇಡ
ಬೇಡ ಬೇಸರ ಇರಲಿ ಸಮಾಧಾನ
ಹಿಂದೊಂದು ಕಾಲದಲಿ ಎಲ್ಲ ಒಣಗಿದ್ದವು
ತಿರ್ಜಾದ ಜಲಪಾತ ಟುವೊನೆಲಾ ಉಗ್ರನದಿ
ಸರೋವರ ಒಣಗಿತ್ತು ಸ್ವರ್ಗ ಒಣಗಿತ್ತು
ಬೇಸಿಗೆಯ ಬರದಲ್ಲಿ ಪೊದೆಬೆಂಕಿ ದುರ್ಗಾಲದಲಿ

ಇಷ್ಟಾದರೂ ನೀನು ಕೇಳದಿದ್ದರೆ ಮಾತು
ಗೊತ್ತಿದೆಯೊ ನನಗೆ ಇನ್ನೊಂದು ದಾರಿ
ಹಾಕುವೆನು ನಿನಗೆ ಹೊಸದೊಂದು ಮಂತ್ರ
ತರಿಸಿ ಕಡಾಯಿ ಹಿಸ್ಸಿಯಿಂದ
ಹಾಕಿ ಕುದಿಸುವೆ ರಕ್ತ ಹೊರಹರಿದ ರಕ್ತ
ಒಂದು ಹನಿ ಕೂಡ ತಪ್ಪಿಸಿಕೊಳ್ಳದಂತೆ
ಇನ್ನೆಂದೂ ರಕ್ತ ಹೊರಹರಿಯದಂತೆ
ಹರಿದು ಭೂಮಿಯ ಮೇಲೆ ಬೀಳದಂತೆ
ಮತ್ತೆ ಹೊರ ಹರಿದು ಬಾರದಂತೆ

ವಿಫಲವಾದರೆ ಮನುಜಯತ್ನಗಳು
ಉಕೊ ಪುತ್ರ, ಸೋತರಿದರಲ್ಲಿ
ತಡೆಯುವರು ಯಾರು ಪ್ರವಾಹ ಧಾರೆ
ರಭಸದಲಿ ಉಕ್ಕುವ ಈ ರಕ್ತಧಾರೆ
ನೀನೆ ತಡೆಯಬೇಕು ಆಗಸದ ತಂದೆ
ಮುಗಿಲನಾಳುವ ಜುಮಾಲದೇವ
ಶಕ್ತಿವಂತನು ನೀನು ವೀರಶೂರನು ನೀನು
ನೀನೆ ಮುಚ್ಚಬೇಕು ಈ ತೆರೆದ ಬಾಗಿಲು
ನೀನೆ ತಡೆಯಬೇಕು ಈ ಹರಿವ ಹೊನಲು

ಉಕೊ ದೇವನೆ ಮಹಾಸೃಷ್ಟಿಕರ್ತನೆ
ಸ್ವರ್ಗಾಧಿಪತಿಯೆ ಜುಮಾಲನೆ
ಬರಬೇಕು ನೀನು ಅಗತ್ಯವಿರುವೆಡೆಗೆ
ಬರಬೇಕು ನೀನು ಕರೆದವರ ಬಳಿಗೆ

ಕೈ ಒತ್ತು ಬಲವಾಗಿ ಒತ್ತು ಹೆಬ್ಬೆರಳು
ಮುಚ್ಚು ಬಲವಾಗಿ ನೋವು ತುಂಬಿದ ಗಾಯ
ದುಷ್ಟ ಹೊರಬರುವ ಬಾಗಿಲಿದು ನೋಡು
ಎಳೆಯ ಎಲೆಗಳ ಹರಡು ನೈದಿಲೆಯ ಎಲೆ ಹರಡು
ಮುಚ್ಚಿ ಬಿಡು ದಾರಿ ತಡೆದು ಬಿಡುಧಾರೆ
ನನ್ನ ಗಡ್ಡಕ್ಕೆ ಅದು ಚಿಮ್ಮದಿರಲಿ
ಚಿಂದಿ ಉಡುಗೆಯ ಮೇಲೆ ಬೀಳದಿರಲಿ

ಹೀಗೆ ಮುಚ್ಚಿದನು ಸುರಿವ ರಕ್ತದ ರಂಧ್ರ
ಕಮ್ಮಾರಸಾಲೆಗೆ ಕಳಿಸಿದನು ಮಗನನ್ನು
ಮುಲಾಮಿನ ಸಿದ್ಧತೆ ಮಾಡಲೆಂದು :
ಮಂತ್ರ ಹಾಕಿದ ಹುಲ್ಲು ಸಾವಿರ ದಳ ಹೂವಿಂದ
ತೊಟ್ಟಿಕ್ಕುವ ಮಲೆಯ ಸಿಹಿ ಜೇನಿನಿಂದ

ಹುಡುಗ ಹೋದನು ಹೋಗುತ್ತ ನಿಂತನು
ನೋಡಿ ಓಕ್ ಮರವ ಹಾಗೆಯೆ ನಿಂತನು
ಓಕ್ ಮರವೆ ಜೇನಿದೆಯೆ ಟೊಂಗೆಯಲ್ಲಿ
ಸಿಹಿಯಾದ ಮಧುವಿದೆಯೆ ತೊಗಟೆಯಲ್ಲಿ

ಮರ ಹೇಳಿತು ಹೀಗೆ :
ನೆನ್ನೆ ತೊಟ್ಟಿಕ್ಕಿತು ಜೇನು ಸಂಜೆ ಎಲ್ಲ
ತೊಟ್ಟಿಕ್ಕಿತು ರೆಂಬೆಯಲಿ ಹರಡಿತ್ತು ತುದಿಯಲ್ಲಿ
ಮೋಡದಿಂದಿಳಿದಿತ್ತು ಮುಗಿಲಿಂದ ಬಸಿದಿತ್ತು

ತೆಗೆದುಕೊಂಡನು ಹುಡುಗ ಎಳೆಯ ಓಕ್ ಟೊಂಗೆ
ಆಯ್ದುಕೊಂಡನು ಹುಲ್ಲು ಸಿಪ್ಪೆ ತೊಗಟೆ
ವಿಧವಿಧದ ಸಸ್ಯ ಗಿಡಮೂಲಿಕೆಗಳನಾಯ್ದು
ಈ ನಾಡಿನಲೆಲ್ಲೂ ಸಿಗದ ಮೂಲಿಕೆ ಆಯ್ದು

ಕುದಿಸಿದನು ಕುಲುಮೆಯಲಿ
ಕೊತಕೊತನೆ ಕುದಿಯಿತು
ಕುದಿಸಿದನು ಮೂರಿರುಳು ಹಗಲು ಮೂರು
ಸಿದ್ಧವಾಯಿತೆ ಮದ್ದು ನೋಡುತ್ತ ಕುಳಿತ
ಸಿದ್ಧವಾಗಿರಲಿಲ್ಲ ಆ ಮದ್ದು ಇನ್ನೂ

ಸೇರಿಸಿದ ಇನ್ನಷ್ಟು ಗಿಡಮೂಲಿಕೆ ಸಸ್ಯ
ಎಲ್ಲೆಲ್ಲಿಂದಲೋ ತಂದಂಥ ಸಸ್ಯ
ಗಾರುಡಿಗರೊಂಬತ್ತು ಋಷಿ ಸಂತರು ಎಂಟು
ಕಂಡು ಹಿಡಿದಂಥ ವಿಧವಿಧದ ಸಸ್ಯ
ಮತ್ತೆ ಕುದಿಸಿದನು ಮೂರು ರಾತ್ರಿಯ ಕಾಲ
ಎಡಬಿಡದೆ ಮತ್ತೆ ಒಂಬತ್ತು ರಾತ್ರಿ

ಇಳಿಸಿದನು ಗಡಿಗೆ ಕುಲುಮೆಯಿಂದ
ಸಿದ್ಧವಾಯಿತೆ ಮದ್ದು ನೋಡಲೆಂದ
ಹೊಲದ ಬಳಿ ಬೆಳೆದಿತ್ತು ಕವಲೊಡೆದು ಆ್ಯಸ್ಪೆನ್
ಮರ ಸೀಳಿ ಮದ್ದು ಸವರಿದನು ಹುಡುಗ
ಮದ್ದು ಸವರುತ್ತ ಹುಡುಗ ಹೇಳಿದನು
ಸವರುತಿರುವೆನು ಮದ್ದು ಸೀಳಿರುವ ಮರಕೆ
ಕೂಡಿಕೊಳ್ಳಲಿ ಸೀಳು ಗುರುತು ಕಾಣದ ಹಾಗೆ
ಆಗಲಿ ಮರ ಮೊದಲು ಹೇಗಿತ್ತೊ ಹಾಗೆ
ಕೂಡಿಕೊಂಡಿತು ಮರ ಮೊದಲಿದ್ದ ಹಾಗೆ
ಮೊದಲಿಗೂ ಚೆನ್ನಾಗಿ ಮೊದಲಿಗೂ ಕಳೆಯಾಗಿ

ಮತ್ತೆ ಮಾಡಿದ ಹುಡುಗ ಈ ಮದ್ದಿನ ಪರೀಕ್ಷೆ
ಚೂರು ಕಲ್ಲುಗಳಿಗೆ ಸವರಿದನು ಮದ್ದು
ಸೀಳಿದ್ದ ಬಂಡೆಗೆ ಸವರಿದನು ಮದ್ದು
ಕೂಡಿಕೊಂಡವು ಕಲ್ಲು ಕೂಡಿಕೊಂಡವು ಸೀಳು

ಹುಡುಗ ಬಂದನು ಮನೆಗೆ
ಕೊಟ್ಟ ಮುದುಕನ ಕೈಗೆ
ಸಿದ್ಧವಾದಂಥ ಪರಿಪಕ್ವ ಮದ್ದು
ಹುಡುಗ ಹೇಳಿದ ಹೀಗೆ
ಸಿದ್ಧವಾಗಿದೆ ಮದ್ದು ಕೊಡುತಿರುವೆ ನಿನಗೆ
ಬೆಟ್ಟಕ್ಕೆ ಬೆಟ್ಟವನು ಬೆಸೆಯುವುದು ಮದ್ದು
ಒಂದೆ ಶಿಲೆಯಾಗಿ ಕೂಡಿಸುವುದು

ರುಚಿ ನೋಡಿದ ಮುದುಕ ನಾಲಗೆಗೆ ಹಾಕಿ
ಏನೇನು ಕುಂದಿಲ್ಲ ಪರಿಪಕ್ವವೆಂದ
ಹಚ್ಚಿದನು ಮದ್ದು ಗಾಯಾಳು ಗುಣವಾದ

ಕೆಳಮುಖಕೆ ಹಚ್ಚಿ ಮೇಲ್ಮುಖಕೆ ಹಚ್ಚಿ
ಮೈಯೆಲ್ಲ ಹಚ್ಚುತ್ತ ಹೇಳಿದನು ಮುದುಕ

ನಾನಲ್ಲ ಚಲಿಸುವನು ನನ್ನ ಕೈಕಾಲು
ಅವನ ಕೃಪೆಯಿಂದ ಆಡುತ್ತವೆ ನೋಡು
ನನ್ನ ಬಲವೇನಿಲ್ಲ ನನ್ನ ಶ್ರಮದಲ್ಲಿ
ಎಲ್ಲ ಬಲ ಅವನದು ಸರ್ವಶಕ್ತನದು
ನನ್ನ ಬಾಯಿಯ ಮಾತು ನನ್ನದಲ್ಲ
ಜುಮಾಲನೆ ನುಡಿದಿರುವ ನನ್ನ ಬಾಯಿಂದ
ಸವಿ ಎನಿಸಿದರೆ ನಿನಗೆ ನನ್ನ ಮಾತು
ಅದಕಿಂತ ಸವಿಯಹುದು ಭಗವಂತನ ಮಾತು
ನನ್ನ ಕರವಿರಬಹುದು ಬಹಳ ಸೊಗಸು
ಭಗವಂತನ ಕರಕಮಲ ಅದಕಿಂತ ಸೊಗಸು

ಮದ್ದು ಹಚ್ಚುವಾಗ
ನರಳಾಡಿದ ವೆಯ್ನಾಮೊಯ್ನನ್ ತುಂಬ ನೋವಿಂದ
ಪ್ರಜ್ಞೆ ಕಳೆಯುವ ನೋವು ಆರಾಮವಿಲ್ಲ ಎತ್ತ ಹೊರಳಿದರೂ

ನೋವನಟ್ಟಿದ ಮುದುಕ ನಡುಬೆಟ್ಟಗಳಿಗೆ
ನೋವು ಸಂಕಟವ ಪರ್ವತದ ತುದಿಗೆ
ಕಲ್ಲು ಬಂಡೆಯಲಿ ಸೇರಿಕೊಂಡಿರಲು
ಅವುಗಳಿಗೆ ನೋವನ್ನು ಕೊಟ್ಟುಕೊಂಡಿರಲು

ತೆಗೆದುಕೊಂಡನು ಕೈಗೆ ರೇಷಿಮೆಯ ವಸ್ತ್ರ
ಸೀಳಾಗಿ ಕತ್ತರಿಸಿ ಅಂಚು ಚೂರನು ಹರಿದು
ಪಟ್ಟಿ ಕಟ್ಟಿದ ಗಾಯಕ್ಕೆ ಬಲವಾದ ಪಟ್ಟಿ
ಮೊಣಕಾಲಿನ ಸುತ್ತ ಭದ್ರವಾಗಿ
ಪಟ್ಟಿ ಕಟ್ಟುತ್ತ ಮುದುಕ ನುಡಿದನು ಹೀಗೆ :
ಸೃಷ್ಟಿಕರ್ತನ ವಸ್ತ್ರ ದೇವವಸ್ತ್ರದ ಪಟ್ಟಿ
ಕಟ್ಟಿರುವೆ ವೀರನ ಮೊಣಕಾಲು ಗಾಯಕ್ಕೆ
ದಯೆಯಿರಲಿ ದೇವ ನಿನ್ನ ಅನುಗ್ರಹವಿರಲಿ
ನಿನ್ನ ನೆರವಿರಲಿ ಸೃಷ್ಟಿಕರ್ತನೆ ನಮಗೆ
ದುರ್ವಿಧಿಗೆ ಸಿಗದಂತೆ ಅನಿಷ್ಟ ಬರದಂತೆ
ಪೊರೆದು ನಮ್ಮನ್ನು ಕಾಪಾಡುದೇವ

ಹಿರಿಯ ವೆಯ್ನಾಮೊಯ್ನನ್ ಚೇತರಿಸಿಕೊಂಡ
ಪೂರ್ಣಗುಣಮುಖವಾದ ಗಾಯದಿಂದ
ಮಾಂಸಖಂಡಗಳು ಗಟ್ಟಿ ದೃಢವಾಗಿ
ದೇಹದೊಳಗೆಲ್ಲೂ ನೋವಿಲ್ಲವಾಗಿ
ಮೊದಲಿದ್ದ ಶಕ್ತಿ ಮತ್ತೆ ಬಂದಂತೆ
ಮೊದಲಿನುತ್ಸಾಹ ಮರಳಿ ಬಂದಂತೆ

ಮಾಯವಾಯಿತು ಗಾಯ ಗುರುತು ಕಾಣದ ಹಾಗೆ
ತನ್ನ ಕಾಲಿನ ಮೇಲೆ ನಿಂತು ನಡೆದಾಡಿದನು
ಮೊಣಕಾಲು ಬಗ್ಗಿಸಿ ಅತ್ತಿತ್ತ ಆಡಿಸಿದ
ನೋವಿನ ಹೆಸರೇ ಇರಲಿಲ್ಲ ಎಲ್ಲೂ

ಹಿರಿಯ ವೆಯ್ನಾಮೊಯ್ನನ್
ಕಣ್ಣೆತ್ತಿ ಆಗಸಕೆ ತಲೆ ಎತ್ತಿ ಬಾನಿಗೆ
ನುಡಿದ ಹೀಗೆ :
ನಿನ್ನದೇ ಕರುಣೆ ನಿನ್ನದೇ ದಯೆ
ಎಲ್ಲವೂ ನಿನ್ನಿಂದ ಸರ್ವಾಂತರ್ಯಾಮಿ
ವಂದಿಸುವೆ ನಿನಗೆ ದಯಾಮಯದೇವ
ವಂದಿಸುವೆ ನಿನಗೆ ಸೃಷ್ಟಿಕರ್ತ
ಕಬ್ಬಿಣದಿಂದಾದ ಬಲುದೊಡ್ಡ ನೋವಿಂದ
ಪೊರೆದಿರುವೆ ನನ್ನ ನಿನ್ನ ದಯೆಯಿಂದ
ನನ್ನ ರಕ್ಷಿಸಿದೆ ಕರುಣೆಯಿಂದ

ವೆಯ್ನಾಮೊಯ್ನನ್ ಮತ್ತೆ
ನುಡಿದ ಎಚ್ಚರದ ನುಡಿಯನ್ನು
ಚೆನ್ನಾಗಿದ್ದೇವೆ ಈಗೆಂಬ ಹಮ್ಮಿನಲಿ
ಎಲ್ಲ ಗೊತ್ತಿದೆ ಎಂಬ ಜಂಭದಲ್ಲಿ
ಕೈಹಾಕದಿರಿ ನೀವು ದೋಣಿ ಕೆಲಸಕ್ಕೆ
ಎಲ್ಲವನೂ ಕಣ್ಣಿಟ್ಟು ನೋಡುತಿರುವನು ಅವನು
ಎಲ್ಲವೂ ನಡೆಯುವುದು ಅವನ ಅಪ್ಪಣೆಯಂತೆ
ವೀರಶೂರರು ಆಲೋಚಿಸಿದಂತಲ್ಲ
ಎಲ್ಲ ವೀರರ ಬಲವೂ ಅವನೊಬ್ಬಗೆ ಸಮವಲ್ಲ

೮. ಸ್ಯಾಂಪೊ - ಮಾಯಾಗಿರಣಿ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಆರಿಸಿದ ಕುದುರೆ ಬಣ್ಣ ಕೆಂಗಂದು
ಬಿಗಿದ ಹಿಮಗಾಡಿಗೆ ಮುಳ್ಳು ಚಾಟಿಯ ಬೀಸಿ
ಬಲುವೇಗದ ಪಯಣ ದಾರಿ ಕಳೆಯಿತು ಬೇಗ
ಜವುಗು ಭೂಮಿಯ ನಾಡು ಬಯಲು ಭೂಮಿಯ ನಾಡು
ಪೊದರು ಮೆಳೆಗಳ ಭೂಮಿ ದಾಟಿ ಬಂದ
ಒಂದು ದಿನ ಎರಡು ದಿನ
ದಿನ ಮೂರರೊಳಗೆ
ಚಾಚಿದ್ದ ಪೊದೆಮೆಳೆಯ ಕಲೆವಾಲಕ್ಕೆ ಬಂದ

ಹೀಗೆ ನುಡಿದನು ಆವನು
ತೋಳಗಳು ನುಂಗಲಿ ರೋಗಮಾರಿಯು ಬರಲಿ
ನಾನು ತಾಯ್ನಾಡ ತಲುಪದಿರಲೆಂದು ಹಾರೈಸಿದವಗೆ
ಜೀವವಿರುವ ತನಕ ತಲುಪದಿರಲೆಂದು
ಚಂದಿರನು ಹೊಳೆವ ತನಕ ತಲುಪದಿರಲೆಂದು
ವೆಯ್ನೊಲಾ ನಾಡನು ತಲುಪದಿರಲೆಂದು
ಕಲೆವಾಲಾ ನಾಡು ತಲುಪದಿರಲೆಂದು ಹಾರೈಸಿ ನುಡಿದವಗೆ

ಹಿರಿಯ ವೆಯ್ನಾಮೊಯ್ನನ್ ದನಿ ಎತ್ತಿ ಹಾಡಿದನು
ಹೂ ಬಿಟ್ಟ ಫರ್ ಮರವು ಮೇಲೆದ್ದು ನಿಂದಿತು
ಬಂಗಾರ ಕವಲು ಹೂಬಿಟ್ಟು ಗೊಂಚಲು
ಮುಗಿಲು ಮುಟ್ಟುವೆತ್ತರಕೆ ಮೇಲೆದ್ದು ನಿಂತು

ಚಾಚಿದ್ದವು ಕೊಂಬೆ ಗಾಳಿಯಲ್ಲಿ
ಹರಡಿದ್ದವು ಚಾಚಿ ಬಾನಿನಲ್ಲಿ
ಮತ್ತೆ ಹಾಡಿದನು ಮಂತ್ರಗೀತೆ
ಫರ್ ಮರದ ತುದಿಯಿಂದ ಚಂದಿರನು ಹೊಳೆವಂತೆ
ಸಪ್ತರ್ಷಿ ಮಂಡಲವು ಕಂಗೊಳಿಸುವಂತೆ

ಮತ್ತೆ ಬಂದನು ಬಲುಬೇಗ ಮನೆಗೆ
ಮುಖವು ಜೋಲಿತ್ತು ಚಿಂತೆಯಿಂದ
ತಲೆಯ ಮೇಲಿನ ಟೊಪ್ಪಿ ಓರೆಯಾಗಿ

ಕವಿದ ಕಾವಳದ ಪೊಹ್ಜಾದ ನಾಡಿಂದ
ತಾನುಳಿದು ಬರಲು ಕೊಟ್ಟ ವಚನವ ನೆನೆದು
ತನ್ನ ಬದಲಾಗಿ ಇಲ್ಮಾರಿನೆನ್ನನ ಕೊಡಲು
ಕೊಟ್ಟು ಬಂದಂಥ ವಚನವನು ನೆನೆದು

ಕುದುರೆ ನಿಂತಿತ್ತು ಒಸ್ಮಾದ ಬಯಲಲ್ಲಿ
ನೋಡಿದನು ತಲೆಎತ್ತಿ ಬಂಡಿಯಲ್ಲಿ
ಸುತ್ತಿಗೆಯ ಸದ್ದು ತಿದಿಸಾಲೆಯಲ್ಲಿ

ಕಮ್ಮಾರನ ಸಾಲೆಗೆ ವೆಯ್ನಾಮೊಯ್ನನ್ ಬಂದ
ಬೀಸಿ ಸುತ್ತಿಗೆ ಬಡಿವ ಕಮ್ಮಾರನ ಕಂಡ
ಕಮ್ಮಾರ ಇಲ್ಮಾರಿನೆನ್ ನುಡಿದ ಹೀಗೆ
ಅಯ್ಯ ಹಿರಿಯನೆ ವೆಯ್ನಾಮೊಯ್ನನ್
ಎಲ್ಲಿ ಹೋಗಿದ್ದೆ ಇಷ್ಟು ಕಾಲ
ಯಾವ ನಾಡಿನಲಿದ್ದೆ ಇನಿತು ಕಾಲ

ದೃಢಚಿತ್ತ ಹಿರಿಯ ವೆಯ್ನಾಮೊಯ್ನನ್ ನುಡಿದ
ನಾನಿದ್ದೆ ಇಷ್ಟು ದಿನ ಪೊಹ್ಜಾದ ನಾಡಲ್ಲಿ
ಯಾವಾಗಲೂ ಮಂಕಾದ ಸಾರಿಯೊಲಾದಲ್ಲಿ
ಬಹುಕಾಲ ಅಲೆದೆ ಲ್ಯಾಪ್‌ಲ್ಯಾಂಡಿನಲ್ಲಿ
ಲೋಕವಿಖ್ಯಾತ ಮಾಂತ್ರಿಕರ ಜೊತೆಯಲ್ಲಿ

ಇಲ್ಮಾರಿನೆನ್ ನುಡಿದ
ಅನಾದಿ ಮಾಂತ್ರಿಕನೆ ದೃಢಚಿತ್ತ ಹಿರಿಯನೆ
ಹೇಳಯ್ಯ ಪಯಣದಲಿ ಏನಾಯಿತಿದುವರೆಗೆ
ಪಯಣ ಹೇಗಾಯಿತು ಬರುವಾಗ ಮನೆಗೆ

ವೆಯ್ನಾಮೊಯ್ನನ್ ನುಡಿದ
ಬಹಳವಿದೆ ನಾನು ಹೇಳುವುದು ನಿನಗೆ
ಇಹಳು ಪೊಹ್ಜಾದಲ್ಲಿ ಚೆಲುವೆ ತರುಣಿ
ಶೀತ ನಾಡಿನ ಆ ಹಳ್ಳಿಯಲ್ಲಿ
ಹಂಗಿಸುವಳೆಲ್ಲರನು ಯಾರನೂ ಒಪ್ಪಳು

ಅರ್ಧನಾಡೇ ಹೊಗಳುವುದು ಅವಳ ಚೆಲುವನ್ನು
ಹೊಳೆಯುವನು ಚಂದ್ರ ಅವಳ ಕೆನ್ನೆಯಲಿ

ರವಿಯು ಹೊಳೆಯುವನು ಅವಳೆದೆಯ ಮೇಲೆ
ಸಪ್ತರ್ಷಿ ಮಂಡಲದ ಸೊಬಗು ಹೆಗಲಲ್ಲಿ
ಸಪ್ತ ತಾರೆಯ ಚೆಲುವು ಬೆನ್ನಲ್ಲಿ

ವರಿಸವಳ ಹೋಗಯ್ಯ ಆದಿ ಕಮ್ಮಾರ
ಹೊಳೆವ ಕೂದಲ ಚೆಲುವೆ ಪಡೆದುಕೊ ನೀನು
ಕಟ್ಟು ಪಾಡಿನ ವಿಷಯ ಹೇಳುವೆನು ಕೇಳು
ಮಾಯಾಗಿರಣಿಯಂತ್ರ ಮಾಡಿಕೊಡಬೇಕು
ಚಿತ್ತಾರದ ಒಡಲು ಆ ಯಂತ್ರಕಿರಬೇಕು
ಆಗಷ್ಟೆ ಸಿಗುವಳು ಆ ಚೆಲುವೆ ನಿನಗೆ
ಸೊಬಗು ತುಂಬಿದ ಹೆಣ್ಣು ಬಹುಮಾನ ನಿನಗೆ

ಇಲ್ಮಾರಿನೆನ್ ನುಡಿದ ಅಯ್ಯಾ ಹಿರಿಯನೆ
ನೀನುಳಿದುಕೊಳಲೆಂದು ನಿನ್ನ ಬಿಡುಗಡೆಗೆಂದು
ನನ್ನ ಕಳಿಸುವುದಾಗಿ ಕೊಟ್ಟಂತಿದೆ ವಚನ
ಇಲ್ಲ ಹೋಗೆನು ಅಲ್ಲಿಗೆಂದಿಗೂ ನಾನು
ಈ ದೇಹದಲಿ ಜೀವ ಇರುವವರೆಗೂ
ಆ ಬಾನಲ್ಲಿ ಚಂದ್ರ ಹೊಳೆವವರೆಗೂ
ಎಂಥ ಭೀಕರ ನಾಡು ಪೊಹ್ಜೊಲಾ ನಾಡು
ಮನುಜರನು ಮುಗಿಸುವುದು ವೀರರನು ನುಂಗುವುದು

ವೆಯ್ನಾಮೊಯ್ನನ್ ಹೇಳಿದನು
ನಿನಗೇನು ಗೊತ್ತು ಅಲ್ಲೆಂಥ ಸೋಜಿಗ
ಹೂ ತುಂಬಿದ ಮರವೊಂದು ಎಲ್ಲ ಎಲೆಗಳು ಚಿನ್ನ
ಚಂದಿರನು ಹೊಳೆಯುವನು ಮರದ ತುದಿಯಲ್ಲಿ
ಸಪ್ತರ್ಷಿ ಮಂಡಲ ರೆಂಬೆಕೊಂಬೆಯಲಿ

ಇಲ್ಮಾರಿನೆನ್ ನುಡಿದ
ನಂಬಲಾರೆನು ನಾನು ಇದನೆಂದು ನಂಬೆ
ಕಣ್ಣಾರೆ ಕಾಣದೆ ಇದನು ನಾ ನಂಬೆ

ವೆಯ್ನಾಮೊಯ್ನನ್ ನುಡಿದ ನಂಬದಿದ್ದರೆ ಇದನು
ಬಾ ಹೋಗೋಣ ಜೊತೆಗೆ
ಇದು ಸುಳ್ಳೊ ನಿಜವೊ ನಿರ್ಧರಿಸು ನೀನೆ

ಹೋದರಿಬ್ಬರೂ ಆ ಮರದ ಬಳಿಗೆ
ಮೊದಲು ವೆಯ್ನಾಮೊಯ್ನನ್
ಆಮೇಲೆ ಇಲ್ಮಾರಿನೆನ್
ಬೇಕಾದ ಜಾಗಕ್ಕೆ ಅವರು ಬಂದಾಗ
ನಿಂತಲ್ಲೆ ನಿಂತವು ಕಮ್ಮಾರನ ಹೆಜ್ಜೆ
ಸೋಜಿಗದ ಮರ ನೋಡಿ ಅಚ್ಚರಿಯ ತುಂಬಿ
ರೆಂಬೆಕೊಂಬೆಗಳಲಿ ಸಪ್ತತಾರೆ
ಮರದ ತುದಿಯಲ್ಲಿ ಉದಿಸಿದ್ದ ಚಂದ್ರ

ವೆಯ್ನಾಮೊಯ್ನಾನ್ ನುಡಿದ ಅಯ್ಯಾ ಕಮ್ಮಾರ
ಮರ ಹತ್ತು ಚಂದಿರನ ಹಿಡಿದು ತಾ ಕೆಳಗೆ
ಸಪ್ತತಾರೆಯರನ್ನು ತಂದು ಬಿಡು ಕೆಳಗೆ
ಹತ್ತಿದನು ಮರವನ್ನು ಇಲ್ಮಾರಿನೆನ್ ಕಮ್ಮಾರ
ಮರದ ತುದಿ ಎತ್ತರಕೂ ಏರಿ ಹೋದನು ಅವನು
ಹತ್ತಿದನು ಹಿಡಿತರಲು ಹೊಳೆವ ಚಂದಿರನ
ಸಪ್ತತಾರೆಯರನ್ನು ಹಿಡಿದು ತರಲು

ರೆಂಬೆ ಚಾಚಿದ ಮರ ನುಡಿಯಿತಿಂತು
ಬುದ್ಧಿಯಿಲ್ಲದ ವೀರ ಮೂರ್ಖರಲಿ ಮೂರ್ಖ
ಮರ ಹತ್ತುತಿರುವೆ ತಿಳಿಗೇಡಿಯಂತೆ
ಚಂದಿರನ ಬಿಂಬ ತಿಳಿಯಲಾರೆಯ ಮೂರ್ಖ
ಹುಸಿಯ ತಾರೆಗಳು ಕಾಣಿಸವೆ ನಿನಗೆ

ಆಗ ಹಿರಿಯ ವೆಯ್ನಮೊಯ್ನನ್
ದನಿ ಎತ್ತಿ ಪಠಿಸಿದ ಮಂತ್ರ ನುಡಿಗಳನು
ಬಲವಾದ ಬಿರುಗಾಳಿ ಮೇಲೆದ್ದಿತು
ಭಾರಿ ಭೀಕರ ಗಾಳಿ ಬೀಸುತ್ತ ಬಂತು
ವೆಯ್ನಾಮೊಯ್ನಾನ್ ನುಡಿದ :
ಮಾರುತನೆ ಹಾಕಿವನ ದೋಣಿಯಲ್ಲಿ
ಹೊತ್ತೊಯ್ದು ತಲುಪಿಸು
ದೂರದ ನಾಡಿಗೆ ಮಬ್ಬುಪೊಹ್ಜಾಗೆ

ಹೊತ್ತೊಯ್ದಿತು ಗಾಳಿ ಬಲು ದೂರದ ನಾಡಿಗೆ
ಕವಿದ ಕಾವಳದ ನಾಡು ಪೊಹ್ಜಾಗೆ

ಬಿರುಗಾಳಿಯಲ್ಲಿ ತೂರಿ ಹೋದನು ಅವನು
ಚಂದಿರನ ದಾಟಿ ಸೂರ್ಯ ಕಿರಣದ ಕೆಳಗೆ
ಸಪ್ತತಾರೆಯರ ಭುಜಕಿಂತ ಮೇಲೆ
ತಲುಪಿದನು ಕಾವಳದ ನಾಡು ಪೊಹ್ಜಾಗೆ

ಆದರೂ ಬೊಗಳಲಿಲ್ಲ ಡೊಂಕು ಬಾಲದ ನಾಯಿ
ಊಳಿಟ್ಟು ಕೂಗಲಿಲ್ಲ ಕಾವಲಿನ ನಾಯಿ

ಲೌಹಿ ಎಂಬುವಳು ಪೊಹ್ಜಾದ ಮುದಿ ಒಡತಿ
ಸಂದು ಹಲ್ಲಿನ ಪೊಹ್ಜಾದ ಹೆಣ್ಣು
ಸದ್ದು ಕೇಳಿದಳು ಮೇಲೆದ್ದು ನಿಂತಳು
ಯಾವ ಕಡೆಯವನಯ್ಯ ಯಾವ ದೇಶದ ವೀರ
ಬಂದಿರುವೆ ಹೀಗೆ ಬಿರುಗಾಳಿಯಲ್ಲಿ
ಆದರೂ ನಾಯಿಗಳು ಬೊಗಳಲಿಲ್ಲ
ಬಾಲವಾಡಿಸಿ ಏಕೊ ಕೂಗಲಿಲ್ಲ

ಇಲ್ಮಾರಿನೆನ್ ನುಡಿದ
ನಿಜವಾಗಿ ನಾನು ಇಲ್ಲಿ ಬರಲಿಲ್ಲ
ಗೊತ್ತು ಗುರುತಿಲ್ಲದ ಪರನಾಡ ಹುಡುಕಿ
ನಾನಿಲ್ಲಿ ಬರಲಿಲ್ಲ ಹೀನಕೆಲಸಕ್ಕೆ
ಅವು ಬೊಗಳಿ ಕಚ್ಚುವ ಅಧಮ ಕೆಲಸಕ್ಕೆ

ಪೊಹ್ಜಾದ ಒಡತಿ ಕೇಳಿದಳು ಹೀಗೆ :
ಬರುವ ದಾರಿಯಲಿ ಕೇಳಿದೆಯ ಸುದ್ದಿ
ಪ್ರಸಿದ್ಧ ಕಮ್ಮಾರ ಇಲ್ಮಾರಿನೆನ್ ಸುದ್ದಿ
ಕಾದಿರುವೆವು ನಾವು ಬಹುಕಾಲದಿಂದ
ಮಾಡಿಕೊಡುವನು ಸ್ಯಾಂಪೊ ಬಂದಿಲ್ಲಿ ಎಂದು

ಇಲ್ಮಾರಿನೆನ್ ಉತ್ತರಿಸಿದ :
ಭೇಟಿಯಾದೆನು ನಾನು ಇಲ್ಮಾರಿನೆನ್ ಎಂಬುವನ
ಆ ಇಲ್ಮಾರಿನೆನ್ ನಾನೇ ನಿಪುಣ ಕಮ್ಮಾರ

ಸಂದು ಹಲ್ಲಿನ ಲೌಹಿ ಓಡಿದಳು ಒಳಗೆ
ಕರೆದು ಮಗಳನ್ನು ಹೇಳಿದಳು ಹೀಗೆ
ಅತಿ ಚೆಲುವೆ ಚಿಕ್ಕವಳೆ ಬಾ ಇಲ್ಲಿ ಬಾರೆ

ತೊಟ್ಟುಕೊ ಆರಿಸಿ ಬಲು ಒಳ್ಳೆ ಬಟ್ಟೆ
ಹಾಕಿಕೊ ಎದೆ ಮೇಲೆ ಪದಕ ಹೊಳೆವಂತೆ
ಇರಲಿ ಕನ್ನೆಗಳು ಗುಲಾಬಿಗಳ ಹಾಗೆ
ನಿನ್ನ ವರಿಸುವಗೆ ಖುಷಿಯಾಗುವ ಹಾಗೆ
ಬಂದಿರುವನಿಲ್ಲಿ ಇಲ್ಮಾರಿನೆನ್
ಲೋಕವಿಖ್ಯಾತ ಆದಿ ಕಮ್ಮಾರ
ಚಿತ್ತಾರದ ಒಡಲು ಮಂತ್ರಮಾಯೆಯ ಗಿರಣಿ
ಮಾಡಿಕೊಡಲೆಂದು ಬಂದಿರುವ ಗಿರಣಿ

ಪೊಹ್ಜಾದ ಹೆಣ್ಣು ಸಾಟಿಯಿಲ್ಲದ ಚೆಲುವೆ
ಭೂಲೋಕ ಜಲಲೋಕದಲಿಲ್ಲ ಅಂಥವರು
ಆರಿಸಿದಳು ಹೊಳೆವಂಥ ಚೆಲುವಾದ ಉಡುಪು
ಮಾಡಿದಳು ತಲೆಗೆ ಬೇಕಾದ ಸಿಂಗಾರ
ತಾಮ್ರದೊಡ್ಯಾಣ ಕಟ್ಟಿ ಸೊಂಟಕ್ಕೆ
ನಡೆದು ಬಂದಳು ಹೊರಗೆ ವಯ್ಯಾರವಾಗಿ

ಹೊಳೆಯುತ್ತಿದ್ದವು ಕಣ್ಣು ತೂಗಾಡುವಲೋಲಾಕು
ಕೆಂಗುಲಾಬಿಯ ಕೆನ್ನೆ
ಹೊಳೆವ ಮಣಿ ಹಾರ ತಲೆಯ ಸಿಂಗಾರ

ಪೊಹ್ಜಾದ ಒಡತಿ ಕರೆದು ತಂದಳು ಅವನ
ಪೊಹ್ಜಾದ ಸೌಧಕ್ಕೆ ನಿಪುಣ ಕಮ್ಮಾರನ
ಭೋಜನವು ಭರ್ಜರಿ ಸುರೆಯು ಸಮೃದ್ಧ

ಉಪಚಾರ ಮಾಡಿ ಅವಳು ನುಡಿದಳು ಹೀಗೆ
ಅಯ್ಯಾ ಇಲ್ಮಾರಿನೆನ್ ಕಮ್ಮಾರ ಶಿಲ್ಪಿ
ವಿಖ್ಯಾತ ಜಗದಾದಿ ನಿಪುಣ ಕಮ್ಮಾರ
ಮಾಡಿಕೊಡು ನಮಗೆ ಚಿತ್ತಾರದ ಗಿರಣಿ
ಹಂಸಪಕ್ಷಿಗಳ ಬಿಳಿ ರೆಕ್ಕೆ ಗರಿಯಿಂದ
ಕರುಹಾಕದ ಬಂಜೆ ಕಡಸು ಹಾಲಿಂದ
ಚಿಕ್ಕದಾದೊಂದು ಬಾರ್ಲಿ ಕಾಳಿಂದ
ಬೇಸಗೆಯ ಕುರಿ ಉಣ್ಣೆ ನೂಲಿನಿಂದ
ಆಮೇಲೆ ಒಪ್ಪಿಸಿಕೊ ಈ ನನ್ನ ಮಗಳ
ಬಹುಮಾನವಾಗಿ ಬಲು ಚೆಲುವೆ ಇವಳ

ಇಲ್ಮಾರಿನೆನ್ ನುಡಿದ ಹೀಗೆ :
ಮಾಡಿಕೊಡುವೆನು ಸ್ಯಾಂಪೊ ಗಿರಣಿಯನು ನಿಮಗೆ
ಚಿತ್ತಾರದ ಹೊದಿಕೆ ಬೆಸೆದು ಕೊಡುವೆ
ಹಂಸಪಕ್ಷಿಗಳ ಬಿಳಿ ರೆಕ್ಕೆ ಗರಿಯಿಂದ
ಕರುಹಾಕದ ಬಂಜೆ ಕಡಸು ಹಾಲಿಂದ
ಚಿಕ್ಕದಾದೊಂದು ಬಾರ್ಲಿ ಕಾಳಿಂದ
ಬೇಸಗೆಯ ಕುರಿಉಣ್ಣೆ ನೂಲಿನಿಂದ

ನಾನಲ್ಲವೆ ಸ್ವರ್ಗಗಳ ನಿರ್ಮಾಣಕಾರ
ನಾನಲ್ಲವೆ ಮಳೆಬಿಲ್ಲ ರಚನಕಾರ
ಆಗಿನ್ನೂ ಯಾವುದೂ ಇಲ್ಲಿ ಇರಲಿಲ್ಲ
ಒಂದಿಷ್ಟು ಸ್ವಲ್ಪವೂ ಸೃಷ್ಟಿಯಾಗಿರಲಿಲ್ಲ

ಹೊರಟ ಕಮ್ಮಾರ ನಿರ್ಮಿಸಲು ಸ್ಯಾಂಪೊ
ಹುಡುಕಿದನು ಜಾಗ ತಿದಿಸಾಲೆಗೆಂದು
ಸಾಧನಗಳಿರಲಿಲ್ಲ ಜಾಗವಿರಲಿಲ್ಲ
ಜಾಗವಿರಲಿಲ್ಲ ಬೆಂಕಿಕುಂಡಕ್ಕೆ
ಜಾಗವಿರಲಿಲ್ಲ ಕುಲುಮೆ ಬಡಿಗಲ್ಲಿಗೆ
ಇರಲಿಲ್ಲ ಕೊಡತಿ ಇರಲಿಲ್ಲ ಸುತ್ತಿಗೆ

ಇಲ್ಮಾರಿನೆನ್ ನುಡಿದ ದೃಢವಾಗಿ ಹೀಗೆ
ಹೆದರ ಬೇಕಾದವರು ಕೈಲಾಗದ ವೃದ್ಧೆಯರು
ಕೆಲಸ ಅರ್ಧಕ್ಕೆ ಹೇಡಿಗಳು ಬಿಡುವರು
ಮಾಡಲಾರನು ಹಾಗೆ ಗಂಡೆನಿಸಿಕೊಂಡವನು
ಅವನೆಷ್ಟೆ ನಿಃಶಕ್ತ ಸೋಮಾರಿಯಾದರೂ

ಹುಡುಕಿಕೊಂಡನು ಜಾಗ
ಪೊಹ್ಜಾಧ ಹೊರಬಯಲಲ್ಲಿ
ಒಂದು ದಿನ ಎರಡು ದಿನ ಮೂರು ದಿನ ಹುಡುಕಿ
ಕೊನೆಗೆ ಸಿಕ್ಕಿತು ಜಾಗ ಚಿತ್ತಾರ ಬಂಡೆಯಲಿ
ಬಲವಾದ ಹೆಬ್ಬಂಡೆ ಪಕ್ಕದಲ್ಲಿ

ಜಾಗ ಹುಡುಕುವ ಕೆಲಸ ನಿಂತಿತಲ್ಲಿ
ತಿದಿಹೂಡಿದ ಮೊದಲ ದಿನ ಮಾರನೆ ದಿನ ಕುಲುಮೆ

ಉರುವಲನು ತುಂಬಿ ಕುಲುಮೆ ಕೆಳಗೆ
ತಿದಿ ಒತ್ತಿದರು ಆಳುಗಳು ಅರ್ಧ ಶ್ರಮ ಬಿಟ್ಟು

ಮೂರು ಬೇಸಗೆ ಹಗಲು
ಮೂರು ಬೇಸಗೆ ಇರುಳು
ಅಂಗಾಲಿನಲ್ಲಿ ಬೊಬ್ಬೆ ಹೊಪ್ಪಳೆಯು ಬೆರಳಲ್ಲಿ

ಮೊದಲ ಕೆಲಸದ ದಿನ ಇಲ್ಮಾರಿನೆನ್ ತಾನೇ
ಬಗ್ಗಿ ನೋಡುತಲಿದ್ದ ಕುಲುಮೆಯೊಳಗೆ
ಏನಾದರೂ ಹೊಳೆಯುವುದು ಆಗಿದೆಯೊ ಎಂದು
ಎದ್ದು ಬಂದಿತು ಬಿಲ್ಲು ಬೆಂಕಿಯೊಳಗಿಂದ
ಬಂಗಾರದ ಬಿಲ್ಲು ಕುಲುಮೆಯಿಂದ
ಬಿಲ್ಲು ಬಂಗಾರ ಹೊದಿಕೆ ಬೆಳ್ಳಿ
ಹೊಳೆವಂಥ ತಾಮ್ರದ ದಿಂಡು ಅದಕೆ

ನೋಡಲೇನೊ ಸುಂದರ ಯಾಕೊ ಅವಲಕ್ಷಣ
ಒಂದು ತಲೆ ಕೇಳುವುದು ಪ್ರತಿಯೊಂದು ದಿನಕೆ
ಎರಡು ತಲೆ ಕೇಳುವುದು ಹಬ್ಬಗಳ ದಿನಕೆ

ಸಂತಸವಾಗಲಿಲ್ಲ ಇಲ್ಮಾರಿನೆನ್‌ಗೆ
ಮುರಿದೆರಡು ತುಂಡಾಗಿ ಕುಲುಮೆಗೆಸೆದ
ತಿದಿ ಒತ್ತಲು ಹೇಳಿದ ಆಳುಗಳಿಗೆ
ತಿದಿ ಒತ್ತಲು ಹೇಳಿದ ಅರ್ಧ ಶ್ರಮ ಬಿಟ್ಟು

ಮಾರನೆ ದಿನ ಮತ್ತೆ ಬಗ್ಗಿ ನೋಡಿದ ಹಾಗೆ
ದೋಣಿ ಮೇಲೆದ್ದಿತು ಕುಲುಮೆಯೊಳಗಿಂದ
ಕೆಂಪು ಬಣ್ಣದ ದೋಣಿ ಬೆಂಕಿಯಿಂದ
ಮುನ್‌ಚಾಚಿನ ಬಣ್ಣ ಚಿನ್ನದಂತೆ
ಹುಟ್ಟು ಬಳೆಗಳ ಬಣ್ಣ ತಾಮ್ರದಂತೆ

ನೋಡಲೇನೊ ಸುಂದರ ಯಾಕೊ ಅವಲಕ್ಷಣ
ಇರದೆ ಕಾರಣ ಹೋಗುವುದು ಕದನಕ್ಕೆ
ಅಗತ್ಯವಿಲ್ಲದೆ ಮಾಡುವುದು ಯುದ್ಧ

ಆಗಲಿಲ್ಲ ಸಂತೋಷ ಇಲ್ಮಾರಿನೆನ್‌ಗೆ
ಚೂರಾಗಿ ಸೀಳಿ ಕುಲುಮೆಗೆಸೆದ

ತಿದಿ ಒತ್ತಲು ಹೇಳಿದ ಆಳುಗಳಿಗೆ
ತಿದಿ ಒತ್ತಲು ಹೇಳಿದ ಅರ್ಧ ಶ್ರಮ ಬಿಟ್ಟು

ಮೂರನೆ ದಿನ ಮತ್ತೆ ಬಗ್ಗಿ ನೋಡಿದ ಹಾಗೆ
ಮೇಲೆ ಬಂದಿತು ಕಡಸು ಕುಲುಮೆಯಿಂದ
ಹೊಳೆವ ಚಿನ್ನದ ಕೋಡು ಸಪ್ತತಾರೆಯು ಹಣೆಗೆ
ಸೂರ್ಯಚಕ್ರವು ಅರ್ಧ ತಲೆಗೆ

ನೋಡಲೇನೊ ಸುಂದರ ಯಾಕೊ ಅವಲಕ್ಷಣ
ಯಾವಾಗಲೂ ನಿದ್ದೆ ಕಾಡಿನಲ್ಲಿ
ವ್ಯರ್ಥವಾಗುವುದು ಹಾಲು ನೆಲಕೆ ಚೆಲ್ಲಿ

ಆಗಲಿಲ್ಲ ಸಂತೋಷ ಇಲ್ಮಾರಿನೆನ್‌ಗೆ
ಕತ್ತರಿಸಿಕೊಚ್ಚಿ ಕುಲುಮೆಗೆಸೆದ
ತಿದಿ ಒತ್ತಲು ಹೇಳಿದ ಆಳುಗಳಿಗೆ
ತಿದಿ ಒತ್ತಲು ಹೇಳಿದ ಎಲ್ಲ ಶ್ರಮ ಬಿಟ್ಟು

ನಾಲ್ಕನೇ ದಿನ ಮತ್ತೆ ಬಗ್ಗಿ ನೋಡಿದ ಹಾಗೆ
ಮೇಲೆ ಬಂದಿತು ನೇಗಿಲು ಕುಲುಮೆಯಿಂದ
ನೇಗಿಲ ಗುಳ ಹೊಳೆದಿತ್ತು ಚಿನ್ನದಂತೆ
ಈಚು ಕೋಲು ಬೆಳ್ಳಿಯಂತೆ

ನೋಡಲೇನೊ ಸುಂದರ ಯಾಕೊ ಅವಲಕ್ಷಣ
ಹೊಲವನ್ನೂ ಕೂಡ ಉತ್ತು ಹಾಕುವುದು
ಹುಲ್ಲುಗಾವಲನ್ನೂ ಬಿಡದೆ ಉತ್ತು ಹಾಕುವುದು

ಆಗಲಿಲ್ಲ ಸಂತೋಷ ಇಲ್ಮಾರಿನೆನ್‌ಗೆ
ಕತ್ತರಿಸಿ ಕೊಚ್ಚಿ ಕುಲುಮೆಗೆಸೆದ
ತಿದಿ ಒತ್ತಲು ಹೇಳಿದ ಆಳುಗಳಿಗೆ
ತಿದಿ ಒತ್ತಲು ಹೇಳಿದ ಎಲ್ಲ ಶ್ರಮ ಬಿಟ್ಟು

ಇದ್ದಕ್ಕಿದ್ದಂತೆ ಬೀಸಿ ಉಗ್ರಗಾಳಿಗಳು
ಮೂಡು ದಿಕ್ಕಿನ ಗಾಳಿ ಪಡುವಣದ ಗಾಳಿ
ಇದಕಿಂತ ಬಿರುಸಾಗಿ ತೆಂಕಣದ ಗಾಳಿ
ಅಬ್ಬರಿಸಿ ಬಡಿಯಿತು ಬಡಗಣದ ಗಾಳಿ

ಒಂದು ದಿನ ಎರಡು ದಿನ ಮೂರು ದಿನ ಬೀಸಿ
ಉರಿಜ್ವಾಲೆ ಎದ್ದವು ಹರಡಿದವು ಕಿಡಿಬೆಂಕಿ
ಹೊಗೆ ಎದ್ದು ಆಗಸಕೆ ಮುಗಿಲೊಡನೆ ಬೆರೆತು

ಮಾರನೆ ದಿನ ಸಂಜೆ ನೋಡಿದನು ಒಳಗೆ
ತಯಾರಾಗುತ್ತಿತ್ತು ಗಿರಣಿ ಹೊಳೆವ ಒಡಲು
ಜಗದಾದಿ ಕಮ್ಮಾರ ಇಲ್ಮಾರಿನೆನ್
ಸುತ್ತಿಗೆಯಿಂದ ಬಡಿದು ಚೆನ್ನಾಗಿ
ಕುಶಲತೆಯಿಂದ ಬೆಸೆದ ಸ್ಯಾಂಪೊ ಗಿರಣಿ

ಬೀಸುವುದು ಧಾನ್ಯ ಒಂದು ಪಕ್ಕ
ಉಪ್ಪು ಬೀಸುವುದು ಇನ್ನೊಂದು ಬದಿಗೆ
ಕಾಸು ಠಂಕಿಸುವುದು ಮೂರನೆಯ ಬದಿಗೆ

ಹೊಸಗಿರಣಿ ಬೀಸಿತು ಗರಗರನೆ ತಿರುಗಿತು
ತುಂಬಿದವು ಕಣಜಗಳು
ಮೊದಲು ಬೀಸಿದ್ದು ಜನರ ಆಹಾರಕ್ಕೆ
ಎರಡನೆ ಸಲ ಬೀಸಿದ್ದು ಮಾರಾಟಕೆಂದು
ಮೂರನೆ ಸಲ ಬೀಸಿದ್ದು ದಾಸ್ತಾನಿಗೆಂದು

ಸಂತೋಷ ಪಟ್ಟಳು ಪೊಹ್ಜಾದ ಮುದುಕಿ
ಭಾರಿ ಗಾತ್ರದ ಸ್ಯಾಂಪೊ ಸಾಗಿಸಿದಳು ಬೆಟ್ಟಕ್ಕೆ
ತಾಮ್ರ ಬೆಟ್ಟದಲಿಟ್ಟು ಮುಚ್ಚಿಟ್ಟಳವಳು
ಅದರ ಭದ್ರತೆಗೆ ಬೀಗ ಒಂಬತ್ತು
ಬೇರು ಬಿಟ್ಟಿತು ಯೋಜನಗಳೊಂಬತ್ತು
ಭೂಮಿ ತಾಯಿಗೆ ಒಂದು ಕಡಲ ದಂಡೆಗೆ ಒಂದು
ಪರ್ವತದ ಅಡಿಗೂ ಬೇರು ಇಳಿದು

ಇಲ್ಮಾರಿನೆನ್ ಕೇಳಿದನು
ಕೊಡುವೆಯ ಮಗಳನ್ನು
ಕೆಲಸ ಪೂರೈಸಿರುವೆ
ಚೆಲುವಾದ ಗಿರಣಿ ಒಡಲು ಚಿತ್ತಾರ

ಪೊಹ್ಜಾದ ಚೆಲುವೆ ಕೊಟ್ಟಳುತ್ತರ ಹೀಗೆ :
ಹೊರಟು ಹೋದರೆ ನಾನು ಪರದೇಶದೂರಿಗೆ

ಈ ನಾಡಿನ ಹಣ್ಣು ಹೋದಂತೆ ದೂರ
ಕರೆಯುವುದೆ ಕೋಕಿಲ ಹಾಡುವುದೆ ಹಕ್ಕಿ
ಪರನಾಡಿಗೆ ಹೋದರೆ ಈ ಪಾರಿವಾಳ
ತಾಯ ಕಣ್ಮಣಿ ಇವಳು ದೂರವಾಗಿ
ಕಾಣೆಯಾಗುವುವೆಲ್ಲ ಬನದ ಹಣ್ಣು
ವಲಸೆ ಹೋಗುವುವೆಲ್ಲ ಹಾಡು ಹಕ್ಕಿ
ಮಲೆನಾಡಿನಾಚೆ ಗುಡ್ಡ ಶಿಖರಗಳಾಚೆ

ನಾ ಸಿದ್ಧವಿಲ್ಲ ತೊರೆಯಲೀ ಬದುಕು
ಕನ್ನೆಯಾದವಳ ಸಂತಸದ ಬದುಕು
ತೊರೆದು ಬರಲಾರೆ ಬೆಚ್ಚಗಿನ ಬಿಸಿಲಲ್ಲಿ
ನಾ ಮಾಡಬೇಕಿರುವ ಕೆಲಸ ಕಾರ್ಯ
ಬನದ ಹಣ್ಣುಗಳ ಕೀಳುವವರಾರು
ಕಡಲ ದಂಡೆಯಲಿ ಹಾಡುವವರಾರು
ಹುಲ್ಲುಗಾವಲಿನಲ್ಲಿ ಅಲೆಯುವವರಾರು
ಕಾನುಮಲೆಗಳಲಿ ವಿಹರಿಸುವವರಾರು

ಬಲು ದುಃಖವಾಯಿತು ಕಮ್ಮಾರ ಶಿಲ್ಪಿಗೆ
ಜೋತು ಬಿದ್ದಿತು ಮುಖ ಶೋಕ ತುಂಬಿ
ತಲೆಯ ಮೇಲಿನ ಟೊಪ್ಪಿ ಸೊಟ್ಟ ತಿರುಗಿ
ಚಿಂತಿಸಿದ ಮನದಲ್ಲಿ
ಹೇಗೆ ಹೋಗಲಿ ತಾಯ್ನಾಡಿಗೆ ತಿರುಗಿ
ಈ ಮಂಕುನಾಡಿಂದ
ಕವಿದ ಕಾವಳದ ಸರಿಯೋಲಾದಿಂದ

ಪೊಹ್ಜಾದ ಮುದುಕಿ ಕೇಳಿದಳು ಹೀಗೆ
ಯಾವ ಚಿಂತೆಯೊ ಮನದಿ ಕಮ್ಮಾರ ಶಿಲ್ಪಿ
ತಲೆಯ ಮೇಲಿನ ಟೊಪ್ಪಿ ಸೊಟ್ಟ ತಿರುಗಿದೆ ಏಕೆ
ಮರಳಿ ಹೋಗುವುದು ಹೇಗೆಂಬ ಚಿಂತೆಯೆ
ಊರು ಸೇರುವುದು ಹೇಗೆಂಬ ಚಿಂತೆಯೆ ?

ಹೌದು ಅದರದೇ ಚಿಂತೆ ನನ್ನ ಮನದೊಳಗೆ
ಮನೆ ಸೇರುವ ಬಯಕೆ ಅಲ್ಲೆ ಸಾಯುವ ಬಯಕೆ
ಪರಿಚಯದ ನಾಡಲ್ಲೆ ತಂಗಿರುವ ಬಯಕೆ

ತರಿಸಿದಳು ದೋಣಿ ಪೊಹ್ಜಾದ ಒಡತಿ
ಸಜ್ಜು ಮಾಡಿದಳು ತಿನಿಸು ಪಾನೀಯ
ಕರೆದು ಗಾಳಿಗಳ ಜೋರಾಗಿ ಬೀಸಲು
ಉತ್ತರದ ಗಾಳಿಯನು ಬಿರುಸಾಗಿ ಬೀಸಲು

ಹೀಗೆ ವಿಶ್ವಕರ್ಮ ಇಲ್ಮಾರಿನನ್
ಹೊರಟ ಹಿಂದಕೆ ಪಯಣ ತಾಯ್ನಾಡಿಗೆ
ನೀಲಿ ಕಡಲಿನ ಮೇಲೆ ಒಂದು ದಿನ ಎರಡು ದಿನ
ಕ್ಷೇಮದಲಿ ತಲುಪಿದನು ಮೂರನೆಯ ದಿನಕೆ
ತಾ ಹುಟ್ಟಿ ಬೆಳೆದಂಥ ತನ್ನೂರಿಗೆ

ಅವನ ಕಂಡೊಡನೆ ವೆಯ್ನಾಮೊಯ್ನನ್ ಕೇಳಿದನು :
ಅಯ್ಯ ಸೋದರನೆ ಇಲ್ಮಾರಿನೆನ್
ನೀನಯ್ಯ ಜಗದಾದಿ ಕಮ್ಮಾರ ಶಿಲ್ಪಿ
ಮಾಡಿಕೊಟ್ಟೆಯ ಹೊಸ ಗಿರಣಿ ಆ ಜನಕೆ ನೀನು
ಚಿತ್ತಾರದೊಡಲಿನ ಸ್ಯಾಂಪೊ ಆ ಜನಕೆ ನೀನು

ಉತ್ತರ ಕೊಡಲು ಸಿದ್ಧವಾಗಿದ್ದ :
ಹೊಸ ಗಿರಣಿ ಯಂತ್ರ ಬೀಸುವುದು ಧಾನ್ಯ
ಗರಗರನೆ ತಿರುಗುವುದು ಚಿತ್ತಾರದೊಡಲು
ಕಣಜ ಕಣಜಗಳು ತುಂಬಿ ಹೋಗುವುವು
ಮೊದಲು ಬೀಸುವುದು ಜನರ ಆಹಾರಕ್ಕೆ
ಎರಡನೆ ಸಲ ಬೀಸಿದ್ದು ಮಾರಾಟಕೆ
ಮೂರನೆ ಸಲ ಬೀಸುವುದು ದಾಸ್ತಾನಿಗೆ

೯. ವೆಯ್ನಾಮೊಯ್ನನ್ ಮತ್ತು ಆಂಟಿರೊ ವಿಪುನನ್

ದೋಣಿ ಕಟ್ಟುವುದಕ್ಕಾಗಿ ಮರ ಹುಡುಕಿ ತರುವಂತೆ ಸ್ಯಾಂಪ್ಸಾ ಪೆಲೆರ್ವೊಯ್ನನ್‌ಗೆ (ಇವನು ಕೃಷಿಯಲ್ಲಿ ನಿಷ್ಣಾತ ಮತ್ತು ವೆಯ್ನಾಮೊಯ್ನನ್ನನ ವಿಧೇಯ ಸೇವಕ) ವೆಯ್ನಾಮೊಯ್ನನ್ ತಿಳಿಸುತ್ತಾನೆ. ನಂತರ ದೋಣಿ ತಯಾರಿಸಿಕೊಳ್ಳುತ್ತಾನೆ. ಆದರೆ ಅದನ್ನು ಚಲಿಸುವುದಕ್ಕೆ ಅಗತ್ಯವಿದ್ದ ಮೂರು ಮಾಂತ್ರಿಕ ಪದಗಳು ಅವನಿಗೆ ತಿಳಿದಿರುವುದಿಲ್ಲ. ಅವು ಟುವೊನೆಲ (ಪರಲೋಕ)ದಲ್ಲಿ ಸಿಗಬಹುದೆಂದು ಭಾವಿಸಿ ಅಲ್ಲಿಗೇ ಹೋಗುತ್ತಾನೆ. ಆದರೆ ಅಲ್ಲಿ ವಿಚಿತ್ರ ಸನ್ನಿವೇಶದಲ್ಲಿ ಸಿಲುಕಿಕೊಂಡು ಉಪಾಯದಿಂದ ಪಾರಾಗಿ ಬರುತ್ತಾನೆ. ಹಿಂದಿರುಗಿ ಬಂದ ನಂತರ ಯಾರೂ ಎಂದೂ ಅಲ್ಲಿಗೆ ಹೋಗದಿರುವಂತೆ ಎಚ್ಚರಿಸುತ್ತಾನೆ. ಆ ಭಯಾನಕ ಸ್ಥಳವನ್ನು ಮತ್ತು ಅಲ್ಲಿನ ಜನರು ಎಂತಹ ಭೀಕರ ಗೃಹಗಳಲ್ಲಿ ವಾಸಿಸುತ್ತಾರೆ ಎಂಬುದನ್ನೂ ವಿವರಿಸುತ್ತಾನೆ. ಅನಂತರ ಈ ಮಾಂತ್ರಿಕ ಪದಗಳನ್ನು ತರುವುದಕ್ಕಾಗಿ ಆಂಟಿರೊ ವಿಪುನನ್ (ಇವನು ಆದಿದೈತ್ಯ. ಕೆಲವು ವಿಮರ್ಶಕರ ಪ್ರಕಾರ ಕಲೆವಾ ಮತ್ತು ವಿಪುನನ್ ಇಬ್ಬರೂ ಒಂದೇ) ಬಳಿಗೆ ಬರುತ್ತಾನೆ.

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಬೇಕಾದ ಮಂತ್ರ ನುಡಿ ಸಿಗಲಿಲ್ಲವಲ್ಲ
ಸಿಗಬಹುದು ಎಲ್ಲಿ ಇಂಥ ಪದಮಂತ್ರ

ಕುರಿಕಾಯುವ ಹುಡುಗ ಇವನ ಬಳಿ ಬಂದ
ಗೊತ್ತಿಂಥ ನೂರು ಪದ ನೂರು ನುಡಿ ಗೊತ್ತು
ಅವನಿಗೊಬ್ಬನಿಗೇ ಆಂಟಿರೊ ವಿಪುನನ್‌ಗೆ
ಬಲುದೊಡ್ಡ ದೈತ್ಯ ಬಲುದೊಡ್ಡ ಬಾಯಿ
ಇದೆ ಅಡ್ಡದಾರಿ ಹೋಗಲವನಲ್ಲಿ
ಅಂಥ ಒಳ್ಳೆಯದಲ್ಲ ಕೆಟ್ಟದೂ ಅಲ್ಲ

ಹಾಯಬೇಕಿದೆ ಮೊದಲು
ಹೊಲಿವ ಸೂಜಿಯ ಮೇಲೆ
ಅದರ ನಂತರದಲ್ಲಿ
ಕತ್ತಿ ಅಲುಗಿನ ಮೇಲೆ
ಆಮೇಲೆ ಕೊನೆಯದು
ಕೊಡಲಿ ಅಲುಗಿನ ಮೇಲೆ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಚಿಂತಿಸಿದ ಮನದಲ್ಲಿ ಗಾಢವಾಗಿ

ಕೂಡಲೆ ಬಂದ ತಿದಿ ಒತ್ತುವ ಸಾಲೆಗೆ
ಅಯ್ಯಾ ಕಮ್ಮಾರ ಇಲ್ಮಾರಿನೆನ್
ಈಗಲೇ ಬೆಸೆದುಕೊಡು ಕಬ್ಬಿಣದ ಬೂಟು
ಅದರಂತೆಯೇ ಮಾಡು ಉಕ್ಕು ಕೈಗಾಪು
ಅದರಂತೆಯೆ ಒಂದು ಕಬ್ಬಿಣದ ಅಂಗಿ
ಬಲವಾದ ಭಲ್ಲೆ
ಎಲ್ಲವೂ ಉಕ್ಕಿನದು ಕೊಡುವೆ ದುಡ್ಡು

ಒಳಗಿರಲಿ ಬಲುಗಟ್ಟಿ ಉಕ್ಕು ಪದರ
ಮೇಲಿರಲಿ ಮೃದುವಾದ ಕಬ್ಬಿಣ ಲೇಪ
ಹೋಗುತಿಹೆ ಮಂತ್ರಪದ ಕಲಿತು ಬರಲು
ಬಲುದೊಡ್ಡ ಮಂತ್ರಗಳ ಕಲಿತು ಬರಲು
ದೈತ್ಯ ರಕ್ಕಸನಿಂದ ವಿಪುನನ್‌ನಿಂದ

ಇಲ್ಮಾರಿನೆನ್ ನುಡಿದ
ಈಗಿಲ್ಲ ವಿಪುನನ್ ಅಳಿದನೆಂದೊ
ಬೇಕಾದ ಉರುಳುಬಲೆ ಮಾಡುತ್ತಿದ್ದ
ಬೇಕಾದ ಪ್ರಾಣಬಲೆ ಹೆಣೆಯುತಿದ್ದ
ಈಗಿಲ್ಲ ಅವನು ನಾಶವಾದ
ಏನಾದರೂ ಸಿಗುವ ಆಸೆ ಬೇಡ
ಸಿಗದು ಒಂದರ್ಧ ಪದವು ಕೂಡ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಕೇಳಲಿಲ್ಲ ಮಾತು ಮುಂದೆ ಹೋದ
ಹೋದ ಮೆಲ್ಲಗೆ ಸೂಜಿ ಮೊನೆ ಮೇಲೆ
ಎರಡನೆ ದಿನ ಚುರುಕಾಗಿ ಕತ್ತಿ ಅಲುಗಿನ ಮೇಲೆ
ದಿನ ಮೂರು ವೇಗದಲಿ ಕೊಡಲಿ ಅಲುಗಿನ ಮೇಲೆ

ವಿಪುನನ್ ಬಲುದೊಡ್ಡ ಮಂತ್ರಗಾರ
ಕೈಚಳಕಕವನು ಹೆಸರಾದ ವೀರ
ಮಂತ್ರ ತುಂಬಿದ ದೇಹ ಹಬ್ಬಿ ಹರಡಿತ್ತು
ಆಸ್ಪನ್ ಮರ ಭುಜದಲ್ಲಿ
ಬರ್ಚ್ ಕಪೋಲದಲಿ ಆ್ಯಲ್ಡರ್ ತುದಿಗಲ್ಲದಲಿ
ಗಡ್ಡದಲ್ಲಿ ಬೆಳೆದಿತ್ತು ಬಲು ದಟ್ಟವಿಲ್ಲೊ

ಹುಬ್ಬುಗಳ ಫರ್ ಮರದಲಿ ಓಡುತ್ತಿದ್ದವು ಅಳಿಲು
ಹಲ್ಲುಗಳ ನಡುವಿಂದ ಕವಲೊಡೆದ ಪೈನ್

ಎಳೆದ ಒರೆಯಿಂದ ಚೂಪುಕತ್ತಿ
ಆ್ಯಸ್ಪನ್ ಮರ ಬೀಳಿಸಿದ ಉರುಳಿಸಿದ ಒಂದೊಂದೆ
ಕವಲೊಡೆದ ಆ್ಯಲ್ಡರ್‌ಮರ ಗುಡ್ಡದಮರ ವಿಲ್ಲೊ
ಹುಬ್ಬುಗಳ ಫರ್ ವೃಕ್ಷ ಹಲ್ಲಿಂದ ಪೈನ್ ವೃಕ್ಷ

ಊರಿ ಕತ್ತಿಯನು ವಿಪುನನ್‌ನ ಬಾಯೊಳಗೆ
ಕಟಕಟನೆ ಮಸೆವ ದವಡೆಯೊಳಗೆ
ಎದ್ದೇಳು ಮೇಲೆ ಮರ್ತ್ಯ ಜನ ಗುಲಾಮ
ಎದ್ದೇಳು ಮೇಲೆ ಮಲಗಿದಲ್ಲಿಂದ
ಬಲು ಹೊತ್ತಾಯಿತು ಈಗ ಕೊನೆ ಬಂದಿದೆ ನಿದ್ದೆಗೆ

ಗಾಯನಕೆ ಹೆಸರಾದವನವನು
ತಡಬಡಿಸಿ ಎದ್ದು ತೂಕಡಿಕೆಯಿಂದ
ಯಾರೋ ಒರಟಾಗಿ ತೀಡಿದಂತಾಯ್ತು
ಜೋರಾಗಿ ತಿವಿದು ಚುಚ್ಚಿದಂತಾಯ್ತು

ಕಬ್ಬಿಣದ ಅಲುಗನ್ನು ಕಚಕ್ಕನೆ ಕಡಿದ
ಕಬ್ಬಿಣದ ಮೇಲ್ಪದರ ಕಚ್ಚಿ ಕಡಿದ
ಆಗಲಿಲ್ಲ ಕಡಿಯಲು ಉಕ್ಕು ತಿರುಳು
ವೆಯ್ನಾಮೊಯ್ನನ್ ಇದ್ದ ಬಾಯಂಚಿನಲ್ಲಿ
ಬಲಪಾದ ಎಡಪಾದ ಒಳನುಗ್ಗಿ ಜಾರಿ
ರಕ್ಕಸನ ಬಾಯಿಂದ ಒಡಲೊಳಗೆ ಜಾರಿ

ಬಾಯ್ದೆರೆದ ದೈತ್ಯ ಇನ್ನಷ್ಟು ಅಗಲ
ಇಡಿಯಾಗಿ ನುಂಗಿದ ವೀರನವನ
ನುಂಗಿ ವೀರನ ಹೇಳಿದನು ಹೀಗೆ
ಈಗಾಗಲೆ ತಿಂದೆ ಸಾಕಷ್ಟು ತಿನಿಸು
ಹೆಣ್ಣು ಕುರಿ ಮೇಕೆ ಬಂಜೆ ಕಡಸು
ಹಂದಿಗಳ ನುಂಗಿರುವೆ ತಿಂದು ಮುಗಿಸಿರುವೆ
ಆದರೆ ಸಿಕ್ಕಿರಲಿಲ್ಲ ಇದರಂಥ ಭೋಜನ
ಇಂಥ ತುತ್ತಿನ ರುಚಿ ನೋಡಿರಲೆ ಇಲ್ಲ

ಹಿರಿಯ ವೆಯ್ನಾಮೊಯ್ನನ್ ಹೀಗೆಂದು ನುಡಿದ :
ಬಂತೆನಗೆ ವಿನಾಶ ಬಂತು ಕೇಡು
ಸಿಕ್ಕಿ ಬಿದ್ದಿರುವೆ ಹಿಸ್ಸಿ ಕೋಣೆಯಲ್ಲಿ
ಅಂತಕನ ಇಕ್ಕಟ್ಟು ಕೂಪದಲ್ಲಿ

ಚಿಂತಿಸಿದ ಮನದಲ್ಲಿ ಉಳಿಯುವುದು ಹೇಗೆ
ಕಿರುಗತ್ತಿಯಿತ್ತು ಅವನ ಒರೆಯೊಳಗೆ
ಬರ್ಚ್ ಮರದ ಹಿಡಿಕೆ ಆ ಕತ್ತಿಗೆ
ದೋಣಿ ಕಟ್ಟಿದ ಅಲ್ಲೆ ಹುಟ್ಟು ಹಾಕಿದ ಮುಂದೆ
ಸುತ್ತಾಡಿ ಅತ್ತಿತ್ತ ಗರ್ಭದಲ್ಲಿ
ಸಂಚರಿಸಿದ ಇಕ್ಕಟ್ಟು ನಾಳದಲ್ಲಿ
ಹೊರಬರುವ ದಾರಿ ಹುಡುಕುತಲ್ಲಿ

ವಿಪುನನ್ ಹಾಡುಗಾರ
ಇದ್ದ ಏನೇನೂ ಆಗದವನಂತೆ
ಕಮ್ಮಾರನ ರೀತಿ ವೆಯ್ನಾಮೊಯ್ನನ್ ಬಡಿದ
ಕಬ್ಬಿಣವ ಕುಟ್ಟಿಕುಟ್ಟಿ ಬಡಿದ
ಆಯಿತವನಂಗಿ ತಿದಿ ಒತ್ತುವ ಸಾಲೆ
ತಿದಿಯಾದವು ತೋಳು ತುಪ್ಪಳದ ಚೀಲ
ಆಯಿತು ಷರಾಯಿ ಗಾಳಿ ಊದುವ ಕೊಳವೆ
ಮೊಣಕಾಲು ಅಡಿಗಲ್ಲು ಮೊಣಕೈಯೇ ಸುತ್ತಿಗೆ
ಬಡಿದ ಒಂದೇ ಸಮನೆ ಮೊಣಕೈಯ ಸುತ್ತಿಗೆ
ಎಡಬಿಡದೆ ಹಗಲಿರುಳು ರಕ್ಕಸನ ಗರ್ಭದಲಿ

ಹಾಡಿಗೆ ಹೆಸರಾದ ವಿಪುನನ್‌ನು ನುಡಿದ
ಯಾರಿರಬಹುದಿವನು ಮನುಜರಲ್ಲಿ
ಯಾವ ಗುಂಪಿನ ವೀರನಿರಬಹುದು ಈತ
ನೂರಾರು ವೀರರ ನುಂಗಿರುವೆ ನಾನು
ಸಾವಿರಾರು ಜನರ ನುಂಗಿ ಹಾಕಿರುವೆ
ಆದರೂ ನುಂಗಲಿಲ್ಲ ಇಂಥವನ ಮೊದಲು
ಕಲ್ಲಿದ್ದಲ ಬೆಂಕಿ ಇದ್ದಂತೆ ಬಾಯಲ್ಲಿ
ಉರಿವ ಕೆಂಡಗಳು ನಾಲಗೆಯ ಮೇಲೆ
ಕರಗಿಸಿದ ಬಿಸಿ ಉಕ್ಕು ಗಂಟಲಲ್ಲಿ

ಹೋಗಯ್ಯ ಪರದೇಶಿ ಹೊರಟು ಹೋಗು
ಹೋಗಿ ಬಿಡು ಈಗಲೇ ಮಣ್ಣು ಕೀಟ
ನಿನ್ನ ತಾಯಿಗೆ ನಾನು ದೂರು ಹೇಳುವ ಮೊದಲು
ಹೇಳಿದರೆ ನಿನ್ನ ಕಥೆ ವೃದ್ಧ ತಾಯಿಯ ಮುಂದೆ
ಎಷ್ಟು ನೋಯುವಳೋ ಎಷ್ಟು ಮಾಡುವಳೊ ಶೋಕ
ಮಗನ ನೀಚತೆಗೆ ನೊಂದು
ಕೆಟ್ಟ ಕೆಲಸ ಮಗ ಮಾಡಿದನು ಎಂದು

ತಿಳಿಯುತಿಲ್ಲ ನನಗೆ ಏನು ಕಾರಣವೆಂದು
ಹೇಗಿಲ್ಲಿ ಬಂದೆ ಯಾಕಿಲ್ಲಿ ಬಂದೆ
ಹೀಗೇಕೆ ಕೊಡುತಿರುವೆ ಹಿಂಸೆ ನನಗೆ
ಯಾರಯ್ಯ ನೀನು ವ್ಯಾಧಿಯೋ ಪೀಡೆಯೋ
ಜುಮಾಲನಪ್ಪಣೆ ಪಡೆದು ಬಂದಂಥ ಸಾವೋ
ನನ್ನ ನೋಯಿಸಲೆಂದೇ ಸೃಷ್ಟಿಸಿದ ಜೀವಿಯೋ
ಹಣಕೊಟ್ಟು ಯಾರಾದರೂ ಕಳುಹಿದರೊ ನಿನ್ನ

ಆಗಿದ್ದರೆ ನೀನು ವ್ಯಾಧಿಯೋ ಪೀಡೆಯೋ
ಜುಮಾಲನಪ್ಪಣೆಯಿಂದ ಬಂದಂಥ ಸಾವೋ
ನಂಬುವೆನು ನಾನು ಸೃಷ್ಟಿಕರ್ತನನ್ನು
ಜುಮಾಲ ದೇವನಿಗೆ ಶರಣೆಂದು ಹೇಳುವೆನು
ಕೈ ಬಿಡನು ಎಂದಿಗೂ ಒಳ್ಳೆಯವರನ್ನು
ನಾಶ ಮಾಡನು ಎಂದೂ ಸತ್ಯವಂತರನು

ಆಗಿದ್ದರೆ ನೀನು ಅನ್ಯ ಪರಜೀವಿ
ನನ್ನ ನೋಯಿಸಲೆಂದೇ ಸೃಷ್ಟಿಸಿದ ಜೀವಿ
ಪತ್ತೆ ಮಾಡುವೆ ನಿನ್ನ ಕುಲಮೂಲವನ್ನು

ಧಾಳಿ ಮಾಡಿದ್ದವು ಒಮ್ಮೆ ವ್ಯಾಧಿ ಮಾರಿಗಳು
ಎಲ್ಲಿಂದಲೊ ಬಂದು ಎರಗಿದ್ದವು ಪ್ಲೇಗು
ಬಲುದೊಡ್ಡ ಮಾಂತ್ರಿಕನ ತಾಣದಿಂದ
ಕೇಡು ಶಕ್ತಿಗಳ ಮೂಲ ಸ್ಥಳದಿಂದ
ಗಾರುಡಿಗರು ವಾಸಿಸುವ ಬಯಲಿನಿಂದ
ಯಮಲೋಕದ ಭೀಕರ ಪೊದೆಗಳಿಂದ
ಭುವಿಯ ಕೆಳಗಿನ ಪಾತಾಳದಿಂದ

ಸತ್ತವರ ಹೂಳಿದ ಗೋರಿಯಿಂದ
ಬೆಟ್ಟಗುಡ್ಡಗಳಡಿಯ ಸಡಿಲು ಮಣ್ಣಿಂದ
ಪಾಚಿ ಗಿಡ ಬೆಳೆದ ಜವುಗಿನಿಂದ
ಕಾನುಮಲೆಗಳ ಶಿಖರ ತುದಿಗಳಿಂದ
ನರಿಗಳು ಊಳಿಡುವ ಜಾಗದಿಂದ
ಚಿಗರೆ ಬೆನ್ನಟ್ಟುವ ಪೊದೆಗಳಿಂದ
ಪೊಹ್ಜಾದ ಗಡಿನಾಡ ಸೀಮೆಯಿಂದ
ಗಿಡಗಂಟೆ ಇರದ ಬಂಜರಿಂದ
ಎಂದೂ ಉಳದ ಬೀಳು ಭೂಮಿಯಿಂದ
ಶೂರವೀರರ ತರಿದ ಕದನ ಸ್ಥಳದಿಂದ
ನೀಲಿ ಕಡಲಿನ ನೀರ ಮೇಲಿನಿಂದ
ಸಾವಿರಾರು ಯೋಜನದ ಆಳದಿಂದ
ಘನಘೋರ ನೆರೆಯಿಂದ ಕುದಿನೀರ ಸುಳಿಯಿಂದ
ಮಳೆಯಿಂದ ಮುಗಿಲಿನಾಕಾಶದಿಂದ
ಬಿರುಗಾಳಿ ಹುಟ್ಟಿ ಬರುವ ತೊಟ್ಟಿಲಿಂದ

ಬಂದಿರುವೆ ನೀನು ಅಂಥ ಸ್ಥಳದಿಂದ
ಕೊಡಲೆಂದೆ ನನಗೆ ಚಿತ್ರಹಿಂಸೆ
ಕೇಡು ಅರಿಯದ ನನ್ನ, ಪಾಪವರಿಯದ ನನ್ನ
ನುಂಗ ಬಂದಿರುವೆ
ನರಕಯಾತನೆ ನೀಡಿ ಕೊಲ್ಲ ಬಂದಿರುವೆ

ಹೋಗು ಈಗಲೆ ಹೊರಟು, ಹೋಗಿ ಬಿಡು ಹೊರಟು
ಪಾಪಲೋಕದ ನಾಯಿ ನೀಚಲೋಕದ ಶುನಕ
ರಕ್ಕಸನೆ ತೊಲಗು ಈ ದೇಹಬಿಟ್ಟು
ಮಣ್ಣು ಕೀಟವೆ ತೊಲಗು ಈ ದೇಹ ಬಿಟ್ಟು
ನಾಶ ಮಾಡದೆ ನನ್ನ ಅಂಗಾಂಗಗಳನು
ತಂಗದಿರು ನನ್ನ ಹೊಟ್ಟೆಯೊಳಗೆ
ಚಲಿಸದಿರು ನನ್ನ ಪಪ್ಪುಸಗಳಲ್ಲಿ
ತಿವಿಯದಿರು ನನ್ನ ಹೊಕ್ಕುಳಲ್ಲಿ
ಘಾಸಿ ಮಾಡದಿರು ಸೊಂಟ ಪಕ್ಕೆಗಳಿಗೆ
ಮುರಿಯದಿರು ನನ್ನ ಬೆನ್ನ ಮೂಳೆ

ಆಗದಿದ್ದರೆ ನನಗೆ ಸೋಲಿಸಲು ನಿನ್ನ
ಕರೆಯುವೆನು ಇದಕಿಂತ ದೊಡ್ಡ ಶಕ್ತಿ
ಪೊರೆಯುವುದು ಕೇಡಿಂದ ಅನಿಷ್ಟ ತೊಲಗಿಸುವುದು
ಭುವಿಯಿಂದ ಕರೆಯುವೆನು ಭೂಮಾತೆಯನ್ನು
ಬಯಲಿಂದ ಜಗದಾದಿದೇವನನ್ನು
ಕರೆಸುವೆನು ಹಿರಿಗತ್ತಿ ವೀರಭಟರನ್ನು
ಉಸುಕು ನಾಡಿಂದ ಅಶ್ವಯೋಧರನ್ನು

ಅವರಿಗೂ ನೀನು ಮಣಿಯದಿದ್ದರೆ ಆಗ
ಅರಣ್ಯವೇ ಬಾ ನಿನ್ನ ಜನರೊಂದಿಗೆ
ಬನ್ನಿ ವೃಕ್ಷಗಳೇ ನಿಮ್ಮ ಜನರ ಜೊತೆಗೆ
ಶಸ್ತ್ರಧಾರಿಗಳ ಜೊತೆ ಇಲ್ಲಿ ಬನ್ನಿ
ಈ ದುಷ್ಟಶಕ್ತಿಯನು ಹೊಡೆದಟ್ಟ ಬನ್ನಿ

ಅವರಿಗೂ ನೀನು ಮಣಿಯದಿದ್ದರೆ ಆಗ
ಎದ್ದೇಳು ಓ ಮಾತೆ ಜಲದ ತಾಯೇ
ನೀಲಿ ಟೊಪ್ಪಿಯ ಶಿರ ಅಲೆ ಮೇಲೆ ಬರಲಿ
ನವಿರುಡುಗೆ ಕಾಣಸಲಿ ಅಲೆಯ ಮೇಲೆ
ನೀರ ಮೇಲಕೆ ಬರಲಿ ನಿನ್ನ ರೂಪ
ಬಲಹೀನ ಶೂರನ ಪೊರೆದು ಕಾಪಾಡಲಿ
ತಪ್ಪು ಮಾಡದ ನನ್ನ ಕೊನೆಯಾಗದಿರಲಿ

ಆಗಲೂ ನೀನು ತಲೆ ಬಾಗದಿದ್ದರೆ
ಸೃಷ್ಟಿಕರ್ತನ ಪುತ್ರಿ ಕನಕ ಸೌಂದರ್ಯವತಿ
ಎಲ್ಲ ಸ್ತ್ರೀಯರಿಗೂ ಪುರಾತನದ ಸ್ತ್ರೀಯೆ
ಎಲ್ಲ ಮಾತೆಯರ ಮೊದಲ ಮಾತೆ
ಬಾ ನೋಡು ಸಹಿಸೆ ಈ ನರಕ ಧಾಳಿ
ಕೆಡುಕನೋಡಿಸು ತಾಯೆ ಕೆಡುಕ ಪರಿಹರಿಸು

ಇಷ್ಟಾದರೂ ನೀನು ಹೋಗದಿದ್ದರೆ ಹಿಂದೆ
ಉಕ್ಕೋ ದೇವ ಆಗಸದ ಒಡೆಯ
ಗುಡುಗು ಮೋಡಗಳ ಸೀಮೆಯವನೆ
ದುಷ್ಟ ಶಕ್ತಿಯ ಹೊಡೆದು ತೊಲಗಿಸಲು ಬಾ
ಉರಿಕತ್ತಿ ಝಳಪಿಸಿ ಹೊಡೆದಟ್ಟು ಬಾ

ತೊಲಗು ಪಿಶಾಚಿಯೆ ಹೋಗು ತೊಲಗಿ ಹೋಗು
ಈ ಭೂಮಿ ಶಾಪವೇ ಹೊರಟು ಹೋಗು
ಇಲ್ಲಿಲ್ಲ ನಿನಗೆ ಇರಲು ತಾವು
ಬೇಕಿದ್ದರೆ ಹುಡುಕಿಕೊ ದೂರ ಎಲ್ಲಾದರೂ
ನಿನ್ನೊಡೆಯನಲ್ಲಿ ನಿನ್ನೊಡತಿ ಮನೆಯಲ್ಲಿ

ಮುಗಿದಾಗ ನಿನ್ನ ಈ ದೂರ ಪಯಣ
ನೀ ಸೇರಿದಾಗ ನಿನ್ನವರ ತಾಣ
ಕೊಡು ಅವರಿಗೆ ಸಂಕೇತ ನೀ ಬಂದುದಕ್ಕೆ
ನಿನ್ನಾಗಮನ ಸೂಚಿಸಲಿ ಗುಡುಗು ಮಿಂಚು
ಅಂಗಳದ ಬಾಗಿಲು ಚೂರು ಚೂರಾಗಲಿ
ಕಿಟಕಿ ಕದ ಬಡಿದು ಮುಚ್ಚಿ ಬಿಡಲಿ
ಮನೆಯೊಳಗೆ ತೂರಿ ಬಿಡು ಚಂಡ ಮಾರುತದಂತೆ
ಇಕ್ಕಟ್ಟಿನಲಿ ಗಟ್ಟಿ ಊರು ಪಾದ
ಗಂಡಸರ ತಳ್ಳು ಮನೆ ಕೋಣೆ ಮೂಲೆಗೆ
ಹೆಂಗಸರ ತಳ್ಳು ಮನೆಯ ಬಾಗಿಲಿಗೆ
ಪರಚಿಬಿಡು ನಿನ್ನ ಒಡೆಯಂದಿರ ಕಣ್ಣು
ಜಜ್ಜಿ ಬಿಡು ಹೆಂಗಸರ ತಲೆಗಳನ್ನು
ತಿರುಚಿಕೊ ವಕ್ರ ನಿನ್ನ ಬೆರಳನ್ನು
ತಿರುಚಿಬಿಡು ವಕ್ರ ಎಲ್ಲ ತಲೆಯನ್ನು

ಇಷ್ಟು ಸಾಕಾಗದಿದ್ದರೆ
ಹುಂಜದಂತೋಡು ಬೀದಿಯಲ್ಲಿ
ಕೋಳಿ ಮರಿಯಂತೆ ಹೊಲಬಯಲಿನಲ್ಲಿ
ನಿನ್ನ ಮೊಲೆ ಜೋತಾಡಲಿ ತಿಪ್ಪೆಯಲ್ಲಿ
ಹೊಡೆದಟ್ಟು ಅಶ್ವಗಳ ಲಾಯದಿಂದ
ಕೊಂಬು ದನವನ್ನು ಕೊಟ್ಟಿಗೆಯ ಹೊರಗೆ
ಕಣ್ಣುಗಳ ತಿರುಚಿಬಿಡು ಬೇಕಾದ ಹಾಗೆ
ಮುರಿದು ಬಿಡು ಬೇಗ ಹಸು ದನದ ಕುತ್ತಿಗೆ
ನೀನೇನು ವ್ಯಾಧಿಯೋ ಬಿರುಗಾಳಿಯಲಿ ಬಂದೆಯೊ
ಶೀತ ಮಾರುತನು ಕೊಟ್ಟ ಉಡುಗೊರೆಯೊ
ತೇಲಿ ಬಂದಿರುವೆ ಶೀತ ಗಾಳಿಯಲ್ಲಿ
ಕೊರೆವ ಮಂಜಲ್ಲಿ ಹಿಮ ಬಂಡಿಯಲ್ಲಿ

ಹಾಗಿದ್ದರೆ ತಂಗದಿರು ಹಸಿರು ಮರದಲ್ಲಿ
ಹೋಗಿ ಬಿಡು ಬೇಗ ತಾಮ್ರ ಶಿಲೆ ಬೆಟ್ಟಕ್ಕೆ
ಇರಲಿ ಮಂಜಿನಗಾಳಿ ನಿನ್ನ ಬೆಂಗಾವಲಿಗೆ

ಇಳಿದು ಬಂದೆಯೊ ನೀನು ಆಕಾಶದಿಂದ
ಧರೆಗಿಳಿದು ಬಂದೆಯೊ ಮುಗಿಲಿನಿಂದ
ಹಾಗಿದ್ದರೆ ಮತ್ತೆ ಆಕಾಶಕೇರು
ಮತ್ತೆ ಮೇಲಕ್ಕೆ ಗಾಳಿಯಲ್ಲೇರು
ಮಳೆ ತರುವ ಮುಗಿಲ ಮೋಡಕ್ಕೆ
ಮಿನುಗುತಿಹ ನಕ್ಷತ್ರ ಲೋಕಕ್ಕೆ
ಥಳಥಳಿಸಿ ಹೊಳೆಯುತಿರು ಸೂರ್ಯ ಪಥದಲ್ಲಿ
ಹೊಳೆವ ಚಂದಿರನ ತೇಜ ವೃತ್ತದಲ್ಲಿ

ನೀರಿಂದ ಬಂದ ಕೀಟವೋ ನೀನು
ಅಲೆಯ ರಭಸಕ್ಕೆ ಕೊಚ್ಚಿ ಬಂದೆಯೊ ಹೇಗೆ
ಹಾಗಿದ್ದರೆ ಹೋಗಿಬಿಡು ಮತ್ತೆ ಬಂದಲ್ಲಿಗೆ
ಕಡಲ ಅಲೆಗಳಿಗೆ ಕೆಸರು ತಳಗಳಿಗೆ
ಅಲೆಯಂಥ ಪರ್ವತದ ಶಿಖರ ಗಾಳಿಗೆ
ಕರಿನೀರೆ ಆಗಲಿ ನಿನ್ನ ಉಯ್ಯಾಲೆ

ಬಂದೆಯೋ ನೀನು ಮಸಣದಿಂದ
ಅಗಲಿದವರ ನೆಲೆಯಿಂದ
ಹೋಗು ಅಲ್ಲಿಗೇ ಕತ್ತಲಿನ ಬೀಡಿಗೆ
ಗುಡ್ಡ ಬೆಟ್ಟಗಳಲ್ಲಿ ಮೇಲೆದ್ದ ಭೂಮಿಗೆ
ಸದಾ ಕಂಪಿಸುವ ಬಯಲು ಭೂಮಿಗೆ
ಯುದ್ಧ ಮಾಡುತ ಜನರು ಬಿದ್ದು ಸಾಯುವಲ್ಲಿಗೆ

ಹಿಸ್ಸಿಯ ಕಾಡಿಂದ ಬಂದಿದ್ದರೆ ಮೂರ್ಖನೊಲು
ಮತ್ತೆ ಕಳಿಸುವೆನು ಅಲ್ಲಿಗೇ ನಿನ್ನ
ಇದ್ದು ಬಿಡು ಅಲ್ಲೆ ಅಮರವಾಗಿ
ನೆಲದ ಹಲಗೆಯು ಕೊಳೆತು
ಬೂಜು ಹಿಡಿದು ಗೋಡೆ
ಕಳಚಿ ಮೇಲ್ಛಾವಣಿ
ಕೆಳಗೆ ಬೀಳುವವರೆಗೆ

ದುಷ್ಟ ಜೀವಿಯೆ ನಿನ್ನ ಅಟ್ಟುವೆನು ದೂರ
ದೊಡ್ಡ ಕರಡಿಯ ಗವಿಗೆ ಹೆಣ್ಣು ಕರಡಿ ಹಕ್ಕೆಗೆ
ಕಣಿವೆಗಳ ಜವುಗಿಗೆ
ಮೀನುಗಳ ಸುಳಿವಿರದ
ಕೊರೆವ ನೀರಿನ ಕೊಳಕ್ಕೆ

ಅಲ್ಲಿಯೂ ಸಿಗದಿದ್ದರೆ ಆಸರೆಯು ನಿನಗೆ
ಅಟ್ಟುವೆನು ದೂರದ ಪೊಹ್ಜಾದ ನಾಡಿಗೆ
ಮರಗಳಿರದ ಪಾಚಿ ಬೆಳೆದ
ಬರಡು ಬಯಲು ಭೂಮಿಗೆ
ಉಳುಮೆಗಿಳುಮೆ ಕೆಲಸವಿರದ
ಜನರಿಲ್ಲದ ಭೂಮಿಗೆ
ಚಂದ್ರನಿರದ ಸೂರ್ಯನಿರದ
ಹಾಳು ಸುರಿವ ನಾಡಿಗೆ

ಹೋಗಲ್ಲಿಯೆ ನಿನಗಿರುವುದು
ಸಂತೋಷದ ಬಾಳು
ನೆಗೆವ ಚಿಗರೆ ಜಂಕೆ ಬೇಟೆ
ಅದರಿಂದಲೆ ಬದುಕು
ಅಷ್ಟೆ ನಿನಗೆ ಬದುಕು

ಅಲ್ಲಿಂದಲೂ ಅಟ್ಟುವೆನು ಇನ್ನಷ್ಟು ದೂರಕ್ಕೆ
ಉಗ್ರ ಜಲಪಾತ ರುಟ್ಜಾ
ಘನಘೋರ ಸುಳಿಗಳಿಗೆ
ದೈತ್ಯಮರ ಸುಳಿಯಲ್ಲಿ
ಗಿರಕಿ ಹೊಡೆಯುವಲ್ಲಿಗೆ
ಹೋಗಲ್ಲಿಗೆ ದುಷ್ಟಭ್ರಷ್ಟ
ಸೀಮೆ ಇರದ ನೀರಿಗೆ
ಅಲ್ಲಿಯೂ ಸಿಗದಿದ್ದರೆ ಇರಲಾಸರೆ ನಿನಗೆ
ಅಟ್ಟಿಬಿಡುವೆ ನಿನ್ನ ಮತ್ತೆ ಪಾತಾಳದ ನದಿಗೆ
ಬರಲಾರೆ ಪಾರಾಗಿ ಜೀವವಿರುವವರೆಗೆ
ಬಿಡಲೊಪ್ಪೆನು ಅಲ್ಲಿಂದ ಎಷ್ಟು ದಂಡ ತೆತ್ತರೂ
ಎಂಥ ದಂಡ ತೆತ್ತರೂ

ತೆರುವೆಯೇನು ದಂಡವಾಗಿ
ಒಂದೇ ಸೂಲಿನ ಕುರಿ ಒಂಬತ್ತು
ಒಂದೇ ಸೂಲಿನ ದನ ಒಂಬತ್ತು
ಒಂದೇ ಸೂಲಿನ ಅಶ್ವ ಒಂಬತ್ತು

ಬೇಕಿದ್ದರೆ ಕೊಡುವೆ ನಿನಗೆ ಅಶ್ವಗಳನು ಪಯಣಕೆ
ಹಿಸಿ ಅಶ್ವ ಬಲು ಸುಂದರ ಕೆಂಗೆಂಪಿನ ಕೇಸರ
ಹೊಮ್ಮುತ್ತವೆ ಉರಿಯ ಜ್ವಾಲೆ ಹೊಳೆಯುತ್ತವೆ ಹೊಳ್ಳೆ
ಕಬ್ಬಿಣವೇ ಕಾಲಗೊರಸು ಉಕ್ಕಿನಂತೆ ಗಡುಸು
ಮಲೆಯನೇರಿ ಕಣಿವೆ ಇಳಿದು
ತೋರುತ್ತದೆ ಪರಾಕ್ರಮ
ಧೈರ್ಯದಿಂದ ಏರಿದವನೆ ಪುರುಷವೀರ ವಿಕ್ರಮ

ಹಿಡಿದಾರಿ ಸೋಮಾರಿ ತೊಲಗು ದುಷ್ಟ ಮನುಜ
ಹಗಲು ಹುಟ್ಟುವ ಮೊದಲು ಬೆಳಕು ಹರಿಯುವ ಮೊದಲು
ಸೂರ್ಯನೇಳುವ ಮೊದಲು ಕೋಳಿ ಕೂಗುವ ಮೊದಲು
ತಡಮಾಡಿದೆ ಬಹಳ, ಬಿಟ್ಟು ಹೋಗದೆ ನನ್ನ
ಈಗಾದರೂ ಹೋಗಿಬಿಡು ಚಂದ್ರ ಬೆಳಕ ದಾರಿಯಲ್ಲಿ

ಹೊರಡದಿದ್ದರೆ ಬೇಗ ದಿಕ್ಕಿಲ್ಲದ ನಾಯಿ
ಹದ್ದು ಮೊನೆಯ ಉಗುರಿನಂತೆ
ರಕ್ತ ಕುಡಿವ ಜಿಗಣೆಯಂತೆ
ಹಿಡಿದು ಬಿಡುವೆ ನಿನ್ನ, ಕಾಡದಂತೆ ನನ್ನ

ವೆಯ್ನಾಮೊಯ್ನನ್ ದೃಢ ಚಿತ್ತ ಹಿರಿಯ
ಕೊಟ್ಟ ಮಾರುತ್ತರ ಈ ನುಡಿಗಳಲ್ಲಿ
ಬಹಳ ಸೊಗಸಾಗಿದೆ ಇಲ್ಲಿರುವುದು ನನಗೆ
ಬಹಳ ತೃಪ್ತಿಯಾಗಿದೆ ಈ ಜಾಗ ನನಗೆ
ಆಹಾರವು ಸಮೃದ್ಧ ರುಚಿಯಾದ ಕೊಬ್ಬು
ತಿದಿಹೂಡುವೆ ಆಳಕ್ಕೆ ಎದೆಗುಂಡಿಗೆಯಲ್ಲಿ
ಬಡಿಯುವೆ ಮೆದುಭಾಗಕ್ಕೆ ಕೈಸುತ್ತಿಗೆಯಲ್ಲಿ

ನೀ ಕಲಿತ ಮಂತ್ರ ನುಡಿ ಕಲಿಸದಿದ್ದರೆ ನನಗೆ
ಎಷ್ಟಿವೆಯೊ ಮಂತ್ರ ಎಲ್ಲವನೂ ನನಗೆ

ಯಾವುದನು ಬಚ್ಚಿಡದೆ ಯಾವುದನು ಮುಚ್ಚಿಡದೆ
ಗಾರುಡಿಗರಳಿದರೂ ನಾಶವಾಗದ ಮಂತ್ರ ನುಡಿ
ಈ ನೋವಿಂದ ಎಂದಿಗೂ ಇಲ್ಲ ಬಿಡುಗಡೆ ನಿನಗೆ

ಆಂಟರೊ ವಿಪುನನ್ ಹಾಡಿಗೆ ಹೆಸರಾದವ
ಬಹುಪುರಾತನ ಜ್ಞಾನಿ
ಬಾಯೊಳಗೆ ಬಲವಾದ ಮಂತ್ರವಿದ್ದವನು
ಎದೆಯೊಳಗೆ ಮಹಾಶಕ್ತಿ ಮಂತ್ರವಿದ್ದವನು
ಜ್ಞಾನದ ಬಾಯ ತೆರೆದಿಂತು ನುಡಿದನು
ಮಂತ್ರ ತುಂಬಿದ್ದ ಕಣಜ ತೆರೆದಿಟ್ಟನು

ಹಾಡಿದ ಮಹಾದಿವ್ಯ ಮಂತ್ರಗಾನ
ವಿಶ್ವ ಸೃಷ್ಟಿಯ ಗಾನ
ಅನಾದಿಯಿಂದಾದ ಜಗದ ಸೃಷ್ಟಿಯ ಗಾನ
ನಿಲುಕುವಂತಹವಲ್ಲ ಎಳೆಯ ಹುಡುಗರಿಗೆ
ವೀರರಿಗೂ ಕಷ್ಟ ಅರ್ಥವಾಗುವುದು
ಕೆಟ್ಟು ಹೋಗಿರುವ ಈ ಕಾಲದಲ್ಲಿ
ಕಳೆದು ಹೋಗುತ್ತಿರುವ ಈ ದಿನಗಳಲ್ಲಿ

ಜಗದ ಹುಟ್ಟಿನ ಹಾಡು ಹಾಡಿದನು ಅವನು
ಎಲ್ಲ ಮಂತ್ರಗಳ ಕ್ರಮವಾಗಿ ಹಾಡಿದನು
ಸೃಷ್ಟಿಕರ್ತನ ಬಯಕೆಯಂತೆ
ಭಗವಂತನ ಅಪ್ಪಣೆಯಂತೆ
ಸ್ವತಃ ತಾನೇ ಗಾಳಿಯನು ರೂಪಿಸಿದ ಕಥೆಯ
ಗಾಳಿಯನು ನೀರು ಅಗಲಿದ್ದು ಹೇಗೆ
ನೀರಿಂದ ಭೂಮಿ ರೂಪುಗೊಂಡಿತು ಹೇಗೆ
ಭುವಿಯಿಂದ ಸಸ್ಯ ಮೊಳೆತಿದ್ದು ಹೇಗೆ

ಆನಂತರ ಹಾಡಿದನು ಚಂದಿರನ ಸೃಷ್ಟಿ
ಅದರಂತೆ ಹಾಡಿದನು ದಿನಕರನ ಸೃಷ್ಟಿ
ಕಂಬಗಳ ಮೇಲೆ ಆಗಸವು ನಿಂತ ಬಗೆಯನ್ನು
ಆಗಸದಲಿ ತಾರೆಗಳ ಇಟ್ಟ ಕಥೆಯನ್ನು

ವಿಪುನನ್ ಹೆಸರಾಂತ ಹಾಡುಗಾರ
ಹಾಡಿದನು ಪರಿಪೂರ್ಣ ಮಂತ್ರಗಾನ

ಎಂದೂ ಕೇಳಿರಲಿಲ್ಲ ಎಂದೂ ಕಂಡಿರಲಿಲ್ಲ
ಜಗದ ಇತಿಹಾಸದಲಿ ಇವನ ಮೀರಿದವನನ್ನು
ಇವನ ಮೀರಿದ ಜ್ಞಾನಿ ಗಾರುಡಿಗನನ್ನು
ಹರಿದು ಬಂದವು ನುಡಿಮುತ್ತು ಬಲು ವೇಗದಿಂದ
ತಡೆಯಿರದ ಪದ ನುಡಿ ಅವನ ಬಾಯಿಂದ
ಓಡಾಡುವ ಕೋಳಿಗಳ ಕಾಲುಗಳ ಚುರುಕಿಂದ
ಓಡುವಶ್ವಗಳ ಪಾದಗಳ ಚುರುಕಿಂದ

ಬಿಡದಂತೆ ಹಾಡಿದನು ಹಗಲೆಲ್ಲವೂ
ನಿಲ್ಲಿಸದೆ ಹಾಡಿದನು ಇರುಳೆಲ್ಲವೂ
ಸೂರ್ಯನೂ ಕೇಳಿದನು ಆಲಿಸಿದ ಚಂದ್ರನೂ
ಕಡಲಲೆಯು ಕೇಳಿದವು ಚಲನೆಯನು ನಿಲಿಸಿ
ನದಿಗಳೂ ಕೇಳಿದವು ಹರಿವುದನು ನಿಲಿಸಿ
ಭೋರ್ಗರೆವ ರುಟ್ಟಾ ಜಲಪಾತ ನಿಂತಿತು
ವುವೋಸ್ಕಿಯ ಪ್ರಪಾತ ಹರಿವು ನಿಲ್ಲಿಸಿತು
ಜೋರ್ಡಾನ್ ನದಿ ಕೂಡ ಹಾಗೆಯೇ ನಿಂತಿತು
ಹಿರಿಯ ವೆಯ್ನಾಮೊಯ್ನನ್ ಎಲ್ಲ ಆಲಿಸಿದ
ಮಂತ್ರ ನುಡಿಯೆಲ್ಲ ಆಲಿಸಿದ ಮೇಲೆ
ಪೂರ್ತಿ ಮಂತ್ರಗಳ ಕಲಿತಾದ ಮೇಲೆ
ಹೊರಬರಲು ಸಜ್ಜಾದ ವಿಪುನನ್ನನ ಬಾಯಿಂದ
ಮಹಾಜ್ಞಾನಿ ಅವನ ಗರ್ಭದೊಳಗಿಂದ
ಆ ಮಹಾಬಲನ ಒಡಲೊಳಗಿನಿಂದ

ಆಯ್ತಾ ದೈತ್ಯ ಆಂಟಿರೊ ವಿಪುನನ್
ತೆರೆದಿಡು ಅಲಗಕ್ಕೆ ನಿನ್ನ ಬಾಯಿ
ಇನ್ನಷ್ಟು ಅಗಲಕ್ಕೆ ನಿನ್ನ ದವಡೆ
ನಾ ಬಿಟ್ಟು ಹೊರಡುವೆನು ನಿನ್ನ ಒಡಲನ್ನು
ಹೋಗಿ ಸೇರುವೆನು ನನ್ನ ನಾಡನ್ನು

ಗಾನದಲಿ ವಿಪುನನ್ ಜ್ಞಾನವಂತ
ಹೇಳಿದನು ಮಾತು ಈ ರೀತಿಯಾಗಿ
ಈ ಮೊದಲು ಬಹಳಷ್ಟು ತಿಂದಿರುವೆ ಕುಡಿದಿರುವೆ
ನೂರಾರು ಭಕ್ಷ್ಯಗಳ ಸವಿದು ಮೆದ್ದಿರುವೆ

ಇಂಥ ರುಚಿಯನ್ನು
ಹಿರಿಯ ವೆಯ್ನಾಮೊಯ್ನನನ್ನು
ಸವಿದಿರಲಿಲ್ಲ ನಾನು ಹಿಂದೆ ಎಂದೆಂದೂ
ಬಲು ಒಳ್ಳೆಯದಾಯ್ತು ನೀ ಬಂದುದು
ಇನ್ನೂ ಒಳ್ಳೆಯದು ಬಿಟ್ಟು ಹೊರಡುವುದು

ವಿಸ್ತಾರವಾಗವನು ತೆರೆದಿಟ್ಟ ಬಾಯಿ
ಹಿಗ್ಗಿಸಿದನವನು ದೊಡ್ಡ ಬಾಯಿ
ಅವನ ಗರ್ಭದೊಳಗಿಂದ ಬಾಯಿ ತಲುಪುವ ತನಕ
ಆ ದೈತ್ಯ ದೇಹದಲಿ ದೊಡ್ಡ ಪಯಣ
ಚಿಮ್ಮಿದನು ತ್ವರೆಯಿಂದ ಅವನ ಬಾಯಿಂದ
ಚಿಮ್ಮಿದನು ಅಳಿಲಂತೆ ಬಲು ಚುರುಕಿನಿಂದ

ಮುಂದುವರೆಯಿತು ಪಯಣ
ತಲುಪಿದನು ತಿದಿಸಾಲೆ
ಇಲ್ಮಾರಿನೆನ್ ಕೇಳಿದನು
ಸಿಕ್ಕಿದವೆ ನಿನಗೆ ಬೇಕಾದ ನುಡಿಮಂತ್ರ
ಕಲಿತೆಯಾ ಎಲ್ಲವನು ಸೃಷ್ಟಿಮಂತ್ರ
ದೋಣಿ ಕಟ್ಟುವ ಬಗೆ ತಿಳಿದೆಯೇನು
ಬಿಲ್ಲು ಕಟ್ಟುವ ಕಲೆಯ ಕಲಿತೆಯೇನು

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ ನುಡಿದ :
ನೂರಾರು ಮಂತ್ರಗಳ ಕಲಿತೆ ನಾನು
ಸಾವಿರಾರು ಮಂತ್ರ ಕಲಿತು ಬಂದೆ
ರಹಸ್ಯ ಮಂತ್ರನುಡಿ ಬಯಲಾದವು
ಬಚ್ಚಿಟ್ಟ ಮಂತ್ರಗಳು ಹೊರಬಂದವು

ಅಲ್ಲಿಂದ ಬಂದ ದೋಣಿ ಬಳಿ ಬೇಗ
ದೋಣಿಕಟ್ಟುವ ಕೆಲಸ ಆರಂಭ ಮಾಡಿದ
ಪಕ್ಕಗಳ ಜೋಡಿಸಿದ ಮುಂಭಾಗ ಜೋಡಿಸಿದ
ಚುರುಕಾಗಿ ಕಟ್ಟಿದ ದೋಣಿ ಬಳಿ ಹುಟ್ಟು
ಸುತ್ತಿಗೆಯ ಬಳಸದೆ ಕಟ್ಟಿದನು ದೋಣಿ
ಸಿಬುರನ್ನು ಸೀಳದೆಯೇ ಕಟ್ಟಿದನು ದೋಣಿ.

೧೦. ಪೊಹ್ಜೊಲಾ ನಾಡಿಗೆ ವೆಯ್ನಾಮೊಯ್ನನ್, ಇಲ್ಮಾರಿನೆನ್

ದೃಢಚಿತ್ತ ಹಿರಿಯ ವೆಯ್ನಾಮೊಯ್ನನ್
ಮನದಲ್ಲೆ ಚಿಂತಿಸಿದ
ನೀಳ ಕೂದಲ ಚೆಲುವೆ ಪಡೆವುದೆಂತು
ಸಾಟಿಯಿಲ್ಲದ ಚೆಲುವೆ ಗೆಲುವುದೆಂತು

ಅಲ್ಲಿತ್ತು ದೋಣಿ ಬಣ್ಣವಿಲ್ಲದ ದೋಣಿ
ಕೆಂಬಣ್ಣ ಹಚ್ಚಿದ ಲೇಪ ಬಂಗಾರ
ನಸುಕಿನಲಿ ನೂಕಿ ದೋಣಿಯನು ನೀರಿಗೆ
ದೇವತೆಗಳ ಪ್ರಾರ್ಥಿಸಿ ಹೇಳಿದನು ಹೀಗೆ
ಓ, ಜುಮಾಲಾ ಕರುಣಾಮಯದೇವ
ಅವತರಿಸು ಬಾ ನನ್ನ ದೋಣಿಯೊಳಗೆ
ಶಕ್ತಿ ಹೀನನಲಿ ಶಕ್ತಿಯನು ತುಂಬು
ದುರ್ಬಲರ ಮೇಲಿರಲಿ ನಿನ್ನ ಕರುಣೆ

ಇರುಳ ಪುತ್ರಿ ಆ್ಯನಿಕಿ ಬೆಳದಿಂಗಳ ಬಾಲೆ
ಹೊತ್ತು ಮೂಡುವ ಮುನ್ನ ಹೊಳೆಯ ಬಳಿ ಬಂದಳು
ಒಗೆದು ಜಾಲಾಡಲು ಬಟ್ಟೆ ಬರೆಯನ್ನು
ತಲೆ ಎತ್ತಿ ನೋಡಿದಳು ಸುತ್ತ ದಿಟ್ಟಿಯ ಬೀರಿ
ಮೂಡುತಿದ್ದನು ಸೂರ್ಯ ತೀರದಂಚಿನಲಿ
ಹೊಳೆಯುತಿದ್ದವು ನೀರು ರವಿಯ ಕಿರಣದಲಿ

ದಿಟ್ಟಿಗಳು ಹಾಯ್ದವು ಅಲೆಯ ಮೇಲೆ
ಕಂಡುದೇನೊ ನೀಲಿ ಅಲೆಯ ಮೇಲೆ
ಮನದಲ್ಲಿ ಯೋಚಿಸಿದಳು
ಏನಿರಬಹುದು ನೀಲಿ ಚಿಕ್ಕೆಯಂತಹದು
ಬಾತುಕೋಳಿಯ ಹಿಂಡೆ ಹಕ್ಕಿಗಳ ದಂಡೆ
ಮೇಲೆ ಹಾರಿದರೆ ಗೊತ್ತಾಗಬಹುದು

ಇರಬಹುದೆ ಸಾಲ್ಮನ್ ಮೀನುಗಳ ಗುಂಪು
ಅಥವಾ ಮತ್ತೇನೊ ಬೇರೆ ಮೀನು
ಮೇಲೆ ಚಿಮ್ಮಿದರೆ ಚಿಮ್ಮಿ ಮುಳುಗಿದರೆ
ಗೊತ್ತಾಗಬಹುದು

ಇರಬಹುದೆ ಶಿಲೆ ಬಂಡೆ ಮರದ ಕೊರಡು
ಅಲೆಯು ತಂದರೆ ಮೇಲೆ ನೀರು ನೂಕಿದರೆ ಮುಂದೆ
ಗೊತ್ತಾಗಬಹುದು

ಏರುತ್ತ ಇಳಿಯುತ್ತ ದೋಣಿ ಬಂತು
ನಡುಗಡ್ಡೆ ಅಂಚಿಗೆ ಹಿಮ ಕವಿದ ಭೂಮಿಗೆ

ಆ್ಯನಿಕಿ ಮನದಲ್ಲಿ ಅಂದುಕೊಂಡಳು ಹೀಗೆ
ಆಗಿದ್ದರೆ ದೋಣಿ ನನ್ನ ಅಣ್ಣನದು
ಆಗಿದ್ದರದು ನನ್ನ ಅಪ್ಪನದು
ಮನೆಯತ್ತ ಬರಲಿ ಅದರ ಪಯಣ
ಆಗಿದ್ದರದು ಪರದೇಶಿಯಾರದೊ
ಹೋಗಿಬಿಡಲಿ ದೂರ ಅದರ ಪಯಣ

ಅಲ್ಲ ಮನೆಮಂದಿಯದು ಅಲ್ಲ ಪರದೇಶಿಯದು
ಅದು ವೆಯ್ನಾಮೊಯ್ನನ್ನನ ದೋಣಿಯಾಗಿತ್ತು
ಆದಿ ಚಾರಣ ನಿರ್ಮಿಸಿದ ದೋಣಿಯಾಗಿತ್ತು
ಆ ದೋಣಿ ತೇಲುತ್ತ ಸನಿಹಕ್ಕೆ ಬಂತು
ಆಡಿದಂತಹ ಮಾತು ಸ್ಪಷ್ಟ ಕೇಳುವಷ್ಟು

ಇರುಳ ಪುತ್ರಿ ಆ್ಯನಿಕಿ ಬೆಳದಿಂಗಳ ಬಾಲೆ
ಕೂಗು ಹಾಕಿದಳು ಸನಿಹ ಬಂದ ದೋಣಿಗೆ
ಹೊರಟೆ ಎಲ್ಲಿಗೆ ವೆಯ್ನಾಮೊಯ್ನನ್
ಜಲವೀರ ಎಲ್ಲಿಗೆ
ಹೊರಟೆ ಎಲ್ಲಿಗೆ ನೀನು ನಾಡಹೆಮ್ಮೆಯ ಪುತ್ರ

ಮೊದಲೆ ನಿರ್ಧರಿಸಿದಂತೆ ಉತ್ತರಿಸಿದ ಅವನು
ಹೋಗುತಿಹೆ ನಾನು ಮೀನುಗಳ ಬೇಟೆಗೆ
ಸಾಲ್ಮನ್‌ಗಳು ತತ್ತಿ ಇಡುವಲ್ಲಿಗೆ
ಟುವೊನಿ ನದಿಯ ನೀರ ದಡಕೆ

ಆ್ಯನಿಕಿ ಹೇಳಿದಳು : ಇದು ಶುದ್ಧ ಸುಳ್ಳು
ಮೀನು ತತ್ತಿಯ ಕಾಲ ಚೆನ್ನಾಗಿ ಗೊತ್ತು
ಮೀನು ಬೇಟೆಯ ಬಗೆ ನನಗೂ ಗೊತ್ತು
ನನ್ನಪ್ಪ ನನ್ನಜ್ಜ ಮಾಡುತಿದ್ದರು ಬೇಟೆ

[illegible]
[illegible]
[illegible]
[illegible]
[illegible] ಹೊರಟಿರುವೆ [illegible]
[illegible]

ವೆಯ್ಯಾಮೊಯ್ನನ್ ನುಡಿದ :
ಹೊರಟಿರುವೆ [illegible]
[illegible]
[illegible]
[illegible]

ಆ್ಯನಿಕಿ ಹೇಳಿದಳು: ಪತ್ತೆ ಮಾಡಲು ಗೊತ್ತು
[illegible]
ಸುಳ್ಳುಗಾರನ ಪತ್ತೆ ನನಗೆ ಗೊತ್ತು
ನಮ್ಮಪ್ಪ ನನ್ನಜ್ಜ ಮಾಡುತ್ತಿದ್ದರು ಬೇಟೆ
ದಿಗಿಲಾಗಿ ಹುರಿಗಟ್ಟಿ ದಿಟ್ಟ ಕೈಯಲ್ಲಿ
ಕಪ್ಪು ನಾಯಿಯ ಕಟ್ಟಿ ಹಿಂಭಾಗದಲ್ಲಿ
ಕಿವಿಗಳ ಪಟ್ಟಿಯ ನಾಯಿ ಬೇಟೆ ನಾಯಿ
[illegible] ಬಳಿಯಲ್ಲಿ [illegible] ನಾಯಿ
ನೀನು ಹೇಳು ನೀನೀಗ ಹೊರಟಿರುವೆ ಎಲ್ಲಿ.

ವೆಯ್ಯಾಮೊಯ್ನನ್ ನುಡಿದ :
ಹೋಗುತಿಹೆ ಘೋರ ಕದನಕ್ಕೆ ನಾನು
ಸಮವೀರರೊಂದಿಗೆ ಕಾದಾಡಲು ನಾನು
ಕಣಕಾಲಿಗೂ ರಕ್ತ ಎರಚಾಡುವಲ್ಲಿ
ಮೊಣಕಾಲಿಗೂ ರಕ್ತ ಮೆತ್ತುವಲ್ಲಿ

ಕಿರುಚಿ ಹೇಳಿದಳು ಆ್ಯನಿಕಿ
ನನಗೆಲ್ಲ ಗೊತ್ತು ಕದನ ಮಾಡುವ ರೀತಿ
ನನ್ನಪ್ಪ ನನ್ನಜ್ಜ ಕಾದಿದ್ದರು ಸಮರೊಡನೆ
ಹುಟ್ಟುಹಾಕುವ ಮಂದಿ ನೂರಾರು ಜನರು
ನಿಂತ ಸೈನಿಕರು ಸಾವಿರಾರು

ತೂಗುತಿದ್ದವು ಬಿಲ್ಲು ಮುಂಭಾಗದಲ್ಲಿ
ಅಲಗು ಕತ್ತಿಗಳು ಆಸನದ ಅಡಿಯಲ್ಲಿ
ನಿಜ ಹೇಳು ವೆಯ್ನಾಮೊಯ್ನನ್ ಸತ್ಯ ಹೇಳು
ಹೇಳದಿರು ಸುಳ್ಳು ಸರಿಯಾಗಿ ಹೇಳು

ವೆಯ್ನಾಮೊಯ್ನನ್ ನುಡಿದ :
ಬಾ ಇಲ್ಲಿ ಓ ಹೆಣ್ಣೆ ಕೂರು ಬಳಿಯಲ್ಲಿ
ಬಾ ಇಲ್ಲಿ ಬಳಿಗೆ ಈ ದೋಣಿ ಒಳಗೆ
ಆಗ ಹೇಳುವೆ ಸತ್ಯ ಆಡದಿರೆ ಮಿಥ್ಯ

ಅಪಮಾನದಿಂದವಳು ಕೂಗಿ ಹೇಳಿದಳು
ಎತ್ತಿ ಹಾಕಲಿ ನಿನ್ನ ದೋಣಿಯನು ಗಾಳಿ
ಬೀಸಿ ಬಡಿಯಲಿ ನಿನ್ನ ಮೂಡಣದ ಗಾಳಿ
ಮುಳುಗಿ ಹೋಗಲಿ ದೋಣಿ ನೀರ ತಳ ಕಾಣಲಿ
ಹೇಳದಿದ್ದರೆ ನೀನು ನನಗೆ ನಿಜವನ್ನು

ವೆಯ್ನಾಮೊಯ್ನನ್ ನುಡಿದ :
ಹೇಳಿದೆನು ಸುಳ್ಳು ಮೊದಮೊದಲಿನಲ್ಲಿ
ಪೂರ್ಣ ನಿಜವನ್ನೀಗ ಹೇಳುವೆನು ಕೇಳು
ಹೊರಟಿರುವೆ ಹೆಣ್ಣನ್ನು ವರಿಸಲೆಂದು
ಪೊಹ್ಜಾದ ನಾಡಲ್ಲಿ ಮಂಕು ಸರಿಯೊಲಾದಲ್ಲಿ
ಮನುಜರನು ತಿನುವಂಥ ನಾಡಿನಲ್ಲಿ
ವೀರರನು ಮುಳುಗಿಸುವ ದೇಶದಲ್ಲಿ

ನಿಜವ ತಿಳಿದಳು ಬೆಳದಿಂಗಳ ಬಾಲೆ
ಒಗೆಯುತ್ತಿದ್ದ ಬಟ್ಟೆ ಎಸೆದು ಬಿಟ್ಟಳು ಅಲ್ಲೆ
ಜಾಲಿಸದೆ ಹಿಂಡದೆ ಬಿಟ್ಟು ಬಿಟ್ಟಳು ಅಲ್ಲೆ
ಸರಸರನೆ ಬಂದಳು ಹಿಡಿದೆತ್ತಿ ನಿರಿಯನ್ನು
ತಲುಪಿದಳು ಬಲುಬೇಗ ತಿದಿಸಾಲೆಯನ್ನು

ಅಲ್ಲಿದ್ದ ಅವನು ವಿಶ್ವಕರ್ಮ
ಕಬ್ಬಿಣದ ಪೀಠ ಎರಕ ಹೊಯ್ಯುತ್ತ
ಬೆಳ್ಳಿ ಕುಸುರಿಯ ಕೆಲಸ ಅದಕೆ ಮಾಡುತ್ತ
ಅಡಿಯಷ್ಟು ಕಪ್ಪು ಮಸಿ ತಲೆಯ ಮೇಲೆ
ಒಂದು ಯೋಜನ ಬೂದಿ ಹೆಗಲ ಮೇಲೆ

ಬಾಗಿಲಿಗೆ ಬಂದಳು ಹೀಗೆಂದು ನುಡಿದಳು
ಅಣ್ಣಯ್ಯ ಇಲ್ಮಾರಿನೆನ್ ಜಗದಾದಿ ಕಮ್ಮಾರ
ಮಾಡಿಕೊಡು ನನಗೆ ನೂಲುಸುತ್ತುವ ರಾಟೆ
ಬೆರಳಿಗುಂಗುರ ಕಿವಿಗೆ ಲೋಲಾಕು
ಮೂರ್ನಾಕು ಲೋಲಾಕು ಒಡ್ಯಾಣ ಐದಾರು
ಮಾಡಿಕೊಡು ಹೇಳುವೆನು ಬಹು ಮುಖ್ಯ ಮಾತು
ಎಲ್ಲ ನಿಜ ಹೇಳುವೆನು ಬಿಡದೊಂದು ಮಾತು

ಹೇಳಿದರೆ ನೀನು ಮುಖ್ಯ ಸುದ್ದಿಯ ಮಾತು
ಮಾಡಿಕೊಡುವೆನು ನಿನಗೆ ಕೇಳಿದ್ದು ತಂಗಿ
ಬೆರಳಿಗುಂಗುರ ನಾಲ್ಕು ಕಿವಿಗೆ ಲೋಲಾಕು
ಹೊಳೆವ ಚಂದದ ಪದಕ ನಿನ್ನ ಎದೆಗೆ
ಹೇಳಿದರೆ ನೀನು ಕೆಟ್ಟ ಸುದ್ದಿಯ ಮಾತು
ಮುರಿದು ಹಾಕುವೆನೆಲ್ಲ ಚೂರುಚೂರಾಗಿ
ಕಿತ್ತೆಸೆದು ಹಾಕುವೆ ಕುಲುಮೆ ಬೆಂಕಿಯಲಿ

ಆ್ಯನಿಕಿ ಹೇಳಿದಳು ಓ ಅಣ್ಣ ಕಮ್ಮಾರ
ನಿನಗಿನ್ನು ಇದೆಯೆ ಮದುವೆಯಾಗುವ ಬಯಕೆ
ಕೊಡುವೆವೆಂದು ನಿನಗೆ ಮಾತು ಕೊಟ್ಟವಳ
ಮಡದಿಯಾಗಿ ನಿನಗೆ ಕೊಡುವೆವೆಂದವಳ
ಸುತ್ತಿಗೆಯ ಬಡಿಯುತ್ತ ಯಾವಾಗಲೂ
ಮುಳುಗಿ ಬಿಟ್ಟಿರುವೆ ನೀನು ಕೆಲಸದಲ್ಲೆ
ಬೇಸಗೆಯ ದಿನದಲ್ಲಿ ಕುದುರೆ ಲಾಳದ ಕೆಲಸ
ಕುದುರೆ ಬೂಟಿನ ಕೆಲಸ ಚಳಿಗಾಲದಲ್ಲಿ
ಹಿಮಬಂಡಿ ಕೆಲಸ ರಾತ್ರಿಯಲ್ಲಿ
ಬಂಡಿ ಚೌಕಟ್ಟು ಹಗಲಿನಲ್ಲಿ

ಕೈಹಿಡಿಯಲವಳ ನೀ ಹೋಗುವ ಮುನ್ನ
ಮತ್ತೊಬ್ಬ ವಂಚಕ ಹೋಗಿರುವನು
ನಿನಗಾಗುವವಳು ಅವನ ಹೆಣ್ಣಾಗುವಳು
ಕಸಿಯುವನು ಅವನು ನೀ ಮೆಚ್ಚಿದವಳ
ವೆಯ್ನಾಮೊಯ್ನನ್ ಹೊರಟಿರುವ ದೋಣಿಯಲ್ಲಿ
ನೀಲಿ ನೀರಿನ ತೆರೆಯ ಕಡಲಿನಲ್ಲಿ

ಬಂಗಾರ ಲೇಪನದ ದೋಣಿಯಲ್ಲಿ
ತಾಮ್ರ ಹುಟ್ಟನು ಹಿಡಿದು ಕೈಗಳಲ್ಲಿ

ಚಿಂತೆ ಕವಿಯಿತು ದುಃಖ ತುಂಬಿತು
ಹಿಡಿದ ಇಕ್ಕುಳ ಬಿತ್ತು ಕೈಯಿಂದ ಜಾರಿ
ಕೈಯ ಸುತ್ತಿಗೆ ಬಿತ್ತು ನೆಲಕೆ ಜಾರಿ

ಅವನು ಹೇಳಿದನು : ನನ್ನ ಪ್ರೀತಿಯ ತಂಗಿ
ಮಾಡಿಕೊಡುವೆನು ನಿನಗೆ ಉಂಗುರ ಲೋಲಾಕು
ಹೋಗು ಮೀಯುವೆನು ಕಾಯಿಸಿಡು ನೀರು
ಕೋಣೆಯೊಳಗೆಲ್ಲ ಧೂಪ ಹಾಕು
ಸಣ್ಣ ಕಟ್ಟಿಗೆ ಸಿಬುರು ನೀರೊಲೆಗೆ ಹಾಕು
ಸಣ್ಣ ಚಕ್ಕೆಯ ಹಾಕಿ ಒಲೆ ಉರಿಯ ಮಾಡು
ಮೈಗೆ ಸಾಬೂನು ಸಿದ್ಧ ಮಾಡು
ಎಷ್ಟೋ ಕಾಲದ ಧೂಳು ಮಸಿ ಕಪ್ಪು ಕವಿದು
ಬೆಳ್ಳಗಾಗಲಿ ದೇಹ ಚೆನ್ನಾಗಿ ಮಿಂದು

ಕಾಯಿಸಿದಳು ಆ್ಯನಿಕಿ ಬಿಸಿಯಾಗಿ ನೀರು
ಗಾಳಿ ಮುರಿದಂಥ ಕಟ್ಟಿಗೆಯ ತಂದು
ನೀರನ್ನು ತಂದಳು ಪರಿಶುದ್ಧ ಕೊಳದಿಂದ
ಮಜ್ಜನದ ಸೊಪ್ಪು ಕಾಡಿನಿಂದ
ಮಜ್ಜನದ ಸೊಪ್ಪನ್ನು ಬೆಚ್ಚಗೆ ಬಿಸಿಮಾಡಿ
ಸಾಬೂನು ಚೆನ್ನಾಗಿ ಕಲೆಸಿ ನೊರೆ ಮಾಡಿ
ಮದುವಣಿಗ ತಲೆಸ್ನಾನ ಮಾಡಲೆಂದು
ಮನದಣಿಯೆ ಪೂರ್ತಿ ಮೀಯಲೆಂದು

ಇಲ್ಮಾರಿನೆನ್ ಅವನು ಆದಿ ಕಮ್ಮಾರ
ಮಾಡಿಟ್ಟ ತಂಗಿಗೆ ಬಯಸಿದಾಭರಣ
ಮಾಡಿಟ್ಟು ಒಪ್ಪಿಸಿದ ಅದನವಳ ಕೈಗೆ

ನುಡಿದಳಾ ತಂಗಿ ಮಾತನ್ನು ಹೀಗೆ
ಸಿದ್ಧ ಮಾಡಿಟ್ಟಿರುವೆ ನೀ ಮೀಯುವ ಕೋಣೆ
ಸುಗಂಧ ಧೂಪದ ಹೊಗೆ ತುಂಬಿಸಿರುವೆ
ಒಳ್ಳೊಳ್ಳೆ ಸ್ನಾನದೆಲೆ ನೆನೆಸಿ ಇಟ್ಟಿರುವೆ

ಸಾಬೂನು ನೊರೆ ಬರಿಸಿ ಕಲೆಸಿ ಇಟ್ಟಿರುವೆ
ಮನದಣಿಯೆ ನೀರು ಸುರಿದುಕೊಳ್ಳಣ್ಣಾ
ಹೊನ್ನಂತೆ ಹೊಳೆಯಲಿ ಕೂದಲಿನ ಬಣ್ಣಾ

ಮನದಣಿಯೆ ಮಿಂದನು ಕಮ್ಮಾರ ಇಲ್ಮಾರಿನೆನ್
ಹೊಳೆವಂತೆ ಕಣ್ಣು ಮಿರಿಮಿಂಚುವಂತೆ ಕೆನ್ನೆ
ಬೆಳ್ಳಗಾಯಿತು ಕತ್ತು ತತ್ತಿಯಂತೆ
ಫಳಫಳನೆ ಹೊಳೆಯಿತು ಮಿಂದ ದೇಹ

ಗುರುತೆ ಸಿಗದಷ್ಟು ಬದಲಾಗಿದ್ದನವನು
ಚಿಮ್ಮುತಿದ್ದಿತು ಚೆಲುವು ಅವನ ಮೊಗದಿಂದ
ಸ್ವಚ್ಛ ಗುಲಾಬಿಯ ಬಣ್ಣ ಕೆನ್ನೆಯಿಂದ
ತಂಗಿಯನು ಕರೆದು ಹೇಳಿದನು ಹೀಗೆ
ಸಿಂಗರಿಸು ನನ್ನ ಮದುವಣಿಗನಂತೆ

ಆ್ಯನಿಕಿ ತಂದಳು ರೇಷಿಮೆಯ ಅಂಗಿ
ತಂದುಕೊಟ್ಟಳು ಕಾಲ್ಚೀಲ ಹೊಲೆದಿದ್ದಳು ತಾಯಿ
ಅವಳ ಮದುವೆಗೆ ಮೊದಲು.
ತೊಡಿಸಿದಳು ಕೆಂಪಂಚು ನೀಲಿ ಕೋಟು
ಅದರ ಮೇಲೊಂದು ಉಣ್ಣೆ ಕೋಟು
ಅದರ ಮೇಲೊಂದು ತುಪ್ಪಳದ ಕೋಟು
ನೂರಾರು ಗುಂಡಿ ಹೊಸ ರೀತಿ ವಿನ್ಯಾಸ

ಸೊಂಟಕ್ಕೆ ಕಟ್ಟಿದಳು ಹೊನ್ನ ಕಸೂತಿಯ ಪಟ್ಟಿ
ಹೆಣೆದಿದ್ದಳು ತಾಯಿ ಅವಳ ಮದುವೆಗೆ ಮೊದಲು
ತಂದು ತೊಡಿಸಿದಳು ಹೊಳೆವ ಕೈಗವಸು
ಟೊಪ್ಪಿ ಇಟ್ಟಳು ಎತ್ತರದ ತುರಾಯಿ
ಹೊಳೆವ ಹೊಂಗೂದಲಿನ ತಲೆಯ ಮೇಲೆ
ಕೊಂಡಿದ್ದ ಅದನು ಅವನ ತಂದೆ
ತನ್ನ ಮದುವೆಯಲಿ ಶಿರದ ಸಿಂಗಾರಕ್ಕೆ

ಸಿಂಗಾರವಾದನು ಚೆಲುವಾಗಿ ಕಂಡನು
ಆಳುಗಳ ಕರೆದನು ಕರೆದು ಹೇಳಿದನು
ಕಟ್ಟು ವೇಗದ ತುರಗ ಸಿಂಗರಿಸಿದ ಬಂಡಿಗೆ

ಹೊರಡಬೇಕಿದೆ ಪಯಣ ಪೊಹ್ಜಾದ ನಾಡಿಗೆ
ಸೇವಕನು ಹೇಳಿದನು
ಕುದುರೆ ಇವೆ ಆರು ಲಾಯದೊಳಗೆ
ಇನ್ನಾರು ಮೇಯುತಿವೆ ಗೋಧಿ ಹೊಲದೊಳಗೆ
ಯಾವುದನು ಕಟ್ಟಲಿ ಈ ನಿಮ್ಮ ಬಂಡಿಗೆ

ಇಲ್ಮಾರಿನೆನ್ ನುಡಿದ
ಉತ್ತಮದ ಕುದುರೆ ಆಯ್ದು ಕಟ್ಟು
ಕಂದು ಬಣ್ಣದ ತೇಜಿ ಮುಂದೆ ಕಟ್ಟು
ತಡಿಹಾಕಿಕಟ್ಟು ಮರಿಗುದುರೆ ಮೇಲೆ
ಆರು ಕೋಕಿಲವಿರಲಿ ನೀಲಿಯವು ಏಳಿರಲಿ
ಉಲ್ಲಾಸದಿ ಹಾಡಲಿ ಬಂಡಿ ಮೇಲ್ತೋರಣದಲಿ
ಚೆಲುವೆಯರು ನೋಡಿ ಸಂತೋಷ ಪಡಲಿ

ಆಸನಕೆ ಹಾಕು ಕರಡಿ ಚರ್ಮದ ಹಾಸು
ಬಂಡಿ ಹೊದಿಕೆಗೆ ಇರಲಿ ಕಡಲ ಕುದುರೆ ತೊಗಲು

ಆಗ ಇಲ್ಮಾರಿನೆನ್ ಜಗದಾದಿ ಕಮ್ಮಾರ
ಪ್ರಾರ್ಥನೆಯ ಸಲಿಸಿದನು ಉಕೊ ದೇವನಿಗೆ
ಹರಡು ಹಿಮವನ್ನು ಬೇಡಿಕೊಳುವೆ
ನಯವಾಗಿ ಬೀಳಲಿ ಹಿಮದ ಹರಳು
ಬಂಡಿ ಉರುಳಲಿ ಮುಂದೆ ಸರಾಗವಾಗಿ
ಕುದುರೆಯೋಡಲಿ ಮುಂದೆ ವೇಗವಾಗಿ

ಉಕ್ಕೊ ಹರಡಿದನು ಎಲ್ಲೆಲ್ಲೂ ಹಿಮವನ್ನು
ಉದುರಿದವು ಮೃದುವಾದ ಹಿಮದ ಹಳಕು
ಕುರುಚಲಿನ ಗಿಡದ ಮೇಲೆಲ್ಲ ಹಿಮವು
ಚೆರಿ ಪೊದೆಗಳ ಮೇಲೆಲ್ಲ ಹಿಮವು

ಲಗಾಮು ಹಿಡಿದಿರುವೆ ಕೃಪೆ ಇರಲಿ ದೇವ
ಕಾಪಾಡು ಬಂಡಿಯನು ಮುರಿಯದಂತೆ

ಒಂದು ಕೈಯಲಿ ಲಗಾಮು ಇನ್ನೊಂದರಲಿ ಚಾಬುಕು
ಬೀಸಿದನು ಓಡುತಿಹ ತೇಜಿಗಳ ಮೇಲೆ
ಬೀಳಹುದ್ದನವನೆ ಓಡು ಮುಂದಕೆ ಬೇಗ

ನುಣುಪು ಕೇಸರದವನೆ ಹೆಜ್ಜೆ ಹಾಕು
ಉಸುಕು ದಂಡೆಯಲಿ ಮುಂದೆ ಓಡಿತು ಬಂಡಿ
ಆ್ಯಲ್ಡರ್ ಮರ ಬೆಳೆದ ಗುಡ್ಡಗಳ ದಾಟಿ
ಕಡಲ ತೀರದಿ ಬಂಡಿ ರಟರಟನೆ ಓಡಿತು
ದಂಡೆ ಮರಳಿನ ಮೇಲೆ ಪಟಪಟನೆ ಓಡಿತು
ಎರಚಿದವು ಮರಳು ಕಣ್ಣವರೆಗೆ
ಎರಚಿದವು ನೀರು ಎದೆಯವರೆಗೆ

ಓಡಿಸಿದ ಬಂಡಿ ಒಂದು ದಿನ ಎರಡು ದಿನ
ಹೀಗೆಯೇ ಓಡಿಸಿದ ಮೂರನೆಯ ದಿನವೂ
ಮುಗಿಯುವುದರೊಳಗೆ ಮೂರನೆಯ ದಿನ ಅವನು
ಬಂದಿದ್ದ ದಾಟಿ ಹಿರಿಯ ವೆಯ್ನಾಮೊಯ್ನನನ್ನು

ಹೀಗೆ ಹೇಳಿದ ಅವನು ವೆಯ್ನಾಮೊಯ್ನನ್‌ಗೆ
ಓ ಹಿರಿಯ ವೆಯ್ನಾಮೊಯ್ನನ್
ಇರಲಿ ನಮ್ಮೊಳಗೆ ಸ್ನೇಹದೊಪ್ಪಂದ
ಹೊರಟಿರುವೆವಿಬ್ಬರೂ ಒಬ್ಬಳನೆ ಬಯಸಿ
ಮಾಡುವುದು ಬೇಡ ಅವಳಿಗೊತ್ತಾಯ
ನಡೆಯುವುದು ಬೇಡ ಅವಳಿಚ್ಛೆ ಮೀರಿ

ವೆಯ್ನಾಮೊಯ್ನನ್ ಹಿರಿಯ ಹೀಗೆಂದು ನುಡಿದ
ಒಪ್ಪಿರುವೆ ನಾನು ಸ್ನೇಹದೊಪ್ಪಂದ
ಅವಳಾರ ಬಯಸುವಳೊ ಅವನಿಗೇ ಇರಲಿ
ಇದಕಾಗಿ ನಮ್ಮಲ್ಲಿ ಬೇಡ ಮನಸ್ತಾಪ
ಬೆಳಸುವುದು ಬೇಡ ಬಹುಕಾಲ ವೈರ

ತಮ್ಮ ಹಾದಿಯ ಹಿಡಿದು ನಡೆದರಿಬ್ಬರು ಮುಂದೆ
ಮರುದನಿಸಿತು ಕಡಲು ದೋಣಿ ವೇಗಕ್ಕೆ
ಮರುದನಿಸಿತು ದಂಡೆ ಕುದುರೆಯೋಟಕ್ಕೆ

ಕಳೆದಿರಲಿಲ್ಲ ಹೆಚ್ಚೇನೂ ಸಮಯ
ಕಳೆದಿತ್ತು ಸ್ವಲ್ಪವೇ ಸ್ವಲ್ಪ ಸಮಯ
ಅಷ್ಟರಲ್ಲೇ ಕೇಳಿಸಿತು ನಾಯಿಗಳ ಬೊಗಳು
ಕವಿದ ಕಾವಳದ ಪೊಹ್ಜಾದ ನಾಡಿಂದ

ಸದಾ ಮಂಕಾದ ಸರಿಯೋಲದಿಂದ
ಗುರುಗುಟ್ಟಿ ಗುರ್ರೆಂದು ಬೊಗಳಿದವು ನಾಯಿ
ಪೊಹ್ಜಾದ ಯಜಮಾನ ಹೇಳಿದನು ಹೀಗೆ
ಹೋಗು ಮಗಳೇ ನೋಡು ಹೊರಗೆ ಹೋಗಿ
ಬೂದಿ ಬಣ್ಣದವನು ಬೊಗಳಿದ್ದು ಏಕೆ
ಉದ್ದ ಕಿವಿಯವನು ಊಳಿಡುವುದೇಕೆ

ಉತ್ತರಿಸಿದಳು ಮಗಳು :
ಬಿಡುವಿಲ್ಲ ನನಗೆ ಹೋಗಿ ನೋಡಲು ಹೊರಗೆ
ಗುಡಿಸಬೇಕಲ್ಲ ಈ ದೊಡ್ಡ ಕೊಟ್ಟಿಗೆ
ಹಾಕಬೇಕಿದೆ ಮೇವು ಈ ದೊಡ್ಡ ಮಂದೆಗೆ
ಧಾನ್ಯ ಬೀಸುವ ಕೆಲಸ ಜರಡಿ ಹಿಡಿಯುವ ಕೆಲಸ
ನುಣ್ಣಗಿರಬೇಕು ಹಿಟ್ಟು, ನಿಧಾನವಾದರೂ ಕಲ್ಲು

ಮತ್ತೆ ಬೊಗಳಿತು ನಾಯಿ
ಮನೆಯೊಡೆಯ ಹೇಳಿದನು
ಲೇ ಇವಳೆ ನೋಡು ಹೊರಗೆ ಹೋಗಿ
ಬಂದವರು ಯಾರೆಂದು ನೋಡಿ ಬಾ ಹೋಗು
ಸತಿಯು ಹೇಳಿದಳು :
ನನಗಿಲ್ಲ ಪುರುಸೊತ್ತು ಕೈತುಂಬ ಕೆಲಸ
ನಾದುತ್ತಿರುವೆನು ಹಿಟ್ಟು
ಮಾಡಬೇಕಲ್ಲ ಬ್ರೆಡ್ಡು
ಬೇಯಿಸುವ ಪಾತ್ರೆಯೂ ಸರಿ ಇಲ್ಲ ಬೇರೆ

ಮನೆಯೊಡೆಯ ಹೇಳಿದನು :
ಹೀಗೆಯೇ ಹೆಂಗಸರು
ಸದಾ ಗಡಿಬಿಡಿ, ಕೆಲಸ ಏನಾದರೂ
ಬೇಯಿಸುವಾಗಲೂ ಅದೇ
ಮಲಗಿದಾಗಲೂ ಅದೇ

ಮಗನೇ ಹೋಗಯ್ಯ ನೀನೆ ಹೋಗು
ನೋಡಿ ಬಾ ಹೋಗಯ್ಯ ಬಂದವರು ಯಾರು
ಮಗನು ಹೇಳಿದನು
ಇಲ್ಲ ಪುರುಸೊತ್ತು ನನಗೆ ಒಂದಿಷ್ಟೂ.

ಕೊಡಲಿ ಮೊಂಡು ಹಿಡಿಯಬೇಕಿದೆ ಸಾಣೆ
ಸೀಳಿ ಸಣ್ಣಗೆ ಸೌದೆ ಹೊರೆಗಟ್ಟಬೇಕು
ಆಳು ಸರಿಯಿಲ್ಲ ಕೆಲಸ ಬಹಳ

ಬೊಗಳುತ್ತಲೆ ಇತ್ತು ಮನೆಯ ನಾಯಿ
ಗುರುಗುಟ್ಟುತಿತ್ತು ಅಂಗಳದ ನಾಯಿ
ಬೀಳುವಂತೆ ಮೇಲೆ ಬೊಬ್ಬಿಟ್ಟಿತು ಕುನ್ನಿ
ಹೊಲದಂಚಿನಲಿ ಬಿರುಸಾಗಿ ಬಾಲವನ್ನಾಡಿಸಿ
ಹುಯ್ಯಲಿಡುತ್ತಿತ್ತು ಕಾವಲಿನ ನಾಯಿ

ಮನೆಯೊಡೆಯ ಹೇಳಿದನು
ಏನು ಇಲ್ಲದೇ ಬೊಗಳುತ್ತವೇನು
ಮರಗಿಡವ ನೋಡಿ ಬೊಗಳುತ್ತವೇನು
ಅಂಗಳಕೆ ಇಳಿದ ಹೊಲದಂಚಿಗೆ ಹೋದ
ದೃಷ್ಟಿಸಿ ನೋಡಿದ
ನಾಯಿಗಳು ಮೂತಿ ಮೇಲೆತ್ತಿದ ಕಡೆಗೆ
ಆ್ಯಲ್ಡರ್ ಮರ ಬೆಳೆದ ಗುಡ್ಡಗಳ ಕಡೆಗೆ
ಗೊತ್ತಾಯಿತು ಕಾರಣ ಅಂತೂ ಕೊನೆಗೆ

ತೇಲಿಬರುತಿತ್ತು ದೋಣಿ ಲೆಂಪಿ ಹೊಳೆಯಲ್ಲಿ
ಹಿಮ ಬಂಡಿ ಬರುತಿತ್ತು ಸೀಮಾ ದಂಡೆಯಲ್ಲಿ

ಮನೆಗೆ ಬಂದನು ಹೆಂಡತಿಗೆ ಹೇಳಿದನು
ಬರುತಿರುವರು ಯಾರೋ ದೋಣಿಯಲ್ಲಿ
ಮತ್ತೊಬ್ಬನಾರೊ ಹಿಮಬಂಡಿಯಲ್ಲಿ

ಮನೆಯೊಡತಿ ಹೇಳಿದಳು
ಯಾರು ಬರುತಿರುವರೊ ಯಾಕೆ ಬರುತಿರುವರೊ
ಇದಾವ ಶಕುನವೊ ತಿಳಿಯುವುದು ಹೇಗೆ
ಮಗಳೇ ಸೀಳು ಸೌದೆಯನು ಒಲೆಯಲ್ಲಿ ಹಾಕು
ರಕ್ತ ಸುರಿದರೆ
ಅವರು ಕದನಕ್ಕೆ ಬಂದವರು
ತಿಳಿ ಜಲವಾದರೆ
ಭಂಗವಿಲ್ಲ ನೆಮ್ಮದಿಗೆ

ರಕ್ತವೂ ಬರಲಿಲ್ಲ ತಿಳಿನೀರೂ ಇಲ್ಲ
ಜಿನುಗಿತು ಜೇನು ಸಿಹಿಯಾದ ಜೇನು
ತೊಟ್ಟು ತೊಟ್ಟಾಗಿ ಒಲೆ ಸೌದೆಯಿಂದ

ಕಂಬಳಿಯ ಮುಸುಕೊಳಗೆ ಮುದುಕಿ ಹೇಳಿದಳು
ಜೇನು ಸುರಿದರೆ ಅರ್ಥ
ಬರುತಿರುವ ಜನರು ಉತ್ತಮ ಕುಲದವರು
ಹೆಣ್ಣು ಕೇಳಲು ಇಲ್ಲಿ ಬರುತಿರುವರವರು

ಪೊಹ್ಜಾದ ಯಜಮಾನಿ, ಯಜಮಾನಿ ಮಗಳು
ಓಡಿದರು ಅಂಗಳಕೆ
ಬೇಲಿ ಪಕ್ಕದಿ ನಿಂತು ಹಾಯಿಸಿದರು ದೃಷ್ಟಿ
ಹೊಸ ರೀತಿಯ ದೋಣಿ ಲೆಂಪಿ ಹೊಳೆಯಲ್ಲಿ
ತಾಮ್ರ ಚುಕ್ಕಾಣಿ ಹಿಡಿದೊಬ್ಬನಿದ್ದ
ಮತ್ತೊಬ್ಬನಿದ್ದ ಕುದುರೆಗಾಡಿಯಲ್ಲಿ
ಕೆಂಪುಬಣ್ಣದ ಬಂಡಿ ಕೋಕಿಲಗಳಾರು
ಸಂತಸದಿ ಹಾಡುವ ನೀಲಿ ಹಕ್ಕಿಗಳೇಳು

ಯಜಮಾನಿ ಹೇಳಿದಳು
ಯಾರನ್ನು ವರಿಸುವೆಯೋ ಹೇಳು ಮಗಳೆ
ದೋಣಿಯೊಳಗಿರುವನು ವೆಯ್ನಾಮೊಯ್ನನ್
ನಿಜಕೂ ದೊಡ್ಡವನು ಸಿರಿವಂತನು
ಐಶ್ವರ್ಯ ಭಂಡಾರ ತುಂಬಿ ತುಳುಕಿದೆ ದೋಣಿ
ಕುದುರೆ ಬಂಡಿಯಲ್ಲಿರುವವನು ಇಲ್ಮಾರಿನೆನ್
ಬರುತಿಹನವನು ಬರಿಗೈಗಳಲ್ಲಿ
ಗಾಡಿಯೊಳಗೆ ಬರಿ ಮಂತ್ರ ಮಾಯೆಯ ಮೋಡಿ

ಬಂದಾಗಲವರು ನಮ್ಮ ಮನೆಯೊಳಗೆ
ಹುಳಿ ಜೇನ ಮಧುಪಾತ್ರೆ ಕೊಡು ಅವನ ಕೈಗೆ
ನಿಜವಾಗಿ ನೀನು ಬಯಸಿದವಗೆ
ಅವನನ್ನೆ ವರಿಸು ವೆಯ್ನಾಮೊಯ್ನನನ್ನು
ಸಕಲೈಶ್ವರ್ಯ ತುಂಬಿದ ದೋಣಿಯವನನ್ನು

ಪೊಹ್ಜಾದ ಚೆಲುವೆ ಹೇಳಿದಳು ಹೀಗೆ
ಓ ನನ್ನ ತಾಯೇ

ಐಶ್ವರ್ಯ ಸಂಪತ್ತು ಲೆಕ್ಕವಿಲ್ಲೆನಗೆ
ಬರಿಬುದ್ಧಿ ಹಿರಿಯತನ ಬೇಕಿಲ್ಲ ನನಗೆ
ವರಿಸುವೆನು ಅವನ ಅಗಲ ಹಣೆಯವನ
ಕೈಕಾಲುಗಳಲೆಲ್ಲ ಚೆಲುವು ತುಂಬಿದವನ
ವರಿಸುವೆನು ಕಮ್ಮಾರ ಶಿಲ್ಪಿಯನ್ನು
ಮಾಯಾ ಮಂತ್ರದ ಗಿರಣಿ ಮಾಡಿಕೊಟ್ಟವನನ್ನು

ಓ ನನ್ನ ಮಗಳೇ ನನ್ನ ಮುದ್ದಿನ ಕೂಸೇ
ಕೈ ಹಿಡಿದರೆ ನೀನು ಬೆವರು ಮುಖದವನ
ಅವನ ಕೊಳೆ ಬಟ್ಟೆ ಒಗೆಯುವುದೇ ಕರ್ಮ
ಕೊಳೆತಲೆಯ ತಿಕ್ಕಿ ಮೀಯಿಸುವ ಕೆಲಸ

ಮಗಳು ಹೇಳಿದಳು ಇಲ್ಲ ನಾ ಕೈ ಹಿಡಿಯೆ
ವೆಯ್ನೊಲಾದವನ ವಯಸ್ಸು ದಾಟಿದ ಮುದಿಯನವನ

ಮೊದಲು ತಲುಪಿದನು ವೆಯ್ನಾಮೊಯ್ನನ್
ಬಾಗಿಲಲಿ ನಿಂತು ಕೇಳಿದನು ಹೀಗೆ
ಬರುವೆಯಾ ಹೆಣ್ಣೆ ಸಂಗಾತಿಯಾಗಿ
ಮಡದಿಯಾಗಿ ತೋಳ ಪಾರಿವಾಳವಾಗಿ

ಚೆಲುವೆ ಕೇಳಿದಳು
ದೋಣಿ ಕಟ್ಟುವೆ ಏನು ನಾ ಹೇಳಿದಂತೆ
ರಾಟೆ ಚೂರಿಂದ ಮಗ್ಗ ಸಿಬುರಿಂದ

ವೆಯ್ನಾಮೊಯ್ನನ್ ನುಡಿದ
ಕಟ್ಟಿರುವೆ ಅದಕಿಂತ ಉತ್ತಮದ ದೋಣಿ
ಬಿರುಗಾಳಿ ಎದುರಿಸುವ ಬಲವಾದ ದೋಣಿ
ಗಾಳಿಗಳ ಧಿಕ್ಕರಿಸಿ ಮುನ್ನಡೆವ ದೋಣಿ
ಮುಂದೆ ನುಗ್ಗುವುದು ಅಲೆಗಳನು ಸೀಳಿ
ನೆರೆಯಲ್ಲಿ ಸಿಕ್ಕರೂ ಚೆಂಡಂತೆ ತೇಲಿ
ಪ್ರೊಹ್ವಾದ ನೀರಲ್ಲಿ ಎಲೆಯಂತೆ ತೇಲಿ

ಚೆಲುವೆ ಹೇಳಿದಳು :
ನಾವಿಕರ ಬಡಾಯಿ ಒಂದಿಷ್ಟು ನಂಬೆ

ಗಾಳಿ ಸರಿ ಇದೆಯೆಂದು ನೀರಿಗಿಳಿಯುವರು
ಬುಡಮೇಲು ಮಾಡುವುದು ಮೂಡಣದ ಗಾಳಿ

ಬರಲಾರೆ ನಾ ನಿನ್ನ ಸಂಗಾತಿಯಾಗಿ
ನಿನ್ನ ತೋಳ್ತೆಕ್ಕೆ ಹಕ್ಕಿಯಾಗಿ
ನೀನು ಮಲಗುವುದಕ್ಕೆ ಹಾಸಿಗೆಯ ಹಾಸಲು
ನಿನ್ನ ತಲೆಕೆಳಗೆ ದಿಂಬುಗಳನಿಡಲು.

೧೧. ಇಲ್ಮಾರಿನೆನ್ ಸಾಹಸಗಳು ಮತ್ತು ವಿವಾಹ ನಿಶ್ಚಯ

ಪೊಹ್ಜೊಲಾ ಮನೆಗೆ ಇಲ್ಮಾರಿನೆನ್ ಬಂದನು. ಮಗಳನ್ನು ಕೊಡುವಂತೆ ಒಡತಿಯನ್ನು ಕೇಳಿದನು. ಆಗ ಅವಳು ಅವನಿಗೆ ಅನೇಕ ಕಠಿಣ ಪರೀಕ್ಷೆಗಳನ್ನು ವಿಧಿಸಿದಳು. ಪೊಹ್ಜಾ ಚೆಲುವೆಯ ನೆರವಿನಿಂದ ಅವನು ಕಠಿಣ ಪರೀಕ್ಷೆಗಳಲ್ಲಿ ಯಶಸ್ವಿಯಾದ. ಮೊದಲು ಅವನು ಸರ್ಪಗಳ ಹೊಲವನ್ನು ಉಳುಮೆ ಮಾಡಬೇಕಾಯಿತು. ಎರಡನೆಯದಾಗಿ ಟುವೋನಿಯಿಂದ ಕರಡಿಯನ್ನು, ಮನಾಲಾದಿಂದ ತೋಳವನ್ನು ಹಿಡಿದು ತರಬೇಕಾಯಿತು. ಮೂರನೆಯದಾಗಿ ಟುವೊನೆಲಾದಿಂದ ಭಾರೀ ಗಾತ್ರದ ಪೈಕ್ ಮೀನನ್ನು ಹಿಡಿದು ತರಬೇಕಾಯಿತು. ಈ ಸಾಹಸಗಳಲ್ಲಿ ಯಶಸ್ವಿಯಾದ ನಂತರ ಪೊಹ್ಜೊಲಾ ಒಡತಿ ತನ್ನ ಮಗಳನ್ನೇ ಇಲ್ಮಾರಿನೆನ್‌ಗೆ ನಿಶ್ಚಯ ಮಾಡಿದಳು.

ಹಿಡಿದು ತಂದ ದೈತ್ಯ ಪೈಕ್ ಮೀನಿನ ತಲೆಯನ್ನು ಪೊಹ್ಜೊಲಾ ಒಡತಿ ಮುಂದಿಡುತ್ತಾ ಇಲ್ಮಾರಿನೆನ್ ನುಡಿದ :

ತೆಗೆದುಕೋ ತಂದಿರುವೆ ಉಡುಗೊರೆಯ ನಿನಗೆ
ಆಸೀನಳಾಗು ಇದರ ತಲೆ ಮೇಲೆ
ಸರ್ಪಗಳ ಹೊಲವನ್ನು ಉತ್ತು ಬಂದೆ
ಮನಾದ ತೋಳಕ್ಕೆ ಕಡಿವಾಣ ಹಾಕಿದೆ
ಟುವೊನಿ ಕರಡಿಗೆ ಸಂಕೋಲೆ ತೊಡಿಸಿದೆ
ಟುವೋನಿ ನದಿಯಿಂದ ಈ ಮೀನು ತಂದೆ
ಈಗಾದರೂ ಕೊಡುವಿಯೋ ನಿನ್ನ ಮಗಳ
ನನ್ನ ವಶಕೊಪ್ಪಿಸುವೆಯಾ ಚೆಲುವೆ ಅವಳ

ಪೊಹ್ಜಾದ ಒಡತಿ ಹೇಳಿದಳು ಹೀಗೆ
ಎಂಥ ಅನರ್ಥ ಮಾಡಿರುವೆಯಲ್ಲ
ಮೀನುತಲೆ ಸೀಳಿರುವೆ ಹೊಟ್ಟೆ ಬಗೆದಿರುವೆ
ಬೆನ್ನೆಲುಬು ಮುರಿದಿರುವೆ

ಇಲ್ಮಾರಿನೆನ್ ನುಡಿದ :
ಹಾನಿ ಮಾಡದೆ ತರಲು ಸಾಧ್ಯವೆ ಇಲ್ಲ
ಸ್ಥಳ ಎಷ್ಟೆ ಅನುಕೂಲವಿರಲಿ
ತಂದಿರುವೆನಿದನು ಮನಾಲಾ ಪ್ರಪಾತದಿಂದ
ಟುವೋನಿ ನದಿಯಿಂದ
ಇನ್ನೂ ಸಿದ್ಧವಿಲ್ಲವೆ ಹೆಣ್ಣು

ಯಾರಿಗಾಗಿ ಬಯಸಿದೆನೊ
ಯಾರಿಗಾಗಿ ಶ್ರಮಿಸಿದೆನೊ
ಆ ಚೆಲುವೆ ಹೆಣ್ಣು

ಪೊಹ್ಜಾದ ಮನೆ ಒಡತಿ ಹೇಳಿದಳು ಹೀಗೆ :
ಸಿದ್ಧವಾಗಿರುವಳು ಚೆಲುವೆ
ನೀ ಬಯಸಿದವಳು
ಕೊಡುತ್ತೇನೆ ನಿನಗೆ ನನ್ನ ಮುದ್ದಿನ ಹಕ್ಕಿ
ಸಿಂಗಾರ ಮಾಡುವೆನು ನಾನು ಬೆಳೆಸಿದ ಹಕ್ಕಿ
ಕಮ್ಮಾರ ಶಿಲ್ಪಿ ಇಲ್ಮಾರಿನೆನ್‌ಗಾಗಿ
ಅವನ ತೊಡೆ ಮೇಲಿರಲು ಮಡದಿಯಾಗಿ
ತೋಳತೆಕ್ಕೆಯಲಿರಲು ಹಕ್ಕಿಯಾಗಿ

ಮಗುವೊಂದು ಮಲಗಿತ್ತು ನೆಲದ ಮೇಲೆ
ಹಾಡೊಂದ ಹಾಡಿತ್ತು ಅಲ್ಲಿಂದಲೆ
ಹಾರಿ ಬಂದಿತು ಹಕ್ಕಿ ನಮ್ಮ ಮನೆ ಕೋಣೆಗೆ
ಈಶಾನ್ಯ ದಿಕ್ಕಿಂದ ಹದ್ದು ಹಾರಿಬಂತು
ಆಕಾಶದಿಂದ ಹಾರಿ ಗಿಡುಗ ಬಂದಿತು ಮನೆಗೆ
ಅದರೊಂದು ರೆಕ್ಕೆ ಬಾನಿನಲ್ಲಿ
ಇನ್ನೊಂದು ರೆಕ್ಕೆ ಕಡಲಿನಲ್ಲಿತ್ತು
ಸಾಗರವ ಗುಡಿಸಿತ್ತು ಹಕ್ಕಿತೋಕೆ
ಆಗಸ ಮುಟ್ಟಿತ್ತು ಶಿರವೆತ್ತಿ ಮೇಲೆ

ಹಿಂದಕ್ಕೂ ಮುಂದಕ್ಕೂ ಹದ್ದು ಹಾರಾಡಿತು
ಕುಳಿತುಕೊಂಡಿತು ಬಂದು ಅವಳ ಮನೆ ಮೇಲೆ
ಸೂರನ್ನು ಕುಕ್ಕಿ ಕೊಕ್ಕಿನಿಂದ
ಆ ಮನೆಯ ಸೂರು ಕಬ್ಬಿಣದ ಸೂರು
ತೂತಾಗಲಿಲ್ಲವದು ಕಬ್ಬಿಣದ ಸೂರು

ಹಿಂದಕ್ಕೂ ಮುಂದಕ್ಕೂ ಸುತ್ತಿರುಗಿ ನೋಡಿತು
ಕುಳಿತುಕೊಂಡಿತು ಬಂದು ಅವಳ ಮನೆ ಮೇಲೆ
ಸೂರನ್ನು ಕುಕ್ಕಿ ಕೊಕ್ಕಿನಿಂದ
ಆ ಮನೆಯ ಸೂರು ತೆಳು ಬಟ್ಟೆಯ ಸೂರು
ತೂತಾಯಿತು ಸೂರು ಹಕ್ಕಿ ಒಳ ಬಂದು

ಚಿಮಣಿ ಮೇಲಕೆ ಹಾರಿ ಅಲ್ಲಿಂದ ನೆಲಕಿಳಿದು
ಮನೆಯ ಬಾಗಿಲ ತಳ್ಳಿ ಹಸಿರು ರೆಕ್ಕೆಯ ಹರಡಿ
ಕುಳಿತುಕೊಂಡಿತು ಮನೆಯ ಕಿಟಕಿಯಲ್ಲಿ
ಹರಡಿದ್ದ ಕೂದಲಿನ ಚೆಲುವೆಯರ ನೋಡಿತು
ಮಾರುದ್ದ ಕೂದಲಿನ ಹುಡುಗಿಯರ ಕಂಡಿತು

ಎಲ್ಲ ಹುಡುಗಿಯರಿಗೂ ಮಿಗಿಲಾದ ಹುಡುಗಿ
ಹರಡಿದ್ದ ಕೂದಲಿನ ಚೆಲುವಾದ ಬೆಡಗಿ
ತಲೆಯಲ್ಲಿ ಹೊಳೆವಂಥ ಮಣಿ ಇದ್ದ ಹುಡುಗಿ
ಅರಳಿದ್ದ ಹೂವುಗಳ ಮುಡಿದಿದ್ದ ಹುಡುಗಿ

ಉಗುರಲ್ಲಿ ಹದ್ದು ಹಿಡಿದೆತ್ತಿ ಅವಳ
ಚೂಪುನಖಗಳಲಿ ಬಿಗಿಯಾಗಿ ಅವಳ
ಗುಂಪಿನೊಳಗೆಲ್ಲ ಚೆಲುವೆ ಅವಳ
ಇನಿದನಿಯ ಬಲು ಕೋಮಲ ಚೆಲುವೆ ಅವಳ
ಗುಲಾಬಿಯಂಥವಳ ಅತಿ ಬಿಳಿಯ ಹೆಣ್ಣು
ಎಲ್ಲರಿಗೂ ಮೀರಿದ ಸೊಗಸು ಮೈ ಹೆಣ್ಣ
ಎತ್ತಿ ಹಿಡಿಯಿತು ಹದ್ದು ಉಗುರಿನಲ್ಲಿ

ಪೊಹ್ವಾದ ಒಡತಿ ಕೇಳಿದಳು ಹೀಗೆ :
ಹೇಗೆ ಗೊತ್ತಾಯಿತು ನಿನಗೆ ಓ ನನ್ನ ಕೂಸೇ
ಈ ಹೆಣ್ಣು ನಮ್ಮಲ್ಲಿ ಬೆಳೆದಿರುವ ವಿಷಯ
ಹರಡಿರುವ ಕೇಶದ ಈ ಸೊಬಗಿ ವಿಷಯ
ಕಂಡೆಯೋ ಇವಳ ರವಿಯ ಬೆಳಕಲ್ಲಿ
ಕಂಡಿದ್ದೆಯೇನು ಚಂದ್ರ ಬೆಳಕಲ್ಲಿ

ಮಗುವು ಹೇಳಿತು ನೆಲದ ಮೇಲಿಂದ :
ನಿನ್ನ ಚೆಲುವೆಯ ಸುದ್ದಿ ತಿಳಿದಿದ್ದು ಹೀಗೆ
ಮನೆಯೊಳಗೆ ಅವಳಿರವು ತಿಳಿದಿದ್ದು ಹೀಗೆ
ತಂದೆ ಇಳಿಸಿದ್ದ ಬಲುದೊಡ್ಡ ನಾವೆ
ಬೇಯಿಸಿದ್ದಳು ತಾಯಿ ಬಲುದೊಡ್ಡ ಬ್ರೆಡ್ಡು
ಬಲುದೊಡ್ಡ ರೊಟ್ಟಿ ಬೇಯಿಸಿದ್ದಳು ಅವಳು
ಬರಲಿರುವ ಅತಿಥಿಗಳ ಸಮೃದ್ಧ ಭೋಜನಕೆ
ಚೆಲುವೆ ಬೆಳೆಯುವ ಸುದ್ದಿ ತಿಳಿದಿದ್ದು ಹೀಗೆ

ದೂರದೂರಕೆ ಸುದ್ದಿ ಹರಡಿದ್ದು ಹಿಗೆ
ನಾನೊಮ್ಮೆ ನಸುಕಲ್ಲಿ ಹೋಗಿದ್ದೆನಲ್ಲಿ
ಮೋಡದಂತಹ ಹೊಗೆ ಏಳುತಿತ್ತಲ್ಲಿ
ಬೀಸುತಿದ್ದಳು ಧಾನ್ಯ ಹುಡುಗಿ ಮನೆಯಲ್ಲಿ
ಕೋಗಿಲೆಯ ದನಿಯಂತೆ ಅವಳು ಬೀಸುವ ಸದ್ದು
ಹಕ್ಕಿ ಚಿಲಿಪಿಲಿಯಂತೆ ಕುಟ್ಟಿದರೆ ಸದ್ದು
ಹಕ್ಕಿ ಹಾಡಿದಂತೆ ಜರಡಿಯಾಡುವ ಸದ್ದು
ಮಣಿಗೆ ಮಣಿ ತಾಗಿದಂತೆ ಕಲ್ಲು ಬೀಸುವ ಸದ್ದು

ಮತ್ತೊಂದು ಸಲ ಸುತ್ತಾಡುತಾ ಹೋಗಿದ್ದೆನಲ್ಲಿ
ಚೆಲುವೆ ಇದ್ದಳು ಅಲ್ಲಿ ಹುಲ್ಲುಗಾವಲಿನಲ್ಲಿ
ಹಳದಿ ಹೂವುಗಳ ಪೊದೆ ಮೇಲೆ ಬಾಗಿ
ಕುದಿಸುತ್ತ ಗಡಿಗೆಯಲಿ ಕೆಂಪು ಬಣ್ಣ
ಕುದಿವ ಪಾತ್ರೆಯಲಿ ಹಳದಿ ಬಣ್ಣ

ಮೂರನೆ ಸಲ ಹೋಗಿದ್ದೆ ನಾನು
ಹುಡುಗಿ ಕುಳಿತಿದ್ದಳು ಕಿಟಕಿ ಬಳಿಯಲ್ಲಿ
ನೂಲುತಿದ್ದಳು ಅವಳು ಕೇಳಿಸಿತು ಸದ್ದು
ಕೈಯಲ್ಲಿ ಕದಿರಣಿಗೆ ರಾಟೆ ತಿರುಗುವ ಸದ್ದು
ಬಂಡೆ ಮರೆಯಲ್ಲಿ ಅಳಿಲು ದನಿಗೈದಂತೆ
ಮರದ ಮೇಲಿನ ಇಣಚಿ ಸ್ವರವ ತೆಗೆದಂತೆ

ಪೊಹ್ಜಾದ ಮನೆಯೊಡತಿ ಹೇಳಿದಳು ಹೀಗೆ :
ಹೇಳಿರಲಿಲ್ಲವೆ ಮಗಳೆ ಎಚ್ಚರಿಕೆ ಮಾತು
ಯಾವಾಗಲೂ ನಿನಗೆ ಹೇಳುತಿರಲಿಲ್ಲವೆ
ಪೈನ್ ಮರಗಳೆಡೆಯಲ್ಲಿ ಹಾಡಬೇಡ
ಕಣಿವೆ ತಿಟ್ಟುಗಳಲ್ಲಿ ಹಾಡಬೇಡ
ಕುತ್ತಿಗೆಯ ಮೇಲೆತ್ತಿ ನಡೆಯಬೇಡ
ಬಿಳಿತೋಳು ತೆರೆದಿಟ್ಟು ತೋರಬೇಡ
ಚೆಲುವಾದ ಎದೆಯನ್ನು
ಸೊಗಸು ಮೈಮಾಟವನು
ಕಾಣುವಂತೆಲ್ಲರಿಗೂ ತೋರಬೇಡ

ಚಳಿಗಾಲ ಬೇಸಗೆ
ವಸಂತ ಋತು ಶರತ್ಕಾಲ

ಎಲ್ಲ ಕಾಲಗಳಲ್ಲೂ ಹೇಳುತಲೆ ಇದ್ದೆ :
ಇರಬೇಕು ಹುಡುಗಿರು ಸಣ್ಣ ಕಿಟಕಿಯ ಮರೆಗೆ
ನೂಲುವುದು ಯಾರಿಗೂ ಕಾಣದಂತೆ
ದನಿ ಕೇಳದ ಹಾಗೆ ಕಾಮಿ ಧೂರ್ತರಿಗೆ
ಒಳ್ಳೆಯ ಹೆಸರಿರದ ಕನ್ಯಾರ್ಥಿಗಳಿಗೆ

ಮಗುವು ಹೇಳಿತು ನೆಲದ ಮೇಲಿಂದ
ಹದಿನೈದು ದಿನಗಳ ಕೂಸು ಹೇಳಿತೀ ಮಾತು
ಬಚ್ಚಿಡುವುದು ಸುಲಭ ಕುದುರೆಯನ್ನು
ಸೊಗಸು ಬಾಲದ ಕುದುರೆ ತುರಗವನ್ನು
ಬಚ್ಚಿಡುವುದು ಕಷ್ಟ ಚೆಲುವೆಯನ್ನು
ಸೊಗಸಾದ ಮಾರುದ್ದ ಕೇಶವನ್ನು

ಬಚ್ಚಿಡುವುದು ಕಷ್ಟ ಈ ಹುಡುಗಿಯರನ್ನು
ಕಲ್ಲಿಂದಲೆ ಮನೆಕಟ್ಟಿ ಇಟ್ಟರೂ ಕಡಲಲ್ಲಿ
ಇಟ್ಟರೂ ಕಡಲಲ್ಲಿ ಬೆಳೆಸಿದರೂ ಕಡಲಲ್ಲಿ
ಬಲುಕಷ್ಟ ಅಡಗಿಸುವುದು ಈ ಹುಡುಗಿಯರನ್ನು
ಪುಂಡುಪೋಕರಿಗಳಿಂದ ಕಾಮುಕರ ಕಣ್ಣಿಂದ
ಹೆಣ್ಣ ಕೇಳಲು ಬರುವ ಪುರುಷರಿಂದ
ಭಾರಿ ತಲೆ ಗಾಪಿನ ವೀರ ಬಲರಿಂದ
ಉಕ್ಕುಲಾಳದ ಕುದುರೆ ಏರಿ ಬರುವವರಿಂದ

ಹಿರಿಯ ವೆಯ್ನಾಮೊಯ್ನನ್
ತಲೆತಗ್ಗಿಸಿ ವ್ಯಥೆ ತುಂಬಿ
ಹೊರಟ ಊರಿಗೆ ಪಯಣ
ಹೇಳಿಕೊಂಡನು ತನ್ನಲ್ಲಿ
ನಾನೆಂಥ ನತದೃಷ್ಟ
ತಿಳಿಯದಾಯಿತೇತಕೆ ಈ ಮೊದಲೆ ನನಗೆ
ಆಗಬೇಕು ಮದುವೆ ತಾರುಣ್ಯದಲ್ಲಿ
ಆಯಬೇಕು ಗೆಳತಿ ಆ ದಿನಗಳಲ್ಲಿ

ಉಳಿದೆಲ್ಲ ಕ್ಲೇಶಗಳು ಆಮೇಲೆ ಬರಲಿ
ಮಡದಿ ಮಕ್ಕಳು ಮನೆಮಠದ
ಸುಖ ಮೊದಲು ಇರಲಿ

ಎಲ್ಲರಿಗೂ ಹೇಳಿದನು ತಿಳುವಳಿಕೆ ಮಾತು
ವೆಯ್ನಾಮೊಯ್ನನ್ ನುಡಿದ ಎಚ್ಚರಿಕೆ ಮಾತು :
ಸ್ಪರ್ಧೆ ಬೇಡ ಚೆಲುವೆಗಾಗಿ
ಯುವಕರೊಡನೆ ನಮಗೆ
ಸ್ಪರ್ಧೆ ಬೇಡ ಈಜಿನಲ್ಲಿ
ದೋಣಿಯೋಟ ಪಂದ್ಯದಲ್ಲಿ
ಸ್ಪರ್ಧೆಬೇಡ ತರುಣರೊಡನೆ
ಚೆಲುವೆಗಾಗಿ ನಮಗೆ.

೧೨. ಮಹಾಎತ್ತು ಮತ್ತು ಏಲ್‌ಮದ್ಯ ತಯಾರಿ

ಹೇಗೆ ಮುಂದುವರೆಸೋಣ ನಮ್ಮ ಹಾಡನ್ನು
ಹೇಳೋಣ ನಿಮಗೆ ಯಾವ ಕಥೆಯನ್ನು
ಹೇಳುವೆನು ಪೊಹ್ಜೊಲಾ ಔತಣದ ಸಂಭ್ರಮ
ಹೇಗಿದ್ದಿತು ವೈಭವದ ಪಾನೋತ್ಸವ ಸಂಭ್ರಮ

ಬಹುಕಾಲ ನಡೆಯಿತು ವಿವಾಹದ ಸಿದ್ಧತೆ
ಉತ್ಸವಕ್ಕೆ ಬೇಕಾದ ಸಾಮಾನಿನ ಸಿದ್ಧತೆ
ಏನೇನು ತಂದರು ರಾಶಿ ಹಾಕಿದರು
ಬಲು ದೀರ್ಘಕಾಲದ ಭೋಜನದ ಕೂಟಕ್ಕೆ
ಸಾವಿರಾರು ಜನರ ಪಾನೋತ್ಸವಕ್ಕೆ

ಕರೀಲಿಯದಲ್ಲಿ ಇತ್ತೊಂದು ಎತ್ತು
ಫಿನ್ಲೆಂಡಿನಲ್ಲಿ ಕೊಬ್ಬಿ ಬೆಳೆದಿತ್ತು
ಅಂಥ ದೊಡ್ಡದಲ್ಲ ಅಂಥ ಚಿಕ್ಕದೂ ಅಲ್ಲ
ಮಧ್ಯಮ ಗಾತ್ರದ ಚಿಕ್ಕದೊಂದೆತ್ತು
ಕುಡಿಯುತ್ತಿದ್ದರೆ ನೀರು ಕೆಮಿ ನದಿಯಲ್ಲಿ
ಬಾಲ ಇರುತ್ತಿತ್ತು ಹೇಮಿನಲ್ಲಿ
ನೂರು ಯೋಜನದುದ್ದ ಅದರ ಕೋಡು
ಅರ್ಧ ಯೋಜನದಷ್ಟು ಅಗಲ ಮುಸುಡಿ

ಅಳಿಲೊಂದು ಓಡಿತು ವಾರವೆಲ್ಲ
ಒಂದು ಕೋಡಿಂದ ಮತ್ತೊಂದು ಕೋಡಿಗೆ.
ಸ್ವಾಲೊ ಹಾರಿತು ಪೂರ್ತಿ ಒಂದು ದಿನವೆಲ್ಲ
ಹೆಗಲನ್ನೆಲ್ಲ ಸುತ್ತಿ ಬರಲೆಂದು.
ಓಡಿತೊಂದು ವಾರ ತುಪ್ಪಳದ ಅಳಿಲು
ಕೋಡಿಂದ ಕೋಡಿನ ತುದಿ ತಲುಪಲೆಂದು.
ದಿನವೆಲ್ಲ ಹಾರಿತು ಹಕ್ಕಿಸ್ವಾಲೊ
ಆ ಪುಟ್ಟ ಹಕ್ಕಿ ಹಾರುತ್ತ ದಣಿದಾಗ
ತಂಗುವುದಕ್ಕೆಲ್ಲೂ ಸಿಗಲಿಲ್ಲ ಜಾಗ.
ಅದರ ಕುತ್ತಿಗೆಯಿಂದ ಬಾಲವನು ತಲುಪಲು
ಓಡಿತ್ತು ತಿಂಗಳು ಬೇಸಗೆಯ ಅಳಿಲು

ತಿಂಗಳಾದರೂ ಕೂಡ ಓಡುತ್ತಾ ಹೀಗೆ
ಆಗಲೆ ಇಲ್ಲ ತುದಿ ಬಾಲ ತಲುಪಲು.

ಇಂಥದೊಂದೆತ್ತನ್ನು ಕರೀಲಿಯಾದಿಂದ
ಪೊಹ್ಜಾದ ಹೊಲದಂಚಿಗೆ ಎಳೆತಂದರು
ಕೋಡು ಹಿಡಿದವರು ನೂರು ಮಂದಿ
ಮುಸುಡಿ ಹಿಡಿದವರು ಸಾವಿರಾರು

ಬರುವ ದಾರಿಯಲಿ ಎತ್ತು ಮೇಯುತ್ತಿತ್ತು
ಜವುಗಿನಲಿ ಬೆಳೆದ ಗರಿಕೆ ಹುಲ್ಲು
ಬಗ್ಗಿದಾಗದರ ಬೆನ್ನು ತಾಗಿತ್ತು
ಮೇಲಿನಾಗಸದ ಎತ್ತರದ ಮುಗಿಲು

ಕಡಿಯುವರು ಯಾರು ಇಂಥ ಎತ್ತು
ಪೊಹ್ಜಾದೊಳಗೆಲ್ಲೂ ಇಲ್ಲ ಯಾರೂ

ಕರೀಲಿಯಾದಿಂದ ಮುದುಕನೊಬ್ಬ
ನಾನು ಕಡಿಯುವೆನೆಂದು ಮುಂದೆ ಬಂದ
ತರುವೆ ಕೊಡಲಿಯನು ಬಡಿವೆ ತಲೆಯನ್ನು
ಎತ್ತಬಾರದು ಮುಸುಡಿ ಮತ್ತೆಂದು ನೀನು
ಬೀಸಬಾರದು ಬಾಲ ಎಂದೇನೊ ಕೊಚ್ಚಿಕೊಂಡ

ಏಟುಹಾಕಲು ಹೋದ
ತಲೆ ತಿರುಗಿಸಿತು ಗಿರಗಿರನೆ
ಕರಿಗಣ್ಣ ಬಿರಬಿರನೆ
ಎತ್ತಿ ಎಸೆಯಿತು ಬೀಸಿ ಮುದುಕನನ್ನು
ದಟ್ಟ ಪೊದೆ ಕಾಡಲ್ಲಿ ವೃದ್ಧನನ್ನು

ಆಮೇಲೆ ಹುಡುಕಿದರು ಕಸಾಯಿಯವನನ್ನು
ಈ ಭಾರೀ ಎತ್ತು ಕಡಿಯುವವನನ್ನು
ಸುಂದರ ಕರೀಲಿಯದಲ್ಲಿ ವಿಶಾಲ ಸುವೋಮಿಯಲ್ಲಿ
ರಷ್ಯಾದ ಮೆದು ನಾಡಿನಲ್ಲಿ
ಸ್ವೀಡನ್ನಿನ ಗಡಸು ಭೂಮಿಯಲ್ಲಿ
ಲ್ಯಾಂಪ್‌ಲ್ಯಾಂಡಿನ ಆದ್ಯಂತ
ಟುರ್ಜಾ ವೀರಭೂಮಿಯಲ್ಲಿ

ಟುವೊನಿಯಲ್ಲಿ
ಪಾತಾಳದಲ್ಲಿ
ಎಲ್ಲೂ ಸಿಗಲಿಲ್ಲ ಎಷ್ಟು ಹುಡುಕಿದರೂ
ಮತ್ತೆ ಹುಡುಕಿದರು ಕಸಾಯಿಯವನನ್ನು
ಸಾಗರದ ಮೇಲೆಲ್ಲ ಹುಡುಕಿಯೇ ಹುಡುಕಿದರು

ಕಪ್ಪು ಕಡಲಿಂದ ಉದ್ಭವಿಸಿದನೊಬ್ಬ
ಭಾರಿ ಆಳೇನಲ್ಲ ಅಂಥ ಅಲ್ಪನೂ ಅಲ್ಲ
ಬೋಗುಣಿಯಲವನು ಮಲಗಬಹುದಿತ್ತು
ಹಿಟ್ಟು ಜರಡಿಯ ಕೆಳಗೆ ನಿಲ್ಲಬಹುದಿತ್ತು
ಕಬ್ಬಿಣದ ಮುಷ್ಟಿ ಕಬ್ಬಿಣದ ಬಣ್ಣ
ಶಿಲೆಯಂಥ ತಲೆಗಾಪು ಶಿಲೆಯ ಬೂಟು
ಚಿನ್ನದಲುಗಿನ ಕತ್ತಿ ತಾಮ್ರ ಹಿಡಿಕೆಯ ಕತ್ತಿ
ಅಂತೂ ಸಿಕ್ಕಿದ್ದ ಕಸಾಯಿಗಾರ
ಫಿನ್ಲೆಂಡಿನ ಎತ್ತು ಕಡಿಯುವಂಥವನು

ಒಂದೇ ಏಟಿಗೆ ಕತ್ತು ಮುರಿದು ಬಿತ್ತು
ಮೊಣಕಾಲು ಕೆಳಗೂರಿ ಎತ್ತು ಬಿದ್ದಿತ್ತು
ಬಹಳ ಸಿಕ್ಕಿತೇನು ದನದ ಮಾಂಸ
ಅಷ್ಟೇನೂ ಹೆಚ್ಚಲ್ಲ ಏನೊ ಒಂದಿಷ್ಟು
ನೂರು ತಪ್ಪಲೆ ಮಾಂಸ ನೂರು ಯೋಜನ ಬೋಟಿ
ಏಳು ದೋಣಿಗಳು ರಕ್ತ ತುಂಬಿ
ಆರುಡಬರಿಗಳಲ್ಲಿ ಕೊಬ್ಬು ತುಂಬಿ
ಭರ್ಜರಿಯಾದ ಪೊಹ್ಜಾದ ಔತಣಕ್ಕೆ
ಎಲ್ಲವೂ ಸರಿಯೋಲಾ ಉತ್ಸವಕ್ಕೆ

ಆಮೇಲೆ ಅವರೊಂದು ಮನೆಯ ಕಟ್ಟಿದರು
ಒಂಬತ್ತು ಯೋಜನದುದ್ದ ಏಳು ಯೋಜನದಗಲ
ಕೂಗಿದರೆ ಕೋಳಿ ಚಿಮಣಿ ಮೇಲೆ
ಕೇಳುತಿರಲಿಲ್ಲ ಕೂಗು ಕೆಳಗಿದ್ದವರ
ಒಂದು ತುದಿಯಲ್ಲಿ ನಿಂತು ಬೊಗಳಿದರ ನಾಯಿ
ಕೇಳುತಿರಲಿಲ್ಲ ಸದ್ದು ಬಾಗಿಲಿನ ಬಳಿಗೆ
ಅವಳು ಬಂದಳು ಪೊಹ್ಜಾದ ಒಡತಿ

ಕೋಣೆ ಮಧ್ಯದಿ ನಿಂತು ಹೀಗೆ ಹೇಳಿದಳು
ಹೇಗೆ ಮಾಡಲಿ ಸುರೆ ಇಷ್ಟು ಜನಕೆ
ರುಚಿಯಾದ ಮದ್ಯ ಮದುವೆ ಜನಕೆ
ಹೇಗೆ ಮಾಡುವರೊ ಹೇಗೆ ಇಳಿಸುವರೊ ಭಟ್ಟಿ
ನನಗೊಂದು ಗೊತ್ತಿಲ್ಲ ಮಾಡುವುದು ಹೇಗೆ

ಒಲೆಯ ಬಳಿ ಇದ್ದ ಮುದುಕ ಹೇಳಿದನು
ಸುರೆ ಇಳಿಸಬೇಕು ಬಾರ್ಲಿಯಿಂದ
ಕೊಡಬೇಕು ಪಾನಕ್ಕೆ ಹಾಪ್ ರುಚಿಯ ಗಂಧ
ಮಾಡಬರುವುದಿಲ್ಲ ನೀರಿಲ್ಲದೆ
ಒಳ್ಳೆ ಬೆಂಕಿಯ ನೆರವಿಲ್ಲದೆ

ಹಾಪ್‌ನ್ನು ಕರೆಯುವರು ವಿಲಾಸಗಳ ಪುತ್ರ
ನೆಲದಲ್ಲಿ ಬೆಳೆದಿತ್ತು ಉಳುವಾಗ ಕಿತ್ತರು
ಎಸೆದು ಬಿಟ್ಟರು ದೂರ ಇರುವೆಯಂತೆ
ಕಲೆವಾಲಾ ನೀರ ಚಿಲುಮೆ ಬಳಿ ಬಿತ್ತು
ಅಲ್ಲಿ ಬೆಳೆಯಿತು ಬಳ್ಳಿ ಬೇಗಬೇಗ
ಹಸಿರು ಕವಲಿನ ಬಳ್ಳಿ ಹಬ್ಬಿ ಹರಡಿ
ಮರವೇರಿ ಬೆಳೆಯಿತು ತುದಿಯನ್ನು ಮುಟ್ಟಿತು

ಬೆಳೆದ ಯಾರೊ ಮುದುಕ ಬಾರ್ಲಿ ಆಕಸ್ಮಿಕ
ಬೆಳೆಯಿತದು ಹುಲುಸಾಗಿ
ಉತ್ಸಾಗ ಹೊಸದಾಗಿ

ಹೀಗೆಯೇ ಕಳೆಯಿತು ಸ್ವಲ್ಪಕಾಲ
ಮರದ ಮೇಲಿಂದ ಹಾಪ್‌ಕಾಯಿ ಕೇಳಿತು
ಹೊಲದಲ್ಲಿ ಬೆಳೆದಿದ್ದ ಬಾರ್ಲಿಯೂ ಕೇಳಿತು
ಕಲೇವಾ ಬಾವಿಯ ನೀರೂ ಕೇಳಿತು
ಯಾವಾಗ ನಾವು ಜೊತೆಯಾಗಿ ಸೇರುವುದು
ಯಾವಾಗ ನಾವು ಒಂದುಗೂಡುವುದು
ಬಲು ಬೇಸರವಾಗಿದೆ ಒಂಟಿ ಬದುಕು
ಇರಬೇಕು ಇಬ್ಬರು ಇಲ್ಲ ಇರಬೇಕು ಮೂವರು
ಒಸ್ಮೊತಾರ್ ಅವಳು ಏಲ್ ಸೃಷ್ಟಿಕರ್ತೆ
ಸುರೆಭಟ್ಟಿ ಇಳಿಸಿದ ಮೊದಲಿಗಳು ಅವಳೆ

ತೆಗೆದುಕೊಂಡಳು ಬಾರ್ಲಿ ಆರು ಕಾಳು
ಹಾಪ್‌ಕಾಯಿ ಬಳ್ಳಿ ಗೊಂಚಲುಗಳೇಳು
ಬಾವಿಯೊಳಗಿನ ನೀರು ಎಂಟು ಸೌಟು
ಒಲೆಯ ಮೇಲಿಟ್ಟಳು ಕುದಿಯಲೆಂದು
ಆಮೇಲೆ ಸುರಿದಳು ಮರದ ಪೀಪಾಯಿಯಲ್ಲಿ
ಶೇಖರಿಸಿದಳು ಬರ್ಚ್ ಮರದ ತೊಟ್ಟಿಯಲ್ಲಿ

ಅದರೇಕೋ ಏನೊ ಬುರುಗು ಬರಲಿಲ್ಲ
ಮನದಲ್ಲಿ ಅವಳು ಚಿಂತೆ ಮಾಡಿದಳು
ಇದಕೇನು ಮಾಡಲಿ ಇದಕೇನು ಸೇರಿಸಲಿ
ಹುಳಿ ಬರಲು ಸುರೆಗೆ ನೊರೆ ಬರಲು ಸುರೆಗೆ

ಸುರೆಯ ಸೃಷ್ಟಿಕರ್ತೆ ಅವಳು ಕಲೆವಾ ಪುತ್ರಿ
ಚಿಗುರು ಬೆರಳಿನ ಚೆಲುವೆ ಚುರುಕು ನಡಿಗೆಯ ರಂಭೆ
ಹಾಗೆಯೇ ಸವರಿದಳು ಪೀಪಾಯಿಗಳ ಪಟ್ಟಿ
ಹಾಗೆಯೇ ತಡಕಿದಳು ಕೈಹಾಕಿ ತಳಕೆ
ಸಿಕ್ಕಿತೊಂದು ಚಕ್ಕೆ ಸಣ್ಣ ಸಿಬುರಿನ ಚಕ್ಕೆ

ಮನದಲ್ಲಿ ಅವಳು ಯೋಚಿಸಿದಳು ಹೀಗೆ
ಏನು ಮಾಡಬಹುದು ಈ ಚಕ್ಕೆಯಿಂದ
ಚೆಲುವ ಕರಗಳಿಗೆ ಬಂದ ಈ ಸಿಬುರಿನಿಂದ
ಎರಡು ಹಸ್ತಗಳನು ಜೋಡಿಸುತ ಉಜ್ಜಿದಳು
ತೊಡೆಯ ಮೇಲಿಟ್ಟು ಕರಗಳನು ಉಜ್ಜಿದಳು
ಸೃಷ್ಟಿಸಿಯಾಯಿತೊಂದು ಬಿಳಿಯ ಅಳಿಲು

ಸೂಚನೆಯ ಕೊಟ್ಟಳು : ಆ ಅಳಿಲಿಗೆ ಹೀಗೆ
ಪುಟ್ಟ ಅಳಿಲೆ ಬನದ ಬಂಗಾರವೇ
ಬನದ ಹೂವೇ ನೀನು ಈ ನಾಡ ಸೊಬಗೆ
ಹೋಗು ಬೇಗ ನಾ ಹೇಳಿದಲ್ಲಿಗೆ ಬೇಗ
ಹೋಗು ಬನದ ಭೂಮಿ ಮೆಟ್ಟಿಲಾಗೆ

ಚಿಕ್ಕ ಮರವಿದೆ ಅಲ್ಲಿ ಮೇಲೆ ಹತ್ತು
ಜೋಪಾನವಾಗಿರು ಎಲೆಯ ಮರೆಯಲ್ಲಿ
ಹದ್ದುಗಳ ಕೈಗೆ ಸಿಕ್ಕದಂತೆ

ಗಿಡುಗಕ್ಕೆ ನೀನು ಬಲಿಯಾಗದಂತೆ
ಪೈನ್ ಮರದ ಗೊನೆಯನ್ನು
ಫರ್ ಮರದ ಚಿಗುರನ್ನು
ತಂದುಕೊಡು ಬೇಗ ಈ ಹೆಣ್ಣ ಕೈಗೆ
ಓಸ್ಮಾ ಪುತ್ರಿ ಮಾಡುತಿರುವ ಹುಳಿಯ ಮದ್ಯಕ್ಕೆ

ಗೊತ್ತಾಯಿತು ಅಳಿಲಿಗೆ ತಾ ಹೋಗುವ ದಾರಿ
ಮುಂದೋಡಿತು ಪೊದೆ ಬಾಲ ಅಲ್ಲಾಡಿಸಿ
ಬಯಲು ಜಾಗವ ದಾಟಿ
ಒಂದು ಬನ ಎರಡು ಬನ
ಮೂರನೆಯ ಬನವನ್ನು ಅಡ್ಡಡ್ಡ ದಾಟಿ
ಬಂದು ಸೇರಿತು ಅಳಿಲು ಮೊಟ್ಲೊಲಾ ಬನಕೆ

ಅಲ್ಲಿದ್ದವು ಎತ್ತರದ ಫರ್ ವೃಕ್ಷ ಮೂರು
ತೆಳ್ಳಗಿನ ಪೈನ್ ವೃಕ್ಷ ನಾಲ್ಕಿದ್ದವು
ಫರ್ ಗೊನೆಯ ಮುರಿಯಿತು
ಪೈನ್ ಚಿಗುರ ಮುರಿಯಿತು
ಉಗುರು ಪಂಜದಿ ತಂದು ಅವಳಿಗೊಪ್ಪಿಸಿತು
ಸುರೆಯಲ್ಲಿ ಹಾಕಿದಳು ಆದರೂ ಅದರಲ್ಲಿ ಬರಲಿಲ್ಲ ಬುರುಗು

(ಎರಡನೆಯ ಸಲ ಇದೇ ಘಟನೆಯ ಪುನರಾವರ್ತನೆ. ತುಪ್ಪಳದ ಅಳಿಲನ್ನು ಸೃಷ್ಟಿಸಿ ಕರಡಿಗಳ ಜೊಲ್ಲು ತರಿಸುತ್ತಾಳೆ. ಮೂರನೆಯ ಸಲ ದುಂಬಿಯನ್ನು ಸೃಷ್ಟಿಸಿ ಸಾಗರದ ನಡುಗಡ್ಡೆಗೆ ಕಳಿಸುತ್ತಾಳೆ. ಅಲ್ಲಿದ್ದ ಹೂಗಳಿಂದ ಮಧುವನ್ನು ತರಿಸಿ ಸುರೆಗೆ ಬೆರೆಸಿದಾಗ ಏಲ್ ಮದ್ಯದಲ್ಲಿ ಬುರುಗು ಬರುತ್ತದೆ.)

ಕೊನೆಗೊಮ್ಮೆ ಸುರೆಯಲ್ಲಿ ಬುರುಗೆದ್ದಿತು
ಹೊಸ ಸುರೆಯಲ್ಲಿ ಬುರುಗು ಮೇಲುಕ್ಕಿತು
ಪೀಪಾಯಿಗಳ ಬುರುಗು ಮೇಲುಕ್ಕಿ ಬಂತು
ಕಂಠದಿಂದುಕ್ಕುಕ್ಕಿ ಹೊರಚೆಲ್ಲಿತು
ಕೆಳಗುಕ್ಕಿ ನೆಲದಲ್ಲಿ ಹರಿದಾಡಿತು

ಇಷ್ಟಾಗಿ ಸಮಯ ಸ್ವಲ್ಪವಾಗಿತ್ತು
ಸ್ವಲ್ಪವೇ ಸ್ವಲ್ಪ ಸಮಯವಾಗಿತ್ತು
ಮುತ್ತಿದರು ವೀರರು ಸುರೆಯ ಪಾನಕ್ಕೆ

ಅವರಲ್ಲಿ ಮುಖ್ಯನು ಲೆಮಿನ್ಕಾಯ್ನನ್
ಆಹ್ತಿ ಎಂದರೂ ಅವನೆ ಕವುಕೊ ಎಂದರು ಅವನೆ
ಕುಡಿದು ಬಿದ್ದನು ಧೂರ್ತ ಕಂಠಪೂರ್ತಿ

ಒಸ್ಮೊತಾರ್ ಅವಳು ಸುರೆಯ ಮಾಡಿದವಳು
ಹೇಳಿದಳು ಹೀಗೆ :
ಅಯ್ಯೊ ಪಾಪಿಷ್ಠೆ ಹಾಳು ಮಾಡಿದೆನಲ್ಲ
ಸರಿಯಾಗಿ ನಾನು ಸುರೆ ಮಾಡಲಿಲ್ಲ
ಉಕ್ಕಿ ಹರಿದಿದೆ ಸುರೆ ನೆಲದ ಮೇಲೆಲ್ಲ

ಮರದ ಮೇಲಿನ ಹಕ್ಕಿ ಹಾಡುತ್ತ ಹೇಳಿತು
ಸರಿಯಾಗೇ ಇದೆಯಲ್ಲ ನೀ ಮಾಡಿದ ಮದ್ಯ
ಅತ್ಯುತ್ತಮವಾಗಿದೆ ಪಾನ ಮಾಡುವುದಕ್ಕೆ
ಪಿಪಾಯಿಗೆ ತುಂಬು ನೆಲಮಾಳಿಗೆಯಲ್ಲಿಟ್ಟು ಬಿಡು
ಓಕ್ ಮರದ ಪೀಪಾಯಿ
ತಾಮ್ರದ ಸುತ್ತು ಬಳೆ ಪೀಪಾಯಿ

ಹೀಗೆ ಸೃಷ್ಟಿಯಾಯಿತು ಮೊದಲ ಹುಳಿ ಮದ್ಯ
ಕಲೇವಾ ಪಾನೀಯ ಹುಟ್ಟಿದ್ದು ಹೀಗೆ
ಇದು ಬಹಳ ಮನ್ನಣೆಯ ಪಡೆದಂಥ ಮದ್ಯ
ಎಲ್ಲೆಲ್ಲೂ ಹಾಡಿ ಹೊಗಳುವರು ಕೀರ್ತಿ
ವಿವೇಕಿ ಜನಕೆ ಇದು ಪ್ರಿಯವಾದ ಮದ್ಯ
ಸ್ತ್ರೀ ಜನಕ್ಕೆ ಇದು ಮುದ ತರುವ ಮದ್ಯ
ಪ್ರಸನ್ನ ಗೊಳಿಸುವುದು ಪುರುಷರನ್ನು
ಕಾದಾಟಕಿಳಿಸುವುದು ಮೂರ್ಖರನ್ನು

ಏಲ್ ಮದ್ಯದ ಕಥೆಯ ಕೇಳಿದಳು ಒಡತಿ
ಕಡಾಯಿಗಳಿಗೆಲ್ಲ ನೀರು ತುಂಬಿದಳು
ಎಷ್ಟು ಬೇಕೋ ಅಷ್ಟು ಬಾರ್ಲಿ ಹಾಕಿದಳು
ಹಾಪ್‌ಕಾಯಿ ಗೊಂಚಲನು ತಂದು ಹಾಕಿದಳು

ತಿಂಗಳುಗಳ ಕಾಲ ಒಲೆ ಬೆಂಕಿ ಉರಿದವು
ಋತುಮಾನಗಳವರೆಗೆ ನೀರುಗಳು ಕುದಿದವು
ನಡುಗಡ್ಡೆ ಮರವೆಲ್ಲ ಸೌದೆಯಾಗುರಿದವು
ಬಾವಿಗಳ ನೀರೆಲ್ಲ ಸುರೆಯ ಸೇರಿದವು

ನಡುಗಡ್ಡೆಯಲಿ ಒಂದೂ ಮರವೆ ಇರಲಿಲ್ಲ
ಬಾವಿಗಳಲ್ಲಿ ಎಲ್ಲೂ ನೀರೆ ಇರಲಿಲ್ಲ
ಎಲ್ಲವೂ ಪೊಹ್ಜಾದ ಭಾರಿ ಔತಣಕೆ
ಎಲ್ಲವೂ ಪಾನೋತ್ಸವ ಮಧುಪಾನ ಸಂಭ್ರಮಕೆ

ಏಳುತಿತ್ತು ಹೊಗೆ ನಡುಗಡ್ಡೆಯಲ್ಲಿ
ಉರಿಯುತ್ತಿತ್ತು ಬೆಂಕಿ ಬಯಲಿನಲ್ಲಿ
ಮೇಲೇರುತ್ತಿದ್ದವು ದಟ್ಟ ಹೊಗೆ ಮೋಡ
ನೀರಾವಿ ಹೊಗೆ ಮೋಡ ಗಾಳಿಯೊಳಗೆಲ್ಲ
ಧಗಧಗನೆ ಒಲೆ ಬೆಂಕಿ ಉರಿಯುತಿತ್ತು
ಪೊಹ್ಜಾದ ನಾಡರ್ಧ ವ್ಯಾಪಿಸಿತ್ತು

ಜನರೆಲ್ಲ ನಿಂತು ನೋಡಿದರು ಹೊಗೆಯನ್ನು
ನೋಡಿಯೇ ನೋಡಿದರು ನೋಡುತ್ತ ಕೇಳಿದರು
ಎಲ್ಲಿಂದ ಬರುತಿದೆಯೋ ಈ ಹೊಗೆಯ ಮೋಡ
ಕದನದೆನುವಷ್ಟು ದೊಡ್ಡದೇನಲ್ಲ
ಕುರಿಗಾವಲಿನವರದೆನಲು ಚಿಕ್ಕದೇನಲ್ಲ
ಲೆಮಿನ್‌ಕಾಯ್ನನ್ ತಾಯಿ ನಸುಕಿನಲಿ ಎದ್ದು
ಹೊರಗೆ ಬಂದಳು ಅವಳು ನೀರು ತರಲೆಂದು
ಅಂದುಕೊಂಡಳು ಹೊಗೆ ಮೋಡ ನೋಡುತ್ತ
ಕದನ ನಡೆದಿರಬೇಕು ಅದರ ಹೊಗೆ ಇರಬೇಕು

ಅಹ್ತಿ ಅಂದರೆ ಲೆಮಿನ್ಕಾಯ್ನನ್
ಸುರಸುಂದರ ಯುವಕ
ಹೊರಗೆ ಅಲೆದಾಡುತ್ತ ಹೊಗೆ ಕಂಡು ನುಡಿದ
ನೋಡಬೇಕು ಹೋಗಿ ಹತ್ತಿರಕೆ ಹೋಗಿ
ಎಲ್ಲಿಂದ ಬರುತಿದೆಯೋ ಕದನ ನಡೆದಿದೆಯೋ
ಹೋಗಿ ನೋಡಿದ ಅವನು ಅದು ಕದನದ್ದಲ್ಲ
ಸಿಯೋಲಾ ಬಯಲಿಂದ ಬಂದ ಹೊಗೆ ಮೋಡ
ಏಲ್ ಸುರೆಯ ತಯಾರಿಗೆ ಎದ್ದ ಹೊಗೆ ಮೋಡ

ಹಾಯಿಸಿದ ಕಣ್ಣು ಓರೆಯಾಗಿ
ಮತ್ತೊಂದು ಕಣ್ಣು ಮೆಳ್ಳೆಯಾಗಿ
ನೋಡುತ್ತ ಹೇಳಿದ :

ನನ್ನ ಸಾಕಿದ ತಾಯ ಪೊಹ್ಜೊಲಾ ಅನ್ನಪೂರ್ಣೆ
ಭಟ್ಟಿ ಇಳಿಸು ಸುರೆಯ ಬಹಳ ಚೆನ್ನಾಗಿ
ಎಲ್ಲಕಿಂತಲೂ ಮಿಗಿಲಾಗಿ ಮುಖ್ಯ ನನಗಾಗಿ
ನಿನ್ನ ಕಿರಿ ಮಗಳ ವರಿಸುವ ಲೆಮಿನ್ಕಾಯ್ನನ್‌ಗಾಗಿ

ಏಲ್ ನೊರೆ ಬಂದಿತು
ಸಿದ್ಧವಾಗಿತ್ತು ಪುರುಷಜನ ಪ್ರಿಯ ಮದ್ಯ
ಕೆಂಪು ಸುರೆ ಇಟ್ಟರು ಜೋಪಾನವಾಗಿ
ನೆಲಮಾಳಿಗೆಯಲಿಟ್ಟರು ಭದ್ರವಾಗಿ
ಓಕ್ ಮರದ ಪೀಪಾಯಿಗಳಲಿಟ್ಟರು
ತಾಮ್ರದ ಪಟ್ಟಿ ಪೀಪಾಯಿಗಳಲಿಟ್ಟರು

ಪೊಹ್ಜಾದ ಒಡತಿ ಸಿದ್ಧ ಮಾಡಿದಳೆಲ್ಲ
ಹಾಡುತ್ತಿದ್ದವು ಪಾತ್ರೆ ಸುಂಯೆಂದವು ಬಾಣಲೆ
ಬೇಯುತಿದ್ದವು ಬ್ರೆಡ್ಡು ಕಲೆಸಿಟ್ಟಳು ಗಂಜಿ
ಬ್ರೆಡ್ಡುಗಳು ಬೆಂದವು ಸಿದ್ಧವಾಯಿತು ಗಂಜಿ

ಇಷ್ಟಾಗಿ ಹೆಚ್ಚೇನೂ ಆಗಿರಲಿಲ್ಲ ಸಮಯ
ಆಗಿತ್ತು ಸ್ವಲ್ಪವೇ ಸ್ವಲ್ಪ ಸಮಯ
ಪಿಪಾಯಿ ಸುರೆಮದ್ಯ ಕೂಗಿ ಕರೆಯಿತು ಹೀಗೆ
ಯಾರಾದರೂ ಬನ್ನಿ ನನ್ನ ರುಚಿ ನೋಡಲು
ನನ್ನ ಕೀರ್ತಿಯ ಸಾರಿ ನನ್ನ ಹೊಗಳುತ ಹಾಡಿ

ಆಗವರು ಹೊರಟರು ಚಾರಣರ ಹುಡುಕಿ
ಹೆಸರಿರುವಂಥ ಹಾಡುಗಾರನ ಹುಡುಕಿ
ಬಲು ಒಳ್ಳೆಕಂಠದ ಗಾಯಕನ ಹುಡುಕಿ
ಒಳ್ಳೆ ಕಥೆಗಳನು ಹೇಳುವವನ ಹುಡುಕಿ

ಮೊದಲು ಹೋದರು ಅವರು ಸಾಲ್ಮನ್ ಬಳಿಗೆ
ದೊಡ್ಡ ಕಂಠದ ಮೀನು ಸಾಲ್ಮನ್ ಬಳಿಗೆ
ಹಾಡು ಹೇಳುವುದಲ್ಲ ಮೀನುಗಳ ಕೆಲಸ
ಕಥೆಗಳನು ಹೇಳಲೂ ಅದಕೆ ಬರದು
ಸಾಲ್ಮನ್‌ಗಳ ದವಡೆ ಭಾರಿ ವಕ್ರ
ಪೈಕ್ ಮೀನಿನ ಹಲ್ಲು ತುಂಬ ಅಗಲ

ಮತ್ತೆ ಹೋದರು ಅವರು ಗಾಯಕನ ಹುಡುಕಿ
ತುಂಬ ಹೆಸರಾದ ಗಾಯಕನ ಹುಡುಕಿ
ಆರಿಸಿದರೊಬ್ಬ ಚಿಕ್ಕ ಹುಡುಗನನು
ಅಂದುಕೊಂಡರು ಇವನು ಚೆನ್ನಾಗಿ ಹಾಡುವನು
ಹುಡುಗರ ಕೆಲಸವಲ್ಲ ಹಾಡು ಹೇಳುವುದು
ಗಲಾಟೆಗೇ ಸರಿ ಅವರು ಹಾಡುವುದಕಲ್ಲ
ನಾಲಗೆಯೂ ಸರಿಯಾಗಿ ತಿರುಗದಲ್ಲ
ತಿರುಚಿ ಪದಗಳನು ನುಡಿವರಲ್ಲ

ಸಹನೆ ಕಳೆಯಿತು ಕೆಂಪು ಸುರೆಮದ್ಯಕ್ಕೆ
ಬೈಯ ತೊಡಗಿತು ಒಂದೆ ಸಮನೆ
ಸೆರೆವಾಸ ಸಾಕಾಗಿ ಪಿಪಾಯಿಯೊಳಗೆ
ತಾಳಲಾರದೆ ಪಾಡು ಪಟ್ಟಿಗಳ ಹಿಂದೆ
ಸಿಕ್ಕದಿದ್ದರೆ ನಿಮಗೆ ಹಾಡಿನವರು
ಒಳ್ಳೆ ಕಂಠದ ಚಾರಣರು ಗಾಯಕರು
ಕಿತ್ತೆಸೆದು ಬರುವೆ ಈ ತಾಮ್ರಪಟ್ಟಿ
ಹೋಗುವೆನು ಹರಿದು ಮಣ್ಣಲ್ಲಿ ಉಕ್ಕಿ

ಪೊಹ್ಜಾದ ಒಡತಿ ಕಳಿಸಿದಳು ಆಹ್ವಾನ
ಅತಿಥಿಗಳಿಗೆಲ್ಲ ಬರಲು ತಿಳಿಸಿದಳು
ಕಳಿಸಿದಳು ದೂತರನು ಹೊರ ಊರುಗಳಿಗೆ
ಹೇಳಿದಳು ಆಳಿಗೆ ಮಾತೊಂದು ಹೀಗೆ
ಓ ಹೆಣ್ಣೆ ಸಣ್ಣವಳೆ ಹೇಳಿದುದ ಕೇಳುವಳೆ
ಎಲ್ಲ ಜನರನೂ ಹೋಗಿ ಕರೆದು ಬಾರೆ
ಈ ದೊಡ್ಡ ಉತ್ಸವಕೆ ಕರೆದು ತಾರೆ
ಬಡವರನು ಕುರುಡರನು
ಗತಿಗೆಟ್ಟ ಜನರನ್ನು
ಹೆಳವರನು ಕುಂಟರನು
ಪಾಪಿ ದರಿದ್ರರನು
ಕುರುಡರನು ಕರೆತನ್ನಿ ದೋಣಿಯಲ್ಲಿ
ಕುಂಟರನು ಕರೆತನ್ನಿ ಕುದುರೆಮೇಲೆ
ಹೆಳವರನು ಕರೆತನ್ನಿ ಹಿಮಗಾಡಿಯಲ್ಲಿ
ಪೊಹ್ಜಾದವರನ್ನೆಲ್ಲ ಕರೆದು ಬನ್ನಿ
ಕಲೆವಾ ಜನರನ್ನೂ ಕರೆದು ಬನ್ನಿ

ವೆಯ್ನಾಮೊಯ್ನನ್ ಅವನು ಬಲುದೊಡ್ಡ ಚಾರಣನು
ಬರುವಂತೆ ಹೇಳಿ ಅವನಿಗೂ ಮಾತು
ಕರೆಯಬೇಡಿರಿ ಮಾತ್ರ ಆಹ್ತಿಯನ್ನು
ಸರಿಲಿಯಾ ನಾಡಿನ ಲೆಮಿನ್ಕಾಯ್ನನನ್ನು

ಎಲ್ಲರಿಗೂ ಸಣ್ಣವಳು ಹೆಣ್ಣಾಳು ಕೇಳಿದಳು
ಕರೆಯಬಾರದು ಏಕೆ ಲೆಮಿನ್ಕಾಯ್ನನನನ್ನು
ಅವನನ್ನು ಮಾತ್ರ ಸರಿಲಿಯಾದವನನ್ನು

ಪೊಹ್ಜಾದ ಒಡತಿ ಹೇಳಿದಳು ಹೀಗೆ
ಕರೆಯಬೇಡಿರಿ ಅವನ ಯಾಕೆಂದು ಕೇಳಿದರೆ
ಜಗಳಕ್ಕೆ ಸದಾ ಕಾದಿರುವನವನು
ಗುದ್ದಾಡಲು ಸದಾ ಸಿದ್ದನವನು
ತರಲೆ ತೆಗೆಯುವನು ಏನಾದರೊಂದು
ಎಬ್ಬಿಸುವ ಹಗರಣ ಏನಾದರೊಂದು
ಮಾನಿನಿಯರ ಮಾನ ಕಳೆಯುವನು ಅವನು
ಸಿಂಗಾರವಾಗಿ ಸಂಭ್ರಮದಲಿ ಬರುವ
ಚೆಂದುಳ್ಳಿ ಚೆಲುವೆಯರ ಮಾನ ಕಳೆಯುವನು

ಎಲ್ಲರಿಗೂ ಸಣ್ಣವಳು ಹೆಣ್ಣಾಳು ಕೇಳಿದಳು
ಯಾರೆಂದು ಅವನು ನಾ ಹೇಗೆ ತಿಳಿಯಲಿ
ತಿಳಿಯದೇ ಹೇಗೆ ಕರೆಯದೇ ಇರಲಿ
ಎಲ್ಲಿರುವನೊ ಅವನು ಮನೆಯಾವುದೊ ಎಂದು ಗೊತ್ತಿಲ್ಲವಲ್ಲ

ಪೊಹ್ಜೊಲಾ ಒಡತಿ ಹೇಳಿದಳು :
ಬಲು ಸುಲಭ ಅವನನ್ನು ಪತ್ತೆ ಮಾಡುವುದು
ಅವನ ಮನೆ ಇರುವುದು ನಡುಗಡ್ಡೆಯಲ್ಲಿ
ನೀರು ಅಗಲಕ್ಕೆ ಚಾಚಿಕೊಂಡಿರುವಲ್ಲಿ
ಕವುಕೋದ ಚಾಚು ನೆಲ ತಿರುವಿನಲ್ಲಿ

ಎಲ್ಲರಿಗೂ ಸಣ್ಣವಳು ಅವಳು ಹೆಣ್ಣಾಳು
ಹಣಕೊಟ್ಟು ತಂದಂಥ ಜೀತದಾಳು
ಕರೆದು ಬಂದಳು ಜನರ ಆರು ದಿಕ್ಕಿಂದ
ತಲುಪಿಸಿದಳು ಸುದ್ದಿ ಎಂಟು ದಿಕ್ಕಿನ ಜನಕೆ

ಕರೆದು ಬಂದಳು ಎಲ್ಲ ಪೊಹ್ಜಾದ ಜನರನ್ನು
ಕರೆದು ಬಂದಳು ಎಲ್ಲ ಕಲೇವಾದವರನ್ನು
ಜೋಪಡಿಯ ಜನರನ್ನು ಚಿಂದಿ ಉಟ್ಟವರನ್ನು
ಅವನನ್ನು ಮಾತ್ರ ಕರೆಯಲಿಲ್ಲ ಅಹ್ತಿ ಎಂಬ ತರುಣ ಅವನನ್ನು.

೧೩. ಪೊಹ್ಜೊಲಾದಲ್ಲಿ ಮದುವೆ ಔತಣ

ಮದುವಣಿಗನನ್ನು ಅವನ ಪರಿವಾರದವರನ್ನೂ ಪೊಹ್ಜೊಲಾಗೆ ಬರಮಾಡಿಕೊಳ್ಳುತ್ತಾರೆ. ಅತಿಥಿಗಳಿಗೆ ಸಮೃದ್ಧ ಭೋಜನ ಪಾನೀಯಗಳ ಆತಿಥ್ಯ ನೀಡುತ್ತಾರೆ. ವೆಯ್ನಾಮೊಯ್ನನ್ ಮದುವೆ ಮನೆಯವರನ್ನು ಹೊಗಳಿ ಶುಭ ಹಾರೈಸಿ ಹಾಡುತ್ತಾನೆ.

....

....

ಪೊಹ್ಜೊಲಾ ಒಡತಿ
ಅತಿಥಿಗಳ ಸತ್ಕರಿಸಿದಳು
ಸಿರಿವಂತ ರೀತಿಯಲಿ
ಅತಿ ಒಳ್ಳೆ ಬೆಣ್ಣೆ ಕೆನೆಯ ಸಿಹಿ ರೊಟ್ಟಿ
ಬಗೆಬಗೆಯ ಮೀನು ಹಂದಿ ಬಾಡು
ತುಂಬಿ ತುಳುಕಿದ ಭಕ್ಷ್ಯ ತಟ್ಟೆಯಲ್ಲಿ

ಹೆಣ್ಣಾಳ ಕರೆದು ಒಡತಿ ಹೇಳಿದಳು
ಎರಡು ಹಿಡಿಕೆಯ ಜಾಡಿ
ಸುರೆ ತುಂಬಿ ತರಲು
ಬಂದಂಥ ಅತಿಥಿಗಳಿಗೆ, ಮದುವಣಿಗನಾದವಗೆ

ಹೆಣ್ಣಾಳು ತಂದಳು
ಐದೈದು ಬಳೆಕಟ್ಟು ಪೀಪಾಯಿ ಮದ್ಯ
ಮುಳುಗಿ ನೊರೆಯಲ್ಲಿ ಬಿಳಿಯಾದವು ಗಡ್ಡ
ಬಿಳಿಯಾದವು ಎಲ್ಲ ಅತಿಥಿಗಳ ಗಡ್ಡ
ಅದರಲ್ಲಿಯೂ ಹೆಚ್ಚಾಗಿ ಮದುಮಗನ ಗಡ್ಡ

ಏಲ್ ಮದ್ಯದ ಬಗ್ಗೆ ಏನು ಹೇಳುವುದು
ಅಂತೂ ಅದು ಕೈಗಳನು ಸೇರಿದಾಗ
ಗಾಯಕರಲ್ಲಿ ಶ್ರೇಷ್ಠ ವೆಯ್ನಾಮೊಯ್ನನ್
ಸುರೆ ಅವನ ಕೈಗೆ ಸೇರಿದಾಗ

ಮೊದಲಿಗನೂ ಅವನೆ ಹಿರಿಯನೂ ಅವನೆ
ಎಲ್ಲರನು ಮೀರಿದ ಸಂತಗಾಯಕನವನೆ

ಮಧುಬಟ್ಟಲನೆತ್ತಿದ ಹಿಡಿದೆತ್ತಿ ನುಡಿದ
ಓ ಮಧುವೆ ಓ ಮಧುರ ಪಾನೀಯವೆ
ಸುರೆ ಕುಡಿದ ಜನರಾರು ಮಂಕಾಗದಿರಲಿ
ದನಿ ಎತ್ತಿ ಜೋರಾಗಿ ಹಾಡುಗಳ ಹಾಡಲಿ
ದನಿ ಎತ್ತಿ ಹಾಡಲಿ ಸವಿಯ ಬಾಯ್ದೆರೆದು
ಮಹನೀಯ ಜನರೆಲ್ಲ ಅಚ್ಚರಿಯ ಪಡುವಂತೆ
ಮಹಿಳೆಯರು ತಲೆದೂಗಿ ಮೆಚ್ಚುವಂತೆ

ತಡೆಯುತ್ತವೆ ಹಾಡು ತಡವರಿಸುವ ನಾಲಗೆ
ಸುರೆಯು ಸರಿಯಾಗಿ ಆಗದಿರುವಾಗ
ಕುಡಿತಕ್ಕೆ ಕೆಟ್ಟ ಸುರೆ ನೀಡಿದಾಗ
ಹಾಡಲಾರರು ಆಗ ಚಾರಣಿಗ ಜನರು
ಒಳ್ಳೆ ಹಾಡುಗಳನೊಂದೂ ಹಾಡಲಾರರು
ಮೌನ ತಾಳುವರು ಅತಿಥಿ ಜನರೆಲ್ಲ
ಸುಮ್ಮನಾಗುವುವು ಕೋಗಿಲೆಗಳೆಲ್ಲ

ಈಗ ಹಾಡುವವರಾರು ಈ ಮದುವೆ ಉತ್ಸವದಿ
ಪೊಹ್ಜೋಲಾ ಮನೆಯ ಪಾನೋತ್ಸವ ಸಂಭ್ರಮದಿ
ಗಾಯಕರಲಿ ಮೊದಲಿಗನೂ ಅವನೆ ಹಿರಿಯನೂ ಅವನೆ
ಎಲ್ಲರನು ಮೀರಿದ ಸಂತನೂ ಅವನೆ

ಓ ಮಧುವೆ ಮಧುರ ಪಾನೀಯವೆ
ನಿನ್ನ ಕುಡಿದ ಜನ ಮಂಕಾಗದಿರಲಿ
ಜೋರು ದನಿಯಲ್ಲಿ ಹಾಡುತಿರಲಿ
ಒಡೆಯರು ಬೆರಗಾಗುವಂತೆ
ಮಹಿಳೆಯರು ತಲೆದೂಗುವಂತೆ
ಯಾಕೋ ಆಗಲೇ ಹಾಡು ತಡವರಿಸುತ್ತಿವೆ
ಹಾಡು ಹೇಳುವ ನಾಲಗೆ ಮೌನ ತಾಳಿವೆ
ಕೆಟ್ಟ ಮಧು ಕೊಟ್ಟಾಗ
ಹಾಡಲಾರರು ಗಾಯಕರು
ಹೊರ ಬರುವುದಿಲ್ಲ ಒಳ್ಳೆ ಹಾಡು

ಸುಮ್ಮನಿರುವಿರೇಕೆ ಅತಿಥಿ ಜನರು
ಯಾರು ಹಾಡುವಿರೀಗ ಈ ಸಮಾರಂಭದಲಿ

ಕೂರು ಮಣೆ ಹಾಡದು ಜನ ಕೂರದಿದ್ದರೆ
ನೆಲ ಸದ್ದು ಮಾಡದು ಜನ ನಡೆಯದಿದ್ದರೆ
ಕಿಟಕಿ ಸದ್ದಾಗದು ಒಡೆಯ ಬಳಿ ನಿಲ್ಲದಿರೆ
ಮೇಜು ಸದ್ದಾಗದು ಸುತ್ತ ಜನ ಇಲ್ಲದಿರೆ

ಮಗುವೊಂದು ಕುಳಿತಿತ್ತು ನೆಲದ ಮೇಲೆ
ಹಾಲುಗಲ್ಲದ ಹಸುಳೆ ಒಲೆಯ ಬಳಿ ಇತ್ತು
ಅಲ್ಲಿಂದಲೇ ಹೇಳಿತು ಆ ಕೂಸು ಹೀಗೆ
ವಯಸಿನಲಿ ದೊಡ್ಡವನು ನಾನಲ್ಲ ನೋಡಿ
ಈ ದೇಹ ಇನ್ನೂ ಬೆಳೆದಿಲ್ಲ ನೋಡಿ

ಹಾಡದಿದ್ದರೆ ಹಾಡು ಬೇರೆ ದೊಡ್ಡವರು
ದಪ್ಪಗಿನ ಜನರು ತುಂಬುಗೆನ್ನೆಯ ಜನರು
ನಾನೆ ಹಾಡುವೆನು ಸಣ್ಣದಿದ್ದರೂ ದೇಹ
ಹಾಡುವೆನು ನಾನು ಸಣ್ಣ ಕಂಠದಲ್ಲೆ
ಹಾಡುವೆನು ಈ ಸಭೆಯ ಉಲ್ಲಾಸಕಾಗಿ
ಹಾಡುವೆನು ಈ ದಿನದ ಗೌರವಕ್ಕಾಗಿ

ಒಲೆಯ ಬಳಿ ಇದ್ದ ವಯಸ್ಸಾದ ಮುದುಕ
ಅವನು ಹೇಳಿದ ಹೀಗೆ
ಮಕ್ಕಳ ಹಾಡೀಗ ಸೂಕ್ತವಲ್ಲ
ಕೀರ್ತನೆಗಳು ಕೂಸಿಗೆ ಶಕ್ಯವಲ್ಲ
ಮಕ್ಕಳ ಹಾಡೆಲ್ಲ ಬರಿ ಸುಳ್ಳು ಪೊಳ್ಳು
ಬಾಲಿಕೆಯರ ಹಾಡುಗಳು ಬುದ್ಧಿ ಜೊಳ್ಳು
ಜ್ಞಾನಿಗಳು ಹಾಡಲಿ ಹಾಡು ನಮಗಾಗಿ
ಮೇಲೆ ಕುಳಿತಂಥವರು ಹಾಡಲಿ ನಮಗಾಗಿ

ಹಿರಿಯ ವೆಯ್ನಾಮೊಯ್ನನ್ ನುಡಿದ :
ಯಾರಾದರೂ ಇರುವರೆ ತರುಣ ಜನರು
ಕೈಗೆ ಕೈ ಬೆಸೆದು
ಕರಗಳಿಗೆ ಕರಬೆಸೆದು
ಹಿಂದಕ್ಕೂ ಮುಂದಕ್ಕೂ ತೂಗುತ್ತ ಮೆಲ್ಲಗೆ
ಹಾಡುತ್ತ ಸಂತೋಷ ತರುವಂಥ ಜನರು
ಈ ದಿನದ ಸಂತಸವ ಹೆಚ್ಚಿಸುವವರು
ಈ ಸಂಜೆ ಸಾರ್ಥಕ ಎನಿಸುವವರು

ಒಲೆ ಬಳಿಯ ಮುದುಕ ಹೀಗೆಂದು ನುಡಿದ :
ಇಲ್ಲ ನಮ್ಮಲ್ಲಿ ಯಾರೂ ಕೇಳಿಲ್ಲ
ಇಲ್ಲ ಕೇಳಿಲ್ಲ ಇಲ್ಲ ನೋಡಿಲ್ಲ
ಇಷ್ಟು ಕಾಲದಲಿ ಹಿಂದೆ ಎಂದೆಂದೂ ಇಲ್ಲ
ನನ್ನಂತೆ ಹಾಡುವರು ಇರಲಿಲ್ಲ ಯಾರೂ

ಹಾಡುತಿದ್ದೆನು ನಾನು ಎಳೆ ಹುಡುಗನಾಗಿ
ಕಾಡಲ್ಲಿ ಮೇಡಲ್ಲಿ ಕೊಳದ ಬಳಿಯಲ್ಲಿ
ಹಾಡುತಿದ್ದೆನು ನಾನು ದನಿ ಎತ್ತಿ ಜೋರಾಗಿ
ಕಾಡು ಬಯಲೆಲ್ಲ ಮರುದನಿಸುವಂತೆ

ಹಾಡುತಿದ್ದೆನು ಆಗ ತಾರಕದ ಸ್ವರದಲ್ಲಿ
ನನ್ನ ದನಿ ಆಗ ಮಧುರವಾಗಿತ್ತು
ಹರಿವ ನದಿಯಂತೆ ತೊರೆಯ ಜುಳಜುಳದಂತೆ
ಹಿಮ ಬೂಟು ಹಿಮದಲ್ಲಿ ನಡೆದು ಹೋದಂತೆ
ಅಲೆ ಮೇಲೆ ನಾವೆ ತೇಲಿದಂತೆ

ಆ ಶಕ್ತಿ ಈಗಿಲ್ಲ ಹೇಗೆ ಹೋಯಿತೊ ಗೊತ್ತಿಲ್ಲ
ಕಂಠ ಜೋರಿಲ್ಲ ಮಧುರ ದನಿಯಿಲ್ಲ
ಈಗ ಹರಿಯದದು ನದಿಯ ನೀರಂತೆ
ಈಗ ಏಳದದು ಕಡಲ ಅಲೆಯಂತೆ

ತಡೆದು ಬಿಡುತ್ತದೆ ಕೂಳೆಯಲಿ ತಡೆದ ಹಲುಬೆ ಹಾಗೆ
ಪೈನ್ ಬೇರಿನಲಿ ತಡೆದ ಕೊಡಲಿ ಹಾಗೆ
ಉಸುಕಿನಲಿ ತಡೆದ ಹಿಮಬಂಡಿಯಂತೆ
ಕಲ್ಲು ಬಂಡೆಯಲಿ ದೋಣಿ ಸಿಕ್ಕಿಕೊಂಡಂತೆ

ಹಿರಿಯ ವೆಯ್ನಾಮೊಯ್ನನ್ ನುಡಿದ
ಬರದಿದ್ದರೆ ಜೊತೆಗೆ ಯಾವ ಚಾರಣರೂ
ನಾನೆ ಹಾಡುವೆನು ಸ್ತುತಿ ಗೀತೆಯನ್ನು
ಆರಂಭಿಸುವೆನೀಗ ಈ ಗಾನವನ್ನು
ಹುಟ್ಟಿರುವುದೇ ನಾನು ಹಾಡಲೆಂದು
ಜನಿಸಿರುವುದೇ ನಾನು ಗಾನಕೆಂದು
ಹೇಗೆಂದು ಯಾರನೂ ಕೇಳಲಿಲ್ಲ
ಯಾರಿಂದಲೂ ನಾನು ಕಲಿಯಲಿಲ್ಲ

ಹಿರಿಯ ವೆಯ್ನಾಮೊಯ್ನನ್ ಹಾಡಿಗಾಧಾರ
ಆರಂಭ ಮಾಡಿದ ಪ್ರಿಯವಾದ ಕೆಲಸ
ಹಾಡುವುದೆ ಅವನ ಪಾಡಾದ ಕೆಲಸ
ದನಿ ತೆಗೆದು ಹಾಡಿದನು ಮಧುರಗಾನ
ತುಂಬು ಕಂಠದಿ ನುಡಿದ ಜ್ಞಾನ ವಚನ

ಹಿರಿಯ ವೆಯ್ನಾಮೊಯ್ನನ್ ಹಾಡಿಯೆ ಹಾಡಿದನು
ಒಂದಾದ ಮೇಲೊಂದು ಹಾಡಿಯೆ ಹಾಡಿದನು
ಒಂದು ಪದವೂ ಕೂಡ ಮರೆಯಲಿಲ್ಲ
ಅವನ ಹಾಡಿನ ಸರಕು ಬರಿದಾಗಲಿಲ್ಲ
ಮರೆಯಾಗಿರಬಹುದು ಶಿಲೆಯಲ್ಲಿ ಕಲ್ಲು
ಬರಿದಾಗಿರಬಹುದು ಕೊಳದಲ್ಲಿ ಹೂವು

ಹಾಡಿಯೇ ಹಾಡಿದನು ಸಂಜೆಯೆಲ್ಲ
ಹಾಡಿದನು ಅವನು ಜನರ ಸಂತೋಷಕ್ಕೆ
ಸ್ತ್ರೀಯರ ಮೊಗದಲ್ಲಿ ತುಂಬಿತಾನಂದ
ಪುರುಷರ ಮನದೊಳಗೆ ಏನೊ ಆಹ್ಲಾದ
ಎಲ್ಲರ ಮನದೊಳಗೂ ತುಂಬಿತ್ತು ಬೆರಗು
ಕೇಳುತ್ತ ಕೇಳುತ್ತ ಸೋಜಿಗದ ಹಾಡು

ವೆಯ್ನಾಮೊಯ್ನನ್ ನುಡಿದ ಮುಗಿಸುತ್ತ ಹಾಡು
ಇದೆ ನನ್ನ ಸಾಧನೆ ಹಾಡು ಗಾಯಕನಾಗಿ
ಇದೆ ನನ್ನ ಸಾಧನೆ ಗಾರುಡಿಗನಾಗಿ
ಇದಕಿಂತ ಹೆಚ್ಚೇನೂ ಸಾಧಿಸೆನು ನಾನು
ಇದಕಿಂತ ಬೇರೇನೂ ನಾ ಮಾಡೆನು

ಆ ಸೃಷ್ಟಿಕರ್ತನೇ ಬಾಯ್ದೆರೆದು ನುಡಿದರೆ
ಸವಿಯಾದ ಬಾಯ್ದೆರೆದು ನುಡಿಗಳನು ನುಡಿದರೆ
ಹಾಡುವವನಾಗಿ ಗಾರುಡಿಗನಾಗಿ
ಅವನು ಕೂಡ ಮಾಡುವುದು ಇದನ್ನೆ
ಕಡಲು ಜೇನಾಗುವುದು ಹಾಡಿದರೆ ಅವನು
ಉಸುಕು ಕಾಳಾಗುವುದು ಹಾಡಿದರೆ ಅವನು
ಮೊಳಕೆ ಬರುವುದು ಮಳಲು ಹಾಡಿದರೆ ಅವನು
ಲವಣವಾಗುವುದು ಮಣ್ಣು ಹಾಡಿದರೆ ಅವನು

ಗೊಡ್ಡು ಅಡವಿಯಲಿ ಪೈರು ಬೆಳೆಯಾಗುವುದು
ಗೋಧಿ ಹೊಲವಾಗುವುದು ಬಂಜರಿನ ಬಯಲು
ಪರ್ವತಗಳಾಗುವುವು ಸಿಹಿಯ ಮೆದು ರೊಟ್ಟಿ
ಗಟ್ಟಿ ಶಿಲೆಯಾಗುವುದು ಕೋಳಿಗಳ ತತ್ತಿ

ಅವನು ಗಾಯಕನು ಅವನು ಮಾಂತ್ರಿಕನು
ಅವನು ನುಡಿದಾಗ ಅಪ್ಪಣೆಯ ಕೊಟ್ಟಾಗ
ದನಕರು ಸಮೃದ್ಧಿ ಕೊಟ್ಟಿಗೆಯ ತುಂಬ
ಹೂವು ಗಿಡ ಅರಳುವುದು ಕಾಲ್ದಾರಿ ತುಂಬ
ಬಯಲಲ್ಲಿ ನೂರಾರು ಕೊಂಬು ದನ ಆಕಳು
ತುಂಬು ಕೆಚ್ಚಲ ಹಸು ಸಾವಿರಾರು

ಗಾಯಕನು ಅವನು ಗಾರುಡಿಗನವನು
ಅವನು ನುಡಿಯುವನು ಅಪ್ಪಣೆಯ ಕೊಡುವನು
ಉಪಚರಿಸಿದ ಒಡೆಯನಿಗೆ ತುಪ್ಪಳದ ಕೋಟು
ಉಪಚರಿಸಿದ ಒಡತಿಗೆ ಚೆಂದ ಬಟ್ಟೆಗಳು
ಹೆಣ್ಣು ಮಕ್ಕಳಿಗೆಲ್ಲ ಬಣ್ಣ ಕಸೂತಿಯ ಬೂಟು
ಗಂಡು ಮಕ್ಕಳಿಗೆಲ್ಲ ದಿವಿನಾದ ಅಂಗಿ

ಜುಮಾಲನೆ ದೇವ ಇನ್ನಷ್ಟು ಹರಸು
ನಮ್ಮ ಸುತ್ತಲಿನ ಈ ಜನರನೆಲ್ಲ
ಏಲ್ ಮದ್ಯ ಹರಿಯಲಿ ತೊರೆಯಾಗಿ ನದಿಯಾಗಿ
ಉಕ್ಕುಕ್ಕಿ ಹರಿಯಲಿ ಸುರೆಯು ನೆರೆಯಾಗಿ
ಈ ಮನೆಯಲ್ಲಿ ಪೊಹ್ಜೊಲಾದಲ್ಲಿ
ಹಗಲೆಲ್ಲ ನಾವು ಹಾಡುತಿರುವಂತೆ
ಸಂಜೆ ಎಲ್ಲ ನಲಿದಾಡುತಿರುವಂತೆ
ಈ ಮನೆಯ ಒಡೆಯ ಬದುಕಿರುವ ತನಕ
ಈ ಮನೆಯ ಒಡತಿ ಬದುಕಿರುವ ತನಕ

ನಿನ್ನ ಹರಕೆಯು ಇರಲಿ ಇವರ ಮೇಲೆ
ಮೇಜಿನ ಬಳಿ ಇರುವ ಈ ಒಡೆಯನ ಮೇಲೆ
ಉಗ್ರಾಣದ ಬಳಿ ಇರುವ ಒಡತಿ ಮೇಲೆ

ಗಂಡು ಮಕ್ಕಳ ಹರಸು ಬಲೆ ಹಾಕುವಾಗ
ಹೆಣ್ಣು ಮಕ್ಕಳ ಹರಸು ನೇಯುವಾಗ
ಯಾವ ಕಷ್ಟವೂ ಬರದಿರಲಿ ಮುಂದೆ
ಕಾಡದಿರಲೆಂದು ಯಾವ ದುಃಖ
ಈ ಔತಣದ ಕೂಟ ಮುಗಿದ ಮೇಲೆ
ಈ ಮನೆಯ ಪಾನೋತ್ಸವ ಮುಗಿದ ಮೇಲೆ.

೧೪. ಮದುಮಗಳ ಶೋಕ

ಪಾನೋತ್ಸವ ಮುಗಿಯಿತು
ಪೊಹ್ವಾದ ಸಡಗರ
ಪೊಹ್ವೊಲಾ ಒಡತಿ ಕೇಳಿದಳು ಮದುಮಗನಿಗೆ
ಉಚ್ಛ ಕುಲದವನೆ ನಾಡ ಹೆಮ್ಮೆಯ ವೀರ
ಎಲ್ಲಿ ನೆಲೆಸುವೆ ನೀನು
ತಂದೆ ಇರುವಲ್ಲಿಯೋ ತಾಯಿ ಇರುವಲ್ಲಿಯೋ
ನಮ್ಮ ಮನೆಯೊಳಗಿದ್ದು ನಮ್ಮ ಮನೆ ಬೆಳಗುವಿಯೊ

ತಂದೆ ಬಳಿ ಬೇಡ ತಾಯ ಬಳಿ ಬೇಡ
ನಮ್ಮ ಗೌರವಕಾಗಿ ನಮ್ಮ ಮನೆ ಬೇಡ
ನೆಲಸಬೇಕಿದೆ ಇಲ್ಲಿ ಈ ಹೆಣ್ಣ ಸಂತಸಕೆ
ಇಷ್ಟು ದಿನ ಬಯಸಿ ಪಡೆದಂಥ ಚೆಲುವೆಗೆ
ಬಿಚ್ಚು ಕೂದಲಿನ ಈ ಸೊಬಗಿಗಾಗಿ

ಮದುಮಗನೆ ನನ್ನ ಪ್ರಿಯನಾದ ಸೋದರನೆ
ತಾಳೊಂದು ವಾರ ಇನ್ನೊಂದು ವಾರ
ನಿನ್ನ ಮನದನ್ನೆ ಇನ್ನೂ ಸಿದ್ಧವಾಗಿಲ್ಲ
ಮುಗಿದಿಲ್ಲವಿನ್ನೂ ಅವಳ ಸಿಂಗಾರ

ಹೆಣೆದಿದೆ ಒಂದು ಜಡೆ ಹೆಣೆದಿಲ್ಲ ಇನ್ನೊಂದು
ಮದುಮಗನೆ ನನ್ನ ಪ್ರಿಯನಾದ ಸೋದರನೆ
ತಾಳೊಂದು ವಾರ ಇನ್ನೊಂದು ವಾರ
ನಿನ್ನ ಮನದನ್ನೆ ಇನ್ನೂ ಸಿದ್ಧವಾಗಿಲ್ಲ
ಮುಗಿದಿಲ್ಲವಿನ್ನೂ ಅವಳ ಸಿಂಗಾರ

ತೊಟ್ಟಿರುವಳೊಂದು ಕುಪ್ಪಸದ ತೋಳು
ತೊಟ್ಟಿಲ್ಲವಿನ್ನೂ ಇನ್ನೊಂದು ತೋಳು
....
ತೊಟ್ಟಾಯಿತು ಬೂಟು ಒಂದು ಪಾದಕ್ಕೆ
ತೊಟ್ಟಿಲ್ಲವಿನ್ನೂ ಇನ್ನೊಂದು ಪಾದಕ್ಕೆ

ಮದುವಣಿಗನೆ ನನ್ನ ಪ್ರಿಯನಾದ ಸೋದರನೆ
ಸಾಕು ಕಾದಿರುವೆ ಬೇಸರಿಸದೆ ಬಹಳ

ಸಿಂಗಾರವಾದಳು ನಿನ್ನ ಮನದನ್ನೆ
ಸಿದ್ಧವಾಯಿತು ನಿನ್ನ ಪಾರಿವಾಳ

ಜಡೆ ಹೆಣೆದ ಮಗಳೇ ಹೋಗು ಮುಂದೆ
ಈಗ ಕೊಂಡಿಹ ಹಕ್ಕಿ ಹೋಗವನ ಹಿಂದೆ
ಸನಿಹವಾಗಿದೆ ನಿನಗೆ ಅವನ ಸೇರುವ ಕಾಲ
ಸನಿಹವಾಗಿದೆ ನಮ್ಮ ಬಿಟ್ಟು ಹೊರಡುವ ಕಾಲ

ಬಾಗಿಲಲ್ಲಿದ್ದಾನೆ ನಿನ್ನ ಕರೆದೊಯ್ಯುವನು
ಕೆನೆಯುತಿದೆ ಕುದುರೆ ಕಾಯುತಿದೆ ಬಂಡಿ
ನಿನಗಾಸೆಯಿತ್ತು ಅವನ ದುಡ್ಡಿನ ಮೇಲೆ
ಅವ ಕೊಡುವ ಹಾರ ಉಂಗುರದ ಮೇಲೆ
ಸಿದ್ಧವಾಗಿದೆ ಬಂಡಿ ನೀ ಬಯಸಿದಂತೆ
ಏರುವಾತುರ ನಿನಗೆ ಸೊಗಸಾದ ಬಂಡಿ
ಹೊರಟುಬಿಡು ಬೇಗ ಹೊಸ ಊರಿಗೆ

ಯೋಚಿಸಿರುವೆಯೇನು ಎಂದಾದರೂ
ಈಗಿನದು ಬಿಟ್ಟು ಮುಂದಿರುವುದನ್ನು
ಬರಿ ದುಃಖ ಬಾಳಲ್ಲಿ ಇನ್ನು ಮುಂದೆಲ್ಲ
ಕಣ್ಣೀರಿನಲ್ಲೆ ಇನ್ನು ಕಳೆಯಬೇಕಿದೆ ಕಾಲ
ಹೋಗುತಿಹೆ ತೊರೆದು ತಂದೆ ಮನೆಯನ್ನು ಹುಟ್ಟಿದೂರನ್ನು
ಹೋಗುತಿಹೆ ತೊರೆದು ತಾಯ ಮಡಿಲನ್ನು

ಎಷ್ಟು ಸುಖವಾಗಿದ್ದೆ ತಂದೆ ಮನೆಯಲ್ಲಿ
ಹಾದಿಬದಿ ಹೂವಂತೆ ಪೊದರು ಮೆಳೆ ಹಣ್ಣಂತೆ
ನಿದ್ದೆ ಬಿಟ್ಟೇಳುತಲೆ ಕೆನೆ ತುಂಬಿದ ಹಾಲು
ಹೊಸ ಬೆಣ್ಣೆ ರೊಟ್ಟಿಗಳು
ಬೇಡವೆಂದರೆ ಬೆಣ್ಣೆ ಹಂದಿ ಬಾಡುಗಳು
ಬೇಕೆಂದುದೆಲ್ಲ ಇತ್ತು ನಿನಗಾಗಿ

ಕಷ್ಟವೇನೆಂದು ಅರಿಯದವಳು
ಯಾವ ಚಿಂತೆಯೂ ಎಂದೂ ಕಾಡದವಳು
ಚಿಂತೆಗಳನೊಯ್ದು ಎಸೆದಿದ್ದೆ ಕಾಡಿಗೆ
ಮುಂದಿನ ಯೋಚನೆ ಜವುಗು ಮರಗಳಿಗೆ

ಎಳೆಯ ಎಲೆಯಂತೆ ನಲಿದಾಡುತಿದ್ದೆ
ಚಿಟ್ಟೆಯಂತೆಯೆ ನಲಿದು ಹಾರಾಡುತಿದ್ದೆ
ಮನೆಯ ಅಂಗಳದ ಹಣ್ಣಿನಂತಿದ್ದೆ
ಬಯಲಲ್ಲಿ ಕೆಂಪು ಹಣ್ಣಿನಂತಿದ್ದೆ
ಬಿಟ್ಟು ಹೊರಟಿರುವೆ ಬೇರೊಂದು ಮನೆಗೆ
ಇನ್ನೊಬ್ಬ ತಾಯವಳ ಕೈಯ ಕೆಳಗೆ
ಏನೂ ಗೊತ್ತಿಲ್ಲದ ಇನ್ನೊಂದು ಮನೆಗೆ

ಈ ಮನೆಯೆ ಬೇರೆ ಆ ಮನೆಯೆ ಬೇರೆ
ಅಲ್ಲಿ ಹೊರಡುವ ನಾದಗಳೆ ಬೇರೆ
ಆ ಮನೆಯ ಬಾಗಿಲಿನ ಸದ್ದುಗಳೆ ಬೇರೆ
ಕಿರುಗುಡುವ ಕೀಲುಗಳ ದನಿಗಳೇ ಬೇರೆ
ಆ ಮನೆಯ ಬಾಗಿಲನು ಮೊದಲು ಕಂಡಿಲ್ಲ
ಆ ರೀತಿ ನೀತಿಗಳ ಅರಿವು ನಿನಗಿಲ್ಲ
ಮನೆಯ ಮಗಳಂತಲ್ಲ ಅಲ್ಲಿ ನೀನು
ಅವರು ಮೆಚ್ಚುವ ರೀತಿ ಒಲೆ ಊದಲಾರೆ
ಅವರು ಮೆಚ್ಚುವ ರೀತಿ ಒಲೆ ಉರಿಸಲಾರೆ

ಅಂದುಕೊಂಡಿಹೆ ಏನು ಒಂದು ರಾತ್ರಿಯದಷ್ಟೆ
ಬೆಳಗಾಗಿ ಮತ್ತೆ ಹಿಂತಿರುಗುವೆನೆಂದು
ಚೆನ್ನಾಗಿ ತಿಳಿದುಕೊ ಒಂದಲ್ಲ ಎರಡಲ್ಲ
ಬಹು ದೀರ್ಘಕಾಲ
ದಿನಗಟ್ಟಲೆ ತಿಂಗಳು ವರ್ಷಕಾಲ

ಬಿಟ್ಟು ಹೋಗುವೆ ನಿನ್ನ ತಾಯಿಯನ್ನು
ತೊರೆದು ಹೋಗುವೆ ನಿನ್ನ ತಂದೆಯನ್ನು
ಮತ್ತೆ ನೀ ಬಂದಾಗ ನೀನಿದ್ದ ಮನೆಗೆ
ಬೆಳೆದಿರುವುದು ಅಂಗಳ ಉದ್ದವಾಗಿ
ಬೆಳೆದಿರುವುದು ಹೊಸ್ತಿಲು ಎತ್ತರಕ್ಕೆ

ದಿಕ್ಕು ತೋಚದೆ ಹುಡುಗಿ ನಿಟ್ಟುಸಿರು ಬಿಟ್ಟಳು
ವೇದನೆಯು ತುಂಬಿ ಹೃದಯದಲ್ಲಿ
ಕಂಬನಿಯು ನಿಂತಿತ್ತು ಕಣ್ಣಿನಲ್ಲಿ
ಹೀಗೆ ಹೇಳಿದಳು ಶೋಕ ಮಾಡುತ್ತ

ನಾನಂದುಕೊಂಡಿದ್ದೆ ಇದುವರೆಗೆ ಹೀಗೆ
ಇದುವರೆಗೆ ನಾನು ಹೀಗೆಂದುಕೊಂಡಿದ್ದೆ
ಈ ಮಾತನೇ ನಾನು ಹೇಳುತಿದ್ದೆ
ಹೆಣ್ಣು ಹೆಣ್ಣಾಗಳು ತಾಯ್ತಂದೆ ಮಡಿಲಲ್ಲಿ
ತಂದೆ ಮನೆಯಲ್ಲಿ ತಾಯ ಮಡಿಲಲ್ಲಿ
ಹೆಣ್ಣು ಹೆಣ್ಣಾಗುವಳು ಪತಿಯ ಗೃಹದಲ್ಲಿ
ಇಟ್ಟಾಗ ಕಾಲು ಅವನ ಮನೆ ಹೊಸ್ತಿಲಲಿ
ಆಗಷ್ಟೆ ಅವಳು ತಲೆ ಎತ್ತಬಹುದು
ಹೆಮ್ಮೆಯಲಿ ಬೀಗಿ ನಡೆಯಬಹುದು

ಇದನೆ ಬಯಸಿದ್ದೆ ಬದುಕಿನುದ್ದಕ್ಕೂ
ಇದೆ ಆಸೆ ತುಂಬಿತ್ತು ಹರಯದುದ್ದಕ್ಕೂ
ಇಡಿ ವರ್ಷ ಕಾದಿದ್ದೆ ಬೆಚ್ಚನೆಯ ದಿನಕೆ
ಪೂರೈಸಿದೆ ಈಗ ನನ್ನ ಆಸೆ
ಸನಿಹವಾಗಿದೆ ಸಮಯ
ಬಿಟ್ಟು ಹೊರಡುವುದಕ್ಕೆ
ಒಂದು ಕಾಲಿದೆ ಈ ಹೊಸ್ತಿಲ ಮೇಲೆ
ಇನ್ನೊಂದು ಪತಿಯ ಬಂಡಿಯಲ್ಲಿ
ಆದರೆ ಗೊತ್ತಾಗುತಿಲ್ಲ ಸರಿಯಾಗಿ
ಬದಲಿಸಿತೊ ನನ್ನ ಮನ
ಸಂತೋಷವಿದೆಯೆ ನಾನು ಹೋಗುವಾಗ
ಚಿನ್ನದಂತಹ ಈ ತವರಿನಿಂದ
ಕೂಸಾಗಿ ಬೆಳೆದು ಹರಯದಲಿ ನಲಿದ
ಈ ತವರಿಂದ ನಾನು ಹೋಗುವಾಗ

ಬಿಟ್ಟು ಹೋಗುತಿರುವೆ ಬಲು ದುಃಖದಿಂದ
ಮಾಗಿ ಕತ್ತಲಿನ ಇರುಳಲ್ಲಿ ಹೋದಂತೆ
ಜಾರುವ ಹಿಮದಲ್ಲಿ ನಡೆದು ಹೋದಂತ
ಗುರುತೊಂದೂ ಬಿಡದೆ ಹೆಜ್ಜೆ ಗುರುತಿರದೆ

ಬೇರೆ ವಧುಗಳಿಗೂ ಹೀಗೆಯೇ ಏನು
ಅನಿಸುವುದೆ ಅವರಿಗೂ ನನ್ನಂತೆಯೇ
ಬಚ್ಚಿಡುವರ ದುಃಖ ನನ್ನಂತೆಯೇ

ಕಾದಿಹುದು ಕಡುಕಷ್ಟ ಮುಂದೆ ನನಗೆ
ಹೃದಯವಾಗಿದೆ ಕಪ್ಪು ಇದ್ದಲಿನ ಹಾಗೆ
ಕಷ್ಟಗಳಿವೆ ಮುಂದೆ ಕಲ್ಲಿದ್ದಲ ಕಪ್ಪು

ಪುಣ್ಯವಂತರ ಮನಸಿಗೆ ಅನಿಸುವುದು ಹೀಗೆ
ವಸಂತದಲಿ ಮುಂಜಾವು ಮೂಡಿದಂತೆ
ಹರ್ಷ ತುಂಬಿದ ಮನಕೆ ಆನಿಸುವುದು ಹೀಗೆ
ಬೆಚ್ಚಗಿನ ಬಿಸಿಲ ಬೆಳಗಿನಂತೆ.
ಚಿಂತೆ ತುಂಬಿದ ನನಗೆ ಅನಿಸುತಿದೆ ಹೀಗೆ
ಅಲೆಯಿಲ್ಲದೆ ನಿಂತ ನೀರ ಹಾಗೆ
ಮೋಡಕವಿದ ಮಬ್ಬು ಬಾನಿನಂತೆ
ಮಾಗಿಯ ಮಂಕು ಇರುಳಿನಂತ
ಮಸುಕಾದ ಚಳಿಯ ಹಗಲಿನಂತೆ
ಇನ್ನೂ ಸರಿಯಾಗಿ ಹೇಳಬೇಕೆಂದರೆ
ಮಾಗಿಯ ಕಪ್ಪು ಇರುಳಿನಂತೆ

ಮೂಲೆಯೊಳಗಿದ್ದ ಮುದುಕಿ ಹೇಳಿದಳು
ನೋಡಿದೆಯಾ ಹುಡುಗಿ ತಾರುಣ್ಯದವಳೆ
ನಾನೇನು ಹೇಳಿದ್ದೆ ನೆನಪಿಲ್ಲವೇನು
ನೂರು ಸಲವಾದರೂ ಒತ್ತೊತ್ತಿ ಹೇಳಿದ್ದೆ
ಪತಿ ಸಿಕ್ಕನೆಂದು ಆನಂದ ಪಡಬೇಡ
ಪತಿಯ ಮಾತಿಗೆ ಮರುಳಾಗಬೇಡ
ಅವನ ನೋಟಕ್ಕೆ ಬಲಿಯಾಗಬೇಡ
ಪಾದಗಳ ಚೆಲುವಿಕೆಗೆ ಮನ ಸೋಲಬೇಡ

ಬಾಯಿ ನುಡಿದರೂ ಸಿಹಿಯಾದ ಮಾತು
ಸುಂದರವಿದ್ದರೂ ಅವನ ನೋಟ
ಹೊಂಚುತಿರುವುದು ಸಂಚು ಗಲ್ಲದಲ್ಲಿ
ನಾಶಮಾಡುವ ಬುದ್ಧಿ ಮನಸ್ಸಿನಲ್ಲಿ

ಅದಕೆಂದೇ ನಾನು ಬುದ್ಧಿ ಹೇಳಿದ್ದು
ನಿನ್ನಂಥ ಎಲ್ಲ ಹೆಣ್ಣುಗಳಿಗೆ
ಕೈ ಹಿಡಿಯ ಬಂದವರು ಕೀರ್ತಿವಂತರೆ ಇರಲಿ
ವೀರಾಧಿವೀರರು ಶೂರರೇ ಇರಲಿ

ನೀವು ಹೇಳಬೇಕಾದ ಮಾತು ಇಷ್ಟೆ
"ಒಪ್ಪಿಗೆ ಇಲ್ಲೆನಗೆ ಒಂದಿಷ್ಟು ಕೂಡ
ಸೊಸೆಯಾಗಿ ಬರಲು ತೊತ್ತಾಗಿ ಇರಲು
ಒಪ್ಪುವುದೆ ಚೆಲುವೆಗೆ ತೊತ್ತಿನಂತಹ ಬಾಳು
ಬರಲಾರೆ ಎಂದಿಗೂ ಇನ್ನೊಬ್ಬರ ಅಡಿಗಿರಲು
ಇನ್ನೊಂದು ಮಾತು ಆಡಿದರೆ ನೀನು
ನಾನೆರಡು ಮಾತು ಹೇಳುವೆನು ಕೇಳು
ಎಳೆದಾಡಿದರು ಸರಿಯೆ ತಲೆಗೂದಲ ಹಿಡಿದು
ಬಿಡಿಸಿ ಕೊಂಡೋಡುವೆ ನಿನ್ನನ್ನು ತೊರೆದು"

ಇಷ್ಟಾದರೂ ಹುಡುಗಿ ಕೇಳದಿದ್ದರೆ ಮಾತು
ತಿಳಿತಿಳಿದೂ ನೀನು ಬಿದ್ದಂತೆಯೇ ಬೆಂಕಿಗೆ
ನೀನಾಗಿಯೇ ಬಿದ್ದಂತೆ ಕುದಿವೆಣ್ಣೆಗೆ

ಹೋಗು ಕಾಯುತಿದೆ ನಿನಗಾಗಿ ಬಂಡಿ
ಹೋಗುತಿರುವೆಯ ನೀನು ಕುಟಿಲ ನರಿ ಬಂಡಿಗೆ
ಕರಡಿ ಅಪ್ಪುಗೆಗೆ
ಹೋಗುತಿರುವೆ ನೀನು ಎಂದೆಂದಿಗೂ ತೊತ್ತಾಗಿ
ನಿನ್ನ ಗಂಡನ ತಾಯ ಆಳು ತೊತ್ತಾಗಿ

ಹೋಗುತಿರುವೆ ತಿಳಿ ನೀನು ಮನೆಯಿಂದ ಶಾಲೆಗೆ
ತಂದೆ ಮನೆಯಿಂದ ಸಂಕಷ್ಟಗಳ ಕೂಪಕ್ಕೆ
ಸುಲಭವಲ್ಲ ನಿನಗೆ ಅಲ್ಲಿ ಬಲುಕಷ್ಟ ಕಲಿಕೆ
ಬರಿ ನೋವು ಯಾತನೆಯೇ ಇನ್ನೆಲ್ಲ ನಿನಗೆ
ತಂದಿರುವರಾಗಲೇ ಸಂಕೋಲೆ ಬೇಡಿ
ಯಾರಿಗೋ ಅಲ್ಲ ಎಲ್ಲ ನಿನಗಾಗಿ

ಬೇಗ ಗೊತ್ತಾಗುವುದು ಕಷ್ಟವೇನೆಂದು
ಯಾರಿಲ್ಲ ಅಲ್ಲಿ ನಿನ್ನ ರಕ್ಷಣೆಗೆ
ತಲೆಯಾಡಿಸುವ ಮಾವ ಬಸವನಂತೆ
ಅತ್ತೆಯ ನಾಲಗೆ ಬಿರುಗಾಳಿಯಂತೆ
ಮೈದುನರ ನುಡಿಗಳು ಕೊರೆವ ಹಿಮದಂತೆ
ನಾದುನಿಯ ನುಡಿಗಳು ಹಿಡಿ ಶಾಪದಂತೆ

ಕೇಳಿಕೋ ಹೆಣ್ಣೆ ನಾ ಹೇಳುವ ಮಾತು
ನೀನಿದ್ದೆ ಇಲ್ಲಿ ಹೂವಿನಂತೆ
ಹಡೆದಪ್ಪನ ಮನೆಯ ಆನಂದದಂತೆ
ಅಪ್ಪ ಕರೆಯುತ್ತಿದ್ದ ಹುಣ್ಣಿಮೆಯ ಹುಡುಗಿ
ಅವ್ವ ಅನುತಿದ್ದಳು ರವಿಯ ಬೆಳಕೆ
ಅಣ್ಣ ಅನುತಿದ್ದ ಹೊಳೆವ ನೀರೆ
ಅಕ್ಕ ಅನುತಿದ್ದಳು ನೀಲಿ ಬೆಡಗಿ

ಹೊರಟಿರುವೆ ಈಗ ಇನ್ನೊಂದು ಮನೆಗೆ
ಅಲ್ಲಿರುವಳಾರೋ ಗೊತ್ತಿರದ ತಾಯಿ
ಯಾವ ಹೆಣ್ಣೋ ಅವಳು ನಿನ್ನ ತಾಯಲ್ಲ
ಹೇಳಿಕೊಡುವುದಿಲ್ಲವಳು ತಿಳುವಳಿಕೆ ಮಾತು
ತಿಳಿಸಿಕೊಡುವುದಿಲ್ಲ ಸರಿಯಾವುದೆಂದು

ಮಾವ ಅನ್ನುವನು ತಲೆ ಇಲ್ಲದವಳೆ
ಅತ್ತೆ ಅನ್ನುವಳು ಹೊಲಸು ಹೆಣ್ಣೆ
ಮೈದುನನು ಕರೆವ ಮೆಟ್ಟುಗಲ್ಲೆ
ನಾದಿನಿಯು ಕರೆಯುವಳು ಕೊಳಕು ಪ್ರಾಣಿ

ಇದಕಿಂತ ಎಷ್ಟೊ ಚೆಂದವಿರುತಿತ್ತು
ಇಬ್ಬನಿಯ ಹಾಗೆ ಹೋಗಿದ್ದರೆ ಹರಡಿ
ಹೊಗೆಯಂತೆ ಮನೆಯಿಂದ ಹೋಗಿದ್ದರೆ ಹೊರಟು
ಎಲೆಯಂತೆ ಗಾಳಿಯಲಿ ಹೋಗಿದ್ದರೆ ತೂರಿ
ಕಿಡಿಯಂತೆ ದೂರ ಹೋಗಿದ್ದರೆ ಸಿಡಿದು

ಆದರೆ ನೀನಲ್ಲ ಹಕ್ಕಿ ಹಾರಲಾರೆ
ಎಲೆಯಲ್ಲ ಗಾಳಿಗೆ ತೂರಲಾರೆ
ಕಿಡಿಯಲ್ಲ ದೂರ ಸಿಡಿಯಲಾರೆ
ಹೊಗೆಯಲ್ಲ ಮೇಲೇರಿ ಹೋಗಲಾರೆ

ಒಂದು ದಿನದೊಳಗೆ ಎಷ್ಟು ಬದಲಾಗಿದೆ ನೋಡು
ಒಲುಮೆ ಅಪ್ಪನ ಬದಲು ಕೆಟ್ಟ ಮಾವ
ಮೆದು ಅಮ್ಮನ ಬದಲು ಒರಟು ಅತ್ತೆ
ಒಳ್ಳೆ ಅಣ್ಣನ ಬದಲು ಶತವಕ್ರ ಮೈದುನ

ಸಾಧು ಅಕ್ಕನ ಬದಲು ಕೊಂಕು ನುಡಿ ನಾದುನಿ
ಮೆದು ಹಾಸಿಗೆಗೆ ಬದಲು ಒಲೆಯ ಕಟ್ಟೆ
ತಿಳಿನೀರ ಬದಲು ರಾಡಿ ನೀರು
ಹೊಳೆವ ದಂಡೆಗೆ ಬದಲು
ಕೆಸರು ತಳದಾಳ
ಹುಲುಸು ಬಯಲಿಗೆ ಬದಲು ಬಂಜರು ಬೆಂಗಾಡು
ಹಣ್ಣು ಮರಗಳ ಬದಲು ಮೋಟು ಮರಪಾಳು

ತಿಳಿದಿರುವೆ ಏನು ಓ ತರುಣಿ ಹೆಣ್ಣೆ
ಚಿಂತೆ ಇನ್ನಿಲ್ಲ ಕಷ್ಟ ಇನ್ನಿಲ್ಲ
ಈ ಹಬ್ಬ ಸಡಗರ ಮುಗಿದ ಮೇಲಿನ್ನು
ಕಣ್ಮುಚ್ಚಿ ಹಾಯಾಗಿ ಮಲಗಬಹುದೆಂದು
ನಿದ್ದೆ ಮಾಡಲು ಬಿಡರು ಆರಾಮ ಕೊಡರು
ಇನ್ನೇನು ಉಳಿದಿಲ್ಲ ಕಣ್ಗಾವಲ ಬಿಟ್ಟು
ಇನ್ನೇನು ಉಳಿದಿಲ್ಲ ಕಷ್ಟಗಳ ಬಿಟ್ಟು

ಇಷ್ಟು ದಿನ ನೀನಿದ್ದೆ ಚಿಂತೆ ಒಂದಿಲ್ಲದೆ
ಜಡೆ ಹೆಣೆವಂತಿರಲಿಲ್ಲ
ಮುಖಕೆ ಮುಸುಕಿರಲಿಲ್ಲ
ಕಷ್ಟಗಳು ಬಂದವು ತಲೆ ಉಡುಗೆ ಜೊತೆಗೆ
ದುಃಖ ಕವಿದವು ಮುಖ ಮುಸುಕಿನೊಂದಿಗೆ
ಬರುವುದೆಲ್ಲವೂ ದುಃಖ ಮುಖ ಪರದೆ ಜೊತೆಗೆ
ಕೊನೆಯಿಲ್ಲದ ಕಷ್ಟ ಶಿರಭೂಷಣದೊಂದಿಗೆ

ಹೇಗಿರುವಳು ಹೆಣ್ಣು ತನ್ನ ಮನೆಯಲ್ಲಿ
ಅರಸನಿರುವಂತೆ ಭವ್ಯ ಅರಮನೆಯಲ್ಲಿ
ವ್ಯತ್ಯಾಸವಿಷ್ಟೆ ಕತ್ತಿಯೊಂದಿಲ್ಲ
ಹೇಗಿರುವಳು ಹೆಣ್ಣು ಮಡದಿಯಾಗಿ
ಖೈದಿಯಿರುವಂತೆ ರಷ್ಯಾ ದೇಶದಲ್ಲಿ
ವ್ಯತ್ಯಾಸವಿಷ್ಟೆ ಕಾವಲಿನವನಿಲ್ಲ

ಎಷ್ಟು ಯೋಚಿಸಿದರೂ ತಿಳಿಯುತಿಲ್ಲ
ಯಾಕಿಂಥ ಕಷ್ಟ ಹೆಣ್ಣು ಮಕ್ಕಳಿಗೆ
ತಾಯೊಲುಮೆ ಮಡಿಲಲ್ಲಿ ಸುಖದಲ್ಲಿದವರಿಗೆ

ಬಿಚ್ಚು ಗೂದಲ ಹರಡಿ ಗಾಳಿಯಲಿ ತೇಲುತ್ತ
ಬಳುಕಾಡಿ ನಲಿವಂಥ ಹೆಣ್ಣು ಮಕ್ಕಳಿಗೆ

ಅತ್ತು ಬಿಡು ಅತ್ತು ಬಿಡು ಅತ್ತು ಬಿಡು ಹೆಣ್ಣೆ
ಅಳುವಾಗ ಜೋರಾಗಿ ಅತ್ತು ಬಿಡು ಹೆಣ್ಣೆ
ಅತ್ತು ಬಿಡು ತುಂಬಲಿ ಕಣ್ಣೀರು ಬೊಗಸೆ
ಚೆಲ್ಲಿ ಬಿಡು ಕಂಬನಿಯ ತಂದೆ ಮನೆಯಲ್ಲೆ
ಕಣ್ಣೀರ ಕೊಳವಾಗಿ ಈ ಮನೆಯ ನೆಲದಲ್ಲೆ
ಕೋಣೆಗಳು ತುಂಬಲಿ ಉಕ್ಕುಕ್ಕಿ ಹರಿಯಲಿ
ಅಳದಿದ್ದರೆ ಈಗ ಪೂರ್ತಿಯಾಗಿ
ಮತ್ತಳುವೆ ನೋಡು ಮರಳಿ ಬಂದಾಗ
ಮತ್ತೆ ನೀ ಬಂದಾಗ ತಂದೆ ಮನೆಗೆ
ಮುದಿ ತಂದೆ ಸತ್ತಿರುವ ಮೀಯುವಾಗ
ಹೊಗೆ ಕೋಣೆಯಲ್ಲವನು ಉಸಿರುಗಟ್ಟಿ

ಅತ್ತು ಬಿಡು ಅತ್ತು ಬಿಡು ಅತ್ತು ಬಿಡು ಹೆಣ್ಣೆ
ಅಳುವಾಗ ಜೋರಾಗಿ ಅತ್ತು ಬಿಡು ಹೆಣ್ಣೆ
ಅಳದಿದ್ದರೆ ಈಗ ಪೂರ್ತಿಯಾಗಿ
ಮತ್ತಳುವೆ ನೋಡು ಮರಳಿ ಬಂದಾಗ
ಮತ್ತೆ ನೀ ಬಂದಾಗ ತಾಯಮನೆಗೆ
ತಾಯಿ ಸತ್ತಿರುವಳು ಹುಲ್ಲು ಹಾಕುವಾಗ
ದನದ ಕೊಟ್ಟಿಗೆಯಲ್ಲವಳು ಉಸಿರುಗಟ್ಟಿ

ಬಿಕ್ಕಳಿಸಿ ಬೋರಾಡಿ ಅತ್ತು ಬಿಟ್ಟಳು ಹುಡುಗಿ
ಉಕ್ಕಿ ಕಣ್ಣೀರು ಹರಿದು ಹೊಳೆಯಾಗಿ
ಒದ್ದೆಯಾಯಿತು ಮನೆ ಕಣ್ಣೀರಿನಲ್ಲಿ
ಕಣ್ಣೀರ ಕೊಳಗಳು ಅಂಗಳದ ನೆಲದಲ್ಲಿ
ಬಿಕ್ಕಳಿಸಿ ಅಳುತ್ತ ಹೇಳಿದಳು ಅವಳು
ಅಕ್ಕ ತಂಗಿಯರೆ ಒಡನಾಡಿ ಗೆಳತಿಯರ
ನಾನು ಹೇಳುವುದನ್ನು ಸ್ವಲ್ಪ ಕೇಳಿ
ತಿಳಿಯುತಿಲ್ಲ ನನಗೆ ಯಾಕಿಂಥ ದುಃಖ
ಯಾಕಿಂಥ ಕಷ್ಟ ಯಾಕಿಂಥ ನೋವು
ಯಾಕಿಂಥ ಕತ್ತಲೆ ನನ್ನ ಬದುಕಿಗೆ ಬಂತು
ಹೇಗ ಹೇಳಲಿ ನನ್ನ ದುಃಖ ಏನೆಂದು

ಅಂದುಕೊಂಡಿದ್ದೇ ಬೇರೆ ಊಹಿಸಿದ್ದೇ ಬೇರೆ
ಬದುಕಿನುದ್ದಕೂ ನಾನು ಬಯಸಿದ್ದೆ ಬೇರೆ
ಅಂದುಕೊಂಡಿದ್ದೆ ನಾನು ಇಂಥ ದಿನ ಬಂದಾಗ
ಕೋಕಿಲದಂತೆ ಹಾಡುತ್ತಾ ಹಾರಿ ಹೋಗುವೆನೆಂದು
ಬಯಸಿದಂತಹ ಕಾಲ ಬಂದಾಗ ಬಳಿಗೆ
ಹೋಗುತಿಲ್ಲ ನಾನು ಕೋಗಿಲೆಯ ಹಾಗೆ
ಹೋಗುತಿರುವೆನು ಈಗ ನಾನು ಹೀಗೆ
ಕೊರೆವ ನೀರಲ್ಲಿ ಈಜುತಿಹ ಹಕ್ಕಿ ಹಾಗೆ
ಮಂಜುಗಟ್ಟಿದ ನೀರಲ್ಲಿ ನಡುಗುತ್ತ ಹಕ್ಕಿ ಹಾಗೆ

ತಂದೆ ತಾಯಂದಿರೆ ನನ್ನ ಹೆತ್ತವರೆ
ಯಾಕೆ ತಳ್ಳುವಿರಿ ಇಂಥ ದುಃಖಕ್ಕೆ
ನನ್ನ ಹೆತ್ತವಳೇ ಹಾಲೂಡಿದವಳೇ
ಇಷ್ಟು ದಿನ ಸಾಕಿ ಬೆಳೆಸಿದವಳೆ
ನನ್ನ ಬದಲಿಗೆ ಒಂದು ಮೋಟು ಮರ
ನನ್ನ ಬದಲಿಗೆ ಒಂದು ಚೂರು ಕಲ್ಲಿಗೊ
ಸ್ನಾನ ಮಾಡಿಸಿ ಬಟ್ಟೆ ತೊಡಿಸಬಹುದಿತ್ತು
ಯಾಕೆ ಬೇಕಿತ್ತು ಇಂಥ ನೋವು
ಯಾಕೆ ಬೇಕಿತ್ತು ಇಂಥ ಶೋಕ

ಹೇಳುತ್ತಾರೆ ಜನರು ಬುದ್ಧಿವಾದ
ಮೂರ್ಖಳಂತೆ ಅಳಬೇಡ
ಏನೇನೋ ಯೋಚಿಸಿ ಕೊರಗಬೇಡ
ಆದರೆ ಹೇಳಲೇಬೇಡಿ ಈ ಮಾತು ನನಗೆ
ನನಗೆ ಗೊತ್ತಿದೆ ಮುಂದಿರುವ ಕಷ್ಟ
ಹೊಳೆಯಲೆಷ್ಟು ಕಲ್ಲೊ ಅದಕಿಂತ ಹೆಚ್ಚು
ಜವುಗಿನಲೆಷ್ಟು ಮರವೋ ಅದಕಿಂತ ಹೆಚ್ಚು

ನೆಲದ ಮೇಲಿದ್ದ ಮಗುವೊಂದು ಹಾಡಿತು
ಒಲೆಯ ಬಳಿಯಿದ್ದ ಮಗು ಹೀಗೆ ಹಾಡಿತು
ಅಳುತಿರುವೆ ಯಾಕೆ ಓ ಹೆಣ್ಣೆ ಹೀಗೆ
ಯಾಕಿಷ್ಟು ಶೋಕದಲಿ ಗೋಳಾಡುತಿರುವೆ
ಕಷ್ಟಗಳನೊಯ್ದು ತುರಗಕ್ಕೆ ಹಾಕು

ದುಃಖಗಳನೊಯ್ದು ಕುದುರೆ ಲಾಯಕ್ಕೆ
ದೂರುಗಳನೆಲ್ಲ ಕಬ್ಬಿಣದ ಬಾಯಿಗೆ
ನಿನ್ನ ಗೋಳುಗಳನೆಲ್ಲ ದಡ್ಡ ತಲೆಗಳಿಗೆ

ಕಾರಣವೆ ಇಲ್ಲ ಇಂಥ ದುಃಖಕ್ಕೆ
ಇಷ್ಟು ಗೋಳಾಡಿ ಶೋಕ ಮಾಡುವುದಕ್ಕೆ
ಅವರೇನು ನಿನ್ನ ತಳ್ಳಿಲ್ಲ ಹಳ್ಳಕ್ಕೆ
ತಳ್ಳಿಲ್ಲ ನಿನ್ನ ಕೆಸರು ಹಳ್ಳಕ್ಕೆ
ಇಲ್ಲಿನದು ಹಸನಾದ ಫಲವತ್ತು ಭೂಮಿ
ಅಲ್ಲಿನದು ಇದಕಿಂತ ಹೆಚ್ಚು ಹಸನು
ಇಲ್ಲಿನದು ಬಿಟ್ಟು ಅಲ್ಲಿ ಹೋದರೆ ನಿನಗೆ
ಅಲ್ಲಿಯೂ ಸಮೃದ್ಧ ಉಣಲುಡಲು ನಿನಗೆ

ಸ್ವಲ್ಪ ಕಣ್ಣೆತ್ತಿ ನೋಡು ನಿನ್ನ ಸುತ್ತ
ನಿಂತಿರುವ ಮದುಮಗ ನಿನ್ನ ರಕ್ಷಣೆಗೆ
ಒಳ್ಳೆಯವ ಅವನು ಒಳ್ಳೆಯವು ಕುದುರೆ
ಮನೆಯೊಳಗೆ ಸಮೃದ್ಧ ಬೇಕಾದುದೆಲ್ಲ
ಎಂಥ ಸೊಗಸಿದೆ ನೋಡು ಅವನ ಬಂಡಿ
ಹಾಡು ಹಕ್ಕಿಗಳು ಕೋಕಿಲಗಳಾರು
ಕುದುರೆಗಳ ಮೇಲೆ ನಲಿವ ಹಕ್ಕಿ ಏಳು

ಅಳಬೇಡ ಹೆಣ್ಣೆ ತಾಯ ಕಣ್ಮಣಿಯೆ
ಯಾವ ದುರ್ಗತಿಯು ಕಾದಿಲ್ಲ ನಿನಗೆ
ಎಂಥ ಅದೃಷ್ಟವಿದೆ ನೋಡು ನಿನಗೆ
ಒಳ್ಳೆ ಕೃಷಿಕ ಅವನ ತೋಳಿನಲ್ಲಿ
ಮೀನು ಹಿಡಿಯುವ ನಿಪುಣ ಅವನ ತೋಳಲ್ಲಿ
ಚಿಗರೆಗಳ ಅಟ್ಟಿ ಕರಡಿ ಬೇಟೆಯ ಮಾಡಿ
ಮಿಂದು ಬಂದವನ ಬೆಚ್ಚಗಿನ ಎದೆಯಲ್ಲಿ

ಎಲ್ಲರಿಗೂ ಮಿಗಿಲವನು ನಿನಗೆ ಸಿಕ್ಕವನು
ಎಂಥ ಶೂರನನು ಪಡೆದಿರುವೆ ನೀನು
ವಿಶ್ರಾಂತಿಯೆ ಇಲ್ಲ ಬಿಲ್ಲು ಬಾಣಕ್ಕೆ
ಬೇಟೆನಾಯಿಗಳೆಂದೂ ಮನೆಯ ಹೊರಗೆ

ಅವನೆ ಆದರ್ಶ ಅವನೂರ ಜನಕೆ
ಬರ್ಚ್ ಮರದ ಕಾಡಲ್ಲಿ ಮರಳು ಗುಡ್ಡಗಳಲ್ಲಿ
ಕಣಿವೆ ತಿಟ್ಟುಗಳಲ್ಲಿ ಎಲ್ಲಿ ನೋಡಿದರಲ್ಲಿ
ಅವನವೇ ಮಂದೆ

ಧಾನ್ಯ ಬೆಳೆಯುವುದಕೆ ಆ್ಯಲ್ಡರ್ ಕಾಡು
ಬಾರ್ಲಿ ಬೆಳೆಗಾಗಿ ಹುಲ್ಲು ಬಯಲು
ಓಟ್ಸ್ ಧಾನ್ಯ ಬೆಳೆಗೆ ಕಲ್ಲು ಭೂಮಿ
ಗೋಧಿ ಹೊಲಕೆ ತಕ್ಕ ತರಿಯ ಭೂಮಿ
ಕಾದಿಹುದು ಸಿರಿತನ ನಿನಗಾಗಿ ನೋಡು
ಕಲ್ಲು ಮರಳಿನ ಹಾಗೆ ಸಮೃದ್ಧ ದುಡ್ಡು.

೧೫. ಹಿತವಚನ ವಧುವಿಗೆ

ವಧುವಿಗೆ ಹಿತವಚನ ಯಾರು ಹೇಳುವರು
ಯಾರು ಕರ್ತವ್ಯ ತಿಳಿಸಿಕೊಡುವವರು
ಓಸ್ಮೊತಾರ್ ಎಂಬುವಳು ಹೆಸರಾದ ಹೆಣ್ಣು
ತಿಳಿಸಿಕೊಡುವಳು ಹೆಣ್ಣಿಗೆ ಅನುಭವದ ಮಾತು
ಹೇಳಿಕೊಡುವಳು ವಧುವಿಗೆ ವಿವೇಕದ ಮಾತು
ಗಂಡನ ಮನೆಯಲ್ಲಿ ಇರುವ ರೀತಿ
ಅತ್ತೆಗೆ ತಲೆಬಾಗಿ ನಡೆವ ರೀತಿ

ಮದುಮಗಳೆ ನನ್ನ ಒಡಹುಟ್ಟಿದಂಥವಳೆ
ಕಿವಿಗೊಟ್ಟು ಕೇಳು ನನ್ನ ಮಾತನ್ನು
ಹೋಗುತಿಹೆ ನೀನು ಇನ್ನೊಂದು ಮನೆಗೆ
ಅಂಗಳದ ಬಳ್ಳಿ ಇನ್ನೊಂದರಲಿ ನೆಟ್ಟಂತೆ

ನಡೆಯಬೇಕಲ್ಲಿ ಸರಿಯಾಗಿ ಅರಿತು
ಕೆಲಸ ಮಾಡು ಬಲು ಬುದ್ಧಿಯಿಂದ
ಮನೆಯಲ್ಲ ಅಪ್ಪನದು ಮನೆಯಲ್ಲ ಅಮ್ಮನದು
ಹಾಡುತ್ತ ಕುಣಿಯುತ್ತ ನಲಿದಾಡಲು

ಇಲ್ಲಿಂದ ಆ ಮನೆಗೆ ಹೋದಾಗ ನೀನು
ಬಿಟ್ಟುಬಿಡು ಇಲ್ಲಿಯೇ ಮೂರು ವಸ್ತು
ಸುಖವಾದ ಸೊಗಸಾದ ಹಗಲ ನಿದ್ದೆ
ಹಿತವಚನ ಹೇಳುವ ನಿನ್ನ ಹೆತ್ತವ್ವ
ಮಡಕೆಯೊಳಗಿರುವ ಹೊಸ ಬೆಣ್ಣೆ ಮುದ್ದೆ

ಬದಲಾಗಬೇಕು ಈ ಮೊದಲ ರೀತಿ
ಕೊಟ್ಟುಬಿಡು ನಿನ್ನ ಸುಖ ನಿದ್ದೆ ಎಲ್ಲ
ಈ ಮನೆಯ ಸೋಮಾರಿ ಹೆಣ್ಣಾಳಿಗೆ
ಎಸೆದು ಬಿಡು ನಿನ್ನ ಹಾಡುಗಳನ್ನೆಲ್ಲ
ಜಗುಲಿ ಕಟ್ಟೆಯ ಆಚೆ ಮನೆಯಿಂದ ದೂರಕ್ಕೆ
ನಗೆ ಚಾಟಿಕೆ ಮಾತೆಲ್ಲ ಕಿಟಕಿಯಿಂದಾಚೆ
ಹುಡುಗಾಟಿಕೆಗಳನೆಲ್ಲ ಪೊದರು ಮೆಳೆಗಳಿಗೆ
ತುಂಟಾಟಗಳನ್ನೆಲ್ಲ ಒಲೆಗಡ್ಡೆಯೊಳಗೆ

ಸೋಮಾರಿತನವೆಲ್ಲ ಇಲ್ಲೆ ನೆಲಕ್ಕೆ
ಕೊಟ್ಟು ಬಿಡು ಎಲ್ಲವನು ಮನೆಯ ಹೆಣ್ಣಾಳಿಗೆ
ಅವಳೊಯ್ದು ಹಾಕಲಿ ಪೊದೆಗಂಟಿ ಮೆಳೆಗೆ

ಕಲಿಯಬೇಕಿದೆ ಹೊಸತು ಮರೆತು ಬಿಡು ಹಳತು
ಬಿಟ್ಟು ಹೋಗುವೆ ಇಲ್ಲಿ ತಂದೆ ಒಲವು
ಗಳಿಸಬೇಕಿದೆ ಅಲ್ಲಿ ಮಾವನೊಲವು
ಬಿಟ್ಟು ಹೋಗುವೆ ಇಲ್ಲಿ ತಾಯ ಒಲವು
ಗಳಿಸಬೇಕಿದೆ ಅಲ್ಲಿ ಅತ್ತೆ ಒಲವು

ಇರುವವರೆಗೆ ಜೀವ ಒಡಲಿನಲ್ಲಿ
ಹೊಳೆವ ಚಂದಿರನು ಬಾನಿನಲ್ಲಿ
ನಡತೆ ಇಲ್ಲದ ಮನೆಗೆ ಹೋಗಬೇಡ
ಕೆಟ್ಟ ಗಂಡಸರೊಡನೆ ಮಾತು ಬೇಡ
ಮರ್ಯಾದೆ ಬಹು ಮುಖ್ಯ ಮನೆಯ ಗೌರವ ಮುಖ್ಯ
ನಡತೆ ಸರಿ ಇರಬೇಕು ಅದೆ ಪತಿಯ ನಿರೀಕ್ಷೆ

ಮೂಲೆ ಬಳಿ ಮಾವ ಒಂದು ತೋಳ
ಒಲೆಯ ಬಳಿ ಅತ್ತೆ ಹೆಣ್ಣು ಕರಡಿ
ಬಾಗಿಲಲಿ ಮೈದುನ ವಿಷದ ಹಾವು
ನಾದುನಿ ಎಂಬುವಳು ಅಂಗಳದ ಮೊಳೆಯಂತೆ
ಎಲ್ಲರಿಗೂ ಅಷ್ಟೆ ಬಗ್ಗಿ ನಡೆಯಬೇಕು
ಬಗ್ಗಬೇಕಿದೆ ಅಲ್ಲಿ ಇಲ್ಲಿಗಿಂತಲೂ ಹೆಚ್ಚು
ಇರಬೇಕು ವಿವೇಕ ಯಾವಾಗಲೂ
ಇರಬೇಕು ಚುರುಕುಮತಿ ಯಾವಾಗಲೂ
ಸಂಜೆಯಲ್ಲಿರಬೇಕು ಕಣ್ಣು ಚುರುಕು
ಬೆಂಕಿ ಸರಿ ಇದೆಯೇ ನೋಡಲೆಂದು
ಬೆಳಗಿನಲ್ಲಿರಬೇಕು ಕಿವಿಯು ಚುರುಕು
ಕೋಳಿ ಕೂಗಿದ ಸದ್ದು ಕೇಳಲೆಂದು

ಒಂದು ಕೂಗಿಗೇ ನೀನು ಮೇಲೇಳಬೇಕು
ಕಾಯಬಾರದು ಮತ್ತೊಮ್ಮೆ ಕೂಗಲೆಂದು
ಎದ್ದು ಬಿಡಬೇಕು ಚಿಕ್ಕವರು ಮೊದಲು
ದೊಡ್ಡವರು ಇನ್ನೂ ಮಲಗಿದ್ದರೂ

ಕೂಗದಿದ್ದರೆ ಕೋಳಿ ಹಗಲಿನಲ್ಲಿ
ಚಂದಿರನ ನೋಡಿ ತಿಳಿ ಹೊತ್ತು ಎಷ್ಟೆಂದು
ಸಪ್ತರ್ಷಿ ಮಂಡಲವೂ ತಿಳಿಸುವುದು ಹೊತ್ತು

ಆಗಾಗ ಹೋಗದಿರು ಮನೆಯಿಂದ ಹೊರಗೆ
ಚಂದಿರನ ನೋಡಲು ಹೊತ್ತನ್ನು ತಿಳಿಯಲು
ಸಪ್ತರ್ಷಿ ಮುಂಭಾಗ ದಕ್ಷಿಣಕ್ಕೆ
ಹಿಂಭಾಗ ಇದೆ ನೋಡು ಉತ್ತರಕ್ಕೆ
ಅದೆ ಸೂಚನೆ ನಿನಗೆ ಮೇಲೇಳಲಿಕ್ಕೆ
ಪತಿಯ ಮಗ್ಗುಲಿನಿಂದ ಮೇಲೇಳುವುದಕ್ಕೆ
ಒಲೆ ಬೂದಿ ತೆಗೆದು ಒಲೆ ಹಚ್ಚಲಿಕ್ಕೆ
ಎಚ್ಚರಿಕೆ ಇರಲಿ ಬೆಂಕಿ ಹರಡದಂತೆ
ಕೆಂಡ ಆರಿದ್ದರೆ ಪೂರ್ತಿ ಬೂದಿಯಲ್ಲಿ
ಸವಿ ಮಾತಿಂದ ಕೇಳು ಗಂಡನನ್ನು

ಆಮೇಲೆ ಹೋಗು ದನದ ಕೊಟ್ಟಿಗೆಗೆ
ಕಸ ಬಳಿದು ದನಗಳಿಗೆ ಮೇವು ಹಾಕು
ಅತ್ತೆಮ್ಮನ ಹಸು ಅಂಬಾ ಎನುತ್ತದೆ
ಮಾವಯ್ಯನ ಕುದುರೆ ಕೆನೆಯುತ್ತದೆ
ಮೈದುನನ ಎತ್ತು ಸರಪಳಿಯ ಎಳೆದಾಡಿ
ನಾದುನಿಯ ಕರು ಅನ್ನುವುದು ಅಂಬಾ

ಮೇವು ಕೊಡು ಹಸುಗಳಿಗೆ
ಬೇಕಾದ ಆಹಾರ ಕುರಿ ಮೇಕೆಗೆ
ಕುಡಿಸು ನೀರನು ನೀನೆ ಕೈಯಾರೆ
ಏನೊಂದು ಗೊತ್ತಿರದ ಎಳೆ ಕರುವಿಗೆ

ಮರಿಗುದುರೆಗೆ ನೀಡು ಆರಿಸಿದ ಹುಲ್ಲು
ಕುರಿಯ ಮರಿಗಳಿಗೆ ಅತಿ ಎಳೆಯ ಹುಲ್ಲು
ಹಂದಿಗಳ ನೋಡದೆ ತುಳಿದೀಯೆ ಜೋಕೆ
ಮೊದಲೇ ಅಸಡ್ಡೆಯವಳು ಮರಿ ತುಳಿದೀಯ ಜೋಕೆ

ಇದ್ದು ಬಿಡಬೇಡ ಅಲ್ಲೆ ಬಹಳ ಹೊತ್ತು
ಕುರಿಮಂದೆಯಲ್ಲಿ ಅಡ್ಡಾಡಿ ಆರಾಮ
ತಕ್ಷಣವೇ ಬರಬೇಕು ಬಿರುಗಾಳಿಯಂತೆ

ಅಳುವ ಮಗು ನೋಡು ಕಂಬಳಿಯ ಕೆಳಗೆ
ಮಾತು ಬಾರದ ಎಳೆಕೂಸು ಕಂದ
ಚಳಿಯೊ ಹಸಿವೊ ಮತ್ತೇನು ನೋವೋ

ಬರುವಾಗ ತಾ ನೀರನ್ನು ಪೊರಕೆಯನು
ನೆಲಕ್ಕೆ ಹಾಕು ನೀರು ಹಾಕದಿರು ಕಂದಗೆ
ಕಂದ ಮಲಗಿದ್ದರೆ ನಾದುನಿಯದೇ ಇರಲಿ
ಎತ್ತಿ ಮಲಗಿಸು ಮೇಲೆ
ಅದರ ಕಣ್ಣು ತೊಳಿ ಕೂದಲನು ಬಾಚು
ಕೈಗೆ ಕೊಡು ಬ್ರೆಡ್ಡು ಮೇಲಿಷ್ಟು ಬೆಣ್ಣೆ

ಮೇಜು ಕಿಟಕಿಯ ಧೂಳು
ಒದ್ದೆ ಬಟ್ಟೆಯಲೊರಸು
ಧೂಳು ಹರಡದಂತೆ ಹಾರದಂತೆ ಮೇಲೆ
ಮನೆಯು ಇರಬೇಕು ಅಚ್ಚುಕಟ್ಟಾಗಿ
ಇರಲು ವಾಸಕ್ಕೆ ಯೋಗ್ಯವಾಗಿ

ಬಟ್ಟೆ ಹಾಕದೆ ಮೈತುಂಬ ಹೋಗದಿರು ಹೊರಗೆ
ಹೊಸ ಮೊದಲಿಗ ನಿನಗಂಡ
ಹೌಹಾರಿ ಬಿಟ್ಟಾನು
ಆ್ಯಶ್ ಮರವಿದೆ ಅಂಗಳದಲ್ಲಿ
ನೋಡಿಕೊ ಭಕ್ತಿಯಲಿ
ಆ ಮರವು ಪವಿತ್ರ ಅದರ ಟೊಂಗೆಯೂ ಕೂಡ
ಎಲೆ ಎಲೆಯೂ ಪವಿತ್ರ
ಎಲ್ಲಕ್ಕೂ ಶ್ರೇಷ್ಠ ಅದು ಬಿಡುವ ಹಣ್ಣು
ಪೂಜಿಸಿದರೆ ತಿಳಿಯುವುದು
ಪತಿಯ ಒಲಿಸುವ ದಾರಿ

ಚುರುಕಾಗಿರಲಿ ಕಿವಿ ಇಲಿಮರಿಯ ಕಿವಿಯಂತೆ
ಕಾಲು ಚುರುಕಾಗಿರಲಿ ಮೊಲದ ಹಾಗೆ
ಬಾಗಿರಲಿ ಕತ್ತು ಜೂನಿಪರ್‌ನಂತೆ

ಏನು ಮಾಡಿದರೂ ಸರಿಯಾಗಿ ಯೋಚಿಸಿಯೆ ಮಾಡು
ಮಲಗದಿರು ಹಾಗೇ ಕಾಲು ಚಾಚಿ

ಬರುತಾನೆ ಮೈದುನ ಹೊಲವನುತ್ತು
ಬರುತಾನೆ ಮಾವ ಮಳಿಗೆಯಿಂದ
ಬರುತಾನೆ ಗಂಡ ಶ್ರಮಪಟ್ಟು ದುಡಿದು
ಕೊಡು ನೀರು ಕಾಲಿಗೆ ಬೇಗಬೇಗ
ಬಾಗಿ ನಿಂತಿರು ಅಲ್ಲೇ ಭಯಭಕ್ತಿಯಿಂದ
ಉಪಚಾರ ಮಾಡು ಸವಿ ಮಾತಿನಿಂದ
ಬರುತಾಳೆ ಅತ್ತೆ ಗಿರಣಿಯಿಂದ
ಹಿಟ್ಟು ತುಂಬಿದ ಪುಟ್ಟಿ ಕಂಕುಳಲ್ಲಿ
ಸರಸರನೆ ಓಡು ಇಳಿಸಿಕೋ ಪುಟ್ಟಿ

ಏನು ಮಾಡುವುದೊ ತಿಳಿಯದಿದ್ದರೆ ನಿನಗೆ
ನಯವಾಗಿ ಕೇಳು ಆ ಮುದುಕಿಯನ್ನು
ಹೇಳಿಕೊಡುವಳು ಅವಳು
ಕುಟ್ಟುವುದು ಹೀಗೆ ರುಬ್ಬುವುದು ಹೀಗೆ
ಬೀಸುವುದು ಕಲ್ಲನ್ನು ಬೇಗ ಹೀಗೆ
ಮನೆಯ ಕೆಲಸವನ್ನೆಲ್ಲ ಮಾಡುತಿರು ಹೀಗೇ

ನೀರು ತರುವುದು ಹಿಟ್ಟು ನಾದುವುದು
ಅಡುಗೆಯೊಲೆಗೆ ಸೌದೆ ತರುವ ಕೆಲಸ
ಆಮೇಲೆ ತೊಳೆದಿಡು ತಟ್ಟೆ ಬಟ್ಟಲು ಪಾತ್ರೆ
ಕೋಣೆಯೊಳಗೆ ಹೋಗು ಬೀಸುವುದಕೆ ಹಿಟ್ಟು
ದನಿ ಎತ್ತಿ ಜೋರಾಗಿ ಹಾಡಬೇಡ
ಬಿಟ್ಟು ಬಿಡು ಕಲ್ಲಿಗೇ ನಿನ್ನ ಹಾಡ
ಜೋರಾಗಿ ನೋವಿಂದ ನರಳಬೇಡ
ಬಿಟ್ಟು ಬಿಡು ಕಲ್ಲಿಗೇ ನಿನ್ನ ಪಾಡ
ಗೊತ್ತಾಗದಿರಲಿ ಅತ್ತೆ ಮಾವಂದಿರಿಗೆ
ನೊಂದಿದ್ದು ನೀನು ನರಳಿದ್ದು ನೀನು

ಹಿಟ್ಟು ಸರಸರನೆ ಜರಡಿಯಾಡು
ನಾದು ಸರಿಯಾಗಿ ಗಂಟಾಗದಂತೆ

ಮಗುಚಿ ಇಟ್ಟಿದ್ದರೆ ನೀರ ಪಾತ್ರೆ
ಹೋಗು ನೀರಿಗೆ ತುಂಬಿಸದನು
ಕಾಲಹರಣ ಬೇಡ ನೀರ ಬಳಿಯಲ್ಲಿ

ಮನಸು ಕೊಡದಿರು ವಿಶ್ರಾಂತಿಗಲ್ಲಿ
ನಿನ್ನತ್ತೆ ಮಾವ ಅಂದುಕೊಂಡಾರು
ಅಲ್ಲಿರುವಳವಳು
ನೋಡುತ್ತ ತನ್ನಂದ ಪ್ರತಿಬಿಂಬದಲ್ಲಿ

ಕಟ್ಟಿಗೆಯ ತರಲು ಹೋದಾಗ ನೀನು
ಒಡೆಯದಿರು ಸೌದೆ ಹೇಗೆ ಹೇಗೊ
ಹಾಕದಿರು ದೊಪ್ಪೆಂದು ಮಾಡದಿರು ಸದ್ದು
ನಿನ್ನತ್ತೆ ಮಾವ ಅಂದುಕೊಂಡಾರು
ಸಿಟ್ಟಿಂದ ಬೇಕೆಂದೆ ಸದ್ದು ಮಾಡಿದೆ ಎಂದು

ಅಂಗಡಿಗೆ ಹೋದಾಗ ಹಿಟ್ಟುತರಲು
ವ್ಯರ್ಥ ಮಾಡುತ ಕಾಲ ನಿಲ್ಲಬೇಡ
ನಿನ್ನತ್ತೆ ಮಾವ ಅಂದುಕೊಂಡಾರು
ಹಳ್ಳಿ ಹೆಂಗಸರಿಗೆ ಹಿಟ್ಟು ಹಂಚಿದಳು ಎಂದು

ತಿಕ್ಕು ಸರಿಯಾಗಿ ಪಾತ್ರೆ ಪಡಗ
ಎಣಿಸಿಕೊ ಎಲ್ಲ ಸೌಟು ಚಮಚೆ
ಎಷ್ಟಿದ್ದವೊ ಪಾತ್ರೆ ಇರಲಿ ಲೆಕ್ಕ
ನಾಯಿಯೋ ಬೆಕ್ಕೊ ಎತ್ತೊಯ್ಯಬಹುದು
ಪಕ್ಷಿಯೊ ಮಕ್ಕಳೊ ಹಾಕಬಹುದೆಲ್ಲೊ
ಯಾರು ಯಾರೊ ಪಿಳ್ಳೆಗಳು ಅಲೆಯುತಿರುತಾರೆ
ಯಾರು ಒಯ್ಯುವರೊ ನೀನು ತಿಳಿಯಲಾರೆ

ಎಲ್ಲ ಅಣಿ ಮಾಡು ಸಂಜೆ ಸ್ನಾನಕ್ಕೆ
ಮಜ್ಜನದ ಸೊಪ್ಪು ನೀರು ಸ್ನಾನಕ್ಕೆ
ಕೋಣೆಯಲ್ಲಿರಲಿ ಸರಿಯಾಗಿ ನೀರ ಹಬೆ
ಇದ್ದು ಬಿಡಬೇಡ ಅಲ್ಲೆ ಬಹಳ ಹೊತ್ತು
ನಿನ್ನತ್ತೆ ಮಾವ ಅಂದುಕೊಂಡಾರು
ಅಲ್ಲೆ ತಲೆ ಇಟ್ಟು ಮಲಗಿದ್ದೆ ಎಂದು

ಸ್ನಾನದ ಮನೆಯಿಂದ ಹೊರಬಂದು ಹೇಳು
ಎಲ್ಲ ಸಿದ್ಧವಾಗಿದೆ ನಿಮ್ಮ ಮಜ್ಜನಕ್ಕೆ
ಮನತಣಿಯುವಷ್ಟು ಮೀಯಿರೆಂದು

ನೇಯ್ಗೆ ಕೆಲಸಕ್ಕೆ ಕುಳಿತಾಗ ನೀನು
ಕೇಳದಿರು ಸಲಹೆಯನು ಹಳ್ಳಿಯಲಿ
ಹೊಳೆ ದಾಟಿ ಕಲಿಯದಿರು ಪಾಠವನ್ನು
ನಿನಗೆ ಬೇಕಾದ ನೇಯ್ಗೆ ನೀನೆ ಮಾಡು
ಎಳೆಯ ಹುರಿಗಟ್ಟು ಸಡಿಲವಾಗಿ
ದಾರದೆಳೆ ಇರಲಿ ಹತ್ತಿರಕ್ಕೆ
ನಯವಾಗಿ ಎಳೆದುಕೊ ದಾರದೆಳೆಯನ್ನು
ನೇಯ್ದುಕೋ ಬೇಕಾದ ಬಟ್ಟೆಯನ್ನು

ಕೇಳಿಕೊ ಸರಿಯಾಗಿ ನಾನು ಹೇಳುವುದನ್ನು
ಭಟ್ಟಿ ಇಳಿಸಬೇಕು ನೀನೆ ಏಲ್ ಮದ್ಯವನ್ನು
ಸಿಹಿ ತಿರುಗುವಾಗ ಬಾರ್ಲಿ ಮೊಳಕೆ
ರುಚಿನೋಡು ಬಾಯಲ್ಲಿ ಹಾಕಿಕೊಂಡು
ಕಲೆಸದಿರು ಎಂದಿಗೂ ಸೌಟನಿಂದ
ಕಲೆಸು ಸರಿಯಾಗಿ ಕೈಗಳಿಂದ
ಮೊಳಕೆ ಬರುವಾಗ ನೋಡಿಕೊ ಸರಿಯಾಗಿ
ಮೇಲೆ ಕುಳಿತೀತು ಬೆಕ್ಕು ಜೋಕೆ ಜೋಪಾನ

ಯಾರೋ ಅತಿಥಿಗಳು ಬಂದಾಗ ಮನೆಗೆ
ಸಿಟ್ಟಾಗಬೇಡ ಅವರ ಮೇಲೆ
ಎಲ್ಲ ಅನುಕೂಲ ಇರುವಂಥ ಮನೆಯಲ್ಲಿ
ಇರದಿರಲಿ ಅತಿಥಿಗೆ ಯಾವ ಕೊರತೆ
ಅತಿಥಿಯನು ಕೂರಿಸು ಉಪಚರಿಸಿ ಮಾತಾಡು
ಹಿತನುಡಿಯ ನಾಡುತಿರು
ಅಡುಗೆ ಆಗುವವರೆಗೆ
ಬಂದ ಅತಿಥಿಗಳು ಆಮೇಲೆ ಹೊರಟಾಗ
ಮನೆಯ ಬಾಗಿಲ ದಾಟಿ ಹೊರಗೆ ಬಂದೀಯ
ಬಂದೀತು ಕೋಪ ನಿನ್ನ ಪತಿರಾಯಗೆ
ಮುಖವು ಗಂಟಿಕ್ಕಿ ಮಂಕುಗಟ್ಟೀತು

ಹಳ್ಳಿ ಸುತ್ತುವ ಬಯಕೆ ನಿನಗಾದರೆ
ಹರಟೆ ಹೊಡೆಯಲು ಆಸೆ ನಿನಗಾದರೆ
ಹೋಗುವುದಕೆ ಮೊದಲೆ ಪಡೆದುಕೊ ಅಪ್ಪಣೆ

ಎಚ್ಚರದಿಂದ ಮಾತಾಡು ಮನೆ ಬಗ್ಗೆ ಗೊಣಗದಿರು
ಬೈಯದಿರು ಎಂದಿಗೂ ನಿನ್ನತ್ತೆಯನಂತೂ
ಕೇಳುವರು ಪ್ರಶ್ನೆ ಹಳ್ಳಿ ಹೆಂಗಸರು
ನಿನ್ನತ್ತೆ ನಿನಗೆ ಕೊಡುವಳೇ ಬೆಣ್ಣೆ
ನಿನ್ನಮ್ಮ ಕೊಟ್ಟಂತೆ ತವರಿನಲ್ಲಿ
ಈ ಪ್ರಶ್ನೆಗೆ ಉತ್ತರ ಕೊಡಬೇಕು ಹೀಗೆ
ಹೌದು ಕೊಡುತಾಳೆ ಸೌಟು ತುಂಬಾ
ಕೊಟ್ಟಿದ್ದರೂ ನಿನಗೆ ವರುಷಕೊಮ್ಮೆ
ಕಮಟು ವಾಸನೆ ಬಂದ ಹಳೆಯ ಬೆಣ್ಣೆ

ನೋಡು ಕೇಳಿಕೊ ಮತ್ತೊಂದು ಮಾತು
ಅಂತೂ ಈ ಮನೆಯ ನೀ ಬಿಟ್ಟು ಹೋದಾಗ
ಮರೆತು ಬಿಡಬೇಡ ಹೆತ್ತವ್ವನನ್ನು
ಎದೆಯ ಹಾಲೂಡಿ ಬೆಳೆಸಿದವಳನ್ನು
ತೊಟ್ಟಿಲಲಿ ತೂಗುತ್ತಾ ಮಮತೆಯಲಿ ನೋಡುತ್ತ
ಎಷ್ಟೊ ರಾತ್ರಿಯ ನಿದ್ದೆ ತೊರೆದ ಅವಳನ್ನು
ಊಟ ತಿನಿಸನ್ನು ಮರೆತ ಅವಳನ್ನು

ಹೆತ್ತವಳ ಮರೆತಂಥ ಹೆಣ್ಣು ಮಕ್ಕಳಿಗೆ
ಎಂದೂ ಸುಖವಿಲ್ಲ ಪರಲೋಕದಲ್ಲಿ
ವಿಶ್ವಾಸ ಆದರ ಟುವೊನೆಲಾದಲ್ಲಿ
ಆ ಲೋಕದ ಹೆಣ್ಣುಗಳು ನಿಂದಿಸಿ ಬೈಯುವರು
ಮನಾ ಹೆಣ್ಣುಗಳು ಹಂಗಿಸಿ ಕೇಳುವರು :
ನೀನೇಕೆ ಮರೆತೆ ಹೆತ್ತ ತಾಯನ್ನು
ನಿನ್ನ ಹೆರುವಾಗ ಅವಳು ಪಟ್ಟ ನೋವೆಷ್ಟು
ಹುಲ್ಲು ಹಾಸಿಗೆಯಲಿ ತಿಂದ ಬೇನೆಯೆಷ್ಟು
ನಿನ್ನಂಥ ಮಗಳಿಗೆ ಜನ್ಮ ಕೊಡುವಾಗ
ನಿನ್ನಂಥ ನೀಚಳಿಗೆ ಜನ್ಮ ಕೊಡುವಾಗ

ನೆಲದ ಮೇಲೊಬ್ಬ ಮುದುಕಿ ಕೂತಿದ್ದಳು
ಮನೆಮನೆಗೂ ಹೋಗಿ ಬೇಡುವವಳು
ಬೀದಿಯಲಿ ದಿಕ್ಕೆಟ್ಟು ಅಲೆಯುವವಳು
ಅವಳು ಹೇಳಿದಳು :

ಹುಂಜ ಹಾಡುವುದು ಸಂಗಾತಿಗಾಗಿ
ಕಾಗೆ ಹಾಡುವುದು ಮಾರ್ಚ್ ತಿಂಗಳಲ್ಲಿ
ಈಗ ಹಾಡುವುದು ನನ್ನ ಸರದಿ
ಉಳಿದವರು ನಿಲ್ಲಿಸಲಿ ತಮ್ಮ ಹಾಡು

ಎಲ್ಲರಿಗೂ ಇದ್ದಾರೆ ಪ್ರೀತಿಸುವ ಜನರು
ಮನೆಯೊಳಗೆ ಬಳಿಯಲ್ಲೆ ತಮ್ಮ ಜನರು
ಪ್ರೀತಿಸುವ ಜನರಿಲ್ಲ ಇರಲು ಮನೆಯಿಲ್ಲ
ಯಾವುದೂ ನನಗಿಲ್ಲ ಎಲ್ಲವೂ ದೂರ

ತಂಗಿಯೇ ಕೇಳು ನಾನು ಹೇಳುವುದನ್ನು
ಹೋದಾಗ ನೀನು ಪತಿಯ ಗೃಹಕೆ
ಕೇಳಲೇಬೇಡ ಅವನ ಮಾತನ್ನು
ಕೇಳಿ ಕೆಡಬೇಡ ನನ್ನ ಹಾಗೆ
ನಾನಿದ್ದೆ ಸೊಗಸಾಗಿ ಬನದ ಗುಲಾಬಿಯ ಹಾಗೆ
ನಾ ಬೆಳೆದೆ ಸಸಿಯಂತೆ ಸುಕುಮಾರ ಚೆಲುವೆ
ರಸತುಂಬಿದ ಹಣ್ಣಿಂತೆ ತೂಗಾಡುತಿದ್ದೆ
ತವರು ಮನೆ ಅಂಗಳದ ಹಕ್ಕಿಯಾಗಿದ್ದೆ
ನಡೆದಾಡುತಿದ್ದೆ ಹೂವಿನಂತೆ
ಮಳಲ ದಂಡೆಯಲ್ಲಿ ನೆಗೆದಾಡುತಿದ್ದೆ
ಹೂವು ಬೆಟ್ಟಗಳಲ್ಲಿ ಕುಣಿದಾಡುತಿದ್ದೆ
ಕಣಿವೆ ಗುಡ್ಡದಲಿ ಕಾಡಬನದಲ್ಲಿ
ಜೋರಾಗಿ ಹಾಡಿ ಉಲ್ಲಾಸದಿಂದಿದ್ದೆ

ಬಿದ್ದಂತೆ ಪ್ರಾಣಿ ಮರುಳಾಗಿ ಬಲೆಗೆ
ಸಿಕ್ಕಂತೆ ಮೀನು ಆಸೆ ಗಾಳಕ್ಕೆ
ಮರುಳಾಗುವಳು ಹೆಣ್ಣು ತನ್ನ ಗಂಡನಿಗೆ
ಅವನ ಮನೆಯವರ ರೀತಿ ನೀತಿಗಳಿಗೆ
ಹೆಣ್ಣು ಜನ್ಮವೆ ಇಷ್ಟು ಮದುವೆಯಾಗುವುದು
ಗಂಡನ ತಾಯ ಆಳು ತೊತ್ತಾಗುವುದು

ವಧುವಾಗಿ ಹೋದೆ ಪತಿಯ ಮನೆಗೆ
ದೊಡ್ಡ ಕೋಣೆಗಳಾರು ಮಲಗುವ ಕೋಣೆ ದುಪ್ಪಟ್ಟು
ಕಾಳು ತುಂಬಿದ ಕಣಜ ಹೂವರಳಿದ ತೋಟ

ಬಾರ್ಲಿ ಹೊಲಗಳು ಕೆರೆದಂಡೆಯಲ್ಲಿ
ಒಕ್ಕಿದವು ಒಕ್ಕದವು ಕಾಳ ಕಣಜಗಳು
ಬಂದಿರುವ ದುಡ್ಡು ಬರಲಿರುವ ದುಡ್ಡು
ಏನೆಲ್ಲ ಕಾದಿತ್ತು ಹೇಳಿಂದತವರು

ಮೂರ್ಖನಾಗಿದ್ದೆ ಇದನೆಲ್ಲ ನಂಬಿ
ಆರು ಊರುಗೋಲಿನ ಸೂರು ಕಾಡುಹಲಗೆಯಕದವು
ಸೊಗವಿಲ್ಲದ ಕಾಡು ಬರಡು ಬಂಜರು ಬಯಲು
ಮುಗ್ಗು ಹಿಡಿದಿದ್ದ ಕಾಳಕಣಜಗಳು
ಇದ್ದವು ನುಡಿನೂರು ಬೈಗುಳಗಳು
ಆದರೂ ಪಡಲಿಲ್ಲ ನಾನು ದುಃಖ
ಮಾಡಿದ್ದೆ ನಿರ್ಧಾರ
ಮರ್ಯಾದೆಯಿಂದಿರಲು
ಸದ್ದುಸೊಲ್ಲಿಲ್ಲದೆ ಬಾಳಿಕೊಂಡಿರಲು
ಮೊದಲ ಸಲ ನಾನು ಅಡಿಯಿಟ್ಟಾಗಲೇ
ಎಡವಿ ಬಿದ್ದೆನು ಕಟ್ಟೆಗೆಯ ತುಂಡು
ಬಡಿದಿತ್ತು ಹಣೆ ತಲೆಯ ಬಾಗಿಲಿಗೆ
ಬಾಗಿಲಲ್ಲಿದ್ದವು ಯಾರದೋ ಕಣ್ಣು
ಕೋಣೆ ನಡುವಲ್ಲಿ ವಕ್ರ ಕಣ್ಣು
ಅದಕಿಂತ ಹಿಂದೆ ಕೆಟ್ಟ ಕಣ್ಣು
ಬೆಂಕಿ ಉಗುಳುವ ಬಾಯಿ ನಾಲಗೆಯಡಿ ಕೆಂಡ
ಕೆಟ್ಟ ಮಾತಿನ ಮುದುಕ ಎಲ್ಲವೂ ಸಹಿಸಿದೆ
ಮೊಲದ ಚುರುಕಿಂದ ಅಳಿಲ ತ್ವರೆಯಿಂದ ಕೆಲಸ ಮಾಡುತ್ತ

ಮಲಗಿ ತಡವಾಗಿ ಏಳುತಿದ್ದೆನು ಬೇಗ
ಬೀಸುತಿದ್ದೆ ಗಟ್ಟಿ ಕಾಳನ್ನು
ಗಬಗಬನೆ ನುಂಗುವ ಆತ್ತೆಗಾಗಿ
ಉಣ್ಣಲವಳಿಗೆ ಚಿನ್ನದಂಚಿನ ತಟ್ಟೆ
ನನಗೆ ಉಳಿದದ್ದು ತಳದ ಒಣ ಸೀಕಲು
ಜವುಗು ಪಾಚಿಯ ತಿಂದೆ ಬ್ರೆಡ್ಡಂತೆ ಬೇಯಿಸಿ
ಬಾವಿ ನೀರನು ಕುಡಿದೆ ಹೊಟ್ಟೆ ತುಂಬ
ಸಿಕ್ಕ ಸಿಕ್ಕಂಥ ಮೀನುಗಳ ತಿಂದೆ
ಅತ್ತೆ ಕೊಡಲಿಲ್ಲ ಸಮೃದ್ಧಿ ದಿನದಲ್ಲಿ
ಆದಕಿಂತ ಮಿಗಿಲಾದ ಸಮೃದ್ಧ ದಿನದಲ್ಲಿ

ಶ್ರಮಪಟ್ಟು ದುಡಿದೆ ಕೂಲಿಯವಳಂತೆ
ದುಡಿದೆ ನಾನಲ್ಲಿ ಜೀತದವಳಂತೆ
ಆರಿಸಿಕೊಡುತ್ತಿದ್ದಳು ಅತ್ತೆ
ಕೆಟ್ಟ ಬಡಿಗೋಲು ದೊಡ್ಡ ಕವೆಗೋಲು
ಎಲ್ಲಕಿಂತಲೂ ಹೆಚ್ಚು ಭಾರವಿದ್ದ ಕೊಡಲಿ
ಚಿಂತೆಯೇ ಇರಲಿಲ್ಲ
ನನ್ನ ದಣಿವಿನ ಬಗ್ಗೆ ನನ್ನ ದುಡಿಮೆಯ ಬಗ್ಗೆ
ದುಡಿದುಡಿದು ಕಷ್ಟದಲಿ
ಬಾಗಿದವು ಬೆನ್ನು ಭುಜ

ನನ್ನ ಬೈದಾಡಿದರು ಸಂತೃಪ್ತಿ ಸಿಗುವಷ್ಟು
ಆರೋಪ ಹೊರಿಸಿದರು ನನ್ನ ನಡತೆಯ ಮೇಲೆ
ಉರಿಬೆಂಕಿ ಕಿಡಿಯಂತೆ ಕಬ್ಬಿಣದ ಮಳೆಯಂತೆ
ಸುರಿಸಿದರು ಬೈಗುಳ ನನ್ನ ಮೇಲೆ

ಹೀಗಿದ್ದರೂ ನಾನು ಎದುರಾಡಲಿಲ್ಲ
ತಲೆ ಬಾಗಿಕೊಂಡಿದ್ದೆ
ಕಠಿಣ ನುಡಿಗಳಿಗೆ ಬೆಂಕಿ ನಾಲಗೆಗೆ
ಇದೇ ಕಾರಣವಾಯ್ತು ನನ್ನ ಅನಿಷ್ಟಕ್ಕೆ
ತೋಳವಾದನು ಗಂಡ ಗುರುಗುಡುವ ಕರಡಿ
ಮುಖ ಅತ್ತ ತಿರುವಿದ ಉಣ್ಣುವಾಗ
ಬೆನ್ನತ್ತ ತಿರುವಿದ ಮಲಗುವಾಗ

ನೆನೆದು ಹಿಂದಿನದೆಲ್ಲ ಜೋರಾಗಿ ಅತ್ತೆ
ತಾಯ ಮನೆಯಲ್ಲಿ ಇದ್ದ ಸಂತಸ ನೆನೆದು
ಕೋಣೆಯಲಿ ಒಬ್ಬಳೇ ಮನಸಾರೆ ಅತ್ತೆ
ಹೀಗಂದುಕೊಂಡೆ ಮನಸ್ಸಿನಲ್ಲಿ :
ಅಮ್ಮನಿಗೆ ಗೊತ್ತಿತ್ತು
ಕಣ್ಮಣಿಯಂಥ ಮಗಳ ಬೆಳೆಸುವುದು ಹೇಗೆ
ಎಳೆಯ ಸಸಿಯಂಥವಳ ಬೆಳೆಸುವುದು ಹೇಗೆ
ಆದರೆ ಅವಳಿಗಿದು ತಿಳಿಯದು :
ಎಲ್ಲಿ ನೆಡಬೇಕು ಎಳೆಯ ಸಸಿಯನ್ನು
ನೆಟ್ಟುಬಿಟ್ಟಳು ಕೆಟ್ಟ ಜಾಗದಲ್ಲಿ

ಬರ್ಚ್ ಮರದ ಗಟ್ಟಿ ಬೇರುಗಳ ನಡುವಲ್ಲಿ
ಬಿಟ್ಟು ಬಿಟ್ಟಳು ನನ್ನ ದುಃಖಿಸುವ ಬಾಳಿಗೆ

ಖಂಡಿತಾ ಸಿಗುತಿತ್ತು ನನ್ನ ಪಾಲಿಗೆ ನನಗೆ
ಒಳ್ಳೆ ಮನೆ ಇದಕಿಂತ ಒಳ್ಳೆ ಪತಿ ಇದಕಿಂತ
ನನ್ನ ಹಣೆ ಬರಹ
ನನಗೆ ಸಿಕ್ಕವನು ಒರಟು ಗಂಡ
ಕಾಗೆಯಂತಹ ದೇಹ ಹದ್ದಿನಂತಹ ಕೊಕ್ಕು
ತೋಳಗಳ ದುರಾಸೆ ಕರಡಿ ಆಕಾರ

ಕಾಡಲ್ಲಿ ಹುಡುಕಿದ್ದರೂ ಇಂಥವನು ಸಿಗುತ್ತಿದ್ದ
ಮರದ ಮೋಟಿಗೆ ಹುಲ್ಲುಗಡ್ಡ
ಜೇಡಿ ಮಣ್ಣಿನ ತಲೆ ಕಲ್ಲು ಬಾಯಿ
ಕಲ್ಲಿದ್ದಲ ಬೆಂಕಿ ಕಣ್ಣು ಮಾಡಿ
ಕವಲೊಡೆದ ಮರದ ಕೈಕಾಲು ಮಾಡಿದರೆ
ಹೇಗಿರುವುದೊ ಹಾಗೆ ಇದ್ದನವನು

ಒಂದು ದಿನ ಹೀಗೆ ನಾನಂದ ಮಾತನ್ನು
ಕೇಳಿಸಿಕೊಂಡನು ನನ್ನ ಗಂಡನೆಂಬುವನು
ಹಲ್ಲು ಕಡಿಯುತ್ತಾ ಬಂದ ಹಿಡಿದು ಕೋಲನ್ನು
ಕೋಲಿಂದ ಸರಿಯಾಗಿ ತಲೆಗೆ ಬಡಿದ
ಮಲಗಿದಾಗ ರಾತ್ರಿ ಅವನ ಪಕ್ಕ
ಬಡಿದು ಬಾರಿಸಿದ ಬಾರು ಕೋಲಿಂದ
ನಾನೆದ್ದು ಓಡಿದೆ ಹಿಂದೆಯೇ ಬಂದ
ಅವನ ಕೈಯೊಳಗಿತ್ತು ನನ್ನ ಜುಟ್ಟು
ಸಿಟ್ಟಿಂದ ಜೋರಾಗಿ ತಿರುಚಿ ಎಳೆದು
ಕಿತ್ತು ಕಿಟಕಿಯ ಆಚೆ ಎಸೆದುಬಿಟ್ಟ

ಯಾರಿಗೆ ಹೇಳಲಿ ನನ್ನ ಕಷ್ಟ
ಯಾರಿದ್ದರು ನನಗೆ ಒಳ್ಳೆ ಮಾತಾಡುವರು
ಮನೆಯಾಚೆಗೆ ಬಂದೆ ಕಾದಿದ್ದೆ ಹೊರಗೆ
ತಣಿಯಲಿಲ್ಲವನ ಉಗ್ರ ಸಿಟ್ಟು
ಹೊರಗೆ ನಿಂತಿದ್ದೆ ಕೊರೆಯುತಿತ್ತು ಚಳಿ
ಮನದಲ್ಲೆ ಯೋಚಿಸಿದೆ

ಸಾಧ್ಯವಿಲ್ಲ ಸಹಿಸುವುದು ಇನ್ನು ಇಲ್ಲಿ
ಸಾಧ್ಯವಿಲ್ಲ ಇರಲು ಈ ದೆವ್ವಗಳ ಮನೆಯಲ್ಲಿ
ಇಂಥ ಮನೆಯಿಂದ ನಾ ಹೊರಗೆ ಬಂದೆ

ಕಂಗೆಟ್ಟು ಎಲ್ಲೆಲ್ಲೊ ಅಲೆದಾಡಿದೆ
ಕೆರೆಕೊಳ್ಳ ನದಿ ದಾಟಿ ಎಲ್ಲೆಲ್ಲೊ ನಡೆದೆ
ಅಣ್ಣನ ಹೊಲ ದಾಟಿ ಹೋದಾಗ ನಾನು
ಸುಯ್ಯಗುಡುತಿದ್ದವು ಪೈನ್ ವೃಕ್ಷ ಹೀಗೆ
ಹೇಳುತಿದ್ದವು ಮೆಲ್ಲಗೆ ಫರ್ ವೃಕ್ಷ ಹೀಗೆ
ಕೂಗುತ್ತಿದ್ದವು ಕಾಗೆ ಜೋರಾಗಿ ಹೀಗೆ
ಚಿಲಿಪಿಲಿ ಗುಟ್ಟಿದ್ದವು ಹಕ್ಕಿಗಳು ಹೀಗೆ
ಸಿಗುವುದಿಲ್ಲ ಇಲ್ಲಿ ಇರಲು ಸ್ಥಳ ನಿನಗೆ
ನೀನು ಹುಟ್ಟಿದ ಮನೆ ಇಲ್ಲ ಜಾಗ ನಿನಗೆ
ಆದರೂ ನಾನು ಕೆಡಲಿಲ್ಲ ಧೈರ್ಯ
ಹೋಗಿಯೇ ಹೋದೆ ನನ್ನಣ್ಣನ ಬಳಿಗೆ

ಮನೆಯ ಕದ ಹೇಳಿದವು
ಗಿಡ ಶೋಕ ಮಾಡಿದವು :
ಯಾಕಾಗಿ ಬಂದೆ ಈ ಮನೆಗೆ ನೀನು
ಯಾವ ದುಃಖದ ಸುದ್ದಿ ಕೇಳಬಂದೆ
ನಿನ್ನಪ್ಪ ತೀರಿ ದಿನ ಬಹಳವಾದವು
ಹೆತ್ತವ್ವ ಸತ್ತು ದಿನ ಬಹಳವಾದವು
ಬದಲಾಗಿ ಹೋಗಿರುವ ಪೂರ್ತಿ ನಿನ್ನಣ್ಣ
ರಷ್ಯನ್ನರಂಥವಳು ಅವನ ಮಡದಿ

ಆದರೂ ಕೆಡಲಿಲ್ಲ ಧೈರ್ಯ ಮನೆಯೊಳಗೆ ಹೋದೆ
ಹಿಡಿದೆ ಬಾಗಿಲ ಚಿಲಕ ಕೊರೆಯಿತದು ತಣ್ಣಗೆ
ಹೋದೆ ಕೋಣೆಗೆ ಬಾಗಿಲಲಿ ನಿಂತೆ
ನಿಂತಿದ್ದಳು ಯಜಮಾನಿ ಗರ್ವದಿಂದ
ಮಾತಾಡಿಸಲಿಲ್ಲವಳು ಬಳಿಗೆ ಬಂದು
ಇತ್ತು ನನಗೂ ಅವಳಷ್ಟೆ ಬಿಂಕ
ಸುಮ್ಮನಿದ್ದೆನು ನಾನು ಮುಂದೆ ಹೋಗದೆ ನಿಂತು
ನನ್ನ ಕೈಯಿಟ್ಟೆ ಚೆಂಕಿ ಗೂಡಿನ ಮೇಲೆ

ಕೊರೆಯುತ್ತಿದ್ದವು ತಣ್ಣಗೆ ಅದರ ಕಲ್ಲು
ನನ್ನ ಕೈಯಿಟ್ಟ ಕಲ್ಲಿದ್ದಲ ಮೇಲೆ
ಕೊರೆದವವು ತಣ್ಣಗೆ

ಮಂಚದ ಮೇಲೆ ಅಣ್ಣಾ ಬಿದ್ದುಕೊಂಡಿದ್ದ
ಭುಜದ ಮೇಲಿತ್ತು ಕೊಳೆ ಇಷ್ಟು ದಪ್ಪ
ಮೈಮೇಲೆ ಕೊಳೆಯಿತ್ತು ಒಂದು ಮಣದಪ್ಪ

ಗುರುತು ಪರಿಚಯವಿಲ್ಲೆಂಬಂತೆ
ಕೇಳಿದನು ನನ್ನಣ್ಣಾ
ಯಾರಮ್ಮ ನೀನು ಬಂದೆ ಯಾಕಮ್ಮ
ಬಂದೆಯಾಕಮ್ಮ ಹೊಳೆಯ ದಾಟಿ
ನಾನು ಹೇಳಿದೆ
ಗುರುತಾಗಲಿಲ್ಲವೇ ನಿನಗೆ ನಿನ್ನ ತಂಗಿ
ನಿನ್ನ ಹೆತ್ತವಳ ಮಗಳ ಗುರುತು
ಒಂದೆ ತಾಯ ಮಕ್ಕಳಲ್ಲವೆ ನಾವು
ಒಂದೆ ಹಕ್ಕಿಯ ಮರಿಯಲ್ಲವೆ
ಒಬ್ಬಳ ಹಾಲನ್ನೆ ಕುಡಿದು ಬೆಳೆದವರು
ಒಂದು ಗೂಡಲ್ಲೆ ಇದ್ದು ಬೆಳೆದವರು

ಅಣ್ಣಾ ಭೋರಾಡಿ ಅತ್ತ ಜೋರಾಗಿ
ಕಣ್ಣೀರು ಸುರಿದವು ಧಾರೆಯಾಗಿ
ಹೇಳಿದನು ಅವನು ತನ್ನ ಹೆಂಡತಿಗೆ
ಏನಾದರೂ ತಿನ್ನಲು ಕೊಡು ಈ ನನ್ನ ತಂಗಿಗೆ
ಅಣಕಿಸುವಂತೆ ನೋಡಿ ತಂದಿಟ್ಟಳು ಅವಳು
ಕೋಸು ಗಡ್ಡೆಯ ದಿಂಡು ನನ್ನ ಮುಂದೆ
ಅದರ ಜಿಡ್ಡನ್ನು ಬೆಕ್ಕು ನೆಕ್ಕಿತ್ತು
ಅದರ ಉಪ್ಪನ್ನು ನಾಯಿ ನೆಕ್ಕಿತ್ತು

ಹೇಳಿದನು ಮಡದಿಗೆ ಮೆಲ್ಲಗಿನ ದನಿಯಲ್ಲಿ
ಸ್ವಲ್ಪ ಏಲ್ ಮದ್ಯ ತಂದುಕೊಡು ತಂಗಿಗೆ
ಅಣಕಿಸುವಂತೆ ನೋಡಿ ತಂದಿಟ್ಟಳು ನೀರು
ಕರೆಯದೆ ಬಂದರೆ ನೀರು ಮಾತ್ರ
ಅದು ಕುಡಿಯುವ ನೀರಲ್ಲ

ಅಲ್ಲ ಕುಡಿಯಲು ತಕ್ಕಂಥ ನೀರು
ಅವಳು ಮೊಗವನ್ನು ತೊಳೆದಂಥ ನೀರು
ಅವಳ ತಂಗಿಯಾದವಳು ಕೈ ತೊಳೆದ ನೀರು
ಅಣ್ಣನ ಮನೆಯಿಂದ ಹೊರಬಂದೆ ನಾನು
ನಾ ಹುಟ್ಟಿದ ಮನೆಯ ತೊರೆದು ಬಂದೆ

ಪಾಪಿಗೇಡಿ ಎಲ್ಲೆಲ್ಲಿ ಅಲೆದೆ
ಎಲ್ಲೆಲ್ಲಿ ಅಲೆದೆ ಅಲೆದಲೆದು ಬಳಲಿದೆ
ಕಡಲ ದಂಡೆಯಲ್ಲಿ ಬಡಮಕ್ಕಳ ಜೊತೆಗೆ
ಗತಿ ಇಲ್ಲದೆ ಬಿದ್ದಿದ್ದ ದರಿದ್ರರ ಜೊತೆಗೆ
ಎಲ್ಲರೂ ಬೈದರು ಬೈದವರೆ ಬಹಳ
ಕೆಟ್ಟ ಕೆಟ್ಟ ಮಾತಲ್ಲಿ ಬೈದು ಅಟ್ಟಿದರು
ಚುಚ್ಚು ನುಡಿಯಾಡಿ ದೂರ ತಳ್ಳಿದರು
ಕರುಣೆ ಮಾತುಗಳು ಬಹಳ ಕಡಿಮೆ

ಮಳೆಯಲ್ಲಿ ನೆನೆಯುತ್ತ ಚಳಿಗೆ ನಡುಗುತ್ತ
ಮೇಲಂಗಿ ಮೇಲೆಲ್ಲ ಹಿಮ ಬಿದ್ದು ಕವಿದಾಗ
ಬೆಂಕಿಗೂಡಿನ ಬಳಿಗೆ ಕರೆದೊಯ್ದಂಥವರು
ಇರಲಿಲ್ಲ ಬಹಳ ಇದ್ದವರು ಕಡಿಮೆ

ನಾನು ಚಿಕ್ಕವಳಿದ್ದಾಗ ಯಾರಾದರೂ ಹೇಳಿದ್ದರೂ
ನುಡಿದರೂ ನೂರು ಜನ ನಾಲಗೆ ಸಾವಿರ ಹೇಳಿದರೂ
ನಂಬುತಿರಲಿಲ್ಲ ದುರ್ಗತಿ ಬರುವುದೆಂದು ನನಗೆ
ದುಃಖ ಕಾದಿದೆಯೆಂದು ನನಗೆ.

೧೬. ಮನೆಗೆ ಬಂದರು ಹೆಣ್ಣು ಗಂಡು

ಬಹಳ ದಿನ ಕಾದಿದ್ದರು ಬಹಳ ನಿರೀಕ್ಷಿಸುತ್ತಿದ್ದರು
ಇಲ್ಮಾರಿನೆನ್ನನ ಮನೆಗೆ ಬರುವ ಮದುಮಗಳಿಗೆ
ಕಾದಿದ್ದರು ವೃದ್ಧರು ಕಿಟಕಿಯಲ್ಲಿ
ನೀರು ಸುರಿಯುತಿತ್ತು ಕಣ್ಣಿನಲ್ಲಿ
ಕಾದಿದ್ದರು ಯುವಕರು ಬಾಗಿಲಲ್ಲಿ
ಸೋಲುತಿದ್ದವು ಕಾದು ನಿಂತ ಕಾಲು
ಮಕ್ಕಳಿದ್ದರು ನಿಂತು ಗೋಡೆಗೊರಗಿ
ಮರಗಟ್ಟುತಿದ್ದವು ಕಾದು ನಿಂತ ಪಾದ
ಕೊಳೆಯಾಗಿದ್ದವು ನಡು ವಯಸ್ಸಿನವರ ಬೂಟು
ಕಾಯುತ್ತ ತಿರುಗಾಡಿ ಮಳಲದಂಡೆಯಲ್ಲಿ

ಅಂತೂ ಒಂದು ದಿನ ಮುಂಜಾವದ ಹೊತ್ತು
ಇನ್ನೇನು ಸೂರ್ಯ ಉದಯಿಸುವ ಹೊತ್ತು
ಕೇಳಿಸಿತು ಸದ್ದು ಬನದ ಅಂಚಿಂದ
ಜೋರಾಗಿ ಬಂಡಿ ಬರುತಿರುವ ಸದ್ದು
ಲೊಕ್ಕ ಕರುಣಾಳು ಮನೆಯೊಡತಿ
ಅತಿಥಿ ಸತ್ಕಾರಕ್ಕೆ ಹೆಸರಾದ ಹೆಣ್ಣು
ಹೀಗೆ ಹೇಳಿದಳು :
ನನ್ನ ಮಗನದೇ ಅದು ಬರುತಿರುವ ಬಂಡಿ
ಬರುತಿರುವನವನು ಚೆಲುವೆ ಜೊತೆಯಾಗಿ
ಹೆತ್ತವರ ಮನೆಗೆ ನೇರವಾಗಿ

ಬಂದ ಇಲ್ಮಾರಿನೆನ್ ತಂದೆ ಕೊಟ್ಟಿದ್ದ ಮನೆಗೆ
ಹಾಡುತಿದ್ದವು ಹಕ್ಕಿ ಹರ್ಷದಿಂದ
ಸರಗೈಯುವ ಕೋಗಿಲೆ ಪಕ್ಕದಲ್ಲಿ
ನೆಗೆದೋಡುವ ಅಳಿಲುಗಳು ಬಂಡಿಯಲ್ಲಿ

ಲೊಕ್ಕಾ ಹೇಳಿದಳು :
ಕಾಯುವುದು ಹಳ್ಳಿ ಹುಣ್ಣಿಮೆಯ ಚಂದ್ರನಿಗೆ
ಕಾಯುವರು ತರುಣರು ಉದಯಿಸುವ ಸೂರ್ಯನಿಗೆ
ಹುಡುಕುವರು ಮಕ್ಕಳು ಮೆಳೆಯ ಬೆರಿ ಹಣ್ಣಿಗೆ
ಕಾಯುವುದು ನೀರು ನಾವಿಕರ ನಾವೆಗೆ

ನಾನು ಕಾದಿಲ್ಲ ಚಂದ್ರನಿಗೂ ಸೂರ್ಯನಿಗೊ
ನಾನು ಕಾದಿರುವೆ ಮಗನಿಗಾಗಿ ಸಾಕು ಮಗಳಿಗಾಗಿ
ಹಗಲೆಲ್ಲ ಕಾದೆ ಸಂಜೆಯಲ್ಲ ಕಾದೆ
ಅವರಿಗೇನಾಯಿತೂ ಗೊತ್ತಾಗಲಿಲ್ಲ
ಇಳಿದು ಹೋಗಿರುವನೋ ದಪ್ಪಗಾಗಿರುವನೊ
ಅಂತೂ ಏನೋ ಬೇಗ ಬರಲಿಲ್ಲ ಅವನು
ವಚನ ಕೊಟ್ಟಿದ್ದ ಬೇಗನೇ ಬರುತ್ತೇನೆ ಎಂದು
ಅಳಿಸಿ ಹೋಗುವ ಮುನ್ನ ಹೆಜ್ಜೆ ಗುರುತು

ಒಂದೆ ಸಮನೆ ಕಾದೆ ಚಿಂತಿಸಿದೆ ಹಗಲೆಲ್ಲ
ಯಾಕೆ ಬರಲಿಲ್ಲ ಯಾಕಿನ್ನು ಬರಲಿಲ್ಲ
ತೃಣಮಾತ್ರದ ಕುದುರೆ ಎರಡು ಹಲಗೆಯ ಬಂಡಿ
ಕರೆಯುವೆನು ಅದನ್ನೆ ನಿಜವಾದ ಬಂಡಿ :
ತಂದು ಬಿಟ್ಟರೆ ಮನೆಗೆ ತಮ್ಮನನ್ನು
ತಮ್ಮನ ಜೊತೆಗೆ ಆ ಚೆಲುವೆಯನ್ನು
ಬದುಕೆಲ್ಲ ಬಯಸಿದ್ದೆ ಈ ದಿವಸಕಾಗಿ

ಸೋತು ಹೋಯಿತು ಕತ್ತು ನೋಡಿ ನೋಡಿ
ಜಡೆಗಟ್ಟಿ ಕೂದಲು ಗಂಟು ಗಂಟು
ಇಂಗಿದವು ಒಳಗೆ ಹೊಳೆವ ಕಣ್ಣು
ಅಂತೂ ನನ್ನ ಮಗ ಬರುತಿರುವನೀಗ

ಜೊತೆಗಿರುವಳು ರಂಭೆ ಅವನ ಪಕ್ಕ
ಕೆಂಪುಗಲ್ಲದ ಚೆಲುವೆ ಅವನ ಪಕ್ಕ
ಮದುಮಗನೆ ಓ ನನ್ನ ಅಕ್ಕರೆಯ ತಮ್ಮನೆ
ಕಳಚು ಬಿಳಿಗುದುರೆ ತೆಗೆದು ಜೀನು
ಕಳಿಸು ಬಯಲಿಗೆ ತಿನ್ನುವುದಕೆ ಮೇವು
ಮಾತಾಡಿಸು ಆಮೇಲೆ ಅವರನ್ನು ಇವರನ್ನು
ಇಲ್ಲಿ ಸೇರಿರುವ ಜನರೆಲ್ಲರನ್ನು
ಹೇಳು ಪಯಣದ ಕಥನ ಮಾತಾಡಿಸಿದ ಮೇಲೆ

ಸಾಹಸಗಳೇನೇನು ಆರೋಗ್ಯ ಸರಿ ಇತ್ತೆ
ನಿನ್ನತ್ತೆ ಮನೆಗೆ ಹೊರಟಾಗ ನೀನು
ಅಡೆತಡೆಗಳ ಮುರಿಯುತ್ತ ಗೆಲ್ಲುತ್ತ

ಎತ್ತರಿಸಿದ ಗೋಡೆ ದಾಟುತ್ತ ಕೆಡವುತ್ತ
ಅವರ ಮನೆ ಹೊಸ್ತಿಲಿಗೆ ಹೋದಾಗ ನೀನು

ಹೇಳದೆಯೆ ತಿಳಿಯುತಿದೆ
ಫಲ ನೀಡಿದೆ ಪಯಣ
ಸುಗಮವಾಗಿದೆ ಪಯಣ
ಪಾರಿವಾಳವಿದೆ ಈಗ ಅವನ ರಕ್ಷಣೆಯಲ್ಲಿ
ಬೆಚ್ಚಗಿದೆ ಹಕ್ಕಿ ಅವನ ತೋಳಲ್ಲಿ
ಹೊಳೆವ ಸುಂದರಿ ಅವನ ಪಕ್ಕದಲ್ಲಿ
ಚೆಲುವ ಸೂಸುವ ರಥ ಪಕ್ಕದಲ್ಲಿ

ತಂದವರು ಯಾರು ಸುಳ್ಳು ಸುಳ್ಳೆ ಸುದ್ದಿ
ಮದುವಣಗ ಬರುತಿರುವ ಒಂಟಿಯಾಗಿ
ಪಯಣ ಹೋಗಿದ್ದು ವಿಫಲವಾಗಿ
ಬರಲಿಲ್ಲ ಮದುವಣಗ ಒಂಟಿಯಾಗಿ
ಆಗಿಲ್ಲ ಪಯಣ ವ್ಯರ್ಥವಾಗಿ

ತಂದಿರುವುದು ಈ ಆಶ್ವ ನಮಗಾಗಿ ಏನೋ
ಬಿಳಿಕೇಸರ ಒದರುತಿದೆ ಇಳಿಯುತಿದೆ ಬೆವರು
ನೊರೆ ಬಂದಿದೆ ಬಾಯಲ್ಲಿ ಬಲು ದೂರದಿ ಬಂದು
ಕೆಂಪು ಸುಂದರಿಯನು ಹೊತ್ತು ಅಲ್ಲಿಂದ ತಂದು

ಚೆಲುವೆಯೇ ನಿಲ್ಲು ಮೇಲೆದ್ದು ನಿಲ್ಲು
ಅವನು ಎಬ್ಬಿಸುವ ಮೊದಲೇ ಮೇಲೆದ್ದು ನಿಲ್ಲು
ಇಳಿದು ಬಾ ಕೆಳಗೆ ನಡೆದು ಬಾ ಇಲ್ಲಿ
ಹೂವುಹಾದಿಯಲ್ಲಿ ಕೆಂಪು ಅಂಗಳದಲ್ಲಿ
ಸೂಕರಗಳು ತುಳಿದು ನೆಲವಾಗಿದೆ ಸಮತಟ್ಟು
ಕುರಿಮರಿಗಳು ಓಡಾಡಿ ನೆಲ ಮಟ್ಟಸವಾಗಿದೆ
ಕೇಸರಗಳು ಸವರಿ ನೆಲ ನುಣುಪಾಗಿದೆ
ಹಂಸದಂತಹ ಹೆಜ್ಜೆ ಇಟ್ಟು ಬಾ ಹೆಣ್ಣೆ
ಹಕ್ಕಿ ಮರಿಯಂತೆ ನಡೆದು ಬಾ ಹೆಣ್ಣೆ

ತಂದೆ ಯಜಮಾನಿಕೆಯ ತಾಯಿ ಗೃಹ ಕೃತ್ಯದ
ಕೆಲಸದಂಗಳ ಮೈದುನನ

ಹೂವಿನಂಗಳ ನಾದುನಿಯ
ಮನೆಯ ಹೊಸ್ತಿಲಿಗೆ ನೀನು
ಕಾಲಿಟ್ಟು ಬಾರೆ
ಜೇನಂಥ ನೆಲದಲ್ಲಿ ನಡೆಯುತ್ತ ಬಾರೆ
ಒಳಕೋಣೆ ಮನೆಗಳಿಗೆ ಅಡಿಯಿಟ್ಟು ಬಾರೆ
ಚೆಲುವು ಸೂರಿನ ಮನೆಯೊಳಗೆ ಬಾರೆ

ಇದೇ ಚಳಿಗಾಲದಲ್ಲಿ
ಈಗಷ್ಟೆ ಮುಗಿದಂಥ ವಸಂತ ಕಾಲದಲಿ
ಈ ನೆಲವು ಹಾಡಿತ್ತು ನೀನಷ್ಟೆ ಇಲ್ಲಿ ನಡೆದಾಡಬೇಕೆಂದು
ಈ ಸೂರು ಹಾಡಿತ್ತು ನೀನಷ್ಟೆ ಇರಬೇಕು ಆದರಡಿಗೆ ಎಂದು
ಈ ಜಗುಲಿ ಹಾಡಿತ್ತು ನೀನಷ್ಟೆ ಬಂದಿಲ್ಲಿ ಕೂರಬೇಕೆಂದು

ಇದೇ ಚಳಿಗಾಲದಲ್ಲಿ
ಈಗಷ್ಟೆ ಮುಗಿದಂಥ ವಸಂತ ಕಾಲದಲಿ
ನುಡಿದಿದ್ದವು ಶಕುನ ಈ ಬಾಗಿಲ ಚಿಲಕ
ಉಂಗುರದ ಬೆರಳುಗಳೆ ಹಿಡಿಯುತ್ತವೆ ಎಂದು
ನುಡಿದಿದ್ದವು ಹೀಗೆ ಮಾಳಿಗೆಯ ಸೋಪಾನ
ಸೊಗಸು ಉಡುಪಿನ ನಾರಿ ನಡೆದಾಡುವಳೆಂದು
ತೆರೆದಿಟ್ಟು ಕಾದಿದ್ದವು ಮನೆಯ ಕದ ಬಾಗಿಲು
ಬರುವಂಥ ನಾರಿಯನು ಸ್ವಾಗತಿಸಲೆಂದು

ಇದೇ ಚಳಿಗಾಲದಲಿ
ಈಗಷ್ಟೆ ಮುಗಿದಂಥ ವಸಂತ ಕಾಲದಲಿ
ಹೇಳಿದ್ದವು ಕೋಣೆಗಳು ಗುಡಿಸ ಬಂದವರಿಗೆ
ಹೇಳಿತ್ತು ನಡುಮನೆಯು ಗುಡಿಸ ಬಂದವರಿಗೆ
ನುಡಿದಿದ್ದವು ಕಣಜಗಳು ಒಳಗೆ ಬಂದವರಿಗೆ
ಬರುವಳೊಬ್ಬಳು ಚೆಲುವೆ ಈ ಮನೆಗೆ ಎಂದು

ಇದೇ ಚಳಿಗಾಲದಲಿ
ಈಗಷ್ಟೆ ಮುಗಿದಂಥ ವಸಂತ ಕಾಲದಲಿ
ನುಡಿದಿತ್ತು ಅಂಗಳವು ಪಿಸುಗುಟ್ಟುವ ದನಿಯಲ್ಲಿ

ನುಡಿದಿತ್ತು ಕಿವಿಯಲ್ಲಿ ಉಗ್ರಾಣ ಕೋಣೆ
ನುಡಿದಿತ್ತು ಒಳಬಂದು ಹೋದವರಿಗೆ ಹೀಗೆ
ದೂಲಗಳು ಕೆಳಬಾಗಿ ಕಿವಿಯಲ್ಲಿ ಹೇಳಿದವು
ಜಂತಿಗಳು ಕೆಳಬಾಗಿ ಕಿವಿಯಲ್ಲಿ ನುಡಿದವು
ಬರುತ್ತಾಳೆ ಸ್ವಾಗತಿಸಿ ಚೆಲುವೆ ಎಂದು

ಇದೇ ಚಳಿಗಾಲದಲಿ ಈಗಷ್ಟೆ ಮುಗಿದಂಥ ವಸಂತ ಕಾಲದಲಿ
ಕಾಲ್ದಾರಿ ಹೇಳಿದವು ಗುಡಿಸ ಬಂದವರಿಗೆ
ಕೊಟ್ಟಿಗೆ ನುಡಿದವು ಬಳಿಯ ಬಂದವರಿಗೆ
ಇನ್ನು ಹಾಡಿಲ್ಲ ಇಲ್ಲ ಕುಣಿತ ಇಲ್ಲ ಇನ್ನು ಯಾವೂದೂ ಕೂಡ
ನಮ್ಮ ಹಕ್ಕಿ ಮರಿಯೇ ಇಲ್ಲಿ
ಹಾಡಿ ಕುಣಿಯುವವರೆಗೆ

ಇದೇ ದಿನ ಮುಂಜಾನೆ, ನೆನ್ನೆಯೂ ಕೂಡ
ಮುಂಜಾವಿಗೇ ಹಸು ಅಂಬಾ ಎಂದಿತ್ತು
ಮರಿಗುದುರೆ ಜೋರಾಗಿ ಕೆನೆದಾಡುತ್ತಿತ್ತು
ಕುರಿಮರಿಯು ಜೋರಾಗಿ ಅರಚಿ ಹೇಳಿತ್ತು
ಹೊಸ ಒಡತಿಯೇ ತರಬೇಕು ಆಹಾರವೆಂದು

ಇದೇ ದಿನ ಮುಂಜಾನೆ, ನೆನ್ನೆಯೂ ಕೂಡ
ಕುಳಿತು ಬಿಟ್ಟರು ವೃದ್ಧ ಜನ ಕಿಟಕಿ ಹಿಡಿದು
ನಿಂತು ಬಿಟ್ಟರು ಮಕ್ಕಳು ಬೆಂಚುಗಳ ಮೇಲೆ
ಹೆಂಗಸರು ನಿಂತರು ಗೋಡೆಗೊರಗಿ
ಯುವಜನರು ಕಾದರು ಬಾಗಿಲಲ್ಲಿ
ಎಲ್ಲರೂ ಕಾದರು ವಧುವಿಗಾಗಿ

ಜಯಕಾರವೆನ್ನಿ ಮನೆಯಲಿರುವೆಲ್ಲರಿಗೆ
ಜಯಕಾರವೆನ್ನಿ ವೀರ ಪುರುಷರಿಗೆ
ಜಯಕಾರವೆನ್ನಿ ಕಣಜ ಭಂಡಾರಕ್ಕೆ
ಅತಿಥಿ ನೆಂಟರಿಗೆ
ಜಯಕಾರವೆನ್ನಿ ಈ ಮನೆಯ ನಡುಮನೆಗೆ
ಜಯಕಾರವೆನ್ನಿ ಈ ಮನೆಯ ಸೂರಿಗೆ
ಜಯಕಾರ ಕೋಣೆಗೆ ಕೋಣೆಯಲಿಹ ಜನಕೆ

ನಿಂತ ಮಕ್ಕಳ ಹೊತ್ತ ಬೆಂಬುಗಳಿಗೆ
ಜಯಕಾರ ಚಂದ್ರನಿಗೆ ಚೆಲುವರಸ ಚಂದ್ರನಿಗೆ
ಮೆರವಣಿಗೆಯಲ್ಲಿ ಬಂದಂಥ ಜನಕೆ ಜಯಕಾರ

ಇರಲಿಲ್ಲ ಮೊದಲು ಇರಲಿಲ್ಲ ನಿನ್ನೆ
ಇರಲಿಲ್ಲ ಹಿಂದೆಂದೂ
ಇಂಥ ಭವ್ಯ ಜನವಿಲ್ಲಿ ಚೆಲುವ ಜನವಿಲ್ಲಿ

ಮದುಮಗನೆ ಓ ನನ್ನ ಅಕ್ಕರೆಯ ಸೋದರನೆ
ಕೆಂಪು ರೇಷಿಮೆ ಮುಸುಕು ಪಕ್ಕಕ್ಕೆ ಸರಿಸು
ನೋಡೋಣ ನಿನ್ನ ಮುದ್ದು ಕಣ್ಮಣಿಯನ್ನು
ಐದು ವರ್ಷದ ಕಾಲ ಬಯಸಿ ತಂದವಳನ್ನು
ಎಂಟು ವರ್ಷ ಕಾದಿದ್ದು ಪಡೆದು ಬಂದವಳನ್ನು
ತಂದಿರುವೆ ತಾನೇ ನೀ ಬಯಸಿದವಳನ್ನು
ನಿಜವಾಗಿಯೂ ಚೆಲುವೆ ಹಕ್ಕಿಯಂಥವಳನ್ನು

ಹೇಳುವುದು ಬೇಕಿಲ್ಲ ಹಾಗೆಯೇ ತಿಳಿಯುವುದು
ನಿಜವಾಗಿ ತಂದಿರುವೆ ಕೋಕಿಲದ ಹಕ್ಕಿ
ಚೆಲುವಾದ ನೀಲ ಮುದ್ದು ಮರಿ ಹಕ್ಕಿ
ಹಸಿರಲ್ಲಿ ಹಸಿರಾದ ಚಿಗುರ ರೆಂಬೆ
ಹಸನಲ್ಲಿ ಹಸನಾದ ಚಿರಿಯ ಹಣ್ಣು

ಕೂತಿತ್ತು ಶಿಶುವೊಂದು ನೆಲದ ಮೇಲೆ
ಹೇಳಿತು ಶಿಶುವು ಅಲ್ಲಿಂದಲೆ
ಅಯ್ಯಾ ಸೋದರನೆ ನೀನು ತಂದಿರುವುದೇನು
ಸ್ವಲ್ಪವೂ ಚೆಲುವಿಲ್ಲ ಎಣ್ಣೆ ಮಣುಕಿನ ಮೋಟು
ನಾಚಿಕೆಯಾಗಬೇಕು ಇಷ್ಟೆಲ್ಲ ಬಯಸಿ
ಹೆಣ್ಣು ನೂರಾರು ಬಿಟ್ಟು ಸಾವಿರಾರು
ತಂದಿರುವೆ ಇಂಥವಳ ಅಂದಗೇಡಿ ಮುಖದವಳ
ಪೊದೆಯಿಂದ ತಂದಂತೆ ತರಲೆ ಹಕ್ಕಿ
ಹೊಲದಿಂದ ತಂದಂತೆ ಬೆದರುಬೊಂಬೆ

ಏನು ಮಾಡುತಿದ್ದಳು ಇಷ್ಟು ದಿನ ಇವಳು
ಹೆಣೆದಿಲ್ಲ ಕೈಚೀಲ ಹೆಣೆದಿಲ್ಲ ಕಾಲ್ಚೀಲ

ಬರಿಯ ಕೈಯಲ್ಲಿ ಬಂದಿರುವಳಲ್ಲ
ಕಿಚಗುಡುವ ಇಲಿ ಮರಿ ಬುಟ್ಟಿಯೊಳಗೆ
ಉದ್ದ ಕಿವಿ ಇಲಿಗಳು ಪೆಟ್ಟಿಗೆಯ ಒಳಗೆ

ಈ ವಿಚಿತ್ರ ಮಾತಿಗೆ ಹೇಳಿದಳು ಲೊಕ್ಕ
ಅನಿಷ್ಟ ಮಗುವೆ ನೀ ಹೇಳುತಿರುವುದೇನು
ಹೇಸಿಗೆಯಾಗಬೇಕು ನಿನ್ನ ಮಾತಿಗೆ ನಿನಗೆ
ಬೇರೆ ಯಾರಿಗಾದರೂ ಹೇಳು ಈ ಕೆಟ್ಟ ಮಾತು
ಈ ಹೆಣ್ಣಿಗೆ ಮಾತ್ರ ಬೇಡ ಈ ಮಾತು
ಈ ಮನೆಗೆ ಮಾತ್ರ ಬೇಡ ಈ ಮಾತು

ಎಂಥ ಚೆಲುವೆ ಇವಳನ್ನು ನೋಡು
ಈ ನಾಡಿನೊಳಗೆಲ್ಲ ಶ್ರೇಷ್ಠಳಿವಳು
ಬೆಟ್ಟದಲ್ಲಿರುವ ಕೆಂಪು ಹಣ್ಣಿನ ಹಾಗೆ
ಮರದ ತುದಿಯೊಳಗಿರುವ ಕೋಕಿಲದ ಹಾಗೆ
ಯಾವ ದೇಶದಲೂ ಇಲ್ಲ ಇವಳಂಥ ಚೆಲುವೆ

ಯಾರಿಗಿದೆ ಇಂಥ ಮೈಮಾಟ ಸೊಗಸು
ತೋಳಿಷ್ಟು ಬೆಳ್ಳಗೆ ಸೊಗಸಾದ ಕುತ್ತಿಗೆ
ಬರಿಕೈಯಲೇನು ಬಂದಿಲ್ಲ ಅವಳು
ಸಾಕಷ್ಟು ತಂದಿಹಳು ತುಪ್ಪಳದ ಉಡುಪು
ಉಣ್ಣೆ ಕಂಬಳಿ ಏಳು ಮತ್ತಷ್ಟು ಉಡುಪು
ಸ್ವಂತ ಕೈಯಲೆ ನೇಯ್ದು ಸ್ವಂತ ಕೈಯಲೆ ಹೆಣೆದ
ಚೆಲುವಾದ ಬಣ್ಣಗಳ ಬಗೆಬಗೆಯ ವಸ್ತ್ರ
ವಸಂತದಲಿ ಒಗೆದಿಟ್ಟು ಬೇಸಗೆಯಲಿ ಆರಿಟ್ಟು
ಎಂತೆಂಥ ಹಚ್ಚಡ ಮೆತ್ತನೆಯ ತಲೆದಿಂಬು
ರೇಶಿಮೆ ಕೊರಳ ವಸ್ತ್ರ ಚೆಲುವಾದ ಮೇಲಂಗಿ

ಗುಣವಂತ ರೂಪಸಿಯೇ
ಹೊಂಬಣ್ಣದ ಹುಡುಗಿಯೇ
ತಂದೆ ಮನೆಯಲಿರುವಂತೆ
ಇಹುದು ಗೌರವವಿಲ್ಲಿ
ಇರುವೆ ನೀನಿಲ್ಲಿ ಮನೆ ಒಡತಿಯಾಗಿ

ಇಲ್ಲಿಲ್ಲ ಯಾವ ತೊಂದರೆಯೂ ನಿನಗೆ
ಬಂದಿಲ್ಲ ನೀನೇನು ಹಾಳುಹಳ್ಳಕ್ಕೆ
ಬಂದಿರುವೆ ಸಮೃದ್ಧ ಪೈರು ಬೆಳೆ ನಾಡಿಂದ
ಅದಕಿಂತ ಸಮೃದ್ಧ ಪೈರು ಬೆಳೆ ನಾಡಿಗೆ
ಸಮೃದ್ಧ ಏಲ್ ಮದ್ಯ ಇರುವಂಥ ಮನೆಯಿಂದ
ಅದಕಿಂತ ಸಮೃದ್ಧ ಏಲ್ ಇರುವ ಮನೆಗೆ

ಕಂಡೆಯಾ ಹಾದಿಯಲಿ ಪೈರು ತೆನೆಯನ್ನು
ತಲೆ ಎತ್ತಿ ತೂಗುವ ರೈ ಧಾನ್ಯ ತೆನೆಯನ್ನು
ಈ ಮನೆಗೆ ಸೇರಿದ್ದು ಆ ಧಾನ್ಯವೆಲ್ಲ
ಆ ಹೊಲವನುತ್ತವನು ನಿನ್ನ ನಲ್ಲ

ಒಪ್ಪಿ ಬಂದಿರುವೆ ನೀನು ಈ ಮನೆಗೆ
ಸಂತೃಪ್ತಿ ಇರಲಿ ಇದರ ಬಗ್ಗೆ
ಒಡತಿಯಾಗಿರಬಹುದು ಮಗಳಂತೆ ಇರಬಹುದು
ಹಾಲುಂಟು ಹಯನುಂಟು ಸಮೃದ್ಧ ಬೆಣ್ಣೆ
ಸಾವುನಾ ನೋಡು ಎಷ್ಟು ವಿಶಾಲ
ಕೂರು ಮಣೆ ನೋಡು ಎಷ್ಟೊಂದು ಅಗಲ

ಈ ಮನೆಯ ಯಜಮಾನ ತಂದೆಯಂತೆ
ಈ ಮನೆಯ ಯಜಮಾನಿ ತಾಯಿಯಂತೆ
ಗಂಡು ಮಕ್ಕಳು ನಿನಗೆ ಅಣ್ಣ ತಮ್ಮಂದಿರು
ಹೆಣ್ಣು ಮಕ್ಕಳು ನಿನಗೆ ಅಕ್ಕ ತಂಗಿಯರು

ತರುತಿದ್ದ ಮೀನು ಅಪ್ಪ ನಿನಗೆ
ತರುತಿದ್ದ ಕೋಳಿ ಅಣ್ಣ ನಿನಗೆ
ಎಂದಾದರೂ ನಿನಗೆ ಬಯಕೆಯಾದಾಗ
ಕೇಳದಿರು ಮಾವನನು ಕೇಳದಿರು ಮೈದುನನ
ಕೇಳು ನಿನ್ನವನ ಕೈ ಹಿಡಿದ ಪತಿಯನ್ನ
ಅವನು ಹಿಡಿಯದ ಪ್ರಾಣಿ
ಈ ಕಾಡಿನೊಳಗಿಲ್ಲ
ಅವನು ಹಿಡಿಯದ ಹಕ್ಕಿ
ಈ ಆಗಸದಲಿಲ್ಲ
ಅವನು ಹಿಡಿಯದ ಮೀನು
ಯಾವ ನೀರಲೂ ಇಲ್ಲ

ಬೀಸಬೇಕಿಲ್ಲ ರುಬ್ಬ ಬೇಕಿಲ್ಲ
ಗಾಳಿ ಬೀಸುವುದು ಹೊಳೆಯು ತೊಳೆಯುವುದು

ಹಸಿರಾದ ಹುಲ್ಲು ಸುತ್ತೆಲ್ಲ ಪೈರು
ನೀನಿರುವ ಹಳ್ಳಿ ನಡು ಮಧ್ಯದಲ್ಲಿ
ಥಳಥಳಿಸುವ ನೀರು ನದಿಗಳಲ್ಲಿ
ಈಜಾಡುತ್ತವೆ ಬಾತು ಸಂತೋಷದಲ್ಲಿ

ವಧುವಿನೊಂದಿಗೆ ಬಂದ ಪುರಜನಕೆ ನೀಡಿದರು
ಭರ್ಜರಿಯ ಊಟ ಭರ್ಜರಿಯ ಮದ್ಯ
ಸಮೃದ್ಧ ಮಾಂಸ ದಿವಿನಾದ ರೊಟ್ಟಿ
ಕೊಟ್ಟು ಉಪಚರಿಸಿದರು ಬಾರ್ಲಿ ಮದ್ಯ
ಗೋಧಿಯಿಂದಿಳಿಸಿದರು ಕಟುವಾದ ಮದ್ಯ
ಎಲ್ಲವೂ ಸಮೃದ್ಧ ಎಲ್ಲವೂ ಯಥೇಚ್ಛ
ಸುಂದರವಾದ ಬಟ್ಟಲು ಹರಿವಾಣ
ಸೀಗಡಿಯ ಮೀನು ಸಾಲ್ಮನ್ ಮೀನುಗಳು
ಕತ್ತರಿಸಲೆಂದು ಬೆಳ್ಳಿ ಚೂರಿಗಳು
ಪುಟ್ಟಪುಟ್ಟನೆಯ ಚಿನ್ನ ಚೂರಿಗಳು

ಮನೆಯಲ್ಲೆ ಮಾಡಿದ ಸುರೆ
ಹೊಳೆಯಾಗಿ ಹರಿದಿತ್ತು
ಚೌಕಾಶಿಗೆಡೆಯಿಲ್ಲ ತುಂಬಿ ಉಕ್ಕಿತ್ತು
ತುಂಬಿ ಹರಿದಿತ್ತು ತೊಟ್ಟಿಕ್ಕಿ ಜಿನುಗಿತ್ತು
ನೊರೆಗಟ್ಟಿ ನಿಂತಿತ್ತು ತುಟಿಯಂಚಿನಲ್ಲಿ
ಎಲ್ಲರಿಗೂ ಮೂಡಿಸಿ ಆನಂದ ಮನದಲ್ಲಿ

ಯಾರು ಆಗುವರು ಕೋಗಿಲೆಯ ಹಕ್ಕಿ
ಯಾರು ಹಾಡುವರು ತಕ್ಕಂತೆ ಸರಿಯಾಗಿ
ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಆದ್ಯ ಚಾರಣಿಗ
ಅವನೆ ಆರಂಭಿಸಿದ ಗಾನವನ್ನು
ಹಾಡುಗಳ ಕಟ್ಟುತ್ತಾ ಹಾಡಿದನು ಅವನು
ಅವನು ಹೇಳಿದ ಹೀಗೆ :
ನನ್ನ ಪ್ರಿಯ ಸೋದರರೆ ಗಾಯನ ವಿಶಾರದರೆ
ನನ್ನ ಸ್ನೇಹಿತರೆ ಚತುರ ಮಾತಿನವರೆ

ಈಗ ಕೇಳಿರಿ ನಾನು ಹೇಳುವ ಮಾತು :
ಹಕ್ಕಿಯನು ಹಕ್ಕಿ ಮೆಚ್ಚುವುದು ವಿರಳ
ಸೋದರಿಯರವರಲ್ಲಿ ಮೆಚ್ಚುಗೆಯು ವಿರಳ
ಸೋದರರು ಜೊತೆಯಾಗಿ ನಿಲ್ಲುವುದು ವಿರಳ
ಒಂದೇ ತಾಯ ಮಕ್ಕಳು ಜೊತೆ ನಿಲ್ಲುವುದು ವಿರಳ
ಇಂಥ ಬರಡು ಬಂಜರಲ್ಲಿ ಈ ಕೆಟ್ಟ ಬಡಗಣದ ನಾಡಿನಲ್ಲಿ

ಹಾಡೋಣ ಈಗ ಕಟ್ಟೋಣ ಹಾಡು
ಹಾಡಲಾರರು ಯಾರೂ ಹಾಡುಗಾರನ ಬಿಟ್ಟು
ದನಿಗೈಯರು ಯಾರೂ ಕೋಗಿಲೆಯ ಬಿಟ್ಟು
ಸಿನೆಟಾರಳ ಹಾಗೆ ಬಣ್ಣ ಹಾಕುವರಿಲ್ಲ
ಕಂಕಹತಾರಳ ಹಾಗೆ ನೇಯುವವರಿಲ್ಲ

ಲ್ಯಾಪ್‌ಲ್ಯಾಂಡಿನ ಮಕ್ಕಳು ಹಾಡುತಿದ್ದಾರೆ
ರುಚಿಯಾದ ಎಲ್ಕ್ ಮಾಂಸ ಸವಿಯುತ್ತಾ ಅವರು
ಚಿಕ್ಕ ಸಾರಂಗದ ತುಂಡು ಮೆಲ್ಲುತ್ತ ಅವರು
ನಾನು ಹಾಡುವೆನು ನಾವೂ ಹಾಡೋಣ
ರೈ ಬ್ರೆಡ್ ಔತಣವ ಸವಿಯುತ್ತ ನಾವು
ಈ ಭೋಜನವ ಮುಗಿಸಿ ಹಾಡೋಣ ನಾವು

ಲ್ಯಾಪ್‌ಲ್ಯಾಂಡಿನ ಸುತರು ಹಾಡುತಿದ್ದಾರೆ
ಹೂಜಿಗಳನೆತ್ತಿ ನೀರು ಕುಡಿಯುತ್ತ ಅವರು
ಬಾರ್ಕ್ ಬ್ರೆಡ್ಡಿನ ಸವಿ ಮೆಲ್ಲುತ್ತ ಅವರು
ನಾನೂ ಹಾಡುವೆನು ನಾವೂ ಹಾಡೋಣ
ಧಾನ್ಯದ ಮಧುಪಾನ ಮಾಡುತ್ತ ನಾವು
ಉತ್ಕೃಷ್ಟ ಮದಿರೆ ಕಡಿಯುತ್ತ ನಾವು

ಲ್ಯಾಪ್‌ಲ್ಯಾಂಡಿನ ಮಕ್ಕಳು ಹಾಡುತಿದ್ದಾರೆ
ಹೊಗೆಯೇಳುವ ಬೆಂಕಿಯ ಸುತ್ತ ಅವರು
ಬೆಂಕಿಗೆ ಕಲ್ಲಿದ್ದಲು ಸೇರಿಸುತ್ತ ಅವರು
ನಾನು ಹಾಡುವೆನು ನಾವೂ ಹಾಡೋಣ
ಈ ಭವ್ಯ ಸೂರಿನಡಿಯಲ್ಲಿ ನಾವು
ವೈಭವದ ಮಾಳಿಗೆಯ ಕೆಳಗೆ ನಾವು

ಚಂದವಿದೆ ಇಲ್ಲಿ ಗಂಡಸರ ಬದುಕಿಗೆ
ಚಂದವಿದೆ ಇಲ್ಲಿ ಹೆಂಗಸರ ಬದುಕಿಗೆ
ತುಂಬಿರುವ ಸುರೆ ಮದಿರೆ ಗಡಿಗೆಗಳ ನಡುವೆ
ಸಿಹಿಯಾದ ಮಧುಜೇನ ಪಾತ್ರೆಗಳ ನಡುವೆ
ಈಜುತಿಹ ಮೀನುಗಳ ಸದ್ದುಗಳ ಬಳಿಯಲ್ಲಿ
ಬಲೆ ಹಾಕಿ ಸಾಲ್ಮನ್‌ಗಳ ಹಿಡಿವಂಥ ಸ್ಥಳದಲ್ಲಿ
ಕೊರತೆ ಎಂಬುದೆ ಇಲ್ಲ ಆಹಾರಕಿಲ್ಲಿ
ಕೊರತೆ ಎಂಬುದೆ ಇಲ್ಲ ಮಧುಪಾನಕಿಲ್ಲಿ

ಚಂದವಿದೆ ಇಲ್ಲಿ ಗಂಡಸರ ಬದುಕಿಗೆ
ಚಂದವಿದೆ ಇಲ್ಲಿ ಹೆಂಗಸರ ಬದುಕಿಗೆ
ಸಮೃದ್ಧವಾಗಿದೆ ಎಲ್ಲ, ಯೋಚನೆಯೆ ಇಲ್ಲ
ನೆಮ್ಮದಿಯಿಂದಿರಬಹುದು ಯಾವ ತೊಂದರೆ ಇಲ್ಲ
ಚಿಂತೆ ಮಾಡದೆ ಇಲ್ಲಿ ತಿಂದುಕೊಂಡಿರಬಹುದು
ಕ್ಲೇಶವಿಲ್ಲದೆ ಇಲ್ಲಿ ಬದುಕಬಹುದು
ಸತ್ಕರಿಸಿದ ಮನೆ ಒಡೆಯ ಇರುವ ತನಕ
ಸತ್ಕರಿಸಿದ ಒಡತಿ ಬದುಕಿರುವ ತನಕ

ಯಾರ ಹೊಗಳಲಿ ಮೊದಲು
ಒಡೆಯನನ್ನೆಅಥವಾ ಒಡತಿಯನ್ನೆ
ನಾಯಕನ ಮೊದಲು ಹೊಗಳುವುದು ರೂಢಿ
ಅವನನ್ನೆ ಸ್ತುತಿಸುವೆನು ಹೊಗಳಿ ಹಾಡಿ
ಜನ ಇರುವಂತೆ ಮಾಡಿದನು ಈ ಜವುಗು ನಾಡನ್ನು
ಕಡಲ ದಂಡೆಯಲೆಲ್ಲ ಓಡಾಡಿದನವನು
ಫರ್ ಮರದ ದಿಂಡಿನ ಗೆಲ್ಲುಗಳ ಸವರಿದನು
ಕಾಡಿನಿಂದಲೆ ಇವನು ಗೋಡೆ ಕಟ್ಟಿದನು
ಭಾರೀ ಮಲೆಯಿಂದ ದೂಲಗಳನು
ಚಂದವಾಗಿದೆ ಮನೆ ಭದ್ರವಾಗಿದೆ ಸೂರು

ಕಟ್ಟಿ ಮುಗಿದಾಗ ಈ ಮನೆಯು ಮೊದಲಲ್ಲಿ
ಇದ್ದ ಜನ ನೂರಾರು ಸಾವಿರಾರು
ಸೌಧ ಕಟ್ಟಲು ಪಟ್ಟ ಕಷ್ಟಗಳು ಎಷ್ಟು
ಕಟ್ಟುವಾಗನುಭವಿಸಿದ ತೊಂದರೆಗಳೆಷ್ಟು

ಕೈಗವಸು ಕಳಕೊಂಡ ಬಂಡೆಯಡಿಯಲ್ಲಿ
ಬಿದ್ದು ಹೋಯಿತು ಟೊಪ್ಪಿಗೆ ಕಾಡಿನಲ್ಲಿ
ಮುಳುಗಿದ್ದವು ಕಾಲ್ಚೀಲ ಜವುಗಿನಲ್ಲಿ

ನಸುಕಿನಲೆ ಎದ್ದು ತೊರೆದು ಬೆಚ್ಚನೆ ಬೆಂಕಿ
ಹೊರಟುಬಿಡುತ್ತಿದ್ದ ಕೊರೆವ ಚಳಿಯಲ್ಲಿ
ತರಚುತ್ತಿದ್ದವು ಮುಳ್ಳು ಹಿಮವು ಕಣ್ಣಲ್ಲಿ
ಸೇರಿರುವೆವು ನಾವು ಕುಲಶ್ರೇಷ್ಠನ ಸೌಧದಲಿ

ಗಾಯಕರು ತುಂಬಿಹರು ಎಲ್ಲ ಆಸನದಲ್ಲಿ
ಸಂತೃಪ್ತ ಅತಿಥಿಗಳು ಜಗುಲಿ ಮೇಲೆ
ಹರಟೆಯಲ್ಲಿ ಕುಳಿತ ಜನ ನೆಲದ ಮೇಲಿಹರು
ಜೋರು ದನಿ ಮಾತವರು ಮುಂಬಾಗಿಲಲ್ಲಿ
ಜನರು ನಿಂತಿಹರು ಗೋಡೆಗೊರಗಿ
ಅಲೆಯುತಿಹರು ಕೆಲರು ಬೇಲಿಯಲ್ಲಿ
ಅಂಗಳದಿ ಜನರೆಷ್ಟೊ ಓಡಾಡುತಿಹರು
ಎಳೆಯ ಕಂದಗಳು ನೆಲದಲ್ಲಿ ತೆವಳುತಿಹರು

ಮೊದಲು ಹೊಗಳಿದೆ ಸುಮ್ಮನೆ ಒಡೆಯನನ್ನು
ಈಗ ಹೊಗಳುವೆನು ಮನೆ ಒಡತಿಯನ್ನು
ಈ ಔತಣದ ಭೋಜನ ಅಣಿ ಮಾಡಿದವಳನ್ನು
ಮೇಜಿನ ತುಂಬಾ ಭಕ್ಷ್ಯ ತುಂಬಿದವಳನ್ನು
ಎಷ್ಟು ದೊಡ್ಡದಾಗಿತ್ತು ಬ್ರೆಡ್‌ಗಳ ಹೋಳು
ಅದೆಷ್ಟು ಮಂದವಾಗಿತ್ತು ಹಾಲುಗಂಜಿ
ಎಷ್ಟು ಮೃದುವಾಗಿ ಉಬ್ಬಿತ್ತು ಬ್ರೆಡ್ಡು
ಎಷ್ಟು ಸಡಗರದಿಂದ ಓಡಾಡಿ ಬಡಿಸಿದಳು
ಕೈತುಂಬ ಬಡಿಸಿದಳು ಹಂದಿತುಂಡನ್ನು
ತಟ್ಟೆ ತುಂಬಿಸಿದಳು ಸಿಹಿಯಾದ ರೊಟ್ಟಿ
ಎಷ್ಟು ಮೊನಚಾಗಿತ್ತು ಕತ್ತರಿಸುವ ಚೂರಿ
ಸೀಳಿ ಮೀನನ್ನು ಚಕಚಕನೆ ಕತ್ತರಿಸಿ

ಕೋಳಿ ಕೂಗುವ ಮೊದಲೇ ನಿದ್ದೆ ಬಿಟ್ಟೆದ್ದವಳು
ಸರಿಯಾಗಿ ಎಲ್ಲವನು ಮಾಡಿಟ್ಟು ಬಡಿಸಿದಳು

ಎಂಥ ಕುಶಲೆಯೊ ಮನೆ ಒಡತಿ ಈಕೆ
ಭಟ್ಟಿ ಇಳಿಸಿದಳು ಉತ್ಕೃಷ್ಟ ಮದ್ಯ
ಮೊಳಕೆ ಬರಿಸಿಟ್ಟ ಬಾರ್ಲಿ ಧಾನ್ಯದ ಮದ್ಯ
ಅತ್ಯಂತ ಮಧುರ ಸಿಹಿಯಾದ ಮದ್ಯ
ಮೊಳಕೆ ಬರಿಸಲು ಧಾನ್ಯ, ಹೊಗೆ ಕೋಣೆಯಲ್ಲಿ
ಹರವಿದಳು ಸ್ವಚ್ಛ ಹಲಗೆಗಳ ಮೇಲೆ
ಕಲೆಸಲಿಲ್ಲಾಕೆ ಅದನು ಸೌಟಿಂದ
ಕಲೆಸಿದಳು ಹದವಾಗಿ ಸ್ವಂತ ಕೈಯಿಂದ

ಎಂಥ ಕುಶಲೆಯೊ ಮನೆ ಒಡತಿ ಈಕೆ
ಹಲಗೆ ಮೇಲಿದ್ದಾಗ ಬಾರ್ಲಿ ಧಾನ್ಯವು ಹಾಗೆ
ನೋಡಿಕೊಂಡಳು ಪೂರ್ತಿ ಮೊಳಕೆಯಾಗದ ಹಾಗೆ
ಹದ ನೋಡಲು ಎದ್ದು ಬರುತಿದ್ದಳು ಅಲ್ಲಿ
ತೊರೆದು ಮೃಗಗಳ ಭೀತಿ ನಡುರಾತ್ರಿಯಲ್ಲಿ

ಹೊಗಳಿದೆವು ನಾವು ಮನೆ ಒಡತಿಯನ್ನು
ಈಗ ಹೊಗಳೋಣ ನಮ್ಮ ಕರೆದ ಜನರನ್ನು
ಅಲ್ಲಿರುವನು ತೊಟ್ಟು ಪರದೇಶದ ಕೋಟು
ಒಪ್ಪವಾಗಿದೆ ತೋಳು ಕುತ್ತಿಗೆಯ ಪಟ್ಟಿ
ನೆಲವನ್ನು ಗುಡಿಸುವ ನೀಳ ನಿಲುವಂಗಿ
ಈಜುತ್ತ ಚಲಿಸುವ ನೀಳ ನಿಲುವಂಗಿ
ಸ್ವಲ್ಪ ಮಾತ್ರ ಕಾಣುತಿದೆ ಅವನು ತೊಟ್ಟಂಗಿ
ನೇಯ್ದಿರಬಹುದದನು ಸ್ವತಃ ಚಂದ್ರನ ಮಗಳು

ಕಟ್ಟಿರುವನು ಅವನು ನಮ್ಮ ಆಮಂತ್ರಕನು
ಕಟಿಗೆ ಉಣ್ಣೆಯ ಪಟ್ಟಿ
ನೇಯ್ದಿರಬಹುದದನು ಸ್ವತಃ ಸೂರ್ಯನ ಮಗಳು
ಬೆಂಕಿ ಹುಟ್ಟುವ ಕಾಲಕೂ ಮೊದಲು
ಬೆಂಕಿಯ ಹೆಸರನ್ನು ಕೇಳುವುದುಕು ಮೊದಲು

ತೊಟ್ಟಿರುವನು ಇವನು ನಮ್ಮ ಆಮಂತ್ರಕನು
ರೇಶಿಮೆಯ ಕಾಲ್ಚೀಲ ಅದಕೆ ರೇಶಿಮೆ ಪಟ್ಟಿ
ಸ್ಯಾಟನ್ನಿನ ಬಿಗಿಪಟ್ಟಿ ಕಸೂತಿಗೆ ಚಿನ್ನ ಬೆಳ್ಳಿ

ಹೊಗಳಿದೆವು ನಾವು ಬರಮಾಡಿಕೊಂಡವನ
ಹೊಗಳೋಣ ಇನ್ನು ಕನ್ನೆ ಜೊತೆಯವಳ
ಎಲ್ಲಿಂದ ಬಂದಳೋ ಈ ಚೆಲುವೆ ಹೆಣ್ಣು
ಎಲ್ಲಿ ಆರಿಸಿದರೊ ಮುಗುಳ್ನಗೆಯ ಚೆಲುವನ್ನು
ಆರಿಸಿರಬೇಕಿವಳನ್ನು ತನಿಕ್ಕಾದ ಕೋಟೆಯಲಿ
ಹೊಸಕೋಟೆ ಮನೆಯಲ್ಲಿ.
ಇಲ್ಲ ತರಲಿಲ್ಲ ಅಲ್ಲಿಂದ ಇವಳ
ಖಂಡಿತಕೂ ತಂದಿಲ್ಲ ಅಲ್ಲಿಂದ ಇವಳ
ಆರಿಸಿರಬೇಕಿವಳನ್ನು ಕಡಲಿನಿಂದಾಚೆಯಲಿ
ಸಾಗರದ ಒಡಲಿನಲ್ಲಿ
ಇಲ್ಲ ತರಲಿಲ್ಲ ಅಲ್ಲಿಂದ ಇವಳ
ಖಂಡಿತಕೂ ತಂದಿಲ್ಲ ಅಲ್ಲಿಂದ ಇವಳ

ಆರಿಸಿರಬೇಕಿವಳನ್ನು ಮುಗುಳ್ನಗೆಯ ಚೆಲುವನ್ನು
ಬೆಳೆದಿದ್ದಳವಳು ಹಣ್ಣಿನಂತೆ
ಬೇಲಿ ಮೇಲಿರುವ ಕೆಂಪು ಹಣ್ಣಿನಂತೆ
ಸಸ್ಯವನರಾಶಿಯಲಿ ಬೆಳೆದಿದ್ದಳವಳು
ಅರಳಿದ್ದಳವಳು ಹೂವಿನಂತೆ
ಹೊನ್ನ ಹೊಂಬಣ್ಣದ ಪುಷ್ಪದಂತೆ
ಅಲ್ಲಿಂದ ತಂದರು ಕನ್ನೆ ಜೊತೆಯವಳ
ಅಲ್ಲಿ ಆರಿಸಿದರು ಮುಗುಳ್ನಗೆಯ ಚೆಲುವನ್ನು

ಮಾಟವಾಗಿದೆ ಬಾಯಿ ಸುವೊಮಿಯ ಕದಿರಂತೆ
ಹೊಳೆಯುತ್ತವೆ ಕಣ್ಣು ಬಾನತಾರೆಗಳಂತೆ
ಮಿಂಚುತ್ತವೆ ಹೀಗೆ ಈ ಚೆಲುವೆ ಕೆನ್ನೆ
ನೀರ ತೆರೆಯಂತೆ ಬೆಳದಿಂಗಳಲ್ಲಿ
ಚಿನ್ನ ಅವಳ ಕೊರಳಹಾರ ಚಿನ್ನ ಶಿರದ ಭೂಷಣ
ಕೈಯಲಿರುವ ಕಡಗ ಚಿನ್ನ ಚಿನ್ನ ಬೆರಳಿನುಂಗುರ
ಚಿನ್ನ ಕಿವಿಯ ಕುಂಡಲ ಚಿನ್ನ ಕೆನ್ನೆ ಸರಪಳಿ
ಹುಬ್ಬು ಹಣೆಗೂ ಅಲಂಕಾರ ಹೊಳೆವರತ್ನದಾ ಮಣಿ
ಹೊನ್ನ ಸೊಂಟಪಟ್ಟಿ ಕಂಡೆ ಹೊಳೆವ ಚಂದ್ರನೆನ್ನಲೆ
ಹೊಳೆವ ಮಣಿಯ ಹಾರ ಕಂಡು ಹೊಳೆವ ಸೂರ್ಯನೆನ್ನಲೆ
ಒನೆದಾಡುವ ಶಿರಭೂಷಣ ಕಡಲನಾವೆ ಎನ್ನಲೆ

ಹೊಗಳಿದೆವು ನಾವು ಕನ್ನೆ ಜೊತೆಯವಳ
ಇನ್ನು ಹೊಗಳೋಣ ಉತ್ಸವಕೆ ಬಂದವರ
ಬಹುಸುಂದರ ಈ ಸಮೂಹ ಮಹಾಘನತೆ ಜನಗಳ
ವೃದ್ಧ ಜನ ಗಂಭೀರ ತರುಣ ಜನ ಸುಂದರ
ಚೆಲುವಾಗಿದೆ ಈ ಸಮೂಹ ಮಹಾಘನತೆ ಜನಗಳ

ಎಲ್ಲ ಜನರ ನೋಡಿದೆ ಎಲ್ಲ ಜನರ ತಿಳಿದೆನು
ಇಲ್ಲ ಹಿಂದೆ, ಸಿಗದು ಮುಂದೆ, ಇಂಥ ಮನೆಯ ಯೋಗ
ಇಲ್ಲ ಹಿಂದೆ, ಸಿಗದು ಮುಂದೆ, ಇಂಥಜನ ಸುಯೋಗ
ವೃದ್ಧ ಜನರು ಗಂಭೀರ ತರುಣ ಜನರು ಸುಂದರ
ಜನರ ವಸ್ತ್ರ ಶ್ವೇತವರ್ಣ ಹಿಮವು ಬಿದ್ದ ಬನದ ಹಾಗೆ
ಹೊಂಬಣ್ಣದ ಬೆಳಗಿನಂತೆ ಮುಂಜಾವದ ಬೆಳಕಿನಂತೆ

ಕೊರತೆಯಿಲ್ಲ ಬೆಳ್ಳಿಗಿಲ್ಲಿ
ಚಿನ್ನವು ಎಲ್ಲೆಡೆ ಚೆಲ್ಲಾಡಿ
ಇದ್ದವು ಹಣ ತುಂಬಿದ ಚೀಲ
ಹುಲ್ಲಲಿ ನಡೆಯುವ ಹಾದಿಯಲಿ
ಎಲ್ಲವೂ ಇತ್ತು ಆಮಂತ್ರಿತ ಜನಕೆ
ಆದರ ಗೌರವ ಅತಿಥಿ ಜನಕ್ಕೆ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಹತ್ತಿದನು ಬಂಡಿ ಹಾಡುಗಳ ಸರದಾರ
ಹಾಡುತಲೆ ಇದ್ದ ನಿಲ್ಲಿಸದ ಹಾಗೆ
ಹಾಡಿದನೊಂದು ಹಾಡಿದನೆರಡು
ಹಾಡುತಲಿರಲು ಮೂರನೆ ಹಾಡು

ಕಲ್ಲು ಬಂಡೆಗೆ ಬಡಿಯಿತು ಬಂಡಿ
ಹಾಡಿನ ಧಾರೆಯ ಮುರಿಯಿತು ಬಂಡಿ
ಹಲಗೆಯು ಮುರಿಯಿತು ಬಂಡಿಯು ಮುರಿಯಿತು
ಸಿಡಿಯಿತು ದೂರಕೆ ಚೂರಾಗಿ

ಇಲ್ಲವೇ ಯಾರೂ ಈ ತರುಣರಲ್ಲಿ
ಇಲ್ಲವೇ ಯಾರೂ ವಯಸ್ಕರಲ್ಲಿ
ಟುವೊನೆಲಾಗೆ ಹೋಗುವಂಥವರು

ಅಲ್ಲಿಂದ ಹರಕೆಯ ತರುವವರು
ಹೊಸದಾದ ಬಂಡಿ ನಾ ಕಟ್ಟುವಂತೆ
ಮುರಿದ ಬಂಡಿಯನು ಸರಿಪಡಿಸುವಂತೆ

ಯುವಜನರು ಹೇಳಿದರು ವೃದ್ಧ ಜನ ಹೇಳಿದರು
ಯಾರಿಲ್ಲ ಅಂಥವರು ಹರಯದವರಲ್ಲಿ
ಯಾರಿಲ್ಲ ಅಂಥವರು ವೃದ್ಧರಲ್ಲಿ
ಯಾರಿಲ್ಲ ಅಂಥ ಶ್ರೇಷ್ಠರಿಲ್ಲಿ
ಯಾರಿಲ್ಲ ಅಂಥ ವೀರರಿಲ್ಲಿ
ಟುವೋನೆಲಾಗೆ ಹೋಗುವಂಥವರು
ಟುವೋನಿ ಕೃಪೆ ಬೇಡಿ ತರುವಂಥ ಜನರು
ನೀ ನಿನ್ನ ಬಂಡಿ ಕಟ್ಟುವಂತೆ
ಮುರಿದ ಬಂಡಿಯ ನೀನು ಸರಿಪಡಿಸುವಂತೆ

ವೃದ್ಧ ವೆಯ್ನಾಮೊಯ್ನನ್ ಆದ್ಯ ಚಾರಣ
ಮತ್ತೆ ಹೋದನು ಟುವೋನಿ ನಾಡಿಗೆ
ತಂದನಲ್ಲಿಂದ ಶುಭದ ಹರಕೆ
ಮನಾ ಲೋಕದ ಶುಭದ ಹರಕೆ
ವೆಯ್ನಾಮೊಯ್ನನ್ ಹಿರಿಯ ಮಂತ್ರಗಾರುಡಿಗ
ಮಂತ್ರ ಪಠಿಸಿದನು ಬೆಳೆವಂತೆ ಕಾಡು

ಬೆಳೆಯಿತೊಂದು ಓಕ್ ವೃಕ್ಷ ಪರ್ವತದ ಆ್ಯಶ್ ವೃಕ್ಷ
ಈ ಮರದಿಂದ ಕೆತ್ತಿದನು ಬಂಡಿ ಹಲಗೆ
ಮಾಡಿದನು ತಕ್ಕಂಥ ಬಂಡಿ ಗಾಡಿ
ಕಟ್ಟಿದನು ಅಶ್ವಗಳ ಕಂದು ಬಣ್ಣದ ಅಶ್ವ

ಹತ್ತಿ ಕುಳಿತನು ಮತ್ತೆ ಬಂಡಿಯೊಳಗೆ
ಕುದುರೆ ಓಡಿತು ಮುಂದೆ ಬೀಸದೆಯೆ ಚಾಟಿ
ಪರಿಚಯದ ಹಾದಿಯಲಿ ಮುಂದೆ ಓಡಿ
ತಂದಿಳಿಸಿತು ಅವನನ್ನು ಆದ್ಯ ಚಾರಣನನ್ನು
ಅವನ ಮನೆ ಬಾಗಿಲಿಗೆ ತೆರೆದ ಬಾಗಿಲಿಗೆ
ಕ್ಷೇಮದಿಂದಿಳಿಸಿತು ಮನೆಯ ಹೊಸ್ತಿಲಿಗೆ

❖ ❖ ❖

17. ಪೊಹೊಜ್ಲಾದಲ್ಲಿ ದ್ವಂದ್ವಯುದ್ಧ

ಲೆಮಿನ್ಕಾಯ್ನನ್ ಒಬ್ಬ ಪುಂಡು ಸಾಹಸಿ. ಪೊಹೊಜ್ಲಾದ ಔತಣಕ್ಕೆ ತನ್ನನ್ನು ಕರೆಯ ಲಿಲ್ಲವೆಂದು ಕೋಪಾವೇಶಗೊಳ್ಳುತ್ತಾನೆ. ಕರೆಯದೇ ಹೋಗುವುದೇ ವೀರರ ಲಕ್ಷಣ ಎಂದು ಪೊಹೊಜ್ಲಾಗೆ ಹೊರಟಾಗ, ಬೇಡವೆಂದು ಅವನ ತಾಯಿ ತಡೆಯುತ್ತಾಳೆ. ಆದರೂ ಅವನು ಹೊರಟು ನಿಂತಾಗ ದಾರಿಯಲ್ಲಿ ಎದುರಾಗುವ ಗಂಡಾಂತರಗಳನ್ನು ತಾಯಿ ತಿಳಿಸುತ್ತಾಳೆ. ತನ್ನ ಮಾಂತ್ರಿಕ ಕುಶಲತೆಯಿಂದ ಈ ಎಲ್ಲ ಅಪಾಯಗಳನ್ನು ನಿವಾರಿಸಿಕೊಂಡು ಅವನು ಯಶಸ್ವಿಯಾಗಿ ಪೊಹೊಜ್ಲಾ ತಲುಪುತ್ತಾನೆ.

ಕರೆತಂದೆನು ಕವುಕೋ ನಾಡಿನವನನ್ನು
ಕಡಲದೇವನ ಪುತ್ರ ಲೆಮಿನ್ಕಾಯ್ನನನ್ನು
ಮೃತ್ಯುದವಡೆಯ ದಾಟಿ
ಕಲ್ಮಾ ಬಾಯಿ ತಪ್ಪಿಸಿ
ಈಗ ಹೇಳಬೇಕಿದೆ ನಾನು
ಲೆಮಿನ್ಕಾಯ್ನನ್ ರೂಪವಂತ
ಹೇಗೆ ಬಂದನು ಪೊಹ್ಜಾದ ಬೀಡಿಗೆ
ಕವಿದ ಕಾವಳದ ಸರಿಯೋಲಾ ಮನೆಗೆ
ಕರೆಸಿಕೊಳ್ಳದೆ ಔತಣಕೂಟಕ್ಕೆ
ಕರೆಯದಿದ್ದರೂ ಕೂಡ
ಮಧುಪಾನದುತ್ಸವಕೆ

ಚೆಲುವ ಚೆನ್ನಿಗ ಅವನು ಶುದ್ಧ ಘಟಿಂಗ
ನುಗ್ಗಿದನು ಬೀಡೊಳಗೆ
ಕಾಲ ಕೆಳಗಿನ ನೆಲವದುರಿ
ನಡುಗಿದವು ಗೋಡೆ

ಶರಣು ಎಲ್ಲರಿಗೆ ವಂದನೆಗಳೆಲ್ಲರಿಗೆ
ಕೇಳೆಲೊ ಇಲ್ಲಿ ಪೊಹ್ಜಾದ ಒಡೆಯ
ಇದೆಯೇನು ಮನೆಯಲ್ಲಿ ಕುದುರೆಗಾಗುವ ಮೇವು
ಅರ್ಪಿಸಲು ಮದಿರೆ ಈ ವೀರಪುಂಗವಗೆ
ಮನೆ ಒಡೆಯನಿದ್ದ ಮೇಜು ತುದಿಯಲ್ಲಿ
ಅಲ್ಲಿಂದಲೇ ಹೇಳಿದ

ಇರಬಹುದು ಜಾಗ ನಿನ್ನ ಅಶ್ವಕ್ಕೆ
ಅಷ್ಟೇಕೆ ನಿನಗೂ ಇಲ್ಲವೆನ್ನೆನು ನಾನು
ಅಗೋ ಆ ಮೂಲೆಯಲ್ಲಿ ಅಥವಾ ಮನೆಯ ಬಾಗಿಲಲ್ಲಿ
ಪಾತ್ರೆ ಕೊಳಗವಿದೆ ನೋಡು ಆ ಮೂಲೆಯಲ್ಲಿ

ಪರಚಿಕೊಂಡನು ಗಡ್ಡ ಸಿಟ್ಟಿಂದ ಅವನು
ಮಸಿ ಹಿಡಿದ ಪಾತ್ರೆಯಂತೆ ಕಪ್ಪು ಬಣ್ಣದ ಗಡ್ಡ
ಇರಲಿ ಪಾಪಿಗಳು ಅಂಥ ಜಾಗದಲ್ಲಿ
ನನ್ನ ತಂದೆ ನಿಲ್ಲಲಿಲ್ಲ ಅಂಥ ಜಾಗದಲ್ಲಿ
ಎಲ್ಲಿ ಹೋದರೂ ಇರುತ್ತಿತ್ತು ಮರ್ಯಾದೆಯ ಜಾಗ
ಅವನಿಗೂ ಮತ್ತವನ ಕುದುರೆಗೂ ಕೂಡ
ಕೈಗವಸಿಗೂ ಅವನ ಕತ್ತಿಗೂ ಕೂಡ
ಇರಬಾರದೇಕೆ ಅದು ಅವನ ಮಗ ನನಗೂ

ನುಗ್ಗಿದನು ಹೇಳುತ್ತಾ ಮೇಜಿನಾ ತುದಿಗೆ
ಫರ್ ಮರದ ಬೆಂಚು ಕುಳಿತೊಂದು ಬದಿಗೆ
ಕಿರುಗುಟ್ಟಿತು ಬೆಂಚು ತತ್ತರಿಸಿತು ಬೆಂಚು
ಹೇಳಿದನು ಲೆಮಿನ್ಕಾಯ್ನನ್
ಇದ್ದಂತಿಲ್ಲ ಇಲ್ಲಿ ಸ್ವಾಗತವು ನನಗೆ
ಈಗಷ್ಟೇ ಬಂದ ಅತಿಥಿ, ಮದಿರೆ ಇಲ್ಲ ನನಗೆ

ಮನೆ ಒಡತಿ ಇಲ್ಲೊತಾರ್ ಹೇಳಿದಳು ಹೀಗೆ
ಅಯ್ಯಾ ಹುಡುಗ ಲೆಮಿನ್ಕಾಯ್ನನ್
ಬಂದಿಲ್ಲ ನೀನು ಅತಿಥಿಯಾಗಿಲ್ಲಿ
ಬಂದಿರುವೆ ನನ್ನ ತಲೆ ತುಳಿಯಲೆಂದು
ನೆನೆಹಾಕಿಲ್ಲ ಬಾರ್ಲಿ ಧಾನ್ಯ ಮೊಳೆತಿಲ್ಲ
ಬೇಯಿಸಿಲ್ಲ ಬ್ರೆಡ್ ಬೆಂದಿಲ್ಲ ಮಾಂಸ
ಬಂದಿದ್ದರೆ ಸರಿಯಿತ್ತು ನೆನ್ನೆ ಅಥವಾ ನಾಳೆ

ವಕ್ರವಾಗಿ ಬಾಯಿ ತಿರುಚಿ ತಲೆ ಕೊಡವಿ ಹೇಳಿದ
ಕೋಪದಿಂದ ಪರಚಿಕೊಂಡ ಕಪ್ಪುಗಡ್ಡ
ಮುಗಿದಿದೆ ಔತಣ ಮುಗಿದಿದೆ ಉತ್ಸವ
ಮುಗಿದಿದೆ ಮದಿರೆ ಹಂಚುವುದು
ಸಾಗಿಸಿಯಾಗಿದೆ ಮದಿರೆ ಪಾತ್ರೆ
ಮಗುಚಿಟ್ಟಾಗಿದೆ ಪಾನ ಪಾತ್ರೆ

ಪೊಹ್ಜೊಲಾ ಒಡತಿಯೆ ಉದ್ದಹಲ್ಲಿನ ಯಜಮಾನಿಯೆ
ಮಾಡಲಿಲ್ಲ ಸರಿಯಾಗಿ ವ್ಯವಸ್ಥೆಗಳ ನೀನು
ಮಾಡಿರುವೆ ಎಲ್ಲವನೂ ಬಲು ತುಚ್ಛವಾಗಿ
ರಾಶಿ ಬ್ರೆಡ್ ಮಾಡಿಸಿದೆ ಬಾರ್ಲಿ ಮದ್ಯ ಇಳಿಸಿದೆ
ಆರು ಸಲ ಬರ ಹೇಳಿ ಒಂಬತ್ತು ಸಲ ಕರೆದುಬಂದೆ
ಬಡವರನ್ನು ದರಿದ್ರರನ್ನು
ನೀಚರನ್ನು ಶುದ್ಧ ಸೋಮಾರಿಗಳನ್ನು
ಉಡಲು ಗತಿಯಿಲ್ಲದವರ ಕೂಲಿಯವರ ಕರೆದೆ
ಕರೆದೆ ನೀನು ಎಲ್ಲರನೂ ನನ್ನ ಬಿಟ್ಟು

ಯಾಕಿಂಥ ತಿರಸ್ಕಾರ ನನ್ನ ಬಗ್ಗೆ ನಿನಗೆ
ಸ್ವತಃ ಕಳಿಸಿದ್ದರೂ ಬಾರ್ಲಿ ಧಾನ್ಯ ಮದುವೆಗೆ
ಕೊಟ್ಟರೆಲ್ಲ ಹಿಡಿಯಷ್ಟು ತಟ್ಟೆ ಬಟ್ಟಲಷ್ಟು
ನಾನು ಕೊಟ್ಟೆ ಸೇರು ಸೇರು ಅರ್ಧ ಮಣವಾಗುವಷ್ಟು
ನಾನೇ ಬೆಳೆದ ಬಾರ್ಲಿ ಅದು ಉತ್ಕೃಷ್ಟ ಧಾನ್ಯವದು
ಆದರೇನು ನೋಡು ನನಗೆ ಸಿಕ್ಕಂಥ ಸ್ವಾಗತ
ಮದಿರೆ ಇಲ್ಲ ಊಟವಿಲ್ಲ ಅಡುಗೆಗಿಡಲೆ ಇಲ್ಲ
ಎಷ್ಟು ದೂರದಿಂದ ಪಯಣ ಬಂದೆನಲ್ಲ

ಇಲ್ಮೊತಾರ್ ಹೇಳಿದಳು ಹೆಣ್ಣಾಳಿಗೆ
ತಂದುಕೊಡು ಊಟ ಮದಿರೆಯ ಪರದೇಸಿಗೆ
ಅವಳೊಂದು ಹೆಣ್ಣಾಳು ಬಲು ದರಿದ್ರದ ಹುಡುಗಿ
ಯಾವುದೋ ತಟ್ಟೆ ತೊಳೆದು ಊಟ ತುಂಬಿದಳು
ಮಾಂಸವಿಲ್ಲ ಬರಿ ಮೂಳೆ ಉಳಿದಿದ್ದ ಮೀನು ತಲೆ
ಬತ್ತಿ ಒಣಗಿದ ಕೋಸುಗಡ್ಡೆಯ ಹೋಳು
ಕಲ್ಲಂತೆ ಗಟ್ಟಿ ಬ್ರೆಡ್ ಚೂರು ಮುರುಕು
ಕೆಟ್ಟ ಗಲೀಜು ನೀರಂಥ ಮದ್ಯ ಒಂದು ಬಟ್ಟಲು

ಮದ್ಯದ ಬಟ್ಟಲು ನೋಡಿದ ತೇಲುತ್ತಿತ್ತು ಹುಳವೊಂದು
ನುಡಿದನವನು ಕೋಪದಿಂದ
ಹೋಗಿಬಿಡು ಹೆಣ್ಣೆ ಹಾಳಾಗಿ ನರಕಕ್ಕೆ

ಮದ್ಯವನು ನೋಡುತ್ತ ಹೇಳಿದನು ಹೀಗೆ
ಓ ಮದಿರೆಯೆ ನಿನ್ನಲ್ಲಿ ಬರಿ ಅನಿಷ್ಟವೆ ತುಂಬಿದೆ
ಆದರೂ ಕುಡಿಯುವೆನು ಉಳಿದಷ್ಟು ಚೆಲ್ಲುವೆನು

ಜೇಬಿಂದ ತೆಗೆದ ಕಬ್ಬಿಣದ ಕೊಕ್ಕೆ
ಇಳಿಸಿ ಬಟ್ಟಲೊಳಗೆ ಹುಳುವನ್ನು ತೆಗೆದ
ಕಪ್ಪು ಮದಿರೆಯ ಕುಡಿದು ಹೇಳಿದನು ಹೀಗೆ
ಮನ್ನಣೆಯ ಕೊಡಲಿಲ್ಲ ಅತಿಥಿಯಾಗೆನಗೆ
ತಕ್ಕಂಥ ಮದಿರೆ ಕೊಡಲಿಲ್ಲ ನನಗೆ
ಸುರಪಾನವಿಲ್ಲ ಕುರಿ ಕಡಿಯಲಿಲ್ಲ
ಜಿಂಕೆ ಮಾಂಸವೂ ಇಲ್ಲ ದನದ ಮಾಂಸವೂ ಇಲ್ಲ

ಪೊಹ್ಜೊಲಾ ಒಡೆಯ ಕೇಳಿದನು ಅವನು
ನೀನೇಕೆ ಬಂದೆ ಯಾರು ಕರೆದರು ನಿನ್ನ

ಲೆಮಿನ್ಕಾಯ್ನನ್ ಹೇಳಿದ;
ಕರೆದಿದ್ದರೆ ಒಳ್ಳೆಯದು ಅತಿಥಿಯನ್ನು
ಕರೆಯದಿದ್ದರೆ ಒಳ್ಳೆಯದು ಅದಕಿಂತ ಇನ್ನೂ
ಪೊಹ್ಜಾ ಯಜಮಾನ ಕೇಳಿಲ್ಲಿ ಮಾತು
ಕೊಟ್ಟಾದರೂ ಕೊಡು ಮದ್ಯವನು ದುಡ್ಡಿಗೆ
ಹಣ ತೆಗೆದುಕೊಂಡಾದರೂ ಕೊಡು ಮದ್ಯ ನನಗೆ

ಕೋಪವೇರಿತು ಪೊಹ್ಜೊಲಾ ಯಜಮಾನನಿಗೆ
ಕಿಡಿಕಿಡಿಯಾದ ಸಿಟ್ಟಿಂದ
ಬೆಂಕಿಯಾದ ಅಪಮಾನದಿಂದ
ಮದಿರೆಯ ಕೊಳ ಸೃಷ್ಟಿಸಿದ ಮಂತ್ರ ಹಾಕಿ
ನದಿಯೇ ಇದೆ ಇಲ್ಲಿ ಕುಡಿವುದಕೆ ನಿನಗೆ
ಕುಡಿದುಕೊ ಮನವು ತಣಿಯುವಷ್ಟರವರೆಗೆ

ಲೆಮಿನ್ಕಾಯ್ನನ್‌ಗೆ ಕಳವಳವೇನಾಗಲಿಲ್ಲ
ಹೀಗೆಂದು ನುಡಿದ:
ಹೆಂಗಸರು ಹಿಡಿದು ತರುವಂಥ ಹಸುವಲ್ಲ
ಹಿಂದೆ ಬಾಲವಿಹ ದನವಲ್ಲ
ಹಾಗೆಯೇ ಹಳ್ಳಕ್ಕೆ ಬಾಯಿ ಹಾಕುವುದಕ್ಕೆ
ಗಲೀಜು ಕೊಳದಿಂದ ಹಾಗೇ ಕುಡಿವುದಕ್ಕೆ

ಅವನೂ ಮಾಡಿದನು ಇಂದ್ರಜಾಲ
ನೆಲದ ಮೇಲೊಂದು ಸೃಷ್ಟಿಸಿದ ಗೂಳಿ
ಬಲವಾದ ಎತ್ತು ಬಂಗಾರ ಕೋಡು
ನೀರು ಕುಡಿಯಿತು ಎತ್ತು ಆನಂದವಾಗಿ

ಪೊಹ್ಜಾದ ಒಡೆಯ ಕಡಿಮೆ ಏನಲ್ಲ
ಸೃಷ್ಟಿಸಿದ ತೋಳ ದನ ನುಂಗಲೆಂದು

ಲೆಮಿನ್ಕಾಯ್ನನ್ ಸೃಷ್ಟಿಸಿದ ಬಿಳಿ ಮೊಲವನೊಂದು
ನೆಗೆದೋಡಿತು ಮೊಲವು ತೋಳದತ್ತ ಸುಳಿದು

(ಅನಂತರ ಪೊಹ್ಜಾದ ಒಡೆಯ ನಾಯಿ, ತುಪ್ಪಳದ ಅಳಿಲು, ಕೋಳಿಯನ್ನು ಅನುಕ್ರಮ ವಾಗಿ ಸೃಷ್ಟಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಲೆಮಿನ್ಕಾಯ್ನನ್ನನು ಅನುಕ್ರಮವಾಗಿ ಅಳಿಲು ನರಿ ಮತ್ತು ಹದ್ದನ್ನು ಸೃಷ್ಟಿಸುತ್ತಾನೆ. ಆಗ ಪೊಹ್ಜಾದ ಒಡೆಯ ಹೀಗೆ ನುಡಿಯುತ್ತಾನೆ.)-

ಈ ಔತಣೋತ್ಸವಕೆ ಬಂದ ಅತಿಥಿಗಳಿಗೆ
ಆಗುವುದು ಬೇಡ ಅಪಮಾನ ನಿಂದೆ
ಮನೆ ಇರುವುದೆ ಕೆಲಸಕ್ಕೆ ರಸ್ತೆ ಪರದೇಶಿಗಳಿಗೆ
ಪಾನೋತ್ಸವದ ಗುಂಗು ಅಳಿದಿಲ್ಲವಿನ್ನೂ
ತೊಲಗಿ ಹೋಗಯ್ಯ ಇಲ್ಲಿಂದ ಅಧಮ
ಹೊರಟು ಬಿಡು ಯಾರಿಗೂ ಕಾಣದಂತೆ
ನಿನ್ನೂರಿಗೆ ಹೋಗು ಎಲೆ ನೀಚಕಪ್ಪೆ

ಲೆಮಿನ್ಕಾಯ್ನನ್ ಹೇಳಿದ :
ಅಟ್ಟುವುದು ಅಷ್ಟು ಸುಲಭವೇನಲ್ಲ
ಎಷ್ಟೆ ಕೆಟ್ಟವನಿರಲಿ ಎಂಥವನೆ ಇರಲಿ
ಅಸಾಧ್ಯ ಇಲ್ಲಿಂದ ನನ್ನ ನೀನಟ್ಟುವುದು
ಈಗಿರುವ ಸ್ಥಿತಿಯಿಂದ ಹಾಗೇ ಹೊರಟು ಹೋಗುವುದು

ಪೊಹ್ಜಾದ ಒಡೆಯ ಎಳೆದುಕೊಂಡನು ಕತ್ತಿ
ಹಿಡಿಯುತ್ತ ಕೈಯಲ್ಲಿ ಹೇಳಿದನು ಹೀಗೆ
ಅಯ್ಯಾ ಅಹ್ತಿಯೆ, ಕುಕೋಮಿಲಿಯ ಸುಂದರಾಂಗ
ಬಾರಯ್ಯ ಬಡಿದಾಡಿಲಿ ಕತ್ತಿಯನು ಕತ್ತಿ
ಮಿಗಿಲಾರೊ ನೋಡೋಣ ಹೋರಾಟದಲ್ಲಿ

ಲೆಮಿನ್ಕಾಯ್ನನ್ ನುಡಿದ:
ಹೆಚ್ಚೇನೂ ಉಳಿದಿಲ್ಲ ಈ ನನ್ನ ಕತ್ತಿಗೆ
ತುಂಡರಿಸಿ ಮೂಳೆಗಳ ಚೆಂಡಾಡಿದೆ ರುಂಡ
ಇಷ್ಟಾದರೂ ಇರಲಿ ಇನ್ನೇನೂ ಸಿಗದಿದ್ದರೆ
ಸೆಣಸೋಣ ನಾವು ಮಿಗಿಲಾರೊ ನೋಡೋಣ
ಇರಲಿಲ್ಲ ಸೋಲು ನಮ್ಮಪ್ಪನಿಗೆ ಎಂದೂ
ಮಗನೇಕೆ ಇರಬೇಕು ಕೂಸಿನಂತಿಂದು

ಕತ್ತಿ ಎಳೆದ ಒರೆಯಿಂದ ಹಿಡಿದಳತೆಯ ನೋಡಿದ
ಇವನದಕ್ಕಿಂತ ಅವನದು ಉದ್ದ
ಅರ್ಧ ಬೆರಳಷ್ಟು ಒಂದುಗುರಿನಷ್ಟು
ಅಹ್ತಿ ಕುವರ ನುಡಿದನಾಗ
ಉದ್ದವಿದೆ ನಿನ್ನದೇ ಮೊದಲು ಮಾಡು ನೀನೇ
ಪೊಹ್ಜಾದ ಒಡೆಯ ಗುರಿ ಇಟ್ಟ ತಲೆಗೆ
ಬೀಸಿದನು ಕತ್ತಿ ತಗುಲಿತ್ತು ಜಂತಿಗೆ
ತೊಲೆ ತುಂಡಾಯಿತು ಬಾಗಿಲ ಕದ ಮುರಿಯಿತು

ಅಹ್ತಿ ಕುವರ ನುಡಿದನಾಗ
ಏನಯ್ಯಾ ಮಾಡಿತ್ತು ಆ ಬಾಗಿಲು ನಿನಗೆ
ಹೊಡೆದೆಯಲ್ಲ ಜಂತಿಗೆ ಬೀಳಿಸುತ ಕೆಳಗೆ
ಕೇಳಯ್ಯ ಯಜಮಾನ
ಕಾದಾಟ ಸರಿಯಲ್ಲ ಮನೆ ಕೋಣೆಯ ಒಳಗೆ
ಕೊಳೆಯಾದರೆ ಕೋಣೆ ತೊಂದರೆ ಹೆಂಗಸರಿಗೆ
ಬಾರಯ್ಯ ಕಾದೋಣ ಹೊರ ಅಂಗಳ ಬಯಲಿಗೆ
ಬಿದ್ದ ರಕ್ತ ಚಂದ ಹುಲ್ಲಿನಂಗಳದಲ್ಲಿ
ರಕ್ತ ಇನ್ನೂ ಚಂದ ಬಿಳಿಯ ಮಂಜಿನಲ್ಲಿ

ಇಳಿದರವರು ಅಂಗಳಕ್ಕೆ ಕಂಡರಲ್ಲಿ ದನದ ತೊಗಲು
ಹಾಸಿ ಅದನು ನೆಲದ ಮೇಲೆ ನಿಂತರವರು ಅದರ ಮೇಲೆ

ಅಹ್ತಿ ಕುವರ ನುಡಿದನಾಗ
ಅಯ್ಯ ಕೇಳು ಪೊಹ್ಜಾದವನೆ
ನಿನ್ನ ಕತ್ತಿಯೆ ಉದ್ದ ನಿನ್ನ ಕತ್ತಿಯೆ ಉಗ್ರ
ಬೇಕಾಗುತ್ತದೆ ಅದು ನಿನಗೆ ನೀ ಬೀಳುವ ಮೊದಲು
ಬೇಕಾಗುತ್ತದೆ ಅದು ನಿನಗೆ ರುಂಡ ಉರುಳುವ ಮೊದಲು

ಬೀಸಿ ಬಡಿದ ಪೊಹ್ಜಾದವನು
ಒಂದು ಎರಡು ಮೂರು ಸಲ
ಆದರೇನು ಬೀಸಲಿಲ್ಲ ಯಾವ ಏಟೂ ಸರಿಯಿಲ್ಲ
ಆಗಲಿಲ್ಲ ಗೀರು ಗಾಯ ಕೊಂಕಲಿಲ್ಲ ಕೂದಲೂ

ಅಹ್ತಿ ಕುವರ ನುಡಿದನಾಗ
ಬಿಡಿ ನನಗೂ ಸ್ವಲ್ಪ ಪ್ರಯತ್ನಿಸುವೆ ನಾನೂ
ಕೊನೆಗಾದರೂ ಸಮಯ ಬಂದಂತಿದೆ ನನಗೂ
ಆದರೇನು ಪೊಹ್ಲಾದವನು ಕೇಳಲಿಲ್ಲ ಮಾತನು
ಹೊಡೆಯಲಿಲ್ಲ ಒಂದೂ ಏಟು ಬೀಸುತ್ತಲೆ ಇದ್ದನು

ಉಗುಳುತ್ತಿತ್ತು ಬೆಂಕಿಯನ್ನು ಲೆಮಿನ್ಕಾಯ್ನನ್ ಕತ್ತಿ
ಗುರಿ ಇಟ್ಟನು ಕುತ್ತಿಗೆಗೆ ಹೊಳೆವ ಕತ್ತಿ ಅಲಗನು
ಗುರಿ ಇಡುತ್ತ ನುಡಿದ ಹೀಗೆ
ನೋಡಿಕೊ ಯಜಮಾನ ನಿನ್ನ ಪಾಪಿ ಕತ್ತು
ಕೆಂಪಗಿದೆ ಹೇಗೆ ಮುಂಜಾವದ ಹಾಗೆ
ಕತ್ತು ವಾಲಿಸಿದ ಪೊಹ್ಲಾದವನು
ಹೇಗೆ ಕೆಂಪಗಿದೆ ನೋಡಲೆಂದು
ಕೂಡಲೆ ಬೀಸಿದ ಲೆಮಿನ್ಕಾಯ್ನನ್ ಕತ್ತಿ
ತಡ ಮಾಡದೆ ಬೀಸಿದ ಲೆಮಿನ್ಕಾಯ್ನನ್ ಕತ್ತಿ

ಸರಿಯಾಗಿ ಬೀಸಿದನು ಕುಂದಿಲ್ಲದೆ ಹೊಡೆದನು
ಬೇರೆಯಾಯಿತು ರುಂಡ ಮುಂಡದಿಂದ
ಕೋಸುಗಡ್ಡೆಯ ಹಾಗೆ ತೊಟ್ಟಿನಿಂದ
ಕತ್ತರಿಸಿದಂತೆ ತೆನೆ ತಾಳಿನಿಂದ
ಕಿತ್ತಂತೆ ರೆಕ್ಕೆಯನು ಮೀನಿನಿಂದ

ಉರುಳಾಡಿತು ರುಂಡ ಅಂಗಳದೊಳಗೆಲ್ಲ
ಹೊಡೆದ ಬಾಣಕ್ಕೆ ಹಣ್ಣುರುಳಿದಂತೆ

ಊರಿದ್ದವು ನೆಲದ ಮೇಲೆ ಚೂಪುದಸಿನೂರು
ನೆಟ್ಟಿದ್ದವು ನೆಲದ ಮೇಲೆ ಚೂಪುದಸಿ ಸಾವಿರ
ಒಂದೊಂದು ದಸಿಗೂ ಒಂದೊಂದು ತಲೆ ಇತ್ತು
ಒಂದು ದಸಿ ಮಾತ್ರ ಹಾಗೇ ಖಾಲಿ ಇತ್ತು
ಲೆಮಿನ್ಕಾಯ್ನನ್ ಮೇಲೆತ್ತಿದ ಬಡಪಾಯಿಯ ರುಂಡ
ಮೇಲೆತ್ತಿ ಸಿಕ್ಕಿಸಿದ ಖಾಲಿ ದಸಿಗೆ ರುಂಡ

ಮನೆಯೊಳಗೆ ಹೊಕ್ಕು ಅಹ್ತಿ ನುಡಿದನು ಹೀಗೆ
ಎಲೆ ಪಾಪಿ ಹೆಣ್ಣೆ ನೀರು ತಾರೆ
ಕೊಳೆಯಾಗಿದೆ ಕೈ ತೊಳೆಯಬೇಕಿದೆ ನಾನು

ದುಷ್ಟನವನ ನೆತ್ತರಿಂದ
ಮಲಿನವಾಗಿದೆ ಕೈ ತೊಳೆಯಬೇಕಿದೆ ನಾನು

ಕೆರಳಿದಳು ಕೋಪದಿ ಪೊಹ್ಜಾದ ಹೆಣ್ಣು
ಕನಲಿ ಅಪಮಾನದಿ ಪೊಹ್ಜಾದ ಆ ಹೆಣ್ಣು
ಹಾಕಿದಳು ಮಂತ್ರ ಸೃಷ್ಟಿಸಿದಳು ಭಟರ
ಬೀಸುಗತ್ತಿಯ ಹಿಡಿದ ಒಂದು ಸಾವಿರ ಭಟರ
ಲೆಮಿನ್ಕಾಯ್ನನ್‌ನ ತಲೆಯನ್ನು ತರಲು
ಕುತ್ತಿಗೆಯಿಂದವನ ರುಂಡವನು ತರಿಯಲು

ಅರಿವಾಯಿತು ಅವನಿಗೆ ಹತ್ತಿರ ಬಂದಿದೆ ಕಾಲ
ಕಾಲ್ತೆಗೆದು ಇಲ್ಲಿಂದ ಓಡುವಂತಹ ಕಾಲ
ತೋಚದಾಯಿತು ದಿಕ್ಕು ಆವರಿಸಿತು ಭೀತಿ
ಓಡಿದನು ಅಲ್ಲಿಂದ ಪೊಹ್ಜಾದ ಬೀಡಿಂದ
ಕರೆಸಿಕೊಳ್ಳದೆ ಬಂದಿದ್ದ ಔತಣದ ಮನೆಯಿಂದ

18. ನಡುಗಡ್ಡೆಯಲ್ಲಿ ಲೆಮಿನ್ಕಾಯ್ನನ್ ಸಾಹಸಗಳು

ಲೆಮಿನ್ಕಾಯ್ನನ್, ಪೊಹ್ಜಾದಿಂದ ವೇಗವಾಗಿ ತಪ್ಪಿಸಿಕೊಂಡು ಬಂದು ಮನೆ ಸೇರುತ್ತಾನೆ. ನೂರಾರು ಮಂದಿಯಿರುವ ಪೊಹ್ಜೊಲಾ ಭಟರಿಂದ ರಕ್ಷಿಸಿಕೊಳ್ಳಲು ಎಲ್ಲಿ ಅಡಗಲಿ ಎಂದು ತಾಯಿಯನ್ನು ಕೇಳುತ್ತಾನೆ. ತನ್ನ ಮಾತು ಮೀರಿ ಪೊಹ್ಜೊಲಾಗೆ ಹೋದುದಾಗಿ ತಾಯಿ ಆಕ್ಷೇಪಿಸುತ್ತಾಳೆ ಮತ್ತು ಅಡಗಲು ವಿವಿಧ ತಾಣಗಳನ್ನು ಸೂಚಿಸುತ್ತಾಳೆ. ಕೊನೆಗೆ ಸರೋವರಗಳಾಚೆ ದೂರದ ನಡುಗಡ್ಡೆಗೆ ಹೋಗ ಬೇಕೆಂದೂ, ಮಹಾಯುದ್ಧದ ಸಮಯದಲ್ಲಿ ಅವನ ತಂದೆ ಅಲ್ಲಿ ಕೆಲವು ಕಾಲ ಶಾಂತಿಯಿಂದ ನೆಲೆಸಿದ್ದನೆಂದೂ ತಾಯಿ ತಿಳಿಸುತ್ತಾಳೆ:

ಲೆಮಿನ್ಕಾಯ್ನನ್ ಹೊರಟ
ಚರ್ಮದ ಸಂಚಿಯಲ್ಲಿ ಬೆಣ್ಣೆ ಒಂದು ವರ್ಷಕ್ಕೆ
ಹಂದಿ ತುಂಡುಗಳು ಬೇಕಾಗುವಷ್ಟು

ಹೀಗೆ ಹೇಳಿದನು: ಮೂರು ವರ್ಷ ಇಲ್ಲಿರುವುದಿಲ್ಲ
ಹರಿದಾಡುತ್ತವೆ ಹಾವು ನನ್ನ ಹೊಲದಲ್ಲಿ
ಅಲೆದಾಡುತ್ತವೆ ಮೃಗ ಹಸಿರುಬನದಲ್ಲಿ
ಓಡಾಡುತ್ತವೆ ಸಾರಂಗ ಹೊಲಗದ್ದೆಗಳಲ್ಲಿ
ಬಾತುಕೋಳಿಗಳು ಪೊದೆ ಮೆಳೆಗಳಲ್ಲಿ

ಹೋಗಿ ಬರುವೆನು ತಾಯೆ:
ಪೊಹ್ಜಾದ ಜನ ಬಂದರೆ ಬಂದು ತಲೆ ಕೇಳಿದರೆ
ಹೇಳು ಹೀಗೆ:
ಓಡಿ ಹೋಗಿರುವನೆಲ್ಲೊ ಮೊದಲೆ ಅವನು
ಹೊಲವನೆಲ್ಲ ಹೀಗೆ ಬೀಳುಬಿಟ್ಟಿಹನು'

ನೂಕಿದನು ದೋಣಿ ನೀರಿನಲ್ಲಿ
ತೇಲಿಸಿದನದನು ಅಲೆಯ ಮೇಲೆ
ಹಾಯಿ ಎತ್ತಿದನು ತೆಳುಬಟ್ಟೆ ಹಾಯಿ
ಚುಕ್ಕಾಣಿ ಹಿಡಿದು ಗಾಳಿಗಳ ಕರೆದ
ಮಾರುತನೆ ಉಬ್ಬಿಸು ಹಾಯಿಗಳನು
ವೇಗದಲ್ಲಿ ಓಡಿಸು ನಾವೆಯನ್ನು
ಮುನ್ನಡೆಸು ಬೇಗ ಫೈನ್ ಮರದ ದೋಣಿ
ಹೆಸರಿಲ್ಲದ ನಡುಗಡ್ಡೆಗೆ
ಅನಾಮಿಕ ಭೂಶಿರಕ್ಕೆ

ಗಾಳಿ ಬೀಸಿತು ದೋಣಿ ತೇಲಿತು
ಮೊರೆಗರೆವ ಕಡಲಿನಲ್ಲಿ
ತೇಲುತ್ತಲೇ ಇತ್ತು ನೀರಿನಲ್ಲಿ
ಎರಡು ಹುಣ್ಣಿಮೆ ಮುಗಿದು
ಮೂರನೆಯದು ಬಂದಿತ್ತು
ಮುಗಿವ ಹಂತಕ್ಕೆ ಮೂರನೆಯದು
ನಡುಗಡ್ಡೆ ಭೂಮಿಯಲಿ ಸೊಬಗು ಕನ್ನೆಯರು
ಕಣ್ಣು ಹಾಯಿಸಿ ಕಡಲ ನೀರ ಮೇಲೆ
ಕಾದಿದ್ದಳೊಬ್ಬಳು ಅಣ್ಣನಿಗೆ ಮತ್ತೊಬ್ಬಳಪ್ಪನಿಗೆ
ಕಾದಿದ್ದರು ಉಳಿದವರು
ಬರಲಿರುವ ನಲ್ಲನಿಗೆ

ಕಾಣಿಸಿದ ಕವುಕೊ ದೂರದಲ್ಲಿ
ದೋಣಿ ಕಂಡಿತು ಚಿಕ್ಕ ಮೋಡದಂತೆ
ಮಾತಾಡಿಕೊಂಡರು:
ಕಾಣಿಸುತಿದೆ ಏನೋ ನೀರ ಮೇಲೆ
ತೇಲಿ ಬರತಿದೆ ಏನೋ ಅಲೆಯ ಮೇಲೆ

ಅದು ನಮ್ಮವರದೊ ದೋಣಿ ನಮ್ಮ ನಾಡಿನದೊ
ಹಾಗಿದ್ದರೆ ಬರಲಿ ಇತ್ತ ಕಡೆ ಬೇಗ
ಕಾತರಿಸಿದೆ ಕಿವಿ ಸುದ್ದಿಗಾಗಿ
ದೂರದೇಶಗಳ ವಾರ್ತೆಗಳಿಗಾಗಿ
ಶಾಂತಿ ನೆಲೆಸಿದೆಯೋ ದಡದ ಜನರಲ್ಲಿ
ಕದನ ನಡೆದಿದೆಯೇ ಅವರ ನಡುವಲ್ಲಿ

ಗಾಳಿ ನಿಂತಿತು ಅಲೆಯು ನೂಕಿದವು
ಲವಲವಿಕೆಯ ಲೆಮಿನ್‌ಕಾಯ್ನನ್ ನಡೆಸಿದನು ದೋಣಿ
ನಡೆಸಿದನು ದೋಣಿಯನು ತೀರದೆಡೆಗೆ
ತಲುಪುತ್ತಿದ್ದಂತೆ ದಡ ಕೇಳಿದನು ಹೀಗೆ:
ಸ್ಥಳವಿದೆಯ ಇಲ್ಲಿ ಈ ನಡುಗಡ್ಡೆಯಲ್ಲಿ
ದೋಣಿ ನಿಲ್ಲಿಸಲು ದಡಕದನು ತರಲು

ಹುಡುಗಿಯರು ಹೇಳಿದರು
ಸ್ಥಳವಿದೆ ಇಲ್ಲಿ ತಾಣವಿದೆ ಇಲ್ಲಿ
ಒಂದಲ್ಲ ನೂರಕ್ಕೆ ನೂರಲ್ಲ ಸಾವಿರಕ್ಕೆ

ದೋಣಿಯನ್ನೆಳೆದು ನೀರಿಂದ ಬಂದ
ಲೆಮಿನ್ಕಾಯ್ನೆನ್ ಕೇಳಿದ:
ಸ್ಥಳವಿದೆಯೆ ಇಲ್ಲಿ ಈ ನಡುಗಡ್ಡೆಯಲ್ಲಿ
ಅಡಗಿಸಿಕೊಳ್ಳಲಿಕ್ಕೆ ದುರ್ಬಲನ ಆಶ್ರಯಕ್ಕೆ
ಬಂದಿರುವೆ ಪಾರಾಗಿ ಕದನದಿಂದ
ಬಡಿದಾಡುವ ಉಕ್ಕಿನಲುಗಿನಿಂದ

ದ್ವೀಪದ ಹುಡುಗಿಯರು ಹೇಳಿದರು ಹೀಗೆ:
ಸ್ಥಳವಿದೆ ಇಲ್ಲಿ ಈ ನಡುಗಡ್ಡೆಯಲ್ಲಿ
ಅಡಗಿಕೊಳ್ಳುವುದಕ್ಕೆ ದುರ್ಬಲನ ಆಶ್ರಯಕ್ಕೆ
ಮನೆಗಳಿವೆ ಬಹಳ ಸೌಧಗಳು ಅನೇಕ
ತಂಗಬಹುದಿಲ್ಲಿ ನೂರು ಜನ ಬಂದರೂ
ತಂಗಬಹುದಿಲ್ಲಿ ಸಾವಿರ ಜನ ಬಂದರೂ

ಲೆಮಿನ್ಕಾಯ್ನೆನ್ ಕೇಳಿದ :
ಸ್ಥಳವಿದೆಯೆ ಇಲ್ಲಿ ಈ ನಡುಗಡ್ಡೆಯಲ್ಲಿ
ಬರ್ಚ್ ಮರದ ಕಾಡಿಗೆ
ಕಾಡು ಸವರುವುದಕ್ಕೆ ಸವರಿ ಹೊಲ ಮಾಡುವುದಕ್ಕೆ

ಹುಡುಗಿಯರು ಹೇಳಿದರು:
ಇಲ್ಲ ಈ ನಡುಗಡ್ಡೆಯಲಿ ಸ್ಥಳವಿಲ್ಲ ಇಲ್ಲಿ
ಬೆನ್ನೂರಗಿಸಿ ಕೂರಲು
ಹೊಲ ಮಾಡಿ ಉಳಲು
ಭೂಮಿ ಪಾಲಾಗಿದೆ ಹೊಲ ಅಳೆದು ಹಂಚಿದೆ
ಹುಲ್ಲುಗಾವಲು ಮಾತ್ರ ಎಲ್ಲರಿಗೂ ಸೇರಿದೆ

ಲೆಮಿನ್ಕಾಯ್ನೆನ್ ಕೇಳಿದನು:
ಸ್ಥಳವಿದೆಯೆ ಇಲ್ಲಿ ಈ ನಡುಗಡ್ಡೆಯಲ್ಲಿ
ನಾ ಹಾಡುವ ಹಾಡಿಗೆ ನಾ ಕಟ್ಟುವ ಕವಿತೆಗೆ
ಬಾಯಲ್ಲಿಯೆ ಉಳಿದು ಕರಗುತಿವೆ ಮಾತು
ಹೊರಳಾಡುತಿವೆ ಹಾಡು ದವಡೆಯಲಿ ಸಿಕ್ಕಿ

ಹುಡುಗಿಯರು ಹೇಳಿದರು:
ಸ್ಥಳವಿರುವುದಿಲ್ಲ ಈ ನಡುಗಡ್ಡೆಯಲ್ಲಿ
ಅಲೆಯುತ್ತ ಹಸಿರುಬಯಲಲ್ಲಿ

ಗಿಡ ಪೊದರಿನಲ್ಲಿ
ನೀ ಹೇಳುವ ಹಾಡಿಗೆ ನೀ ಕಟ್ಟುವ ಕವಿತೆಗೆ

ತಡ ಮಾಡಲಿಲ್ಲ ಹಾಡಿದನು ಅವನು
ಅಂಗಳದಲೆದ್ದವು ಮಲೆಯ ಆ್ಯಶ್ ಮರಗಳು
ಹೊಲದಲ್ಲಿ ಬೆಳೆದವು ದೈತ್ಯ ಓಕ್ ವೃಕ್ಷಗಳು
ಎಲ್ಲ ಮರಗಳಲೂ ಒಂದೇ ಸಮನಾದ ಕವಲು
ಎಲ್ಲ ಕವಲಿನ ಮೇಲೂ ಇನಿಹಣ್ಣ ಗೊಂಚಲು
ಎಲ್ಲ ಗೊಂಚಲಿನಲ್ಲಿ ದುಂಡಾದ ಹಣ್ಣು
ಎಲ್ಲ ಹಣ್ಣಿನ ಮೇಲೂ ಸರಗೈಯುವ ಹಕ್ಕಿ
ಬಾಯ್ದೆರೆದು ಸವಿಯಾಗಿ ಕರೆದಾಗ ಹಕ್ಕಿ
ಬಂಗಾರ ಕರಗಿ ಹರಿದು ಬಂದಂತೆ
ಕೆಂಪು ತಾಮ್ರವು ಕರಗಿ ಹರಿದು ಬಂದಂತೆ
ಬಿಳಿ ಬೆಳ್ಳಿ ಕರಗಿ ಹರಿದು ಬಂದಂತೆ
ಹೊಳೆವ ಬೆಟ್ಟದ ಮೇಲೆ ಬಂಗಾರದಂತೆ

ಮತ್ತೆ ಹಾಡಿದ ಅವನು
ಉಸುಕು ಕಣವಾದವು ಹೊಳೆವ ಮುತ್ತು
ಕಲ್ಲುಗಳು ಹೊಳೆದವು ಉರಿವ ಕೆಂಪಿನಲ್ಲಿ
ಹೂವುಗಳು ಬಂಗಾರ ಬೆಡಗಿನಲ್ಲಿ

ಮತ್ತೆ ಹಾಡಿದ ಅವನು
ಅಂಗಳದಲ್ಲೊಂದು ಕುಡಿ ನೀರಬಾವಿ
ಬಾವಿ ಮೇಲೊಂದು ಬಂಗಾರಕಟ್ಟೆ
ಕಟ್ಟೆ ಮೇಲೊಂದು ಬಂಗಾರ ಕೊಡಪಾನ
ಚಿಕ್ಕ ಮಕ್ಕಳು ನೀರು ಕುಡಿಯಲೆಂದು
ಅಕ್ಕ ತಂಗಿಯರು ಮುಖ ತೊಳೆಯಲೆಂದು

ಹಾಡಿದನು ಅವನು ನೀರಕೊಳವಾದವು
ತೋರಿದವು ಕೊಳದಲ್ಲಿ ನೀಲಿಹಕ್ಕಿ
ಬಂಗಾರನೆತ್ತಿ ತಲೆಯೆಲ್ಲ ಬೆಳ್ಳಿ
ಜಾಲ ಪಾದಗಳಲ್ಲಿ ಕೆಂಪು ತಾಮ್ರ

ಬೆರಗಾಗಿಬಿಟ್ಟರು ನಡುಗಡ್ಡೆ ಹುಡುಗಿಯರು
ಉಸಿರಡಗಿ ನಿಂತರು ಮೂಕವಾಗಿ
ಅವನ ಹಾಡುಗಳ ಮೋಡಿಯಲಿ ಸಿಕ್ಕಿ
ಅವನ ಸೃಷ್ಟಿಯ ಕುಶಲ ನಿಪುಣತೆಗೆ

ಲೆಮಿನ್ಕಾಯ್ನನ್ ಹೇಳಿದನು:
ಅತ್ಯುತ್ತಮ ಹಾಡು ಹಾಡಿದೆನು ನಾನು
ಇದಕ್ಕಿಂತ ಚೆನ್ನಾಗಿ ಹಾಡಬಹುದು
ಸೂರಿದ್ದರೊಂದು ತಲೆಯ ಮೇಲೆ
ಎದುರಿನಲ್ಲೊಂದು ಹಾಸು ಮೇಜು
ಇರುವುದಕೊಂದು ಮನೆ ಕೊಡದಿದ್ದರೆ ನನಗೆ
ಗುನುಗುವೆನು ಹಾಡನ್ನು ಕಾಡಿನಲ್ಲಿ
ಎಸೆಯುವೆನು ಹಾಡು ಪೊದರು ಮೆಳೆಗಳಿಗೆ

ಯೋಚಿಸಿದ ಹುಡುಗಿಯರು ಹೇಳಿದರು ಹೀಗೆ:
ನೀನಿರಲು ಮನೆಗಳು ಇಲ್ಲೆಷ್ಟೊ ಉಂಟು
ಸೊಗಸಾದ ನಡುಮನೆಯ ಗೃಹಗಳಿಲ್ಲುಂಟು
ಚಳಿ ಇಲ್ಲದೆ ಕುಳಿತು ನೀ ಹಾಡಬಹುದು
ಗಾರುಡಿಯ ಮೋಡಿ ಹರಡಬಹುದು

ಲೆಮಿನ್ಕಾಯ್ನನ್ ಒಂದು ಮನೆಯೊಳಗೆ ಹೋದ
ಮಂತ್ರ ಹಾಡಿ ಸೃಷ್ಟಿಸಿದ ಹೂಜಿ ಸಾಲು
ತುಂಬಿ ತುಳುಕಿತು ಮದಿರೆ ಹೂಜಿಯೆಲ್ಲ
ತುಳುಕಿದವು ಭಕ್ಷ್ಯ ಪಾತ್ರೆಯೆಲ್ಲ
ಮಧುವಿತ್ತು ಗಡಿಗೆಯಲ್ಲಿ ಸಮೃದ್ಧ ಬೆಣ್ಣೆ
ಸಮೃದ್ಧವಾಗಿತ್ತು ಹಂದಿ ಬಾಡು
ಅವನ ಔತಣಕ್ಕೆ ಅವನ ಆನಂದಕ್ಕೆ

ಬಲು ನಾಜೂಕು ನಡವಳಿಕೆ ವ್ಯಕ್ತಿಯವನು
ಚಿನ್ನದ ಹಿಡಿ ಬೆಳ್ಳಿ ಚಮಚ ಅವನಿಗೆ ರೂಢಿ
ಹಿಡಿಯುವವನಲ್ಲ ಬೇರೆ ಚಮಚೆ
ಮಂತ್ರ ಹಾಕಿ ಸೃಷ್ಟಿಸಿದ
ಮಾಡಿದನು ಭೋಜನ ತೃಪ್ತಿಯಾಗಿ
ಕುಡಿದ ಮದಿರೆಯನು ಸಂತೃಪ್ತಿಯಾಗಿ
ಲೆಮಿನ್ಕಾಯ್ನನ್ ಲವಲವಿಕೆಯ ತರುಣ

ತಿರುಗಾಡಿದನವನು ಹಳ್ಳಿಯಲ್ಲಿ
ಮಾನಿನಿಯರ ಮನಕೆ ಕೊಡಲು ಸಂತೋಷ
ಬಿಚ್ಚುಗೂದಲಿನವರ ಪಡಿಸಲಾನಂದ
ಅವನು ತಲೆ ತಿರುವಿದತ್ತ ಇರುತ್ತಿತ್ತು ಚುಂಬನ
ಕೈ ಚಾಚಿದೆಡೆಯೆಲ್ಲ ತೋಳಿನಾಲಿಂಗನ

ರಾತ್ರಿಯಾಯಿತು ಗದ್ದಲವೆ ಇಲ್ಲ
ಮಲಗ ಬೇಕೆಂದಿದ್ದ ಕತ್ತಲಲ್ಲಿ
ಹತ್ತು ಮನೆಗಿಂತ ಕಡಿಮೆ ಒಂದು ಹಳ್ಳಿಯೂ ಇಲ್ಲ
ಹತ್ತು ಹೆಣ್ಣು ಮಕ್ಕಳಿರದ ಮನೆಯೊಂದೂ ಇಲ್ಲ,
ಒಬ್ಬಳೂ ಇರಲಿಲ್ಲ ಈ ಹತ್ತರಲ್ಲಿ
ಇವನ ಜೊತೆ ಬಂದು ಮಲಗದವಳು
ಇವನು ತಲೆ ಇಟ್ಟು ಮಲಗಿರದ ತೋಳು

ಸಾವಿರ ಹೆಣ್ಣುಗಳ ರಮಿಸಿದನು ಅವನು
ನೂರು ವಿಧವೆಯರ ಪಕ್ಕ ಮಲಗಿದನು ಅವನು
ಅವನು ಮುಟ್ಟದೆ ಬಿಟ್ಟ ಹುಡುಗಿಯರೆ ಇಲ್ಲ
ಅವನು ಕೆಡಿಸದೆ ಬಿಟ್ಟ ವಿಧವೆಯೆ ಇಲ್ಲ

ಲೆಮಿನ್ಕಾಯ್ನನ್ ಬದುಕಿದ ಆನಂದ ಭೋಗದಲಿ
ಮೂರು ವರ್ಷದ ಕಾಲ ಆನಂದಭೋಗದಲಿ
ಸೊಗಸಾದ ನಡುಗಡ್ಡೆ ಹಳ್ಳಿಗಳಲಿ
ಚೆಲುವೆ ಹೆಣ್ಣುಗಳ ಒಡನಾಟದಲ್ಲಿ

ಅವನ ಸುಖಕಾಣದವಳು ಇದ್ದವಳು ಒಬ್ಬಳೇ
ವಯಸ್ಸು ದಾಟಿದ ಹೆಣ್ಣವಳು
ಊರ ಮೂಲೆಯಲ್ಲಿ ಹತ್ತನೆಯ ಹಳ್ಳಿಯಲಿ
ಅಲೆದಾಟ ಮುಗಿಸಿ ಮನೆಗೆ ಬರುತಿದ್ದ
ಎದುರಾದಳು ಅವಳು ವಯಸ್ಸು ದಾಟಿದ ಹೆಣ್ಣು
ಕೇಳಿದಳು ಹೀಗೆ:
ರೂಪವಂತನೆ ಕಡು ಪಾಪಿ ನೀನು
ಕರುಣೆ ತೋರದಿರೆ ನನಗೆ ನೀನು
ಹಾಕುವೆನು ಶಾಪ ದೋಣಿ ಮೇಲೆ
ಹೊರಟಾಗ ನೀನು ನಿನ್ನ ಪಯಣ
ಚೂರುಚೂರಾಗಲಿ ದೋಣಿ ಬಂಡೆಗಲ್ಲಿಗೆ ಬಡಿದು

ಅವಳ ರಮಿಸಿದನು ಸರಸವಾಡಿದನು
ಮೇಲೇಳಲಿಲ್ಲ ಮಗ್ಗುಲಿಂದ
ಏಳಲಿಲ್ಲವನು ಕೋಳಿ ಕೂಗುವ ತನಕ

ಅದೊಂದು ರಾತ್ರಿ ಮಧ್ಯದಲ್ಲೆ ಎದ್ದ
ಹಳ್ಳಿ ದಾಟಿ ಹೊರಟ ಆ ಹೆಣ್ಣ ಬಳಿಗೆ
ಅವಳ ರಮಿಸುವುದಕ್ಕೆ ಅವಳ ಸುಖಕ್ಕಾಗಿ.

ಹೋಗುವಾಗೊಬ್ಬನೇ ಹಳ್ಳಿ ಹಳ್ಳಿಯ ದಾಟಿ
ನಡುಗಡ್ಡೆಯ ಕೊನೆಗೆ ಹತ್ತನೆಯ ಹಳ್ಳಿಗೆ
ಗಮನಿಸಿದ ಅವನು
ಮನೆಯಾವುದೂ ಇರಲಿಲ್ಲ
ಮೂರು ಕೋಣೆಗೆ ಕಡಿಮೆ
ಯಾವ ಕೋಣೆಯಲೂ ಇಲ್ಲ
ಮೂರು ವೀರರಿಗೆ ಕಡಿಮೆ
ಯಾವ ವೀರನೂ ಇಲ್ಲ
ಹಿಡಿಯದಿರೆ ಕತ್ತಿ
ಚೂಪಾಗಿ ಮಸೆದ ಮೊನಚಾದ ಕತ್ತಿ
ಲೆಮಿನ್ಕಾಯ್ನನ್ ತಲೆಗೆ
ಹಿಡಿದಂಥ ಕತ್ತಿ

ಲೆಮಿನ್ಕಾಯ್ನನ್ ಹೇಳಿಕೊಂಡ:
ಹಾಳಾದೆ ನಾನು ಹರಿಯುತ್ತಿದೆ ಬೆಳಕು
ಬೆಳಗುತಿರುವನು ಸೂರ್ಯ ಹತಭಾಗ್ಯನ ಮೇಲೆ
ಬೆಳಗುತಿರುವನು ಪಾಪಿ ಕುತ್ತಿಗೆಯ ಮೇಲೆ

ಹೊರಟು ಬಿಟ್ಟನು ಅವನು ಹೆಣ್ಣುಗಳ ಬಳಸದೆ
ಹೊರಟು ಬಿಟ್ಟನು ಹಾಗೆ ಹೆಣ್ಣುಗಳ ಮುಟ್ಟದೆ
ಹೆಜ್ಜೆ ನಡೆದವು ಕಡಲ ದಂಡೆಯ ಕಡೆಗೆ
ತ್ವರೆಯಿಂದ ಬಂದ ದೋಣಿ ಇದ್ದೆಡೆಗೆ
ಸುಟ್ಟು ಉರಿದಿತ್ತು ಬೂದಿಯಾಗಿತ್ತು

ಕೆಟ್ಟಿದೆ ಗ್ರಹಚಾರ ಎಂದರಿತನವನು
ಅಪಾಯವೆರಗಿತ್ತು ತಲೆಯ ಮೇಲೆ
ಕಟ್ಟತೊಡಗಿದನು ಹೊಸ ದೋಣಿಯೊಂದು

ಬೇಕಾದ ಮರ ಸಿಗಲಿಲ್ಲ ಎಲ್ಲೂ
ದೋಣಿ ಕಟ್ಟುವುದಕ್ಕೆ ಹಲಗೆ ಸಿಕ್ಕಲಿಲ್ಲ
ಬೇಡಿ ತಂದನು ಯಾರು ಯಾರನ್ನೊ ಅವನು
ಹಲಗೆಯ ಚಕ್ಕೆಯವು ತುಂಡ್ಯೆದು ತಂದನು

ಹೊಸ ದೋಣಿ ಮಾಡಿದನು ಮಂತ್ರಕಲೆಯಿಂದ
ತನಗೇ ಗೊತ್ತಿದ್ದ ರಹಸ್ಯ ವಿದ್ಯೆಯಿಂದ
ಒಂದು ಏಟಿಗೆ ಒಂದು ಸಿದ್ಧವಾಯಿತು ಪಕ್ಕ
ಎರಡು ಏಟಿಗೆ ಇನ್ನೊಂದು ಸಿದ್ಧವಾಯಿತು ಪಕ್ಕ
ಮೂರನೆಯ ಏಟಿಗೆ ಪೂರ್ತಿಯಾಯಿತು ಕೆಲಸ

ತಳ್ಳಿದನು ನೀರಿಗೆ ತೇಲಿಸಿದ ಅಲೆಗೆ
ಹೀಗೆ ಹೇಳಿದನು:
ನಾವೆಯೇ ತೇಲು ಚೆಂಡಿನಂತೆ
ನೀರ ನೈದಿಲೆಯಂತೆ ಅಲೆಯ ಮೇಲೆ
ಗರುಡಪಕ್ಷಿಯೇ ಕರುಣಿಸು ಗರಿ ಮೂರು ನನಗೆ
ಡೊಂಬಕಾಗೆಯೇ ಕರುಣಿಸು ನೀನೊಂದು ನನಗೆ
ಈ ಪಾಪಿ ನಾವೆಯ ರಕ್ಷಣೆಗೆ ನನಗೆ

ಕಾಲಿಟ್ಟ ದೋಣಿಯಲಿ ಹಿಡಿದ ಚುಕ್ಕಾಣಿ
ತಲೆ ಜೋತುಬಿದ್ದಿತು ದುಃಖದಿಂದ
ಮುಖ ಜೋಲು ಬಿದ್ದಿತ್ತು ತುಂಬ ವ್ಯಥೆಯಿಂದ
ರಾತ್ರಿ ಸಂಚಾರ ಇರಲಿಲ್ಲ ಧೈರ್ಯ
ಹಗಲು ಮಾಡಿರಲಿಲ್ಲ ಹೆಚ್ಚು ಅಲೆದಾಟ
ಚೆಲುವೆಯರ ಕೂಡಿ ಸಂತೋಷಪಡಲಿಲ್ಲ
ಗರತಿಯರ ಕೂಡಿ ಸರಸವಾಡಿರಲಿಲ್ಲ

ಅಂದುಕೊಂಡ ಮನದಲ್ಲಿ ಹೀಗೆ:
ಹೊರಡಬೇಕೀಗ ಈ ಮನೆಗಳ ತೊರೆದು
ಈ ಚೆಲುವೆಯರೆಲ್ಲರಿಗೆ ದುಃಖವನು ಕೊಟ್ಟು
ಇನ್ನಿಲ್ಲ ನರ್ತನ ಈ ಸೊಬಗಿಯರೊಡನೆ
ಹೊರಟು ಹೋದರೆ ನಾನು ಈ ನಾಡ ತೊರೆದು
ಇನ್ನೆಂದಿಗೂ ನಲಿವಿಲ್ಲ ಈ ಹೆಣ್ಣುಗಳಿಗೆ
ವಿನೋದ ಪರಿಹಾಸ ಈ ರಮಣಿಯರಿಗೆ
ಅವರ ಮನೆಯೊಳಗೆಲ್ಲ ದುಃಖ ತುಂಬಿ
ಅವರ ಮನೆ ಅಂಗಳ ಹಾಳು ಸುರಿದು

ಅಳುತಲ ಇದ್ದರು ನಡುಗಡ್ಡೆ ಹುಡುಗಿಯರು
ಗೋಳಾಡುತ್ತಿದ್ದರು ಚೆಲುವೆ ಬೆಡಗಿಯರು
ಯಾಕೆ ಹೋಗುತಿರುವೆ ಲೆಮಿನ್ಕಾಯ್ನನ್
ಬಿಟ್ಟೆಲ್ಲಿ ಹೋಗುವೆ ಸೊಗಸುಗಾರ
ಈ ಹುಡುಗಿಯರು ಮಂಕೆಂದು ಬೇಸರಿಸಿ ಹೊರಟೆಯೋ
ಹೆಣ್ಣುಗಳ ಕೊರತೆಯಿದೆಯೆಂದು ತಿಳಿದೆಯೊ

ಲವಲವಿಕೆಯ ತರುಣ ಲೆಮಿನ್ಕಾಯ್ನನ್ ಹೀಗೆಂದು ನುಡಿದ:
ಹುಡುಗಿಯರು ಮಂಕೆಂಬುದು ಇದಕೆ ಕಾರಣವಲ್ಲ
ಹುಡುಗಿಯರ ಕೊರತೆಯಿದೆಯೆಂದು ತಿಳಿಯಲಿಲ್ಲ
ನೂರಾರು-ಹೆಣ್ಣುಗಳು ಸಿಕ್ಕಿದರು ನನಗೆ
ಸುಖಿಸಿದೆನು ಸಾವಿರ ಹೆಣ್ಣುಗಳ ತಬ್ಬಿ
ಹೋಗುತಿರುವನು ತೊರೆದು ನಿಮ್ಮ ಮನದನ್ನ
ಹೋಗುತಿಹನವನು ದೊಡ್ಡ ಸೆಳೆತಕೆ ಸಿಕ್ಕಿ
ನನ್ನೂರ ನೋಡುವ ಬಯಕೆ ಏರುತಿದೆ
ನನ್ನೂರ ಹೆಣ್ಣುಗಳ ಮನವು ಹಂಬಲಿಸಿದೆ
ನನ್ನೂರ ಹೆಣ್ಣುಗಳ ನನ್ನ ಮನ ಬಯಸಿ
ನನ್ನ ಮನೆ ಬೆಡಗಿಯರ ಮನವು ಹಾರೈಸಿ

ನೂಕಿದನು ದೋಣಿ ಅಲೆಯ ಮೇಲವನು
ಬೀಸಿ ಬಂದಿತು ಗಾಳಿ ಜೋರಾಗಿ ಅಬ್ಬರಿಸಿ
ಮೇಲೆದ್ದವು ನೀರ ತೆರೆ ಕಡಲಿನಲ್ಲಿ
ನೂಕಿದವು ನಾವೆಯನು ಮುಂದೆ ಮುಂದೆ
ದಡದಲ್ಲಿ ಚೆಲುವೆಯರು ದುಃಖ ತುಂಬಿ
ಉಸುಕಲ್ಲಿ ಬೆಡಗಿಯರು ಶೋಕ ತುಂಬಿ

ಅಳುತಿದ್ದರವರು ಕಣ್ಣೀರ ಸುರಿಸಿ
ಚೆಲುವೆ ರಂಭೆಯರು ದುಃಖ ತುಂಬಿ
ಅಳುತಿದ್ದರವರು ಬಹಳ ಹೊತ್ತಿನ ತನಕ
ಹಾಯಿ ಕಂಬದ ತುದಿ ಕಾಣದಾಗುವ ತನಕ
ಹೊಳೆವ ದೋಣಿಯು ಮರೆಯಾಗುವ ತನಕ

ಅಳಲಿಲ್ಲ ಅವರು ಹಾಯಿ ಕಂಬಕ್ಕೆ
ಶೋಕ ಮಾಡಲಿಲ್ಲ ಹೊಳೆವ ದೋಣಿಗಾಗಿ
ಅವರು ಅತ್ತರು ನಾವಿಕನ ನೆನೆದು
ಈ ನಾವೆ ಕಟ್ಟಿದ ಸೊಗಸುಗಾರನ ನೆನೆದು

ಲೆಮಿನ್ಕಾಯ್ನನೂ ಅತ್ತ ಶೋಕದಿಂದ
ಬಹುಕಾಲ ಅತ್ತ ಬಹುಕಾಲ ಶೋಕಿಸಿದ
ನಡುಗಡ್ಡೆ ನೋಟ ಕಾಣದಾಗುವ ತನಕ
ಪರ್ವತದ ಸಾಲು ಮರೆಯಾಗುವ ತನಕ

ಅಳಲಿಲ್ಲ ಅವನು ನಡುಗಡ್ಡೆಗಾಗಿ
ಶೋಕಪಡಲಿಲ್ಲ ಮಲೆ ಪರ್ವತಕಾಗಿ
ಅವನು ಅತ್ತನು ಚೆಲುವೆಯರ ನೆನೆದು
ಮಲೆಯ ಪರ್ವತದ ಹಕ್ಕಿಗಳ ನೆನೆದು

ಮುಂದುವರೆಯಿತು ಪಯಣ ನೀಲಿ ಕಡಲಲ್ಲಿ
ಒಂದು ದಿನ ಎರಡು ದಿನ ಮೂರನೆ ದಿನ ಕೊನೆಗೆ
ರುದ್ರ ಬಿರುಗಾಳಿ ಅಬ್ಬರಿಸಿ ಬಂತು
ಆಕಾಶವೆಲ್ಲ ಗುಡುಗುಟ್ಟಿ ನಡುಗಿ
ವಾಯುವ್ಯದಿಂದೊಂದು ಬಿರುಗಾಳಿ ಮಾರುತ
ಈಶಾನ್ಯದಿಂದೊಂದು ಬಿರುಸಾದ ಮಾರುತ
ಅಪ್ಪಳಿಸಿ ಬಡಿದವು ಒಂದು ಬದಿ ನಾವೆಗೆ
ಬಡಿದಾದ ಮೇಲೆ ಇನ್ನೊಂದು ಬದಿಗೆ
ತಲೆ ಕೆಳಗು ಮಾಡಿದವು ದೋಣಿಯನ್ನು

ನೀರೊಳಗೆ ಧುಮುಕಿದನು ಕೈಚಾಚಿ ಈಸಿದನು
ಇರುಳೆಲ್ಲ ಈಸಿದನು ಹಗಲೆಲ್ಲ ಈಸಿದನು
ಕುಶಲ ಈಜುಗಾರ ಕಡಲ ಈಸಿದನು

ಕಾಣಿಸಿತು ದೂರ ತುಣುಕು ಮೋಡದ ಹಾಗೆ
ಮೋಡವಲ್ಲ ಅದು ಭೂಮಿನಡುಗಡ್ಡೆ
ನಡುಗಡ್ಡೆಯಲೊಂದು ಮನೆಯನ್ನು ಕಂಡ
ಈ ಮನೆಯ ಬಳಿಗವನು ಬಂದ
ಬೇಯಿಸುತ್ತಿದ್ದಳು ರೊಟ್ಟಿ ಮನೆಯ ಯಜಮಾನಿ
ನಾದುತ್ತಿದ್ದರು ಹಿಟ್ಟು ಹೆಣ್ಣು ಹುಡುಗಿಯರು

ಮನೆಯ ಯಜಮಾನಿ ಕರುಣಾಮಯಿ ಹೆಣ್ಣೆ
ನನ್ನ ಈ ದುಃಸ್ಥಿತಿಯ ನೋಡಿದರೆ ನೀನು
ಈಗಲೇ ಹೋಗುವೆ ಬಿರುಗಾಳಿಯಂತೆ

ಉಗ್ರ್ಯಾಣಕೋಣೆಗೆ ಏಲ್ ಮದ್ಯ ತರಲು
ನನಗೊಂದು ಮಧು ಪಾತ್ರೆ ಹಂದಿ ಮಾಂಸದ ತುಣುಕು
ಅದರ ಮೇಲಿಷ್ಟು ಬೆಣ್ಣೆ ಹುರಿದು ಕೊಡುವೆ
ಬಳಲಿ ಬಂದವನು ತಿನ್ನಲೆಂದು
ಮೂರ್ಛೆ ತಪ್ಪುತ್ತಿರುವವನು ಕುಡಿಯಲೆಂದು
ಹಗಲೆಲ್ಲ ಇರುಳೆಲ್ಲ ಈಸಿದೆನು ಕಡಲು
ಗಾಳಿಯದೆ ರಕ್ಷಣೆ ಅಲೆಗಳದೆ ಕರುಣೆ

ದಯಾಮಯಿ ಮನೆಯೊಡತಿ ಹಂದಿ ತುಂಡನು ತಂದು
ಕೊಟ್ಟಳವನಿಗೆ ಬೆಣ್ಣೆಯಲಿ ಹುರಿದು
ತುಂಬಿಕೊಟ್ಟಳು ಏಲ್ ಮದ್ಯ ಮಧುಪಾತ್ರೆಯಲ್ಲಿ
ಹೊಸ ದೋಣಿ ಅವನೂರ ತಲುಪಲೆಂದು

ಚೇತರಿಸಿಕೊಂಡ ಮತ್ತೆ ಪಯಣ ಹೊರಟ
ಭೂಮಿನೆಲ ಭಾಗಗಳು ಕಡಲ ತೀರಗಳು
ನಡುಗಡ್ಡೆ ದ್ವೀಪಗಳು ನೀರ್ಗಾಲುವೆ ನಾಲೆಗಳು
ಪುರಾತನ ಇಳಿದಾಣಗಳು ಹಳತಾದ ಮನೆಗಳು
ಪೈನ್ ಮರದ ಪರ್ವತ ಫರ್ ಬೆಳೆದ ಬೆಟ್ಟಗಳು
ಏನೆಲ್ಲಾ ಕಂಡವು ತನ್ನ ಮನೆ ಕಾಣದು
ನಿಂತ ಗೋಡೆ ಒಂದೂ ಕಾಣುತ್ತಲಿಲ್ಲ
ಚರಿಯ ಪೊದೆಯಿತ್ತು ಪೈನ್ ವೃಕ್ಷ ಚಿಗುರಿತ್ತು
ಜೂನಿಪರ್ ಬೆಳೆದಿತ್ತು ಬಾವಿ ಬಳಿಯಲ್ಲಿ
ಮೊದಲವನ ಮನೆಯಿದ್ದ ಜಾಗದಲ್ಲಿ

ಕಾಡೆಲ್ಲ ತಿರುಗಿದೆ ಬೆಟ್ಟಗಳ ಏರಿದೆ
ನದಿಯಲ್ಲಿ ಧುಮುಕಿದೆ, ಪೊದೆಗಳನು ಹಾದೆ
ಪೈರು ಹೊಲಗದ್ದೆ ಅಲೆದಾಡಿ ಬಂದೆ
ಯಾರು ಹಾಳು ಮಾಡಿದರು ಈ ನನ್ನ ಬೀಡು
ನಾಶ ಮಾಡಿದವರಾರು ನನ್ನ ಬೆಚ್ಚನೆಯ ಗೂಡು
ಬೆಂಕಿಯಲಿ ಸುಟ್ಟು ಬೂದಿ ಮಾಡಿರುವವರು
ಗಾಳಿಯಲ್ಲಿ ಚೆದುರಿ ಹಾರುತಿದೆ ಬೂದಿ

ಕುಸಿದು ಅತ್ತನು ಅವನು ದುಃಖದಿಂದ
ಒಂದು ದಿನ ಎರಡು ದಿನ ದುಃಖದಿಂದತ್ತ
ಅತ್ತಿದ್ದು ಅವನು ಮನೆಗಾಗಿ ಅಲ್ಲ
ಉಗ್ರಾಣ ಭಂಡಾರ ಹಾಳಾಯಿತೆಂದಲ್ಲ
ಶೋಕಿಸಿದ ಮನೆಯ ಸಂಪತ್ತಿಗಾಗಿ
ಭಂಡಾರಕೂ ಮಿಗಿಲು ತಾಯಿಗಾಗಿ

ಮೇಲೆ ನೋಡಿದನು ಹಾರುತಿಹ ಹಕ್ಕಿ
ಬಂಗಾರ ಮೈ ಬಣ್ಣ ಹದ್ದು ಪಕ್ಷಿ
ನನ್ನ ಪ್ರೀತಿಯ ಹಕ್ಕಿ ಹೇಳು ನನಗೆ
ಏನಾಯಿತು ನನ್ನ ಹೆತ್ತ ತಾಯವ್ವಗೆ
ನನ್ನ ಹೊತ್ತು ಹೆತ್ತಂಥ ಹೆಣ್ಣಿಗೆ
ನನ್ನ ಅಕ್ಕರೆಯ ತಾಯವ್ವಗೆ

ಆ ಹಕ್ಕಿ ಪೆದ್ದು, ಏನೂ ಗೊತ್ತಿರಲಿಲ್ಲ
ಅದು ಹೇಳಿತು ಹೀಗೆ:
ಸತ್ತು ಹೋದಳು ಅವಳು ನಿನ್ನ ತಾಯಿ
ಸತ್ತು ಹೋದಳು ಕತ್ತಿ ಅಲಗುಗಳ ಕೆಳಗೆ
ಕದನದಲ್ಲಿ ಬಡಿದಾಡಿದ ಕತ್ತಿಗಳ ಕೆಳಗೆ

ಗೋಳಾಡಿದನು ಲೆಮಿನ್ಕಾಯ್ನನ್
ತೀರಿಕೊಂಡೆಯಾ ನನ್ನ ಹೊತ್ತು ಹೆತ್ತವಳೇ
ನನ್ನ ಅಕ್ಕರೆಯ ಕರಣಾಳು ತಾಯೆ
ಮಣ್ಣು ಪಾಲಾಯಿತು ನಿನ್ನ ದೇಹ
ಬೆಳೆದಿದೆ ಫರ್ ವೃಕ್ಷ ನಿನ್ನ ಮೇಲೆ
ಜೂನಿಪರ್‌ಗಳು ಪಾದಗಳ ಮೇಲೆ
ವಿಲ್ಲೊ ವೃಕ್ಷ ಬೆರಳುಗಳ ಮೇಲೆ

ಇಂಥ ಗತಿ ಬಂತೆ ಕದನ ಮಾಡಿದ್ದಕ್ಕೆ
ಸಿಕ್ಕಿತೇ ಬಹುಮಾನ ನಾನೆತ್ತಿದ ಕತ್ತಿಗೆ
ಅಳಿದು ಹೋಯಿತು ನನ್ನ ಕುಲವಂಶವೆಲ್ಲ
ಅಳಿದು ಹೋದಳು ನನ್ನ ಹಡೆದಂಥ ತಾಯಿ
ತಲೆಯ ಮೇಲೆತ್ತಿದ ಸುತ್ತೆಲ್ಲ ನೋಡಿದ
ಅಲ್ಲಿತ್ತು ಹೆಜ್ಜೆಯ ಸಣ್ಣ ಹಾದಿ

ಹಗುರಾಗಿ ತುಳಿದಂತೆ ಗುರುತಿತ್ತು ಹುಲ್ಲಲ್ಲಿ
ಸಣ್ಣ ಪೊದೆಗಿಡ ಸ್ವಲ್ಪ ಮುರಿದ ಹಾಗೆ

ಆ ಜಾಡು ಹಿಡಿದು ಮುಂದಕ್ಕೆ ನಡೆದ
ಆ ಹಾದಿ ಇತ್ತು ಕಾಡಿನೆಡೆಗೆ
ಹೋದ ಕಾಡಲ್ಲಿ ಒಂದಷ್ಟು ದೂರ
ಇತ್ತೊಂದು ಗುಡಿಸಲು ಅಡವಿ ಕತ್ತಲಲಿ
ಯಾರಿಗೂ ಕಾಣದಿಹ ತಾವಿನಲ್ಲಿ
ಎರಡು ಬಂಡೆಯ ನಡುವೆ
ಫರ್ ಮರಗಳ ಮೂಲೆಯಲಿ

ಅಲ್ಲಿದ್ದಳು ಅವನ ಹಡೆದವ್ವ ತಾಯಿ
ದನಿ ಹೊರಡಲಿಲ್ಲ ಸಂತೋಷದಿಂದ
ನನ್ನ ಹೆತ್ತವಳೆ ನನ್ನ ಸಲವಿದ ತಾಯೆ
ನೀನು ಬದುಕಿರುವೆ ನನಗಾಗಿ ಕಾದಿರುವೆ
ಬಿಟ್ಟಗಲಿದೆಯೆಂದು ತಿಳಿದಿದ್ದೆ ನಾನು
ಕಣ್ಣು ಊದಿದವು ಕೆನ್ನೆ ಬತ್ತಿದವು
ನಿನಗಾಗಿ ಅತ್ತು ಸುರಿಸಿ ಕಣ್ಣೀರು

ತಾಯಿ ಹೇಳಿದಳು:
ನಿಜ ಮಗನೆ ನಾನು ಬದುಕಿರುವೆನಿನ್ನೂ
ಓಡಲೇ ಬೇಕಾಯಿತು ಬೀಡಿನಿಂದ
ಅಡಗಬೇಕಾಯಿತು ದಟ್ಟಡವಿಯಲ್ಲಿ
ಹುಡುಕಿ ಬಂದರು ನಿನ್ನ ಘಾತುಕರು ಅವರು
ಸುಟ್ಟು ಹಾಕಿದರು ನಮ್ಮ ಮನೆಯನ್ನು
ಸೂರೆ ಮಾಡಿದರು ನಮ್ಮ ಸಕಲವನ್ನೂ

ಅಳಬೇಡ ನನ್ನ ಹಡೆದವ್ವ ತಾಯೆ
ಶೋಕಪಡಬೇಡ ಒಂದಿಷ್ಟೂ ಕೂಡ
ಕಟ್ಟೋಣ ಬೀಡು ಮತ್ತೆ ಹೊಸದಾಗಿ
ಬೇರೆಯವರಿಗಿಂತ ಬಲು ಸುಂದರವಾಗಿ
ಕದನ ಮಾಡೋಣ ಪೊಹ್ವೊಲಾದೊಡನೆ
ನಾಶ ಮಾಡೋಣ ಆ ದುಷ್ಟ ಜನರ

ತಾಯಿ ಕೇಳಿದಳು
ಮಗನೆ, ನೀನಿಷ್ಟು ದಿನವಿದ್ದೆ ಬಲು ದೂರ ನಾಡಲ್ಲಿ
ಗುರುತಿಲ್ಲದ ಜನರು ಹೆಸರಿಲ್ಲದ ನಾಡು
ಯಾರೂ ಕೇಳಿರದ ಆ ಊರಿನಲ್ಲಿ

ಲವಲವಿಕೆಯ ಲೆಮಿನ್ಕಾಯ್ನನ್ ನುಡಿದ:
ಆನಂದವಾಗಿದ್ದೆ ಅಲ್ಲಿ ನಾನು
ಅಲ್ಲಿ ಅಲೆದಾಟ ಬಲು ಚಂದವಿತ್ತು
ಮರವೆಲ್ಲ ಕೆಂಪು ನಾಡೆಲ್ಲ ನೀಲಿ
ಹೊಳೆಯುತ್ತಿವೆ ಪೈನ್ ಮರ ಬೆಳ್ಳಿಯಂತೆ
ಬಂಗಾರದ ಹೂವು ಪೊದೆ ಗಿಡದ ಮೇಲೆ
ಸವಿಜೇನು ತೊಟ್ಟಿಕ್ಕುವ ಮಲೆಯ ಪರ್ವತಗಳು
ಒಣ ಪೈನ್ ಮರಗಳಲ್ಲೂ ಸಿಹಿಯಾದ ಜೇನು
ಬರಡು ಫರ್ ಮರದಲ್ಲಿ ಹರಿಯುವುದು ಹಾಲು
ಬೇಲಿ ಪೊದೆಗಳಲ್ಲಿ ಸವಿಯಾದ ಬೆಣ್ಣೆ
ಸುರೆಯು ಹರಿಯುವುದು ಗಿಡ ಕಾಂಡದಲ್ಲಿ
ಆನಂದವಾಗಿದ್ದೆ ಚೆಂದವಿತ್ತು ಬಾಳು
ಕಠಿಣವಾಯಿತು ಬದುಕು ಆಮೇಲೆ ನೋಡು
ಸರಿಯಿಲ್ಲವೆನಿಸಿತು ಅಲ್ಲಿ ಬದುಕುವುದು

ಆ ಜನಕೆ ಏನೋ ಆತಂಕ, ಸಂದೇಹ
ಆ ಹಾದರಗಿತ್ತಿಯರು ಕೊಬ್ಬಿದ್ದ ದುಷ್ಟೆಯರು
ನನ್ನಿಂದ ಕೆಟ್ಟು ಹಾಳಾಗುವರೋ ಎಂದು
ಹುಡುಕಿ ಬರುತ್ತಿದ್ದರು ನನ್ನ ಇರುಳಲ್ಲಿ ಹೆಣ್ಣುಗಳು
ತಲೆಮರೆಸಿಕೊಳ್ಳುತ್ತಿದ್ದೆ ಭಯದಿಂದ ನಾನು
ಮರೆಸಿಕೊಂಡಂತೆ ತೋಳ ಎಳೆ ಹಂದಿಗಳಿಂದ
ಮರೆಸಿಕೊಂಡಂತೆ ಹದ್ದು ಊರ ಕೋಳಿಯಿಂದ.

19. ಲೆಮಿನ್ಕಾಯ್ನನ್ ಮತ್ತು ಟಿಯೆರಾ

ಸಾಟಿಯಿಲ್ಲದ ಯುವಕ ಅಹ್ತಿ
ಲವಲವಿಕೆಯ ಸುಟಿಯಾದ ತರುಣ
ಮುಂಜಾವದಲ್ಲಿ ಹೊರಟ ದೋಣಿ ಇರುವೆಡೆಗೆ

ಅಲ್ಲೊಂದು ದೋಣಿ ದುಃಖ ಮಾಡುತ್ತಿತ್ತು
ಕಬ್ಬಿಣದ ಹುಟ್ಟು ಬಳಿ ದೋಣಿ ಶೋಕಿಸುತ ಹೇಳಿತು
ಕಾದಿರುವೆ ಯಾನಕ್ಕೆ ಸಿದ್ಧವಾಗಿ
ಕೇಳುವವರಿಲ್ಲ ನನ್ನ ಯಾರೂ
ಅಹ್ತಿ ಹೋಗುತಿಲ್ಲ ಯುದ್ಧಕ್ಕೆ ಈಗ
ಆರಾಯಿತು ವರ್ಷ ಹತ್ತಾಯಿತು ವರ್ಷ
ಬೆಳ್ಳಿ ದೋಚುವ ಆಸೆಯೂ ಇಲ್ಲ
ಚಿನ್ನ ತರುವಂಥ ಬಯಕೆಯೂ ಇಲ್ಲ

ಲೆಮಿನ್ಕಾಯ್ನನ್ ಹಾಕಿದನು ಕೈ ದೋಣಿ ಮೇಲೆ
ಚಿತ್ತಾರದ ಗವುಸಿನ ಕೈ ಹಾಕಿ ನುಡಿದ
ಪೈನ್ ಮರದ ದೋಣಿ ಚಿಂತೆ ಏಕೆ
ಹಲಗೆ ಬದಿ ದೋಣಿ ದುಃಖವೇಕೆ
ಮತ್ತೊಮ್ಮೆ ಹೋಗುವೆ ಕದನಕ್ಕೆ ನೀನು
ಸೈನಿಕರ ತುಂಬಿ ಹೊತ್ತು ಮುಳುಗುವ ಮೊದಲೆ

ಇಷ್ಟು ಹೇಳಿದನು ತಾಯ ಬಳಿ ಹೋದನು
ನನಗಾಗಿ ಅಳಬೇಡ ಶೋಕಪಡಬೇಡ
ಕದನಕ್ಕೆ ಹೋದರೆ ಮತ್ತೊಮ್ಮೆ ನಾನು
ನಿರ್ಧರಿಸಿದೆ ಮನವು ಯೋಜನೆ ಹೊಳೆದಿಹುದು ತಲೆಗೆ
ಪೊಹ್ಜಾದ ನಾಶಕ್ಕೆ
ಶುದ್ಧ ಕಳ್ಳರ ಮೇಲೆ ತೀರಿಸಲು ಸೇಡು

ತಾಯಿ ತಡೆದಳು ಬೇಡ ಬೇಡವೆಂದು
ವೃದ್ಧೆ ಹೇಳಿದಳು ಎಚ್ಚರದ ಮಾತು
ಬೇಡ ಮಗನೆ ಬೇಡ ಹೋಗಬೇಡ

ಪೊಹ್ಜೋಲಾ ಮೇಲೆ ಯುದ್ಧ ಬೇಡ
ಸಾವೆರಗಬಹುದು ನಿನ್ನ ಮೇಲೆ
ನಾಶವಾಗುವೆ ನೀ ಹೋದರಲ್ಲಿ

ಕಿವಿಗೊಡಲಿಲ್ಲ ಹೊರಡುವ ಯೋಚನೆಯೇ ತಲೆಯೆಲ್ಲ
ಹೊರಟುಬಿಟ್ಟನು ಪಯಣ
ಇರುವನೆ ಯಾರಾದರೂ ಮತ್ತೊಬ್ಬ ವೀರ
ಅಹ್ತಿ ಜೊತೆ ಕದನಕ್ಕೆ ಬರುವಂಥ ಶೂರ
ಎಲ್ಲ ಬಲ ಕೊಟ್ಟು ಹೋರಾಡುವ ಧೀರ

ನನಗೆ ಗೊತ್ತಿರುವನೊಬ್ಬ ಅವನು ಟಿಯೆರಾ
ನನಗೆ ಜೊತೆಯಾಗ ತಕ್ಕಂಥ ಶೂರ
ಎಲ್ಲ ಬಲ ಕೊಟ್ಟು ಹೋರಾಡುವ ಧೀರ

ಹಳ್ಳಿಗಳ ದಾಟಿದ
ಟಿಯೆರಾ ಮನೆ ತಲುಪಿದ
ಬಂದ ಉದ್ದೇಶ ತಿಳಿಸಿದ:
ಟಿಯೆರಾ ನನ್ನ ಮೆಚ್ಚುಗೆಯ ಗೆಳೆಯ
ನನ್ನ ಸ್ನೇಹಿತರಲೆಲ್ಲ ಅತಿ ನೆಚ್ಚುಗೆ ಮಿತ್ರ
ನೆನಪಿಸಿಕೊ ಆ ಹಳೆಯ ದಿನಗಳನ್ನು
ದೊಡ್ಡ ಯುದ್ಧಗಳಲಿ ಹೋರಾಡಿದ ದಿನಗಳನ್ನು

ಇರಲಿಲ್ಲ ಹಳ್ಳಿ ಹತ್ತು ಮನೆಗಿಂತ ಕಡಿಮೆ
ಯಾವ ಮನೆಯೂ ಇಲ್ಲ ಹತ್ತು ವೀರರಿಗೆ ಕಡಿಮೆ
ಒಬ್ಬ ವೀರನೂ ಇಲ್ಲ ಹತ್ತು ವೀರರಲ್ಲಿ
ನಮ್ಮೆದುರು ಸೋತು ಶರಣಾಗದ ವೀರ
ನಮ್ಮ ಕತ್ತಿಗೆ ಸೀಳಿ ಕೊಲೆಯಾಗದ ಶೂರ

ತಂದೆ ಇದ್ದ ಜಗುಲಿಯಲ್ಲಿ ಈಟಿ ಕೋಲು ಕೆತ್ತುತ್ತ
ಹೊಸ್ತಿಲಲ್ಲಿ ತಾಯಿ ಸರಬರ ಮೊಸರು ಕಡೆಯುತ್ತ
ಸೋದರರಿದ್ದರು ಬಾಗಿಲಿನಲ್ಲಿ
ಬಂಡಿಯ ಕೆಲಸವ ಮಾಡುತಲಿ
ಸೋದರಿಯರು ಇದ್ದರು ಕಟ್ಟಿ ಬಳಿ
ಬಟ್ಟೆ ಬರೆ ಜಾಲಾಡುತಲಿ
ತಂದೆ ನುಡಿದ ಜಗುಲಿಯಲ್ಲಿ

ಹೆತ್ತವ್ವನು ಹೊಸ್ತಿಲಲ್ಲಿ
ಸೋದರರು ಬಾಗಿಲಲ್ಲಿ ಸೋದರಿಯರು ಕಟ್ಟೆಯಲ್ಲಿ
ಬರುವುದಿಲ್ಲ ಅವನು ರಣರಂಗದ ಭೂಮಿಗೆ
ಬರುವುದಿಲ್ಲ ಕತ್ತಿ ಹಿಡಿದು ಬಡಿದಾಡಲು ಅವನು

ಅವನಿಗಿದೆ ಇಲ್ಲಿ ಬೇರೆಯದೆ ಕೆಲಸ
ಬದುಕಿನೊಪ್ಪಂದ ಕೈಹಿಡಿದವಳ ಜೊತೆಗೆ
ತಂದಿರುವನವಳನ್ನು ಮನೆ ಒಡತಿಯಾಗಿ
ಮುಟ್ಟಿಲ್ಲ ಅವನು ಅವಳನ್ನು ಇನ್ನೂ
ಆಡಿಲ್ಲ ಕೈ ಅವಳೆದೆಯ ಮೇಲೆ

ಕೂತಿದ್ದ ಟಿಯೆರಾ ಒಲೆಯ ಬಳಿಯಲ್ಲಿ
ಒಂದು ಕಾಲಿಗೆ ಬೂಟು ಕಟ್ಟಿದನು ಅಲ್ಲಿ
ಇನ್ನೊಂದು ಕಾಲಿಗೆ ಒಲೆಕಟ್ಟೆಯ ಮೇಲೆ
ನಡುಪಟ್ಟಿ ಬಿಗಿದ ಹೊರ ಬಾಗಿಲಲ್ಲಿ
ಸುತ್ತ ಬಿಗಿ ಕಟ್ಟಿದ ಅಂಗಳಕೆ ಬಂದು
ಸೆಳೆದಿಟ್ಟುಕೊಂಡ ಈಟಿ ಕೋಲೊಂದು
ದೊಡ್ಡವುಗಳಲ್ಲಿ ದೊಡ್ಡದೇನಲ್ಲ
ಚಿಕ್ಕವುಗಳಲ್ಲಿ ಚಿಕ್ಕದೇನಲ್ಲ
ಸಾಧಾರಣ ಗಾತ್ರ ಈಟಿ ಕೋಲೊಂದು
ಕುದುರೆ ನಿಂತಿತ್ತು ಅದರಲುಗಿನಲ್ಲಿ
ಓಡಾಡುವ ಎತ್ತು ಅದರೊಂದು ಬದಿಗೆ
ಅಬ್ಬರಿಸುವ ತೋಳ ಆ ಕಾಂಡದಲ್ಲಿ
ಗುರುಗುಟ್ಟುವ ಕರಡಿ ಹಿಡಿಕೆಯಲ್ಲಿ

ಝಳಪಿಸಿದ ಈಟಿಯನು
ಗಿರ್ರೆಂದು ಝಳಪಿಸಿದನು
ತೂರಿ ಬೀಸಿದ ಈಟಿ ನೆಟ್ಟಿತದು ಯೋಜನಕೆ
ಗಟ್ಟಿಯಾಗಿದ್ದ ಜೇಡಿ ಮಣ್ಣಲ್ಲಿ
ಹುಲ್ಲು ಬೆಳೆದಿದ್ದ ಜಾಗದಲ್ಲಿ
ಕಲ್ಲುಗುಡ್ಡವಿರದ ಬಯಲಿನಲ್ಲಿ
ಈಟಿ ಜೊತೆಗಿಟ್ಟ ಅಹ್ತಿಗವನು ಜೊತೆಯಾದ
ಅಹ್ತಿ ನೂಕಿದ ದೋಣಿ ನೀರಿನಲ್ಲಿ
ತೇಲಿತದು ವಾಯುವ್ಯ ದಿಕ್ಕಿನಲ್ಲಿ

ಹರಿದಂತೆ ಹಾವು ಹುಲ್ಲಿನಲ್ಲಿ
ಹೋಗಿ ಸೇರಿತು ಪೊಹ್ಜಾ ತೀರದಲ್ಲಿ

ಪೊಹ್ಜೊಲಾ ಒಡತಿ ತನ್ನ ನೆರವಿಗಾಗಿ
ಕರೆದುಕೊಂಡಳು ದುಷ್ಟ ಕಲ್ಲು ಹಿಮವನ್ನು
ಕಲ್ಲು ಹಿಮವೇ ನನ್ನ ಪುಟ್ಟ ಕಂದ
ನನ್ನ ಆರೈಕೆಯ ಚಿಕ್ಕ ಮಗುವೇ
ನಾನು ಹೇಳಿದಲ್ಲಿಗೆ ಹೋಗು
ನಾನು ಕಳಿಸಿದಲ್ಲಿಗೆ ಹೋಗು
ಕಡಲ ಮೇಲಿದೆ ನೋಡು ಆ ಘಟಿಂಗನ ದೋಣಿ
ಲೆಮಿನ್ಕಾಯ್ನನ್ ಎಂಬ ಪೋಕರಿಯ ದೋಣಿ

ಮಂಜುಕಲ್ಲಾಗಲಿ ಅವನ ದೋಣಿ
ಕಲ್ಲುಹಿಮವಾಗಲಿ ದೋಣಿ ಒಡೆಯ
ದೋಣಿಯೊಳಗೇ ಆಗಲಿ ಮಂಜುಗಲ್ಲವನು
ಇನ್ನೆಂದೂ ಅಲ್ಲಿಂದ ಪಾರಾಗದಂತೆ
ಜೀವವಿರುವನಕ ಹೊರಬಾರದಂತೆ
ನಾನು ನಾನಾಗೇ ದಯೆ ತೋರುವ ತನಕ
ನಾನು ನಾನಾಗೇ ಬಿಡಿಸುವನಕ

ಕಲ್ಲು ಹಿಮ ಬಲು ದುಷ್ಟ ಬಲು ಕೆಟ್ಟ ಕಿಡಿಗೇಡಿ
ಬಂದನವನು ಕಡಲಿಗೆ ಹಿಮ ಮಾಡಲು ಕಡಲಿಗೆ
ಹರಡಿಕೊಂಡನು ಅವನು ಅಲೆಯ ಮೇಲೆಲ್ಲ
ಅಲ್ಲಿಂದ ಮತ್ತಷ್ಟು ಮುಂದಕ್ಕೆ ಹೋದ
ಹರಡಿಕೊಂಡನು ಅವನು ನೆಲದ ಮೇಲೆಲ್ಲ
ಎಲೆಗಳನು ಕಚ್ಚುತ್ತ ಟೊಂಗೆಯಿಂದ
ಹುಲ್ಲು ಗಿಡ ಕಚ್ಚುತ್ತ ಪೊದೆಗಳಿಂದ
ಮುಂದೆ ಬಂದನು ಮತ್ತೆ ದಂಡೆಯತ್ತ
ಪೊಹ್ಜಾದ ನಾಡಿನ ತೀರದತ್ತ
ಅಂತ್ಯವಿಲ್ಲದ ಹಾಗೆ ಚಾಚಿತ್ತು ಕಡಲು
ಮಂಜು ಹಿಮವಾದವು ಸಣ್ಣ ನದಿತೊರೆಗಳು
ಒಂದು ರಾತ್ರಿಗೇ ಸೋತು ಮರಗಟ್ಟಿಹೋದವು
ಪುಟ್ಟ ಕೊಳ ಕಾಲುವೆ ಕೊಲ್ಲಿಗಳು

ಮುಂದೆ ಬಂದನು ಅವನು ಬಹಳ ತ್ವರೆಯಿಂದ
ಹಿಮಗಟ್ಟಿರಲಿಲ್ಲ ಇನ್ನೂ ಆ ನೀರು ಕಡಲು
ಗಟ್ಟಿಯಾಗಿರಲಿಲ್ಲ ನೀರಿನಲೆಯೂ
ಕೂತಿದ್ದರೆ ಒಂದು ಪುಟ್ಟ ಹಕ್ಕಿಯು ಅಲ್ಲಿ
ಹಿಮಗಟ್ಟುತ್ತಿರಲಿಲ್ಲ ಅದರ ಪಾದ
ಹಿಮಕಲ್ಲಾಗದು ಆ ಪುಟ್ಟ ತಲೆಯೂ

ಬಿರುಸಾಯಿತು ಕೆಲಸ ಎರಡನೆಯ ರಾತ್ರಿ
ಮೇರೆ ಮೀರಿತು ಸೊಕ್ಕು ಉಗ್ರವಾಯಿತು ರೂಪ
ಹಿಮದ ಮೇಲೆ ಹಿಮವನ್ನು ರಾಶಿ ಹಾಕಿದನು
ಶಿಲೆಯ ಪರ್ವತಕೆಲ್ಲ ಹಿಮದುಡುಗೆ ತೊಡಿಸಿದನು
ಈಟಿಗೋಲೆತ್ತರಕ್ಕೆ ಹಿಮಕಲ್ಲು ಸುರಿಸಿದನು
ನೀರ ಮೇಲಿನ ದೋಣಿ ಹಿಮಗಟ್ಟಿಸಿದನು

ಆಮೇಲೆ ತಿರುಗಿದನು ಅಹ್ತಿ ಕಡೆಗವನು
ಮರಗಟ್ಟಿಸಬೇಕು ಮೊದಲು ಪಾದವನ್ನು
ಹಿಮವಂತ ಹಿಡಿದ ಕಾಲ್ಬೆರಳು ಮೊದಲು
ಬೆರಳ ಕೆಳಗಿಂದ ತೂರುತ್ತ ಬಂದ

ಕೋಪವೇರಿತು ಆಗ ಇದ ಕಂಡು ಅಹ್ತಿಗೆ
ಸಿಟ್ಟಿಂದ ಕೆರಳಿ ರೇಗಿದನು ಅವನು
ಹಿಮ ತೆಗೆದು ಹಾಕಿದನು ಬೆಂಕಿಯೊಳಗೆ
ತಳ್ಳಿದನು ಕಬ್ಬಿಣದ ಕುಲುಮೆಯೊಳಗೆ

ಕೈಯಲ್ಲಿ ಹಿಡಿದ ಬಿಡಿಸಿಕೊಳ್ಳದ ಹಾಗೆ
ಬಿಗಿಯಾಗಿ ಹಿಡಿದು ಹೇಳಿದನು ಹೀಗೆ:
ಹಿಮಗಲ್ಲೆ ಪುಹರಿ ಸಂತಾನ ನೀನು
ಚಳಿಗಾಲ ಶೀತದಲ್ಲಿ ಜನಿಸಿದವ ನೀನು
ಮುಟ್ಟದಿರು ಬೆರಳು ಸೋಂಕದಿರು ಕಾಲ್ಬೆರಳು
ಜೋಕೆ ಮುಟ್ಟಿಯೇ ಈ ಕಿವಿಗಳನ್ನು
ಮುಟ್ಟಿ ಮರಗಟ್ಟಿಸದಿರು ನನ್ನ ಶಿರವನ್ನು

ಪುಹರಿ : ಉತ್ತರದ ಗಾಳಿಯ ವ್ಯಕ್ತೀಕರಣ

ಅವಕಾಶವಿದೆ ನೋಡು ನಿನ್ನ ಧಾಳಿಗೆ ಇನ್ನೂ
ಸಾಕಷ್ಟಿದೆ ನೋಡು ನೀನು ಬಿಟ್ಟಿರುವುದೆ ಇನ್ನೂ
ಮುಟ್ಟದಿರು ಜೋಕೆ ಮಾನವರ ಮೈಯನ್ನು
ಕೆಡಿಸದಿರು ಕಂದಗಳ ರೂಪವನ್ನು

ಹಿಮವಾಗಲಿ ಬಯಲು
ಹಿಮವಾಗಲಿ ಜವುಗು
ಹಿಮಗಟ್ಟಲಿ ಕಲ್ಲು, ನೀರ ಬಳಿ ವಿಲ್ಲೊ
ಹಿಡಿದುಕೊ ಆ್ಯಸ್ಪನ್ ಮರ ಹಿಮಗಟ್ಟುವಂತೆ
ಓಕ್ ಮರದ ತೊಗಟೆ ಸುಲಿ ಅದರ ಮೈಯಿಂದ
ಪೈನ್ ಮರಗಳ ಮುರಿ ನೀನು ತುಂಡು ತುಂಡಾಗಿ
ಮುಟ್ಟದಿರು ಮಾತ್ರ ಮಾನವರ ಮೈಯನ್ನು
ಮುಟ್ಟೀಯ ಜೋಕೆ ತಾಯ ಶಿಶುವನ್ನು

ಇದೆಲ್ಲವೂ ಇನ್ನೂ ಸಾಕಾಗದಿದ್ದರೆ
ಇನ್ನೂ ಇದೆ ನೋಡು ಅವಕಾಶ ಸಾಕಷ್ಟು
ಹಿಮವಾಗಲಿ ಚೆನ್ನಾಗಿ ಕಾದಿರುವ ಶಿಲೆಯು
ನಿಗಿನಿಗಿನಿಗಿ ಕಾದಿರುವ ಶಿಲೆಯ ಕಲ್ಲು
ಉಕ್ಕಿನಂತಹ ಪರ್ವತ ಹಿಮಗಟ್ಟು ಹೋಗು
ಹರಿಯುವ ವುವೋಸ್ಕೊ ನದಿ ತಡೆಗಟ್ಟು ಹೋಗು
ನೊರೆಗಟ್ಟಿ ಭೋರ್ಗರೆವ-
ಸುಳಿಯ ನಿಲ್ಲಿಸು ಹೋಗು

ನಿನ್ನ ಹುಟ್ಟಿನ ಕುಲ ಮೂಲ ನಾ ಹೇಳಲೇನು
ನಿನ್ನ ಘನಪ್ರತಿಷ್ಠೆ ನಾ ತಿಳಿಸಲೇನು
ಚೆನ್ನಾಗಿ ಗೊತ್ತೆನಗೆ ನಿನ್ನ ಕುಲ ಮೂಲ
ನೀ ಬೆಳೆದ ಬಗೆ ಕೂಡ ಚೆನ್ನಾಗಿ ಗೊತ್ತು
ವಿಲ್ಲೊ ಮರಗಳ ನಡುವೆ ನೀ ಜನಿಸಿ ಬಂದೆ
ಅತಿಶೀತ ಚಳಿಯಲ್ಲಿ ಆರೈಕೆ ಕಂಡೆ
ಪಾತಕದ ಕಳಂಕ ಹೊತ್ತವನು ತಂದೆ
ದುಷ್ಟೆ ಎಂಬ ನಾಮ ಹೊತ್ತವಳು ತಾಯಿ
ಮೊಲೆ ಊಡಿದವರಾರು ಮೀಯಿಸಿದವರಾರು
ಮೊಲೆ ಹಾಲು ಇರದವಳು
ಮೊಲೆ ಎಂಬುದೇ ಇರದವಳು

ಹಾಲೂಡಿ ಬೆಳೆಸಿದವು ವಿಷ ಸರ್ಪ ನಿನ್ನ
ಆಹಾರ ಉಣಿಸಿದವು ಸರ್ಪಗಳು ನಿನಗೆ
ತೊಟ್ಟಿಲ್ಲದ ಮೊಲೆಯಿಂದ ಒಣ ಕೆಚ್ಚಲಿಂದ
ತೊಟ್ಟಿಲನು ತೂಗಿತು ವಾಯುವ್ಯದ ಗಾಳಿ
ಜೋಗುಳವ ಹಾಡಿತು ಕೊರೆವ ಚಳಿಗಾಳಿ
ಈ ಆರ್ಕ್ಟಿಕೆಯಲ್ಲಿ ಕಾಡಬನದಲ್ಲಿ
ಕಚಪಚನೆ ಕೆಸರು ಜವುಗಿನಲ್ಲಿ

ದುಷ್ಟನಾಗಿ ಬೆಳೆದೆ ಹಿಮವಂತ ನೀನು
ಹಾಳು ಮಾಡುತ ಬದುಕು ನಡೆಸಿದವ ನೀನು
ಕೆಲಸಕ್ಕೆ ಬಾರದವ ಹೆಸರಿಡಲೂ ಇಲ್ಲ
ಕೊನೆಗೊಂದು ಹೆಸರು ''ಕಲ್ಲು ಮಂಜ''

ಅಲ್ಲಿಂದ ಅವನು ಪೊದೆ ಬೇಲಿ ಅಲೆದ
ಗಿಡಗಂಟಿ ಮೆಳೆಯಲ್ಲಿ ಕುಣಿದಾಡುತ್ತಿದ್ದ
ಬೇಸಿಗೆಯಲಿ ಹೇಗೋ ಕಾಲ ಹಾಕುತ್ತಿದ್ದ
ಜವುಗಿನಲ್ಲೆಲ್ಲೊ ಕೆಸರು ಭೂಮಿಯಲ್ಲೆಲ್ಲೊ
ಚಳಿಗಾಲ ಬಂದಾಗ ಅಬ್ಬರಿಸುತ್ತಿದ್ದ
ಪೈನ್‌ವೃಕ್ಷದ ಮೇಲೆ ಫರ್ ಮರಗಳ ಮೇಲೆ

ಬರ್ಚ್ ಮರಗಳ ಕವಿದ ಆ್ಯಲ್ಡರ್ ಮರ ನುಸುಳಿ
ಮರಗಟ್ಟಿಸಿ ಬಿಡುತ್ತಿದ್ದ ಎಲ್ಲವನ್ನೂ
ಹುಲ್ಲೆನ್ನದೆ ಮರವೆನ್ನದೆ ಎಲ್ಲವನ್ನೂ
ಮರದ ಎಲೆ ಕಚ್ಚಿದ ಪೊದೆಯ ಹೂ ಕಚ್ಚಿದ
ಪೈನ್ ಮರದ ತೊಗಟೆಯನೂ ಬಿಡದೆ ಸುಲಿದ
ಫರ್ ಮರದ ಟೊಂಗೆ ಉದುರಿಸುತ ಬಂದೆ
ಈಗ ನೀ ಬೆಳೆದಿರುವೆ ಪೂರ್ತಿಯಾಗಿ
ತಾಳಿರುವೆ ರೂಪ ಪೂರ್ಣವಾಗಿ
ಹೆದರಿಸುತ್ತಿರುವೆ ಕೊರೆವ ಶೀತದಿ ನಮ್ಮ
ಕಿವಿ ಹಿಡಿಯುವ ಪ್ರಯತ್ನ ಮಾಡುತಿರುವೆ
ಧಾಳಿ ಮಾಡುತ್ತಿರುವೆ ನನ್ನ ಪಾದದ ಮೇಲೆ
ಮುತ್ತಿಗೆಯ ಹಾಕಿರುವೆ ಬೆರಳುಗಳ ಮೇಲೆ

ಅವಕಾಶ ಕೊಡಲಾರೆ ಅದಕೆಲ್ಲ ನಾನು
ನನಗೆ ತೊಂದರೆ ಕೊಡಲು ಬಿಡಲಾರೆ ನಾನು
ತುಂಬಿಕೊಳ್ಳುವೆ ಬೆಂಕಿ ಕಾಲ್ಚೀಲದಲಿ
ಕೆಂಡದುಂಡೆಗಳ ಈ ಬೂಟಿನಲ್ಲಿ
ಹಿಮದಿಂದ ನನಗೇನೂ ಆಗದಂತೆ
ಕೊರೆವ ಶೀತದ ಅಪಾಯ ಒದಗದಂತೆ

ಅಟ್ಟಿಬಿಡಲೋ ನಿನ್ನ ಪೊಹ್ಜಾದ ಸೀಮೆಗೆ
ಎಲ್ಲಿಂದ ಬಂದೆಯೋ ಆ ನಿನ್ನ ಜಾಗಕ್ಕೆ
ಹೋಗು ಹಿಮವಾಗಿ ಹೋಗಿ ಕೂರು
ಒಲೆಯ ಮೇಲಿರುವ ಪಾತ್ರೆಯಲ್ಲಿ
ಬೆಂಕಿ ಗೂಡೊಳಗಿನ ಕಿಡಿಕೆಂಡದಲ್ಲಿ
ಹಿಟ್ಟು ನಾದುವ ಹೆಂಗಸರ ಕರಗಳಲ್ಲಿ
ತರುಣಿ ಹೆಂಡತಿಯ ಎದೆಯೊಳಗೆ
ಮುಖವಿಟ್ಟ ಹುಡಗನಲ್ಲಿ
ಹೆಣ್ಣುಕುರಿ ಹಾಲಲ್ಲಿ
ಹೆಣ್ಣು ಮರಿ ಕುದುರೆಯಲಿ

ಈ ಮಾತಿಗೂ ನೀನು ಬಗ್ಗದಿದ್ದರೆ ನೋಡು
ನಿಜವಾಗಿಯೂ ಅಟ್ಟುವೆನು
ನರಕಲೋಕದ ಉರಿಗೆ
ಕುದಿಯುತಿರುವಂಥ ಉರಿಬೆಂಕಿ ಕುಲುಮೆಗೆ

ಹಾಕುವೆನು ನಿನ್ನನ್ನು ಬಡಿಗಲ್ಲಿನ ಮೇಲೆ
ರಕ್ಷಣೆಯೆ ಇಲ್ಲ ಬಡಿಗಲ್ಲಿನ ಮೇಲೆ
ಬೀಳುವುದು ಏಟು ಬಡಿಸುತ್ತಿಗೆಯಿಂದ
ಬಡಿದುಹಾಕುವುದು ಬಡಿಸುತ್ತಿಗೆ ನಿನ್ನ

ಇಷ್ಟಕ್ಕೂ ಹಿಮವೇ ಬಗ್ಗದಿದ್ದರೆ ನೀನು
ನಾ ಹಾಕಿದ ಶಾಪ ಕಡಿಮೆಯಾಗಿದ್ದರೆ
ಸ್ಥಳವು ಇನ್ನೊಂದು ಗೊತ್ತಿರುವುದು ನನಗೆ
ಅಟ್ಟುವೆನು ನಿನ್ನನ್ನು ಬಿರು ಬಿಸಿಲಿನ ಮನೆಗೆ
ಅಲ್ಲಿಂದ ಎಂದಿಗೂ ಪಾರಾಗಲಾರೆ
ಬದುಕಿರುವತನಕ ಪಾರಾಗಲಾರೆ

ನಾನಾಗೇ ನಿನಗೆ ಬಿಡುಗಡೆಯ ಕೊಡದಿರೆ
ನಾನಾಗೇ ನಿನಗೆ ವಿಮೋಚನೆ ನೀಡದಿರೆ

ಆಗ ಆ ಕಲ್ಲು ಮಂಜನಿಗೆ ಅರ್ಥವಾಯಿತು ಕಷ್ಟ
ಬಡಗಣದ ಗಾಳಿ ಪುತ್ರ ತಿಳಿದುಕೊಂಡ ಕಷ್ಟ
ಕೊನೆಗಾಲ ಬಂತೆಂದು ಅರ್ಥ ಮಾಡಿಕೊಂಡ
ದಯೆ ತೋರಿಸಿರೆಂದು ಕರುಣೆ ಬೇಡಿಕೊಂಡ
ಒಪ್ಪಂದವಾಗಲಿ ನಮ್ಮಿಬ್ಬರ ನಡುವೆ
ಮಾಡದಿರು ತೊಂದರೆ ನನಗೇನೂ ನೀನು
ಮಾಡೆನು ತೊಂದರೆ ನಿನಗೇನೂ ನಾನು
ನಾವಿಬ್ಬರೂ ಜೀವದಿಂದ ಇರುವತನಕ
ಆಗಸದಿ ಚಂದಿರನು ಇರುವ ತನಕ

ಬರಲಾರೆನು ಮತ್ತೆಂದಿಗೂ ನಿನ್ನ ಬಳಿ ನಾನು
ಎಂದಾದರೂ ಹಾಗೊಮ್ಮೆ ಮಾಡಿದರೆ ನಾನು
ಕುಲುಮೆಯಲಿ ನೂಕು ಉರಿಬೆಂಕಿಗೆ ಅದ್ದು
ಕಮ್ಮಾರನ ಒಲೆಯೊಳಗೆ ಅದ್ದಿಬಿಡು ನನ್ನ
ಇಲ್ಲಾರಿನೆನ್ನನ ಬಡಿಗಲ್ಲಿಗೆ ಹಾಕಿಬಿಡು ನನ್ನ
ಉರಿಬಿಸಿಲ ಮನೆಯೊಳಗೆ ಅಟ್ಟಿಬಿಡು ನನ್ನ
ಇರದಂತೆ ಎಂದಿಗೂ ಬಿಡುಗಡೆಯ ಆಸೆ

ಆಗ ಲೆಮಿನ್ಕಾಯ್ನನ್ ಮುಂದಕ್ಕೆ ನಡೆದ
ಹಿಮದಲ್ಲಿ ಬಿಟ್ಟ ದೋಣಿಯನ್ನು
ಇನ್ನೊಬ್ಬ ವೀರ ಟಿಯೆರಾ ಎಂಬುವನೂ
ಸ್ನೇಹಿತನ ಹೆಜ್ಜೆಯಲಿ ಹಾಕಿದನು ಹೆಜ್ಜೆ

ಮಟ್ಟಸವಾಗಿ ಎಲ್ಲೆಡೆಯೂ ಹರಡಿತ್ತು ಮಂಜು
ಪಾದಗಳ ಕೆಳಗೆ ಪುಡಿಯಾಯಿತು ಮಂಜು
ದಿನ ಒಂದು ದಿನ ಎರಡು ಹೀಗೆಯೇ ನಡೆದರು
ದಿನ ಮೂರರ ಕೊನೆಯಲ್ಲಿ ಹಳ್ಳಿಯೊಂದ ಕಂಡರು
ಅದು ಹಸಿವಿನ ಹಳ್ಳಿ ಗತಿಯಿಲ್ಲದ ಹಳ್ಳಿ

ಅಲ್ಲೊಂದು ಮನೆಯಿತ್ತು ಕೇಳಿದರು ಬಳಿ ಹೋಗಿ
ಸುಸ್ತಾಗಿ ಬಳಲಿರುವ ವೀರಪುರಷರು ನಾವು
ಬವಳಿ ಬರತಿಹುದು ಹಸಿವಿನಿಂದ

ತಿನ್ನಲಿದೆಯೇ ಇಲ್ಲಿ ಏನಾದರೂ ಬಾಡು
ಒಂದಿಷ್ಟು ಮೀನು ಮತ್ತೇನಾದರೂ
ಇರಲಿಲ್ಲ ಮೀನು ಇರಲಿಲ್ಲ ಬಾಡು
ಇರಲಿಲ್ಲ ಏನೂ ಆ ಬೀಡಿನಲ್ಲಿ

ಲೆಮಿನ್ಕಾಯ್ನನ್ ನುಡಿದ
ಬೆಂಕಿ ಬೀಳಲಿ ಈ ಪಾಪಿ ಮನೆಗೆ
ಕೊಚ್ಚಿ ಹೋಗಲಿ ಪ್ರವಾಹದೊಳಗೆ
ಮತ್ತೆ ಮುನ್ನಡೆದ ಕಾಡುಗಳ ಹಾದು
ಮನೆಯಿಲ್ಲದ ಬೀದಿ ಗೊತ್ತಿಲ್ಲದ ಹಾದಿ

ಹೋಗುತ್ತ ತರಿದನು ಕಲ್ಲು ಹೂವನ್ನು
ಹೆಣೆದ ಅದರಿಂದ ಕಾಲ್ಚೀಲವನ್ನು
ಕೈಗವಸು ಹೆಣೆದ ಬೇಗ ಬೇಗ
ಹಿಮವಂತನ ಪ್ರಬಲ ಸಾಮ್ರಾಜ್ಯದಲ್ಲಿ
ಎಲ್ಲವೂ ಹಿಮದಿಂದ ಕಲ್ಲಾಗುತಿರುವಲ್ಲಿ

ದಾರಿ ಹುಡುಕುತ್ತ ಮುನ್ನಡೆದ ಅವನು
ಸರಿಯಾದ ದಿಕ್ಕು ಹುಡುಕುತ್ತ ಅವನು
ಕಾಣಿಸಿತು ದಾರಿ ಕಾಡಿನಲ್ಲೊಂದು
ತೋರಿಸಿತು ದಿಕ್ಕು ಸರಿಯಾದುದೊಂದು
ಲೆಮಿನ್ಕಾಯ್ನನ್ ನುಡಿದ :
ಪ್ರಿಯ ಸೋದರ ಟಿಯೆರಾ
ಕೊನೆಗೂ ಬಂದಂತಿದೆ ನಾವು ಸರಿದಾರಿಗೆ
ದಿನಗಟ್ಟಲೆ ಅಲೆದೆವು ತಿಂಗಳೆಲ್ಲ ಅಲೆದೆವು
ಎಷ್ಟು ಕಾಲ ಹೀಗೇ ಬಯಲಲ್ಲೇ ಅಲೆದೆವು

ಟಿಯೆರಾ ಹೇಳಿದನು
ಹೊರಟು ಬಂದೆವು ನಾವು ತೀರಿಸಲು ಸೇಡು
ಹುಚ್ಚು ಧೈರ್ಯದಲಿ ಹಿಡಿದು ಸೇಡು
ಮುಂಗಾಣದೆ ನುಗ್ಗಿದೆವು ಪೊಹ್ಜಾದ ಯುದ್ಧಕ್ಕೆ
ಅಪಾಯಕ್ಕೆ ನುಗ್ಗಿದೆವು ನಾವು ನಾವಾಗಿಯೇ
ನಾಶವಾಗುತ್ತಿದ್ದೆವು ನಾವು ನಾವಾಗಿಯೇ
ಆ ದುರವಸ್ಥೆ ನಾಡಲ್ಲಿ ಗೊತ್ತಿರದ ಹಾದಿಯಲಿ

ಇದುವರೆಗೆ ಗೊತ್ತಿಲ್ಲ ಗೊತ್ತಾಗುವಂತೆಯೂ ಇಲ್ಲ
ಎಲ್ಲಿ ಒಯ್ಯುವುದೊ ದಾರಿಯಿದು ನಮ್ಮನ್ನು
ಕಾಡಂಚಿನಲ್ಲಿ ಕಾದಿರುವ ಸಾವಿಗೊ
ಪೊದೆ ಮೆಳೆಗಳಲ್ಲಿ ಕಾದಿರುವ ವಿನಾಶಕ್ಕೊ
ಇದು ಹದ್ದುಗಳ ಬೀಡು ಕಾಗೆಗಳ ತವರು
ರಣಹದ್ದು ಬರುತಿವೆ ಗುಂಪುಗುಂಪಾಗಿ
ಕೆಟ್ಟ ಶಕುನದ ಹಕ್ಕಿ ಊಳಿಟ್ಟು ಕೂಗಿ
ತಿನ್ನುತಿವೆ ಹದ್ದು ಮಾಂಸವನು ಕಿತ್ತು
ಕೂಗುತಿವೆ ಕಾಗೆ ನೆತ್ತರನು ಕುಡಿದು
ಕೊಕ್ಕು ಕೆಂಪಾಗಿವೆ ಗಾಯಗಳ ಕುಕ್ಕಿ
ಹಾಕುತ್ತಿವೆ ಮೂಳೆ ಬಂಡೆಗಳ ಮೇಲೆ

ನಮ್ಮ ತಾಯಿಗೆ ಅಯ್ಯೋ ಗೊತ್ತಿಲ್ಲವಿನ್ನೂ
ಬೇನೆ ತಿಂದು ಹೆತ್ತವಳಿಗೆ ತಿಳಿದಿಲ್ಲವಿನ್ನೂ
ಎಲ್ಲಿ ಹೋಯಿತೋ ಅವಳೊಡಲ ತುಣುಕು
ಎಲ್ಲಿ ಹರಿಯಿತೋ ಅವಳೊಡಲ ರಕ್ತ
ಸಮರೊಡನೆ ಕಾದುತ್ತ ರಣರಂಗದಲ್ಲೊ
ಎತ್ತರಕೆ ಮೇಲೆದ್ದ ಅಲೆ ಕಡಲಿನಲ್ಲೊ
ಎಡವಿ ಕೊಂಬೆಯನು ಗುಡ್ಡದಲ್ಲೊ

ಏನೂ ಗೊತ್ತಾಗದು ಮಗನ ಸುದ್ದಿ
ಗೊತ್ತಾಗುವುದಿಷ್ಟೆ ಅವನಳಿದು ಹೋದ
ಗೋಳಾಡಿ ಹೀಗೆ ಹೇಳುವಳು ಅವಳು
ನನ್ನ ಮಗನಳಿದ ಇನ್ನಿಲ್ಲ ಅವನು
ಪರಲೋಕದಲ್ಲಿ ಬೀಜ ಬಿತ್ತಿದ್ದ ಅವನು
ಗೋರಿಗಳ ನಾಡಲ್ಲಿ ಹೊಡೆಯುತಿರುವನು ಕುಂಟೆ

ನನ್ನ ಪ್ರೀತಿಯ ಪುತ್ರ, ನಿರ್ಭಾಗ್ಯೆ ನಾನು
ಬಿಟ್ಟು ಹೋದನು ಬಿಲ್ಲು ಎಂದೆಂದಿಗೂ ಇಲ್ಲಿ
ಬಿಟ್ಟು ಹೋದನು ಬಿಲ್ಲು ಬಳಸದಂತೆ
ಇನ್ನು ಭಯವಿಲ್ಲ ಹಕ್ಕಿಗಳಿಗೆ
ಕುಪ್ಪಳಿಸಿ ತಿರುಗುತ್ತವೆ ಪೊದೆಯ ಕೋಳಿ
ಕರಡಿಗಳು ಸುಖವಾಗಿ ಕೊಳ್ಳೆ ಹೊಡೆದು
ಅಲೆಯುತ್ತವೆ ಸಾರಂಗ ಹೊಲಗದ್ದೆಯಲ್ಲಿ

ಲೆಮಿನ್ಕಾಯ್ನನ್ ನುಡಿದ:
ನಿರ್ಭಾಗ್ಯೆ ನನ್ನವ್ವ ಸುಖವಿಲ್ಲ ನಿನಗೆ
ನೀನು ಬೆಳೆಸಿದ್ದೆ ಪಾರಿವಾಳದ ಹಿಂಡು
ಮುದ್ದಾಗಿ ಬೆಳೆಸಿದ್ದೆ ಹಂಸಗಳ ದಂಡು
ಬಿರುಗಾಳಿ ಎದ್ದಿತು ಎಲ್ಲ ಚೆಲ್ಲಾಪಿಲ್ಲಿ
ಆ ದುರುಳ ಬಂದ ಚದುರಿಸಿದ ಎಲ್ಲ
ಒಂದೊಂದು ಒಂದು ಕಡೆ ಇನ್ನೊಂದು ಮತ್ತೆಲ್ಲೊ

ಆ ದಿನಗಳ ನೆನಪಾಗುವುದು ಎಷ್ಟು ಚೆಂದವಿತ್ತಾಗ
ನಾವೆಲ್ಲ ಇರುತ್ತಿದ್ದೆವು ನಿನ್ನ ಸುತ್ತ
ಒಂದು ಗೊಂಚಲಿನ ಹೂವುಗಳ ಹಾಗೆ
ಒಂದು ಗೊಂಚಲಿನ ಹಣ್ಣುಗಳ ಹಾಗೆ
ನಮ್ಮತ್ತಲೇ ಇತ್ತು ಜನರ ದೃಷ್ಟಿ
ಹೊಗಳುತ್ತಿದ್ದರು ಜನರೆಲ್ಲ ಮೆಚ್ಚಿ

ಕಾಲವೊಂದಿತ್ತು, ವಾಯು ಕೃಪೆ ನಮಗಿತ್ತು
ರವಿಯ ಕರುಣೆಯೂ ಕೂಡ ನಮ್ಮ ಮೇಲಿತ್ತು
ಮೋಡ ಕವಿಯುತ್ತಿವೆ ಈಗ ನಮ್ಮ ಮೇಲೆ
ಧೈರ್ಯಗೆಡಿಸುತ್ತಿದೆ ಭೋರ್ಗರೆವ ಮಳೆ
ಆದರೂ ಕಷ್ಟವೆಷ್ಟಿರಲಿ ಬೇಡ ಧೈರ್ಯ ಕುಂದುವುದು
ಹುಡುಗಿಯರು ಬಿಚ್ಚು ಕೇಶದ ಚೆಲುವೆಯರು
ಹೆಂಗಸರು ಸವಿಯಾಗಿ ನಗುತ್ತಲೇ ಇರುವರು
ಅಳುವುದಿಲ್ಲವರು ತೊಂದರೆಗೆ ಹೆದರಿ
ಅಂಜುವುದಿಲ್ಲವರು ಕಷ್ಟಕ್ಕೆ ಬೆದರಿ

ನಮಗೇನೂ ಯಾರೂ ಮಾಟ ಮಾಡಿಲ್ಲ
ಸಾಯುವಂತೆ ಈ ಹಾದಿ ಮಧ್ಯದಲ್ಲಿ
ಅಳಿಯುವಂತೆ ನಮ್ಮ ನವತಾರುಣ್ಯದಲ್ಲಿ
ಬಾಡುವಂತೆ ಮೊದಲೆ ಮೊಗ್ಗಿನಲ್ಲಿ
ಯಾರಿಗಾಗಿದೆಯೊ ಅಂಥ ಮಾಟ
ಅವರು ಹೋಗಲಿ ಮತ್ತೆ ತಮ್ಮ ಮನೆಗೆ
ಮಾಟ ಮಾಡಿದ ಅವರೇ ಬಲಿಯಾಗಿ ಹೋಗಲಿ
ಮಾಟ ಮಾಡಿದವರೇ ಸಿಕ್ಕಲಿ
ತಮ್ಮ ಮಾಟಕ್ಕೆ ತಾವೇ ಸಿಕ್ಕಿಕೊಳ್ಳಲಿ
ಅಳಿದು ಹೋಗಲಿ ಪೂರ್ತಿ ಅವರ ಸಂತಾನ

ಬಲಿಯಾಗಲಿಲ್ಲ ನನ್ನ ತಂದೆಯು ಎಂದೂ
ಈ ಮಂತ್ರ ಮಾಟಗಳ ಜಾಲಗಳಿಗೆ
ಅವನು ಹೇಳಿದುದನ್ನೇ ನಾನೂ ಹೇಳುವೆನು
ರಕ್ಷಿಸು ನನ್ನ ಓ ಸೃಷ್ಟಿಕರ್ತ
ಪೊರೆ ನಮ್ಮನು ಕರುಣಾಮಯಿ ಜುಮಾಲಾ
ನಿನ್ನ ಕರುಣೆಯ ಕೈ ಹಿಡಿದು ನಡೆಸು ನನ್ನ
ಅಸೀಮ ಬಲರಿಂದ ಕಾಪಾಡು ನನ್ನ
ಮಂತ್ರ ಮಾಟದವರ ಸಂಚಿಂದ
ಗಡ್ಡದವರ ಶಾಪದಿಂದ
ಗಡ್ಡವಿಲ್ಲದವರ ಶಾಪದಿಂದ
ಅಭಯವಿರಲಿ ನಮ್ಮ ಮೇಲೆ
ನಮ್ಮಿಂದ ನಮ್ಮ ಮಗು ಅಗಲದಿರಲಿ
ತಾಯಿ ಹೆತ್ತ ಶಿಶು ದಾರಿ ತಪ್ಪದಿರಲಿ
ನೀನು ತೋರಿದ ದಾರಿ ನೀನು ಹಾಕಿದ ದಾರಿ

ಲೆಮಿನ್ಕಾಯ್ನನ್ ಸೃಷ್ಟಿಸಿದ ಕುದುರೆಯನ್ನು
ಎಡರು ತೊಡರಿಂದ ಕಪ್ಪು ಕುದುರೆ
ದುರ್ದಿನಗಳ ಕಡಿವಾಣ ದುಃಖಗಳೇ ತಡಿ ಅದಕೆ
ಕುದುರೆ ಏರಿದ ಪಯಣ ಸಾಗಿತು
ಜೊತೆಗಿದ್ದ ಟಿಯೆರಾ
ನಿಲ್ಲಲಿಲ್ಲ ಪಯಣ ಮನೆ ತಲುಪುವವರೆಗೆ
ಹೆತ್ತವ್ವನ ಬಂದು ಸೇರಿಕೊಳ್ಳುವವರೆಗೆ

ಇಲ್ಲೇ ಬಿಡುವೆ ಅವನನ್ನು ನನ್ನ ಹಾಡಿಂದ
ದಾರಿ ತೋರುವೆನು ಟಿಯಾರಾಗೆ
ಕಳುಹಿಸುವೆ ನಾ ಅವನ ಮನೆಯ ಕಡೆಗೆ
ಹಿಡಿಯುವುದು ಹಾಡು ದಾರಿ ಬೇರೆಯದು
ತಿರುಗುವೆನು ನಾನು ಬೇರೆ ವಿಷಯದ ಕಡೆಗೆ

20. ಕುಲೆರ್ವೊ ಮತ್ತು ಇಲ್ಮಾರಿನೆನ್ ಪತ್ನಿ

ಉಂಟಾಮೊ ಮತ್ತು ಕಲೆರ್ವೊ ಸೋದರರು. ಕಲೆರ್ವೊನ ವಿರುದ್ಧ ಕತ್ತಿ ಎತ್ತಿದ ಉಂಟಾಮೊ ಕಲೆರ್ವೊನನ್ನು ಮತ್ತು ಅವನ ಕಡೆಯೆಲ್ಲರನ್ನೂ ಸೋಲಿಸಿ ಆ ಕುಲದ ಒಬ್ಬ ಗರ್ಭಿಣಿ ಹೆಣ್ಣನ್ನು ಮಾತ್ರ ಉಳಿಸಿದ. ಅವಳನ್ನು ಉಂಟಾಮೊ ಜನರೇ ಕರೆದೊಯ್ದರು. ಅವಳು ಅಲ್ಲಿ ಕುಲೆರ್ವೊ ಎಂಬ ಪುತ್ರನಿಗೆ ಜನ್ಮ ನೀಡಿದಳು. ತಾನು ಉಂಟಾಮೊ ವಿರುದ್ಧ ಸೇಡು ತೀರಿಸಿಕೊಳ್ಳುವುದಾಗಿ ತೊಟ್ಟಿಲಿನಲ್ಲಿ ಕುಲೆರ್ವೊ ಪ್ರತಿಜ್ಞೆ ಮಾಡಿದ. ಕುಲೆರ್ವೊನನ್ನು ಕೊಲ್ಲಲು ಉಂಟಾಮೊ ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು. ಕುಲೆರ್ವೊ ಬೆಳೆದು ದೊಡ್ಡವನಾದ. ಉಂಟಾಮೊನ ಕೆಲಸಗಳನ್ನೆಲ್ಲ ಹಾಳುಗೆಡವಿದ. ಆಗ ಕುಲೆರ್ವೊನನ್ನು ಇಲ್ಮಾರಿನೆನ್‌ಗೆ ಗುಲಾಮನಾಗಿ ಮಾರಲಾಯಿತು.

ಕುಲೆರ್ವೊ ಕಲೆರ್ವೊನ ಸಂತಾನ
ನೀಲಿ ಕಾಲ್ಚೀಲ ಹಳದಿ ಅಂಗಿ, ಒಳ್ಳೆ ಚರ್ಮದ ಬೂಟು
ಕಮ್ಮಾರನ ಮನೆಗೆ ಬಂದ
ಕೊಡಿ ಕೆಲಸ ಈಗಲೇ ಎಂದ
ಸಂಜೆ ಒಡೆಯನ ಕೇಳಿದ
ಹಗಲು ಒಡತಿಯ ಕೇಳಿದ
ಕೊಡಿ ಕೆಲಸ ನಾನು ಮಾಡುವಂಥ ಕೆಲಸ
ನನ್ನಂಥ ಪಾಪಿಗೆ ತಕ್ಕ ಕೆಲಸ

ಇಲ್ಮಾರಿನೆನ್ ಹೆಂಡತಿ ಯೋಚಿಸಿದಳು ಬಹಳ
ಯಾವ ಕೆಲಸ ಮಾಡುವ ಈ ಗುಲಾಮ
ಕೊಟ್ಟಳು ದನ ಕಾಯುವ ಕೆಲಸ
ಬಲು ದೊಡ್ಡ ಮಂದೆ ಕಾಯುವಂತಹ ಕೆಲಸ
ಬಲು ದುಷ್ಟೆ ಅವಳು ಬೇಯಿಸಿದಳು ಬ್ರೆಡ್ಡು
ಕೆಳಗೆ ಓಟ್ಸ್ ಮೇಲೆ ಗೋಧಿ ಮಧ್ಯಕ್ಕೆ ಕಲ್ಲು
ಬೆಣ್ಣೆ ಹಚ್ಚಿದಳು
ಹುರಿದ ಹಂದಿಯ ಬಾಡು ಅದರ ಮೇಲೆ
ಕಟ್ಟಿಕೊಟ್ಟಳು ಬುತ್ತಿ ಮಾತೊಂದ ಹೇಳಿ
ತಿನ್ನಬೇಡ ಈಗಲೇ ಇದನು
ಕಾಡಿಗಟ್ಟುವವರೆಗೆ ತಿನ್ನಲೇ ಬೇಡ

ಕಲೆರ್ವೊ ಎಂಬುದು ತಂದೆಯ ಹೆಸರು. ಕುಲೆರ್ವೊ ಎಂಬುದು ಮಗನ ಹೆಸರು.

ಮಂದೆಯನು ಬಿಟ್ಟು ಹೇಳಿದಳು ಹೀಗೆ:
ದನಗಳನು ಅಟ್ಟಿ ಗಿಡಗಂಟಿ ಪೊದೆಗೆ
ಹಾಲು ಕರೆಯುವ ಹಸು ಹುಲ್ಲುಗಾವಲಿಗೆ
ಅಗಲ ಕೊಂಬಿನ ದನ ಆ್ಯಸ್ಪೆನ್ ತೋಪಿಗೆ
ವಂಕಿ ಕೊಂಬಿನ ದನ ಬರ್ಚ್‌ಮರದ ತೋಪಿಗೆ
ಚೆನ್ನಾಗಿ ಮೇಯಲಿ ಬಲವಾಗಿ ಕೊಬ್ಬಲಿ

ಕಾಪಾಡು ಮಂದೆಯನು ಕರುಣಾಳು ಜುಮಾಲ
ರಕ್ಷಿಸು ದನವನ್ನು ನಿನ್ನ ದಯೆಯಿಂದ
ಆಗದಿರಲಿ ತೊಡಕು ಯಾವುದೇ ಕೆಡಕು
ಮನೆಯಲ್ಲಿ ಹೇಗೋ ಹಾಗೆ ಕ್ಷೇಮವಾಗಿರಲಿ
ಕಣ್ಣಿಟ್ಟು ಕಾಯಯ್ಯ ಬಯಲಿನಲ್ಲಿ
ಮಂದೆ ಬಿಟ್ಟಗಲಿದರೆ ಕಾಪಾಡು ದನವನ್ನು
ಹೆಚ್ಚಿಸು ಈ ಮನೆಯ ಗೋವು ಸಂಪದವನ್ನು
ಒಳಿತು ಬಯಸಿದವರಿಗೆ ಇಷ್ಟವಾಗುವ ಹಾಗೆ
ಕೆಡಕು ಬಯಸಿದವರಿಗೆ ಇಷ್ಟವಾಗದ ಹಾಗೆ

ದನ ಕಾಯುವ ಹುಡುಗ ಸರಿ ಇಲ್ಲದಿದ್ದರೆ
ಗೊಲ್ಲಗಿತ್ತಿ ಅಂಜುವವಳಾದರೆ
ಮರಗಳೇ ಕಾಯಲಿ ದನಗಳನ್ನು
ವೃಕ್ಷಗಳೇ ರಕ್ಷಿಸಲಿ ಹಸುಗಳನ್ನು
ಮನೆಗೆ ತೆರಳುವ ದಾರಿ ಚೆರ್ರಿ ಮರ ತೋರಿಸಲಿ
ದನ ಹುಡುಕುವ ಕಷ್ಟ ಒಡತಿಗಿರದಿರಲಿ

ಕಾಯದಿದ್ದರೆ ವಿಲ್ಲೊ ಪೊರೆಯದಿದ್ದರೆ ಆ್ಯಶ್
ಚೆರ್ರಿಮರ ತೋರದಿರೆ ಮನೆಯ ದಾರಿ
ನಿನ್ನ ಒಳ್ಳೊಳ್ಳೆ ಸೇವಕರ ಕಳಿಸು ದೇವಾ
ಸೃಷ್ಟಿಕರ್ತನ ಪುತ್ರಿಯರ ಕಳಿಸು ದೇವಾ
ಅವರು ಕಾಯಲಿ ನನ್ನ ದನವನ್ನು
ರಕ್ಷಿಸಲಿ ಇಡೀ ಮಂದೆಯನ್ನು
ಎಷ್ಟೊಂದು ಕನ್ನೆಯರು ನಿನ್ನ ಅಣತಿಯಲ್ಲಿ
ಸೃಷ್ಟಿಕರ್ತನ ಪುತ್ರಿಯರು ಸ್ವರ್ಗದಲ್ಲಿ
ಸುವೆತಾರ್ ಎಂಬುವಳು ಮಿಗಿಲಾದ ಹೆಣ್ಣು
ಇಟೆಲತಾರ್ ಪುರಾತನಳು ನಿಸರ್ಗದಲ್ಲಿ

ಹೊಂಗತಾರ್ ಎಂಬುವಳು ಅತಿ ಚೆಲುವೆ ರಂಭೆ
ಪಹ್ಲಾಜತಾರ್ ಎಂಬುವಳು ಪುಟ್ಟ ಚೆನ್ನೆ
ಟುವೊಮೆತಾರ್ ಟಾಪಿಯೊ ಪುತ್ರಿ
ಮೆಯ್ಲಿಕ್ಕಿಯು ಕಾನನದ ಮಲ ಮಗಳು
ಟೆಲೆರ್ವೊ ಎಂಬುವಳು ಟಾಪಿಯಾ ಹೆಣ್ಣು
ನೀವೆಲ್ಲ ರಕ್ಷಿಸಿ ನನ್ನ ದನವನ್ನು
ಕಾಪಾಡಿ ಬಲು ಒಳ್ಳೆ ರಾಸುಗಳನು
ಎಳೆ ಬಿಸಿಲ ಸಿರಿಯಲ್ಲಿ ಹಸಿರೆಲೆಯ ಸೊಬಗಲ್ಲಿ
ಹಸಿರೆಲೆಯು ಮರಗಳಲಿ ತೂಗುವಾಗ
ಮಣ್ಣ ಮೇಲಿನ ಹುಲ್ಲು ಬಳುಕುವಾಗ

ಸುವೆತಾರ್ ಮಿಗಿಲಾದ ಹೆಣ್ಣೆ
ಇಟೆಲೆತಾರ್ ಪುರಾತನಳೆ
ನಿಮ್ಮ ಮೃದು ಉಡುಪು ಹೊದ್ದಿಸಿರಿ ನನ್ನ ದನಗಳ ಮೇಲೆ
ಹರಡಿ ನಿಮ್ಮ ಮೇಲಂಗಿ ನನ್ನ ಮಂದೆಯ ಮೇಲೆ
ನನ್ನ ದನಗಳಿಗೆ ಅದು ಹೊದಿಕೆಯಾಗಿರಲಿ
ಚಿಕ್ಕ ಕರುಗಳು ಮರೆಯಾಗಿ ಇರಲಿ
ಬೀಸದಿರುವಂತೆ ಕೆಟ್ಟ ಗಾಳಿ
ಬೀಳದಿರುವಂತೆ ಮಳೆ ನೀರು ಮೇಲೆ
ಕಾಪಾಡಿ ಮಂದೆಯನು ಎಡರು ತೊಡರಿಂದ
ಹಾದಿಯಲಿ ಎದುರಾದ ಹಾನಿ ಸಂಕಟದಿಂದ
ಕೆಸರಲ್ಲಿ ಕಾಲುಗಳು ಉಳುಕದಂತೆ
ಜವುಗಲ್ಲಿ ಕಾಲುಗಳು ಜಾರದಂತೆ

ಕೊಂಬು ತನ್ನಿರಿ ದೂರ ನಾಡಿನಿಂದ
ಹುಡುಕಿ ತನ್ನಿರಿ ಬಾನ ಮಧ್ಯದಿಂದ
ಜೇನಂತೆ ಸುಸ್ವರದ ಕೊಂಬನ್ನು ತನ್ನಿ
ಬಾರಿಸಿರಿ ಕೊಂಬು ಜೋರು ಜೋರಾಗಿ
ಪೊದೆಯ ಮೇಲೆಲ್ಲ ಹೂವು ಹರಡಿ
ಕಂಗೊಳಿಸಲಿ ಪೊದೆಯಂಚು ಮೆರೆಯಲೀ ಬನ ಸೀಮೆ

ಮೇವು ಕೊಡಿ ತಿನ್ನುವಷ್ಟು ದನಮಂದೆಗೆ ,
ಸಾಕಷ್ಟು ಆಹಾರ ಸಿಗುವಂತೆ ಮಾಡಿ
ಜೇನಷ್ಟು ಸಿಹಿಯಾದ ತಿನಿಸನ್ನು ಕೊಡಿರಿ
ಮಧುವಷ್ಟೆ ಸವಿಯಾದ ನೀರು ಕೊಡಿರಿ

ಚಿನ್ನದಂತಹ ಹುಲ್ಲು ತಂದು ಹಾಕಿ
ಬೆಳ್ಳಿಯಂತಹ ಗರುಕೆ ತಂದು ಹಾಕಿ
ಸಿಹಿನೀರ ಬದುವಲ್ಲಿ ಬೆಳೆದಂಥ ಹುಲ್ಲು
ಹರಿವ ಕೊಳದಂಚಲ್ಲಿ ಬೆಳದಂಥ ಹುಲ್ಲು
ಸರಸರನೆ ಓಡುವ ನದಿಯ ಅಂಚಿನ ಹುಲ್ಲು
ಸರಸರನೆ ಹರಿಯುವ ನೆರೆಯ ಹುಲ್ಲು
ಬಂಗಾರದಂತೆ ಹೊಳೆವ ಬೆಟ್ಟ ಗುಡ್ಡದ ಹುಲ್ಲು
ಬೆಳ್ಳಿಯಂತೆ ಹೊಳೆವ ಪೊದೆ ಮೆಳೆಯ ಹುಲ್ಲು

ಬಂಗಾರದಂಥ ಬಾವಿಗಳ ತೋಡಿರಿ
ಹುಲ್ಲುಗಾವಲಿನ ಎರಡು ಬದಿಗಳಿಗೆ
ನೀರು ಕುಡಿಯಲಿ ದನ ಕರುವಿನ ಮಂದೆ
ಸಿಹಿರಸವು ಹನಿಯಲಿ ತುಂಬು ಕೆಚ್ಚಲಿಗೆ
ಹರಿಯಲಿ ಕ್ಷೀರವು ಹಳ್ಳವಾಗಿ
ಉಕ್ಕುಕ್ಕಿ ಹರಿಯಲಿ ಹಾಲು ಹೊನಲಾಗಿ
ಜುಳುಜುಳನೆ ಹರಿಯುವ ಹಾಲು ಹಳ್ಳ
ತೊರೆಯಾಗಿ ಜಿನುಗುವ ಹಾಲು ಹಳ್ಳ
ಹರಿಯುತಿರಲಿ ಹಾಲು ಸದಾ ಕಾಲ
ಹಾಲ ತೊರೆ ಉಕ್ಕಲಿ ಸದಾ ಕಾಲ:
ದ್ವೇಷತ್ವೇಷದ ಮೇಲೆ ದುಷ್ಟಶಕ್ತಿಯ ಮೇಲೆ
ಹರಿಯದಿರಲಿ ಹಾಲು ಪಾತಾಳಲೋಕಕ್ಕೆ
ಕಸಿಯದಿರಲಿ ಸಂಪತ್ತು ಹೊಟ್ಟೆ ಉರಿಯಿಂದ

ಕೆಡುಕು ಮಾಡುವ ಜನ ಬಹಳವಾಗಿರುವರು
ಹಾಲು ಕಳಿಸುವರು ಪಾತಾಳಲೋಕಕ್ಕೆ
ಬತ್ತುವುದು ಕೆಚ್ಚಲು ಹೊಟ್ಟೆ ಉರಿಯಿಂದ
ಪರರ ಪಾಲಾಗುವುದು ನಮ್ಮ ಸಂಪತ್ತು
ಕಡಿಮೆ ಜನವಿದ್ದಾರೆ ಆದರೂ ನಿಪುಣರು
ಪರಲೋಕದಿಂದ ಹಾಲು ತರುವಂಥ ಜನರು
ಹಳ್ಳಿ ಉಗ್ರಾಣದಿಂದ ಹುಳಿ ಹಾಲು ತರುವವರು
ಹೊಸ ಹಾಲು ತರುವವರು ಬೇರೆ ಕಡೆಯಿಂದ

ಯಾರನ್ನೂ ಕೇಳುತಿರಲಿಲ್ಲ ನನ್ನ ತಾಯಿ
ಇನ್ನೊಬ್ಬರ ಮನೆಯಿಂದ ತರಲಿಲ್ಲ ಹಾಲು
ತರುತ್ತಿದ್ದಳು ಪರಲೋಕದಿಂದ

ಹುಳಿಯ ಹಾಲನ್ನು ಇಟ್ಟುಕೊಂಡವರಿಂದ
ಹೊಸ ಹಾಲನ್ನು ಬೇರೆ ಕಡೆಯಿಂದ
ತರುತ್ತಿದ್ದರು ಇರುಳಲ್ಲಿ ರಹಸ್ಯವಾಗಿ
ಬಚ್ಚಿಡುತ್ತಿದ್ದರು ಕತ್ತಲಲ್ಲಿ ಕಾಣದಂತೆ
ದುಷ್ಟ ಪೀಡೆಗೆ ಅದು ತಿಳಿಯದಂತೆ
ಕೆಟ್ಟ ಕಣ್ಣವರಿಗೆ ಅದು ಕಾಣದಂತೆ

ಅವಳು ಯಾವಾಗಲೂ ಹೇಳುತಿದ್ದಳು ನನಗೆ
ಇದೇ ಮಾತಲ್ಲಿ ಹೇಳಿದ್ದಳು ಅವಳು
ಎಲ್ಲಿ ಹೋಯಿತು ಎಲ್ಲ ಕರೆದ ಹಾಲು
ಎಲ್ಲಿ ಮಾಯವಾಯಿತೋ ಕರೆದ ಹಾಲು
ಯಾರು ಹೊತ್ತೊಯ್ದರೊ ಉಗ್ರಾಣದಲ್ಲಿ ಬಚ್ಚಿಟ್ಟರೊ
ಬೇಡುವ ಹೆಣ್ಣುಗಳು ಹೊತ್ತೊಯ್ದರೊ ಹಾಲು
ಹೊಟ್ಟೆಕಿಚ್ಚಿನವರ ಪಾಲಾಯಿತೊ ಹಾಲು
ಕಾಡಲ್ಲಿ ಕಳೆಯಿತೊ ಬನದಲ್ಲಿ ಚೆಲ್ಲಿತೊ

ಹಾಲು ಹೋಗಲಿಲ್ಲ ಪಾತಾಳಲೋಕಕ್ಕೆ
ಕರೆದ ಪಸು ಹಾಲು ದಾರಿಹೋಕರಿಗೆ
ಬೇಡುವ ಹೆಣ್ಣುಗಳ ಮಡಿಲಿಗೆ
ಹೊಟ್ಟೆ ಉರಿಯವರ ಪಾಲಿಗೆ
ಕಾಡಲ್ಲಿ ಕಳೆಯಲಿಲ್ಲ ಬನದಲ್ಲಿ ಚೆಲ್ಲಲಿಲ್ಲ
ಮನೆಯಲ್ಲಿರಬೇಕು ಉಪಯೋಗಕಾಗಿ
ಎಲ್ಲ ಸಮಯಕ್ಕೂ ಇರಬೇಕು ಹಾಲು
ಮನೆಯೊಡತಿ ನೋಡುವಳು ಅದರ ಜೋಪಾನ
ಹಾಲು ಬಟ್ಟಲ ಹಿಡಿದು ಕರಗಳಲ್ಲಿ

ಸುವೆತಾರ್ ನೀನು ಮಿಗಿಲಾದ ಹೆಣ್ಣೆ
ಇಟೆಲೆತಾರ್ ಪುರಾತನಳೆ
ಹೋಗಿ ಮೇವಿಕ್ಕಿ ನನ್ನ ಸ್ಲೊಟ್ರಿಕ್ಕಿಗೆ
ನೀರು ಕೊಡಿರಿ ನನ್ನ ಜೋತಿಕ್ಕಿಗೆ
ಕರುಣಸಿರಿ ಹಾಲು ಹಮ್ಮಿಕ್ಕಿಗೆ
ಹಸಿ ಹುಲ್ಲು ಕೊಡಿರಿ ಟುವೊರಿಕ್ಕಿಗೆ
ದಯ ಪಾಲಿಸಿ ಹಾಲು ಮೈರಿಕ್ಕಿಗೆ

ಹುಲುಸಾಗಿ ಬೆಳೆದ ಗಿಡಗಂಟಿಯಿಂದ
ಎಲ್ಲ ಕಾಂಡಗಳ ಜೊಂಡು ಹುಲ್ಲಿನಿಂದ
ಹದವಾದ ಮಣ್ಣಲ್ಲಿ ಬೆಳೆದ ಹುಲ್ಲಿಂದ
ಜೇನು ತೊಟ್ಟಿಕ್ಕುವ ಬೆಟ್ಟದಿಂದ
ಸಕ್ಕರೆಯಂತೆ ಸಿಹಿ ಹುಲ್ಲುಗಾವಲಿಂದ
ಸಸ್ಯದೇವತೆಯ ತಾಣದಿಂದ

ಹುಲ್ಲು ಪೋಷಿಸುವ ಕಿನ್ನರಿಯ ಕೈಯಿಂದ
ಮುಗಿಲು ನಾಡಿನ ಗೊಲ್ಲ ಹೆಣ್ಣಿನಿಂದ
ಸ್ವರ್ಗ ಸೀಮೆಯ ಕನ್ಯಾಮಣಿಯಿಂದ
ತುಂಬು ಕೆಚ್ಚಲನು ಹಸುಗಳಿಗೆ ಕೊಡಿರಿ
ತುಂಬಿ ಹರಿಯಲಿ ಹಾಲು ಸದಾಕಾಲ
ಪುಟ್ಟ ಹೆಂಗಸರು ಹಾಲನ್ನು ಕರೆಯಲಿ
ಚಿಕ್ಕ ಬಾಲೆಯರು ಹಾಲನ್ನು ಕರೆಯಲಿ

ಎದ್ದೇಳು ಓ ಹೆಣ್ಣೆ ಕಣಿವೆಯಿಂದ
ಉಸುಬಿನಿಂದೇಳು ಸೊಗದುಡುಪಿನವಳೆ
ತೆಗೆದುಕೊ ನೀರು ಚಿಲುಮೆಯಿಂದ
ದನದ ಮಂದೆಯ ಮೇಲೆ ಚಿಮುಕಿಸದನು
ಒಳಿತಾಗಲಿ ಮಂದೆಗೆ ವೃದ್ಧಿಯಾಗಲಿ ಹಯನು
ಜಾಣೆಯಲ್ಲ ಒಡತಿ, ಬಲು ಅಂಜುಬುರುಕಿ ಗೊಲ್ಲತಿ

ವನದ ಒಡತಿ ಮೈಲಿಕ್ಕಿ
ಗೋವುಗಳ ಕರುಣಾಳು ತಾಯಿ
ಕಳಿಸಮ್ಮ ಇಲ್ಲಿ ಎತ್ತರದ ಹೆಣ್ಣಾಳು
ಕೆಲಸ ಗೊತ್ತಿರುವ ಹೆಣ್ಣಾಳುಗಳನು
ರಕ್ಷಿಸಲಿ ನನ್ನ ದನ ಮಂದೆಯನ್ನು
ಕಾಪಾಡಿ ರಕ್ಷಿಸಲಿ ನನ್ನ ರಾಸುಗಳನು
ಒಳ್ಳೆ ಬಿಸಿಲ ದಿನದಲ್ಲಿ ನನ್ನ ದನವನ್ನು

ಟಾಪಿಯೋದ ಹೆಣ್ಣೆ ಟೆಲೆರ್ವೊ
ಮೃದು ಉಡುಗೆಯ ಬನದ ಹೆಣ್ಣೆ
ಬಂಗಾರದ ಹೊಳಪು ಕೂದಲಿನ ಚೆಲುವೆ
ನಿದ್ದೆ ಮಾಡದೆ ಕಾಯಮ್ಮ ಗೋಮಂದೆಯನ್ನು
ಚೆಲುವಾದ ಕರದಿಂದ ಚಪ್ಪರಿಸು ಬೆನ್ನು

ದನದ ಮೈ ಹೊಳೆಯಲಿ ಲಿಂಕ್ಸ್ ತುಪ್ಪಳದಂತೆ
ಮೀನುಗಳ ಗರಿಯಂತೆ ಜಲಜೀವಿ ತೊಗಲಂತೆ
ಹುಲ್ಲುಗಾವಲಿನ ಹೆಣ್ಣು ಕುರಿ ಹಾಗೆ
ಬಾರಮ್ಮ ನೀನು ಹೊತ್ತು ಮುಳುಗುವ ಸಮಯ
ಕತ್ತಲಿಳಿಯುವ ಸಮಯ
ತೋರಮ್ಮ ದನಗಳಿಗೆ ಮನೆಯ ದಾರಿ

ರವಿ ಮುಳುಗುವ ಹೊತ್ತಲ್ಲಿ
ಹಕ್ಕಿಗಳು ಹಾಡುವ ಸಂಜೆಯಲ್ಲಿ
ದನದ ಮಂದೆಗೆ ನಾನು ಹೀಗೆ ಹೇಳುವೆನು
ಬನ್ನಿ ಮನೆಯೊಳಗೆ ಕೊಂಬಿರುವ ಜೀವಿಗಳೆ
ಬನ್ನಿ ಮನೆಗೆಲ್ಲ ಹಾಲನುಣಿಸುವರೆ
ಚೆಂದವಾಗಿದೆ ಮನೆ ನಿಮ್ಮ ಆರಾಮಕ್ಕೆ
ಹಾಳು ಬಯಲಲ್ಲಿ ತಿರುಗುವುದು ಸರಿಯಲ್ಲ
ಅಲೆನೀರ ದಡದಲ್ಲಿ ಅಲೆಯುವುದು ಒಳಿತಲ್ಲ
ಬೇಗ ಬಂದು ಬಿಡಬೇಕು ಮನೆಯ ಕಡೆಗೆ
ಹೊತ್ತಿಸುವರು ಬೆಳಕು ಮನೆಯ ಹೆಂಗಸರು

ನೈರಿಕ್ಕಿ ಎಂಬುವನು ಟಾಪಿಯೊ ಪುತ್ರ
ನೀಲಿ ಉಡುಪನು ತೊಟ್ಟ ಬನದ ಪುತ್ರ
ದೊಡ್ಡ ಪೈನ್ ಮರ ಕಡಿದು ದಿಮ್ಮಿಗಳ ಹಾಸು
ಫರ್ ಮರದ ಎತ್ತರದ ಕಾಂಡಗಳ ಹಾಕು
ಸೇತುವೆಯಾಗಿರಲಿ ಅದು ಕೆಸರು ಹಳ್ಳಕ್ಕೆ
ಸರಿಯಿಲ್ಲ ದಾರಿ ನಡೆದಾಡಲಿಕ್ಕೆ
ಕೆಸರು ಗುಂಡಿಗಳು ಆಳ ಹಳ್ಳಗಳು
ಮೋಸ ಮಾಡುವ ಸುಳಿ ನೀರ ಹೊನಲುಗಳು
ವಂಕಿ ಕೊಂಬಿನ ರಾಸು ನಡೆದು ಬರಲಿ
ಸೀಳು ಗೊರಸಿನ ಎತ್ತು ದಾಟಿ ಬರಲಿ
ಹೂತು ಹೋಗದ ಹಾಗೆ ಕೆಸರಿನಲ್ಲಿ

ಮಾತು ಕೇಳದೆ ದನ ಮೊಂಡಾಟ ಮಾಡಿದರೆ
ಬರದೆ ಹೋದರೆ ಮನೆಗೆ ರಾತ್ರಿ ಹೊತ್ತಾದರೂ
ಪಿಹ್ಲಾಜತಾರ್ ಎಂಬ ಚೆಲುವೆಯೇ ಕೇಳು
ಕತಜತಾರ್ ಎಂಬ ರಂಭೆಯೇ ಕೇಳು

ಕಿತ್ತುಕೊಳ್ಳಿರಿ ಒಂದು ಬರ್ಚ್ ಮರದ ಕೋಲು
ಪೊದೆ ಗಿಡಗಳಿಂದ ಉದ್ದನೆಯ ಕೋಲು
ಚೆರಿ ಜೂನಿಪರ್‌ಗಳ ರೆಂಬೆ ಕೋಲು
ಮನೆಗಟ್ಟ ಬೆದರಿಸಿ ಬನ ದೇವತೆಯ ತಾವಿಂದ
ಆ್ಯಲ್ಡರ್ ಮರ ಬೆಳೆದ ಇಳಿಜಾರಿನಿಂದ

ಅಟ್ಲೊ ನೀನೊಂದು ಮುದ್ದುಕರಡಿ
ಜೇನಂತೆ ಸ್ಲೊಗಸು ನಿನ್ನ ಪಾದ
ಒಪ್ಪಂದವಿರಲಿ ನಮ್ಮಿಬ್ಬರ ನಡುವೆ
ಎಂದಿಗೂ ಎಂದೆಂದಿಗೂ ಜೀವದಿಂದಿರುವವರೆಗೂ
ಕೊಲ್ಲದಿರು ಗೊರಸು ಪ್ರಾಣಿಗಳನು ನೀನು
ತೆಗೆಯದಿರು ದನಕರುಗಳ ಪ್ರಾಣವನ್ನು

ನುಡಿದಾಗ ಹಸುಗಳ ಕೊರಳ ಗಂಟೆ
ಕೊಂಬು ದನ ಕಂಡಾಗ ನಿನ್ನ ನೇತ್ರಕ್ಕೆ
ಮರೆಯಾಗಿ ಹೋಗಿ ಬಿಡು ಬೆಟ್ಟದಲ್ಲಿ
ಮಲಗಿಬಿಡು ಹುಲ್ಲು ಮೆಳೆ ಪೊದರಿನಲ್ಲಿ
ನೆಟ್ಟಿಕೊ ಕೂಳೆ, ದನಿ ಕೇಳದಂತೆ
ತಲೆ ಮರೆಸಿಕೊ ಎಲ್ಲಾದರೂ ಗುಡ್ಡದಲ್ಲಿ
ಅಡಗಿಬಿಡು ಯಾವುದಾದರೂ ಅಡವಿಯಲ್ಲಿ
ಹೋಗಿಬಿಡು ಬೇರೆ ತಾಣಗಳ ಹುಡುಕಿ
ಓಡಿಬಿಡು ಬೇರೆ ಬೆಟ್ಟಗಳ ಹುಡುಕಿ
ದನಿ ಕೇಳದಂತೆ ಹಸುಕೊರಳ ಗಂಟೆ
ಕೇಳದಿರುವಂತೆ ಗೊಲ್ಲ ಹುಡುಗರ ಮಾತು

ಅಟ್ಲೊ ನನ್ನ ಮುದ್ದು ಕಣ್ಮಣಿಯೆ
ಬರಬೇಡ ನೀನು ದನ ಮಂದೆ ಬಳಿಗೆ
ಮುಟ್ಟದಿರು ನಾಲಗೆ ದನ ಮಂದೆ ಮೈಗೆ
ಹಾಕದಿರು ನಿನ್ನ ಹೊಲಸು ಬಾಯನ್ನು
ಹಲ್ಲಿಂದ ಹರಿಯದಿರು ಉಗುರಿಂದ ಗೀರದಿರು
ಮರೆಯಾಗಿಬಿಡು ಹುಲ್ಲಲ್ಲಿ ತೆವಳುತ್ತ ಹಾಗೇ
ಹೋಗಿಬಿಡು ಹಾಗೆ ಕಾಣದಂತೆ ಕಣ್ಣಿಗೆ
ಕೊರಳ ಗಂಟೆಯ ದನಿ ಬಿದ್ದಾಗ ಕಿವಿಗೆ
ಗೊಲ್ಲರಾಡುವ ಮಾತು ಬಿದ್ದಾಗ ಕಿವಿಗೆ

ಮಂದೆ ಇದ್ದರೆ ಹುಲ್ಲು ಮೆಳೆಯಲ್ಲಿ
ನೀ ಸರಿದು ಬಿಡು ಹಾಗೇ ಜವುಗಿನಲ್ಲಿ
ಮಂದೆ ಇದ್ದರೆ ಜವುಗು ಕೆಸರಿನಲ್ಲಿ
ನೀ ಮರೆಯಾಗು ಹಾಗೆ ಕಾಡಿನಲ್ಲಿ
ಬೆಟ್ಟ ಹತ್ತಿದರೆ ನನ್ನ ದನ ಮಂದೆ
ಸರ್‍ರನಿಳಿದು ಬಿಡು ಅಲ್ಲಿಂದ ನೀನು
ಕೆಳಗಿದ್ದರೆ ಮಂದೆ ನೀನಿದ್ದು ಬಿಡು ಮೇಲೆ
ಪೊದೆಯಲ್ಲಿದ್ದರೆ ಮಂದೆ ಮರೆಯಾಗು ಕಾಡಲ್ಲಿ
ಕಾಡಲಿದ್ದರೆ ಮಂದೆ ಬಂದು ಬಿಡು ಪೊದೆಗೆ
ಹಾರು ಕೋಗಿಲೆಯಂತೆ ಸರಿದಾಡು ಮೀನಂತೆ
ತುಪ್ಪಳದ ಉಣ್ಣೆ ಸದ್ದಿಲ್ಲದೆ ಚೆದುರಿದಂತೆ
ಅಗಸೆಯ ನಾರು ಹಗುರಾಗಿ ತೇಲಿದಂತೆ

ಮುಚ್ಚಿಟ್ಟುಕೊ ಉಗುರು ದಪ್ಪ ತುಪ್ಪಳದಲ್ಲಿ
ಅಡಗಿಸಿಕೊ ಹಲ್ಲು ವಸಡಿನಲ್ಲಿ
ಹೆದರದಿರಲಿ ಮಂದೆ ನಿನ್ನನ್ನು ಕಂಡು
ಘಾಸಿಯಾಗದಿರಲಿ ಎಳೆಯ ಕರುಗಳಿಗೆ
ಆರಾಮವಾಗಿರಲಿ ಭಯವಿರದೆ ಸುತ್ತಲಿ
ಜವುಗಲ್ಲಿ ಬಯಲಲ್ಲಿ ದಟ್ಟಡವಿ ತೊಡಕಲ್ಲಿ
ಮುಟ್ಟುವಂಥ ಧೈರ್ಯ ಮಾಡದಿರು ನೀನು
ಕೊಂದು ಕೆಡಿಸದಿರು ನನ್ನ ಹಸು ಮಂದೆಯನ್ನು

ಮರೆಯಬೇಡ ಆಟ್ಸೊ ನೀನಿತ್ತ ವಚನ
ಪರಲೋಕದಲ್ಲಿ ನದಿನೀರ ಬಳಿಯಲ್ಲಿ
ಭೋರ್ಗರೆದು ಬೀಳುವ ಜಲಪಾತದಲ್ಲಿ
ಸೃಷ್ಟಿಕರ್ತನಿಗೆ ನೀನು ಕೊಟ್ಟಂಥ ವಚನ

ಅನುಮತಿಯು ನಿನಗೆ ಮೂರು ಸಲವಷ್ಟೆ
ಕೊರಳ ಗಂಟೆಯ ದನಿಗೆ ಬಳಿ ಸಾರಿ ಬರುವುದಕೆ
ಇಲ್ಲ ಅನುಮತಿ ನಿನಗೆ ದುಷ್ಟ ಕೃತ್ಯಕ್ಕೆ
ನಾಚಿಕೆ ತರುವಂಥ ಕೆಲಸ ಮಾಡುವುದಕ್ಕೆ

ಆವೇಶ ಬಂದಾಗ ನಿನ್ನ ಮೈಯಲ್ಲಿ
ಮೂಡಿದರೆ ಬಯಕೆ ಹಲ್ಲುಗಳಿಗೆ

ಆವೇಶವನ್ನೊಯ್ದು ಪೊದೆಯಲ್ಲಿ ಹಾಕು
ಕೆಟ್ಟ ಬಯಕೆಯನು ಪೊದೆ ಮೆಳೆಗೆ ಹಾಕು
ಕೊಳೆತ ಮರಗಳ ಮೇಲೆ ಆವೇಶ ತೋರು
ಕೊಳೆತ ಮರವನ್ನು ಕೆಳಗುರುಳಿಸು ಹೋಗು
ಹಣ್ಣುಗಳಿರುವಲ್ಲಿ ಗುರುಗುಟ್ಟಿಕೊ ಹೋಗು

ತಿನ್ನಲೇ ಬೇಕೆಂಬ ಬಯಕೆಯಾದರೆ ನಿನಗೆ
ತಿಂದುಕೋ ಹೋಗು ಕಾನನದ ಅಣಬೆ
ಗೆದ್ದಲು ಗೂಡನ್ನು ಮುರಿ ಮುರಿದು ತಿನ್ನು
ಕೆಂಪುಗಡ್ಡೆಯ ಬೇರು ಅಗೆದಗೆದು ತಿನ್ನು
ತಿನ್ನದಿರು ಹುಲ್ಲು ಅದು ದನಕಿಟ್ಟ ಮೇವು
ಕೆಡಿಸದಿರು ತುಳಿದಾಡಿ ದನದ ಮೇವಿನ ತಾಣ

ಕಟ್ಟುತ್ತದೆ ಜೇನು ಕಾಡಿನಲ್ಲಿ
ಬಂಗಾರ ಬಣ್ಣದ ಬೆಟ್ಟದಲ್ಲಿ
ಬೆಳ್ಳಿಯಂಥ ಬಯಲಿನಲ್ಲಿ
ತಿನ್ನಲಿದೆ ಆಹಾರ ಹಸಿದವರಿಗೆಲ್ಲ
ಕುಡಿಯಲಿದೆ ನೀರು ಬಾಯಾರಿದವರಿಗೆ
ಆಹಾರವಿದೆ ಇಲ್ಲಿ ಕೊರತೆಯಾಗದು ಎಂದೂ
ಪಾನೀಯವಿದೆ ಇಲ್ಲಿ ಕಡಿಮೆಯಾಗದು ಎಂದೂ

ಒಪ್ಪಂದವಿರಲಿ ನಮ್ಮಿಬ್ಬರಲ್ಲಿ
ಎಂದೂ ಮುರಿಯದ ಸಂಧಾನವಿರಲಿ
ಬಾಳಿ ಬದುಕೋಣ ಶಾಂತಿಯಿಂದ
ಎಲ್ಲ ಕಾಲದಲ್ಲೂ ಸುಖ ಶಾಂತಿಯಿಂದ
ಈ ಜಾಗ ಈ ತಾಣ ಇಬ್ಬರಿಗೂ ಒಂದೇ
ರುಚಿತುಂಬಿದ ಆಹಾರ ಇಬ್ಬರಿಗೂ ಸಿಕ್ಕಿದೆ

ಕದನವಾಡುವ ಬಯಕೆ ನಿನಗಿರುವುದಾದರೆ
ಹೋರಾಡುವ ಆಸೆ ಬಹಳವಾಗಿದ್ದರೆ
ಹೊಡೆದಾಡೋಣ ನಾವು ಚಳಿಗಾಲದಲ್ಲಿ
ತೃಪ್ತಿಯಾಗುವಷ್ಟು ಹಿಮಗಾಲದಲ್ಲಿ
ಆದರೆ ಹತ್ತಿರವೂ ಸುಳಿಯದಿರು
ಜವುಗು ಹಿಮಕರಗಿ ನೀರಾಗುವಾಗ
ಕೊಳದ ಹಿಮ ಕರಗಿ ನೀರಾಗಿ ಹರಿವಾಗ
ಬಂಗಾರ ಗೋವುಗಳು ಉಂಡು ನಲಿವಾಗ

ನಮ್ಮ ನಾಡಿಗೆ ಬಂದೆಯೋ ನೀನು
ಈ ಕಾಡ ಬನದಲ್ಲಿ ಅಲೆದೆಯೋ ನೀನು
ಯಾವಾಗ ಬೇಕಾದರೂ ಹಾರಿಸುವೆನು ಗುಂಡು
ಇಲ್ಲದಿದ್ದರೂ ಸರಿಯೇ ಗುರಿಕಾರರು ಇಲ್ಲಿ
ಇದ್ದಾರೆ ಸಾಕಷ್ಟು ಜಾಣ ಹೆಂಗಸರು
ಅವರೆ ಮಾಡುವರು ನಿನ್ನ ನಾಶ
ಜುಮಾಲನ ಅಣತಿ ಮೀರಿದರೆ ನೀನು
ತಂಟೆ ತಕರಾರಲ್ಲಿ ತೊಡಗಿದರೆ ನೀನು
ನಾನೇ ನೀನಾಗಿದ್ದರೆ
ಖಂಡಿತಕೂ ಸಿಗುತಿರಲಿಲ್ಲ ಹೆಂಗಸರ ಕೈಗೆ
ಬೇಕಾದಷ್ಟಿವೆ ತಾಣ
ಮನ ಬಂದಂತೆ ಅಲೆಯಲು ಗುರಿ ಇಲ್ಲದೆ ಸುತ್ತಲು

ಆದ್ದರಿಂದ
ನಿನ್ನ ಪಾದ ಚಲಿಸಲಿ ಅತ್ತ ಕಡೆಗೆ
ದಟ್ಟ ಕಾಡು ಬನ ತಾಣದೆಡೆಗೆ
ಮರ್ಮರಿಸುವ ಕಾಡು ಬನದ ದೂರಕ್ಕೆ
ಗೊನೆಬಿಟ್ಟ ಪೈನ್ ಮರದ ತಾಣದಲಿ ಅಡ್ಡಾಡು
ಮರಳು ತುಂಬಿದ ಬಯಲು ತುಳಿದು ಓಡಾಡು
ಎಲ್ಲಿ ಬಯಲಿದೆಯೊ ಅಲ್ಲೆ ತಿರುಗಾಡು
ಕಡಲ ತೀರದ ಅಂಚು ಬಿಟ್ಟು ಬರಬೇಡ
ಪೊಹ್ಜಾದ ಗಡಿ ಅಂಚು ಬಿಟ್ಟು ಬರಬೇಡ
ಲ್ಯಾಪ್‌ಲೆಂಡಿನ ಬಯಲು ಬಿಟ್ಟು ಬರಬೇಡ
ಹಾಯಾಗಿರಬಹುದು ಆನಂದವಾಗಿರಬಹುದು
ಅದೇ ನಿನಗೆ ಸರಿಯಾದ ಜಾಗ
ಬೂಟು ಬೇಕಿಲ್ಲ ಬಿಸಿಲ ದಿನದಲ್ಲಿ
ಕಾಲ್ಚೀಲ ಬೇಕಿಲ್ಲ ಚಳಿಯ ದಿನದಲ್ಲಿ

ಬನವೇ ಕಾನನವೇ ನಿನ್ನ ಅನುಗ್ರಹವಿರಲಿ
ನನ್ನ ದನ ಮಂದೆಗೆ ನೆಮ್ಮದಿಯು ಇರಲಿ
ಗೊರಸು ಜೀವಿಗಳಿಗೆ ನಿನ್ನ ರಕ್ಷಣೆ ಇರಲಿ
ಈ ಬೇಸಿಗೆಯ ಒಳ್ಳೆ ಕಾಲ ಪೂರ್ತಿ

ಕುಪಾನ ಕಾನನದೊಡೆಯಾ
ನಿನ್ನ ಶ್ವಾನಗಳ ನೋಡಿಕೊ ಜೋಪಾನದಿಂದ
ಇಟ್ಟುಕೊ ಅವು ನಿನ್ನ ಹದ್ದುಬಸ್ತಿನಲ್ಲಿ
ಒಂದು ಹೊಳ್ಳೆಗೆ ತುರುಕು ಅಣಬೆಯನ್ನು
ಮತ್ತೊಂದಕೆ ತುರುಕು ಸೇಬುಹಣ್ಣನ್ನು
ದನದ ವಾಸನೆ ಅವು ಹಿಡಿಯದಿರಲಿ
ಕಣ್ಣುಗಳಿಗೆ ಕಟ್ಟು ರೇಶಿಮೆಯ ಪಟ್ಟಿ
ಕಿವಿಗಳಿಗೆ ಕಟ್ಟು ತೆಳ್ಳನೆಯ ಬಟ್ಟೆ
ದನದ ಓಡಾಟ ಕಾಣದಂತೆ
ದನದ ಹೆಜ್ಜೆಯ ಸದ್ದು ಕೇಳದಂತೆ

ಇದು ಸಾಕಾಗದಿದ್ದರೆ ಅವು ಬಗ್ಗದಿರೆ ಇದಕ್ಕೆ
ಮನೆಯಿಂದ ಹೊರಗಟ್ಟು ನಿನ್ನ ಸಂತಾನ
ದನ ಅಲೆಯುವ ತಾಣದಿಂದಾಚೆಗಟ್ಟು
ಈ ಕಾಡಿನಿಂದಾಚೆ ಈ ತೀರದಿಂದಾಚೆ
ಎಲ್ಲಾದರೂ ಅಡಗಿಸಿಡು - ಬಿಲಗಳಲ್ಲಿ
ಕಟ್ಟಿ ಹಾಕುವುದನ್ನು ಮರೆಯಬೇಡ
ಬಂಗಾರ ಸರಪಳಿಯಲ್ಲಿ ಕಟ್ಟಿ ಹಾಕು
ಬೆಳ್ಳಿ ಸರಪಳಿಯಲ್ಲಿ ಕಟ್ಟಿ ಹಾಕು
ಯಾವ ಕೆಡುಕನ್ನು ಅವು ಮಾಡದಂತೆ
ಕೆರಳಿ ಏನಾದರೂ ತಪ್ಪಾಗದಂತೆ

ಇದು ಸಾಕಾಗದಿದ್ದರೆ ಅವು ಬಗ್ಗದಿದ್ದರೆ ಇದಕ್ಕೆ
ಉಕೊ ದೇವನೆ ಕರುಣಾಳು ರಕ್ಷಕನೆ
ಬೆಳ್ಳಿಯಂತಹ ದೇವ ಬಂಗಾರ ನುಡಿ ಕೇಳು
ಕೊಬ್ಬಿರುವ ಮುಸುಡಿಗೆ ಹಾಕು ಕಡಿವಾಣ
ಅದು ಸಾಕಾಗದಿದ್ದರೆ ತಾಮ್ರ ಕಡಿವಾಣ
ಬಲವಿಲ್ಲದಿರೆ ತಾಮ್ರಕ್ಕೆ ಕಬ್ಬಿಣದ ಕಡಿವಾಣ
ಅದನ್ನೂ ಮುರಿದರೆ ಅಥವಾ ತನ್ನಷ್ಟಕ್ಕೆ ತುಂಡಾದರೆ
ಬಂಗಾರದ ದಸಿ ಹಾಕು ಗಲ್ಲಕ್ಕೆ ದವಡೆಗೆ
ಹಲ್ಲುಬಿಡದಂತೆ ಬಾಯ್ಬಿಚ್ಚದಂತೆ
ಕಬಿ.ಣಕು ಜಗದ

ಕಲೆವಲ

ಉಕ್ಕಿಗೂ ಸಡಿಲಾಗದ
ಕತ್ತಿಯೂ ತುಂಡರಿಸಿದ
ಕೊಡತಿಗೆ ಮುರಿಯದ

ಇಲ್ಮಾರಿನೆನ್ ಹೆಂಡತಿ ಬಲು ಕುಶಲಗಾತಿ
ಹೊರಗೆ ಬಿಟ್ಟಳು ದನವ ದೊಡ್ಡಿಯಿಂದ
ಮೇಯ ಬಿಟ್ಟಳು ದನವ ಬಯಲಿನಲ್ಲಿ
ಹಿಂದೆ ಕಳಿಸಿದಳು ದನ ಕಾಯುವವನ
ಅಟ್ಟಿಹೋಗಲು ಗುಲಾಮನವನ.

21. ಕುಲೆರ್ವೊ ಮತ್ತು ಅವನ ಸೋದರಿ

ಕುಲೆರ್ವೊ ಹುಲ್ಲು ಬಯಲಿನಲ್ಲಿ ಮಧ್ಯಾಹ್ನ ಊಟಕ್ಕೆಂದು ಚಾಕುವಿನಿಂದ ರೊಟ್ಟಿ ತುಂಡು ಮಾಡುವಾಗ ಚಾಕು ಮುರಿಯುತ್ತದೆ. ಅವನಿಗೆ ಬಹಳ ದುಃಖವಾಗುತ್ತದೆ. ಏಕೆಂದರೆ ಇದು ಅವನ ಕುಟುಂಬದ ನೆನಪಿಗಾಗಿ ಅವನ ಬಳಿ ಉಳಿದಿದ್ದ ಏಕೈಕ ವಸ್ತು. ಒಡತಿಯ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ಅವನು ದನಗಳನ್ನು ಜವುಗು ಭೂಮಿಗೆ ಅಟ್ಟುತ್ತಾನೆ. ಕಾಡಿನ ಪ್ರಾಣಿಗಳಾದ ತೋಳ ಮತ್ತು ಕರಡಿಗಳ ಹಿಂಡನ್ನು ಕಟ್ಟಿಕೊಂಡು ಮನೆಗೆ ಬರುತ್ತಾನೆ. ಹಾಲು ಕರೆಯಲೆಂದು ಒಡತಿ ಕೊಟ್ಟಿಗೆಗೆ ಬಂದಾಗ ಕಾಡುಮೃಗಗಳು ಅವಳನ್ನು ಹರಿದು ಚೂರು ಚೂರು ಮಾಡುತ್ತವೆ. ಇಲ್ಮಾರಿನೆನ್‌ನ ಮನೆಯಿಂದ ತಪ್ಪಿಸಿಕೊಂಡು ಬಂದ ಕುಲೆರ್ವೊ ಕಾಡಿನಲ್ಲಿ ದುಃಖದಿಂದ ಅಲೆದಾಡುತ್ತಾನೆ. ಕಾಡಿನಲ್ಲಿ ಮೂವರು ವೃದ್ಧೆಯರ ಭೇಟಿ ಯಾಗುತ್ತದೆ. ಅವರು ಅವನ ತಂದೆ ತಾಯಿ ಸೋದರ ಸೋದರಿಯರು ಬದುಕಿರುವ ವಿಷಯ ತಿಳಿಸುತ್ತಾರೆ. ಅವರ ಸೂಚನೆಗಳನ್ನನುಸರಿಸಿ ಬಂದ ಅವನು ಲ್ಯಾಪ್‌ಲ್ಯಾಂಡಿನ ಗಡಿಯಲ್ಲಿ ಅವರನ್ನು ಭೇಟಿಯಾಗುತ್ತಾನೆ. ಇವನು ಸತ್ತು ಹೋಗಿದ್ದನೆಂದೇ ಭಾವಿಸಿದ್ದಾಗಿ ತಾಯಿ ತಿಳಿಸುತ್ತಾಳೆ. ಹಣ್ಣು ಆಯಲೆಂದು ಹೋದ ಸೋದರಿಯು ಕಾಣೆಯಾದ ಸುದ್ದಿ ತಿಳಿಸುತ್ತಾಳೆ.

ಕುಲೆರ್ವೊ ಕಲೆರ್ವೋನ ಸಂತಾನ
ನೀಲಿ ಕಾಲ್ಚೀಲದವನು
ಹೆತ್ತವರ ಜೊತೆಗಿದ್ದ ಸ್ವಲ್ಪಕಾಲ
ಆದರೂ ಏಳಿಗೆಯಾಗಲಿಲ್ಲ
ಬುದ್ಧಿ ಕಲಿಯಲಿಲ್ಲ
ಅವನು ಬೆಳೆದಿದ್ದೆ ವಕ್ರ
ತೂಗಿದ್ದರು ತೊಟ್ಟಿಲು ತಪ್ಪು ತಪ್ಪಾಗಿ
ತೂಗಿದ್ದನು ತೊಟ್ಟಿಲು ತಲೆ ಕೆಟ್ಟ ಮಲತಂದೆ
ತೂಗಿದ್ದಳು ತೊಟ್ಟಿಲು ತಲೆಕೆಟ್ಟ ಮಲತಾಯಿ

ಏನೇನೊ ಮಾಡಿದ
ಕೈ ಹಚ್ಚಿದ ಯಾವ ಯಾವ ಕೆಲಸಕ್ಕೊ
ಮೀನು ಹಿಡಿಯಲು ಹೋದ ದೊಡ್ಡ ಬಲೆ ಹಿಡಿದು
ಮನದಲ್ಲೆ ಯೋಚಿಸಿದ ಹುಟ್ಟು ಹಿಡಿಯುತ್ತ
ಹುಟ್ಟು ಹಾಕಲೆ ಎಲ್ಲ ಬಲವನು ಬಳಸಿ

ಹುಟ್ಟು ಹಾಕಲಿ ಸ್ವಲ್ಪ ಬಲವನು ಬಳಸಿ
ಚುಕ್ಕಾಣಿ ಹಿಡಿದವನು ಹೇಳಿದನು ಹೀಗೆ
ಎಲ್ಲ ಬಲವನು ಬಳಸಿ ಹುಟ್ಟು ಹಾಕು
ಎಲ್ಲ ಶ್ರಮಬಿಟ್ಟು ಹುಟ್ಟು ಹಾಕು

ಎಲ್ಲ ಬಲ ಬಳಸಿ ಹಾಕಿದನು ಹುಟ್ಟು
ತುಂಡು ತುಂಡಾಯಿತು ಹುಟ್ಟುಗೋಲು
ಆಸ್ಪನ್ ಮರದ ದೋಣಿ ಚೂರು ಚೂರು

ಕಲೆರ್ವೊ ಹೇಳಿದ
ಬರುವುದಿಲ್ಲ ನಿನಗೆ ಹುಟ್ಟು ಹಾಕುವುದು
ಮುರಿದು ಹಾಕಿರುವೆ ಹುಟ್ಟುಗೋಲು
ಜೂನಿಪರ್ ಹಲಗೆ ಚೂರು ಚೂರು
ಒಕ್ಕೋಲು ಬಡಿದು ಮೀನು ಹಿಡಿಯಬಹುದು
ಆ ಕೆಲಸ ನಿನಗೆ ಸರಿಯಾಗಬಹುದು

ಕುಲೆರ್ವೊ ಕಲೆರ್ವೊನ ಸಂತಾನ
ತೆರೆ ಬಡಿಯಲು ಹೋದ
ಕೋಲು ಮೇಲೆತ್ತಿ ಯೋಚಿಸಿದ ಹೀಗೆ
ಎಲ್ಲ ಬಲ ಹಾಕಿ ತೆರೆ ಬಡಿಯಲೇನು
ಸ್ವಲ್ಪ ಬಲ ಹಾಕಿ ತೆರೆ ಬಡಿಯಲೇನು

ಬಲೆಗಾರ ಹೇಳಿದನು
ಎಲ್ಲ ಬಲ ಬಿಟ್ಟು ತೆರೆ ಬಡಿಯದಿದ್ದರೆ
ತೆರೆಯ ಬಡಿತಕ್ಕೆ ಅರ್ಥವೇನು
ಎಲ್ಲ ಬಲ ಬಿಟ್ಟು ತೆರೆ ಬಡಿದ ಕುಲೆರ್ವೊ
ಮಣ್ಣು ರಾಡಿಯಾಯಿತು ನೀರು
ಬಲೆ ಎಳೆದ ಮೇಲೆ ಮೀನೆಲ್ಲ ಲೋಳೆ

ಕಲೆರ್ವೊ ನೋಡಿದ
ನಿನಗೆ ಗೊತ್ತಿಲ್ಲ ಬಿಡು ತೆರೆ ಬಡಿವ ಕೆಲಸ
ಹೋಗು ಕಟ್ಟಿ ಬಾ ತೆರಿಗೆ ಸುಂಕ
ಹೊಲದ ಬಾಕಿಯ ಸುಂಕ ಕಟ್ಟಿ ಬಾ ಹೋಗು
ಪ್ರಯಾಣದ ಕೆಲಸ ಸರಿಯಾದುದು ನಿನಗೆ
ಬರಬಹುದು ಬುದ್ಧಿ, ಸುತ್ತಿದರೆ ದೇಶ

ಕುಲೆರ್ವೊ ಕಲೆರ್ವೊನ ಸಂತಾನ
ನೀಲಿ ಕಾಲ್ಚೀಲದವನು ಹೊಂಗೂದಲ ಸುಂದರನು
ಅತ್ಯುತ್ತಮ ತೊಗಲ ಬೂಟಿನವನು
ಸುಂಕ ಕಟ್ಟುವ ಕೆಲಸ ಮಾಡಿ ಮುಗಿಸಿದ ಮೇಲೆ
ಬಂಡಿ ಹತ್ತಿ ಹೊರಟ ಮನೆಯ ಕಡೆಗೆ
ವೆಯ್ನೊ ಹುಲ್ಲುಗಾವಲು ದಾಟಿ ಬಂದಿತು ಬಂಡಿ
ಯಾವಾಗಲೂ ಸವರಿದ್ದ ಕಾಡನ್ನು ದಾಟಿ
ಇದ್ದಕ್ಕಿದ್ದಂತೆ ಹೆಣ್ಣೊಬ್ಬಳ ಕಂಡನು
ನೀಳ ಹೊಂಗೂದಲಿನ ಚೆಲುವೆ ಅವಳು
ವೆಯ್ನಾದ ಹುಲ್ಲುಗಾವಲಲಿ ಕಂಡಳವಳು
ಯಾವಾಗಲೂ ಸವರಿದ್ದ ಕಾಡಿನಲ್ಲಿ

ಕುಲೆರ್ವೊ ಕಲೆರ್ವೊನ ಸಂತಾನ
ಥಟ್ಟನೆ ನಿಲ್ಲಿಸಿದ ಬಂಡಿಯನ್ನು
ಮಾತಿಗಾರಂಭಿಸಿದ ಒಲಿಸಿಕೊಳ್ಳುವ ಮಾತು
ಓ ಹೆಣ್ಣೆ ಬಾರೆ. ಏರು ಬಾ ಬಂಡಿ
ಕೂರು ಬಾ ಒಳಗಿರುವ ತುಪ್ಪಳದ ಮೇಲೆ
ಹಿಮಬೂಟು ಹಾಕಿದ್ದ ಹೆಣ್ಣು ಹೇಳಿದಳು
ಬಂದು ಕೂರಲಿ ಸಾವು ಬಂಡಿಯಲ್ಲಿ
ವ್ಯಾಧಿಗಳು ಕೂರಲಿ ನಿನ್ನ ತುಪ್ಪಳದಲ್ಲಿ

ಕುಲೆರ್ವೊ ಬೀಸಿದ ಬಾರುಕೋಲು
ಚಿಮ್ಮಿ ಓಡಿತು ಕುದುರೆ ಮುಂದೆ ಮುಂದೆ
ಮುಂದುವರೆಯಿತು ಪಯಣ ಕಡಲ ದಂಡೆಯಲ್ಲಿ
ಇದ್ದಕ್ಕಿದ್ದಂತೆ ಅಲ್ಲೊಬ್ಬಳು ಕಾಣಿಸಿದಳು
ತೊಗಲಿನ ಬೂಟನ್ನು ಧರಿಸಿದ್ದಳವಳು
ಬಂಡಿ ನಿಲ್ಲಿಸಿದ ಮಾತಿಗಾರಂಭಿಸಿದ
ಓ ಹೆಣ್ಣೆ ಬಾರೆ, ಏರು ಬಾ ಬಂಡಿ
ಭೂಲೋಕದ ರಂಭೆ ನನ್ನ ಜೊತೆ ಬಾರೆ
ಅವಳು ಹೇಳಿದಳು:
ಯಮರಾಯ ಬರಲಿ ನಿನ್ನ ಬಂಡಿಯಲಿ
ಹಂತಕನು ಕೂರಲಿ ನಿನ್ನ ಜೊತೆಯಲ್ಲಿ

ಕುಲೆರ್ವೊ ಬೀಸಿದ ಬಾರುಕೋಲು
ಬಂಡಿ ಓಡಿತು ಮುಂದೆ ಮುಂದೆ

ಪೊಹ್ಜಾ ಹುಲ್ಲುಗಾವಲು ದಾಟಿ ಓಡಿತು ಬಂಡಿ
ಲ್ಯಾಪ್‌ಲ್ಯಾಂಡಿನ ಗಡಿ ಸೀಮೆ ದಾಟಿ ಓಡಿತು ಬಂಡಿ
ಅಲ್ಲೊಬ್ಬಳು ಹೆಣ್ಣು ಕಾಣಿಸಿದಳವನಿಗೆ
ಬೆಳ್ಳಿ ಎದೆ ಪದಕ ಹಾಕಿದ್ದಳವಳು
ಹಾಡುತ್ತಿದ್ದಳವಳು ಹುಲ್ಲುಗಾವಲಿನಲ್ಲಿ
ಲ್ಯಾಪ್‌ಲ್ಯಾಂಡಿನ ಗಡಿ ಸೀಮೆ ನಾಡಲ್ಲಿ
ಬಂಡಿ ನಿಲ್ಲಿಸಿದ ಮಾತಿಗಾರಂಭಿಸಿದ
ಓ ಹೆಣ್ಣೆ ಬಾರೆ, ಏರು ಬಾ ಬಂಡಿ
ಕಂಬಳಿಯ ಒಳಗೆ ಓ ಹೆಣ್ಣೆ ಬಾರೆ
ನನ್ನ ಸೇಬುಗಳನು ಮೆಲ್ಲು ಬಾರೆ

ಅವಳು ಹೇಳಿದಳು :
ಥೂ ಎಂದು ಉಗಿವೆನು ನಿನ್ನ ಬಂಡಿಯ ಮೇಲೆ
ನೀನೊಬ್ಬ ಅಧಮ ಕೇಡಿಗನು ನೀನು
ನಿನ್ನ ಕಂಬಳಿಯೊಳಗೆ ಕೊರೆಯುತ್ತದೆ ತಣ್ಣಗೆ
ಬರಿಯ ಕಗ್ಗತ್ತಲು ನಿನ್ನ ಬಂಡಿಯ ಒಳಗೆ

ಕುಲೆರ್ವೊ ಕಲೆರ್ವೊನ ಸಂತಾನ
ಎಳೆದುಕೊಂಡನು ಅವಳ ಬಂಡಿಯೊಳಗೆ
ಮಲಗಿಸಿದ ಅವಳ ತುಪ್ಪಳದ ಒಳಗೆ
ಉರುಳಿಸಿದ ಅವಳ ಕಂಬಳಿಯ ಒಳಗೆ
ಅವಳು ಹೇಳಿದಳು:
ಬಿಟ್ಟು ಬಿಡು ನನ್ನ ಈ ಬಂಡಿಯಿಂದ
ಬಿಡುಗಡೆಯ ಕೊಡು ಎಳೆ ಹುಡುಗಿ ನಾನು
ಕೆಟ್ಟ ಹೊಲಸು ಭಾಷೆ ನಾ ಕೇಳಲಾರೆ
ಬಿಡದಿದ್ದರೆ ಧುಮುಕುವೆ ಬಂಡಿಯಿಂದ
ಮುರಿದು ಬಂಡಿಯನು ಚೂರು ಮಾಡುವೆನು

ಕುಲೆರ್ವೊ ಕಲೆರ್ವೊನ ಸಂತಾನ
ಚರ್ಮದಲಿ ಸುತ್ತಿದ್ದ ಸಂದೂಕ ತೆರೆದ
ಚಿತ್ತಾರದ ಮುಚ್ಚಳ ಖಣಿಲೆಂದು ತೆರೆದ
ತುಂಬಿತ್ತು ಬೆಳ್ಳಿ ಒಳ್ಳೊಳ್ಳೆ ವಸ್ತ್ರ
ಬಂಗಾರ ಕಸೂತಿ ಕಾಲ್ಚೀಲ ತೋರಿದ
ಬೆಳ್ಳಿ ಅಲಂಕಾರ ನಡು ಪಟ್ಟಿ ತೋರಿದ

ಚಿತ್ತಾರ ವಸ್ತ್ರಕ್ಕೆ ಮನ ಸೋತಳು ನಾರಿ
ಬದಲಾಯಿತು ಮನಸು ಹಣವನ್ನು ನೋಡಿ
ಹಾಳು ಮಾಡಿತು ಬೆಳ್ಳಿ ನಾರಿಯನ್ನು
ಮೈಮರೆಸಿತು ಚಿನ್ನ ನಾರಿಯನ್ನು

ನಯ ಮಾತುಗಳಿಂದ ಹೊಗಳಿದನು ಅವನು
ಇನಿಯ ಮಾತಿಂದ ಸರಸವಾಡಿದನು
ಒಂದು ಕೈ ಹಿಡಿದಿತ್ತು ಕಡಿವಾಣವನ್ನು
ಇನ್ನೊಂದು ಕೈಯಿತ್ತು ಅವಳೆದೆಯ ಮೇಲೆ

ಸರಸವಾಡಿದನು ಬಳಲಿ ದಣಿದಳು ರಂಭೆ
ತಾಮ್ರ ಚಮಕಿಯ ಕಂಬಳಿಯ ಒಳಗೆ
ಚುಕ್ಕಿ ಚಿತ್ತಾರ ತುಪ್ಪಳದ ಒಳಗೆ

ಬೆಳಗು ಮಾಡಿದ ಜುಮಾಲ
ಚೆಲುವೆ ಕೇಳಿದಳು: ನೀನು ಯಾರವನು
ಯಾವ ವೀರಕುಲ ಸಂಭೂತ ನೀನು
ದೊಡ್ಡ ಕುಲದವನಿರಬಹುದು
ಸಮರ್ಥ ವೀರನ ಸುತನೆ ಇರಬಹುದು
ಕುಲೆರ್ವೊ ಹೇಳಿದನು
ಇಲ್ಲ, ನನ್ನ ಕುಲ ದೊಡ್ಡದೇನಲ್ಲ
ಬಲು ದೊಡ್ಡದಲ್ಲ ಬಲು ಚಿಕ್ಕದಲ್ಲ
ಸಾಮಾನ್ಯ ಕುಲದವನು
ಕಲೆರ್ವೋ ನಿರ್ಭಾಗ್ಯ ಸುತನು
ನಾನೊಬ್ಬ ಹುಂಬ ನಾನೊಬ್ಬ ಪೆದ್ದ
ಕೆಲಸಕ್ಕೆ ಬಾರದವ ಅಯೋಗ್ಯ ಪುತ್ರ
ಹೇಳೀಗ ನಿನ್ನ ಕುಲ, ಯಾವ ಕುಲದವಳು
ಬಲು ದೊಡ್ಡ ಕುಲದವಳೆ ಇರಬಹುದು ನೀನು
ಸಮರ್ಥ ವೀರನ ಮಗಳೇ ಇರಬಹುದು ನೀನು

ತಕ್ಷಣವೇ ಹೇಳಿದಳು:
ಇಲ್ಲ ನನ್ನ ಕುಲ ದೊಡ್ಡದೇನಲ್ಲ
ಬಲು ದೊಡ್ಡದಲ್ಲ ಬಲು ಚಿಕ್ಕದಲ್ಲ

ಸಾಮಾನ್ಯ ಕುಲದವಳು
ಕಲೆವೊರ್ನೀನ ನಿರ್ಭಾಗ್ಯ ಪುತ್ರಿ
ನಾನೊಂದು ಪೆದ್ದು ನಾನೊಬ್ಬ ದಡ್ಡಿ
ಕೆಲಸಕ್ಕೆ ಬಾರದ ಸುತಳು ಅಯೋಗ್ಯ ಪುತ್ರಿ

ನಾನಾಗ ಚಿಕ್ಕವಳು ತಾಯ ಜೊತೆಗಿದ್ದೆ
ಹಣ್ಣು ಆಯಲು ಕಾನನಕೆ ಹೋದೆ
ರಾಸ್ಪ್‌ಬೆರಿ ಆಯ್ದೆ ಗಿರಿತಪ್ಪಲಲ್ಲಿ
ಸ್ಟ್ರಾಬೆರಿ ಆಯ್ದೆ ಬಯಲಿನಲ್ಲಿ
ಹಗಲೆಲ್ಲ ಆಯ್ದೆ ರಾತ್ರಿ ಮಲಗಿದೆ
ದಿನ ಒಂದು ದಿನ ಎರಡು ದಿನ ಮೂರು ಹೀಗೆ
ತಪ್ಪಿ ಹೋಯಿತು ಮನೆ ದಾರಿ ನನಗೆ
ಕಾಡಿಗೊಯ್ದಿತು ನಾನು ನಡೆದ ದಾರಿ

ಭೋರಾಡಿ ಅತ್ತೆ ದಿನ ಒಂದು, ದಿನ ಎರಡು
ದಿನ ಮೂರರ ಕೊನೆಗೆ
ಜೋರಾಗಿ ಕೂಗಿದೆ ಪರ್ವತದ ಮೇಲೇರಿ
ಕಾನನವು ಹೇಳಿತು ಪೊದೆಯ ಮೆಳೆ ಮರುದನಿಸಿ
ಗೋಳಾಡಬೇಡ ಬುದ್ಧಿ ಇಲ್ಲದ ಹುಡುಗಿ
ಸುಮ್ಮನೆ ಜೋರಾಗಿ ಅಳಬೇಡ ಪೆದ್ದಿ
ಯಾರಿಲ್ಲ ಇಲ್ಲಿ ನಿನ್ನ ದನಿ ಕೇಳುವರು
ಯಾರಿಲ್ಲ ಮನೆಯಲ್ಲಿ ನಿನ್ನ ದನಿ ಕೇಳುವರು

ಕಳೆದುಹೋದವು ದಿನ ಮೂರು. ದಿನ ನಾಲ್ಕು ಹೀಗೆ
ದಿನ ಐದು, ದಿನವಾರು ಹೀಗೆ ಕೊನೆಗೆ
ಮೇಲಿಂದ ಬಿದ್ದು ಸಾಯಬೇಕೆಂದಿದ್ದೆ
ಬಿದ್ದರೂ ಸಾಯಲಿಲ್ಲ ಪಾಪಿ ಗೇಡಿ
ಸತ್ತಿದ್ದರೆ ಮೊದಲೇ ಎರಡನೇ ವರ್ಷಕ್ಕೆ
ಸತ್ತಿದ್ದರೆ ನಾನು ಮೂರನೆಯ ವರ್ಷಕ್ಕೆ
ಹುಲ್ಲು ದಳವಾಗಿ ತೂಗಾಡಬಹುದಿತ್ತು
ಚೆಲುವಾದ ಹೂವಾಗಿ ಅರಳಬಹುದಿತ್ತು
ಕೆಂಪು **ಹಣ್ಣಾಗಿ** ಹೊಳೆಯಬಹುದಿತ್ತು
ಕಿವಿ ಕೇಳುತ್ತಿರಲಿಲ್ಲ ಸುದ್ದಿ ಘನಘೋರ

ಮಾತು ಮುಗಿದಿರಲಿಲ್ಲ
ಮಾತು ಮುಗಿಸುವ ಮೊದಲೇ
ಧುಮುಕಿದಳು ಕೆಳಗೆ ಬಂಡಿಯಿಂದ
ಓಡಿದಳು ನದಿಗೆ ರಭಸದಿಂದ
ಭೋರ್ಗರೆದು ಬೀಳುವ ಜಲಪಾತದಲ್ಲಿ
ಅಬ್ಬರಿಸುವ ನೀರಾಳ ಸುಳಿಗಳಲ್ಲಿ
ಸಿಕ್ಕಿತ್ತು ಮೃತ್ಯು ಆವಳು ಬಯಸಿದ್ದು
ಆಸರೆಯು ಸಿಕ್ಕಿತ್ತು ಪರಲೋಕದಲ್ಲಿ
ನೆಮ್ಮದಿಯು ಸಿಕ್ಕಿತ್ತು ಕಡಲಿನಲೆಯಲ್ಲಿ

ಕುಲೆರ್ವೊ ಕಲೆರ್ವೊನ ಪುತ್ರ
ತಕ್ಷಣವೇ ಧುಮುಕಿದನು ಬಂಡಿಯಿಂದ
ಗೋಳಾಡಿ ಅತ್ತ ಎದೆ ಕರಗುವಂತೆ
ನನ್ನ ದುರ್ವಿಧಿಯೆ ನಾನೆಂಥ ನಿರ್ಭಾಗ್ಯ
ಎಂಥ ದುರ್ವಿಧಿ ತಂದೆ ಮನೆಮಂದಿಗೆಲ್ಲ
ಸ್ವಂತ ತಂಗಿಯನೆ ಕೆಡಿಸಿದೆನೆ ನಾನು
ಹೆತ್ತವಳ ಮಗಳನ್ನೆ ಕೆಡಿಸಿದೆನೆ ನಾನು

ಅಯ್ಯೋ ನನ್ನ ತಾಯ್ತಂದೆಗಳಿರಾ
ವೃದ್ಧಾಪ್ಯದಲಿ ತಂದೆ ನಿಮಗೆಂಥ ದುಃಖ
ಯಾಕೆ ಬೆಳೆಸಿದಿರಿ ದೊಡ್ಡವನ ಮಾಡಿದಿರಿ
ಹುಟ್ಟದಿದ್ದರೆ ನಾನು ಚೆಂದವಿತ್ತು
ಈ ಭೂಮಿಗೆ ನಾನು ಬರಬಾರದಿತ್ತು
ನ್ಯಾಯ ಕೊಡಲಿಲ್ಲ ಮೃತ್ಯುವೂ ನನಗೆ
ಕೃಪೆ ತೋರಲಿಲ್ಲ ವ್ಯಾಧಿಗಳು ನನಗೆ
ಕೊನೆ ಮಾಡಲಿಲ್ಲ ಹುಟ್ಟದೆರಡೇ ದಿವಸಕ್ಕೆ

ನೊಗಪಟ್ಟಿ ಹರಿದ ಸರಪಳಿ ಕತ್ತರಿಸಿದ
ಬಿಳಿಗುದುರೆ ಬೆನ್ನೇರಿ ಮನೆಗೆ ಬಂದ
ಹೆಚ್ಚೇನೂ ದೂರವಿಲ್ಲ ಸಿಕ್ಕಿತ್ತು ಮನೆ
ಅಂಗಳದಲಿದ್ದಳು ಅವನ ಹೆತ್ತವಳು
ಅಯ್ಯೋ ನನ್ನ ತಾಯಿ ನನ್ನ ಹೆತ್ತವಳೇ
ಯಾಕಿಡಲಿಲ್ಲ ನನ್ನ ಸಾವುನಾ ಹೊಗೆಯಲ್ಲಿ

ಹುಟ್ಟಿದಾಗಲೇ ಹೊಗೆಕೋಣೆಯಲ್ಲಿ
ಯಾಕಿಡಲಿಲ್ಲ ನನ್ನ ಹೊಗೆಯ ಮನೆಯಲ್ಲಿ
ಮುಚ್ಚಿಟ್ಟ ಬಾಗಿಲು ಅಗುಳಿ ಹಾಕಿ
ಎಸೆಯಬೇಕಿತ್ತು ತೊಟ್ಟಿಲನು ಬೆಂಕಿಗೆ
ನೂಕಬೇಕಿತ್ತು ಉರಿ ಕೆಂಡಗಳಿಗೆ

ಜನ ಕೇಳುತ್ತಿದ್ದರು :
ತೊಟ್ಟಿಲೇಕಿಲ್ಲ ಕೋಣೆಯಲ್ಲಿ
ಮುಚ್ಚಿರುವೆ ಏಕೆ ಸಾವುನಾ ಬಾಗಿಲು
ಹೀಗೆ ಹೇಳಬೇಕಿತ್ತಾಗ:
ತೊಟ್ಟಿಲನು ಹಾಕಿದೆ ಬೆಂಕಿಯಲ್ಲಿ
ಅದಕ್ಕೇ ಬೆಂಕಿ ಇದೆ ನೋಡಿ ಒಲೆಗೂಡಿನಲ್ಲಿ
ಮಾಲ್ಟ್ ಕುದಿಸುತ್ತಿರುವೆ ಸಾವುನಾದಲ್ಲಿ
ಚೆನ್ನಾಗಿ ಬೆಂದು ಸಿಹಿಯಾಗಲೆಂದು

ತಾಯಿ ಕೇಳಿದಳು ವೃದ್ಧೆ ಕೇಳಿದಳು :
ಯಾಕೆ ಮಗನೆ ಹೀಗೆ ಏನಾಯಿತು ನಿನಗೆ
ಯಾವ ಭಯಂಕರ ಸುದ್ದಿ ತಂದಿರುವೆ ನನಗೆ
ಹಂತಕನ ಲೋಕದಿಂದ ಬಂದಂತಿದೆ ನೀನು
ಪರಲೋಕದಿಂದ ಬಂದಿರುವ ಹಾಗಿದೆ
ಕುಲೆರ್ವೊ ಕಲೆರ್ವೊ ಸಂತಾನ ನುಡಿದ:
ಘನ ಘೋರ ಸುದ್ದಿ ಹೇಳಬೇಕಾಗಿದೆ
ಬಲು ಭಯಂಕರ ಸುದ್ದಿ ಕೇಳಬೇಕಾಗಿದೆ
ಒಡ ಹುಟ್ಟಿದವಳನ್ನೆ ಕೆಡಿಸಿದೆನು ನಾನು
ಹೆತ್ತವಳ ಮಗಳನ್ನೆ ಕೆಡಿಸಿದೆನು ನಾನು
ಹೇಗೆ ಸಾಯಲಿ ಎಂದು ಗೊತ್ತಾಗುತಿಲ್ಲ
ಘರ್ಜಿಸುವ ತೋಳಗಳ ಬಾಯಲ್ಲಿ ಸಾಯಲೆ
ಗುರುಗುಟ್ಟುವ ಕರಡಿಗಳ ಗಂಟಲಿಗೆ ಹೊಗಲೆ
ಸಾಯಲೇ ತಿಮಿಂಗಿಲದ ಹೊಟ್ಟೆಯಲ್ಲಿ
ಸಾಗರದ ಮೀನುಗಳ ಹಲ್ಲಿನಲ್ಲಿ

ತಾಯಿ ನುಡಿದಳು ಹೀಗೆ:
ಹೋಗಬೇಡ ಮಗನೆ ಹೋಗದಿರು ಮಗನೆ
ತೋಳಗಳ ಬಾಯಿಗೆ ಕರಡಿಗಳ ಗಂಟಲಿಗೆ

ತಿಮಿಂಗಿಲ ಹೊಟ್ಟೆಗೆ ಮೀನುಗಳ ಹಲ್ಲಿಗೆ
ಸಾಕಷ್ಟು ದೊಡ್ಡದಿದೆ ಸುವೋಮಿ ಗಡಿಸೀಮೆ
ತಪ್ಪು ಮಾಡಿದವನು ಬಚ್ಚಿಟ್ಟುಕೊಳ್ಳಲು
ಅಪರಾಧ ಮಾಡಿದವ ಅಡಗಿಕೊಳ್ಳಲು
ಅಲ್ಲೆ ಅಡಗಿರು ನೀನು ಐದಾರು ವರ್ಷ
ಬಚ್ಚಿಟ್ಟುಕೊಂಡಿರು ಒಂಭತ್ತು ವರ್ಷ
ಮನದ ತಳಮಳ ಶಾಂತವಾಗುವ ತನಕ
ನಿನ್ನ ಭಯ ಭೀತಿ ದೂರವಾಗುವ ತನಕ

ಕುಲೆರ್ವೊ ಕಲೆರ್ವೊನ ಸಂತಾನ
ಹೇಳಿದನು ಹೀಗೆ:
ಅಡಗಿಕೊಳ್ಳುವುದಿಲ್ಲ ಓಡಿ ಹೋಗುವುದಿಲ್ಲ
ಹೋಗುವೆನು ನಾನು ಮೃತ್ಯುವಿನ ಬಾಯಿಗೆ
ಕಾಲನೆಂಬುವನ ಅಂಗಳದ ಬಾಗಿಲಿಗೆ
ಉಗ್ರ ಭೀಕರದ ಕದನ ರಂಗಕ್ಕೆ
ಕಾದಾಡುವ ಶೂರರ ರಣದಂಗಳಕ್ಕೆ
ಮಲೆತು ನಿಂತಿರುವ ಉಂಟಾಮೊ ಎಂಬುವನು
ಕೆಳಗೆ ಬಿದ್ದಿಲ್ಲ ಆ ದುಷ್ಟನಿನ್ನೂ
ತಂದೆಯ ಕಷ್ಟಗಳ ಸೇಡು ತೀರಿಲ್ಲ
ಹೆತ್ತವ್ವನ ಕಣ್ಣೀರ ಸೇಡು ತೀರಿಲ್ಲ
ನಾ ಪಟ್ಟ ಬವಣೆಗೆ ಲೆಕ್ಕವೇ ಇಲ್ಲ
ಅನುಭವಿಸಿದ ಅನ್ಯಾಯಕೆ ಅಂತ್ಯವೇ ಇಲ್ಲ.

★ ಉಂಟೊ : ಉಂಟಾಮೋದ ಸಂಕ್ಷಿಪ್ತ ರೂಪ. ಒಬ್ಬ ದುಷ್ಟ ನಾಯಕ, ಕಲೆರ್ವೊನ ಸೋದರ

22. ಕುಲೆವೊರ್ ಸಾವು

ಕುಲೆವೊರ್ ಕಲೆವೊರ್‌ನ ಸಂತಾನ
ನೀಲಿ ಕಾಲ್ಚೀಲದವನು
ಸಜ್ಜಾದ ಯುದ್ಧಕ್ಕೆ ಸಿದ್ಧವಾದ ಕದನಕ್ಕೆ
ಕತ್ತಿ ಮಸೆದ ಒಂದು ಗಂಟೆ
ಭಲ್ಲೆ ಮಸೆದ ಇನ್ನೊಂದು ಗಂಟೆ

ತಾಯಿ ಹೇಳಿದಳು:
ಬೇಡ ಮಗನೆ ಬೇಡ ಹೋಗಬೇಡ
ಇಂಥ ದೊಡ್ಡ ಕದನಕ್ಕೆ ಹೋಗಬೇಡ
ಕತ್ತಿ ಬಡಿದಾಟಕ್ಕೆ ಹೋಗಬೇಡ
ಕಾಲ್ಕೆರೆದು ಕದನಕ್ಕೆ ಹೋಗುವವನು
ಬೇಕೆಂತಲೆ ಯುದ್ಧಕ್ಕೆ ಹೋಗುವವನು
ಸಾಯುವನು ಅಲ್ಲೇ ಯುದ್ಧದಲ್ಲಿ
ಕತ್ತಿ ಅಲಗಿಗೆ ಸಿಕ್ಕಿ ಸಾಯುವನು ಅಲ್ಲೆ

ಕುಲೆವೊರ್ ಹೇಳಿದನು:
ನಾನು ಸಾಯುತ್ತಿಲ್ಲ ಜವುಗು ಕೆಸರಲ್ಲಿ
ಮುಗ್ಗರಿಸುತ್ತಿಲ್ಲ ಪೊದೆ ಗಿಡಗಳಲ್ಲಿ
ಹದ್ದುಗಳ ತವರಲ್ಲಿ ಕಾಗೆ ಕಿರಿಚಾಡುವಲ್ಲಿ
ಮಡಿಯುವುದು ಶ್ರೇಷ್ಠ ರಣರಂಗದಲ್ಲಿ
ಸಾಯುವುದು ಚಂದ ಕತ್ತಿ ಬಡಿದಾಟದಲಿ
ಬಲು ಚೆಂದವಿಹುದು ಯುದ್ಧದುನ್ಮಾದ
ಉತ್ಸಾಹ ತುಂಬುವುದು ಯುವಕರಲ್ಲಿ
ದೂರ ಮಾಡುವುದು ಕೇಡಿನಿಂದ
ಪಾರು ಮಾಡುವುದು ಹಸಿವಿನಿಂದ

ತಾಯಿ ಹೇಳಿದಳು:
ಮಡಿದು ಬಿದ್ದರೆ ನೀನು ಯುದ್ಧದಲ್ಲಿ

ಸಾಕುವರು ಯಾರು ಮುದಿ ತಂದೆಯನ್ನು
ಯಾರು ಮಾಡುವರು ಆರೈಕೆಯನ್ನು
ಕುಲೆರ್ವೊ ಕಲೆರ್ವೊನ ಸಂತಾನ
ಹೀಗೆ ಹೇಳಿದನು:
ಬಿದ್ದು ಸಾಯಲಿ ಬಿಡು ಮಣ್ಣಲ್ಲಿ ಅವನು
ನಾಶವಾಗಲಿ ಬಿದ್ದು ಮನೆ ಅಂಗಳದಲ್ಲಿ

ತಾಯಿ ಕೇಳಿದಳು:
ಸಾಕುವರು ಯಾರು ಮುದಿ ತಾಯಿಯನ್ನು
ಯಾರು ಮಾಡುವರು ಆರೈಕೆಯನ್ನು
ಬಿದ್ದು ಸಾಯಲಿ ಬಿಡು ಮೆದೆಯಲ್ಲಿ ಅವಳು
ನಾಶವಾಗಲಿ ಬಿದ್ದು ದನದ ಕೊಟ್ಟಿಗೆಯಲ್ಲಿ

ಸಾಕುವರು ಯಾರು ತಮ್ಮನನ್ನು
ಯಾರು ನೋಡುವರು ಯೋಗಕ್ಷೇಮವನ್ನು
ಬಿದ್ದು ಸಾಯಲಿ ಬಿಡು ಕಾಡಲ್ಲಿ ಅವನು
ಹುಲ್ಲುಗಾವಲಲ್ಲಿ ಬಿದ್ದು ಪ್ರಜ್ಞೆ ತಪ್ಪಿ

ಸಾಕುವರು ಯಾರು ತಂಗಿಯನ್ನು
ಯಾರು ನೋಡುವರು ಯೋಗಕ್ಷೇಮವನ್ನು
ಬಿದ್ದು ಸಾಯಲಿ ಬಿಡು ಬಾವಿಯಲ್ಲಿ
ಬಿದ್ದು ನಾಶವಾಗಲಿ ನೀರಿನಲ್ಲಿ

ಕುಲೆರ್ವೊ ಕಲೆರ್ವೊನ ಸಂತಾನ
ಮನೆಯಿಂದ ಹೊರಡುತ್ತ ಹೇಳಿದನು ಹೀಗೆ
ಹೋಗಿ ಬರುವೆನು ನಾನು ಓ ನನ್ನ ತಂದೆ
ಅಳಬಹುದು ನೀನು ನಾ ಸತ್ತ ಸುದ್ದಿಗೆ
ತಂದೆ ಹೇಳಿದನು:
ನಾನಳುವುದಿಲ್ಲ ನೀ ಸತ್ತ ಸುದ್ದಿಗೆ
ಇನ್ನೊಬ್ಬ ಮಗನ ಬೆಳೆಸುವೆನು ಚೆನ್ನಾಗಿ
ನಿನಗಿಂತ ಇನ್ನೂ ಜಾಣನಾಗಿ

ಕುಲೆರ್ವೊ ಹೇಳಿದನು:
ನಾನೂ ಅಳುವುದಿಲ್ಲ ನೀ ಸತ್ತ ಸುದ್ದಿಗೆ
ಜೇಡಿಮಣ್ಣಿನ ಬಾಯಿ ಕಲ್ಲು ತಲೆ ಇಟ್ಟು

ಕ್ರಾನ್ ಬೆರಿಯ ಕಣ್ಣು ಒಣಕೂಳೆ ಗಡ್ಡ
ವಿಲ್ಲೋ ರೆಂಬೆ ಕಾಲು ಕೊಳೆತ ಮರದ ತಿರುಳಿಟ್ಟು
ಮಾಡಿಕೊಳ್ಳುವೆ ನನಗೆ ಮತ್ತೊಬ್ಬ ತಂದೆ

(ಇದೇ ರೀತಿಯ ಸಂಭಾಷಣೆ ಸೋದರ ಸೋದರಿಯೊಂದಿಗೂ ನಡೆಯುತ್ತದೆ)

ತಾಯಿಗೆ ಹೇಳಿದನು:
ಓ ನನ್ನ ಹೆತ್ತವಳೆ ಅಕ್ಕರೆಯ ಅವ್ವ
ಸಾಕಿ ಬೆಳೆಸಿರುವೆ ಚಿನ್ನದಂಥವಳೆ
ಅಳುವೆಯಾ ನೀನು ನಾ ಸತ್ತ ಸುದ್ದಿಗೆ
ತಾಯಿ ಹೇಳಿದಳು:
ತಾಯೆದೆಯ ದುಃಖ ನಿನಗೇನು ಗೊತ್ತು
ತಾಯಿ ಹೃದಯವ ನೀನು ಅಳೆಯಲಾರೆ
ಅಳುತ್ತಲೇ ಇರುವೆ ನೀ ಸತ್ತ ಸುದ್ದಿಗೆ
ಉಕ್ಕುವುದು ಕಣ್ಣೀರು ಈ ಮನೆಯ ತುಂಬಿ
ಹರಿಯುವುದು ಕಣ್ಣೀರು ಹೊಳೆಯಾಗಿ ಕೆಳಗೆ
ಕಾಣದಂತಾಗುವುದು ನಡೆದಾಡುವ ದಾರಿ
ತುಳುಕುವುದು ಕಣ್ಣೀರು ಕೊಟ್ಟಿಗೆಯ ತುಂಬಿ

ಹಿಮದ ಮೇಲಿಟ್ಟರೆ ಕಾಲು ಕಣ್ಣೀರಲಿ ಜಾರುವುದು
ನೆಲದ ಮೇಲಿಟ್ಟರೆ ಕಾಲು ಕಣ್ಣೀರಲ್ಲಿ ಜಾರುವುದು
ಹರಿಯುತ್ತ ಹೋಗುವುದು ನಾನಿಟ್ಟ ಕಣ್ಣೀರು
ಪಚ್ಚೆ ಪೈರುಗಳ ಹಸಿರು ಹೊಲದಲ್ಲಿ

ಹಾಗೆ ಅಳಲಾಗದಿದ್ದರೆ ನನಗೆ
ಶಕ್ತಿ ಇಲ್ಲವಾದರೆ ಜನರೆದುರು ಅಳಲು
ಮೀಯುವ ಕೋಣೆಯಲಿ ಕಣ್ಣೀರು ಹಾಕುವೆ
ಕಟ್ಟೆಯ ಮೇಲೆಲ್ಲ ಕಣ್ಣೀರು ಹರಿದು
ನೆಲದ ಮೇಲೆಲ್ಲ ತುಂಬಿ ಹರಿದು

ಕುಲೆರ್ವೊ ಕಲೆರ್ವೊನ ಸಂತಾನ
ನೀಲಿ ಕಾಲ್ಚೀಲದವನು ಹೊರಟ ಕದನಕ್ಕೆ
ಸಂಗೀತ ಗಾನ ಸಂಭ್ರಮಗಳಿಂದ
ಬಯಲಲ್ಲಿ ಜವುಗಲ್ಲಿ ವಾದ್ಯಗಳ ಮೊಳಗು
ಕುರುಚಲು ಪೊದೆಗಳನು ತುಳಿದು ಮುಂಬರಿದ
ಕೂಳೆ ತುಂಬಿದ ಹೊಲ ತುಳಿದು ಮುನ್ನಡೆದ

ದೂತನೊಬ್ಬನು ಬಂದ ಕಿವಿಯಲ್ಲಿ ನುಡಿದ:
ಗತಿಸಿದನು ನಿನಗೆ ಜನ್ಮಕೊಟ್ಟವನು
ಮೃತನಾದ ನಿನ್ನ ವೃದ್ಧ ತಂದೆ
ಹಿಂದಿರುಗು ದರುಶನಕೆ ಸಂಸ್ಕಾರ ಕರ್ಮಕ್ಕೆ.
ಕುಲೆರ್ವೊ ಕಲೆರ್ವೊ ಸಂತಾನ
ತಕ್ಷಣವೇ ಹೀಗಂದ
ಸತ್ತನೇನು ಸಾಯಲಿ ಬಿಡು ಅವನು
ಕುದುರೆಯಿದೆ ಮನೆಯಲ್ಲಿ
ಎಳೆಯುತ್ತದೆ ಮಸಣಕ್ಕೆ
ಹುಗಿಯುತ್ತದವನ ಪಾತಾಳದಲ್ಲಿ

(ಇದೇ ರೀತಿಯ ಸಂಭಾಷಣೆ ಸೋದರ, ಸೋದರಿಯ ಸಾವಿನ ಸುದ್ದಿ ಬಂದಾಗಲೂ ಪುನರಾವರ್ತನೆಯಾಗುತ್ತದೆ.)

ನಲಿದಾಡುತ್ತ ನಡೆದ ಜವುಗಿನಲ್ಲಿ
ಕೇಕೆ ಹಾಕುತ್ತ ಬಯಲಿನಲ್ಲಿ
ದೂತನೊಬ್ಬನು ಬಂದ ಕಿವಿಯಲ್ಲಿ ನುಡಿದ:
ಗತಿಸಿದಳು ನಿನಗೆ ಜನ್ಮ ಕೊಟ್ಟವಳು
ತೀರಿಕೊಂಡಳು ನಿನ್ನ ಅಕ್ಕರೆಯ ಅವ್ವ
ಹಿಂದಿರುಗು ದರುಶನಕೆ ಸಂಸ್ಕಾರ ಕರ್ಮಕ್ಕೆ
ಕುಲೆರ್ವೊ ಕಲೆರ್ವೊನ ಸಂತಾನ ನುಡಿದ:
ಅಯ್ಯೋ ನಾನೆಂಥ ಹತದೃಷ್ಟ
ಗತಿಸಿರುವಳು ನನಗೆ ಜನ್ಮಕೊಟ್ಟವಳು
ಪಗದೆ ಹೆಣೆಯುತ್ತಾ ರಜಾಯಿ ಕಸೂತಿ ಹಾಕುತ್ತ
ದಣಿದವಳು ಅವಳು ಜನ್ಮ ಕೊಟ್ಟವಳು
ಉದ್ದ ನೂಲಲ್ಲಿ ನೇಯುತಿದ್ದಳು ಅವಳು
ಅವಳು ಜೀವ ಬಿಡುವಾಗ ನಾನಿರಲಿಲ್ಲ ಬಳಿಯಲ್ಲಿ
ಚಳಿಯು ಹೆಚ್ಚಾಗಿ ಸಾವು ಬಂದಿರಬಹುದು
ಉಣ್ಣುವುದಕೆ ಕೊರತೆ ಆಗಿರಲೂಬಹುದು

ಸರಿಯಾಗಿ ಮೀಯಿಸಿರಿ ರೇಷಿಮೆಯಲಿ ಸುತ್ತಿರಿ
ನವಿರು ಬಟ್ಟೆಯಲಿ ಸುತ್ತಿ
ಗುಣಿಯೊಳಗಿಳಿಸಿ ಜೋಪಾನವಾಗಿ
ಶೋಕಗೀತೆಗಳು ಹೊಮ್ಮುತಿರಲಿ

ಎಲ್ಲೆಲ್ಲೂ ಆ ಗೀತೆ ಮರುದನಿಯ ಕೂಡಲಿ
ಯಾಕೆಂದರೆ ನಾನು ಬರಲಾರೆ ಅಲ್ಲಿಗೆ
ಉಂಟಾಮೊ ಶಿರ ಉರುಳಿಲ್ಲವಿನ್ನೂ
ಕೆಳಗೆ ಬಿದ್ದಿಲ್ಲ ದುಷ್ಟನಿನ್ನೂ
ನಾಶವಾಗಿಲ್ಲ ಕೇಡಿಗನು ಇನ್ನೂ

ಆಡುತಾಡುತ ಹೋದ ಕದನ ರಂಗಕ್ಕೆ
ಉಲ್ಲಾಸದಿಂದ ಉಂಟೋಲಾಗೆ
ದೇವರಿಗೆ ಮೊರೆಯಿಟ್ಟ ದೇವಾಧಿದೇವಾ
ದಯಪಾಲಿಸು ನನಗೆ ಸರಿಯಾದ ಕತ್ತಿ
ಒಂದು ಸೈನ್ಯಕ್ಕೆ ಸಮನಾದ ಕತ್ತಿ
ನೂರು ಜನರನ್ನೂ ಎದುರಿಸುವ ಕತ್ತಿ
ದಯ ಪಾಲಿಸಿದನು ಅದ್ಭುತದ ಕತ್ತಿ

ತರಿದು ಹಾಕಿದನವನು ಎಲ್ಲರನ್ನೂ
ಉಂಟಾಮೊನ ಕುಲ ಸಂಪೂರ್ಣವನ್ನೂ
ಬೂದಿ ಮಾಡಿದ ಸುಟ್ಟು ಮನೆಗಳನ್ನು
ಬೆಂಕಿ ಹಚ್ಚಿ ಸುಟ್ಟು ಎಲ್ಲವನ್ನೂ
ಯಾವುದನ್ನೂ ಬಿಡಲಿಲ್ಲ ಒಲೆಗುಂಡು ಬಿಟ್ಟು
ಅಂಗಳದಲ್ಲಿರುವ ರೋವನ್ ಮರ ಬಿಟ್ಟು

ಕುಲೆರ್ವೊ ಕಲೆರ್ವೊನ ಸಂತಾನ:
ಹಿಂದಿರುಗಿದ ಮನೆಗೆ ತಾಯ್ತಂದೆಯ ನಾಡಿಗೆ
ಯಾರಿಲ್ಲ ಮನೆಯೊಳಗೆ ಎಲ್ಲವೂ ಖಾಲಿ
ಭಣಗುಟ್ಟುತಿತ್ತು ಮನೆಯಂಗಳ ಬಯಲು
ಬಂದವನ ಎದುರುಗೊಳ್ಳಲು ಬರಲಿಲ್ಲ ಯಾರೂ
ಕೈ ಹಿಡಿದು ಕರೆದೊಯ್ಯಲು ಇರಲಿಲ್ಲ ಯಾರೂ

ಚಾಚಿದನು ಕೈ, ಒಲೆಯ ಗೂಡೊಳಗೆ
ಕಲ್ಲಿದ್ದಲು ಕೊರೆದವು ಮಂಜುಗಡ್ಡೆಯ ಹಾ
ಬಂದಾಗಲೇ ಅರಿವಾಯ್ತು ಬದುಕಿಲ್ಲ ತಾ
ಚಾಚಿದನು ಕೈ, ಬೆಂಕಿಗೂಡೊಳಗೆ
ಕಲ್ಲುಗಳು ಕೊರೆದವು ಮಂಜುಗ
ಬಂದಾಗಲೇ ಅರಿವಾಯು ?

ಸುದ್ದಿ ಕೇಳಿದ ಹಿರಿಯ ವೆಯ್ನಾಮೊಯ್ನನ್
ಸುಡಿದ ಮಾತನ್ನು ಅವನು ಹೀಗೆ:
ಬೆಳಸದಿರಿ ಜನರೆ ಮಕ್ಕಳನು ತಪ್ಪಾಗಿ
ತೂಗದಿರಿ ತೊಟ್ಟಿಲು ತಪ್ಪು ತಪ್ಪಾಗಿ
ಕಂಡವರ ಮಕ್ಕಳ ಸಾಕಿ ಬೆಳೆಸಿದ ಹಾಗೆ.

ತಪ್ಪು ತಪ್ಪಾಗಿ ಬೆಳೆದಂಥ ಮಕ್ಕಳಿಗೆ
ತಪ್ಪಾಗಿ ತೊಟ್ಟಿಲ ತೂಗಿಸಿಕೊಂಡಂಥವರಿಗೆ
ತಿಳಿವೆಂಬುದು ಬರದು ವಿವೇಚನೆ ತಿಳಿಯದು
ದೇಹ ಬೆಳೆದರೂ ಕೂಡ
ವಯಸ್ಸಾಗಿ ಮುಪ್ಪು ಬಂದರೂ ಕೂಡ.

23. ಚಿನ್ನಬೆಳ್ಳಿಯ ವಧು

ಇಲ್ಮಾರಿನೆನ್ ಶೋಕಿಸಿದ ಹೆಂಡತಿಯ ಸಾವಿಗೆ
ದುಃಖ ತುಂಬಿದ ಸಂಜೆ ನಿದ್ದೆಯಿಲ್ಲದ ರಾತ್ರಿ
ಹಗಲೆಲ್ಲ ಶೋಕಿಸಿದ ಆಹಾರ ತೊರೆದು
ಚಿಕ್ಕ ವಯಸ್ಸಿನ ಪತ್ನಿ ಗತಿಸಿದ್ದಳು
ಒಯ್ದಿತ್ತು ಸಾವು ಚೆಲುವೆಯನ್ನು
ಸುತ್ತಿಗೆಯ ಹಿಡಿದಿಲ್ಲ
ತಿಂಗಳಾದರೂ ಕೂಡ ಸುತ್ತಿಗೆಯ ಸದ್ದಿಲ್ಲ

ಇಲ್ಮಾರಿನೆನ್ ತನ್ನಷ್ಟಕ್ಕೆ ಹೇಳಿಕೊಂಡನು ಹೀಗೆ:
ಹೇಗೆ ಕಳೆಯಲಿ ದುಃಖ ತಿಳಿಯುತಿಲ್ಲ
ನಿದ್ದೆ ಬರದು ಇರುಳಲ್ಲಿ ತುಂಬಿ ಬರುವುದು ಶೋಕ
ಸಹಿಸಲಾಗದೆ ದುಃಖ ಸೊರಗಿ ಸೋತಿರುವೆ
ನನ್ನ ಸಂಜೆಗಳಲ್ಲಿ ಬರಿ ಶೋಕ ಮಾತ್ರ
ನನ್ನ ಹಗಲುಗಳಲ್ಲಿ ಬರಿ ದುಃಖ ಮಾತ್ರ
ಕಂಗೆಡಿಸುತ್ತವೆ ಇರುಳು
ಅದಕಿಂತ ಹೆಚ್ಚು ಕಂಗೆಡಿಸುವ ಹಗಲು
ದುಃಖಿಸುತ್ತಿರುವೆ ಅವಳಿಗಾಗಿ
ಕಪ್ಪು ಮುಂಗುರುಳ ಚೆಲುವೆಗಾಗಿ

ಮಧ್ಯರಾತ್ರಿ ಕನಸಲ್ಲಿ ಚಾಚಿದರೆ ಕೈ
ಬರಿ ಶೂನ್ಯ ತಡಕುವುದು ಕಡು ದುಃಖ ಕವಿಯುವುದು
ದಿಕ್ಕಿಲ್ಲದೆ ಅಲೆದಂತೆ ಪರದೇಶಿಯಾಗಿ

ಹೀಗೆಯೇ ಅವನಿದ್ದ ಇಲ್ಲದೆಯೆ ಮಡದಿ
ಬಸವಳಿದ-ಬಲು ದುಃಖ ಭಾರದಿಂದ
ಶೋಕಿಸುತ್ತಲೆ ಇದ್ದ ತಿಂಗಳಾದರೂ ಎರಡು
ಶೋಕಿಸುತ್ತಲೆ ಇದ್ದ ತಿಂಗಳಾದರೂ ಮೂರು
ನಾಲ್ಕನೆಯ ತಿಂಗಳು ಕಳೆದಾದ ಮೇಲೆ
ತಂದ ಚಿನ್ನವನು ಕಡಲಿನಿಂದ
ತಂದ ಬೆಳ್ಳಿಯನು ಅಲೆಗಳಿಂದ

ತಂದು ಹಾಕಿದ ಸೌದೆ ಒಂದು ರಾಶಿ
ಮೂವತ್ತು ಬಂಡಿಗೆ ಕಡಿಮೆಯಿಲ್ಲದೆ ಹಾಗೆ
ಸುಟ್ಟ ಸೌದೆಯನು ಇದ್ದಿಲಾಯಿತು ಸೌದೆ
ತಿದಿಸಾಲೆಗೆ ತಂದ ಇದ್ದಿಲನ್ನು

ಒಂದಿಷ್ಟು ಬಂಗಾರ ಒಂದಿಷ್ಟು ಬೆಳ್ಳಿ
ಕೆಂಪಾಗಿ ಕಾಯಿಸಿದ ಕುಲುಮೆಯಲ್ಲಿ
ಒತ್ತಿದರು ತಿದಿ, ಗುಲಾಮ ಕೂಲಿಗಳು
ದುಡಿದರು ಆಳುಗಳು, ತಿದಿ ಒತ್ತಿ ಒತ್ತಿ
ಒತ್ತಿದವು ತಿದಿಯನ್ನು ಗವುಸಿಲ್ಲದ ಕೈಗಳು
ಒತ್ತಿದವು ತಿದಿಯನ್ನು ಅಂಗಿಯಿಲ್ಲದ ತೋಳು
ಸ್ವತಃ ಇಲ್ಮಾರಿನೆನ್ ಕುಳಿತ ಉರಿಸುವುದಕೆ ಬೆಂಕಿ
ವಧುವನ್ನು ನಿರ್ಮಿಸಲು ಚಿನ್ನ ಬೆಳ್ಳಿಯ ಹಾಕಿ

ಒತ್ತಲಿಲ್ಲ ಆಳುಗಳು ಸರಿಯಾಗಿ ತಿದಿಯನ್ನು
ಒತ್ತಿದನು ಸ್ವತಃ ಇಲ್ಮಾರಿನೆನನೇ ಹೋಗಿ
ಒಂದು ಸಲ ಎರಡು ಸಲ
ಮೂರನೆ ಸಲ ತಿದಿ ಒತ್ತಿ
ನೋಡಿದನು ಬಗ್ಗಿ ಕುಲುಮೆ ತಳದಲ್ಲಿ
ಕುಲುಮೆಯಿಂದ ಮೇಲಕ್ಕೆ ಬಂದುದಾದರೂ ಏನು
ಉರಿಯಿಂದ ಮೇಲಕ್ಕೆ ಬಂದುದಾದರೂ ಏನು

ಎದ್ದು ಬಂದಿತು ಹೆಣ್ಣು ಕುರಿ ಕುಲುಮೆಯಿಂದ
ಒಂದು ಕೂದಲು ಚಿನ್ನ ಮತ್ತೊಂದು ತಾಮ್ರ
ಮೂರನೆಯ ಕೂದಲು ಪೂರ್ತಿ ಬೆಳ್ಳಿ
ಆಗಬಹುದು ಸಂತಸ ಬೇರೆಯವರಿಗೆ
ಆಗಲಿಲ್ಲ ಸಂತಸ ಇಲ್ಮಾರಿನೆನ್‌ಗೆ
ಬೇಕಾಗಬಹುದು ತೋಳಕ್ಕೆ ನೀನು
ಚಿನ್ನ ಬೆಳ್ಳಿಯ ಹೆಣ್ಣ ನಾನು ಬಯಸುವೆನು
ಹೇಳುತ್ತ ಹೀಗೆ ಕುರಿ ಎಸೆದ ಕುಲುಮೆಗೆ
ಸೇರಿಸಿದ ಚಿನ್ನ ಇನ್ನಷ್ಟು ಬೆಳ್ಳಿ

ಒತ್ತಿದರು ತಿದಿಯನ್ನು ಗುಲಾಮ ಜನರು
ತಿದಿಯೊತ್ತಿ ದುಡಿದರು ಕೂಲಿ ಆಳುಗಳು
ಒತ್ತಿದವು ತಿದಿಯನ್ನು ಗವಸಿಲ್ಲದ ಕೈಗಳು

ಒತ್ತಿದವು ತಿದಿಯನ್ನು ಅಂಗಿಯಿಲ್ಲದ ತೋಳು

ಕುಲುಮೆಯಿಂದ ಮೇಲೆ ಬಂದುದಾದರೂ ಏನು
ಬೆಂಕಿಯಿಂದ ಮೇಲೆ ಬಂದುದಾದರೂ ಏನು

ಎದ್ದು ಬಂದಿತು ಕುದುರೆ ಕುಲುಮೆಯಿಂದ
ಬಂಗಾರ ಕೇಸರ ಬೆಳ್ಳಿಯದು ಶಿರ
ಸಂಪೂರ್ಣ ತಾಮ್ರಮಯ ಗೊರಸುಕಾಲು
ಆಗಬಹುದು ಸಂತಸ ಬೇರೆಯವರಿಗೆ
ಆಗಲಿಲ್ಲ ಸಂತಸ ಇಲ್ಮಾರಿನೆನ್‌ಗೆ
ಬೇಕಾಗಬಹುದು ತೋಳಕ್ಕೆ ನೀನು
ಚಿನ್ನ ಬೆಳ್ಳಿಯ ಹೆಣ್ಣ ಬಯಸುವೆನು ನಾನು
ಹೇಳುತ್ತಾ ಹೀಗೆ ಕುದುರೆ ಎಸೆದ ಕುಲುಮೆಗೆ

(ಇದೇ ವಿವರಗಳ ಪುನರಾವೃತ್ತಿಯಾಗಿ ಮೂರನೆಯ ಸಲದ ನಂತರ)

ಮೇಲೆ ಬಂದಳು ಚೆಲುವೆ ಕುಲುಮೆಯಿಂದ
ಚಿನ್ನದ ಮುಂಗುರುಳ ಚೆಲುವೆ ಬೆಂಕಿಯಿಂದ
ಶಿರವೆಲ್ಲ ಬೆಳ್ಳಿ ಕೇಶ ಬಂಗಾರ
ಸೊಗಸು ಮೈಮಾಟ ಚೆಲುವೆಯವಳು
ಬೆಚ್ಚಬಹುದು ಬೇರೆಯವರು
ಬೆಚ್ಚಲಿಲ್ಲ ಇಲ್ಮಾರಿನೆನ್

ಇದಾದ ಮೇಲೆ ತಿದ್ದಿದನು ಪುತ್ಥಳಿ
ರಾತ್ರಿಯೆಲ್ಲವೂ ದುಡಿದ ತಡೆಯಿಲ್ಲದೆ
ಹಗಲೆಲ್ಲವೂ ದುಡಿದ ವಿಶ್ರಮಿಸದೆ
ಪಾದ ರೂಪಿಸಿದ ಕೈಗಳನು ರೂಪಿಸಿದ
ಪಾದಗಳ ಮೇಲೆ ನಿಲ್ಲಲಿಲ್ಲವಳು
ಆ ತೋಳು ಅವನನ್ನು ಬಳಸಲಿಲ್ಲ

ಕಿವಿಗಳನು ಮಾಡಿದ ಆ ಹೆಣ್ಣಿಗೆ
ಆಲಿಸವು ಏನನ್ನೂ ಆ ಕಿವಿಗಳು
ಮಾಡಿಟ್ಟ ಬಾಯಿ ಹೊಳೆವ ಕಣ್ಣು
ಮಾತಿಲ್ಲ ಬಾಯಲ್ಲಿ ನಗೆಯಿಲ್ಲ ಕಣ್ಣಲ್ಲಿ

ಇಲ್ಮಾರಿನೆನ್ ಅಂದುಕೊಂಡ
ಚೆಲುವೆ ಎನಿಸಬಹುದಿತ್ತಿವಳು ಉಳಿದಿದ್ದರೆ ಮಾತು
ವಿವೇಚನೆ ತುಂಬಿದ ಒಂದೆರಡು ಮಾತು
ಮಲಗಿಸಿದ ಅವಳನ್ನು
ಮೆತ್ತನೆಯ ಹಾಸಿಗೆ ಮಿದುವಾದ ತಲೆದಿಂಬು
ಮಲಗಿಸಿದ ಅವಳನ್ನು ರೇಶಿಮೆಯ ಶಯ್ಯೆ

ನೀರು ಕಾಯಿಸಿದ
ಮೂರು ಹಂಡೆಯ ನೀರು ಬಂಗಾರ ಹಕ್ಕಿಗೆ
ತಿಕ್ಕಿ ತೊಳೆಯಲು ಕುಲುಮೆ ಬೂದಿ
ಕಮ್ಮಾರನೂ ಮಿಂದ ಸಂತೃಪ್ತಿಯಾಗಿ
ಮಲಗಿದ ಅವಳ ಬದಿ ಮಿದುಹಾಸಿಗೆಯಲ್ಲಿ
ದಪ್ಪನೆಯ ದುಪ್ಪಟಿ ಹೊದೆಯಲೆಂದು
ತುಪ್ಪಳದ ಹೊದಿಕೆಗಳು ಉಣ್ಣೆದಿರಿಸುಗಳು
ಚಿನ್ನದ ಪುತ್ಥಳಿಯ ಒಂದು ಬದಿಗೆಂದು
ಹೊದೆದಿದ್ದ ಪಕ್ಕದ್ದು ಬೆಚ್ಚಗಿತ್ತು
ಪುತ್ಥಳಿಯ ಪಕ್ಕದ್ದು ಕೊರೆಯುತ್ತಿತ್ತು

ಕೊರೆವ ಶೀತಕ್ಕೆ ಕುಗ್ಗಿ ಮಂಜಾಗಿ
ನದಿಯ ಮೇಲೆ ಗಡ್ಡೆ ಕಟ್ಟಿದಂತೆ ಮಂಜು
ಗಟ್ಟಿ ಕಲ್ಲಂತೆ ಕೊರೆವ ಮಂಜು
ಇಲ್ಮಾರಿನೆನ್ ಹೇಳಿಕೊಂಡ
ಹಿತವಾಗುತಿಲ್ಲ ಇದೇತಕ್ಕೊ ನನಗೆ
ದಾಟಿಸಿಬಿಡುವೆನು ವೆಯ್ನಾಮೊಯ್ನನ್ ಕೈಗೆ
ಅವನ ತೊಡೆ ಮೇಲಿರಲಿ ಮಡದಿಯಾಗಿ
ತೋಳಿನಪ್ಪುಗೆಯಲ್ಲಿ ಹಕ್ಕಿಯಾಗಿ

ತೆಗೆದುಕೊಂಡು ಹೋದ ವೆಯ್ನೊಲಾ ಊರಿಗೆ
ವೆಯ್ನಾಮೊಯ್ನನ್ ಕಂಡು ಹೇಳಿದನು ಹೀಗೆ
ಈ ಹೆಣ್ಣ ತಂದಿರುವೆ ನಿನಗಾಗಿ ನಾನು
ಎಂಥ ಚೆಲುವೆಯೋ ನೋಡಿವಳ ನೀನು
ಮುತ್ತಿನ ಚಿಪ್ಪೊಂದು ಬಿರಿದಂತೆ ಬಾಯಿ
ಮಾಟವಾಗಿರುವುದು ಸೊಗಸಾದ ಗಲ್ಲ

ವೆಯ್ನಾಮೊಯ್ನನ್ ದೃಢ ಚಿತ್ತ ಹಿರಿಯ
ಪುತ್ಥಳಿಯ ನೋಡಿದ

ಅಡಿಯಿಂದ ಮುಡಿವರೆಗೆ ಎಲ್ಲ ಬಂಗಾರ
ಯಾಕಾಗಿ ತಂದಿರುವೆ ಇವಳನ್ನು ನನಗೆ
ತಂದಿರುವೆ ಏತಕ್ಕೆ ಈ ಕನಕ ಭ್ರಾಂತಿ

ಇಲ್ಮಾರಿನೆನ್ ನುಡಿದ
ನಿನಗಾಗಿಯೇ ತಂದಿರುವೆ ಒಳ್ಳೆ ಕಾಣಿಕೆ
ತೊಡೆಯ ಮೇಲಿರಲಿ ಮಡದಿಯಾಗಿ
ತೋಳಿನಪ್ಪುಗೆಯಲ್ಲಿ ಹಕ್ಕಿಯಾಗಿ

ಹಿರಿಯ ವೆಯ್ನಾಮೊಯ್ನನ್ ಹೇಳಿದನು ಹೀಗೆ
ಅಯ್ಯಾ ಕಮ್ಮಾರ ನನ್ನ ಪ್ರಿಯ ಸೋದರ
ಎಸೆದು ಬಿಡು ಈ ಹೆಣ್ಣ ಕುಲುಮೆಯಲ್ಲಿ
ನಿರ್ಮಿಸು ಎಲ್ಲರಿಗೂ ಬೇಕಾದ ವಸ್ತು
ಅಥವಾ ರಷ್ಯಾಗೆ ಕೊಟ್ಟು ಬಿಡು ಇವಳ
ಸ್ಯಾಕ್ಸನ್ನರಿಗೆ ಕಳಿಸಿಬಿಡು ಈ ಹೆಣ್ಣನಿವಳ
ಕದನಗಳ ಕೊಳ್ಳೆಯನು ಅವರು ಮೆಚ್ಚುವರು
ಘೋರ ಯುದ್ಧಗಳಲ್ಲಿ ರುಚಿ ಕಾಣುವ ಜನರು
ನನ್ನ ಘನತೆಗಿದು ತಕ್ಕುದಲ್ಲ
ನನಗೂ ಇದು ಸರಿಯಲ್ಲ ನೋಡು
ಸ್ವರ್ಣ ಪುತ್ಥಳಿಯನ್ನು ಮದುವೆಯಾಗುವುದು
ಬೆಳ್ಳಿ ಆಸೆಗೆ ಘೋರ ಕಷ್ಟಕ್ಕೆ ಸಿಲುಕುವುದು

ವೆಯ್ನಾಮೊಯ್ನನ್ ಬೋಧಿಸಿದ
ಬೆಳೆಯುತಿಹ ಪೀಳಿಗೆಗೆ
ಈಗಾಗಲೇ ಬೆಳೆದು ನಿಂತಂಥ ಜನಕೆ
ತಲೆ ಬಾಗದಿರಿ ಚಿನ್ನಕ್ಕೆ ಕೀಳಾಗದಿರಿ ರಜತಕ್ಕೆ
ನಿಮಗೆಷ್ಟೆ ಇರಲಿ ಧನಕನಕ ಐಶ್ವರ್ಯ
ನಿಮಗೆಷ್ಟೆ ಇರಲಿ ಬಡತನದ ದಾರಿದ್ರ್ಯ

ನೀವಿರುವ ತನಕ ಈ ಬದುಕಿನಲ್ಲಿ
ಹೊಳೆವ ಚಂದಿರನು ಬಾನಿನಲ್ಲಿ
ಬಂಗಾರ ಹೆಣ್ಣ ಬಯಸಬೇಡಿ
ಬೆಳ್ಳಿಯಾಸೆಗೆ ಸಿಕ್ಕಿ ತೊಳಲಾಡಬೇಡಿ
ಸ್ವರ್ಣಪ್ರಭೆ ಎಂಬುದು ಮರಗಟ್ಟಿಸುವ ಮಂಜು
ಬೆಳ್ಳಿಯುಸಿರೆಲ್ಲ ಬರಿಯ ಹಿಮ ಮಂಜು

24. ಇಲ್ಮಾರಿನೆನ್‌ನ ಹೊಸ ಪತ್ನಿ

ಇಲ್ಮಾರಿನೆನ್ ಆದಿ ಕಮ್ಮಾರ
ಎಸೆದುಬಿಟ್ಟನು ಕನಕ ಪುತ್ಥಳಿಯನ್ನು
ಎಸೆದು ಬಿಟ್ಟನು ರಜತ ಪುತ್ಥಳಿಯನ್ನು
ಸಜ್ಜು ಮಾಡಿದ ಕುದುರೆ
ಕಂದು ಬಣ್ಣದ ಕುದುರೆ
ಏರಿದನು ಬಂಡಿ. ಹೊರಟುಪಯಣ
ಪೊಹ್ಜೊಲಾ ನಾಡಿಗೆ ಇನ್ನೊಂದು ಹೆಣ್ಣಿಗೆ

ಹೋದ ಒಂದು ದಿನ. ಹೋದ ಎರಡು ದಿನ
ಹೋಗುತ್ತ ಹೋದಾಗ ದಿನ ಮೂರರ ಕೊನೆಗೆ
ಬಂದು ನಿಂತನು ಪಹಜೋಲಾ ಅಂಗಳಕೆ

ಪಹಜೋಲಾ ಮನೆ ಒಡತಿ ಲೌಹಿ
ಎದುರುಗೊಂಡಳು ಅಂಗಳಕೆ ಬಂದು
ಅವನ ಕೇಳಿದಳು ಹೇಗಿರುವಳು ಮಗಳು
ಹೇಗಿರುವಳು ಮನೆಯೊಡತಿ ಸೊಸೆಯಾಗಿ ಅವಳು
ಹೇಗಿರುವಳು ಮನೆಯೊಡೆಯನ ಸೊಸೆಯಾಗಿ ಅವಳು

ಇಲ್ಮಾರಿನೆನ್ ತಲೆತಗ್ಗಿಸಿದ ತುಂಬ ಶೋಕಿಸಿದ
ತಲೆಯ ಮೇಲಿನ ಟೊಪ್ಪಿ ಓರೆಯಾಗಿ
ಕೇಳಬೇಡ ತಾಯಿ ಕೇಳಬೇಡ ನನ್ನ
ಕೇಳದಿರು ನನ್ನ ಈ ರೀತಿಯಾಗಿ
ಹೇಗಿರುವಳು ಮಗಳೆಂದು ಕೇಳದಿರು ನನ್ನ
ಕೊಂಡು ಹೋಯಿತು ಸಾವು
ಅವಳ ಹಿಡಿಯಿತು ಸಾವು
ಮಣ್ಣಾಗಿ ಹೋದಳು ನನ್ನ ಕಣ್ಮಣಿ ಅವಳು
ಗಿಡಗಂಟಿ ಪೊದೆಯಲ್ಲಿ ನನ್ನ ರಂಭೆ
ಒಣ ಕೂಳೆ ಅಡಿಯಲ್ಲಿ ಬೆಳ್ಳಿ ಚೆಲುವೆ

ಕೊಡಿರೀಗ ಚಿಕ್ಕವಳ
ಕೊಡಿರೆನಗೆ ಎಳೆ ತರುಣಿ
ಓ ತಾಯಿ ಎರಡನೆಯವಳ ಕೊಡು ನನ್ನ ಮನೆಗೆ
ತುಂಬಲು ಅಕ್ಕನ ತೆರವಾದ ಜಾಗಕ್ಕೆ

ಪಹೆಜೋಲಾ ಮನೆ ಒಡತಿ ಲೌಹಿ
ಹೇಳಿದಳು ಹೀಗೆ
ಎಂತಹ ಕೇಡು ಬಂತಲ್ಲ ನನಗೆ
ಎಂತಹ ದುಃಖ ಎರಗಿ ಬಂತಲ್ಲ
ಯಾಕಾದರೂ ಕೊಟ್ಟೆನೊ ನನ್ನ ಕಂದನ ನಿನಗೆ
ಚಿಕ್ಕ ಹುಡುಗಿಯನು ಕಷ್ಟ ಸಂಕಷ್ಟಕ್ಕೆ
ಗುಲಾಬಿ ಕೆನ್ನೆಯ ಹುಡುಗಿ ಹಾಳಾದಳು
ಕೊಟ್ಟು ಬಿಟ್ಟಂತೆ ತೋಳಗಳ ಬಾಯಿಗೆ
ಕೊಟ್ಟು ಬಿಟ್ಟಂತೆ ಗುರುಗುಡುವ ಕರಡಿಗೆ

ಇನ್ನು ಕೊಡಲಾರೆ ಇನ್ನಾವ ಮಗಳನ್ನು
ಮಸಿ ಹಿಡಿದ ಮಾಡಿನ ಕರಕಲನು ಕೆರೆವುದಕೆ
ತಳ್ಳಿ ಬಿಟ್ಟಂತೆ ಅಬ್ಬರದ ಪ್ರಪಾತಕ್ಕೆ
ಎಸೆದುಬಿಟ್ಟಂತೆ ಸುಳಿನೀರ ಮಡುವಿಗೆ
ಬಲಿಯಾಗಿ ಕೊಟ್ಟಂತೆ ನರಕದ ಹುಳಗಳಿಗೆ
ಟುವೋನಿಯ ಚೂಪು ಪೈಕ್ ಮೀನ ಹಲ್ಲಿಗೆ

ದುಃಖದಿಂದ ಮಂಕಾದ ಇಲ್ಮಾರಿನೆನ್
ತಲೆಯೆಲ್ಲ ಕೆದರಿ ಕೋಪಾವೇಶವೇರಿ
ನುಗ್ಗಿದನು ಕೋಣೆಗೆ ಹೇಳಿದನು ಹೀಗೆ
ಏ ಹೆಣ್ಣೆ ಬಾರೆ ಬಾ ನನ್ನ ಜೊತೆಗೆ
ನಿನ್ನ ಸೋದರಿಯ ಜಾಗಕ್ಕೆ, ಮನೆ ತುಂಬುವುದಕ್ಕೆ
ಸಿಹಿ ರೊಟ್ಟಿ ಬೇಯಿಸಲು ಏಲ್‌ಮದ್ಯ ಹುದುಗಿಸಲು

ನೆಲದ ಮೇಲೊಂದು ಕಂದ ಮಲಗಿತ್ತು
ಅದು ಹೀಗೆ ಹಾಡಿತು ಉತ್ತರವ ಹೇಳಿತು
ಕರೆಯದೆ ಬಂದವನೆ ತೊಲಗು ಇಲ್ಲಿಂದ
ತೊಲಗು ಪರದೇಶಿ ಈ ಬಾಗಿಲಾಚೆ
ಕೊಡಬಾರದ ಕಷ್ಟ ಈ ಮನೆಗೆ ಕೊಟ್ಟೆ
ನೀ ಕಾಲಿಟ್ಟಂದೇ ಶುರುವಾಯಿತು ಈ ಮನೆಯ ಕಷ್ಟ

ಓ ಹೆಣ್ಣೆ ಓ ನನ್ನ ಪ್ರಿಯಳಾದ ಸೋದರಿಯೆ
ಖುಷಿಯಾಗಬೇಡ ಇವನನ್ನು ಕಂಡು
ಮರುಳಾಗಬೇಡಿವನ ನಯ ಮಾತುಗಳಿಗೆ
ಮರುಳಾಗದಿರು ಇವನ ಪಾದಗಳ ಚೆಲುವಿಕೆಗೆ
ತೋಳದ ಬಾಯವನು ನರಿಯಂಥ ಉಗುರವನು
ಕರಡಿಯಂತಹ ಉಗುರು ಪಂಜದಲ್ಲಡಗಿವೆ
ಸೊಂಟದಲ್ಲಿಹ ಕತ್ತಿ ನೆತ್ತರನು ಕುಡಿಯುತಿದೆ
ಚೆಂಡಾಡುವನು ರುಂಡಗಳ ಈ ಕತ್ತಿಯಿಂದ
ಸೀಳುವನು ಬೆನ್ನುಗಳ ಈ ಚೂರಿಯಿಂದ

ಆಮೇಲೆ ಆ ಹುಡುಗಿಯೇ ಹೇಳಿದಳು ಹೀಗೆ
ಖಂಡಿತಕು ಬರಲಾರೆ ನಾ ನಿನ್ನ ಜೊತೆಗೆ
ನಿನ್ನಂಥ ದುರುಳನ ಜೊತೆ ಹೆಣಗಾಡಲಾರೆ
ಮೊದಲ ಪತ್ನಿಯನು ಕೊಂದವನು ನೀನು
ನನ್ನ ಸೋದರಿಯ ಕೊಲೆಗಾರ ನೀನು
ಅವಳಂತೆಯೇ ನನ್ನನೂ ಸಂಹರಿಸಬಹುದು
ಅವಳಂತೆಯೇ ನನ್ನ ಕೊಲೆ ಮಾಡಬಹುದು

ನಿನಗಿಂತ ಯೋಗ್ಯನಿಗೆ ತಕ್ಕವಳು ನಾನು
ನಿನಗಿಂತ ಚೆಲುವನಿಗೆ ತಕ್ಕವಳು ನಾನು
ನಿನ್ನ ಮನೆಗಿಂತ ದೊಡ್ಡ ಮನೆ ಸಿಕ್ಕುವುದು
ನಿನ್ನ ಬಂಡಿಗಿಂತಲೂ ಚೆಲುವಾದ ಬಂಡಿ
ನಿನ್ನಂಥ ಕಮ್ಮಾರನ ಮಸಿ ಹಿಡಿದ ಮನೆಯಲ್ಲ
ನಿನ್ನಂಥ ಶತಮೂರ್ಖ ಪತಿಯ ಮನೆಯಲ್ಲ

ಇಲ್ಮಾರಿನೆನ್ ಹೆಸರಾಂತ ಆದಿಕಮ್ಮಾರ
ದುಃಖದಿಂದ ಮಂಕಾಗಿ ತಲೆ ಎಲ್ಲ ಕೆದರಿ
ಒಳನುಗ್ಗಿ ಅವಳನ್ನು ಹಿಡಿದೆಳೆದು ತಂದ
ಬಿರುಗಾಳಿಯಂತವನು ಹೊರ ನುಗ್ಗಿ ಬಂದ
ಎಳೆದೊಯ್ದು ಬಂಡಿಯೊಳಗವಳನ್ನು ತಳ್ಳಿ
ಪಯಣ ಆರಂಭಿಸಿದ ಬಹಳ ತ್ವರೆಯಲ್ಲಿ
ಕಡಿವಾಣವಿತ್ತು ಒಂದು ಕೈಯೊಳಗೆ
ಇನ್ನೊಂದು ಕೈಯಿತ್ತು ಅವಳೆದೆಯ ಮೇಲೆ

ಆ ಹೆಣ್ಣು ಗೋಳಾಡಿ ಎದೆ ಬಡಿದು ಅತ್ತಳು
ಎಂಥ ಜಾಗಕೆ ಬಂದೆ ಎಂದು ಹಲುಬಿದಳು
ಹಾಳಾಗಿ ಹೋಯಿತು ಪಾರಿವಾಳದ ಬಾಳು
ನಾಶವಾಯಿತಲ್ಲ ಈ ಹಕ್ಕಿ ಬದುಕು
ಇಲ್ಮಾರಿನೆನ್ ಕೇಳಿಲ್ಲಿ ಬಿಡದಿದ್ದರೆ ನನ್ನ
ಮುರಿಯುವೆನು ಬಂಡಿ ಚೂರಾಗುವಂತೆ
ಅಪ್ಪಳಿಸಿ ಕಾಲಿಂದ ಪುಡಿಯಾಗುವಂತೆ

ಇಲ್ಮಾರಿನೆನ್ ಉತ್ತರಿಸಿದ
ಎಲೆ ಹೆಣ್ಣೆ ತಿಳಿದುಕೊ ಅಂತಿಂಥದಲ್ಲ
ಇದು ಕಮ್ಮಾರನ ಬಂಡಿ
ಹಲಗೆಗಳ ಕಟ್ಟಿರುವೆ ಉಕ್ಕಿನಲ್ಲಿ
ಎಷ್ಟು ಎಳೆದಾಡಿದರೂ ತಾಳಿಕೊಳ್ಳುವ ಬಂಡಿ
ನಿನ್ನ ಹೋರಾಟಕ್ಕೆ ಜಗ್ಗದಿದು ಬಂಡಿ

ಕೈಲಾಗದ ಹೆಣ್ಣು ಶೋಕ ಮಾಡಿದಳು
ತಾಮ್ರ ನಡುಪಟ್ಟಿಯ ಹೆಣ್ಣು ಕಣ್ಣೀರನಿಟ್ಟಳು
ಕೊಸರಾಡಿ ಬಡಿದಾಡಿ ಮುರಿದು ಹೋದವು ಬೆರಳು
ಕೊಸರಾಡಿ ಬಡಿದಾಡಿ ತಿರುಚಿ ಹೋದವು ತೋಳು

ಇಲ್ಮಾರಿನೆನ್ ಕೇಳಿಲ್ಲಿ ಬಿಡದಿದ್ದರೆ ನನ್ನ
ರೂಪ ಬದಲಾಯಿಸುವೆ ಮೀನಾಗಿ ನಾನು
ಆಳ ನೀರಿನಲ್ಲಿರುವ ಪೊವನ್ ಮೀನಾಗಿ ನಾನು
ಇಲ್ಮಾರಿನೆನ್ ನುಡಿದ
ಹೀಗಾದರೂ ನನ್ನಿಂದ ಪಾರಾಗಲಾರೆ
ಪೈಕ್ ಮೀನಾಗಿ ಹಿಂಬಾಲಿಸಿ ಅಲ್ಲಿಗೇ ಬರುವೆ

ಕೈಲಾಗದ ಹೆಣ್ಣು ಶೋಕ ಮಾಡಿದಳು
ತಾಮ್ರ ನಡುಪಟ್ಟಿಯ ಹೆಣ್ಣು ಕಣ್ಣೀರನಿಟ್ಟಳು

ಇಲ್ಮಾರಿನೆನ್ ಕೇಳಿಲ್ಲಿ ಬಿಡದಿದ್ದರೆ ನನ್ನ
ನಾ ಹೋಗಿ ಅಡಗುವೆ ಕಾಡಿನಲ್ಲಿ
ತುಪ್ಪಳದ ಅಳಿಲಾಗಿ ಬಂಡೆ ಮರೆಯಲ್ಲಿ
ಇಲ್ಮಾರಿನೆನ್ ನುಡಿದ
ಹೀಗಾದರೂ ನನ್ನಿಂದ ಪಾರಾಗಲಾರೆ
ನೀರು ನಾಯಾಗಿ ಹಿಂಬಾಲಿಸಿ ಅಲ್ಲಿಗೇ ಬರುವೆ

ಕೈಲಾಗದ ಹೆಣ್ಣು ಶೋಕ ಮಾಡಿದಳು
ತಾಮ್ರ ಪಟ್ಟಿಯ ಹೆಣ್ಣು ಕಣ್ಣೀರನಿಟ್ಟಳು
ಇಲ್ಮಾರಿನೆನ್ ಕೇಳಿಲ್ಲಿ ಬಿಡದಿದ್ದರೆ ನನ್ನ
ಹಾರುವೆನು ಮೇಲಕ್ಕೆ ಹಕ್ಕಿಯಾಗಿ
ಇದ್ದು ಬಿಡುವೆ ಮುಗಿಲ ಮರೆಯಲ್ಲಿ ಅಡಗಿ
ಇಲ್ಮಾರಿನೆನ್ ನುಡಿದ
ಹೀಗಾದರೂ ನನ್ನಿಂದ ಪಾರಾಗಲಾರೆ
ಹದ್ದಾಗಿ ಹಿಂಬಾಲಿಸಿ ಅಲ್ಲಿಗೇ ಬರುವೆ

ಪಯಣ ಕಳೆದಿತ್ತು ಸ್ವಲ್ಪ ದೂರ
ಕುದುರೆ ಕಿವಿ ನಿಮಿರಿದವು ಏನೊ ಆಲಿಸುವಂತೆ
ಹಿಂಜರಿಯಿತು ಕುದುರೆ ಮುಂದೆ ಹೋಗದಂತೆ
ತಲೆ ಎತ್ತಿ ನೋಡಿದಳು
ಹಿಮದಲ್ಲಿದ್ದವು ಯಾವುದೊ ಹೆಜ್ಜೆ ಗುರುತು
ಹೋದವರು ಯಾರು ನಮಗಿಂತ ಮುಂದೆ

ಇಲ್ಮಾರಿನೆನ್ ನುಡಿದ
ಓಡಿ ಹೋಗಿದೆ ಮೊಲ ನಮಗಿಂತ ಮುಂದೆ
ದಿಕ್ಕೆಟ್ಟ ಹೆಣ್ಣು ಶೋಕ ಮಾಡಿದಳು
ನಿಟ್ಟುಸಿರು ಬಿಟ್ಟಳು ಬಿಕ್ಕಳಿಸಿ ಅತ್ತಳು
ಎಂಥ ಪಾಪಿಷ್ಟೆ ನತದೃಷ್ಟೆ ನಾನು
ಮೊಲದ ಜೊತೆ ಹೋದರೂ ಸುಖವಿತ್ತು ಬಾಳು
ಇವನ ಬಂಡಿಗಿಂತಲೂ ಚೆಂದ ಸೊಟ್ಟ ಕಾಲಿನ ದಾರಿ
ಇವನ ಸುಕ್ಕುಕಂಬಳಿಗಿಂತ ಮೊಲದ ತುಪ್ಪಳ ಚಂದ
ಇವನಿಗಿಂತಲೂ ಅದರ ಸೀಳು ತುಟಿ ಚಂದ

ಹಲ್ಲು ಕಚ್ಚಿದನು ಪಕ್ಕ ತಿರುಗಿದನು
ಗಡಗಡ ಸದ್ದಲ್ಲಿ ಬಂಡಿ ಓಡಿತು ಮುಂದೆ
ಪಯಣ ಕಳೆದಿತ್ತು ಸ್ವಲ್ಪ ದೂರ

ತಲೆ ಎತ್ತಿ ನೋಡಿದಳು
ಹಿಮದಲ್ಲಿದ್ದವು ಹೊಸ ಹೆಜ್ಜೆ ಗುರುತು
ಹೋದವರು ಯಾರು ನಮಗಿಂತ ಮುಂದೆ
ಇಲ್ಮಾರಿನೆನ್ ನುಡಿದ

ಓಡಿ ಹೋಗಿದೆ ನರಿ ನಮಗಿಂತ ಮುಂದೆ
ದಿಕ್ಕೆಟ್ಟ ಹೆಣ್ಣು ಶೋಕ ಮಾಡಿದಳು
ನಿಟ್ಟುಸಿರುಬಿಟ್ಟಳು ಬಿಕ್ಕಳಿಸಿ ಅತ್ತಳು
ನರಿಯ ಜೊತೆ ಹೋದರೂ ಸುಖವಿತ್ತು ಬಾಳು
ಇವನ ಬಂಡಿಗಿಂತಲೂ ಚಂದ ನರಿ ಎಳೆವ ಬಂಡಿ
ಇವನ ಸುಕ್ಕು ಕಂಬಳಿಗಿಂತ ನರಿಯ ತುಪ್ಪಳ ಚಂದ
ಇವನಿಗಿಂತಲೂ ಆದರ ಸೀಳು ತುಟಿ ಚಂದ

(ಇದೇ ರೀತಿ ಮುಂದೆ ತೋಳದ ವಿಷಯಕ್ಕೂ ಹೇಳುತ್ತಾಳೆ)

ಹಲ್ಲು ಕಚ್ಚಿದನು ಪಕ್ಕ ತಿರುಗಿದನು
ಬಂಡಿ ಓಡಿತು ಮುಂದೆ ರಟ ರಟನೆ ಸದ್ದು
ಇರುಳಲ್ಲಿ ತಲುಪಿದರು ಹಳ್ಳಿ ಸರಹದ್ದು
ಬಳಲಿದ್ದ ಕಮ್ಮಾರ ಪಯಣದಿಂದ
ಮಲಗಿಯೇ ಬಿಟ್ಟ ಬಲು ಗಾಢ ನಿದ್ದೆ
ಗಂಡನಲ್ಲದ ಪುರುಷ ನಿದ್ದೆ ಮಾಡುತಲಿದ್ದ
ಅವನನ್ನೇ ನೋಡುತ್ತಾ ನಕ್ಕುಬಿಟ್ಟಳು ಅವಳು

ಬೆಳಗಾಯಿತು ಎದ್ದ
ಚಿಂತೆ ಕವಿದಿತ್ತು ಮನಸು ಮಂಕಾಗಿತ್ತು
ತಲೆ ಕೊಡವಿದ ಜೋರಾಗಿ ಕೂದಲೆಲ್ಲವೂ ಕೆದರಿ
ಮನದಲ್ಲೆ ಯೋಚಿಸಿತ್ತಾ ಹೀಗಂದುಕೊಂಡ
ಏನು ಮಾಡಲಿ ಇವಳ ಮಂತ್ರ ಹಾಕಿ
ಕಾಡೊಳಗಿನ ಪ್ರಾಣಿಯೊ
ನೀರೊಳಗಿನ ಜೀವಿಯೊ
ಇಲ್ಲ ಮಾಡಲಾರೆ ಇವಳ ಕಾಡು ಪ್ರಾಣಿ
ಸಲ್ಲದ ತೊಂದರೆ ಕಾಡಿಗೇಕೆ
ಮಾಡಲಾರೆ ಇವಳನ್ನು ನೀರ ಜೀವಿ
ಮೀನೆಲ್ಲವೂ ಹೆದರಿ ಓಡಬೇಕೆ
ತರಿದು ಹಾಕುವುದೇ ಸರಿ ಕತ್ತಿಯಿಂದ
ನಿವಾರಿಸುವೆ ಇವಳನ್ನು ಕತ್ತಿಯಿಂದ

ಅರಿವಾಯಿತು ಕತ್ತಿಗೆ ಇವನ ಉದ್ದೇಶ
ಅರ್ಥವಾಯಿತು ಕತ್ತಿಗೆ ವೀರನಾಡಿದ ಮಾತು
ಅದು ಹೇಳಿತು ಹೀಗೆ
ನನ್ನನ್ನು ಮಾಡಿದ್ದು ಈ ಕೆಲಸಕಲ್ಲ
ಹೆಣ್ಣು ಜೀವವನು ತೆಗೆಯಲಲ್ಲ
ಕೈಲಾಗದವರನ್ನು ಕೊಲೆ ಮಾಡಲಲ್ಲ

ಇಲ್ಮಾರಿನೆನ್ ಕೂಡಲೇ ಪಠಿಸಿದನು ಮಂತ್ರ
ಕೋಪದಲಿ ಶಪಿಸಿದನು ಆಗು ಕಡಲಿನ ಹಕ್ಕಿ
ಕಡಿದಾದ ಬಂಡೆಗಳಡಿ ಅರಚಾಡಿಕೊಂಡಿರುವ
ಚಾಚಿದಂಚಲ್ಲಿ ಮುಲುಕಾಡಿಕೊಂಡಿರುವ
ಬಿರುಗಾಳಿಗೆ ಕಂಗೆಟ್ಟು ಸೆಣಸಾಡುತಿರುವಂಥ
ಕಡಲ ಹಕ್ಕಿ ಆಗೆಂದು ಶಾಪ ಹಾಕಿದನು

ಬಂಡಿ ಏರಿದನು
ಮನಸು ಕುಗ್ಗಿತ್ತು ತಲೆಯು ಜೋಲಿತ್ತು
ತನ್ನ ನಾಡಿಗೆ ಅವನು ಹಿಂದಿರುಗಿ ಬಂದ
ಬಂದವನು ತಲುಪಿದ ಪರಿಚಯದ ಭೂಮಿ

ಹಿರಿಯ ದೃಢಚಿತ್ತ ವೆಯ್ನಾಮೊಯ್ನನ್
ಎದುರುಗೊಳ್ಳಲು ಬಂದ ಕೇಳಿದನು ಹೀಗೆ
ಕಮ್ಮಾರ ಸೋದರನೆ ಯಾಕೆ ಹೀಗಿರುವೆ
ಹೇಗಿರುವರು ಅವರು ಪಹಜೋಲದವರು

ಇಲ್ಮಾರಿನೆನ್ ನುಡಿದ
ಹೇಗಿರುವೆ ಎನುವಿಯಾ
ಸದಾ ಬೀಸುವುದು ಸ್ಯಾಂಪೊ ಗಿರಣಿ
ತಿರುಗುತ್ತಲೆ ಇರುವುದು ಚಿತ್ತಾರ ಹೊದಿಕೆ
ಬೇಕಾಗುವ ದಿನಸಿ ಒಂದು ದಿನ ಬೀಸುವುದು
ಮಾರುವುದಕೆಂದು ಎರಡನೆ ದಿನ ಬೀಸುವುದು
ಅದಕ್ಕೆ ಹೇಳುವೆನು ನಿಜವನ್ನೆ ನುಡಿಯುವೆನು
ಮತ್ತೆ ಮತ್ತೆ ಅದನ್ನೆ ಹೇಳುವೆನು

ಪೊಹಜೊಲಾದಲ್ಲಿದೆ ಸ್ಯಾಂಪೊ ಗಿರಣಿ
ಹೇಗಿರುತ್ತಾರವರು ಪೊಹಾಜೊಲಾದವರು

ಉತ್ತುವರು ಬಿತ್ತುವರು ಎಲ್ಲ ಸಮೃದ್ಧಿ
ಅನಂತ ಕಾಲದವರೆಗೆ ಎಲ್ಲ ಸುಕ್ಷೇಮ

ವೆಯ್ನಾಮೊಯ್ನನ್ ಕೇಳಿದನು
ಅಯ್ಯಾ ಸೋದರ ಇಲ್ಮಾರಿನೆನ್
ಬಿಟ್ಟೆಲ್ಲಿ ಬಂದೆ ಮಡದಿಯನ್ನು
ಚೆಲುವಿಕೆಗೆ ಹೆಸರವಳ ಬಿಟ್ಟೆಲ್ಲಿ ಬಂದೆ

ಇಲ್ಮಾರಿನೆನ್ ನುಡಿದ
ಅವಳೆಂಥ ಪತ್ನಿಯೊ ಹೇಳಬೇಕೆ
ಕಡಲ ಹಕ್ಕಿಯಾಗೆಂದು ಶಾಪ ಕೊಟ್ಟೆ
ಅವಳಾಗಿರುವಳೀಗ ಕಡಲ ಹಕ್ಕಿ
ಕೋಡುಗಲ್ಲುಗಳೆಡೆ ಅರಚುತ್ತ ಕಿರುಚುತ್ತ
ಶಿಲೆ ಬಂಡೆಗಳಲ್ಲಿ ಊಳಿಟ್ಟು ಮುಲುಕುತ್ತ
ತಡೆಯಿಲ್ಲದೆ ಅರಚಾಡುವ ಗದ್ದಲದ ಹಕ್ಕಿ

25. ಪೊಹಜೊಲಾಗೆ ದಂಡಯಾತ್ರೆ ಮತ್ತು ಕ್ಯಾಂಟೀಲ್ ವಾದ್ಯ

ವೆಯ್ನಾಮೊಯ್ನನ್ ಸ್ಯಾಂಪೊ ತಂದು ಬಿಡಲು ತನ್ನ ಜೊತೆ ಪೊಹೊಜೊಲಾಗೆ ಬರುವಂತೆ ಇಲ್ಮಾರಿನೆನ್‌ನನ್ನು ಹೊರಡಿಸುತ್ತಾನೆ. ದೋಣಿಯಲ್ಲಿ ಕುಳಿತು ಹೊರಡುತ್ತಾರೆ. ದಡದಲ್ಲಿದ್ದ ಲೆಮಿನ್ಕಾಯ್ನನ್ ಅವರ ಪಯಣದ ವಿಷಯ ತಿಳಿದು ತಾನೂ ಜೊತೆಗೆ ಬರುವುದಾಗಿ ಹೇಳುತ್ತಾನೆ. ಮೂರನೆಯ ಜೊತೆಗಾರನಾಗಿ ಬರಲು ಅವನಿಗೆ ಒಪ್ಪಿಗೆ ಸಿಗುತ್ತದೆ. ಜಲಪಾತದ ಬಳಿ ಅವರ ದೋಣಿಯನ್ನು ಮಹಾ ಪೈಕ್ ಮೀನಿನ ಬೆನ್ನು ತಡೆಯುತ್ತದೆ. ಪೈಕ್‌ನ್ನು ಕೊಲ್ಲುತ್ತಾರೆ. ಆದರ ಮುಂಭಾಗವನ್ನು ದೋಣಿಗೆ ತಂದು ಬೇಯಿಸಿ ತಿನ್ನುತ್ತಾರೆ. ಪೈಕ್ ದವಡೆ ಮೂಳೆಯಿಂದ ವೆಯ್ನಾಮೊಯ್ನನ್ ಕ್ಯಾಂಟೀಲ್ ವಾದ್ಯ ಮಾಡುತ್ತಾನೆ. ದೋಣಿಯಲ್ಲಿದ್ದವರೆಲ್ಲ ಅದನ್ನು ನುಡಿಸಲು ಯತ್ನಿಸಿ ವಿಫಲರಾಗುತ್ತಾರೆ.

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಹೊರಗೆಳೆದ ಒರೆಯಿಂದ ಚೂಪುಗತ್ತಿ
ಪೈಕ್ ಹೋಳು ಮಾಡಲು ಮೀನು ತುಂಡು ಮಾಡಲು
ಹೇಳಿದನು ಹೀಗೆ:
ಕಿರಿ ವಯಸಿನ ಹುಡುಗಿಯರು ಅಡುಗೆಯನು ಮಾಡಲಿ
ನಾವು ಹಿಡಿದ ಮೀನು ನಮ್ಮ ಉಪಹಾರಕಾಗಲಿ

ಹತ್ತು ಹುಡುಗಿಯರು ಬೇಯಿಸಿದರು ಮೀನು
ಚೆಲ್ಲಿದರು ಮೂಳೆ ದಿಬ್ಬಗಳ ಮೇಲೆ
ಕಲ್ಲುಬಂಡೆಯ ಮೇಲೆ ಮೀನು ಮೂಳೆ
ವೆಯ್ನಾಮೊಯ್ನನ್ ಹಿರಿಯ ದೃಢಚಿತ್ತ
ನೋಡಿದನು ಇದನು
ಏನು ಮಾಡಬಹುದು ಈ ಹಲ್ಲು ದವಡೆಯಿಂದ
ಅತಿಕುಶಲ ಕಮ್ಮಾರಗೊಪ್ಪಿಸಿದರಿದನು

ಇಲ್ಮಾರಿನೆನ್ ನುಡಿದ
ಕೆಲಸಕ್ಕೆ ಬಾರದ ಮೂಳೆ ಯಾತಕೂ ಬರದು
ಎಂಥ ನಿಪುಣ ಕಮ್ಮಾರಗೆ ಕೊಟ್ಟರೂ ನೀನು

ಏನೂ ಮಾಡಲು ಬರದು ಈ ಮೂಳೆಯಿಂದ
ವೆಯ್ನಾಮೊಯ್ನನ್ ಹಿರಿಯ ದೃಢಚಿತ್ತ ನುಡಿದ
ಹಾರ್ಪ್ ವಾದ್ಯ ಮಾಡಬಹುದು ಈ ಮೂಳೆಯಿಂದ
ಮಾಡುವಂತಹ ನಿಪುಣ ಈ ಮೂಳೆಯಿಂದ

ಸ್ವತಃ ವೆಯ್ನಾಮೊಯ್ನನ್ ಕುಳಿತ
ಹಾರ್ಪ್ ವಾದ್ಯ ಮಾಡಲು
ನಾದ ಹೊರಡಿಸಿದ ಪೈಕ್ ಮೂಳೆಯಿಂದ
ಕೊಡುವುದೀ ವಾದ್ಯ ಅಮರ ಆನಂದ
ಯಾವುದರಿಂದವನು ಮಾಡಿದನು ವಾದ್ಯ
ಪೈಕ್ ಮೀನಿನ ದವಡೆ ಎಲುಬಿಂದ
ವಾದ್ಯದ ಬಿರಟೆ ಯಾವುದರಿಂದಾಯಿತು
ಪೈಕ್ ಮೀನಿನ ದಂತದಿಂದ
ವಾದ್ಯದ ತಂತಿ ಯಾವುದರಿಂದಾಯಿತು
ಪೈಕ್ ಮೀನಿನ ಕೋಶಗಳಿಂದ
ಸಿದ್ಧವಾಯಿತು ಸಂಗೀತ ವಾದ್ಯ
ಪೂರ್ಣವಾಯಿತು ಕ್ಯಾಂಟೀಲ್ ವಾದ್ಯ

ಯುವಕರೆಲ್ಲರೂ ನುಗ್ಗಿದರು ಮುಂದೆ
ವಿವಾಹಿತ ವೀರರೂ ಉಳಿಯಲಿಲ್ಲ ಹಿಂದೆ
ಅರ್ಧ ಬೆಳೆದ ಹುಡುಗರು ಅವರಂತೆಯೆ ಬಾಲೆಯರು
ಚಿಕ್ಕ ತರುಣಿಯರು ವೃದ್ಧ ಹೆಂಗಸರು
ವಾದ್ಯ ನೋಡಲು ನುಗ್ಗಿದರು ಮುಂದೆ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಹೇಳಿದನು ಕಿರಿಯರಿಗೆ ಹೇಳಿದನು ಹಿರಿಯರಿಗೆ
ಎಲ್ಲ ಜನರಿಗೆ ಹೇಳಿದನು ಹೀಗೆ
ಬಾಜಿಸಿರಿ ಬೆರಳಿಂದ ವಾದ್ಯವನ್ನು
ಮೂಳೆಯಿಂದಾದ ಈ ಕ್ಯಾಂಟೀಲನ್ನು
ಬಾಜಿಸಿದರು ಕಿರಿಯರು ಬಾಜಿಸಿದರು ಹಿರಿಯರು
ಬಾಜಿಸಿದರಂತೆಯೆ ಮಧ್ಯವಯಸವರು
ಬೆರಳಾಡಿಸಿ ನೋಡಿದರು ಚಿಕ್ಕ ಚಿಕ್ಕ ಹುಡುಗರು
ತಲೆ ನಡುಗುವ ಮುದುಕರು
ಆಗಲಿಲ್ಲ ಯಾರಿಗೂ ನಾದವನು ಬರಿಸುವುದು
ರಾಗವನು ರಚಿಸುವುದು ಆಗಲಿಲ್ಲ

ಲೆಮಿನ್ಕಾಯ್ನನ್ ಹೇಳಿದ
ಏ ಹುಡುಗರ ನಿಮ್ಮ ಬುದ್ಧಿಯೆ ಅರ್ಧ
ಏ ಹುಡುಗಿಯರ ನೀವೆಲ್ಲ ಪೆದ್ದು
ಇನ್ನುಳಿದ ಜನರೂ ಎಲ್ಲರೂ ಮೊದ್ದು
ನುಡಿಸುವುದು ಹೀಗಲ್ಲ ನೀವು ಕಲಿತವರಲ್ಲ
ಇಲ್ಲಿ ಕೊಡಿ ನನಗೆ ನಾನು ನುಡಿಸಿ ನೋಡುವೆ
ತಂದಿಡಿರಿ ತೊಡೆಗೆ ಹತ್ತು ಬೆರಳಿನ ತುದಿಗೆ

ಕೈಯಿಂದ ಮೇಲೆತ್ತಿ ಹಿಡಿದುಕೊಂಡ
ಒಳಗೆಳೆದು ಬೆರಳ ಕೆಳಗಿಟ್ಟುಕೊಂಡ
ಬೆರಳಾಡಿಸಿ ನೋಡಿದ ತಿರುತಿರುಗಿಸಿ ನೋಡಿದ
ಯಾವ ನಾದವೂ ಕೂಡ ಹೊರಡಲಿಲ್ಲ
ಒಂದು ರಾಗವೂ ಕೂಡ ಸೂಸಲಿಲ್ಲ

ಹಿರಿಯ ವೆಯ್ನಾಮೊಯ್ನನ್ ನುಡಿದ
ತರುಣರಲೂ ಇಲ್ಲ ಹಿರಿಯರಲೂ ಇಲ್ಲ
ಈ ವೀಣೆ ತಂತಿ ನುಡಿಸುವಂಥವರು
ಸಂಗೀತ ರಾಗ ಬರಿಸುವಂಥವರು
ಇರಬಹುದು ಅಲ್ಲಿ ಪೊಹಜೊಲಾ ನಾಡಲ್ಲಿ
ಸಂಗೀತ ರಾಗ ನುಡಿಸುವಂಥವರು

ತೆಗೆದುಕೊಂಡು ಬಂದ ಪಹಜೊಲಾ ನಾಡಿಗೆ
ಹುಡುಗರೂ ಹುಡುಗಿಯರೂ
ಎಲ್ಲರೂ ನುಡಿಸಿದರು
ಮದುವೆಯಾದ ಗಂಡಸರು
ಮದುವೆಯಾದ ಹೆಂಗಸರು
ಮನೆಗಳ ಯಜಮಾನಿಯರು
ತಿರುಗಿಸಿದರು ತಿರುಚಿದರು
ಬಿಗಿಯಾಗಿ ಹಿಡಿದರು
ಹತ್ತು ಬೆರಳ ತುದಿಯಲ್ಲಿ ಬಿಗಿಯಾಗಿ ಹಿಡಿದರು
ಯುವಕರೆಲ್ಲರೂ ಬಂದು ನೋಡಿದರು
ಬೇರೆ ಬೇರೆ ಅಂತಸ್ತಿನ ಜನ ಕೂಡ ಬಂದರು
ಆಗಲಿಲ್ಲ ಯಾರಿಗೂ
ನಾದ ಹೊರಡಿಸುವುದು

ಹೆಣೆದುಕೊಂಡವು ತಂತಿ ಒಂದರಲ್ಲೊಂದು
ಕುಯ್ಯುಗುಟ್ಟಿತು ತಂತಿ ಬಲು ದುಃಖದಿಂದ
ಸ್ವರಕ್ಕೆ ಸ್ವರಗಳು ಜೊತೆಗೂಡಲಿಲ್ಲ
ಕರ್ಣ ಕಠೋರವೇ ಸಂಗೀತವೆಲ್ಲ
ಕುರುಡ ಮಲಗಿದ್ದ ಮೂಲೆಯಲ್ಲಿ
ಮುದುಕ ಮಲಗಿದ್ದ ಒಲೆಯ ಬಳಿಯಲ್ಲಿ
ನಿದ್ದೆ ಕೆಟ್ಟಿತು. ಅಲ್ಲಿಂದಲೇ ಕೂಗಿದ
ನಿಲ್ಲಿಸಿರಿ ಸಾಕು ನಿಮ್ಮ ನುಡಿಸಾಟ
ಸಾಕು ಮಾಡಿರಿ ಇನ್ನು ಕೇಳಲಾರೆ
ಕಿವಿ ಒಡೆದು ಹೋಗುತಿದೆ ತಲೆಯೆಲ್ಲ ಸಿಡಿಯುತಿದೆ
ನಿದ್ದೆ ಇನ್ನೊಂದು ವಾರ ಬರದಂತೆ ಮಾಡಿದಿರಿ

ಕೊಡದಿದ್ದರೆ ಆನಂದ ಈ ತಂತಿ ವಾದ್ಯ
ಆಗದಿರೆ ಜೋಗುಳ ದಣಿದಂತಹ ಮನಕೆ
ನೀಡದಿರೆ ಶಾಂತಿ ಗೊಂದಲದ ಮನಕೆ
ಎಸೆದು ಬಿಡಿ ನೀರಿಗೆ ಮುಳುಗಿಸಿರಿ ಆಳಕ್ಕೆ
ಕಳಿಸಿಬಿಡಿ ಅಲ್ಲಿಗೆ ಅದು ಬಂದಂತಹ ಜಾಗಕ್ಕೆ
ಕೊಟ್ಟುಬಿಡಿ ಅದನು ಮಾಡಿದವನ ಕೈಗೇ

ವಾದ್ಯ ನುಡಿಯಿತು ಹೀಗೆ
ಇಲ್ಲ ಮುಳುಗಲಾರೆನು ನೀರಿನಲಿ ನಾನು
ಬೀಳಲಾರೆನು ಅಲೆಗಳಡಿಯಲ್ಲಿ
ನುಡಿವೆ ನಾನು ಸಂಗೀತಗಾರನಿಗೆ
ನನ್ನ ಸೃಷ್ಟಿಸಲು ಶ್ರಮಪಟ್ಟ ವ್ಯಕ್ತಿಗೆ

ತೆಗೆದುಕೊಂಡು ಹೋದರು ಜೋಪಾನವಾಗಿ
ತಂದೊಪ್ಪಿಸಿದರು ಬಲು ಎಚ್ಚರದಿಂದ
ತಂದಿಟ್ಟರು ಅದನ್ನು ಕರ್ತೃವಿನ ಮಡಿಲಲ್ಲಿ.

26. ವೆಯ್ನಾಮೊಯ್ನನ್ ಸಂಗೀತ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಪುರಾತನ ಚಾರಣಿಗ
ಕೈ ಬೆರಳು ತೊಳೆದು ಹಾರ್ಪ್ ವಾದ್ಯ ಹಿಡಿದು
ಆನಂದ ಶಿಲೆಯಲ್ಲಿ ಆಸೀನನಾದ
ಬೆಳ್ಳಿಯಂತೆಯೆ ಹೊಳೆವ ಬೆಟ್ಟದಲ್ಲಿ
ಚಿನ್ನದ ಪೊದೆ ಮೇಲೆ ಬೆಟ್ಟದಲ್ಲಿ

ಬೆರಳಿಂದ ಹಿಡಿದು ತೊಡೆಯ ಮೇಲಿಟ್ಟು
ಹೀಗೆ ಹೇಳಿದನು ಎಲ್ಲರನು ಕುರಿತು
ಕೇಳಿ ಬನ್ನಿರಿ ಗಾನ ಕೇಳದವರು ಮೊದಲು
ಸಂತಸದಿ ಆಲಿಸಿರಿ ಈ ಪುರಾತನ ಗಾನ
ಕ್ಯಾಂಟೀಲ್ ವಾದ್ಯದಲ್ಲಿ ನಿನದಿಸುವ ಗಾನ

ನಿಪುಣ ವಾದಕ ಬಾಜಿಸಿದ ಪೈಕ್ ಎಲುಬಿನ ವಾದ್ಯ
ಚಲಿಸಿದವು ಬೆರಳುಗಳು ತುಂಬ ಚುರುಕಾಗಿ
ಹೆಬ್ಬೆರಳು ಮೇಲೆತ್ತಿ ಹಗುರವಾಗಿ
ಸ್ವರವನನುಸರಿಸಿ ಸ್ವರವು ಹೊರಟಂತೆ
ಆನಂದದ ಮೇಲೆ ಆನಂದದ ತೆರೆ ಎದ್ದು
ವೃದ್ಧ ವೆಯ್ನಾಮೊಯ್ನನ್ ಬಾಜಿಸಿದ ವಾದ್ಯ

ಆ ಕಾಡಿನೊಳಗಿರಲಿಲ್ಲ
ಯಾವ ನಾಲ್ಕು ಕಾಲಿನ ಜೀವಿ
ಕುಪ್ಪಳಿಸಿ ನೆಗೆವಂಥ ಪ್ರಾಣಿ ಜೀವಿ
ಅವನ ಹಾಡನ್ನು ಆಲಿಸದ ಜೀವಿ
ಬೆರಗಾಗಿ ತಲೆದೂಗಿ ಆನಂದಿಸದ ಜೀವಿ

ಸುತ್ತಲೂ ಸೇರಿದವು ಎಲ್ಲ ಅಳಿಲುಗಳು
ಕೊಂಬೆಯಿಂದ ಕೊಂಬೆಗೆ ಮೇಲೇರಿ ಬಂದು
ತುಪ್ಪಳದ ಎರ್ಮಿನ್ ಗುಂಪಾಗಿ ಬಂದವು
ತಡಿಕೆ ಬೇಲಿಯ ಮೇಲೆ ಆಸೀನವಾದವು

ಚಿಮ್ಮಿ ಓಡುವ ಜಿಂಕೆ ಬಯಲಿನಲ್ಲಿ
ಚಿಗರೆ ತಲೆದೂಗಿ ಆನಂದದಲ್ಲಿ
ಎಚ್ಚೆತ್ತವು ತೋಳ ಜವುಗಿನಲ್ಲಿ
ಮೇಲೆದ್ದವು ಕರಡಿ ಪೊದೆಗಳಲ್ಲಿ

ಓಡೋಡಿಬಂದವು ತೋಳ ದೂರದಿಂದ
ತೂರಿ ಬಂದವು ಕರಡಿ ಪೊದೆಗಳಿಂದ
ಬೇಲಿ ಮೇಲೇರಿ ಪಕ್ಕ ಪಕ್ಕದಿ ಕುಳಿತು
ಕುಸಿದು ಬಿದ್ದಿತು ಬೇಲಿ ಬಂಡೆ ಮೇಲೆ
ತಡಬಡಿಸಿ ಏರಿದವು ಫರ್ ಮರಗಳನ್ನು
ಇಷ್ಟೆಲ್ಲ ಸಾಹಸ ಸಂಗೀತಕೆಂದು
ಬೆರಗಿನಾನಂದಕ್ಕೆ ತಲೆದೂಗಲೆಂದು

ವನದೇವನ ನಾಡಿನ ಬಲು ದೊಡ್ಡ ಸಂತ
ಕಾನನದ ಒಡೆಯ ಕಾನನದ ಜನರು
ಇದ್ದೆಲ್ಲ ಹುಡುಗರು ಎಲ್ಲ ಹೆಂಗಸರು
ಏರಿದರು ಪರ್ವತದ ಶಿಖರ ತುದಿಯನ್ನು
ವನದೇವನ ಒಡತಿ ಚುರುಕು ಕಣ್ಣಿನ ಹೆಣ್ಣು
ಚಂದ ಕಾಲ್ಚೀಲ ಬಣ್ಣ ನೀಲಿ
ಬಿಗಿಯಾಗಿ ಕಟ್ಟಿ ಕೆನ್ನೀಲಿ ಪಟ್ಟಿ
ಏರಿದಳು ಬಾಗಿ ಬೆಳೆದಿದ್ದ ಬರ್ಚ್ ವೃಕ್ಷ
ಸಂಗೀತ ಆಲಿಸಲು ಕೇಳಿ ಆನಂದಿಸಲು

ಬಾನಲ್ಲಿ ವಿಹರಿಸುವ ಎಲ್ಲ ಹಕ್ಕಿ
ಎರಡು ರೆಕ್ಕೆಯಿಂದ ಮೇಲೆ ಹಾರಾಡುವ ಹಕ್ಕಿ
ಹಿಂದಕೂ ಮುಂದಕೂ ತೇಲಿ ಹಾರುವ ಹಕ್ಕಿ
ಎಷ್ಟು ಸಾಧ್ಯವೋ ಅಷ್ಟು ವೇಗವಾಗಿ
ಹಾರಿಬಂದವು ಅವನ ಗಾನಕ್ಕಾಗಿ

ಹದ್ದು ಆಲಿಸಿತು ಆಕಾಶದಲ್ಲಿ
ಸುವೊಮಿಯಿಂದ ಬಂದ ಮಧುರ ನಾದ
ಗರಿ ಮೂಡದ ಮರಿಗಳನು ಬಿಟ್ಟು ಗೂಡಲ್ಲಿ
ಕೇಳ ಬಂದಿತು ಅವನ ಮಧುರ ಗಾನ

ಆಗಸದ ಹದ್ದುಗಳು ಮುಗಿಲಂಚಿನ ಡೇಗೆಗಳು
ನೀರೊಳಗಿನ ಹಕ್ಕಿಗಳು ಹಿಮ ಜವುಗಿನ ಹಂಸಗಳು
ಬಲು ಪುಟ್ಟ ಹಕ್ಕಿಗಳು ಚಿಲಿಪಿಲಿಯ ಪಕ್ಷಿಗಳು
ಹಾಡುಹಕ್ಕಿಗಳು ನೂರಾರು ಸಾವಿರವು
ತೂಗಿದವು ತಲೆಯನ್ನು ಆನಂದದಿಂದ
ಅವನ ಭುಜ ಏರಿ ತುಂಬ ಮುದದಿಂದ

ಸೃಷ್ಟಿಕರ್ತನ ಪುತ್ರಿಯರೂ ಬಂದರು
ಬಾನಂಗಳದ ಚೆಲುವೆ ರಂಭೆಯರು
ಕುಳಿತು ಆಲಿಸಿದರು ಮಳೆ ಬಿಲ್ಲಮೇಲೆ
ಕುಳಿತು ಕೇಳಿದರು ಮುಗಿಲುಗಳ ಮೇಲೆ

ಕುತ್ತರ್ ಎಂಬುವಳು ಚಂದ್ರಪುತ್ರಿ
ಪಿವತರ್ ಎಂಬುವಳು ಸೂರ್ಯಪುತ್ರಿ
ಬಳುಕಾಡುವ ಚೆಲುವೆಯರು
ಕಲಾ ಪ್ರವೀಣೆಯರು
ಬಂಗಾರ ವಸ್ತ್ರವನು ನೇಯುತ್ತಿದ್ದರು ಅವರು
ಬೆಳ್ಳಿ ನೂಲನ್ನು ಹೆಣೆಯುತ್ತಿದ್ದರು ಅವರು
ಕೆಂಪು ಮುಗಿಲಲ್ಲಿ ಮಳೆ ಬಿಲ್ಲ ಸೆರಗಲ್ಲಿ

ಇಂಪು ಸಂಗೀತ ಕೇಳಿಸಿತು ಕಿವಿಗೆ
ಬಿದ್ದು ಹೋಯಿತು ಹೆಣಿಗೆ ಕೈಯಿಂದ ಕೆಳಗೆ
ಬಿದ್ದು ಹೋಯಿತು ಲಾಳಿ ಕೈಯಿಂದ ಕೆಳಗೆ
ಮುರಿದು ಹೋದವು ಕನಕ ಪಟ್ಟಗಳು
ಮುರಿದು ಹೋದವು ಬೆಳ್ಳಿ ದಂಡಗಳು ..

ಇರಲಿಲ್ಲ ಯಾವುದೇ ನೀರೊಳಗಿನ ಜೀವಿ
ಆರು ಗರಿಗಳಲ್ಲಿ ಚಲಿಸಾಡುವ ಜೀವಿ
ದೊಡ್ಡ ಗುಂಪುಗಳ ಮತ್ಸ್ಯ ಜೀವಿ
ಅವನ ಗಾನವನು ಕೇಳದಿಹ ಜಿವಿ
ಕೇಳುತ್ತ ಗಾನ ಮೈ ಮರೆಯದ ಜೀವಿ

ಈಜುತ್ತ ಬಂದವು ಪೈಕ್ ಮೀನುಗಳೆಲ್ಲ
ತೇಲುತ್ತ ಬಂದವು ನೀರು ನಾಯಿ
ಬಂಡೆಗಳ ಮರೆಯಿಂದ ಸಾಲ್ಮನ್‌ಗಳು ಬಂದವು

ಕಡಲಾಳದಿಂದ ಪೋವನ್‌ಗಳು ಬಂದವು
ಚಿಕ್ಕ ಪುಟ್ಟ ಮೀನುಗಳು ಬಿಳಿಯ ಪೋವನ್ ಮೀನುಗಳು
ಬಂದುವೆಲ್ಲವು ತೀರದೆಡೆಗೆ
ವೆಯ್ನಾ ಗಾನ ಕೇಳುವುದಕೆ

ಅಹ್ತೋ ಎಂಬ ಕಡಲ ದೇವ
ಬಂದ ಮೇಲಕ್ಕೆ ನೀರಿನಿಂದ
ನೀರ ನೈದಿಲೆ ಮೇಲೆ ಕುಳಿತುಕೊಂಡ
ಗಾನ ಕೇಳಿ ತಲೆ ತೂಗುತ್ತ ಅಂದ
ಕೇಳಿಯೇ ಇರಲಿಲ್ಲ ಇಂಥ ಗಾನ
ವೆಯ್ನಾಮೊಯ್ನನ್ ನುಡಿಸುವ ಮಧುರ ಗಾನ
ಆದಿ ಪುರಾತನ ಚಾರಣನ ಗಾನ

ಸೊಟ್ಕೊ ಎಂಬುವರು ಅಕ್ಕ ತಂಗಿಯರು
ಹಂಸೆಗಳ ರಕ್ಷಾ ಕಿನ್ನರಿಯರವರು
ಬಾಚುತ್ತಿದ್ದರು ಹೆರಳು ತಿದ್ದುತ್ತಿದ್ದರು ಕುರುಳು
ಬೆಳ್ಳಿ ಬಾಚಣಿಗೆ ಕನಕ ಸೀರಣಿಗೆ
ನಿಪುಣ ವಾದನವ ಕೇಳಿದರು ಆಗ
ಎಸೆದರು ನೀರಿಗೆ ಬಾಚಣಿಗೆಯನ್ನು
ಎಸೆದರು ನೀರಿಗೆ ಸೀರಣಿಗೆಯನ್ನು
ಬಾಚಿರದ ಕೇಶ ಹಾಗೆಯೇ ಬಿಟ್ಟರು
ಬೈತಲೆ ತೆಗೆಯದೆ ಹಾಗೆಯೇ ಬಿಟ್ಟರು

ಜಲ ಮಾತೆಯೂ ಕೂಡ ಬಂದಳು ಮೇಲಕ್ಕೆ
ನೀರೊಳಗಿಂದ ಅಲೆಗಳ ಮೇಲಕ್ಕೆ
ಕುಳಿತಳು ಹತ್ತಿ ಶಿಲೆ ಬಂಡೆ ಮೇಲೆ
ಪರಮಾದ್ಭುತ ಗಾನ ಕೇಳುತ್ತ ತೂಗಿದಳು
ಮನ ಮೋಹಕ ಗಾನಕ್ಕೆ ತಲೆಯ ತೂಗಿದಳು
ಹಾಗೆಯೆ ತೂಗುತ್ತ ಜಾರಿದಳು ನಿದ್ರೆಗೆ
ಜೋಂಪಿನಲಿ ಅವಳು ಬಿದ್ದು ಬಿಟ್ಟಳು ಕೆಳಗೆ
ಬಂಡೆಗಳ ನಡುವಿದ್ದ ಕೊರಕಲಲ್ಲಿ

ನುಡಿಸಿದನು ವೆಯ್ನಾಮೊಯ್ನನ್
ದಿನವೊಂದು ದಿನವೆರಡು
ಹೀಗೆಯೇ ನುಡಿಸಿದನು ಸಂಗೀತ ವಾದ್ಯ

ಇರಲಿಲ್ಲ ಯಾರೂ ವೀರರೂ ಶೂರರೂ
ಹೆಂಗಸರು ಗಂಡಸರು ಜಡೆ ಹೆಣೆದ ಗರತಿಯರು
ಮೈ ಮರೆತು ಕಂಬನಿಯ ಸುರಿಸದವರು
ಗಾನಕ್ಕೆ ಎದೆ ಕರಗಿ ನೀರಾಗದವರು

ಚಿಕ್ಕವರು ದೊಡ್ಡವರು
ಮದುವೆಯಾದ ಗಂಡಸರು ಮದುವೆಯಾದ ಹೆಂಗಸರು
ಅರ್ಧ ಬೆಳೆದ ಹುಡುಗರು ತರುಣರೂ ತರುಣಿಯರು
ಎದೆ ಕರಗಿ ಅತ್ತರು ಆ ಸಂತನ ಗಾನಕ್ಕೆ

ಸ್ವತಃ ವೆಯ್ನಾಮೊಯ್ನನ್ ಕಣ್ಣಿಂದ
ಉರುಳಿದವು ಕಂಬನಿ
ಕಣ್ಣಿಂದ ಕೆಳಗೆ ಉರುಳಿದವು ಕಣ್ಣ ಹನಿ
ಬೋರೆ ಬೀಜಕೂ ದಪ್ಪ ಗುಬ್ಬಿ ತಲೆಗೂ ದಪ್ಪ

ಉರುಳಿದವು ಕಂಬನಿ ಒಂದರ ಹಿಂದೊಂದು
ಉರುಳಿದವು ಕೆಳಗೆ ಸೊಗಸು ಕೆನ್ನೆಯ ಮೇಲೆ
ಸೊಗಸು ಕೆನ್ನೆಯ ಕೆಳಗೆ ಅಗಲ ಗಲ್ಲಕ್ಕೆ
ಗಲ್ಲದಿಂದಲೂ ಕೆಳಗೆ ಹರವಾದ ಎದೆಗೆ
ಎದೆಯಿಂದ ಕೆಳಗೆ ಮೊಣಕಾಲ ಮೇಲೆ
ಮೊಣಕಾಲಿನಿಂದ ಕೆಳಗೆ ಚೆಲುವು ಪಾದಕ್ಕೆ
ಚೆಲುವು ಪಾದಗಳಿಂದ ಕೆಳಗಿದ್ದ ನೆಲಕೆ

ಐದು ಉಣ್ಣೆಯ ಅಂಗಿ ಕಂಬನಿಗೆ ನೆನೆದು
ಆರು ನಡುಪಟ್ಟಿಗಳು ಕಂಬನಿಗೆ ನೆನೆದು
ನೀಲಿ ಅಂಗಿಗಳೇಳು ಕಂಬನಿಯಲಿ ನೆನೆದು
ಮೇಲಂಗಿ ಹತ್ತು ಕಂಬನಿಯಲಿ ನೆನೆದು

ಉರುಳುತ್ತ ಇದ್ದವು ಕಂಬನಿಯ ಹನಿಗಳು
ವೆಯ್ನಾಮೊಯ್ನನ ನಯನ ದ್ವಯದಿಂದ
ನೀಲಿಕಡಲಂಚಿನವರೆಗೆ
ಉಕ್ಕಿ ಬಂದಿತು ಕಡಲು ಮೇರೆಯನು ಮೀರಿ
ಹೊಳೆವ ನೀರಿನ ತಳಕೆ ಕಣ್ಣ ಹನಿ ಜಾರಿ

ವೆಯ್ನಾಮೊಯ್ನನ್ ನುಡಿದ ಕೇಳುವಂತೆಲ್ಲರಿಗೂ
ಇರುವರೇ ಯಾರಾದರೂ ಈ ಯುವಕರಲ್ಲಿ
ಇರುವರೇ ಯಾರಾದರೂ ಈ ಕುಲೀನರಲ್ಲಿ

ತಂದೆಗೆ ತಕ್ಕ ಮಕ್ಕಳು ಯಾರಾದರೂ
ನನ್ನ ಕಣ್ಣಿನ ಹನಿ ತರುವಂಥ ಜನರು
ಕಡಲಾಳದಿಂದಾಯ್ದು ತರುವಂಥ ಜನರು

ತರುಣರೂ ಹೇಳಿದರು ಹಿರಿಯರೂ ಹೇಳಿದರು
ಯಾರಿಲ್ಲ ಅಂಥವರು ಈ ತರುಣರಲ್ಲಿ
ಯಾರಿಲ್ಲ ಅಂಥವರು ಈ ಕುಲೀನರಲ್ಲಿ
ನಿನ್ನ ಕಣ್ಣ ಹನಿ ಆಯ್ದು ತರುವಂಥ ಜನರು
ಹೊಳೆವ ನೀರಿಂದ ಮೇಲೆ ತರುವಂಥ ಜನರು

ವೆಯ್ನಾಮೊಯ್ನನ್ ಹೇಳಿದ
ಕಂಬನಿಯನಾಯ್ದು ತಂದು ಕೊಟ್ಟವರಿಗೆ
ಕೊಡುವೆ ಬಲು ಚಂದ ಹಕ್ಕಿ ಗರಿ ಉಡುಗೆ
ಅಲ್ಲೇ ಹಾರುತಿತ್ತೊಂದು ಡೊಂಬ ಕಾಗೆ
ತಂದುಕೊಡು ಕಂಬನಿಯ ನೀರಿಂದ ನನಗೆ
ಪಡೆದುಕೊ ಬಲು ಚಂದ ಗರಿ ಉಡುಪು ನಿನಗೆ

ಸಾಧ್ಯವಾಗಲಿಲ್ಲ ಕೆಲಸ ಈ ಡೊಂಬಕಾಗೆಗೆ
ನೀಲಿ ಬಾತೊಂದು ಕೇಳಿತೀ ಮಾತು
ವೆಯ್ನಾಮೊಯ್ನನ್ ಹೇಳಿದ
ಈಸುವಾಗ ನೀರಲ್ಲಿ ಮುಳುಗಿಸುವೆ ಕೊಕ್ಕು
ಆಯ್ದು ತಾ ಕಂಬನಿಯ ನೀರೊಳಗೆ ಹೊಕ್ಕು
ಕೊಡುವೆ ಕೈ ತುಂಬ ಉಡುಗೊರೆಯ ನಿನಗೆ
ಕೊಡುವೆ ಬಲು ಚಂದ ಗರಿ ಉಡುಗೆ ನಿನಗೆ

ಬಾತು ಹೋಯಿತು ಕಂಬನಿಯ ಹುಡುಕಿ
ಹೊಳೆವ ನೀರಿನ ಕೆಳಗೆ ಕಡಲಿನಾಳಕ್ಕೆ
ಪತ್ತೆ ಮಾಡಿತು ಕಂಬನಿಯ ಹನಿಯನ್ನು
ತಂದೊಪ್ಪಿಸಿತು ವೆಯ್ನಾ ಕರಗಳಿಗೆ ಅದನು

ಬದಲಾಯಿಸಿತ್ತಾಗಲೇ ಕಂಬನಿಯ ರೂಪ
ಬಂದಿತ್ತು ಕಂಬನಿಗೆ ಚೆಲುವಾದ ರೂಪ
ಆಗಿತ್ತು ಕಂಬನಿ ಹೊಳೆವಂಥ ಮುತ್ತು
ರಾಜರಿಗೆ ತಕ್ಕಂಥ ಸಿಂಗಾರ ಮುತ್ತು
ಮಹಾಜನಕಾನಂದ ಕೊಡುವಂಥ ಮುತ್ತು

27. ಕೈವಶವಾಯಿತು ಸ್ಯಾಂಪೊ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಕಮ್ಮಾರ ಇಲ್ಮಾರಿನೆನ್ ಎರಡನೆಯವನು
ಮೂರನೆಯವನು ಲೆಂಪಿಪುತ್ರ ಉತ್ಸಾಹಿ ಲೆಮಿನ್ಕಾಯ್ನನ್

ತೇಲಿದರು ಕಡಲಲ್ಲಿ ವಿಸ್ತಾರ ಅಲೆಗಳಲಿ
ಹಿಮದಲ್ಲಿ ಕೊರೆಯುವ ಮಂಕುಗ್ರಾಮಕ್ಕೆ
ಪುರುಷರನು ನುಂಗುವ ನಾಡು ಪೊಹ್ಜಾಗೆ
ವೀರರನು ಮುಳುಗಿಸುವ ನಾಡು ಪೊಹ್ಜಾಗೆ

ಯಾರು ನಡೆಸಬೇಕು ದೋಣಿಯನ್ನು
ಮೊದಲು ಕಮ್ಮಾರ ಇಲ್ಮಾರಿನೆನ್
ಕೊನೆಗೆ ನಡೆಸಿದನು ಲೆಮಿನ್ಕಾಯ್ನನ್
ದೃಢಚಿತ್ತ ಹಿರಿಯ ವೆಯ್ನಾಮೊಯ್ನನ್
ಹಿಡಿದ ಚುಕ್ಕಾಣಿ ನೊಳೆಗರೆವ ತೆರೆ ಮೇಲೆ

ಅಂತೂ ಮುಗಿಯಿತು ಪಯಣ
ಹೊರಟ ಗುರಿ ತಲುಪಿ
ದೋಣಿಯೆಳೆದರು ದಂಡೆಗೆ
ಇಟ್ಟರದನ್ನು ಕಟ್ಟಿಗೆ

ನುಗ್ಗಿದರು ತ್ವರೆಯಿಂದ ಪೊಹ್ಜಾದ ಮನೆಗೆ
ಮನೆ ಒಡತಿ ಕೇಳಿದಳು ಬಂದ ಉದ್ದೇಶ
ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಹೇಳಿದನು ಹೀಗೆ :
ಎಲ್ಲೆಲ್ಲೂ ಜನರಲ್ಲಿ ಸ್ಯಾಂಪೊವಿನ ಮಾತು
ಹೊಗಳುವರು ವೀರರು ಚಿತ್ತಾರ ಹೊದಿಕೆ
ಬಂದಿಹೆವು ನಾವದರ ಪಾಲಿಗಾಗಿ
ಅಚ್ಚರಿಯ ಹೊದಿಕೆ ನೋಡಲೆಂದು

ಪೊಹ್ಜಾದ ಒಡತಿ ಹೀಗೆಂದು ನುಡಿದಳು :
ಕೋಳಿ ಒಂದನು ಇಬ್ಬರಿಗೆ ಹಂಚುವುದು ಹೇಗೆ
ಅಳಿಲು ಒಂದನು ಮೂವರಿಗೆ ಹಂಚುವುದು ಹೇಗೆ
ಗರಗರನೆ ತಿರುಗುತಿದೆ ಗಿರಣಿ ಸ್ಯಾಂಪೊ
ಬೀಸುತಿದೆ ಭರದಿಂದ ಚಿತ್ತಾರ ಹೊದಿಕೆ
ಪೊಹಜೊಲಾ ಶಿಲೆಯ ಬೆಟ್ಟದಲ್ಲಿ
ಪೊಹಜೊಲಾ ತಾಮ್ರ ಬೆಟ್ಟದಲ್ಲಿ
ಸಂತಸವಾಗಿದೆ ನನಗೆ ಸುಭಿಕ್ಷವನು ಕಂಡು
ಅದರ ಹೆಮ್ಮೆಯ ಒಡತಿ ನಾನಾಗಿಹೆನೆಂದು

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಹೀಗೆಂದು ನುಡಿದ
ಪಾಲು ಮಾಡದಿರೆ ಸ್ಯಾಂಪೊ ನಮ್ಮೊಂದಿಗೆ
ಒಯ್ಯುವೆವು ಪೂರ್ತಿ ನಮ್ಮೊಂದಿಗೆ
ಪೊಹಜೊಲಾ ಒಡತಿ ಕೆಂಡವಾದಳು ಕನಲಿ
ಕರೆಸಿದಳು ಬೇಗದಲಿ ತನ್ನ ಜನರನ್ನು
ಬಿಚ್ಚುಗತ್ತಿಯ ಹಿಡಿದ ಯುವಕ ಭಟರನ್ನು
ಗುರಿ ಇಡಲು ಹೇಳಿದಳು ವೆಯ್ನಾ ತಲೆಗೆ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ನುಡಿಸಿದನು ಕ್ಯಾಂಟೀಲ್
ನುಡಿಸಿದನು ರಾಗ ತಲೆದೂಗುವ ರಾಗ
ಎಲ್ಲ ಕೇಳಿದರು ಮುದದಿಂದ ಬೆರಗಿಂದ
ಹೆಂಗಸರ ಮೊಗದಲ್ಲಿ ಮಂದಹಾಸ
ವೀರ ಪುರುಷರಿಗೆಲ್ಲ ಆನಂದಭಾಷ್ಪ
ಕುಸಿದುಬಿದ್ದರು ಹಾಗೇ ಹುಡುಗರೆಲ್ಲ
ಬಸವಳಿದು ಕುಳಿತರು ಬಂದ ಜನರೆಲ್ಲ
ಜೋಂಪು ಹತ್ತಿತು ಹಾಡು ಕೇಳಿದವರಿಗೆಲ್ಲ
ಹಿರಿಯರಿಗೆ ಕಿರಿಯರಿಗೆ ನಿದ್ದೆ ಕವಿಯಿತಲ್ಲ

ಬಲು ಕುಶಲಿ ವೆಯ್ನಾಮೊಯ್ನನ್ ಆದಿ ಚಾರಣಿಗ
ಜೇಬಿಗೆ ಕೈ ಹಾಕಿ ಪಾಕೇಟು ತೆಗೆದು
ಚುಚ್ಚಿದನು ಎಲ್ಲರಿಗೂ ನಿದ್ದೆ ಸೂಜಿ
ತೂಕಡಿಸವ ಕಂಗಳಿಗೆ ಭದ್ರವಾಗಿ

ರೆಪ್ಪೆ ಬಿಡದಂತೆ ಭದ್ರವಾಗಿ
ನಿದ್ದೆಯಲಿ ಮುಳುಗಿಸಿದ ಎಲ್ಲ ಜನರ
ಮುಳುಗಿಸಿದ ನಿದ್ದೆಯಲಿ ವೀರಪುಂಗವರ

ಮುಳುಗಿದರು ಎಲ್ಲರೂ ನಿದ್ದೆಯಲಿ
ಪೊಹ್ಜಾದ ಜನವೆಲ್ಲ ಜೋಂಪಿನಲ್ಲಿ

ತರಲು ಹೊರಟನು ಗಿರಣಿ ಸ್ಯಾಂಪೋ
ನೋಡಲು ಚಿತ್ತಾರ ಹೊದಿಕೆ ಗಿರಣಿ
ಹಾಕಿದ್ದರು ಭದ್ರವಾಗಿ ಬೀಗ ಒಂಭತ್ತು
ರಕ್ಷಣೆಗೆ ಸರಳುಗಳು ಸಂಖ್ಯೆ ಹತ್ತು
ಹಾಡಿದನು ವೆಯ್ನಾಮೊಯ್ನನ್ ತಾಮ್ರ ಬೆಟ್ಟದಲ್ಲಿ
ಹಾಡಿದನು ಅವನು ಕೋಟೆ ಪಕ್ಕದಲ್ಲಿ
ಕಂಪಿಸಿದವು ದ್ವಾರ ನಡುಗಿದವು ಕೀಲು
ಇಲ್ಮಾರಿನೆನ್ ಲೇಪಿಸಿದ ಬೆಣ್ಣೆ ಬೀಗಕ್ಕೆ
ಹಂದಿಕೊಬ್ಬನ್ನು ಕೀಲುಗಳಿಗೆ
ಕಿರುಗುಡದಂತೆ ಆ ಕೋಟೆ ಬಾಗಿಲು
ಕೀಚೆನ್ನದಂತೆ ಅದರ ಕೀಲು

ತಿರುಚಿದನು ಬೀಗ ಎತ್ತಿದನು ಅಗುಳಿ
ಮುರಿದ ಬೀಗವನು ತುಂಡು ತುಂಡಾಗಿ
ತೆರೆದುಕೊಂಡವು ಅದರ ಎಲ್ಲ ದ್ವಾರಗಳು

ವೆಯ್ನಾಮೊಯ್ನನ್ ನುಡಿದ ಗಟ್ಟಿ ದನಿಯಲ್ಲಿ
ಲೆಂಪಿಪುತ್ರನೆ ಬಲು ಜಾಣ ಸ್ನೇಹಿತನೆ
ಬಾ ಇಲ್ಲಿ ಸ್ಯಾಂಪೊ ಹೊತ್ತೊಯ್ಯಲು
ಚಿತ್ತಾರ ಹೊದಿಕೆ ಅಪಹರಿಸಲು

ಉತ್ಸಾಹಿ ಲೆಮಿನ್ಕಾಯ್ನನ್ ಬಲು ಮೋಹಕ ಪುರುಷ
ಕರೆಯದೇ ಬರುವವನು
ಮೆಚ್ಚದಿದ್ದರೂ ಸರಿಯೇ ಕೆಲಸ ಮಾಡುವವನು
ತ್ವರೆಯಿಂದ ಬರುತ್ತ ಹೇಳಿದನು ಹೀಗೆ
ನಾನೆಂದರೆ ನೋಡಿ ಸತ್ವವಿರುವವನು
ಉಕ್ಕೋನ ವೀರಪುತ್ರನಲ್ಲವೆ
ಜರುಗಿಸಬಲ್ಲೆನು ಈ ಗಿರಣಿಯನ್ನು
ಒಂದು ಕಾಲಿಂದ ಬೂಟು ತುದಿಯಿಂದ

ತಳ್ಳಿದನು ಜೋರಾಗಿ ನೂಕಿದನು ತಿರುತಿರುಗಿ
ತೋಳಿಂದ ಎದೆಯಿಂದ ಒತ್ತಿ ತಳ್ಳಿದನು
ನೆಲಕ್ಕೆ ಮೊಣಕಾಲೂರಿ ಒತ್ತಿ ನೂಕಿದನು
ಜರುಗಲಿಲ್ಲ ಒಂದಿಷ್ಟು ಅದು ಮಿಸುಕಾಡಲಿಲ್ಲ
ಇಳಿದಿದ್ದವು ಬೇರು ಒಂಭತ್ತು ಯೋಜನದಾಳ

ಪೊಹ್ಜಾದಲ್ಲಿತ್ತೊಂದು ಭಾರಿ ಗೂಳಿ
ಅಗಾಧ ಗಾತ್ರಕ್ಕೆ ಬೆಳೆದಿದ್ದ ಗೂಳಿ
ಕೊಬ್ಬಿದ್ದವು ಪಕ್ಕಗಳು ಬಲವಾದ ಸ್ನಾಯುಗಳು
ಕೊಂಬು ಯೋಜನದುದ್ದ
ಮುಸುಡಿ ಒಂದೂವರೆಯುದ್ದ
ಕರೆತಂದರು ಬಯಲಿಂದ ಉತ್ತ ಹೊಲದಂಚಿಂದ
ಉತ್ತು ತೆಗೆಸಿದರು ಸ್ಯಾಂಪೊ ಬೇರು
ಜರುಗಾಡಿತು ಸ್ಯಾಂಪೊ ತೂಗಾಡಿತು ಹೊದಿಕೆ

ವೆಯ್ನಾಮೊಯ್ನನ್ ಇಲ್ಮಾರಿನೆನ್
ಲೆಮಿನ್ಕಾಯ್ನನ್ ಮೂವರೂ
ಹೊತ್ತೊಯ್ದರು ಬಲವಾದ ಸ್ಯಾಂಪೊ ಗಿರಣಿಯನು
ತಂದಿಟ್ಟರು ದೋಣಿಯಲಿ ಸ್ಯಾಂಪೊ ಗಿರಣಿಯನು
ದೋಣಿ ತಳ್ಳಿದರು ಇಳಿಯಿತದು ನೀರಿಗೆ

ಇಲ್ಮಾರಿನೆನ್ ಕೇಳಿದ
ಎಲ್ಲಿಗೆ ಒಯ್ಯೋಣ ಈ ಸ್ಯಾಂಪೊ ಗಿರಣಿ
ಈ ದುಷ್ಟ ನಾಡಿಂದ ಹೊತ್ತೊಯ್ದು ಇದನು
ವೆಯ್ನಾಮೊಯ್ನನ್ ನುಡಿದ
ಒಯ್ಯೋಣ ಇದನು ಚಾಚಿದ ಭೂಭಾಗಕ್ಕೆ
ನಡುಗಡ್ಡೆಯ ತುದಿಗೆ
ಅಲ್ಲಿರಲಿ ಭದ್ರವಾಗಿ ಎಂದೆಂದಿಗೂ ಶಾಶ್ವತವಾಗಿ
ಜಾಗವಿರುವುದೇ ಬಲು ಸ್ವಲ್ಪ ಭಾಗ
ಹೋರಾಡದ ಜನರು ಕತ್ತಿ ಹಿರಿದ ಭಟರು
ಇರದಂತಹ ಜಾಗ

ನಡೆಸಿದನು ದೋಣಿ ವೆಯ್ನಾಮೊಯ್ನನ್
ಪೊಹ್ಜಾ ಗಡಿಯಿಂದ ದೂರದೂರಕ್ಕೆ
ತೇಲಿದನು ಮುಂದೆ ಬಲು ತೃಪ್ತಿಯಿಂದ

ಸ್ವಂತ ನಾಡಿಗೆ ಪಯಣ ಸಂತೋಷದಿಂದ
ಅವನು ಹೇಳಿದನು
ತ್ವರೆಯಿಂದ ಓಡು ಮನೆಗೆ ನೇರ
ಬಿಟ್ಟು ಪರದೇಶವನ್ನು ಅಲ್ಲಿಯೆ ಹಿಂದೆ

ಗಾಳಿಯೇ ಬೀಸು ದೋಣಿ ಮುನ್ನಡೆಸು
ಹುಟ್ಟು ಹಾಕುವವರಿಗೆ ನೀಡು ನೆರವು
ಬಲು ಭಾರ ಈ ಹುಟ್ಟು ಹಗುರ ಮಾಡಿದನು
ಈ ವಿಸ್ತಾರ ನೀರಲ್ಲಿ ಕಡಲ ತೆರೆಯಲ್ಲಿ
ಬಲು ಚಿಕ್ಕವು ಈ ಕೋಲು
ದುರ್ಬಲರು ಕೋಲು ಹಿಡಿದವರು
ಸಣ್ಣವರು ಚುಕ್ಕಾಣಿ ಹಿಡಿದವರು

ಅಪ್ಪ ದೇವ ಕೊಡು ನಿನ್ನ ಹುಟ್ಟುಗೋಲನ್ನು
ಹೊಸದಾದ ಒಳ್ಳೆ ಹುಟ್ಟುಗೋಲನ್ನು
ಕೊಡು ನಮಗೆ ಬಲವಾದ ಚುಕ್ಕಾಣಿಯನ್ನು
ಹುಟ್ಟು ಹಿಡಿದುಕೋ ನೀನಿಲ್ಲಿ ಬಂದು ಒಳಗೆ
ಮುನ್ನಡೆಸು ದೋಣಿಯನು ವೇಗದಿಂದ

ಹಿರಿಯ ವೆಯ್ನಾಮೊಯ್ನನ್
ನಡೆಸಿದನು ದೋಣಿ ವೇಗದಲಿ ಮುಂದೆ
ಹುಟ್ಟು ಹಾಕಿದರು ಇಲ್ಮಾರಿನೆನ್ ಲೆಮಿನ್ಕಾಯ್ನನ್
ಹೊಳೆವ ನೀರ ಮೇಲ್ಮೆಯಲ್ಲಿ
ತೆರೆಗಳೆದ್ದ ಮೇಲ್ಮೆಯಲ್ಲಿ

ಉತ್ಸಾಹಿ ಲೆಮಿನ್ಕಾಯ್ನನ್ ಹೀಗೆ ನುಡಿದ
ಹಾಕುವಾಗ ಹುಟ್ಟು ಮೊದಲೆಲ್ಲ ನಾನು
ಇರುತ್ತಿತ್ತು ನೀರು ಹುಟ್ಟಿನವರಿಗೆ
ಇರುತ್ತಿತ್ತು ಹಾಡು ಚಾರಣಿಗರಿಗೆ
ಈಗಿಲ್ಲ ಹಾಡು ದೋಣಿಯಲ್ಲಿ
ಇಂಪು ಗಾನದ ಸದ್ದು ಅಲೆಗಳಲ್ಲಿ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಹೀಗೆಂದು ನುಡಿದ
ಬೇಡ ಹಾಡು ನೀರಲ್ಲಿ

ಸ್ವಂತ ನಾಡಿಗೆ ಪಯಣ ಸಂತೋಷದಿಂದ
ಅವನು ಹೇಳಿದನು
ತ್ವರೆಯಿಂದ ಓಡು ಮನೆಗೆ ನೇರ
ಬಿಟ್ಟು ಪರದೇಶವನ್ನು ಅಲ್ಲಿಯೆ ಹಿಂದೆ

ಗಾಳಿಯೇ ಬೀಸು ದೋಣಿ ಮುನ್ನಡೆಸು
ಹುಟ್ಟು ಹಾಕುವವರಿಗೆ ನೀಡು ನೆರವು
ಬಲು ಭಾರ ಈ ಹುಟ್ಟು ಹಗುರ ಮಾಡಿದನು
ಈ ವಿಸ್ತಾರ ನೀರಲ್ಲಿ ಕಡಲ ತೆರೆಯಲ್ಲಿ
ಬಲು ಚಿಕ್ಕವು ಈ ಕೋಲು
ದುರ್ಬಲರು ಕೋಲು ಹಿಡಿದವರು
ಸಣ್ಣವರು ಚುಕ್ಕಾಣಿ ಹಿಡಿದವರು

ಅಹ್ತಿ ದೇವ ಕೊಡು ನಿನ್ನ ಹುಟ್ಟುಗೋಲನ್ನು
ಹೊಸದಾದ ಒಳ್ಳೆ ಹುಟ್ಟುಗೋಲನ್ನು
ಕೊಡು ನಮಗೆ ಬಲವಾದ ಚುಕ್ಕಾಣಿಯನ್ನು
ಹುಟ್ಟು ಹಿಡಿದುಕೋ ನೀನಿಲ್ಲಿ ಬಂದು ಒಳಗೆ
ಮುನ್ನಡೆಸು ದೋಣಿಯನು ವೇಗದಿಂದ

ಹಿರಿಯ ವೆಯ್ನಾಮೊಯ್ನೆನ್
ನಡೆಸಿದನು ದೋಣಿ ವೇಗದಲಿ ಮುಂದೆ
ಹುಟ್ಟು ಹಾಕಿದರು ಇಲ್ಮಾರಿನೆನ್ ಲೆಮಿನ್ಕಾಯ್ನೆನ್
ಹೊಳೆವ ನೀರ ಮೇಲ್ಮೆಯಲ್ಲಿ
ತೆರೆಗಳೆದ್ದ ಮೇಲ್ಮೆಯಲ್ಲಿ

ಉತ್ಸಾಹಿ ಲೆಮಿನ್ಕಾಯ್ನೆನ್ ಹೀಗೆ ನುಡಿದ
ಹಾಕುವಾಗ ಹುಟ್ಟು ಮೊದಲೆಲ್ಲ ನಾನು
ಇರುತ್ತಿತ್ತು ನೀರು ಹುಟ್ಟಿನವರಿಗೆ
ಇರುತ್ತಿತ್ತು ಹಾಡು ಚಾರಣಿಗರಿಗೆ
ಈಗಿಲ್ಲ ಹಾಡು ದೋಣಿಯಲ್ಲಿ
ಇಂಪು ಗಾನದ ಸದ್ದು ಅಲೆಗಳಲ್ಲಿ

ವೆಯ್ನಾಮೊಯ್ನೆನ್ ದೃಢಚಿತ್ತ ಹಿರಿಯ
ಹೀಗೆಂದು ನುಡಿದ
ಬೇಡ ಹಾಡು ನೀರಲ್ಲಿ

ಬೇಡ ಗಾನ ಅಲೆಯಲ್ಲಿ
ತಡೆಯಾಗುವುದು ವೇಗಕ್ಕೆ
ಅಡಚಣೆಯು ಹುಟ್ಟಿಗೆ
ಹೊಂಬೆಳಕು ಆರುವುದು
ಇರುಳು ಇಳಿಯುವುದು
ಈ ವಿಸ್ತಾರ ಕಡಲ ಅಲೆಯ ಮೈಯಲ್ಲಿ

ಉತ್ಸಾಹಿ ಲೆಮಿನ್ಕಾಯ್ನೆನ್ ಹೀಗೆಂದು ನುಡಿದ
ಏನು ಮಾಡದಿದ್ದರೂ ಸರಿಯೆ
ಅಳಿಯುವುದು ಹೊಂಬೆಳಕು
ಇಳಿಯುವುದು ಇರುಳು
ಜೀವಕ್ಕೆ ಮುದ ಕೊಡುವ ಹಾಡಿಲ್ಲ ಇಲ್ಲಿ
ಇಲ್ಲ ಅವಕಾಶ ಹಾಡುವುದಕಿಲ್ಲಿ

ನಡೆಸಿದನು ದೋಣಿ ವೆಯ್ನಾಮೊಯ್ನೆನ್
ದಿನವೊಂದು ದಿನವೆರಡು ದಿನ ಮೂರರ ಕೊನೆಗೆ
ಮತ್ತೊಮ್ಮೆ ಕೇಳಿದ ಲೆಮಿನ್ಕಾಯ್ನೆನ್ ಹೀಗೆ:
ಏಕೆ ಹಾಡುವುದಿಲ್ಲ ವೆಯ್ನಾಮೊಯ್ನೆನ್ ನೀನು
ಮಹಾ ಗಾಯಕನೆ ನಮಗಾಗಿ ಹಾಡು
ಇಂಥ ಅದ್ಭುತ ಸ್ಯಾಂಪೊ ಗೆದ್ದಿರುವೆವಲ್ಲ
ನೇರ ಮನೆ ಕಡೆ ದಾರಿ ಹಿಡಿದಿರುವೆವಲ್ಲ

ವೆಯ್ನಾಮೊಯ್ನೆನ್ ದೃಢಚಿತ್ತ ಹಿರಿಯ
ನುಡಿದ ಹೀಗೊಂದು ಖಂಡಿತದ ಮಾತು
ಕಾಲಬಂದಿಲ್ಲ ಹಾಡು ಹೇಳುವುದಕ್ಕೆ
ಹಾಡಿ ಕುಣಿಯುವುದಕ್ಕೆ
ಬೇಗ ಬರುವುದು ಕಾಲ ಹಾಡು ಹೇಳುವುದಕ್ಕೆ
ಹಾಡಿ ಕುಣಿಯುವುದಕ್ಕೆ
ನಮ್ಮ ಮನೆ ನಾವು ಸೇರಿದಾಗ
ನಮ್ಮ ಬಾಗಿಲ ಸದ್ದು ಕೇಳಿದಾಗ

ಉತ್ಸಾಹಿ ಲೆಮಿನ್ಕಾಯ್ನೆನ್ ಹೀಗೆಂದು ನುಡಿದ
ಹಿಡಿಯುವೆನು ನಾನು ಚುಕ್ಕಾಣಿಯನ್ನು
ಹಾಡುವೆನು ಅಲ್ಲಿ ಎಲ್ಲ ಶಕ್ತಿಯ ಬಿಟ್ಟು
ಕಿರುಚುವೆನು ಜೋರಾಗಿ ಎಲ್ಲ ದನಿ ಬಿಟ್ಟು

ನೀ ಹಾಡದಿದ್ದರೆ ನಮಗಾಗಿ ಹಾಡು
ಆರಂಭಿಸುವೆ ನಾನು ನನ್ನ ಹಾಡು
ಉತ್ಸಾಹಿ ಲೆಮಿನ್ಕಾಯ್ನನ್ ಆರಂಭಿಸಿದ ಹಾಡು
ಕೀಚಲು ದನಿಯಲ್ಲಿ ಶುದ್ಧ ಅಪಸ್ವರದಲ್ಲಿ
ಹಾಡಿಯೇ ಹಾಡಿದ ಜೋರಾಗಿ ಅರಚಿದ
ಬಾಯಿ ಚಲಿಸುತ್ತಿತ್ತು ಗಡ್ಡ ತೂಗಾಡಿತ್ತು
ಗಲ್ಲ ನಡುಗುತ್ತಿತ್ತು

ಕೇಳಿಸಿತವನ ಹಾಡು ದೂರ ದೂರಕ್ಕೂ
ಕೇಳಿಸಿತು ಆರು ಹಳ್ಳಿಗಳ ಆಚೆಗೂ
ಮರುದನಿಸಿತು ಏಳು ಹಳ್ಳಿಗಳ ಆಚೆಗೂ
ಮರದ ಮೋಟಿನ ಮೇಲೆ ಕೊಕ್ಕರೆಯು ಕುಳಿತಿತ್ತು
ಕಾಲೆತ್ತಿ ಬೆರಳನ್ನು ಎಣಿಸುತ್ತ ಕೂತಿತ್ತು
ಬೆಚ್ಚಿ ಬಿದ್ದಿತು ಕೇಳಿ ಲೆಮಿನ್ಕಾಯ್ನನ್ ಗಾನ

ತನ್ನ ವಿಚಿತ್ರ ಕೆಲಸಕ್ಕೆ ಮುಕ್ತಾಯ ಹೇಳಿತು
ಕರ್ಕಶ ದನಿಯಲ್ಲಿ ಕಿರುಚಾಡಿತು
ಭಯ ಬಿದ್ದು ಓಡಿತು
ಹಾರಾಡಿ ಭಯದಿಂದ ಪೊಹ್ಜಾದ ಮೇಲೆ
ಮತ್ತೊಮ್ಮೆ ಕಿರಿಚಿತು ಬಲು ಕರ್ಕಶವಾಗಿ
ಎಚ್ಚರಿಸಿತು ಮಲಗಿದ್ದ ಪೊಹ್ಜೋಲಾ ಜನರನ್ನು
ಮೇಲೆಬ್ಬಿಸಿತು ಮಲಗಿದ್ದ ಆ ದುಷ್ಟ ನಾಡನ್ನು

ಮೇಲೆದ್ದಳು ಒಡತಿ ದೀರ್ಘ ಜೋಂಪಿಂದ
ಅಂಗಳಕೆ ಬಂದು ಲಗುಬಗೆಯ ನಡೆಯಿಂದ
ಧಾನ್ಯ ಒಣ ಹಾಕಿದ್ದ ಕಡೆಗೆಲ್ಲ ನೋಡಿದಳು
ಕಟ್ಟಿದ್ದ ದನಕರು ಕಡೆಗೆಲ್ಲ ನೋಡಿದಳು
ಎಲ್ಲ ಸರಿಯಿತ್ತು ದನವು ಕಳೆದಿರಲಿಲ್ಲ
ಧಾನ್ಯ ಕೊಳ್ಳೆಯಾಗಿಲ್ಲ

ಓಡೋಡಿ ಬಂದಳು ಕಲ್ಲು ಶಿಲೆ ಬೆಟ್ಟಕ್ಕೆ
ತಾಮ್ರ ಬೆಟ್ಟದ ಒಳ ಹೊಗುವ ಬಾಗಿಲಿಗೆ
ಬರುತ್ತಲೇ ಅಂದುಕೊಂಡಳು ಹೀಗೆ:
ಅಯ್ಯೋ ಏನಾಯಿತು ನನಗೆ
ಯಾರೋ ಬಂದಿರುವರಿಲ್ಲಿಗೆ

ಬೀಗಗಳು ಬಿಚ್ಚಿವೆ ದ್ವಾರಗಳು ತೆರೆದಿವೆ
ಕಬ್ಬಿಣದ ಕೀಲೆಲ್ಲ ಮುರಿದು ಬಿದ್ದಿವೆ ಕೆಳಗೆ
ಕದ್ದೊಯ್ದಿರಬಹುದೆ ಸ್ಯಾಂಪೊ ಗಿರಣಿಯನ್ನು
ನಮ್ಮಿಂದ ಕದ್ದು ಎಲ್ಲವನ್ನು

ಸ್ಯಾಂಪೊ ಕಳುವಾಗಿತ್ತು
ಕಳುವಾಗಿ ಹೋಗಿತ್ತು ಚಿತ್ತಾರ ಹೊದಿಕೆ
ಹಾಕಿದ್ದರೂ ಅದಕೆ ಬೀಗ ಒಂಭತ್ತು
ಸರಳಿದ್ದರೂ ಅದಕೆ ಸಂಖ್ಯೆಯಲಿ ಹತ್ತು

ಲೌಹಿ ಪೊಹ್ಜೊಲಾ ಒಡತಿ
ಕುದ್ದು ಹೋದಳು ತುಂಬ ಕೋಪದಿಂದ
ಕುಸಿದು ಬಲವೆಲ್ಲ ಉಡುಗಿದಂತೆ
ಎಲ್ಲ ಬಲ ತನ್ನಿಂದ ಹೊರಟು ಹೋದಂತೆ
ಬೇಡಿಕೊಂಡಳು ಹೀಗೆ ಮುಗಿಲ ದೇವತೆಗೆ
ಮುಗಿಲ ಹೆಣ್ಣೆ ಓ ಮಂಜು ದೇವತೆಯೆ
ಜರಡಿಯಾಡಿಸಿ ಹರಡು ತುಣುಕು ಮೋಡ
ಎಲ್ಲ ಕಡೆ ಕವಿಯಲಿ ಮಂಜು ಮುಸುಕು
ಮೇಲಿಂದ ಕಳಿಸಿಕೊಡು ದಟ್ಟ ಮೋಡ
ಹೊಳೆವ ಕಡಲಿನ ಮೇಲೆ ಕರಿಕಾವಳ
ಕಾವಳವು ಕವಿಯಲಿ ವೆಯ್ನಾಮೊಯ್ನನ್ ಮೇಲೆ

ಇದು ಸಾಲದಿದ್ದರೆ ಇಕು ಟುರ್ಸೊ, ಜಲದೈತ್ಯ
ನಿನ್ನ ತಲೆ ಎತ್ತು ನೀರಿನಿಂದ
ನಿನ್ನ ಶಿರವೆತ್ತು ಅಲೆಗಳಿಂದ
ಹೊಸಕಿ ಬಿಡು ಕಲೆವಾದ ದುಷ್ಟ ಸಂತಾನ
ಮುಗಿಸಿಬಿಡು ದುರುಳ ವೀರ ಸಂತಾನ

ಮುಳುಗಿ ಹೋಗಲಿ ಅವನು ವೆಯ್ನಾಮೊಯ್ನನ್
ಮುಳುಗಿ ಹೋಗಲಿ ವೀರ ಶೂರ ಜನರು
ಬರಲಿ ಸ್ಯಾಂಪೊ ಮತ್ತೆ ಪೊಹ್ಜದ ನಾಡಿಗೆ
ಅದು ಮಾತ್ರ ನೀರಲ್ಲಿ ಮುಳುಗದಿರಲಿ

ಇದು ಸಾಲದಿದ್ದರೆ
ಉಕೊ ದೇವ ದೇವತೆಗಳೊಡೆಯ

ಮುಗಿಲಿನಲ್ಲಿರುವ ಹೊನ್ನಿಸರಸ
ಬಲಾಢ್ಯನೇ ಬೆಳ್ಳಿ ಅಲಂಕೃತನೆ
ಗಾಳಿಯಲಿ ತುಂಬು ಬಿರುಸು ಗಾಳಿ
ಗಾಳಿಗಳು ಏಳಲಿ ಅಲೆಗಳಬ್ಬರಿಸಲಿ

ಮುಗಿಲ ದೇವತೆ ಅವಳು ಹಿಮದ ಹೆಣ್ಣು
ಮೋಡ ಊದಿದಳು ಕಡಲಿನಿಂದ
ಹರಡಿದಳು ಮೋಡ ಬಾನಿನಲ್ಲಿ
ತಡೆದುಬಿಟ್ಟಳು ಅವನ ಕಡಲಿನಲ್ಲಿ
ಮೂರು ರಾತ್ರಿಯ ಕಾಲ ಇಡಿ ಮೂರು ರಾತ್ರಿ
ವೆಯ್ನಾಮೊಯ್ನನ್ ದಾರಿ ಕಾಣದಂತೆ
ಅಲ್ಲಿಂದ ಅವನು ಪಾರಾಗದಂತೆ

ಮೂರು ರಾತ್ರಿ ಹೀಗೆ ಕಳೆದಾದ ಮೇಲೆ
ವೆಯ್ನಾಮೊಯ್ನನ್ ನುಡಿದ
ಕೈಲಾಗದ ಗಂಡಸಾದರೂ ಸರಿಯೆ
ಎಂಥ ಸೋಮಾರಿ ವೀರನಾದರೂ ಸರಿಯೆ
ತಡೆದು ನಿಲ್ಲುವುದಿಲ್ಲ ಮೋಡಕ್ಕೆ ಹೆದರಿ
ಕಂಗೆಡುವುದಿಲ್ಲ ಕಾವಳಕೆ ಬೆದರಿ

ಸೀಳಿದನು ನೀರನ್ನು ಕತ್ತಿಯಿಂದ
ಹರಿದಿತ್ತು ಜೇನು ಅಲುಗಿನಿಂದ
ತೊಟ್ಟಿಕ್ಕಿತು ಮಧುವು ಚೂರಿಯಿಂದ
ಏರಿ ಹೋಯಿತು ಮೇಲೆ ಕವಿದ ಮುಗಿಲು

ವಿಸ್ತಾರವಾಯಿತು ಕಡಲು ಅಗಲಕ್ಕೆ ಕ್ಷಿತಿಜ
ಕಳೆದಿತ್ತು ಸ್ವಲ್ಪವೇ ಸ್ವಲ್ಪ ಸಮಯ
ಕಳೆದಿರಲಿಲ್ಲ ಅಷ್ಟೇನೂ ಹೆಚ್ಚು ಸಮಯ
ಬಲವಾದ ಅಬ್ಬರ ದೋಣಿ ಪಕ್ಕದಿಂದ
ಮೇಲೇರಿತು ನೊರೆ ಬುಗ್ಗೆ ಕಡಲಿನಿಂದ
ನಡುಗಿದನು ಇಲ್ಮಾರಿನೆನ್ ಭೀತಿಯಿಂದ
ಬಸಿದು ಹೋಯಿತು ರಕ್ತ ಕೆನ್ನೆಯಿಂದ
ಹೊರಟು ಹೋಯಿತು ಕೆಂಪು ಕೆನ್ನೆಯಿಂದ
ತಲೆ ಟೊಪ್ಪಿ ಕಿವಿ ಮೇಲೆ ಎಳೆದುಕೊಂಡ
ಕೆನ್ನೆ ಕಣ್ಣೆರಡೂ ಮುಚ್ಚಿಕೊಂಡ

ವೆಯ್ನಾಮೊಯ್ನನ್ ನೋಡಿದ ಸುತ್ತೆಲ್ಲವನ್ನೂ
ಅಚ್ಚರಿಯ ಕಂಡ ಕಡಲಿನಲ್ಲಿ
ಇಕು-ಟುರ್ಸೊ, ಅಯಿಜೊ ಪುತ್ರ
ಎತ್ತುತ್ತಿದ್ದ ತಲೆಯನ್ನು ದೋಣಿ ಪಕ್ಕದಿಂದ
ಶಿರವೆತ್ತಿದ ಮೇಲೆ ಅಲೆಗಳಿಂದ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಕೂಡಲೇ ಕಿವಿ ಹಿಡಿದು ಮೇಲೆತ್ತಿದ
ಪ್ರಶ್ನಿಸಿದ ಹೀಗೆ ಗಟ್ಟಿದನಿಯಲ್ಲಿ
ಯಾಕೆ ಬಂದೆಯೋ ನೀನು ನೀರಿಂದ ಮೇಲೆ
ಮಾನವರ ಕಣ್ಣಿಗೆ ಕಾಣಿಸುವ ಹಾಗೆ
ಕಲೆವಾ ಮಕ್ಕಳಿಗೂ ಕಾಣಿಸುವ ಹಾಗೆ

ಇಷ್ಟವಾಗಲಿಲ್ಲ ಅಯಿಜೊಗೆ ಈ ರೀತಿ ಸ್ವಾಗತ
ಹೆಚ್ಚು ಹೆದರಲೂ ಇಲ್ಲ ಉತ್ತರ ಕೊಡಲಿಲ್ಲ

ವೆಯ್ನಾಮೊಯ್ನನ್ ಕೇಳಿದ ಮತ್ತೆ ಹೀಗೆ
ಅದೇ ಪ್ರಶ್ನೆ ಕೇಳಿದ ಮೂರನೆಯ ಸಲವೂ

ಉತ್ತರಿಸಿದ ಇಕು ಟುರ್ಸೊ ಅಯಿಜೊ ಪುತ್ರ
ನಾನೆದ್ದ ನೀರಿನೊಳಗಿಂದ ಮೇಲೆ
ನಾನೆದ್ದ ಕಡಲ ಅಲೆಯಿಂದ ಮೇಲೆ
ಕಲೆವಾದ ಮಹಾ ಸಂತಾನ ನಾಶಕ್ಕೆ
ಪೊಹ್ಜಾಲಾಗೆ ಸ್ಯಾಂಪೊ ಕೊಂಡೊಯ್ಯುವುದಕ್ಕೆ
ಕಳಿಸಿಬಿಡಿ ಮತ್ತೆ ನೀರೊಳಗೆ ನನ್ನ
ಕ್ಷಮಿಸಿಬಿಡಿ ಈ ಪಾಪಿ ಜೀವವನ್ನು
ಮತ್ತೆ ಇನ್ನೆಂದೂ ಮೇಲೆ ಬರಲಾರೆ
ಮಾನವರ ಕಣ್ಣಿಗೆ ಗೋಚರಿಸಲಾರೆ

ವೆಯ್ನಾಮೊಯ್ನನ್ ಎಸೆದ ಅವನನ್ನು ನೀರಲ್ಲಿ
ನುಡಿದ ಹೀಗೆಂದು
ಮತ್ತೆಂದೂ ಹೀಗೆ ಮೇಲೆ ಬರಬೇಡ
ಜನರ ಕಣ್ಣಿಗೆ ಹೀಗೆ ಗೋಚರಿಸಬೇಡ
ಆ ದಿನದಿಂದ ಮತ್ತೆ ಕಾಣಿಸಲಿಲ್ಲವನು
ಸೂರ್ಯ ಚಂದ್ರರು ಬಾನಲ್ಲಿ ಇರುವವರೆಗೂ
ಚೆಲುವಾದ ಹಗಲ ಬೆಳಕು ಇರುವವರೆಗೂ

ಮತ್ತೆ ನಡೆಸಿದ ದೋಣಿ ವೆಯ್ನಾಮೊಯ್ನನ್
ಕಳೆದಿತ್ತು ಸ್ವಲ್ಪವೇ ಸ್ವಲ್ಪ ಸಮಯ
ಕಳೆದಿರಲಿಲ್ಲ ಅಷ್ಟೇನೂ ಹೆಚ್ಚು ಸಮಯ
ಆಗ ಉಕ್ಕೊ ದೇವಾಧಿದೇವ
ಎಬ್ಬಿಸಿದ ಗಾಳಿ ರೋಷದಿಂದ
ಮುತ್ತಿದವು ಬಿರುಗಾಳಿ ಸುತ್ತಲಿಂದ
ಮೇಲೆದ್ದವು ಗಾಳಿಗಳು ಬಲು ಭೀಕರವಾಗಿ
ಸುಂಟರಗಾಳಿಗಳು ಬಲು ಉಗ್ರವಾಗಿ
ಪಶ್ಚಿಮದ ಗಾಳಿಗಳು ಅಪ್ಪಳಿಸಿ ಬಡಿದವು
ನೈರುತ್ಯ ಗಾಳಿಗಳು ಅದಕಿಂತ ಬಿರುಸು
ಊಳಿಟ್ಟಿತು ಜೋರಾಗಿ ಮೂಡಣದ ಗಾಳಿ
ಘರ್ಜಿಸಿತು ಕೆರಳಿ ಆಗ್ನೇಯ ಗಾಳಿ
ಬೊಬ್ಬಿರಿದು ಅಬ್ಬರಿಸಿ ಬಡಗಣದ ಗಾಳಿ

ಎಲೆಗಳುದುರಿದವು ಮರಗಿಡಗಳಿಂದ
ಕಳಚಿದವು ಸೂಜಿ ಎಲೆ ಫರ್ ಮರಗಳಿಂದ
ಉದುರಿವು ಹೂವು ಪೊದೆ ಮೆಳೆಗಳಿಂದ
ಮುರಿದುಬಿದ್ದವು ತೆನೆ ಹುಲ್ಲಿನಿಂದ
ಮೇಲೆ ಬಂದಿತ್ತು ಕರಿ ಕೆಸರು ಕಡಲ ತಳದಿಂದ

ಬೀಸುತ್ತಿದ್ದವು ಗಾಳಿ ಬಲು ಅಬ್ಬರವಾಗಿ
ಹಡಗನ್ನು ತೂರಿದವು ಅತ್ತಿತ್ತ ಅಲೆಯು
ತೂರಿ ಹೋಯಿತು ವಾದ್ಯ ಗಾಳಿಯಲ್ಲಿ
ಮೀನು ಎಲುಬಿನ ಕ್ಯಾಂಟೀಲ್ ಗಾಳಿಯಲ್ಲಿ
ವೆಯ್ನಾ ಸ್ನೇಹಿತರಾನಂದ ಗಾಳಿಯಲ್ಲಿ
ಅಹ್ತೋ ಜನರ ಸಂತೋಷ ಗಾಳಿಯಲ್ಲಿ

ನೋಡಿದನು ಕಡಲದೇವ ಈ ವಾದ್ಯವನ್ನು
ಮಕ್ಕಳೂ ನೋಡಿದರು ಈ ವಾದ್ಯವನ್ನು
ಬಾಚಿ ಹಿಡಿದರು ಅದು ಬಲು ಸುಂದರ ವಾದ್ಯ
ತೆಗೆದುಕೊಂಡು ಹೋದರು ತಮ್ಮ ಮನೆಗದನು

ಕಂಬನಿಯ ಸುರಿಸಿದವು ವೆಯ್ನಾಮೊಯ್ನನ್ ಕಣ್ಣು
ಹೇಳಿದನು ಅವನು

ನಾನು ಮಾಡಿದ್ದು ಹೀಗೆ ಕೈ ಬಿಟ್ಟು ಹೋಯಿತು
ನನ್ನ ಪ್ರೀತಿಯ ವಾದ್ಯ ಮರೆಯಾಗಿ ಹೋಯಿತು
ನನ್ನ ಜೀವದಾನಂದ ಕೊನೆಯಾಯಿತು ಹೀಗೆ
ಸಿಗದು ಮತ್ತೆಂದೂ ಜೀವನದಲಿನ್ನೆಂದೂ
ಪೈಕ್‌ದಂತದ ಆನಂದ
ಮತ್ಸ್ಯದೆಲುಬನ್ನು ನುಡಿಸುವಾನಂದ

ಕಮ್ಮಾರ ಇಲ್ಮಾರಿನೆನ್ ಮಾಡಿದನು ದುಃಖ
ನಾನೆಂಥ ಪಾಪಿ ಎಂಥ ದುರ್ದಿನ ಬಂತು
ನೀರ ಮೇಲಿನ ಪಯಣ ಕೊನೆಯಿಲ್ಲದ ಕಡಲು
ನಿಂತಿರುವೆ ಉರುಳುತಿಹ ಮರದ ಮೇಲೆ
ಕೆಳಗೆ ಕಂಪಿಸುವ ಹಲಗೆ ಮೇಲೆ
ಏನೇನು ನೋಡಿತು ಈ ಗಡ್ಡ ಕೂದಲು
ಈ ಕಡಲಿನಲ್ಲಿ ಬಿರುಗಾಳಿಯಲ್ಲಿ
ಎಂದೂ ಕಂಡಿರಲಿಲ್ಲ ಇಂಥ ಭೀಕರ ಗಾಳಿ
ಮೇಲೆದ್ದ ಬುರುಗಿನ ಇಂಥ ಅಲೆರಾಶಿ
ಮಾರುತನೆ ದಯೆ ತೋರು
ಅಲೆಗಳೇ ಕೃಪೆ ತೋರಿ

ವೆಯ್ನಾಮೊಯ್ನನ್ ಹಿರಿಯ ದೃಢಚಿತ್ತನವನು
ಆಲಿಸಿದ ಇಲ್ಮಾರಿನೆನ್ ಆಡಿದಂತಹ ಮಾತು
ಆಲಿಸಿ ಅವನು ನುಡಿದ ಹೀಗೆ:
ದುಃಖ ಮಾಡುವುದಕ್ಕೆ ಸ್ಥಳವಲ್ಲ ದೋಣಿ
ಗೋಳಾಡುವುದಕಿಲ್ಲಿ ಇಲ್ಲ ಜಾಗ
ಅದೃಷ್ಟ ಕೆಟ್ಟಾಗ ಅತ್ತು ಪ್ರಯೋಜನವಿಲ್ಲ
ದುರ್ದಿನ ಬಂದಾಗ ಬೊಬ್ಬಿರಿದರಿಲ್ಲ

ಜಲವೇ ನಿಗ್ರಹಿಸು ನಿನ್ನ ಮಕ್ಕಳನು
ಅಲೆಗಳೇ ನಿಗ್ರಹಿಸಿ ಅವುಗಳನ್ನು
ಅಹ್ತೊ ಶಾಂತ ಮಾಡು ನೀರ ತೆರೆಯನ್ನು
ನನ್ನ ಹಡಗಿನ ಮೇಲೆರಗಿ ಬರದಂತೆ ತೆರೆಯು
ಪಕ್ಕ ಹಲಗೆಗಳ ಮುರಿಯದಂತೆ

ಗಾಳಿಯೇ ಹೋಗು ಗಗನಕ್ಕೆ ನೀನು
ಬೀಡು ಬಿಡು ಅಲ್ಲಿ ಮುಗಿಲ ಮರೆಯಲ್ಲಿ
ಹೋಗು ಪೋಷಿಸಿದ ನಿನ್ನವರ ತಾಣಕ್ಕೆ
ನಿನ್ನ ಸಂಸಾರ ಬಂಧು ಬಳಗದ ಬಳಿಗೆ
ಮಾಡದಿರು ಹಾನಿ ಈ ಮರದ ದೋಣಿಗೆ
ಮುಳುಗಿಸದಿರು ಇದನು ಈ ನೀರ ಕಡಲಿಗೆ
ಬೇಕಿದ್ದರೆ ಉರುಳಿಸು ಸುಟ್ಟ ಮರಗಳನು
ಇಳಿಜಾರಿನಲ್ಲಿ ಫರ್‌ಮರಗಳನ್ನು

ಉತ್ಸಾಹಿ ಲೆಮಿನ್ಕಾಯ್ನನ್ ಚೆಲುವ ಚೆನ್ನಿಗನು
ಹೇಳಿದನು ಜೋರಾಗಿ ಹೀಗೊಂದು ಮಾತು
ಗರುಡ ಪಕ್ಷಿಯೆ ಬಾರೊ ತುರ್ಜಾದ ನಾಡಿಂದ
ಮೂರು ಪುಕ್ಕವನು ಜೊತೆಯಲ್ಲಿ ತಾರೊ
ಈ ಪುಟ್ಟ ಹಡಗಿನ ರಕ್ಷಣೆಗೆ ಬಾರೊ
ಬಡ ದೋಣಿ ಹಲಗೆ ಕಾಪಾಡು ಬಾರೊ

ಹಡಗಿನ ಕಟಕಟೆ ಏರಿಸಿದ ಅವನು
ಭದ್ರ ಮಾಡಿದನು ಹೊಸ ಹಲಗೆ ಹಾಕಿ
ಯೋಜನದೆತ್ತರಕೆ ಏರಿಸಿದ ಹಲಗೆಯನು
ಮೇಲೆದ್ದ ಅಲೆಗಿಂತ ಎತ್ತರದ ಹಲಗೆ
ತನ್ನ ಗಡ್ಡಕೆ ನೀರು ಎರಚದಂತೆ

ಕೆಲಸ ಮುಗಿಯಿತು ಕಟಕಟೆಯು ರಕ್ಷಿಸಿತು
ಎಷ್ಟೆ ಬಿರುಸಾಗಿ ಅಪ್ಪಳಿಸಲಿ ಗಾಳಿ
ಎಷ್ಟೆ ಅಬ್ಬರದಿಂದ ಕಡಲಿನಲೆ ಬಡಿಯಲಿ
ಬೆಟ್ಟದಂತೆ ನೊರೆ ಮೇಲೆದ್ದು ಬಡಿಯಲಿ

28. ಸ್ಯಾಂಪೊಗಾಗಿ ಕದನ

ಪೊಹ್ಜಾ ಒಡತಿ ಒಂದು ಕದನ ನೌಕೆ ಸಿದ್ಧಪಡಿಸಿ ಸ್ಯಾಂಪೊ ಕದ್ದೊಯ್ದವರನ್ನು ಬೆನ್ನಟ್ಟಿ ಹೋಗುತ್ತಾಳೆ. ಪೊಹ್ಜೊಲಾ ಮತ್ತು ಕಲೆವಾಲಾ ಪಡೆಗಳ ನಡುವೆ ಯುದ್ಧ ನಡೆದಾಗ ಕಲೆವಾಲಾದವರಿಗೇ ಜಯ ಲಭಿಸುತ್ತದೆ. ಆದರೂ ಪ್ರಯತ್ನ ಬಿಡದ ಪೊಹ್ಜೊಲಾ ಒಡತಿ ಸ್ಯಾಂಪೊವನ್ನು ದೋಣಿಯಿಂದ ಈಚೆಗೆಳೆದಾಗ ಅದು ಮುರಿದು ಚೂರು ಚೂರಾಗುತ್ತದೆ. ದೊಡ್ಡ ತುಂಡುಗಳು ನೀರಲ್ಲಿ ಮುಳುಗುತ್ತವೆ. ಸಣ್ಣ ತುಂಡು ಅಲೆಗಳಲ್ಲಿ ಕೊಚ್ಚಿ ಬಂದು ದಡ ಸೇರುತ್ತವೆ. ವೆಯ್ನಾಮೊಯ್ನನ್‌ಗೆ ಸಂತೋಷವಾಗುತ್ತದೆ. ಕಲೆವಾಲಾಗೆ ಎಲ್ಲ ಪಡೆಗಳನ್ನು ಕಳಿಸುವುದಾಗಿ ಪೊಹ್ಜಾಲಾ ಒಡತಿ ಬೆದರಿಕೆ ಒಡ್ಡುತ್ತಾಳೆ. ಆ ಮಾತಿಗೆ ವೆಯ್ನಾಮೊಯ್ನನ್ ಗಮನ ಕೊಡುವುದಿಲ್ಲ. ಪೊಹ್ಜೊಲಾ ಒಡತಿ ತುಂಬ ವ್ಯಥೆಯಿಂದ ಮನೆಗೆ ಹಿಂದಿರುಗುತ್ತಾಳೆ. ಸ್ಯಾಂಪೊ ಹೊದಿಕೆಯ ಸಣ್ಣ ತುಣುಕು ಮಾತ್ರ ಅವಳಿಗೆ ಸಿಗುತ್ತದೆ. ದಡದಲ್ಲಿ ಬಿದ್ದ ಚೂರುಗಳನ್ನು ವೆಯ್ನಾಮೊಯ್ನನ್ ಬಹು ಎಚ್ಚರಿಕೆಯಿಂದ ಆಯ್ದುಕೊಳ್ಳುತ್ತಾನೆ ಮತ್ತು ತನ್ನ ನಾಡಿಗೆ ಸೌಭಾಗ್ಯ ತರಲೆಂದು ಅವುಗಳನ್ನು ಭೂಮಿಯಲ್ಲಿ ಬಿತ್ತುತ್ತಾನೆ:

ಹಿಡಿದುಕೊಂಡಳು ಸ್ಯಾಂಪೊ ಉಂಗುರದ ಬೆರಳಿಂದ
ಹಿಡಿದೆಳೆದಳು ಅದನು ದೋಣಿಯೊಳಗಿಂದ
ಕೆಳಗೆಳೆದು ಜಗ್ಗಿ ಚಿತ್ತಾರ ಹೊದಿಕೆ
ಎಸೆದುಬಿಟ್ಟಳು ಸ್ಯಾಂಪೋ ಕಡಲ ನಡು ನೀರಿಗೆ
ಚೂರು ಚೂರಾಯಿತು ಸ್ಯಾಂಪೊ
ನುಜ್ಜುಗುಜ್ಜಾಯಿತು
ಹರಡಿಹೋದವು ಚೂರು
ಶಾಂತ ಕಡಲಾಳಕ್ಕೆ ದೊಡ್ಡ ಚೂರು
ಕಪ್ಪು ತಳದಾಳಕ್ಕೆ ಸ್ಯಾಂಪೊ ಚೂರು

ಅದು ಕಾರಣ ಸಾಗರದ ಅತುಲೈಶ್ವರ್ಯಕ್ಕೆ
ಕಡಲೊಡೆಯನ ಜನರ ಸಂಪತ್ತು ಸಿರಿಗೆ
ಇರುವವರೆಗೂ ಬಾನಲ್ಲಿ ಹೊಳೆವ ಚಂದಿರನು
ಕಡಿಮೆಯಾಗದು ಕಡಲೊಡೆಯನ
ಸಿರಿಯು ಸಂಪದವು

ತೇಲುತ್ತಿದ್ದವು ಚೂರು ಕಡಲಿನಲೆ ಮೇಲೆ
ಗಾಳಿ ಅಲೆಯಲಿ ತೂಗಿ ತೇಲಿ ಬಂದವು ಮುಂದೆ
ಕಡಲಲ್ಲಿ ತೇಲುತ್ತ ಮೇಲು ಕೆಳಗಾಗುತ್ತ
ತೇಲಿ ಬಂದವು ಚೂರು ತೀರದೆಡೆಗೆ
ನೋಡಿದನು ವೆಯ್ನಾಮೊಯ್ನನ್
ತೇಲಿಬಂದವು ಚೂರು
ಸ್ಯಾಂಪೊ ಗಿರಣಿಯ ಒಡೆದ ಚೂರುಗಳು
ಚಿತ್ತಾರ ಹೊದಿಕೆಯ ಸಿಬಿರು ತುಣುಕುಗಳು

ಆಯಿತಾನಂದ ಹೇಳಿದನು ಹೀಗೆ:
ಮೊಳೆಯುವುದು ಗಿಡದ ಸಸಿ ಈ ಬೀಜದಿಂದ
ಸೌಭಾಗ್ಯದಾರಂಭ ಈ ಬೀಜದಿಂದ
ಉತ್ತುವುದು ಬಿತ್ತುವುದು ಎಲ್ಲ ಸಮೃದ್ಧಿ
ಎಲ್ಲದರಲ್ಲೂ ಆಗುವುದು ವೃದ್ಧಿ
ಇದರಿಂದಲೆ ಹೊಮ್ಮುವುದು ಚಂದಿರನ ಬೆಳಕು
ಮೋಹಕವೆನಿಸುವುದು ರವಿಯ ಬೆಳಕು
ಸುವೋಮಿಯ ವಿಸ್ತಾರ ಬಯಲಿನಲ್ಲಿ
ಸುವೋಮಿಯ ಚೆಲುವು ನಾಡಿನಲ್ಲಿ

ಹೇಳಿದಳು ಪೊಹ್ಜೊಲಾ ಒಡತಿ ದೊಡ್ಡ ದನಿಯಲ್ಲಿ
ಈಗಲೂ ಮಾಡುವೆ ಇನ್ನೊಂದು ಸಂಚು
ನಿನ್ನ ಬಿತ್ತನೆ ಮೇಲೆ ನಿನ್ನ ಉಳುಮೆಯ ಮೇಲೆ
ನಿನ್ನ ದನಗಳ ಮೇಲೆ ನಿನ್ನ ವೃದ್ಧಿಯ ಮೇಲೆ
ಹೊಳೆಯದಿರುವಂತೆ ಬಾನ ಚಂದಿರನು
ಬೆಳಗದಿರುವಂತೆ ಆಗಸದ ಸೂರ್ಯ
ಮರೆ ಮಾಡುವೆ ಚಂದಿರನ
ಬಚ್ಚಿಡುವೆನು ಸೂರ್ಯನ
ಬಂಡೆ ಮರೆಯಲ್ಲಿ ಶಿಲೆಯ ಪರ್ವತದಲ್ಲಿ
ಕಳಿಸುವೆ ಹಿಮವನ್ನು ಮಂಜುಗಟ್ಟಿಸಲು
ಹಿಮಚಳಿಯ ಗಾಳಿಯನು ನಾಶಪಡಿಸುವುದಕ್ಕೆ
ಬೆಳೆದ ಪೈರಿನ ಮೇಲೆ ಸುಗ್ಗಿ ತೆನೆಗಳ ಮೇಲೆ
ಆಲಿಕಲ್ಲು ಕಬ್ಬಿಣದ ಮಳೆಗರೆಸುವೆ ನಾನು

ಎಬ್ಬಿಸುವೆ ಪೊದೆಯ ಕರಡಿಯನ್ನು
ಅಟ್ಟುವೆನು ಚೂಪು ಕೋರೆ ದೈತ್ಯನನ್ನು
ತಿಂದು ಹಾಕಲಿ ನಿನ್ನ ಕುದುರೆಗಳನು
ಸೀಳಿ ಹಾಕಲಿ ನಿನ್ನ ಅಶ್ವಗಳನು
ಕೊಂದು ಹಾಕಲಿ ನಿನ್ನ ದನಗಳನ್ನು
ಚೆದುರಿ ಓಡಿಸಲಿ ನಿನ್ನ ಹಸುಗಳನ್ನು

ಕೊಲ್ಲಿಸುವೆ ಜನರನ್ನೂ ರೋಗಮಾರಿಯ ಬಿಟ್ಟು
ನಾಶ ಮಾಡುವೆ ನಿನ್ನ ಕುಲಸಂತತಿಯನ್ನು
ಬಾನಲ್ಲಿ ಚಂದಿರನು ಇರುವವರೆಗೆ
ಹೆಸರೆ ಇರದಂತೆ ಲೋಕದೊಳಗೆ

ಹಿರಿಯ ವೆಯ್ನಾಮೊಯ್ನನ್ ಹೀಗೆಂದು ನುಡಿದ
ತಟ್ಟದೆಂದೂ ನಮಗೆ ನಿನ್ನ ನಾಡಿನ ಶಾಪ
ಬೆಚ್ಚುವರು ನಾವಲ್ಲ ನಿನ್ನ ಬೆದರಿಕೆಗೆ
ಗಾಳಿ ಮಳೆಗಧಿಪತಿಯು ಜುಮಾಲಾದೇವ
ಅವನ ಕೈಲಿಹುದು ವಿಧಿಯ ಕೀಲಿ
ಇಲ್ಲ ಅದು ದುಷ್ಟರಲಿ ಕೇಡಿಗರ ಹಸ್ತದಲಿ

ಬೇಡಿದರೆ ನಾನು ಸೃಷ್ಟಿಕರ್ತನನ್ನು
ಹಾಳಾಗದ ಹಾಗೆ ಕಾಯುವನು ಪೈರು
ನಾಶವಾಗದ ಹಾಗೆ ದವಸಧಾನ್ಯ
ಕುಸಿದು ಹೋಗದ ಹಾಗೆ ನನ್ನ ಕಣಜ

ಹೋಗು ಒಡತಿಯೇ ಹೋಗು
ಕೇಡಿಗರ ಜಜ್ಜು ಕಲ್ಲಿನಲ್ಲಿ
ಪೀಡೆಗಳ ಹಾಕು ಮಲೆಗಳಲ್ಲಿ
ಚಂದ್ರ ಸೂರ್ಯರ ಬೆಳಕು ಹಾಕದಿರು ಅಲ್ಲಿ

ಕಳಿಸು ಹಿಮವನ್ನು ಹಿಮಚಳಿಯ ಗಾಳಿಯನು
ಕಳುಹು ಅದನೆಲ್ಲ ನಿನ್ನ ಪೈರಿನ ಮೇಲೆ
ಕಳುಹು ಕಬ್ಬಿಣದ ನೀರ್ಗಲ್ಲು ಮಳೆಯನು
ನೀನುತ್ತು ನೀ ಬೆಳೆದ ಪೈರ ಮೇಲೆ

ಎಚ್ಚೆತ್ತಿತು ಕರಡಿ ಪೊದ ಮೆಳೆಗಳಲ್ಲಿ
ಕ್ರೂರ ಬೆಕ್ಕು ಎದ್ದಿತು ಗಿಡಗಂಟೆಯಲ್ಲಿ
ಕಾಡಿಂದ ಬಂದಿತು ಕೊಂಕು ಉಗುರಿನ ಜೀವಿ
ಪೈನ್ ಮರಗಳೆಡೆಯಿಂದ ಕೋರೆದಾಡೆಯ ಕರಡಿ
ಆದರದು ಹಿಡಿಯಿತು ಪೊಹ್ವಾದ ದಾರಿ
ಪೊಹ್ವಾದ ದನಗಳಿಗೆ ಬಂತು ಮಾರಿ

ಪೊಹ್ವಾದ ಒಡತಿ ಹೇಳಿದಳು ಹೀಗೆ
ಯಾವ ಬಲ ಉಳಿದಿಲ್ಲ ಇನ್ನು ನನಗೇನೂ
ಬಲಹೀನಳಾಗಿರುವೆ ಶಕ್ತಿ ಉಡುಗಿ
ಕಡಲು ಒಯ್ದಿತು ನನ್ನ ಸಂಪತ್ತು
ಅಲೆಯಲ್ಲಿ ಸ್ಯಾಂಪೊ ಚೂರುಚೂರಾಯ್ತು

ಗೋಳಿಡುತ ಹೋದಳು ಮನೆಯ ಕಡೆಗೆ
ಅಳುತ್ತಾ ಆವಳು ನಾಡಿನೆಡೆಗೆ
ಹೇಳುವಂಥ ಬೆಲೆ ಏನೂ ಇರಲಿಲ್ಲ
ಅವಳು ತಂದಂಥ ಸ್ಯಾಂಪೊದ ಚೂರಿಗೆ
ತಂದಿದ್ದಳದನು ಉಂಗುರದ ಬೆರಳಿಂದ
ಚಿಕ್ಕ ಚೂರನು ಕಡಲಿನಿಂದ
ಅದು ಕಾರಣ ಪೊಹ್ವಾದ ಬಡತನದ ಬಾಳಿಗೆ
ಲ್ಯಾಪ್ ಲ್ಯಾಂಡಿನ ಹಸಿವು ಕಾರ್ಪಣ್ಯದ ಬದುಕಿಗೆ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಅವನೂ ಹೋದ ತನ್ನ ನಾಡಿಗೆ ಮರಳಿ
ತೆಗೆದುಕೊಂಡು ಬಂದಿದ್ದ ಸ್ಯಾಂಪೊ ಚೂರು
ಕಡಲ ತಡಿಯಿಂದ ನುಣುಪು ಉಸುಕಿಂದ
ಬಿತ್ತಿದನು ಚೂರನ್ನು ಸ್ಯಾಂಪೊ ತುಣುಕನ್ನು
ಚಾಚಿದ್ದ ಭೂಮಿಯಲಿ ನಡುಗಡ್ಡೆ ಬಯಲಲ್ಲಿ
ಬೆಳೆದು ವೃದ್ಧಿಯಾಗಲಿ ಎಂದು

ಹಿರಿಯ ವೆಯ್ನಾಮೊಯ್ನನ್ ಪ್ರಾರ್ಥಿಸಿದ
ದಯೆ ತೋರು ಜುಮಾಲಾ ಓ ಸೃಷ್ಟಿಕರ್ತ
ನೆಮ್ಮದಿಯ ಜೀವನ ನಮ್ಮದಾಗಲಿ ಎಂದು

ಬದುಕಲ್ಲಿ ಆನಂದ ತುಂಬಿರಲಿ ಎಂದು
ಗೌರವದ ಸಾವು ನಮಗೆ ಬರಲೆಂದು
ನಮ್ಮ ಈ ನಾಡಲ್ಲಿ ಕರೀಲಿಯ ಭೂಮಿಯಲಿ

ನಮ್ಮ ಪಾಲಿಸು ದೇವ ಓ ಸೃಷ್ಟಿಕರ್ತ
ಕಾಪಾಡು ಜುಮಾಲ ದಯಾಮಯದೇವ
ನಮ್ಮನ್ನು ದ್ವೇಷಿಸುವ ಜನರಿಂದ ಕಾಪಾಡು
ಹೆಣ್ಣ ಹಗೆಯಿಂದ ನಮ್ಮ ಕಾಪಾಡು
ಕಾಪಾಡು ಈ ನೆಲದ ಅನಿಷ್ಟ ಪೀಡೆಗಳಿಂದ
ನೀರ ಮಾಂತ್ರಿಕರ ಮಾಟ ಮಂತ್ರಗಳಿಂದ

ನಿನ್ನ ಮಕ್ಕಳನು ಕಾಪಾಡು ಅನವರತ
ನಿನ್ನ ಕಂದಗಳಿಗೆ ನೆರವು ಕೊಡು ಅನವರತ
ಕಾಪಾಡು ಇರುಳಲ್ಲಿ ರಕ್ಷಿಸು ಹಗಲಲ್ಲಿ
ಬೆಳಗುವುದನು ಸೂರ್ಯ ನಿಲ್ಲಿಸದ ಹಾಗೆ
ಹೊಳೆವುದನು ಚಂದ್ರ ನಿಲ್ಲಿಸದ ಹಾಗೆ
ಬೀಸುವುದನು ಗಾಳಿ ನಿಲ್ಲಿಸದ ಹಾಗೆ
ಬೀಳುವುದನು ಮಳೆ ನಿಲ್ಲಿಸದ ಹಾಗೆ
ಹಿಮವು ಆವರಿಸಿ ಕಲ್ಲು ಮಾಡದ ಹಾಗೆ
ಕೆಟ್ಟ ಗಾಳಿಯು ಬಡಿದು ಹಾನಿ ಮಾಡದ ಹಾಗೆ

ನಮಗಾಗಿ ಕಟ್ಟಿಕೊಡು ಕಬ್ಬಿಣದ ಬೇಲಿ
ನಮಗಾಗಿ ಕಟ್ಟಿಕೊಡು ಕಲ್ಲಿನಲಿ ಬೀಡು
ನಾನಿರುವ ಜಾಗಕ್ಕೆ ನನ್ನ ಜನರಿರುವ ಕಡೆಗೆ
ಕಟ್ಟಿಕೊಡು ಗೋಡೆ
ಈ ಭೂಮಿಯಿಂದ ಆ ಬಾನವರೆಗೆ
ಆ ಬಾನಿನಿಂದ ಈ ಭೂಮಿವರೆಗೆ
ಜೀವನ ಪರ್ಯಂತ ನಾನಿಲ್ಲಿ ಇರಲು
ನನ್ನ ಆಸರೆಗೆ ನನ್ನ ರಕ್ಷಣೆಗೆ
ಮಲೆತವರು ನಮ್ಮನ್ನು ಮುಗಿಸಿ ಬಿಡದಂತೆ
ನಮ್ಮ ವೈರುಗಳ ನಾಶ ಮಾಡದಂತೆ.

29. ವೆಯ್ನಾಮೊಯ್ನನ್ನನ ಹೊಸ ಕ್ಯಾಂಟೀಲ್

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಮನದಲ್ಲೆ ಮಾಡಿದನು ಹೀಗೆ ಚಿಂತೆ
ಬಂದಿಹುದು ಕಾಲ ಹಾಡುವುದಕೀಗ
ನಾವೆಲ್ಲ ಸಂತಸದಿ ಹಾಡಿ ಕುಣಿಯುವ ಕಾಲ
ಹೊಸ ಮನೆಯೊಳಗೆ ಚೆಲುವ ಬೀಡೊಳಗೆ

ಏನಾದರೇನು ವಾದ್ಯವೇ ಇಲ್ಲ
ಕಳೆದುಹೋಯಿತಾನಂದ ಮತ್ತೆ ಸಿಗದಂತೆ
ಕಳೆದುಹೋಯಿತು ಮೀನುಗಳ ಬೀಡಲ್ಲಿ
ಸಾಲ್ಮನ್‌ಗಳ ಗವಿಯಲ್ಲಿ
ಪೈಕ್ ಮೀನುಗಳಿಗೀಗ ಅದರ ಆನಂದ
ಕಡಲದೇವನ ಮಡದಿ ವೆಲಾಮೊ ಸಖಿಯರಿಗೆ
ಹಿಂದಿರುಗಿಸುವುದಿಲ್ಲ ಅದನೆಂದೂ ಅವರು

ಅಯ್ಯಾ ಕಮ್ಮಾರ ಇಲ್ಮಾರಿನೆನ್
ಮೊದಲೆಲ್ಲ ನೀನು ಪಟ್ಟಿರುವೆ ಕಷ್ಟ
ಈಗಲೂ ಪಡಬೇಕಿದೆ ಉತ್ಸಾಹದಿಂದ
ಮಾಡಿಕೊಡು ನನಗೊಂದು ಕಬ್ಬಿಣದ ಕುಂಟೆ
ಹಲ್ಲು ಒತ್ತಾಗಿರಲಿ ಉದ್ದವಿರಲಿ ಹಿಡಿಕೆ
ಅಲೆಯನ್ನು ಗೋರುವೆನು
ಕಳೆ ಗಿಡಗಳ ಗೋರುವೆನು
ವಾದ್ಯ ಹುಡುಕುವೆನು
ಮೀನುಗಳ ಕುಟಿಲ ಮಾರ್ಗದೊಳಗೆ
ಸಾಲ್ಮನ್‌ಗಳ ಶಿಲೆಯ ಗವಿ ಒಳಗೆ

ಆದಿ ಕಮ್ಮಾರ ಇಲ್ಮಾರಿನೆನ್
ಮಾಡಿಕೊಟ್ಟನು ಕಬ್ಬಿಣದ ಕುಂಟೆ
ತಾಮ್ರ ಹಿಡಿಕೆಯ ಕುಂಟೆ
ನೂರು ಯೋಜನದುದ್ದ ಅದರ ಹಲ್ಲು

ಐನೂರು ಯೋಜನ ಅದರ ಹಿಡಿಕೆ
ಹಿಡಿದು ಬಂದನು ಕುಂಟೆ ಕಡಲ ತೀರದ ಕಡೆಗೆ
ಇದ್ದುವೆರಡು ದೋಣಿ ಆ ದಂಡೆಯಲ್ಲಿ
ಹೊಸದೊಂದು ದೋಣಿ ಹಳೆಯದಿನ್ನೊಂದು
ವೆಯ್ನಾಮೊಯ್ನನ್ ನುಡಿದ ಹೊಸ ದೋಣಿಗೆ ಮೊದಲು
ಹೋಗು ದೋಣಿಯೇ ಹೋಗು
ನಿನ್ನಷ್ಟಕ್ಕೆ ನೀನೇ ನೆರವಿಲ್ಲದೆ ಮುಂದೆ
ಯಾರ ಕೈ ಸ್ಪರ್ಶವಿರದೆ ನಿನ್ನಷ್ಟಕೆ ಮುಂದೆ

ನೀರಿಗೋಡಿತು ದೋಣಿ ನುಗ್ಗಿತು ಆಲೆ ಮಧ್ಯಕೆ
ವೆಯ್ನಾಮೊಯ್ನನ್ ಕುಳಿತ ಚುಕ್ಕಾಣಿ ಹಿಡಿದು
ಗುಡಿಸುವುದಕೆ ಕಡಲು. ಅಲೆಗಳನು ಬಾಚಲು
ನೀರ ನೈದಿಲೆಗಳ ಒಟ್ಟುಗೂಡಿಸಲು

ಕಡಲದಂಡೆಯ ಗುಂಟ ಬಾಚಿದನು ಮೊದಲು
ಬಂದಿತೆಲ್ಲವೂ ಬರಿ ಕಸಕಡ್ಡಿ ಚೂರು
ಮರಳು ದಿಬ್ಬಗಳ ಗೋರಿ ನೋಡಿದನು
ಪೈಕ್ ಎಲುಬಿನ ವಾದ್ಯ ಸಿಗಲಿಲ್ಲವೆಲ್ಲೂ
ಆನಂದ ಕಳೆದಿತ್ತು ಮತ್ತೆ ಸಿಗದಂತೆ
ವಾದ್ಯದ ಜೊತೆ ಮುಳುಗಿತ್ತು ಮತ್ತೆ ಸಿಗದಂತೆ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಮರಳಿ ಬಂದನು ಮನೆಗೆ
ತಲೆಯು ತಗ್ಗಿತ್ತು ದುಃಖ ತುಂಬಿತ್ತು
ತಲೆಯ ಮೇಲಿನ ಟೊಪ್ಪಿ ಓರೆಯಾಗಿತ್ತು
ಹೇಳಿಕೊಂಡನು ಅವನು ಮನದಲ್ಲಿ ಹೀಗೆ:
ಇನ್ನಿಲ್ಲ ನನಗೆ ಹಾರ್ಪ್‌ವಾದ್ಯದಾನಂದ
ಮೀನೆಲುಬಿಂದ ಮಾಡಿದ್ದ ವಾದ್ಯದಾನಂದ

ಅವನು ತಿರುಗಾಡುತ್ತಿದ್ದ ಹುಲ್ಲು ಪೊದೆ ಬಯಲಲ್ಲಿ
ಅಲೆದಾಡುತ್ತಿದ್ದ ಅಡವಿನಾಡಲ್ಲಿ
ಬರ್ಚ್ ಮರವು ಅಳುತಿದ್ದು ಕೇಳಿಸಿತು ಕಿವಿಗೆ
ಹಸಿರು ವೃಕ್ಷದ ಗೋಳು ಬಿತ್ತವನ ಕಿವಿಗೆ

ಬಂದು ಕೇಳಿದನು ಮರದ ಸಮೀಪಕ್ಕೆ
ಯಾಕಳುವೆ ಬರ್ಚ್ ಮರವೆ ಚೆಲುವಾದ ವೃಕ್ಷವೆ
ಸುರಿಸುತಿಹೆ ಏಕೆ ಕಣ್ಣೀರು ಹೀಗೆ
ಒಯ್ದಿಲ್ಲ ಯಾರೂ ಕದನಕ್ಕೆ ನಿನ್ನ

ಬರ್ಚ್ ಮರವು ನುಡಿಯಿತು
ಬಹಳ ಇದೆ ಹೇಳುವುದು ಒಂದಲ್ಲ ಎರಡಲ್ಲ
ಹೇಗಿರಲಿ ನಾನು ಸಂತೋಷವಾಗಿ
ದುಃಖದಲ್ಲಿಯೆ ಹೋಗಿರುವೆ ಮುಳುಗಿ
ಅಳುತಿರುವೆ ನನ್ನ ದೌರ್ಬಲ್ಯಕಾಗಿ
ಕೈಲಾಗದೆ ಸೋತು ಸೊರಗಿ ಹೋಗಿ
ಬಡವೃಕ್ಷ ನಾನು ಯಾರ ನೆರವಿಲ್ಲ
ನನ್ನ ಕಷ್ಟಕ್ಕೆ ಆಗುವವರಿಲ್ಲ
ಇಂಥ ದುಸ್ಥಿತಿಯಲ್ಲಿ ವಿಲ್ಲೋಗಳ ಎಡೆಯಲ್ಲಿ

ಬಂದಾಗ ಎಳೆ ಬಿಸಿಲ ದಿನ
ಪರಿಪೂರ್ಣ ಸಂತೋಷ ಆನಂದ ಜನಕೆ
ನಾನೊಬ್ಬ ಪಾಪಿಷ್ಟ ನನ್ನ ವಿಧಿ ಬೇರೆ
ತೊಗಟೆ ಸುಲಿಯುವರು ಎಲೆ ಸುಳಿಯ ಕೀಳುವರು
ರಕ್ಷಿಸುವರಾರಿಲ್ಲ ಬರಿ ದುಃಖವೆ ಎಲ್ಲ

ವಸಂತದ ದಿನಗಳಲಿ
ಬಂದು ಮುತ್ತುವರು ಸುತ್ತಲಿನ ಹೈಕಳು
ಚೂಪು ಕತ್ತಿಗಳಿಂದ ನನ್ನೊಡಲ ಗೀರುವರು
ವೃಕ್ಷ ರಸವನ್ನೆಲ್ಲ ಬಸಿದುಕೊಳ್ಳುವರು

ಎಳೆ ಬಿಸಿಲ ದಿನದಲ್ಲಿ ದನ ಕಾಯುವವರು
ಒಳ ತೊಗಟೆ ಸಿಪ್ಪೆ ಸುಲಿದು ಹಾಕುವರು
ಬುಟ್ಟಿ ಬಟ್ಟಲು ಮತ್ತೇನೋ ಮಾಡುವರು
ರಕ್ಷಿಸುವರಾರಿಲ್ಲ ಬರಿ ದುಃಖವೆ ಎಲ್ಲ

ಬರುತಾರೆ ಬಾಲೆಯರು ಸುತ್ತ ಕುಣಿದಾಡುವರು
ತುದಿ ರೆಂಬೆ ಜಿಗುಟುವರು
ಕಂತೆ ಕಟ್ಟುವರು ಮೈ ಉಜ್ಜಲೆಂದು
ರಕ್ಷಿಸುವರಾರಿಲ್ಲ ಬರಿ ದುಃಖವೆ ಎಲ್ಲ

ಕಡಿದು ಹಾಕುವರು ಸಾಗುವಳಿಗೆಂದು
ತುಂಡು ಮಾಡುವರು ಸೌದೆ ಕಟ್ಟಿಗೆಗೆಂದು
ಮೂರು ಸಲ ಹೀಗೇ ಕಡಿದಾಯಿತು ನನ್ನ
ಕಡಿಯುವರು ಬಂದರು ಕೊಡಲಿಗಳ ಹಿಡಿದು
ನನ್ನ ಶಿರ ಭಾಗ ಹಾಕಿದರು ತರಿದು
ಬಡ ಜೀವ ಹೋಯಿತು ಈ ದೇಹ ತೊರೆದು

ಹೀಗಿಹುದು ನೋಡು ಬೇಸಗೆಯಲಿ ಪಾಡು
ಚಂದವೇನಿಲ್ಲ ಇದಕೂ ಚಳಿಗಾಲದ ಪಾಡು
ಹಿಮಗಾಲದಲ್ಲಿಯೂ ನನಗೆ ಇದೆ ಹಾಡು ನೋಡು

ಮುಖವೇ ಬದಲಾಯಿತು ಕಡು ಕಷ್ಟದಿಂದ
ತಲೆ ಜೋತು ಬಿದ್ದಿದೆ ತೀರದ ವ್ಯಥೆಯಿಂದ
ಬಿಳುಚಿಕೊಂಡಿವೆ ಕೆನ್ನೆ ಬಲು ದುಃಖದಿಂದ
ದುರ್ದಿನಗಳನ್ನು ನೆನೆದು ನೆನೆದು

ಗಾಳಿ ತರುವುದು ಕೇಡು. ಹಿಮವು ಕಡು ದುಃಖ
ಹರಿದು ಹಾಕಿತು ಗಾಳಿ ನನ್ನ ಹಸಿರಂಗಿ
ಚಿಂದಿ ಮಾಡಿತು ಹಿಮವು ನನ್ನುಡುಗೆ ತೊಡುಗೆ
ಬಡಪಾಯಿ ನಾನು ಒಂದಿಷ್ಟು ಸುಖವಿಲ್ಲ
ನಿಂತಿರುವೆ ಹೀಗೆ ಬಟ್ಟೆಯೇ ಇಲ್ಲ
ನಿಂತಿರುವೆ ನಾನು ಬರಿ ಬತ್ತಲೆಯಾಗಿ
ಚಳಿ ತಡೆಯದೆ ನಡುಗಿ ಹಿಮದಲ್ಲಿ ಕೊರಗಿ

ವೆಯ್ನಾಮೊಯ್ನನ್ ಹಿರಿಯ ಹೀಗೆಂದು ನುಡಿದ
ಇನ್ನು ಅಳಬೇಡ ಹಸಿರೆಲೆಯ ಮರವೇ
ಎಷ್ಟು ಚಂದವಿದೆ ನಿನ್ನ ಬಿಳಿಯ ನಡುಪಟ್ಟಿ
ಕಾಯುತಿವೆ ನಿನಗೆ ಒಳ್ಳೆ ದಿನ ಗಟ್ಟಿ
ಕಾದಿಹುದು ನಿನಗಾಗಿ ಹೊಸ ಸಂತೋಷ ಉಲ್ಲಾಸ
ಸದ್ಯದಲಿ ನೀ ನಗುವೆ ಸಂತೋಷ ತುಂಬಿ
ಸದ್ಯದಲಿ ಹಾಡುವೆ ಉಲ್ಲಾಸ ತುಂಬಿ

ವೆಯ್ನಾಮೊಯ್ನನ್ ಹಿರಿಯ
ಬರ್ಚ್ ಮರವನು ಕೊರೆದ ಹಾರ್ಪ್ ವಾದ್ಯವಾಗಿ
ಬೇಸಗೆಯ ದಿನದಲ್ಲಿ ಕ್ಯಾಂಟೀಲ್ ಆಗಿ
ಬರ್ಚ್ ಮರದ ಒಡಲಿಂದ ರೂಪಿಸಿದ ಆನಂದ

ವೆಯ್ನಾಮೊಯ್ನನ್ ಹಿರಿಯ ಹೀಗೆಂದು ನುಡಿವ
ಸಿದ್ಧವಾಯಿತು ಒಡಲು ಆನಂದಕಿಲ್ಲ ಕೊನೆ
ಹೇಗೆ ನಿರ್ಮಿಸಬೇಕು ತಕ್ಕಂಥ ಬಿರಟೆ
ಓಕ್ ಮರವೊಂದು ಅಂಗಳದಲಿತ್ತು
ಸಮನಾದ ಕೊಂಬೆಗಳ ಹರಡಿ ನಿಂತಿತ್ತು
ಒಂದೊಂದು ಕೊಂಬೆಗೂ ಒಂದೊಂದು ಹಣ್ಣು
ಒಂದೊಂದು ಹಣ್ಣಿಗೂ ಬಂಗಾರ ತಿರುಳು
ಒಂದೊಂದು ತಿರುಳಿಗೂ ಕುಳಿತೊಂದು ಕೋಕಿಲ
ದನಿ ತೆಗೆದು ಹಾಡಿದರೆ ಎಲ್ಲ ಕೋಕಿಲವೂ
ಮೂಡುವುದು ಅದರಲ್ಲಿ ಪಂಚಮದ ಇಂಚರವು
ಬಾಯಿಂದ ಹರಿದಂತೆ ಬಂಗಾರ ಹೊನಲು
ಹರಡಿ ಸುರಿದಂತೆ ರಜತಬೆಳ್ಳಿಯ ಧಾರೆ
ಗುಡ್ಡ ಬೆಟ್ಟದ ಮೇಲೆ ಬಂಗಾರ ಧಾರೆ
ನೆಲದ ಮೇಲೆಲ್ಲ ಬೆಳ್ಳಿ ಧಾರೆ
ಮಾಡಿದನು ಬಿರಟೆ ಇಂಥ ಹಣ್ಣಿಂದ

ವೆಯ್ನಾಮೊಯ್ನನ್ ಹಿರಿಯ ನುಡಿದ ಹೀಗೆಂದು
ಸಿದ್ಧವಾಯಿತು ಬಿರಟೆ ವಾದ್ಯಕಾಗಿ
ಇನ್ನೇನೋ ಇದಕೆ ಬೇಕಿರುವ ಹಾಗಿದೆ
ಐದು ತಂತಿಗಳಿದಕೆ ಬೇಕೆ ಬೇಕಲ್ಲ
ಎಲ್ಲಿಂದ ತರಲಿ ತಂತಿಯನ್ನು
ನುಡಿಸಿದರೆ ಸ್ವರ ಕೊಡುವ ತಂತಿಯನ್ನು

ಅಲೆದಾಡುತ್ತಿದ್ದ ಗಿಡಗಂಟಿ ಪೊದೆಯಲ್ಲಿ
ತರುಣಿಯೊಬ್ಬಳ ಕಂಡ ಕುಳಿತಿದ್ದಳಲ್ಲಿ
ಅವಳು ಅಳುತ್ತಿರಲಿಲ್ಲ ಸಂತಸವೂ ಇರಲಿಲ್ಲ
ತನ್ನಷ್ಟಕೆ ಅವಳು ಹಾಡುತ್ತಿದ್ದಳು ಹೀಗೆ
ಬರಲಿ ಬೇಗನೆ ಸಂಜೆಗಳು ಎಂದು
ಒಲಿದ ನಲ್ಲನು ಬಂದು ಮೊಗ ತೋರಲೆಂದು

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಪಾದುಕೆಯ ಕಳಚಿಟ್ಟು ಅವಳ ಬಳಿ ಸಾರಿದ

ಅವಳ ತಲೆಗೂದಲ ಕೊಡುವಂತೆ ಕೇಳಿದ
ಚೆಲುವೆಯೇ ಕೊಡು ನನಗೆ ನಿನ್ನ ಕೇಶ
ಹಾರ್ಪ್ ವಾದ್ಯ ತಂತಿಗೆ ನಿನ್ನ ಕೇಶ
ಕೊನೆಯಿಲ್ಲದಾನಂದಕೆ ನಿನ್ನ ಕೇಶ

ನುಣುಪಾದ ಕೇಶವನು ಕೊಟ್ಟಳಾ ತರುಣಿ
ಐದು ಕೂದಲ ತೆಗೆದು ಕೊಟ್ಟಳವಳು
ಏಳು ಕೂದಲ ತೆಗೆದು ಇತ್ತಳವಳು
ಹಾರ್ಪ್ ವಾದ್ಯಕ್ಕೆ ತಂತಿಗಾಗಿ
ಕೊನೆಯಿಲ್ಲದಾನಂದ ಸ್ವರ ನಾದಕಾಗಿ

ಸಿದ್ಧವಾಯಿತು ವಾದ್ಯ ಪೂರ್ಣವಾಗಿ
ವೆಯ್ನಾಮೊಯ್ನನ್ ಕುಳಿತ ಶಿಲೆ ಬಂಡೆ ಮೇಲೆ
ಕೈಗೆತ್ತಿಕೊಂಡ ಹಾರ್ಪ್ ವಾದ್ಯವನ್ನು
ಆನಂದಪಟ್ಟ ಎದೆಗಪ್ಪಿಕೊಂಡು
ಆನಿಸಿಕೊಂಡ ಮೊಣಕಾಲ ಮೇಲೆ
ಶ್ರುತಿ ಮಾಡಿದ ತಂತಿ ನಾದ ಬರುವಂತೆ

ಹತ್ತು ಉಗುರಿಂದ ಬಾಜಿಸಿದ ವಾದ್ಯ
ಐದು ಬೆರಳಾಡಿ ಹರಿಸಿದವು ನಾದ
ಮಧುರಾತಿ ಮಧುರ ಸಂಗೀತ ನಾದ
ಕೋಮಲ ಕರದಿಂದ ಚಿಗುರು ಬೆರಳಿಂದ
ನಸು ಬಾಗಿದ್ದ ಹೆಬ್ಬೆರಳಿನಿಂದ

ನುಡಿಸಿದಾಗವನು
ವನವೆಲ್ಲ ತುಂಬಿತು ಗಾನದಿಂಪು
ಎಳೆ ಚಿಗುರು ಸಸಿಯೆಲ್ಲ ದನಿ ತೆಗೆದು ಹಾಡಿತು
ಬಂಗಾರ ಕೋಗಿಲೆಯು ಸ್ವರವೆತ್ತಿ ಹಾಡಿತು
ಕೇಶ ಚೆಲುವೆಯದು ನಾದ ಸುಧೆ ಹರಿಸಿತು

ನುಡಿಸಿದವು ಬೆರಳು ಮರುದನಿಸಿ ತಂತಿ
ಬಯಲು ಪರ್ವತವು ಶಿಲೆಯ ಬೆಟ್ಟಗಳು
ಮರುದನಿಸಿ ಹಾಡಿದವು ಅವನ ಹಾಡು

ಅಲೆಯ ಮಧ್ಯದ ಶಿಲೆ ಓಲಾಡಿ ತೂಗಾಡಿ
ನೀರ ಕೆಳಗಿನ ಮರಳು ಮೇಲುವಾಗಿ ಸರಿದಾಡಿ

ಪೈನ್ ವೃಕ್ಷಗಳೆಲ್ಲ ಗಾನದಲಿ ನಲಿದಾಡಿ
ಕುಣಿದಾಡಿದವು ಕಡಿದ ಮರ ಜೀವ ಬಂದಂತೆ

ಬಂದರಲ್ಲಿಗೆ ಗುಂಪು ಗುಂಪಾಗಿ ಜನರು
ಕಲೇವಾದ ತರುಣಿಯರು ಬಂದರಲ್ಲಿ
ನದಿಯು ಹರಿದಂತೆ ಬಳಿ ಸಾರಿ ಬಂದರು
ಉಲ್ಲಾಸದಾಮೋದ ಚೆನ್ನೆಯರಿಗೆಲ್ಲ
ತುಂಬಿತಾನಂದ ಮನೆ ಒಡತಿಯರಿಗೆ
ಪುರುಷರೂ ಬಂದರು ಟೊಪ್ಪಿಗೆಯು ಕೈಯಲ್ಲಿ
ಮುದುಕಿಯರು ಬಂದರು ಅವರ ಕೈ ಕೆನ್ನೆಯಲಿ
ಉರುಳಿದಿವು ಕಂಬನಿ ಹೆಂಗಸರ ಕಣ್ಣಿಂದ
ಮನ ಸೋತು ಹುಡುಗರು ಹಾಗೆಯೇ ಕುಸಿದರು
ಎಲ್ಲರೂ ಕೇಳಿದರು ಕ್ಯಾಂಟೇಲಿನ ನಾದ
ಮೈ ಮರೆತು ನಿಂತು ಗಾನದಚ್ಚರಿಯಲ್ಲಿ
ಎಲ್ಲರೂ ಹೇಳಿದರು ಒಂದೆ ದನಿಯಾಗಿ
ಎಲ್ಲರೂ ಸ್ತುತಿಸಿದರು ಒಂದೆ ನಾಲಿಗೆಯಾಗಿ
ಇಲ್ಲ ಕೇಳಿರಲಿಲ್ಲ ಕೇಳಿಯೇ ಇರಲಿಲ್ಲ
ಎಂದೂ ಕೇಳಿರಲಿಲ್ಲ ಇಂಥ ಗಾನ

ಕೇಳಿಸಿತು ದೂರಕ್ಕೆ ಇಂಪಾದ ಗಾನ
ಕೇಳಿಸಿತು ನಾದ ಹಳ್ಳಿ ಆರಕ್ಕೂ
ಇರಲಿಲ್ಲ ಯಾರೂ ಬರದೇ ಉಳಿದವರು
ಈ ಗಾನ ಕೇಳಲು ಬರದೇ ಇದ್ದವರು

ಬನದ ಪ್ರಾಣಿಯು ನಿಂತು ತುದಿ ಉಗುರಿನಲ್ಲಿ
ಕೇಳಿದವು ಗಾನ ಬೆರಗು ಸೋಜಿಗದಲ್ಲಿ
ವಿಹರಿಸುತಿದ್ದ ಹಕ್ಕಿಗಳು ಬಾನಿನಲ್ಲಿ
ಬಂದಿಳಿದವು ಹತ್ತಿರದ ರೆಂಬೆ ಕೊಂಬೆಯಲಿ
ಈಜುತಿದ್ದವು ಮೀನು ನೀರಿನಲ್ಲಿ
ಸೇರಿದವು ಬಂದು ದಂಡೆಯಲ್ಲಿ
ಸರಿದಾಡುವ ಹುಳ ಹುಪ್ಪಟಿ ಮಣ್ಣಿನಲ್ಲಿ
ನೆಲದಿಂದ ಮೇಲಕ್ಕೆ ಬಂದುವಲ್ಲಿ
ಕೇಳಿದವು ಮನಮೋಹಕ ಕ್ಯಾಂಟೇಲಿನ ನಾದ
ಮೈಮರೆತು ಕೇಳಿದವು ವೆಯ್ನಾಮೊಯ್ನನ್ ಗಾನ

ನುಡಿಸಿದನು ವೆಯ್ನಾಮೊಯ್ನನ್
ಬಲು ಮಧುರವಾಗಿ
ಒಂದು ದಿನ ಎರಡು ದಿನ ನಿಲ್ಲಿಸದೆ ಹಾಗೆ
ಬೆಳಗಿನಾಹಾರ ತೊರೆದು ನುಡಿಸಿದನು
ಅದೆ ಉಡುಗೆ ಅದೆ ತೊಡುಗೆ ಹಾಗೆ ನುಡಿಸಿದನು

ನುಡಿಸಿದನು ತನ್ನ ಫರ್‌ಮರದ ಮನೆಯಲ್ಲಿ
ಮರುದನಿಯನಿತ್ತವು ಜಂತಿ ಹಲಗೆಗಳು
ಹಾಡಿದವು ಸೂರು ಕಿಟಕಿ ದ್ವಾರಗಳು
ಓಲಾಡಿ ಒಲೆಗಲ್ಲು ಕಂಬ ಮರುದನಿಸಿ

ನಡೆದಾಡಿದಾಗವನು ಮರಗಿಡಗಳೆಡೆಯಲ್ಲಿ
ತಿರುಗಾಡಿದಾಗ ಪೈನ್ ವೃಕ್ಷ ದಾರಿಯಲಿ
ಬಾಗುತಿದ್ದವು ವೃಕ್ಷ ಶಿರ ಮುಟ್ಟಿಸಿ ನೆಲಕೆ
ನಮಿಸುತ್ತಿದ್ದವು ಹುಲ್ಲು ತಲೆಬಾಗಿ ನೆಲಕೆ

ಹಸಿರು ಕಾಡಿನಲಿ ಪೊದೆಗಿಡಗಳಲ್ಲಿ
ತಿರುಗಾಡಿದರವನು
ಕರೆಯುತ್ತಿದ್ದವು ಎಲೆ ಬಳ್ಳಿ
ಸಂತಸದ ದನಿಯಲ್ಲಿ
ನಲಿಯುತ್ತಿದ್ದವು ಗಿಡಗಂಟಿ
ಸಂತೋಷದಲ್ಲಿ
ಸೂಸುತ್ತಿದ್ದವು ಗಂಧ ಹೂವರಳಿ ಸುತ್ತ
ಎಳೆಯ ಸಸಿ ಗಿಡವು ಬಾಗಿ ನಮಿಸುತ್ತಾ.

30. ಸೂರ್ಯ ಚಂದ್ರರ ಕಳವು

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಬಾಜಿಸಿದ ಕ್ಯಾಂಟೇಲ್
ನುಡಿಸಿಯೇ ನುಡಿಸಿದ ಹಾಡಿಯೇ ಹಾಡಿದ
ತುಂಬಿತಾನಂದ ಮನಸಿನೊಳಗೆಲ್ಲ

ಚಂದಿರನ ಮನೆಗೂ ಕೇಳಿಸಿತು ಗಾನ
ಸೂರ್ಯನ ಕಿಟಕಿಗೂ ತೂರಿ ಬಂದಿತು ಗಾನ
ಹೊರಬಂದ ಚಂದ್ರ ಮನೆಯೊಳಗಿನಿಂದ
ಬಾಗಿದ ಬರ್ಚ್ ಮರದ ತುದಿಯಲ್ಲಿ ನಿಂದ
ಹೊರಬಂದ ಸೂರ್ಯ ಮನೆಯೊಳಗಿನಿಂದ
ಫರ್ ಮರದ ತುದಿಯೇರಿ ಅವನು ನಿಂದ

ಲೌಹಿ ಪೊಹ್ಜೊಲಾ ಒಡತಿ ಸಂದುಹಲ್ಲಿನ ಮುದುಕಿ
ಸಂಚು ಮಾಡಿದಳು ಚಂದಿರನ ಹಿಡಿಯಲು
ಅದರಂತೆಯೇ ಸೂರ್ಯನನು ಹಿಡಿಯಲು
ಬರ್ಚ್ ಮರದ ಚಂದಿರನ ಫರ್ ಮರದ ಸೂರ್ಯನ
ತಂದಳವರನ್ನು ಹಿಡಿದು ಕೈಯಲ್ಲಿ
ತಂದಳವರನ್ನು ತನ್ನ ಮನೆ ಬೀಡಿಗೆ

ಬಚ್ಚಿಟ್ಟಳು ಚಂದಿರನ ಬಂಡೆ ಅಡಿಯಲ್ಲಿ
ಮುಚ್ಚಿಟ್ಟಳು ಸೂರ್ಯನನು ಉಕ್ಕು ಶಿಲೆ ಬೆಟ್ಟದಲಿ
ಹೀಗೆ ಹೇಳಿದಳು
ಇನ್ನೆಂದೂ ಚಂದಿರನು ಹೊಳೆಯಲಾರ
ಇನ್ನೆಂದೂ ಸೂರ್ಯನೂ ಹೊಳೆಯಲಾರ
ನಾನು ನಾನಾಗೆ ಬಿಡಿಸದಿದ್ದರೆ ಅವರ

ಅವಳು ಕದ್ದಳು ವೆಯ್ನೊಲಾ ಬೆಳಕನ್ನು
ಅವಳು ಕದ್ದಳು ವೆಯ್ನೊಲಾ ಬೆಂಕಿಯನು
ಬೆಂಕಿಯಿಲ್ಲ ಮನೆಗಳಲಿ ಬೆಳಕಿಲ್ಲ ಕೋಣೆಯಲಿ
ಮುಗಿಯದಿಹ ರಾತ್ರಿಗಳು ಬಹು ದೀರ್ಘ ಕತ್ತಲು

ಕಲಿವಾಲಾದಲ್ಲಿ ಮುಗಿಯದಿಹ ಇರುಳು
ವೆಯ್ನೊಲಾದ ಬಲು ಸುಂದರ ಗೃಹಗಳಲ್ಲಿ
ಹಬ್ಬಿದಾಗಸದಲ್ಲಿ ಕತ್ತಲೆಯ ಇರುಳು
ಉಕೊ ಪೀಠದ ಸುತ್ತಲೂ ಮುತ್ತಿತ್ತು ಕತ್ತಲು

ಬೆಂಕಿ ಇಲ್ಲದ ಬದುಕು ಬಲು ದಾರುಣವಾಯ್ತು
ಬೆಳಕಿಲ್ಲದ ಬದುಕು ಬಲು ಭಾರವಾಯ್ತು
ತುಂಬಿತ್ತು ದುಃಖದಲಿ ಮಾನವರ ಬದುಕು
ತಪ್ಪಲಿಲ್ಲ ದುಃಖ ಉಕೊ ದೇವನಿಗೂ

ಉಕೊ ದೇವ ಚಿಂತಿಸಿದ ಮನದಲ್ಲಿ ಹೀಗೆ
ಚಂದಿರನ ಬೆಳಕನ್ನು ಕದ್ದವರು ಯಾರು
ಹೊಳೆವ ಸೂರ್ಯನನು ತಡೆದವರು ಯಾರು
ಮೋಡದಂಚಿಗೆ ಬಂದ ಉಕೊ ದೇವ
ನೀಲಿ ಕಾಲ್ಚೀಲ ಬಣ್ಣದ ಬೂಟುಗಳು
ಹುಡುಕಾಡಿದ ಚಂದಿರನ ಹುಡುಕಾಡಿದ ಸೂರ್ಯನ
ಪತ್ತೆಯಾಗಲಿಲ್ಲ ಚಂದ್ರ ಕಾಣಲಿಲ್ಲ ಸೂರ್ಯ

ಕತ್ತಿ ಝುಳಪಿಸಿದ ಗಾಳಿಯಲ್ಲಿ
ಹೊಮ್ಮಿತು ಕಿಡಿಬೆಂಕಿ ಬಾನಿನಲ್ಲಿ
ಉರಿಗತ್ತಿಯಿಂದ ಅವನ ಉಗುರಿಂದ
ಆಗಸದ ಬಯಲಲ್ಲಿ ಬಾನೆತ್ತರದಲ್ಲಿ
ಬೆಂಕಿಕಿಡಿಯಿಟ್ಟು ಬೆಳ್ಳಿ ಕರಂಡದಲಿ
ವಾಯುಪುತ್ರಿಗೆ ನುಡಿದ ತೂಗೆಂದು ತೊಟ್ಟಿಲಲಿ
ಹೊಸ ಚಂದಿರನಾಗಿ ಬೆಳೆಯಲೆಂದು
ಹೊಸ ಸೂರ್ಯನಾಗಿ ಬೆಳೆಯಲೆಂದು

ಕುಳಿತಿದ್ದಳವಳು ಮುಗಿಲಂಚಿನಲ್ಲಿ
ತೂಗಿದಳು ಬೆಂಕಿಯನು ತೊಟ್ಟಿಲಲ್ಲಿ
ಬೆಳೆಯುತಿದ್ದಿತು ಬೆಳಕು ತೊಟ್ಟಿಲಲ್ಲಿ
ಚಿನ್ನದ ತೊಟ್ಟಿಲಲಿಟ್ಟು ತೂಗಿದಳು ಅವಳು
ಬೆಳ್ಳಿ ಹಗ್ಗದ ತೊಟ್ಟಿಲು ತೂಗಿದಳು ಅವಳು

ತೂಗುವಾಗ ಬೆಂಕಿಯನು ತೂಗುವಾಗ ಬೆಳಕನ್ನು
ಬೆಳ್ಳಿ ಆಗಸವೇ ಓಲಾಡಿದಂತೆ

ಮೋಡಗಳುಯ್ಯಾಲೆ ಆಡಿದಂತೆ
ಕೈಯೊಳಗೆತ್ತಿ ಸವರಿದಳು
ಕೈಯೊಳಗೆತ್ತಿ ಮುದ್ದಾಡಿದಳು
ಬುದ್ಧಿಗೇಡಿ ಬೀಳಿಸಿದಳು ಕೆಳಗೆ
ಎಚ್ಚರಗೇಡಿ ಕೆಡವಿದಳು ಕೆಳಗೆ

ಸೀಳಿತಾಕಾಶ ಇಬ್ಭಾಗವಾಗಿ
ಮೇಲಿಂದ ಉರಿ ಬೆಂಕಿ ಬೀಳುವಾಗ
ನೂರಾರು ಬೆಳಕಿಂಡಿ ಗಾಳಿಯಲ್ಲಿ
ನಿಡಿದಾದ ಕಂದರ ಬಾನಿನಲ್ಲಿ
ಒಂಭತ್ತು ಗಗನದ ಕೆಳಗೆ ಬೀಳುವಾಗ
ಆರು ಗುಮ್ಮಟದ ಕೆಳಗೆ ಬೀಳುವಾಗ

ವೆಯ್ನಾಮೊಯ್ನೆನ್ ನುಡಿದ
ಕಮ್ಮಾರ ಸೋದರನೆ ನೋಡೋಣ ಬಾ ಹೋಗಿ
ಕಾರಣವೇನೋ ಹುಡುಕೋಣ ಹೋಗಿ
ಬಾನೆತ್ತರದಿಂದ ಬಿದ್ದಂಥ ಬೆಂಕಿ
ಭೂಮಿ ಮೇಲಕ್ಕೆ ಇಳಿದಂಥ ಬೆಂಕಿ
ಚಂದಿರನ ಚೂರೋ ರವಿಯ ತುಣುಕೋ
ನೋಡಿ ತಿಳಿಯೋಣ ಹೋಗಿ ನೋಡೋಣ.

ಹೊರಟರಿಬ್ಬರೂ
ಬಿದ್ದ ಬೆಂಕಿಯ ಹುಡುಕಿ
ಬಿದ್ದ ಬೆಳಕನು ಹುಡುಕಿ
ಎದುರಾಯಿತೊಂದು ನದಿ ಬಲು ದೊಡ್ಡ ಹರವು
ದೋಣಿ ಕಟ್ಟಿದನು ವೆಯ್ನಾಮೊಯ್ನೆನ್ ಆಗ
ಮಾಡಿದನು ಹುಟ್ಟುಕೋಲು ಇಲ್ಮಾರಿನೆನ್
ಸಿದ್ಧವಾಯಿತು ದೋಣಿ ಹುಟ್ಟು ಬಳೆ ಕೋಲು
ಹುಟ್ಟು ಹಾಕುತಾ ದೋಣಿ ನೀವಾ ನದಿಯಲ್ಲಿ

ಇಲ್ಮತಾರ್ ಚೆಲುವೆ ಸೃಷ್ಟಿಕರ್ತನ ಮಗಳು
ಹೀಗೆ ನುಡಿದಳು:
ಯಾವ ಕಡೆಯ ಜನ ನೀವು
ಯಾವ ಹೆಸರಿಂದ ನಿಮ್ಮ ಕರೆಯುವರು ..

ವೆಯ್ನಾಮೊಯ್ನನ್ ನುಡಿದ
ನೋಡಿದರೆ ತಿಳಿಯುವುದು ನಾವು ನಾವಿಕರು
ನಾನು ವೆಯ್ನಾಮೊಯ್ನನ್ ಜೊತೆಯವನು ಇಲ್ಮಾರಿನೆನ್
ಹೇಳೀಗ ನಮಗೆ ಯಾರವಳು ನೀನು
ಯಾವ ಹೆಸರಿಂದ ಕರೆಯುವರು ನಿನ್ನ

ಹೇಳಿದಳು ಅವಳು
ಎಲ್ಲ ಸ್ತ್ರೀಯರಿಗೂ ಹಿರಿಯ ಸ್ತ್ರೀಯಳು ನಾನು
ಆಕಾಶದಲ್ಲಿರುವ ಆದಿ ಮಹಿಳೆ
ಎಲ್ಲ ತಾಯಂದಿರಿಗೂ ಮೊದಲ ತಾಯಿ
ಮದುವೆ ಆಗಿರುವೆ ಐದು ಸಲ ನಾನು
ಆರು ಸಲ ವಧುವಾಗಿ ಸಿಂಗಾರವಾಗಿರುವೆ
ವೀರಪುರುಷರೆ ನೀವು ಹೊರಟಿರುವಿರೆಲ್ಲಿಗೆ
ಸಾಗಿಹುದು ಪಯಣ ಎತ್ತ ಕಡೆಗೆ

ವೆಯ್ನಾಮೊಯ್ನನ್ ನುಡಿದ :
ಆರಿ ಹೋಗಿದೆ ನಮ್ಮ ಎಲ್ಲ ಮನೆಗಳ ಬೆಂಕಿ
ಆರಿ ಹೋಗಿದೆ ಬೆಳಕು ಕತ್ತಲಾವರಿಸಿ
ಬೆಂಕಿ ಇಲ್ಲದೆಯೆ ಬಹುಕಾಲವಾಯಿತು
ಮುಳುಗಿಹೆವು ಕತ್ತಲಲಿ ಬಹು ಕಾಲದಿಂದ
ನಿರ್ಧರಿಸಿದೆವು ಕೊನೆಗೆ ಹುಡುಕಲದನು
ಈಗಷ್ಟೆ ಬಾನಿಂದ ಬಿದ್ದ ಬೆಳಕನ್ನು
ಮುಗಿಲಿಂದ ಕೆಳಗೆ ಬಿದ್ದ ಬೆಂಕಿಯನು

ಅವಳು ಹೇಳಿದಳು
ಹುಡುಕುವುದು ಕಷ್ಟ ಬೆಂಕಿ ಜಾಡನ್ನು
ಈಗಾಗಲೇ ಮಾಡಿಹುದು ಬಹಳ ಅನರ್ಥ
ಉಕ್ಕೊ ಹಚ್ಚಿದ ಬೆಂಕಿ ಬಿದ್ದಿಹುದು ಕೆಳಗೆ
ಸೃಷ್ಟಿಕರ್ತನ ಸಾಮ್ರಾಜ್ಯದಿಂದ ಕೆಳಗೆ
ಹೊಗೆ ಕೊಳವೆ ಒಳಗಿಂದ
ಒಣ ಮರದ ತುದಿಯಿಂದ
ಗುಡುಗುದೇವತೆಯ ಹೊಸ ಸೌಧದಲ್ಲಿ
ಮಾಡಿಹುದು ಬೆಂಕಿ ಬಲು ದುರುಳ ಕೆಲಸ
ಭಯ ಭೀತಿ ಹುಟ್ಟಿಸುವ ಕೆಟ್ಟ ಕೆಲಸ

ಸುಟ್ಟು ಹಾಕಿತು ಬೆಂಕಿ ಹೆಂಗಸರ ಎದೆಯನ್ನು
ತರಳೆಯರ ವಕ್ಷವನು
ಬಾಲಕರ ಕಾಲನ್ನು
ಯಜಮಾನರ ಗಡ್ಡವನು
ಎದೆ ಹಾಲು ಕುಡಿವಂಥ
ತೊಟ್ಟಿಲ ಎಳೆ ಕಂದನನು

ಇಲ್ಲಿಯೂ ಮಾಡಿತು ಅದೆ ದುಷ್ಟ ಕೆಲಸ
ಸುಟ್ಟು ಹಾಕಿತು ಎಳೆ ಕಂದನನು
ತಾಯ ಎದೆಯನ್ನು
ಮಗುವು ಸೇರಿತು ಪರಲೋಕವನ್ನು
ಅಸುನೀಗಿತು ಮಗುವು ಉರಿ ಬೆಂಕಿಯಿಂದ

ಅಪಾರವಾದುದು ಆ ತಾಯ ಜ್ಞಾನ
ಬೆಂಕಿನಂದಿಸುವುದು ತಿಳಿದವಳು ಅವಳು
ಬೆಂಕಿ ಜ್ವಾಲೆಯನು ಹೊಡೆದಟ್ಟಬಲ್ಲವಳು
ಸಣ್ಣ ಸೂಜಿಯ ಕಣ್ಣಿಂದ ಅವಳು
ಹೊಳೆವ ಕತ್ತಿಯ ಅಲುಗಿನಿಂದ ಅವಳು
ಉತ್ತ ಹೊಲದಿಂದ ದೂರ ಅಟ್ಟ ಬಲ್ಲಳು ಅವಳು

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ ಕೇಳಿದನು
ಎಲ್ಲಿ ಹೋಯಿತು ಬೆಂಕಿ ? ಆಸರೆಯು ಎಲ್ಲಿ
ಸಿಕ್ಕಿತೇ ಆಸರೆ ದೇವಲೋಕದಲ್ಲಿ
ಸರೋವರದಲ್ಲಿ ? ಕಾಡಿನಲ್ಲಿ ?

ಆದಿ ಮಾತೆ ನುಡಿದಳು:
ಹೊರಟ ಮೇಲಿಲ್ಲಿಂದ ಅದು ಹೋಯಿತು ಮುಂದೆ
ತಿರುಗಾಡುತ್ತಾ ಹೋಯಿತು
ಉರಿಜ್ವಾಲೆ ಮುಂದೆ
ಊರುಗಳ ಸುಟ್ಟಿತು ಜವುಗನ್ನು ಸುಟ್ಟಿತು
ರಭಸದಲಿ ನುಗ್ಗಿತು
ನೀರಲ್ಲಿ ಕೊನೆಗೆ
ಅಲೂ ಸರೋರವದ ಅಲೆಯೊಳಗೆ
ಅಲ್ಲಿಂದ ಎದ್ದವು ಬೆಂಕಿ ನಾಲಗೆ
ಚಟ ಪಟನೆ ಸಿಡಿಯುತ್ತ ಕಿಡಿ ಮೇಲಕೆದ್ದವು

ಮೂರು ಬೇಸಗೆ ರಾತ್ರಿ ಒಂಭತ್ತು ಮಾಗಿಯ ರಾತ್ರಿ
ಜ್ವಾಲೆ ಎದ್ದವು ನೀರಲ್ಲಿ ಫರ್ ಮರಗಳೆತ್ತರಕೆ
ಅಬ್ಬರಿಸಿತು ನೀರು ದಂಡೆ ಮೇಲಕ್ಕೆ
ಬಂದು ಬಿದ್ದವು ಮೀನು ದಂಡೆಯಲ್ಲಿ
ಸಿಕ್ಕಿಬಿದ್ದವು ಮೀನು ಬಂಡೆಯಲ್ಲಿ
ಸುತ್ತೆಲ್ಲ ನೋಡಿದವು ಬದುಕುವುದು ಹೇಗಿನ್ನು
ಗೋಳಾಡಿದವು ಮೀನು ನೆಲೆ ಕಳೆದುಕೊಂಡು

ಡೊಂಕು ಬೆನ್ನಿನ ಮೀನು ಬಾಯಿ ಹಾಕಿತು ಉರಿಗೆ
ನುಂಗಲಾಗಲಿಲ್ಲ ಉರಿ ಬೆಂಕಿ ಅದಕೆ
ನೀಲಿ ಫೊವನ್ ಮೀನು ಬಾಯಿ ಹಾಕಿತು ಉರಿಗೆ
ಒಂದೇ ಗುಟುಕಿಗೆ ನುಂಗಿ ಆರಿಸಿತು ತಣ್ಣಗೆ
ಶಾಂತವಾಯಿತೀಗ ಅಲೂ ಸರೋವರವು
ದಡದಿಂದ ಹಿಂದಕ್ಕೆ ಸರಿದು ಬಂದಿತು ನೀರು
ನೀರು ಬಂದಿತ್ತು ಮೊದಲಿದ್ದ ಮಟ್ಟಕ್ಕೆ
ಒಂದೇ ಒಂದು ರಾತ್ರಿಯೊಳಗಾಗಿ

ಕಳೆದಿತ್ತು ಸಮಯ ಸ್ವಲ್ಪ ಮಾತ್ರ
ಉರಿ ಬೆಂಕಿ ಫೊವನ್ ಹೊಟ್ಟೆಯೊಳಗೆ
ಆವರಿಸಿತು ಭಯವು ತಾಳದಾಯಿತು ಸಂಕಟವು
ದಿಕ್ಕೆಟ್ಟು ಈಜಿತು ಮೇಲೆ ಕೆಳಗೆಲ್ಲ
ಒಂದು ದಿನ ಎರಡು ದಿನ ಸರೋವರವೆಲ್ಲ
ಸಾಲ್ಮನ್ ಗುಂಪುಗಳ ಬಂಡೆ ಎಡೆಯಲ್ಲಿ
ಸಹಸ್ರ ನಡುಗಡ್ಡೆ ದ್ವೀಪದಲ್ಲಿ

ಘೋಷಿಸಿದವು ಹೀಗೆ ನಡುಗಡ್ಡೆಯೆಲ್ಲ
ಹೇಳಿದವು ಹೀಗೆ ಭೂಶಿರಗಳೆಲ್ಲ:
ಈ ನೀರಿನೊಳಗೆಲ್ಲೆಲ್ಲೂ ಸರೋರವದಲೆಲ್ಲೂ
ನುಂಗದಿರಿ ಈ ಪಾಪಿ ಮೀನನ್ನು ಯಾರೂ
ತಿಂದವರು ಸಾಯುವಿರಿ ಉರಿ ತಾಪದಲ್ಲಿ

ಕೇಳಿಸಿಕೊಂಡಿತು ಈ ಮಾತು ಸಾಲ್ಮನ್ ಮೀನು
ನುಂಗಿ ಹಾಕಿತು ಫೊವನ್ ಮೀನನ್ನು
ಕಳೆದಿತ್ತು ಸಮಯ ಸ್ವಲ್ಪ ಮಾತ್ರ
ಉರಿಬೆಂಕಿ ಸಾಲ್ಮನ್ ಹೊಟ್ಟೆಯಲ್ಲಿ

ಆವರಿಸಿತು ಭಯವು
ತಾಳದಾಯಿತು ಸಂಕಟವು
ದಿಕ್ಕೆಟ್ಟು ಈಜಿತು ಮೇಲೆ ಕೆಳಗೆ

ಒಂದು ದಿನ ಎರಡು ದಿನ ಸರೋವರವೆಲ್ಲ
ಸಾಲ್ಮನ್ ಗುಂಪುಗಳ ಬಂಡೆ ಎಡೆಯಲ್ಲಿ
ಸಾವಿರಾರು ನಡುಗಡ್ಡೆ ದ್ವೀಪದಲ್ಲಿ

ಘೋಷಿಸಿದವು ಹೀಗೆ ನಡುಗಡ್ಡೆಯೆಲ್ಲ
ಹೇಳಿದವು ಹೀಗೆ ಭೂಶಿರಗಳೆಲ್ಲ
ಈ ನೀರಿನೊಳಗೆಲ್ಲೆಲ್ಲೂ
ಈ ಅಲೂ ಸರೋವರದಲೆಲ್ಲೂ
ನುಂಗದಿರಿ ಈ ಪಾಪಿ ಮೀನನ್ನು ಯಾರೂ
ತಿಂದವರು ಸಾಯುವಿರಿ ಉರಿ ತಾಪದಲ್ಲಿ

ಮೂರನೆ ಸಲ ಈ ಸಾಲ್ಮನ್ ಮೀನನ್ನು ಬೂದು ಬಣ್ಣದ ಪೈಕ್ ಮೀನು ನುಂಗುತ್ತದೆ. ಅದೂ ಸಹ ಸಾಲ್ಮನ್ ಪೊವನ್‌ಗಳ ಹಾಗೆಯೇ ಉರಿ ತಾಳದೆ ಒದ್ದಾಡುತ್ತದೆ. ಆನಂತರ.......

ಹಿರಿಯ ವೆಯ್ನಾಮೊಯ್ನನ್ ಕಮ್ಮಾರ ಇಲ್ಮಾರಿನೆನ್
ಬಲೆ ಹೆಣೆದರು ನಾರು ತೊಗಟೆಯಿಂದ
ಅದ್ದಿದರು ವಿಲ್ಲೋ ರಸದಲ್ಲಿ ಅದನು
ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಹೆಂಗಸರ ಕಳುಹಿದನು ಬಲೆ ಬೀಸಲೆಂದು
ಬೀಸಿದರು ಬಲೆಯನ್ನು ನಡುಗಡ್ಡೆ ದ್ವೀಪಕ್ಕೆ
ಸಾಲ್ಮನ್ ಮೀನುಗಳ ಸೀಳು ಬಂಡೆಗಳಿಗೆ
ಬೀಸಿದರು ಪೊವನ್‌ಗಳಿರುವ ತಾಣಕ್ಕೆ
ಕಂದು ಜೊಂಡುಗಳು ತೂಗಾಡುವ ತಾಣಕ್ಕೆ

ಹಿಡಿಯುವಾತುರದಲ್ಲಿ ಮುಳುಗಿಸಿದರದನು
ತಿರುವು ಮುರುವಾಗಿ ಬೀಸಿದರು ಅದನು
ತಪ್ಪು ದಿಕ್ಕಲ್ಲಿ ಎಳೆದರದನು
ಸಿಗಲಿಲ್ಲ ಮೀನು ಫಲವಿಲ್ಲ ಶ್ರಮಕ್ಕೆ

ಧುಮುಕಿದರು ಸೋದರರು ನೀರಿನೊಳಗೆ
ಬಲೆ ಎಳೆದು ಹಾಕಿದರು ನೀರಿನಾಳಕ್ಕೆ
ಬಂಡೆಗಲ್ಲಿನ ತಳಕೆ ಕಲೆವಾಲಾ ನೊರಜುಗಲ್ಲಿಗೆ

ಸಿಗಲಿಲ್ಲ ಆ ಮೀನು ಸಿಗಲೇಬೇಕಿದ್ದ ಮೀನು
ಬಳಿ ಸುಳಿಯಲಿಲ್ಲ ಪೈಕ್ ಅವರ ಬಳಿಗೆ
ಮೀನುಗಳು ಚಿಕ್ಕವು ಬಲೆ ಕಣ್ಣು ದೊಡ್ಡದು

ಮಾತಾಡಿಕೊಂಡವು ಮೀನು ತಮ್ಮ ತಮ್ಮಲ್ಲೆ
ಒಂದು ಪೈಕ್ ಮತ್ತೊಂದು ಪೈಕ್ ಜೊತೆಗೆ ಹೀಗೆ
ಒಂದು ಸಾಲ್ಮನ್ ಮತ್ತೊಂದು ಸಾಲ್ಮನ್ ಜೊತೆಗೆ ಹೀಗೆ
ಒಂದು ಕೇಳಿತು ಇನ್ನೊಂದು ಮೀನನ್ನು ಹೀಗೆ
ನಾಶವಾಗಿರಬಹುದೇ ಆ ವೀರ ಪುಂಗವರು
ಕಲೇವಾ ನಾಡಿನ ಆ ವೀರಪುತ್ರರು
ತೆಳ್ಳನೆಯ ಬಲೆಯ ಈ ನೀರಲ್ಲಿ ಎಳೆದವರು
ನಾರಲ್ಲಿ ಮೀನ ಬಲೆ ಮಾಡಿದವರು
ಉದ್ದ ಕೋಲುಗಳಿಂದ ನೀರನ್ನು ಬಡಿದವರು
ಉದ್ದ ಕಟ್ಟಿಗೆಯಿಂದ ನೀರು ನೂಕಿದಂಥವರು

ಹಿರಿಯ ಕೀರ್ತಿವಂತ ವೆಯ್ನಾಮೊಯ್ನನ್ ನುಡಿದ
ಇಲ್ಲ ಸತ್ತಿಲ್ಲ ವೀರಪುಂಗವರು
ಕಲೇವಾದ ಸಂತಾನ ಸಾವನಪ್ಪಿಲ್ಲ
ಸತ್ತರೊಬ್ಬನು, ಹುಟ್ಟುವನು ಮತ್ತೊಬ್ಬ
ಅತ್ಯುತ್ತಮ ದೋಣಿಯನು ತರುವರವರು
ಇನ್ನೂ ಉದ್ದ ಕೋಲಲ್ಲಿ ಬಡಿಯುವರು ನೀರು
ಇದಕಿಂತ ಬಲವಾದ ಬಲೆಯ ಬೀಸುವರು.

31. ಬೆಂಕಿಯ ಬಂಧನ

ವೀರರು ಲಿನನ್ ಬಲೆ ಮಾಡಿ, ಬೆಂಕಿ ನುಂಗಿದ ಮೀನನ್ನು ಹಿಡಿದರು. ಮೀನನ್ನು ಹಿಡಿಯುವಾಗ ವೆಯ್ನಾಮೊಯ್ನನ್ ಹೀಗೆ ಯೋಚಿಸಿದ:

ಹಿಡಿಯುವುದು ಸರಿಯೇ ಬರಿಗೈಯಲಿದನು
ಇಕ್ಕುಳವ ಬಿಟ್ಟು ಕಲ್ಲಿನ ಕೈಗವಸು ಬಿಟ್ಟು
ತಾಮ್ರದ ಕಣಪಟ್ಟಿ ಬಿಟ್ಟು ಬಿಟ್ಟು

ಆಗ ಸೂರ್ಯನ ಪುತ್ರ ನುಡಿದ ಹೀಗೆ
ನಾನೆ ಹಿಡಿದೆತ್ತುವೆನು ಪೈಕನ್ನು ಮೇಲೆ
ದೊಡ್ಡ ಚೂರಿಯೊಂದಿರೆ ಅಷ್ಟೆ ಸಾಕಿತ್ತು
ನನ್ನ ತಂದೆಯು ನನಗೆ ಕೊಟ್ಟಿದ್ದನದನು

ಆಗ ಬಾನಿಂದ ಕೆಳಗೆ ಇಳಿದು ಬಂದಿತು ಕತ್ತಿ
ಮುಗಿಲಿಂದ ಕೆಳಗೆ ಬಂದು ಬಿತ್ತು
ಬಂಗಾರ ಹಿಡಿಕೆ ಬೆಳ್ಳಿ ಅಲುಗಿನ ಕತ್ತಿ
ಬಂದು ಬಿದ್ದಿತು ಅವನ ನಡುಪಟ್ಟಿಯಲ್ಲಿ
ಹಿಡಿದದನು ಕೈಯಲ್ಲಿ ಬಲು ಭದ್ರವಾಗಿ
ಸೀಳಿ ಹಾಕಿದನು ಪೈಕ್ ಮೀನ ಹೊಟ್ಟೆ
ದೊಡ್ಡ ಮುಸುಡಿಯ ಒಡಲು
ಮಿಣ ಮಿಣನೆ ಮಿರುಗುವ ಪೈಕ್ ಮೀನಿನೊಡಲು

ಟ್ರಾಟ್ ಮೀನು ಕಂಡ ಅದರ ಹೊಟ್ಟೆಯಲಿ
ಟ್ರಾಟ್ ಮೀನ ಹೊಟ್ಟೆಯಲ್ಲಿ ಪೊವನ್ ಮೀನು
ಸೀಳಿದನು ನುಣುಪು ಪೊವನ್‌ಮೀನನ್ನು
ಅದರ ಹೊಟ್ಟೆಯೊಳಗಿತ್ತು ನೀಲಿ ಹುರಿ ಉಂಡೆ
ಅಡಗಿಕೊಂಡಿತ್ತು ಕರುಳಿನಲ್ಲಿ
ಕರುಳ ಮೂರನೆ ಪದರದಲ್ಲಿ

ಬಿಚ್ಚಿದನು ನೀಲಿ ಹುರಿ ಚೆಂಡು ಅವನು
ಅದರೊಳಗೆ ಕಂಡನು ಕೆಂಪು ಉರಿ ಚೆಂಡು
ಕಿಡಿಬೆಂಕಿ ಇತ್ತು ಕೆಂಪು ಉರಿ ಚೆಂಡಿನಲಿ
ಬಾನಿಂದ ಹಿಂದೊಮ್ಮೆ ಕೆಳಗೆ ಇಳಿದಿತ್ತು

ಮುಗಿಲ ಮೇಲಿಂದ ಕೆಳಗೆ ಬಿದ್ದಿತ್ತು
ಎಂಟು ಸ್ವರ್ಗಗಳಿಂದ ಧರೆಗಿಳಿದು ಬಂದಿತ್ತು
ಒಂಭತ್ತು ಗಗನಗಳಿಂದ ಕೆಳಗೆ ಬಂದಿತ್ತು

ವೆಯ್ನಾಮೊಯ್ನನ್ ಚಿಂತಿಸಿದ
ಕೊಂಡೊಯ್ಯುವುದು ಹೇಗೆ ಕಿಡಿಬೆಂಕಿ ಇದನು
ಬೆಂಕಿ ಇರದೆ ಕೊರೆವಂಥ ಸೌಧಗಳಿಗೆ
ಕವಿದ ಕತ್ತಲಿನ ಮಂಕಾದ ಕೋಣೆಗೆ

ಅಷ್ಟರಲ್ಲಿಯೇ ಚಿಮ್ಮಿ ಹಾರಿತು ಬೆಂಕಿ ಬಲು ರಭಸದಿಂದ
ಅದನು ಹಿಡಿದಿದ್ದ ರವಿ ಪುತ್ರನಿಂದ
ಸುಟ್ಟು ಹೋಯಿತು ವೆಯ್ನಾಮೊಯ್ನನ್ ಗಡ್ಡ
ಅದಕೂ ಮಿಗಿಲಾಗಿ, ಕಮ್ಮಾರನನ್ನು
ಸುಟ್ಟು ಹೋದವು ಕೆನ್ನೆ ಕರುಕಾದವು ಹಸ್ತ
ಮುಂದಕೋಡಿತು ಬೆಂಕಿ ಬಹಳ ತ್ವರೆಯಿಂದ
ಆಲೂ ಸರೋವರದ ನೀರಲೆಯ ಮೇಲೆ

ಜೂನಿಪರ್‌ಗಳೆಡೆಯಿಂದ ಮುಂದೆ ನುಗ್ಗುತ್ತ
ಬಂದ ದಾರಿಯನೆಲ್ಲ ಸುಟ್ಟು ಹಾಕುತ್ತ
ಗಂಭೀರ ಫರ್ ಮರವ ಸುಟ್ಟು ಹಾಕಿ
ರಭಸದಿಂದ ಹಾಗೆಯೇ ಮುಂದೆ ನುಗ್ಗಿ
ಸುಟ್ಟು ಹೋಯಿತು ಅರ್ಧ ಪೊಹ್ಜಾದ ನಾಡು
ದೂರ ಸೀಮೆಯ ಸ್ಯಾವೊ ಗಡಿನಾಡು
ಸುಟ್ಟೆರಡು ಬದಿ ಕರಿಲಿಯಾ ನಾಡು

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಹಿಂಬಾಲಿಸಿದ ಜಾಡು ಬಹಳ ಶ್ರಮದಿಂದ
ಕಾಡೊಳಗೆ ನುಗ್ಗಿ ಉಗ್ರ ಬೆಂಕಿಯ ಹಿಂದೆ
ಕೊನೆಗೂ ಸಿಕ್ಕಿತು ಕೈಗೆ ಮರದ ಬೊಡ್ಡೆಯ ನಡುವೆ
ಅಡಗಿತ್ತು ಬೆಂಕಿ ಅಲ್ಡರ್ ಮೋಟುಗಳ ನಡುವೆ

ವೆಯ್ನಾಮೊಯ್ನನ್ ನುಡಿದ ಗಟ್ಟಿ ದನಿಯಲ್ಲಿ
ಅಗ್ನಿಯೇ, ಜುಮಾಲಾ ಸೃಷ್ಟಿಸಿದ ಶಿಶುವೇ
ಹೋಗದಿರು ವ್ಯರ್ಥ ನೆಲದ ಅಡಿಯಲ್ಲಿ
ಗುರಿಯಿಲ್ಲದೆ ದೂರ ಬಯಲಿನಲ್ಲಿ

ಇದ್ದರೊಳ್ಳೆಯದು ಕಲ್ಲಿನೊಲೆಯಲ್ಲಿ
ಕಿಡಿ ಒಟ್ಟುಗೂಡಿಸಿ ಕಲ್ಲಿದ್ದಲಿನಲ್ಲಿ
ಕಿಡಿಯಾಡಬಹುದು ಹಗಲಿನಲ್ಲಿ
ಅಡಿಗೆ ಮನೆಯ ಬರ್ಚ್ ಸೌದೆಯಲ್ಲಿ
ಇರುಳು ಅಡಗಿರಬಹುದು ಬೆಂಕಿ ಡಬ್ಬಿಯಲ್ಲಿ

ಹೀಗೆಂದು ಹೇಳುತ್ತ ನೂಕಿದನು ಕಿಡಿಯನ್ನು
ಒಣದೂದಿಯಲ್ಲಿ
ಬರ್ಚ್ ಮರದ ಬೂಷ್ಟಿನಲ್ಲಿ
ತೆಗೆದುಕೊಂಡು ಬಂದನು ಬೆಂಕಿ ಪಾತ್ರೆಯಲ್ಲಿ
ಕತ್ತಲು ಕವಿದಂಥ ನಾಡಿಗದನು
ಈಗಿತ್ತು ಬೆಂಕಿ ಮನೆ ಮನೆಗಳೊಳಗೆ
ಹೊಳೆಯುತ್ತ ಎಲ್ಲ ಕೋಣೆಗಳ ಒಳಗೆ

ಇಲ್ಮಾರಿನೆನ್ ಕಮ್ಮಾರ
ಬೇಗ ಬಂದನು ಕಡಲ ದಂಡೆಯ ಬಳಿಗೆ
ಶಿಲೆಗಳನು ನೀರು ತೋಯಿಸುವ ತಾಣಕ್ಕೆ
ಉರಿಬೆಂಕಿ ನೋವಲ್ಲಿ ಸುಡುವ ಸಂಕಟದಲ್ಲಿ
ಕುಳಿತುಕೊಂಡನು ಅವನು ಬಂಡೆ ಬಳಿಯಲ್ಲಿ

ಶಮನವಾಯಿತು ಬೆಂಕಿ ಕಡಿಮೆಯಾಯಿತು ತಾಪ
ಹೇಳಿದನು ಹೀಗೆ ಈ ಮಾತಿನಲ್ಲಿ
ಅಗ್ನಿಯೇ ಜುಮಾಲನು ಸೃಷ್ಟಿಸಿದ ಶಿಶುವೇ
ಸೂರ್ಯದೇವನ ಪುತ್ರ ಪನುವೆಂಬ ಹೆಸರವನೆ
ಯಾಕಿಂಥ ಕೋಪ ನನ್ನ ಮೇಲೆ
ಸುಟ್ಟು ಹಾಕಿದೆ ಕೆನ್ನೆ ಸುಟ್ಟು ಹಾಕಿದೆ ಸೊಂಟ
ಸುಟ್ಟು ಹಾಕಿರುವೆ ನನ್ನ ಎರಡೂ ಪಕ್ಕ
ಆರಿಸಲಿ ಹೇಗೆ ಇದರ ಉರಿಯನ್ನು
ಕಡಿಮೆ ಮಾಡಲಿ ಹೇಗೆ ತಾಪವನ್ನು
ಕೆಡುಕು ಮಾಡುವ ಶಕ್ತಿ ಕುಂದಿಸಲಿ ಹೇಗೆ
ಉರಿತಾಪದ ನೋವು ಕಡಿಮೆ ಮಾಡಲಿ ಹೇಗೆ

ಬಾರಮ್ಮ ತರುಣಿ ತುರ್ಜಾದ ನಾಡಿಂದ
ಹಿಮದ ಕಾಲ್ಚೀಲ ಹಿಮದ ಬೂಟು
ಹಿಮದ ಲಂಗದ ಹುಡುಗಿ ಹಿಮಪಾತ್ರೆ ಹಿಡಿದು

ಚಿಮುಕಿಸು ಹಿಮಜಲವ
ಸುಟ್ಟ ಗಾಯದ ಮೇಲೆ
ಚಿಮುಕಿಸು ಹಿಮವನ್ನು ಬೆಂಕಿ ನೋವಿನ ಮೇಲೆ

ಇದು ಸಾಕಾಗದಿದ್ದರೆ ಬಾರಯ್ಯ ತರುಣನೇ ಪೊಹ್ಜಾದ ನಾಡಿಂದ
ಬಾ ಮಗುವೇ ನೀನು ಲ್ಯಾಪ್‌ಲ್ಯಾಂಡಿನಿಂದ
ಪಿಮೆಂಟೋಲಾದ ಎತ್ತರದ ಯುವಕನೇ
ಬನದ ಫರ್ ಮರಕಿಂತ ಎತ್ತರದ ಯುವಕ
ಜವುಗುಪ್ಪೈನ್‌ಗಿಂತ ಎತ್ತರದ ಯುವಕ
ಬಿಳಿ ಮಂಜಿನ ಕೈಗವಸು ನಿನ್ನ ಕೈಗೆ
ಬಿಳಿ ಮಂಜಿನ ಬೂಟು ನಿನ್ನ ಪಾದಕ್ಕೆ
ಬಿಳಿ ಮಂಜಿನ ಟೋಪಿ ನಿನ್ನ ಶಿರಕೆ
ತೆಗೆದುಕೊಂಡು ಬಾ ಬಿಳಿ ಮಂಜು ಪೊಹ್ಜೋಲಾದಿಂದ
ಹಿಮದಲ್ಲಿ ಕಲ್ಲಾದ ಹಳ್ಳಿಯಿಂದ

ಅಲ್ಲಿಹುದು ನೋಡು ಸಮೃದ್ಧ ಮಂಜು
ಸರೋವರ ಹಿಮಮಯವು ನದಿಯು ಹಿಮವು
ಗಾಳಿಯೊಳಗೆಲ್ಲ ತುಂಬಿತುಳುಕುವ ಹಿಮವು
ನೆಗೆದಾಡುತ್ತವೆ ಹುಲ್ಲೆ ಹಿಮದ ಮೇಲೆ
ನಲಿದಾಡುತ್ತವೆ ಕರಡಿ ಹಿಮದ ಮೇಲೆ
ಹಿಮಗುಡ್ಡೆ ಮಧ್ಯದಲಿ ಹಿಮಪರ್ವತದಂಚಲ್ಲಿ
ನಡೆದಾಡುತ್ತವೆ ಹಂಸೆ ಹಿಮದ ತಡಿಯಲ್ಲಿ
ತೇಲಾಡುತ್ತವೆ ಬಾತು ಹಿಮದ ನದಿಯಲ್ಲಿ

ತೆಗೆದುಕೊಂಡು ಬಾ ಬಿಳಿ ಮಂಜು
ಮಲೆಯ ಇಳಿಜಾರಿಂದ
ಬಿತ್ತರದ ಪರ್ವತದ ಅಂಚಿನಿಂದ
ಬಿಳಿ ಮಂಜು ಹಾಕಿ ಶಮನ ಮಾಡಯ್ಯ
ಹಿಮವನ್ನು ಹಾಕಿ ತಂಪು ಮಾಡಯ್ಯ
ಬೆಂಕಿಯಿಂದಾದ ಈ ಗಾಯಗಳನು
ಸುಟ್ಟು ಹೋದಂಥ ಈ ಗಾಯಗಳನು

ಇದು ಸಾಕಾಗದಿದ್ದರೆ
ಉಕೋ ದೇವಾಧಿದೇವ

ಮುಗಿಲುಗಳ ನಾಯಕನೆ ಮೋಡಗಳ ಅರಸನೆ
ಮುಗಿಲೊಂದ ಕಳಿಸಯ್ಯ ಪೂರ್ವದಿಂದ
ದಟ್ಟ ಮೋಡವನು ಪಡುವಲಿಂದ
ಮುಗಿಲಂಚಿಗೆ ಮುಗಿಲಂಚು ಒತ್ತಾಗಿ ಕೂಡಿಸು
ಸಂದು ಬಿಡದಂತೆ ಒತ್ತಾಗಿ ಕೂಡಿಸು
ಹಿಮವನ್ನು ಕಳಿಸು ಮಂಜನ್ನು ಕಳಿಸು
ಇಷ್ಟೊಂದು ಸುಟ್ಟಿರುವ ಉರಿ ಗಾಯಗಳಿಗೆ
ಬೆಂಕಿಯಿಂದಾದ ಈ ಉರಿಯ ಗಾಯಕ್ಕೆ

ಕಂಡುಕೊಂಡನು ಹೀಗೆ ಕಮ್ಮಾರ ಇಲ್ಮಾರಿನೆನ್
ಬೆಂಕಿ ತಣಿಸುವ ಮಾರ್ಗ
ಗುಣವಾಯಿತು ಉರಿಗಾಯ ಪೂರ್ಣವಾಗಿ
ಮತ್ತೆ ಬಂದಿತ್ತು ಮೊದಲಿದ್ದ ಶಕ್ತಿ
ಉರಿ ಬೆಂಕಿ ಗಾಯ ಪೂರ್ಣ ಗುಣವಾಗಿ

32. ಹುಸಿ ಸೂರ್ಯ ಚಂದ್ರರು ನಿಜ ಸೂರ್ಯ ಚಂದ್ರರು

ಆದರೂ ಸೂರ್ಯ ಹೊಳೆಯಲಿಲ್ಲ
ಚಂದಿರನು ಹೊಂಬೆಳಕು ಸೂಸಲಿಲ್ಲ
ವೆಯ್ನೊಲಾದ ಕತ್ತಲಿನ ಮನೆಗಳಲ್ಲಿ
ಕಲೆವಾಲಾ ವಿಸ್ತಾರ ಬಯಲಿನಲ್ಲಿ

ಕವಿದಿತ್ತು ಪೈರಿಗೆ ದಟ್ಟ ಹಿಮಮಂಜು
ತತ್ತರಿಸಿದವು ದನಕರು ಕೊರೆವ ಚಳಿಗೆ
ಆದೇನೋ ಕಸಿವಿಸಿ ಹಕ್ಕಿಗಳಿಗೆಲ್ಲ
ಹೇಳಲಾರದ ದುಃಖ ನರ ಮನುಷ್ಯರಿಗೆ
ಇಲ್ಲ ಸೂರ್ಯನ ತೇಜ ಚಂದಿರನ ಬೆಳಕು

ಪೈಕ್ ಮೀನಿಗೆ ತಿಳಿದಿತ್ತು ಈಜುವಾಳ
ಡೇಗೆಗೆ ತಿಳಿದಿತ್ತು ಹಕ್ಕಿ ಜಾಡು
ತಿಳಿದಿತ್ತು ಗಾಳಿಗೆ ಹಡಗು ಚಲಿಸುವ ದಿಕ್ಕು
ತಿಳಿದಿರಲಿಲ್ಲ ಮನುಜರಿಗೆ
ಇದು ಹಗಲೋ ಇರುಳೋ

ಮೋಡ ಕವಿದಿದ್ದ ಬಯಲು ನಾಡಲ್ಲಿ
ಮಂಕು ಕವಿದಿದ್ದ ನಡುಗಡ್ಡೆಯಲ್ಲಿ
ಯುವಕರು ಕೇಳಿದರು ಪರಿಹಾರವನ್ನು
ದೊಡ್ಡವರು ಚಿಂತಿಸಿದರು ಅವರ ಮಾತನ್ನು
ಚಂದಿರನ ಬೆಳಕಿಲ್ಲ ಬದುಕುವುದು ಹೇಗೆ
ಸೂರ್ಯನಿಲ್ಲದೆ ಜೀವನವು ಹೇಗೆ
ದುಃಸ್ಥಿತಿಯ ನಾಡಲ್ಲಿ ಪಾಪಿಷ್ಠ ಭೂಮಿಯಲಿ

ಬಾಲೆಯರೂ ಕೇಳಿದರು ಪರಿಹಾರವನ್ನು
ಬಂಧುಗಳು ಚಿಂತಿಸಿದರು ಅವರ ಮಾತನ್ನು
ತ್ವರೆಯಿಂದ ಹೋದರು ಕಮ್ಮಾರನಬಳಿಗೆ
ಕಮ್ಮಾರನೇ ಏಳು ಗೋಡೆ ಬದಿಯಿಂದ
ಏಳು ಮೇಲೇಳು ಒಲೆಗೂಡಿನಿಂದ

ಬೆಸೆದು ಕೊಡು ನಮಗಾಗಿ ಹೊಸ ಚಂದ್ರನನ್ನು
ಮಾಡಿಕೊಡು ನಮಗಾಗಿ ಹೊಸ ಸೂರ್ಯನನ್ನು
ಚಂದಿರನ ಬೆಳಕಿರದೆ ಸೊಗಯಿಸದು ಬಾಳು
ರವಿಯ ಬೆಳಕಿರದೆ ಏತರದೀ ಬಾಳು

ಮೇಲೆದ್ದ ಕಮ್ಮಾರ ಬೆಂಕಿಗೂಡಿಂದ
ಬೆಸೆದುಕೊಡಲು ಹೊಸ ಚಂದ್ರನನ್ನು
ಮಾಡಿಕೊಡಲು ಹೊಸ ಸೂರ್ಯನನ್ನು
ಬಂಗಾರ ಚಂದಿರನ ಮಾಡಿಕೊಡಲೆಂದು
ಬೆಳ್ಳಿ ಸೂರ್ಯನನು ಮಾಡಿಕೊಡಲೆಂದು

ಬಂದ ವೆಯ್ನಾಮೊಯ್ನನ್ ಅವನ ಬಾಗಿಲಿಗೆ
ಅಯ್ಯಾ ಕಮ್ಮಾರ ನನ್ನ ಪ್ರಿಯ ಸೋದರ
ಏನು ನಡೆಸಿರುವೆ
ಸುತ್ತಿಗೆಯ ಬಡಿಯುತ್ತ ಒಂದೆ ಸಮನೆ
ಇಲ್ಮಾರಿನೆನ್ ನುಡಿದ
ಮಾಡುತಿಹೆ ಚಂದಿರನ ಚಿನ್ನದಲ್ಲಿ
ಮಾಡುತಿಹೆ ರವಿಯನ್ನು ಬೆಳ್ಳಿಯಲ್ಲಿ
ಮಾಡಿಡುವೆ ಅವರನ್ನು ಬಾನಿನಲ್ಲಿ
ಆರು ಸ್ವರ್ಗಗಳಾಚೆ ಬಾನಿನಲ್ಲಿ

ವೆಯ್ನಾಮೊಯ್ನನ್ ಹಿರಿಯ ಹೀಗೆಂದು ನುಡಿದ
ಅಯ್ಯಾ ಕಮ್ಮಾರ ಇಲ್ಮಾರಿನೆನ್
ನೀನೇನು ಮಾಡಿಹೆಯೋ ಅದು ಪೂರ್ಣ ವ್ಯರ್ಥ
ಹೊಳೆಯದೆಂದಿಗೂ ಚಿನ್ನ ಚಂದಿರನ ಬೆಳಕಂತೆ
ಹೊಳೆಯದೆಂದಿಗೂ ಬೆಳ್ಳಿ ರವಿ ತೇಜದಂತೆ

ಮುಗಿಸಿದನು ಕಮ್ಮಾರ ಕೆಲಸವನ್ನು
ಮಾಡಿಟ್ಟನು ಚಂದ್ರ ಸೂರ್ಯರನ್ನು
ಮೇಲೇರಿಸಿ ಸರಿಯಾದ ಸ್ಥಾನಕ್ಕೆ ಅವರ
ಏರಿಸಿದ ಚಂದಿರನ ಫರ್ ಮರದ ತುದಿಗೆ
ಇಟ್ಟ ಸೂರ್ಯನನು ಪೈನ್ ವೃಕ್ಷದ ತುದಿಗೆ
ಹರಿದಿತ್ತು ಬೆವರು ಹೊಳೆಯಾಗಿ ಹಣೆಯಿಂದ
ಪಟ್ಟ ಶ್ರಮದಿಂದ ಹೊತ್ತ ಹೊರೆಯಿಂದ

ಹೀಗಿಟ್ಟರು ಚಂದಿರನ ಫರ್ ಮರದ ತುದಿಗೆ
ಇಟ್ಟರು ರವಿಯನ್ನು ಪೈನ್ ಮರದ ತುದಿಗೆ
ಆದರೇನು ಚಂದ್ರನಿಗೆ ಇರಲಿಲ್ಲ ಹೊಳಪು
ಅಂತೆಯೇ ಸೂರ್ಯನಿಗೂ ಕಿರಣಗಳ ಬೆಳಕು

ವೆಯ್ನಾಮೊಯ್ನನ್ ಹಿರಿಯ ಹೀಗೆಂದು ನುಡಿದ
ಕಾಲ ಬಂದಿದೆ ಈಗ ಶಕುನವನು ಕೇಳಲು
ಎಲ್ಲಿ ಅಡಗಿಹ ಸೂರ್ಯ ಮರೆಯಾದ ಚಂದ್ರ

ಹಿರಿಯ ವೆಯ್ನಾಮೊಯ್ನನ್ ಆದಿ ಮಂತ್ರವಾದಿ
ಕತ್ತರಿಸಿ ತರಿಸಿದ ಆಲ್ಡರ್‌ಗಳ ಕಡ್ಡಿ
ಕಡ್ಡಿ ಜೋಡಿಸಿದ ಬೆರಳಿಂದ ಕಲೆಸಿದ
ಹೀಗೆಂದು ಹೇಳಿದ
ಕೋರುತಿಹೆ ಉತ್ತರ ಸೃಷ್ಟಿಕರ್ತನೆ ನಿನಗೆ
ಕೊಡು ನಿನ್ನ ಸೂಚನೆ ತಪ್ಪಾಗದ ಹಾಗೆ
ಎಲ್ಲಿ ಅಡಗಿಹನು ಸೂರ್ಯ ನಮ್ಮಿಂದ
ಎಲ್ಲಿ ಮರೆಯಾದ ಚಂದ್ರ ನಮ್ಮಿಂದ
ತಿಳಿಯದಾಗಿದೆ ಕಾಲ ಆವರಿರದ ಆಗಸದಿ

ನಿಜ ಹೇಳಿ ಸಮಿತ್ತುಗಳೇ
ಹೇಳಿ ವಿಶ್ವಾಸವಿಡುವಂಥ ಮಾತು
ನಂಬಿಕೆಯು ಕೆಡದಂಥ ಒಪ್ಪಂದವಿರಲಿ
ಹೇಳಿದರೆ ಮಿಥ್ಯೆ ಬೆಲೆಯಿಲ್ಲ ನಿಮಗೆ
ಎಸೆಯುವೆನು ಒಯ್ದು ನಿಮ್ಮನ್ನು ಬೆಂಕಿಗೆ

ಸಮಿತ್ತು ಹೇಳಿದವು ನಂಬಿಕೆಯ ಮಾತು
ಸಮಿತ್ತು ನುಡಿದವು ಸರಿಯಾದ ಸುಳಿವು
ಅಡಗಿಸಿಹರು ರವಿಯನ್ನು ಶಿಲೆ ಪರ್ವತದಲ್ಲಿ
ಹುದುಗಿಸಿರುವರು ಚಂದ್ರನನು ತಾಮ್ರ ಬೆಟ್ಟದಲ್ಲಿ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಹೀಗೆಂದು ನುಡಿದ
ನಾನು ಪಯಣ ಹೋದರೆ ಪೊಹ್ಜೊಲಾ ನಾಡಿಗೆ
ಹೊಳೆವ ಚಂದ್ರನ ತರುವೆ
ಹೊಳೆವ ರವಿಯನು ತರುವೆ

ಪಯಣ ಹೊರಟನು ಕಗ್ಗತ್ತಲ ನಾಡಿಗೆ
ನಡೆದು ಹೋದನು ದಿನವೊಂದು ದಿನವೆರಡು
ದಿನ ಮೂರರ ಕೊನೆಗೆ ಕಾಣಿಸಿದವು ಕಣ್ಗೆ
ಪೊಹ್ಜಾದ ಬಾಗಿಲು ಶಿಲೆಯ ಪರ್ವತವು

ದನಿಬಿಟ್ಟು ಕೂಗಿದನು ನದಿಯ ಬಳಿ ಬಂದು
ತನ್ನಿ ದೋಣಿಯನು ನದಿ ದಾಟಿಸಲು ನನ್ನ
ಓಗೊಡಲಿಲ್ಲ ಜನರು ದೋಣಿ ಕೊಡಲಿಲ್ಲ
ಒಣ ಸೌದೆ ತಂದನು ರಾಶಿ ಒಡ್ಡಿದನು
ಬೆಂಕಿ ಹಚ್ಚಿದನು ನದಿಯ ದಡದಲ್ಲಿ
ಮೇಲೆದ್ದವು ಹೊಗೆ ಮೋಡ
ಉರಿ ಹಬ್ಬಿ ಆಗಸಕೆ

ಲೌಹಿ, ಪೊಹ್ಜಾದ ಮುದಿ ಒಡತಿ
ನೋಡಿದಳು ಬಂದು ಕಿಟಕಿಯಲ್ಲಿ
ಕೇಳಿದಳು ಹೀಗೆ
ಉರಿಯುತಿಹುದಲ್ಲಿ ಯಾವ ಬೆಂಕಿ
ಕದನದೆನುವಷ್ಟು ದೊಡ್ಡದಲ್ಲ
ಮೀನುಗಾರರದೆನಲು ಚಿಕ್ಕದಲ್ಲ
ಪೊಹ್ಜಾದ ಪುತ್ರ ಹೊರಬಂದ ಬೇಗ
ಹೀಗೆಂದು ನುಡಿದ
ನದಿಯಾಚೆ ದಂಡೆಯಲಿ ಬರುತಿಹನು ವೀರ

ಹಿರಿಯ ವೆಯ್ನಾಮೊಯ್ನನ್
ಕೂಗಿದನು ಮತ್ತೆ ಜೋರಾಗಿ ಹೀಗೆ
ಪೊಹ್ಜಾದ ಪುತ್ರನೆ ತಾರಯ್ಯ ದೋಣಿ
ವೆಯ್ನಾಮೊಯ್ನನ್‌ಗಾಗಿ ತಾರಯ್ಯ ದೋಣಿ
ಉತ್ತರಿಸಿದ ಪೊಹ್ಜಾಪುತ್ರ ಈ ಮಾತಿನಲ್ಲಿ
ಇಲ್ಲೊಂದು ಇರದು ಸಿದ್ಧವಾಗಿಹ ದೋಣಿ
ಈಜಿ ಬಾ ಕೈಯಿಂದ ಪೊಹ್ಜಾದ ಆಳನದಿ
ಕೈಯನ್ನೆ ಬಳಸಿ ಹುಟ್ಟುಗೋಲಾಗಿ

ಹಿರಿಯ ವೆಯ್ನಾಮೊಯ್ನನ್ ಯೋಚಿಸಿದ ಬಹುವಾಗಿ
ಹೀಗೆಂದು ನುಡಿದ
'ಗಂಡೆನ್ನರು ಜನರು ಹಿಂದೆ ಸರಿದವನ'

ಧುಮುಕಿದನು ನೀರಲ್ಲಿ ಪೈಕ್ ಮೀನಿನಂತೆ
ಹರಿವ ನೀರಲ್ಲಿ ಪೊವನ್ ಮೀನಿನಂತೆ
ಈಜಿದನು ಅವನು ಬಲುವೇಗವಾಗಿ
ಒಂದು ಹೆಜ್ಜೆಯ ದಾಟಿ ಎರಡು ಹೆಜ್ಜೆಯ ದಾಟಿ
ಬಂದು ತಲುಪಿದನು ಪೊಹ್ಜಾದ ದಡಕೆ

ಹೇಳಿದರು ಪೊಹ್ಜಾಸುತರು ಕೂಗಿತ್ತು ಸೇನೆ
'ಬಾ ಇಲ್ಲಿ ಅಂಗಳಕ್ಕೆ'
ಅವನು ಬಂದ ಅಂಗಳಕ್ಕೆ
ಹೇಳಿದರು ಪೊಹ್ಜಾ ಸುತರು ಕೂಗಿತ್ತು ಸೇನೆ
'ಬಾ ಇಲ್ಲಿ ಮನೆಯೊಳಗೆ'
ಅವನು ಬಂದ ಮನೆಯೊಳಗೆ
ಕಾಲೂರಿತು ನೆಲದಲ್ಲಿ
ಕೈ ಹಿಡಿಯಿತು ಚಿಲಕ
ನುಗ್ಗಿ ಮನೆಯೊಳಗೆ ನಿಂತ ಸೂರಿನಡಿ

ಕುಳಿತಿದ್ದ ಜನರು ಏಲ್ ಮದ್ಯ ಹೀರುತ್ತ
ಜೇನಂಥ ಸಿಹಿ ಮಧುವ ಕುಡಿಯುತ್ತ ಅವರು
ಕತ್ತಿ ಇದ್ದವು ಅವರ ಸೊಂಟದಲ್ಲಿ
ಗುರಿ ಇದ್ದಿತು ಅವನ ತಲೆಯ ಕಡೆಗೆ
ಗುರಿ ಇದ್ದಿತು ವೀರ ವೆಯ್ನಾಮೊಯ್ನನ್ ತಲೆಗೆ
ಏನಯ್ಯ ಸುದ್ದಿ ದುರುಳ ಪಾಪಿ
ಏನು ಬೇಕಾಗಿತ್ತು ಈಜಿ ಬಂದಿಹೆ ಶೂರ

ಹಿರಿಯ ದೃಢಚಿತ್ತ ವೆಯ್ನಾಮೊಯ್ನನ್ ನುಡಿದ
ಸುದ್ದಿಯೆಲ್ಲ ಚಂದ್ರನದು ವರ್ತಮಾನ ಸೂರ್ಯನದು
ಎಲ್ಲಿಟ್ಟಿರಿ ಸೂರ್ಯನ ಎಲ್ಲಿಗೊಯ್ದಿರಿ ಚಂದ್ರನ
ಪೊಹ್ಜಾ ಸುತರು ಹೇಳಿದರು
ದುಷ್ಟ ಸೇನೆ ಹೇಳಿತು
ಅಡಗಿರುವನು ಸೂರ್ಯ ಶಿಲೆ ಬೆಟ್ಟದಲ್ಲಿ
ಬಂದಿಯಾಗಿಹ ಚಂದ್ರ ಕಲ್ಲು ಬೆಟ್ಟದಲ್ಲಿ
ಅಸಾಧ್ಯ ಪಾರಾಗುವುದು ಬಿಡುಗಡೆಯೆ ಇಲ್ಲ

ಮಾಡೋಣ ಕದನ ಕತ್ತಿ ಹಿಡಿಯೋಣ
ಕತ್ತಿ ಎಳೆದರು ಒರೆಯಿಂದ ಹೊರಗೆ

ಹೊಳೆವ ಚಂದ್ರ ತುದಿಯಲ್ಲಿ
ಹೊಳೆವ ಸೂರ್ಯ ಹಿಡಿಯಲ್ಲಿ
ಹಿಂದೊಂದು ಕುದುರೆ
ಮುಂದೆ ಮೀಯ್‌ಗುಡುವ ಬೆಕ್ಕು

ತೂಗಿದರು ಕತ್ತಿ ತಾಗಿದವು ಕತ್ತಿ
ಅವರ ಕತ್ತಿಗಿಂತ ಉದ್ದ ವೆಯ್ನಾಮೊಯ್ನನ್ ಕತ್ತಿ
ಗೋಧಿಕಾಳಷ್ಟು ಹುಲ್ಲು ಗರಿಯಷ್ಟು
ಮಿಂಚಂತೆ ಬೀಸಿದನು ವೆಯ್ನಾಮೊಯ್ನನ್
ಒಂದೇಟು ಎರಡೇಟು
ಉರುಳಿದವು ತಲೆ ಕೋಸುಗಡ್ಡೆಗಳಂತೆ
ಉರುಳಿದವು ತಲೆ ಎಲ್ಲ ಪುತ್ರರವು

ವೆಯ್ನಾಮೊಯ್ನನ್ ನಡೆದ
ಚಂದ್ರನ ಅಡಗಿಸಿದ ತಾಣಕ್ಕೆ
ರವಿ ತೇಜದ ಬಿಡುಗಡೆಗೆ
ನಡೆದಿದ್ದ ಸ್ವಲ್ಪವೇ ಸ್ವಲ್ಪ ದೂರ
ಅಲ್ಲಿತ್ತು ಹಚ್ಚನೆಯ ಹುಲ್ಲು ಹಸಿರಿನ ಹಾಸು
ಬಲು ಸುಂದರ ಬರ್ಚ್ ವೃಕ್ಷ ಅದರೊಳಗೆ ಇತ್ತು
ದೊಡ್ಡ ಕಲ್ಲೊಂದು ಅದರ ಅಡಿಗಿತ್ತು
ಬಂಡೆಗಲ್ಲೊಂದಿತ್ತು ಆ ಕಲ್ಲಿನಡಿಗೆ
ಒಂಭತ್ತು ದ್ವಾರಗಳು ಅಗುಳಿ ನೂರಾರು

ಒಂದಿಷ್ಟು ಬಿರುಕು ಕಲ್ಲಿನೊಳಗೆ
ಕೊರೆದಂತೆ ನಾಲ್ಕಾರು ಗೆರೆಗಳದರಲ್ಲಿ
ಕತ್ತಿ ಹೊರಕ್ಕೆಳೆದು ಗೀರಿದನು ಬಂಡೆ
ಚೂಪು ಮೊನೆಯಿಂದ ಹೊಳೆವ ಅಲುಗಿಂದ
ಹೋಳಾಯಿತು ಕಲ್ಲು ಇಬ್ಭಾಗವಾಗಿ
ಸೀಳಿದನು ಬೇಗ ಅದನು ಮೂರಾಗಿ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ನೋಡಿದನು ಚಿತ್ತಾರ ಕಲ್ಲಿನಡಿಯಲ್ಲಿ
ಕುಡಿಯುತ್ತಿದ್ದವು ಸರ್ಪ ಸಿಹಿಯ ಮಧುವನ್ನು
ಹೊರಳಾಡುತ್ತಿದ್ದವು ಕುಡಿದಮಲಿನಲ್ಲಿ
ತೂರಿಕೊಂಡಿದ್ದವು ಬಿರುಕು ಸಂದಿಯಲಿ

ವೆಯ್ನಾಮೊಯ್ನನ್ ನುಡಿದ ಹೀಗೆಂದು ಆಗ:
ಅದಕೆ ಇರಬೇಕು ಕಡಿಮೆಯಾಗಿದೆ ಮದ್ಯ
ನಮ್ಮ ಆದಿ ಮಾತೆಯರಿಗೆ ಸಿಹಿಯ ಮದ್ಯ
ಸರ್ಪಗಳ ತಲೆಯನ್ನು ಕತ್ತರಿಸಿ ಹಾಕಿದ
ಎಲ್ಲ ಸರ್ಪಗಳ ಗೋಣು ಮುರಿದ
ಹೀಗೆಂದು ನುಡಿದ
ಎಂದಿಗೂ ಕುಡಿಯದಿರಲಿ ಸರ್ಪಗಳು ಮದ್ಯವನು
ಇಂದಿನಿಂದ ಮುಂದಕ್ಕೆ ಎಂದೆಂದಿಗೂ

ವೆಯ್ನಾಮೊಯ್ನನ್ ಆದಿಗಾರುಡಿಗ
ಕೈ ಹಾಕಿದ ಬಾಗಿಲಿಗೆ ಮಂತ್ರವನು ಅಗುಳಿಗೆ
ತೆರೆಯಲಿಲ್ಲ ದ್ವಾರ ಬಿಚ್ಚಲಿಲ್ಲ ಚಿಲಕ
ಆಗ ಹೀಗೆಂದು ನುಡಿದನವನು
ಶಸ್ತ್ರವಿಲ್ಲದ ಪುರುಷ ಸ್ತ್ರೀಗಿಂತ ದುರ್ಬಲನು
ಕಪ್ಪೆಗಳಿಗಿಂತ ನಿಃಶಕ್ತನವನು
ಕೂಡಲೇ ಹೊರಟ ಮನೆಯ ಕಡೆಗವನು
ತಲೆಯು ಜೋಲಿತ್ತು ಕ್ಲೇಶದಿಂದ
ಸಿಗಲಿಲ್ಲ ಚಂದಿರನು ಸಿಗಲಿಲ್ಲ ಸೂರ್ಯನು

ಲೆಮಿನ್ಕಾಯ್ನನ್ ಮಾತಾಡಿಸಿದ ಅವನ
ಕರೆದೊಯ್ಯಲು ಮರೆತೆ ಏತಕ್ಕೆ ನನ್ನ
ನಿನ್ನ ನಂಬುಗೆಯ ಈ ಮಿತ್ರನನ್ನ
ಪಟಪಟನೆ ಮುರಿದು ಬೀಳುತಿದ್ದವು ಬೀಗ
ಕಿತ್ತೆಸೆಯುತ್ತಿದ್ದೆ ಸರಳುಗಳ ಮುರಿದು
ಬಿಡುಗಡೆಯ ಕೊಡುತಿದ್ದೆ ಚಂದ್ರನಿಗೆ ನಾನು
ಹೊಳೆವ ಸೂರ್ಯನ ಹೊರಗೆ ಬಿಡಿಸುತ್ತಿದ್ದೆ

ವೆಯ್ನಾಮೊಯ್ನನ್ ದೃಢಚಿತ್ತ ಹಿರಿಯ
ಹೀಗೆಂದು ನುಡಿದ
ಮಣಿಯುವುದಿಲ್ಲ ಚಿಲಕ ಮಾಟಗಳಿಗೆ
ಮುರಿಯುವುದಿಲ್ಲ ಬೀಗ ಮಂತ್ರನುಡಿಗೆ
ಕೈಗಳ ಶಕ್ತಿ ಸಾಕಾಗುವುದಿಲ್ಲ
ಎಷ್ಟು ಬಲವಿದ್ದರೂ ಪ್ರಯೋಜನವಿಲ್ಲ

ಹೊರಟು ಬಂದನು ಕಮ್ಮಾರನ ಮನೆಗೆ
ಕಮ್ಮಾರ ಇಲ್ಮಾರಿನೆನ್
ಬಲವಾದ ತ್ರಿಶೂಲ ಮಾಡಿಕೊಡು ನನಗೆ
ಕೈಗೊಡಲಿ ಹನ್ನೆರಡು, ದೊಡ್ಡ ಕೀಲಿಯ ಗೊಂಚಲು
ಚಂದಿರನ ಬಿಡಿಸಲು ರವಿಯ ಕಾಪಾಡಲು

ಆದಿ ಕಮ್ಮಾರ ಇಲ್ಮಾರಿನೆನ್
ಮಾಡಿಕೊಟ್ಟನು ಬೇಕಾದುದನ್ನು
ಹನ್ನೆರಡು ಕೈಗೊಡಲಿ ಕೀಲಿ ಗೊಂಚಲು
ಲೌಹಿ ಪೊಹ್ಜೊಲಾ ಒಡತಿ
ಸಂದು ಹಲ್ಲಿನ ಮುದುಕಿ
ಹಚ್ಚಿಕೊಂಡಳು ರೆಕ್ಕೆ ಹಾರಿದಳು ದೂರಕ್ಕೆ
ಮೊದ ಮೊದಲು ಮನೆ ಸುತ್ತ ಆಮೇಲೆ ವಿಸ್ತರಿಸುತ್ತ
ಪೊಹ್ಜಾ ಸಾಗರದಾಚೆ ಕಮ್ಮಾರಸಾಲೆಗೆ

ಕಮ್ಮಾರ ಇಲ್ಮಾರಿನೆನ್ ಕಿಟಕಿ ಬಳಿ ಬಂದ
ಬೀಸುತಿದೆಯೋ ಗಾಳಿ ನೋಡೋಣವೆಂದು
ಬೀಸಿದ್ದು ಗಾಳಿಯಲ್ಲ ಒಂದು ಹದ್ದು
ಇಲ್ಮಾರಿನೆನ್ ನುಡಿದ ಜೋರು ದನಿಯಲ್ಲಿ
ಹಿಂಸ್ರ ಪಕ್ಷಿಯೇ ನೀನು ಬಂದೆ ಯಾಕಿಲ್ಲಿ
ಕೂತಿದ್ದು ಯಾಕೆ ಕಿಟಕಿ ಬಳಿಯಲ್ಲಿ

ಮಾತನಾಡಿತು ಹದ್ದು
ಅಯ್ಯಾ ಕಮ್ಮಾರ ಅಯ್ಯಾ ಇಲ್ಮಾರಿನೆನ್
ಅತಿ ಚತುರ ಶಿಲ್ಪಿ ನಿನ್ನಂಥ ನಿಪುಣ ಎಲ್ಲೂ ಇಲ್ಲ
ಇಲ್ಲ ಎಲ್ಲೆಲ್ಲೂ ನಿನ್ನ ಮೀರಿಸುವ ಜನರು
ಇಲ್ಮಾರಿನೆನ್ ನುಡಿದ
ಅಂಥ ಅಚ್ಚರಿ ಏನಿಲ್ಲ ಅದರಲ್ಲಿ
ಸ್ವರ್ಗಗಳ ಬೆಸೆದವನು
ಮಳೆಬಿಲ್ಲು ಮಾಡಿದವ ನಾನಲ್ಲವೇನು

ಹದ್ದು ನುಡಿಯಿತು
ಅಯ್ಯಾ ಕಮ್ಮಾರ ಏನು ಮಾಡುತಿಹೆ ನೀನು
ಕುಲುಮೆಯೊಳಗಿದ್ದು ಬೆಸೆಯುತಿಹುದೇನು
ಇಲ್ಮಾರಿನೆನ್‌ನುಡಿದ

ಕುತ್ತಿಗೆಯ ಬಳೆಯೊಂದ ಮಾಡುತಿರುವೆ
ಪೊಹ್ಜಾದ ಮುದಿ ಹೆಣ್ಣ ಕೊರಳಿಗಾಗಿ
ಬೆಟ್ಟಕ್ಕೆ ಬಂಧಿಸಲು ಅವಳ ಬಿಗಿಯಾಗಿ

ಪೊಹ್ಜಾದ ಒಡತಿ ಸಂದುಹಲ್ಲಿನ ಮುದುಕಿ
ಅರ್ಥವಾಯಿತು ಕೊನೆಗಾಲ ಬಂತು ಹತ್ತಿರಕೆ
ಕೆಟ್ಟ ದಿನ ತೂಗುತಿದೆ ತಲೆಯ ಮೇಲೆಂದು
ಹಾರಿದಳು ತಕ್ಷಣವೇ ಪೊಹ್ಜೊಲಾ ನಾಡಿಗೆ
ಬಿಡಿಸಿದ್ದಳು ಚಂದಿರನ ಹೊರಬಿಟ್ಟಳು ಸೂರ್ಯನ
ಬದಲಾಯಿಸಿ ಮತ್ತೆ ತನ್ನ ರೂಪ
ಹಾರಿ ಬಂದಳು ಪಾರಿವಾಳದ ಹಾಗೆ
ಕುಳಿತುಕೊಂಡಳು ಕಮ್ಮಾರನ ಹೊಸ್ತಿಲಿಗೆ

ಇಲ್ಮಾರಿನೆನ್ ಕೇಳಿದ
ಇಲ್ಲೇಕೆ ಬಂಧಿರುವೆ ಹೊಸ್ತಿಲಲಿ ಕುಳಿತಿರುವೆ
ಉತ್ತರ ಹೇಳಿತು ಹಕ್ಕಿ
ಕೂತಿರುವೆ ಇಲ್ಲಿ ನಿನಗೆ ಕೊಡಲೊಂದು ಸುದ್ದಿ
ಮೇಲೇರಿಹ ಚಂದಿರನು ಕಲ್ಲಿನಡಿಯಿಂದ
ಹೊರ ಬಂದಿಹ ಸೂರ್ಯ ಬಂಡೆ ಅಡಿಯಿಂದ
ತಕ್ಷಣ ಹೊರಬಂದ ಸುತ್ತ ದಿಟ್ಟಿಯ ಬೀರಿ
ನೋಡಿದನು ತಲೆ ಎತ್ತಿ ಆಕಾಶದತ್ತ
ಹೊಳೆಯುತಿದ್ದನು ಚಂದ್ರ ಹೊಳೆಯುತಿದ್ದನು ಸೂರ್ಯ

ವೆಯ್ನಾಮೊಯ್ನನ್ ಬಳಿ ಹೋಗಿ
ನುಡಿದ ಕಮ್ಮಾರ
ಆದಿ ಚಾರಣಿಗ ಹಿರಿಯ ವೆಯ್ನಾಮೊಯ್ನನ್
ಬಾ ಹೊರಗೆ ನೋಡು ಚಂದಿರನ ಬೆಳಕು
ಬಾ ಹೊರಗೆ ನೋಡು ಹೊಳೆಯುತಿಹ ಸೂರ್ಯ
ಬಾನ ಮಧ್ಯದಲಿ ಮಾಮೂಲು ಸ್ಥಾನದಲಿ

ತ್ವರೆಯಿಂದ ಹೊರಬಂದ ಹಿರಿಯ ವೆಯ್ನಾಮೊಯ್ನನ್
ನೋಡಿದನು ತಲೆ ಎತ್ತಿ ಆಕಾಶದತ್ತ
ಮೇಲಿದ್ದ ಚಂದ್ರ ಹೊರಬಂದಿದ್ದ ಸೂರ್ಯ
ಹೊಳೆಯುತ್ತಿದ್ದನು ಮೇಲೆ ಕಿರಣ ಸೂಸುತ್ತ
ವೆಯ್ನಾಮೊಯ್ನನ್ ನುಡಿದ ತನ್ನ ಮಾತನ್ನು

ಜಯವಾಗಲಿ ಚಂದ್ರನಿಗೆ ಹೊಳೆಯುವಂಥವಗೆ
ತೋರುತಿರಲಿ ಹೀಗೇ ಹೊಳೆವ ಕೆನ್ನೆ
ಹೊಂಬಣ್ಣದ ಸೂರ್ಯನೆ ಮತ್ತೆ ಬಾನೇರಿದವನೆ
ಕಲ್ಲಿನಡಿಯಿಂದ ಮೇಲೇರಿದ ಚಂದಿರನೆ
ಮೇಲೇರು ಬಂಗಾರ ಕೋಗಿಲೆಯ ಹಾಗೆ
ಮೇಲೇರು ಬೆಳ್ಳಿ ಪಾರಿವಾಳದ ಹಾಗೆ
ಮೊದಲಿನಂತೆಯೆ ಮತ್ತೆ ಬದುಕಿ ಬಾಳು
ಮೊದಲಿನಂತೆಯೆ ಮತ್ತೆ ಪಯಣ ಮಾಡು

ಉದಯಿಸುತಿರು ಹೀಗೆ ಮುಂಜಾವದಲ್ಲಿ
ಶುಭವ ಹಾರೈಸು ನಮ್ಮ ಬಾಳಲ್ಲಿ
ಎಲ್ಲ ಸಿರಿಸಂಪದವು ಹೆಚ್ಚಾಗಲೆಂದು
ನಮ್ಮ ಪಾಲಿಗೆ ಸದಾ ಬೇಟೆ ಸಿಗಲೆಂದು
ಗಾಳಕ್ಕೆ ಮೀನು ಸಮೃದ್ಧ ಸಿಗಲೆಂದು
ಸಾಗುತಿರು ಹೀಗೆ ನಮ್ಮ ಹರಸುತ್ತ
ಸಾಗುತಿರು ಹೀಗೆ ಪಯಣಿಸುತ್ತ
ಬಿಲ್ಲಂತೆ ಬಾಗಿರುವ ಚೆಲುವಾಂಗ ನೀನು
ಸಂಜೆಯಾಗಸದ ಸಂತೋಷ ನೀನು.

33. ಮುಕ್ತಾಯ ಪದಗಳು

ಮಾತು ನಿಲ್ಲಿಸಬೇಕು ನನ್ನ ಬಾಯಿ
ಆಡದಂತೆ ನಾಲಗೆ ಸುಮ್ಮನಿರಬೇಕು
ನಿಲ್ಲಿಸಬೇಕು ಹಾಡುಗಳ ಪಠಣ
ತೊರೆಯ ಬೇಕು ನಾನು ನನ್ನ ಗಾನ
ಮುಗಿದಾದ ಮೇಲೆ ಬಲು ದೀರ್ಘ ಪಯಣ
ವಿಶ್ರಾಂತಿ ಕೊಡುವಂತೆ ಕುದುರೆಗಳಿಗೆ
ಮುಗಿದಾದ ಮೇಲೆ ಹುಲ್ಲು ಕೊಯ್ಯುವ ಕೆಲಸ
ಕಬ್ಬಿಣಕೂ ವಿಶ್ರಾಂತಿ ಬೇಕಾದ ಹಾಗೆ

ಉರಿದಾದ ಮೇಲೆ ರಾತ್ರಿ ಎಲ್ಲ
ಆರಿ ಹೋಗುವ ಬೆಂಕಿ ಹಾಗೆ
ದಣಿವಿಲ್ಲವೇನು ನಮ್ಮ ಗಾನಕ್ಕೆ
ನಾವು ಹಾಡಿದಂಥ ಈ ಮಧುರ ಗಾನಕ್ಕೆ
ಸಂಜೆ ಆನಂದಕ್ಕೆ ಹಾಡಿದಂತಹ ಹಾಡು
ಸೂರ್ಯ ಮುಳುಗಿದ ಮೇಲೂ ಹಾಡಿದಂತಹ ಹಾಡು

ನಾನು ಕೇಳಿರುವೆ ಜನ ಹೇಳುವುದನ್ನು
ಮತ್ತೆ ಮತ್ತೆ ಹೇಳುವರು ಜನರು ಹೀಗೆ
ಮೇಲಿಂದ ಬೀಳುವ ಜಲಧಾರೆಯೂ ಕೂಡ
ಕೊನೆಯಿರದ ಹಾಗೆ ಹರಿಸಲಾರದು ನೀರು
ಅವನೆಷ್ಟೆ ಅಪ್ರತಿಮ ಗಾಯಕನಾದರೂ ಕೂಡ
ಹಾಡಲಾರನು ತನಗೆ ಬರುವೆಲ್ಲ ಹಾಡು
ನಿಲ್ಲಿಸುವುದಕಿಂತ ಅರ್ಧಕ್ಕೆ ಹಾಡು
ಮೌನವಾಗಿರುವುದು ಬಲು ಲೇಸು ನೋಡು

ಮುಗಿಯಿತಿಲ್ಲಿಗೆ ಈ ನನ್ನ ಹಾಡು
ಮುಗಿಯಿತದನು ತೊರೆದೆ ನೋಡು
ನನ್ನ ಸರಕನ್ನೆಲ್ಲ ಗಂಟು ಕಟ್ಟಿಟ್ಟು
ಎಸೆಯುವೆನು ನನ್ನಿಂದ ಗಂಟನ್ನು ದೂರ

ಉಗ್ರಾಣದೊಳಗೆ ಮೂಟೆಕಟ್ಟಿಡುವೆ
ಭದ್ರವಾಗಿರುವಂಥ ಬೀಗ ಹಾಕಿಡುವೆ
ಅಲ್ಲಿಂದ ಪಾರಾಗಿ ಹೊರ ಬಾರದಂತೆ
ಸ್ವಲ್ಪ ಕಾಲದ ಮೇಲೆ ಬಿಚ್ಚಿಕೊಳದಂತೆ
ಬೀಗ ತೆಗೆಯದ ಹೊರತು ಬಾಯಿ ಬಿಡದಂತೆ
ನಾಲಗೆಯ ಅತ್ತಿತ್ತ ಚಲಿಸದಂತೆ

ನಾನು ಹಾಡಿದರೂ ಏನಾಗಬೇಕು
ಕೆಟ್ಟ ಹಾಡನು ಹಾಡಿದರೂ ಒಂದೇ ಹಾಡದಿದ್ದರೂ ಒಂದೇ
ಕಣಿವೆಯಲಿ ಹಾಡಿದರೂ ಕಾಡಲ್ಲಿ ಹಾಡಿದರೂ
ಎಲ್ಲಿ ಹಾಡಿದರೂ ಎಲ್ಲ ಒಂದೇ
ಯಾಕೆಂದರೆ ಈಗ ಬದುಕಿಲ್ಲ ತಾಯಿ
ಮತ್ತೆ ಮೇಲೇಳುವುದಿಲ್ಲ ಆ ನನ್ನ ತಾಯಿ
ಬಂಗಾರದಂಥವಳು ಕೇಳಲಾರಳು ಹಾಡು
ನಾನು ಹಾಡಿದರೂ ತಿಳಿಯಲಾರಳು ಹಾಡು

ಯಾರೂ ಕೇಳುವುದಿಲ್ಲ ಈ ನನ್ನ ಹಾಡು
ಫರ್ ಮರಗಳ ಬಿಟ್ಟು
ಪೈನ್ ಟೊಂಗೆಯ ಬಿಟ್ಟು
ಬರ್ಚ್ ಮರಗಳಲಿರುವ ಚಿಗುರೆಲೆಯ ಬಿಟ್ಟು
ಪರ್ವತದಲಿ ಬೆಳೆದ ಬೂದಿ ಮರಬಿಟ್ಟು

ನನ್ನಮ್ಮ ಸತ್ತಾಗ ನಾ ತುಂಬ ಚಿಕ್ಕವನು
ತಾಯಿ ಇಲ್ಲದ ಮಗು ಶಕ್ತಿ ಇಲ್ಲದ ಕೂಸು
ಬಿಟ್ಟು ಹೋದರು ನನ್ನ
ದಿಕ್ಕಿಲ್ಲದ ಹಕ್ಕಿಯಂತೆ
ಬಂಡೆಗಲ್ಲಿನ ಮೇಲೆ ಬಾನಾಡಿಯಂತೆ
ಬಿಟ್ಟು ಹೋದಳು ಅಲ್ಲಿ ಹಾಡಿಕೊಂಡಿರಲು
ಯಾರ್‍ಯಾರ ಕೈಗೊ ನನ್ನ ಒಪ್ಪಿಸಿಕೊಟ್ಟು
ಮಲತಾಯಿಯ ಕೈಗೆ ನನ್ನ ಒಪ್ಪಿಸಿಕೊಟ್ಟು

ಮಲತಾಯಿ ಅಟ್ಟಿದಳು ನನ್ನನ್ನು ಹೊರಗೆ
ತೂರಿದಳು ತಬ್ಬಲಿಯ ಬಿರುಗಾಳಿ ಚಳಿಗೆ
ಅಲೆದಾಡಿದೆ ನಾನು ಹಕ್ಕಿ ಹಾಗೆ

ದಿಕ್ಕಿಲ್ಲದೆ ತಬ್ಬಲಿ ಪಕ್ಷಿ ಹಾಗೆ
ಇರಲು ಮನೆಯಿಲ್ಲ
ಅಲೆದಲೆದು ದಣಿದೆ
ಪರಿಚಯವಾದವು ಎಲ್ಲ ಗಾಳಿಗಳು
ಅಬ್ಬರದ ಗಾಳಿಗಳ ಸಹಿಸಿಕೊಂಡೆ
ಹಿಮಗಾಳಿ ಚಳಿಯಲ್ಲಿ ನಡುಗುವುದ ಕಲಿತೆ
ಹಿಮಗಟ್ಟುವಶೀತದಲಿ ಕೂಗುವುದ ಕಲಿತೆ

ಈಗಲೂ ಜನ ಸಿಟ್ಟಿಂದ ಅರಚಾಡುತ್ತಾರೆ
ನನ್ನ ದನಿ ಸರಿ ಇಲ್ಲೆಂದು ಬೈದಾಡುತಾರೆ
ಕಂಠ ಸರಿ ಇಲ್ಲೆಂದು ಕೂಗಾಡುತಾರೆ
ಕೆಳದನಿಯ ಗೊಣಗೆಂದು ದೂಷಿಸುತ್ತಾರೆ
ಹಾಡು ಉದ್ದವಾಯಿತು ಎಂದೆನುತ್ತಾರೆ
ಹಾಡುವುದಿಲ್ಲ ಚೆನ್ನಾಗಿ ಅನ್ನುತಾರೆ
ಉಚ್ಚಾರ ತಪ್ಪೆಂದು ಬೈಯುತಾರೆ

ಓ ನನ್ನ ಜನರೇ
ನಿಮಗನ್ನಿಸದೇ ಇದು ಬಲು ಸೋಜಿಗವೆಂದು
ಹುಡುಗನಿದ್ದಾಗಲೇ ಅಷ್ಟು ಹಾಡುವುದು ಕಂಡು
ಎಷ್ಟು ಜೋರಾಗಿ ಹಾಡುತಿದ್ದೆನು ಆಗ
ಕಲಿಸಿ ಕೊಡಲಿಲ್ಲ ಯಾರೊಬ್ಬರೂ ನನಗೆ
ಕಲಿಯಲೆಂದು ಅಲೆದಿಲ್ಲ ಊರೂರುಗಳಿಗೆ
ಬೇರೆ ದೇಶದ ಪದ ಕಲಿಸಿಲ್ಲ ನನಗೆ
ದೂರದೇಶದ ಹಾಡು ಗೊತ್ತಿಲ್ಲ ನನಗೆ

ಬೇರೆಯವರು ಹಾಡುವರು ಕಲಿತು ವಿದ್ಯೆ
ನಾನು ಹೋದವನಲ್ಲ ಮನೆ ಬಿಟ್ಟು ಹೊರಗೆ
ಅಮ್ಮನಿಗೆ ನೆರವಾಗಿ ಮನೆಯೊಳಗೆ ಇದ್ದೆ
ಎಡಬಿಡದಂತೆ ಅವಳ ಜೊತೆ ಇರುತಿದ್ದೆ
ಮನೆಯೊಳಗೆ ಆಯಿತು ನನ್ನೆಲ್ಲ ಕಲಿಕೆ
ಅಡುಗೆ ಮನೆಯಲ್ಲಿ
ನೂಲು ನೂಲುತಿರುವೆಡೆಯಲ್ಲಿ

ಅಣ್ಣ ಮರಕೋಂಯ್ಸುಪಡೆಯಲ್ಲಿ
ನನ್ನ ಚಿಕ್ಕಂದಿನಲ್ಲಿ
ತೂತು ತೂತಾಗಿದ್ದ ಚಿಂದಿ ಅಂಗಿಯಲ್ಲಿ

ಇದು ಹೇಗಾದರಿರಲಿ
ತೋರಿಸಿರುವೆನು ದಾರಿ ಹಾಡುಗಾರರಿಗೆ
ಸುಳಿವುಗಳ ಬಿಟ್ಟಿರುವೆ ಅವರಿಗಾಗಿ
ರೆಂಬೆ ಕೊಂಬೆಯ ಕಡಿದು ಮಾರ್ಗ ತೋರಿರುವೆ

ಹೋಗುತ್ತದೆ ಹೀಗೆ ಈ ದಾರಿ ಮುಂದೆ
ಹೊಸದಾರಿ ಇಹುದು ಇಲ್ಲಿಂದ ಮುಂದೆ
ಇನ್ನೂ ಬಹುದೊಡ್ಡ ಹಾಡುಗಾರರಿಗೆ
ಹಾಡು ಕವಿಗಳಿಗೆ ಲಾವಣಿಯ ಜನಕೆ
ಬೆಳೆಯುತಿರುವಂಥ ಚಿಕ್ಕ ಹುಡುಗರಿಗೆ
ತಲೆ ಎತ್ತುತ್ತಿರುವಂಥ ಹೊಸ ಪೀಳಿಗೆ ಜನಕೆ

★ ★ ★

ಟಿಪ್ಪಣಿಗಳು

ಆಂಟಿರೊ ವಿಪುನನ್ - ಆದಿ ದೈತ್ಯ. ಇವನೂ ಮತ್ತು ಕಲೆವಾ ಇಬ್ಬರೂ ಒಂದೇ ಎಂದು ಕೆಲವು ವಿಮರ್ಶಕರ ಅಭಿಪ್ರಾಯ.

ಅಯಿಜೋ - ಇಕುಟುರ್ಸೊ ಎಂಬ ಜಲದೈತ್ಯನ ತಂದೆ.

ಅಲೂ - ಆದಿ ಸರೋವರದ ಹೆಸರು

ಅಹ್ತಿ - ಲೆಮಿನ್ಕಾಯ್ನನ್‌ನನ್ನು ಸೂಚಿಸುವ ಹೆಸರು.

ಅಹ್ತೊ - ಕಡಲು ಹಾಗೂ ನೀರಿನ ದೇವ.

ಇಕುಟುರ್ಸೊ - ಜಲದೈತ್ಯ

ಇಲ್ಮತಾರ್ - ವಾಯುಪುತ್ರಿ. ಜಗತ್ತನ್ನು ಸೃಷ್ಟಿಸಿದವಳು. ವೆಯ್ನಾಮೊಯ್ನನ್ನನ ತಾಯಿ.

ಇಲ್ಮಾರಿನೆನ್ - ಆದಿಕಮ್ಮಾರ. ಫಿನ್ಲೆಂಡಿನಲ್ಲಿ ಈಗಲೂ ಅಂಕಿತನಾಮವಾಗಿ ಈ ಹೆಸರು ಪ್ರಚಲಿತದಲ್ಲಿದೆ. ಇಲ್ಮಾರಿನೆನ್ ಹಾಗೂ ವೆಯ್ನಾಮೊಯ್ನನ್ ಹುಟ್ಟಿನ ಬಗ್ಗೆ ಬೇರೆ ಬೇರೆ ಕಥೆಗಳಿವೆ. ಇವರಿಬ್ಬರನ್ನು ಸೋದರರರೆಂದು ಪರಿಗಣಿಸುವುದೂ ಉಂಟು.

ಉಂಟಾಮೊ (ಉಂಟೊ) - ೧. ನಿದ್ದೆ ಹಾಗೂ ಕನಸುಗಳ ದೇವತೆ.

೨. ಕಲೆರ್ವೋನ ಸೋದರ ಮತ್ತು ಒಂದು ಪ್ರದೇಶದ ಮುಖ್ಯಸ್ಥ.

ಉಂಟೋಲಾ - ಉಂಟಾಮೊ ಸಾಮ್ರಾಜ್ಯ.

ಉಕ್ಕೊ - ಸ್ವರ್ಗಾಧಿಪತಿ. ಮುಗಿಲುಗಳ ಮೇಲೆ ವಿಶೇಷ ಅಧಿಪತ್ಯ ಹೊಂದಿದವನು. ಜುಮಾಲಾಗೆ ಸಮಾನಾರ್ಥವಾಗಿ ಉಕ್ಕೊ ಪದ ಬಳಕೆಯಾಗುತ್ತದೆ.

ಓಸ್ಮತಾರ್ - ಓಸ್ಮೊಪುತ್ರಿ ಮತ್ತು ಸುರೆಯನ್ನು (Beer) ಭಟ್ಟಿ ಇಳಿಸಿದ ಪ್ರಥಮಳು.

ಕಂಕಹತಾರ್ - ನೇಯ್ಗೆಯ ದೇವತೆ

ಕತಜತಾರ್ - ಜೂನಿಪರ್ ವೃಕ್ಷದ ಯಕ್ಷಿ (Nymph)

ಕರೀಲಿಯ (ಕರ್ಜಲಾ)	-	ಪೂರ್ವಕ್ಕಿರುವ ಪ್ರದೇಶ
ಕಲ್ಮಾ	-	ಗೋರಿ. ಸಾವಿನ ವ್ಯಕ್ತಿ ರೂಪ. ಟುವೋನಿ ಅಥವಾ ಮನಾ ಎಂಬ ಹೆಸರಿಂದ ಹೆಚ್ಚು ರೂಢಿ.
ಕಲೆವಾ	-	ವೀರನಾಯಕರ ಪೂರ್ವಜ. ಈತ ಕಲೆವಾಲಾದಲ್ಲಿ ಕಾಣಿಸಿಕೊಳ್ಳುವುದಿಲ್ಲ.
ಕಲೆವಾಲಾ	-	ಕಲೆವಾನ ನಾಡು.
ಕುಲೆರ್ವೊ	-	ಕಲೆರ್ವೋನ ಪುತ್ರ, ಒಬ್ಬ ವೀರ.
ಕವುಕೊ (ಕವುಕೊಲಯ್ನೆನ್)	-	ಲೆಮಿನ್ಕಾಯ್ನೆನ್ನನ ಹೆಸರು.
ಕೂತರ್	-	ಚಂದ್ರಪುತ್ರಿ ಅಥವಾ ಚಂದ್ರನ ಆತ್ಮ.
ಕ್ಯುಪಾನಾ	-	ಬನದೇವತೆ, ಟಾಪಿಯೋನ ಇನ್ನೊಂದು ಹೆಸರು.
ಕೆಮಿ	-	ಉತ್ತರ ಫಿನ್ಲೆಂಡಿನ ಒಂದು ನದಿ.
ಜುಮಾಲಾ	-	ಉಕ್ಕೊದೇವ, ಭಗವಂತ.
ಟಾಪಿಯೊ	-	ಬನದ ದೇವತೆ.
ಟಾಪಿಯೊಲಾ	-	ಟಾಪಿಯೊ ಸಾಮ್ರಾಜ್ಯ.
ಟಿಯೆರಾ	-	ಲೆಮಿನ್ಕಾಯ್ನೆನ್ನನ ಶಸ್ತ್ರ ಸನ್ನದ್ಧ ಸ್ನೇಹಿತ.
ಟುರ್ಜಾ	-	ಒಂದು ಪ್ರಪಾತದ ಹೆಸರು. ಲ್ಯಾಪ್‌ಲ್ಯಾಂಡ್ ಎಂಬ ಅರ್ಥದಲ್ಲೂ ಬಳಕೆ.
ಟುವೊನೆಲ	-	ಇನ್ನೊಂದು ಲೋಕ. ಮನಾಲಾ ಎಂಬುದೂ ಇದೇ ಅರ್ಥದಲ್ಲಿ ಬಳಕೆ.
ಟುವೊನಿ	-	ಇನ್ನೊಂದು ಲೋಕದ ದೇವತೆ.
ಟುವೊನೆತುರ್	-	ಟುವೊನಿ ಪುತ್ರಿ.
ಟೂರಿ	-	ಗುಡುಗು ದೇವತೆ.
ತಾರ್	-	ಎನ್ನುವುದು ಫಿನ್ನಿಶ್ ಭಾಷೆಯಲ್ಲಿ ಸ್ತ್ರೀ ಲಿಂಗ ಸೂಚಿಯಾದ ಉತ್ತರ ಪದ. ಸಾಮಾನ್ಯವಾಗಿ -ರ ಮಗಳು ಎಂಬ ಅರ್ಥವನ್ನೂ ಕೊಡುತ್ತದೆ.
ಪಿಹ್ಲಜತಾರ್	-	ಪರ್ವತ ಆ್ಯಶ್ ವೃಕ್ಷದ ಕಿನ್ನರಿ.

ಪುಹುರಿ - ಉತ್ತರ ದಿಕ್ಕಿನ ಗಾಳಿಯ ವ್ಯಕ್ತಿ ರೂಪ.

ಪೊಹ್ಯಾ - ಉತ್ತರ ದಿಕ್ಕು.

ಪೊಹ್ಯೊಲಾ - ೧. ಉತ್ತರ ದೇಶ, ಕತ್ತಲ ದೇಶ ಎಂಬರ್ಥದಲ್ಲಿ ಬಳಸುತ್ತಾರೆ. ಕಲೆವಲದ ಉತ್ತರಕ್ಕಿರುವ ಕಾವಳ ಕವಿದ ನೀರಸ ನಾಡು. ಕೆಲವೊಮ್ಮೆ ಇದನ್ನು ಲ್ಯಾಪ್‌ಲ್ಯಾಂಡಿಗೂ ಸಮೀಕರಿಸುವುದುಂಟು.

೨. ಲೌಹಿಯ ಮನೆಗೂ ಕೂಡ ಇದೇ ಹೆಸರನ್ನು ಅನ್ವಯಿಸುವುದುಂಟು.

ಪೈವತಾರ್ - ಇವಳು ಸೂರ್ಯಪುತ್ರಿ ಅಥವಾ ಸೂರ್ಯನ ಆತ್ಮ.

ಮನಾ - ಪರಲೋಕ ದೇವತೆ. ಟುವೋನಿ ಎಂದರೂ ಇದೇ.

ಮನಾಲಾ - ಪರಲೋಕ. ಟುವೊನೆಲ ಎಂದರೂ ಇದೇ.

ಮೆಟ್ಸೊಲಾ - ಮೆಟ್ಸಾ ಕಾಡು. ಕಾಡು ಪ್ರದೇಶ.

ಲೆಂಪೊ - ಹಿಸ್ಸಿ, ದುಷ್ಟಶಕ್ತಿ.

ವೆಯ್ನಾ - ವೆಯ್ನಾಮೊಯ್ನನ್ ಹೆಸರಿನ ಸಂಕ್ಷಿಪ್ತ ರೂಪ.

ವೆಯ್ನೊಲಾ - ವೆಯ್ನಾಮೊಯ್ನನ್ನನ ಸಾಮ್ರಾಜ್ಯ. (ಕಲೆವಾಲಾ)

ವೆಲಾಮೊ - ಕಡಲು ಮತ್ತು ನೀರಿನ ದೇವತೆ. ಅಹ್ತೊನ ಪತ್ನಿ.

ಸಾರಿಲಯ್ನನ್ - (ದ್ವೀಪವಾಸಿ) ಲೆಮಿನ್ಕಾಯ್ನನ್ನನ ವಿಶೇಷಣ.

ಸ್ಯಾವೊ - ಪೂರ್ವ ಮಧ್ಯ ಫಿನ್ಲೆಂಡಿನ ಪ್ರದೇಶ.

ಸಾವುನಾ - ಸ್ನಾನದ ಮನೆ. ಇದು ಪ್ರತ್ಯೇಕವಾಗಿರುವ ಒಂದು ಕಟ್ಟಡ. ಪ್ರತಿದಿನವೂ ಸಂಜೆ ಈ ಮನೆಯಲ್ಲಿ ಸುಡುಸುಡುವ ನೀರಲ್ಲಿ ಸ್ನಾನ ಮಾಡುವುದು ಫಿನ್ನಿಶ್ ಜನರ ರೂಢಿ. ಈ ಮನೆಯನ್ನು ಬಾಣಂತನಕ್ಕೂ ಮಂತ್ರ ಚಿಕಿತ್ಸೆಯ ಅಭ್ಯಾಸಕ್ಕೂ ಬಳಸುತ್ತಾರೆ.

ಸಿನೆತಾರ್ - ಹೂವುಗಳಿಗೆ ನೀಲಿ ಬಣ್ಣ ಕೊಡುವ ಯಕ್ಷಿ.

ಸುವೆತಾರ್ - ಬೇಸಗೆಯ ದೇವತೆ.

ಸುವೊಮಿ - ಫಿನ್ಲೆಂಡ್.

ಸೊಟ್ಕೊ ಪುತ್ರಿಯರು - ಬಾತು ಕೋಳಿಗಳ ರಕ್ಷಾ ಯಕ್ಷಿಯರು.

ಸ್ಯಾಂಪೊ - ಇದು ಧಾನ್ಯ, ಉಪ್ಪು ಮತ್ತು ನಾಣ್ಯಗಳನ್ನು ಬೀಸುವ ಮಾಯಾಗಿರಣಿ ಯಂತ್ರ. ಇದನ್ನು ಅತ್ಯಂತ ಸಮರ್ಥ ಕಮ್ಮಾರ ಮಾತ್ರ ಬೆಸೆಯ ಬಹುದಾಗಿರುತ್ತದೆ ಮತ್ತು ಇದಕ್ಕೆ ಅಗತ್ಯವಾದ ವಸ್ತುಗಳು ಲೌಹಿ ಬಳಿಯಲ್ಲಿ ಮಾತ್ರವೇ ಇರುತ್ತವೆ. ಒಮ್ಮೆ ಈ ವಸ್ತುಗಳನ್ನು ಕಳೆದುಕೊಂಡರೆ ಲೌಹಿಗೂ ಕೂಡ ಅವುಗಳನ್ನು ಪಡೆಯುವುದು ಅಸಾಧ್ಯವಾಗಿರಬೇಕು. ಯಾಕೆಂದರೆ, ಅವು ಹಾಗೆ ಸಿಗುವುದಾಗಿದ್ದರೆ ಸ್ವತಃ ಇಲ್ಮಾರಿನೆನ್ ತಾನಾಗಿಯೇ ಅಂಥ ಯಂತ್ರವನ್ನು ತಯಾರಿಸಿಕೊಳ್ಳಬಹುದಿತ್ತು. ಮತ್ತು ಈ ವೀರರು ಅದನ್ನು ಕದ್ದು ತರುವ ಪ್ರಮೇಯವಿರುತ್ತಿರಲಿಲ್ಲ.

ಹಿಸ್ಸಿ - ದುಷ್ಟಶಕ್ತಿ, ಲೆಂಪೊ ಎಂದರೂ ಇದೇ.

ಹೇಮ್ - ಒಂದು ಪ್ರಾಂತ. ದಕ್ಷಿಣ ಮಧ್ಯ ಫಿನ್ಲೆಂಡಿನಲ್ಲಿದೆ.

ಹೊಂಗತಾರ್ - ಫರ್ ವೃಕ್ಷಗಳ ದೇವತೆ ಅಥವಾ ಆತ್ಮ.

ಇತರೆ ವಿವರಗಳು :

ಮೆಯ್ಲಿಕ್ಕಿ, ಸ್ಯೋಟಿಕ್ಕಿ, ಜೊತಿಕ್ಕಿ, ಹರ್ಮಿಕ್ಕಿ, ಟುವೊರಿಕ್ಕಿ, ನ್ಯೆರಿಕ್ಕಿ ಇವೆಲ್ಲವೂ ಗೋವುಗಳ ಹೆಸರು.

ಸ್ನಾನದ ಸೊಪ್ಪು (Bathwhisks) : ಸಾವುನಾದಲ್ಲಿ (ಸ್ನಾನದ ಮನೆಯಲ್ಲಿ) ಸ್ನಾನದ ನಂತರ ರಕ್ತ ಪರಿಚಲನೆಯನ್ನು ತೀವ್ರಗೊಳಿಸಲು ಬಳಸುತ್ತಾರೆ. ಚಳಿಗಾಲಕ್ಕೆ ಬೇಕಾದ ಸ್ನಾನದ ಸೊಪ್ಪನ್ನು ಬೇಸಿಗೆಯಲ್ಲಿಯೇ ಸಿದ್ಧಪಡಿಸಿಟ್ಟು ಕೊಳ್ಳುತ್ತಾರೆ. ಏಕೆಂದರೆ ಆಗ ಈ ಎಲೆಗಳು ತುಂಬ ಮೃದುವಾಗಿರುತ್ತವೆ. ಅನಂತರ ಅವು ಒಣಗುತ್ತವಾದರೂ, ಬಳಸುವ ಮೊದಲು ಮೆತ್ತಗಾಗಿ ಸುಗಂಧ ಸೂಸುವವರೆಗೂ ಅವನ್ನು ನೀರಲ್ಲಿ ನೆನೆಹಾಕುತ್ತಾರೆ.

ಹೆಣ್ಣನ್ನು ಅಪಹರಿಸಿಕೊಂಡು ಹೋಗುವ ಅನೇಕ ಘಟನೆಗಳು ಕಲೆವಾಲಾದಲ್ಲಿ ಬರುತ್ತವೆ. ಬಹುಶಃ ಇದನ್ನು ಕಾನೂನು ಸಮ್ಮತ ವಿವಾಹವೆಂದು ಪರಿಗಣಿಸುತ್ತಿದ್ದರು.

ಯಾವುದಾದರೂ ದುಷ್ಟ ಶಕ್ತಿಯ ಉಗಮದ ವಿವರಣೆ ಗೊತ್ತಿದ್ದರೆ ಅದನ್ನು ಉಚ್ಚರಿಸಿದಾಗ ದುಷ್ಟಶಕ್ತಿಯ ಬಲ ಕುಂದುತ್ತದೆ ಎಂಬ ನಂಬಿಕೆ ಫಿನ್ ಜನರಲ್ಲಿದೆ.

ಮಗನನ್ನು ತಮ್ಮ ಎಂದು ಸಂಬೋಧಿಸುವುದು ಹೆಚ್ಚು ವಾತ್ಸಲ್ಯ ಸೂಚಿಸುವ ರೂಢಿಯಾಗಿದೆ.

ಕುಲೆರ್ವೊನನ್ನು ಹೊರತುಪಡಿಸಿ ಕಲೆವಲದ ಬಹುತೇಕ ನಾಯಕರಿಗೆ ಕಪ್ಪು ಕೂದಲು. ಇಲ್ಮಾರಿನೆನ್ ಪತ್ನಿಯನ್ನು ಬಿಟ್ಟು ಉಳಿದೆಲ್ಲ ನಾಯಕಿಯರಿಗೂ ಹೊಂಗೂದಲು.

ಕೆಲವು ಪದಗಳ ಮೂಲ ಫಿನ್ನಿಶ್ ಉಚ್ಚಾರಗಳು

ಸ್ಥಳನಾಮಗಳು

ಕಲೆವಲ
ಪೊಯೋಲ
ತ್ವಾನೆಲ
ಮನಾಹೆಲ
ಸುವೋಮಿ
ಓಥವಾ
ತಪಿಓಹ್
ತ್ವಾನೀ
ಹೀಸೀ

ವ್ಯಕ್ತಿನಾಮಗಳು

ವಿನಿಮೊಯ್ನನ್
ಇಲ್ಮಾರೀನೆನ್
ಲೆಮಿನ್‌ಕಿನೆನ್
ಯೊಕೊಹಿನೆನ್
ಕಲೆರ್ವೊ
ಕುಲೇಯ್ರವೊ
ಓನ್‌ತಾಮೊ
ಲೊಹೀ
ಐನೂ
ಕೋಲುಕೀ
ಕೌಕುಮಿಲೀಲೀ
ಮಾರ್ಯಾಥಾ

ಕಾಂಟೆಲ (ಸಂಗೀತವಾದ್ಯ)
ಸಾಂಪೋಹ್ (ಬೀಸುವ ಗಿರಣಿ ಯಂತ್ರ)

ಡಾ. ಸಂಧ್ಯಾರೆಡ್ಡಿಯವರು ಕನ್ನಡದ ಪ್ರಸಿದ್ಧ ಲೇಖಕಿ. ಕವಯಿತ್ರಿ ಮತ್ತು ಜಾನಪದ ತಜ್ಞರೂ ಆದ ಇವರು ೮ ವರ್ಷಗಳ ಹಿಂದೆ ಅನುವಾದಿಸಿದ ಕಲೆವಲ ಕೃತಿಯನ್ನು ೨೦೦೧ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಹೊರತಂದಿತ್ತು. ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪನನ್ನು ಕುರಿತ ಮಹಾಕಾವ್ಯಗಳಿಂದ ಶ್ರೀಮಂತ ಜಾನಪದವನ್ನು ಹೊಂದಿರುವ ಕನ್ನಡಕ್ಕೆ ಜಗತ್ತಿನ ಜಾನಪದ ಮಹಾಕಾವ್ಯ ಅನುವಾದದ ಮೂಲಕ ಬರುತ್ತಿರುವುದು ಸಂತೋಷದ ಸಂಗತಿ. ಕನ್ನಡ ಜಾನಪದ ಮತ್ತು ಜಗತ್ತಿನ ಜಾನಪದವನ್ನು ಆಳವಾಗಿ ಅಭ್ಯಾಸ ಮಾಡಿರುವ ಡಾ. ಸಂಧ್ಯಾರೆಡ್ಡಿಯವರು ಕಲೆವಲ ಕೃತಿಯನ್ನು ಅಚ್ಚುಕಟ್ಟಾಗಿ ಅನುವಾದಿಸಿದ್ದಾರೆ. ಅನುವಾದಿತ ಜಾನಪದ ಕಾವ್ಯದ ಪ್ರತಿಗಳು ಇಷ್ಟೊಂದು ಕಡಿಮೆ ಅವಧಿಯಲ್ಲಿ ಮಾರಾಟವಾದದ್ದು ನಿಜಕ್ಕೂ ಹೆಮ್ಮೆಪಡಬಹುದಾದ ಸಂಗತಿ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಬೆಲೆ: ರೂ. 70/